ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯಾ—೪೯

ವಿಷ್ಣು ಪುರಾಣಂ

(ಕನ್ನಡ ಅನುವಾದ ಸಹಿತ)

ಸಂಚಿಕೆ ೧.

ಅನುವಾದಕ :

ಪಂಡಿತ, ಗಂಜಾಂ ತಿಮ್ಮಣ್ಣಯ್ಯ

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್,

ಮೈಸೂರು.

೧೯೪೮

ಪ್ರ ಸ್ತಾ ವ ನೆ .

ಮನುಷ್ಯನಿಗೆ ದುಃಖಸಂಬಂಧವಿಲ್ಲದ ಉತ್ತಮವಾದ ಆನಂದ ಸ್ಥಿತಿಯು ಧರ್ಮಾಚರಣೆಯಿಂದ ಉಂಟಾಗುವುದೆಂದು ಬ್ರಹ್ಮಸ್ವರೂಪವಾದ ವೇದವು ಹೇಳುವುದು. ಆ ವೇದವು ವಿಧಿನಿಷೇಧ ರೂಪಗಳಿಂದ ಹೇಳುವ ಧರ್ಮಾಚರಣೆಯನ್ನು ಜನರು ಸ್ಪಷ್ಟವಾಗಿ ತಿಳಿದು ಅದರಂತೆ ನಡೆಯಲೆಂದು ಋಷಿಗಳು ಪುರಾಣಗಳಲ್ಲಿ ಕಥಾರೂಪವಾಗಿ ಧರ್ಮಸ್ವರೂಪವನ್ನೂ ಆತ್ಮ ತತ್ವ ಸ್ವರೂಪವನ್ನೂ ವಿವರಿಸಿರುವರು. ಒಂದೇ ಆದ ಆತ್ಮತತ್ವವನ್ನು ಬೇರೆ ಬೇರೆ ಪುರಾಣಗಳಲ್ಲಿ ಶಿವ, ವಿಷ್ಣು, ಶಕ್ತಿ, ಸೂರ್ಯ, ಗಣಪತಿ ಮುಂತಾದ ಬೇರೆ ಬೇರೆ ಹೆಸರುಗಳಿಂದ ವಿವರಿಸಿರುವುದು. ಈ ವಿಷ್ಣು ಪುರಾಣದಲ್ಲಿ ವಿಷ್ಣುವೇ ಅದ್ವೈತಾತ್ಮತತ್ವವೆಂದೂ ಅವನಿಂದಲೇ ಸೃಷ್ಟಿಸ್ಥಿತಿ ಸಂಹಾರ ಗಳಾಗುವುವೆಂದೂ ಅವನೇ ಅನೇಕ ಅವತಾರಗಳನ್ನು ಮಾಡಿ ಜೀವರ ಕರ್ಮಾನು ಸಾರವಾಗಿ ನಿಗ್ರಹಾನುಗ್ರಹ ಕಾರ್ಯಗಳನ್ನು ಮಾಡುವನೆಂದೂ ವಿವರಿಸಿರುವುದು.

ಈ ವಿಷ್ಣುಪುರಾಣದ ಮೊದಲನೆಯ ಭಾಗವಾದ ಒಂದೆರಡನೆಯ ಅಂಶಗಳಲ್ಲಿ ಪ್ರಪಂಚವು ಸೃಷ್ಟಿಯಾದ ಬಗೆ, ಮನ್ವಂತರಗಳು, ವರಾಹಾವತಾರ, ಭೂಮಂಡಲದ ಸ್ವರೂಪ, ಸೂರ್ಯಾದಿಗ್ರಹಗಳು, ನಕ್ಷತ್ರಗಳು ಇವುಗಳ ಸಂಚಾರಕ್ರಮ ಇವುಗಳಿಂದ ಜನರಿಗಾಗುವ ಪ್ರಯೋಜನಗಳು ಇವುಗಳನ್ನು ವಿವರಿಸಿ ಕೊನೆಯಲ್ಲಿ ಋಭು-ನಿದಾಘರ ಉಪಾಖ್ಯಾನದಿಂದ ಅದ್ವೈತ ತತ್ವದ ಸ್ವರೂಪವು ಜನರಿಗೆ ಸ್ಪಷ್ಟವಾಗಿ ತಿಳಿಯುವಂತೆ ವಿವರಿಸಿರುವುದು.

ಇಂತಹ ಉತ್ಕೃಷ್ಟ ಗ್ರಂಥದ ಅಭಿಪ್ರಾಯವನ್ನು ತಮ್ಮ ದೇಶದ ಪ್ರಜೆಗಳು ಗ್ರಹಿಸಿ ಧರ್ಮಾಚರಣೆಯಲ್ಲಿ ಆಸಕ್ತರಾಗಿ ಫಲವನ್ನು ಪಡೆಯಲೆಂಬ ಅಭಿಪ್ರಾಯದಿಂದ ನಮ್ಮನ್ನಾಳುವ ಪ್ರಜಾವತ್ಸಲರೂ, ಆತ್ಮತತ್ವವಿಚಾರಾಸಕ್ತರೂ, ಧರ್ಮಕಾರ್ಯ ತತ್ಪರರೂ, ಆದ ಶ್ರೀ ಜಯಚಾಮರಾಜೇಂದ್ರಒಡೆಯರ್ ಬಹದ್ದೂರ್ ಜಿ. ಸಿ ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರು ಕನ್ನಡಭಾಷೆಯಲ್ಲಿ

ಪ್ರಕಾಶಪಡಿಸಲು ಆಜ್ಞೆಯಿತ್ತುದರಿಂದ ಮೂಲಶ್ಲೋಕದೊ
ವನ್ನು ತಿಳಿಗನ್ನಡದಲ್ಲಿ ಅನುವಾದ ಮಾಡಲಾಗಿದೆ. ಈ
ವೇರಿಸಲು ಸಕಲವಿಧದಲ್ಲಿಯೂ ಪ್ರೋತ್ಸಾಹವನ್ನಿತ್ತ
ಪರಮಾತ್ಮನು ಸುಖಸಂತೋಷಗಳನ್ನು ಶಾಶ್ವತ ವಾ
ಪ್ರಾರ್ಥಿಸುತ್ತೇನೆ.

ಮೈಸೂರು.
ಸರ್ವಧಾರಿ ಸಂವತ್ಸರದ ವೈಶಾಖ
ಶುದ್ಧ ೫ ಗುರುವಾರ
ತಾ|| ೧೩—೫—೧೯೪೮.

ಪಂಡಿತ, ಗಂ

ಶ್ರೀ ವಿಷ್ಣು ಪುರಾಣದ ಮೊದಲನೆಯ ಅಂಶದ

ವಿಷಯಾನುಕ್ರಮಣಿಕೆ

ಪುಟಗಳು

ಒಂದನೆಯ ಅಧ್ಯಾಯ 1—8

ಮೈತ್ರೇಯ ಮುನಿಯು ಪರಾಶರರನ್ನು ಪ್ರಶ್ನೆ ಮಾಡುವುದು. ಪರಾಶರರು ತಾವು ಮಾಡಿದ ರಾಕ್ಷಸ ಯಾಗವನ್ನು ವಿವರಿಸಿ; ವಿಷ್ಣು ಪುರಾಣವನ್ನು ರಚಿಸುವುದಕ್ಕೆ ಕಾರಣವನ್ನು ಹೇಳುವುದು.

ಎರಡನೆಯ ಅಧ್ಯಾಯ 9—26

ಪರಾಶರರ ವಿಷ್ಣುಸ್ತೋತ್ರ, ಪರಬ್ರಹ್ಮ ತತ್ವದ ವಿವರಣೆ, ಪ್ರಪಂಚದಸೃಷ್ಟಿಕ್ರಮ, ವಿಷ್ಣುವೇ ತ್ರಿಮೂರ್ತಿ ಸ್ವರೂಪನೆಂದೂ, ಪ್ರಪಂಚ ಸ್ವರೂಪನೆಂದೂ ವಿವರಣೆ.

ಮೂರನೆಯ ಅಧ್ಯಾಯ 27—33

ಪರಮಾತ್ಮನೇ ಕಾಲಸ್ವರೂಪನಾಗಿ ಸೃಷ್ಟಿಕಾರ್ಯವನ್ನು ಮಾಡುವನು. ಕಾಲದ ಅಳತೆ, ದೇವಮಾನ, ಮನುಷ್ಯ ಮಾನ, ಚತುರ್ಯುಗ ಪ್ರಮಾಣ, ಮನ್ವಂತರ, ಪ್ರಳಯ ಇವುಗಳ ಸ್ವರೂಪಗಳು.

ನಾಲ್ಕನೆಯ ಅಧ್ಯಾಯ 34—46

ವರಾಹಕಲ್ಪದ ಆದಿಯಲ್ಲಿ ಸೃಷ್ಟಿಕ್ರಮ ವರ್ಣನೆ, ವರಾಹಾವತಾರ ವರ್ಣನೆ, ವರಾಹಸ್ವಾಮಿಯಸ್ತೋತ್ರ ಭೂದೇವಿಯು ಮಾಡಿದುದು ಮತ್ತು ಜನೋಲೋಕವಾಸಿಗಳಾದ ಸನಂದನಾದಿಗಳು ಮಾಡಿದುದು.

ಐದನೆಯ ಅಧ್ಯಾಯ 47—64

ಸ್ಥಾವರತಿರ್ಯಗ್ಯೋನಿ ಮನುಷ್ಯಸೃಷ್ಟಿಗಳ ವಿವರಣೆ, ಪ್ರಕೃತಿ ವಿಕೃತಿ, ಊರ್ಧ್ವಾರ್ವಾಕ್ ಸ್ರೋತ, ರಾಕ್ಷಸ—ಪಿತೃ ದೇವತೆಗಳ ಸೃಷ್ಟಿಕ್ರಮ, ಬ್ರಹ್ಮನು ನಾಲ್ಕು ಮುಖಗಳಿಂದ ಸೃಷ್ಟಿಸಿದ ವಸ್ತುಗಳು, ಧರ್ಮಾಧರ್ಮಸ್ವರೂಪಗಳ ವಿವರಣೆ.

ಆರನೆಯ ಅಧ್ಯಾಯ 65—74

ಬ್ರಾಹ್ಮಣಾದಿ ವರ್ಣಗಳ ಸೃಷ್ಟಿಕ್ರಮ, ಚತುರ್ಯುಗಗಳ ಧರ್ಮಾಚರಣೆ ಮತ್ತು ಶಕ್ತಿಗಳ ವಿವರಣೆ, ರಸೋಲ್ಲಾಸಾದಿ ಅಷ್ಟಸಿದ್ಧಿಗಳು, ವರ್ಣಧರ್ಮಾಚರಣೆಯ ಫಲ.

ಏಳನೆಯ ಅಧ್ಯಾಯ 75—84

ಬ್ರಹ್ಮಮಾನಸ ಪುತ್ರರು, ಅವರ ಪತ್ನಿಯರು, ಏಕಾದಶ ರುದ್ರರು, ಸ್ವಾಯಂಭುವಮನು, ಶತರೂಪಾದೇವಿ ಇವರ ಉತ್ಪತ್ತಿಕ್ರಮ ಮತ್ತು ಇವರ ವಂಶ ವರ್ಣನೆ, ತ್ರಿವಿಧ ಪ್ರಳಯಗಳ ಸ್ವರೂಪ ವಿವರಣೆ. 85—92

ಎಂಟನೆಯ ಅಧ್ಯಾಯ

ನೀಲಲೋಹಿತರುದ್ರ, ಭವಾದಿ ಅಷ್ಟರುದ್ರರು, ಅವರ ಪತ್ನಿಯರು, ಲಕ್ಷ್ಮೀದೇವಿಯು ಭೃಗು ಪುತ್ರಿಯಾದ ಬಗೆ, ಲಕ್ಷ್ಮೀನಾರಾಯಣರ ಸ್ವರೂಪ ವಿವರಣೆ.

ಒಂಭತ್ತನೆಯ ಅಧ್ಯಾಯ 93—123

ದೇವೇಂದ್ರನಿಗೆ ದೂರ್ವಾಸರ ಶಾಪ, ಬ್ರಹ್ಮನು ಮತ್ತು ದೇವತೆಗಳು ಮಾಡಿದ ವಿಷ್ಣುಸ್ತೋತ್ರ, ಸಮುದ್ರ ಮಥನ, ಲಕ್ಷ್ಮಿಯ ಉತ್ಪತ್ತಿ, ಲಕ್ಷ್ಮಿಯ ಸ್ತೋತ್ರ, ದೇವತೆಗಳಿಗೆ ವರಪ್ರದಾನ.

ಹತ್ತನೆಯ ಅಧ್ಯಾಯ 124—129

ಭೃಗು, ಮರೀಚಿ, ಅಂಗಿರಸ, ಪುಲಸ್ತ್ಯ, ಕ್ರತು, ವಸಿಷ್ಠ, ಇವರ ವಂಶವರ್ಣನೆಯ ಮೂಲಕ, ದಕ್ಷ ಪುತ್ರಿಯರ ಸಂತತಿಯ ವರ್ಣನೆ.

ಹನ್ನೊಂದನೆಯ ಅಧ್ಯಾಯ 130—142

ಉತ್ತಾನ ಪಾದನ ವಂಶ, ಧ್ರುವೋಪಾಖ್ಯಾನ, ಧ್ರುವನಿಗೆ ಸಪ್ತ ಋಷಿಗಳ ಉಪದೇಶ.

ಹನ್ನೆರಡನೆಯ ಅಧ್ಯಾಯ 143—164

ಧ್ರುವನ ತಪಸ್ಸು, ವಿಷ್ಣುವಿನ ಪ್ರತ್ಯಕ್ಷ, ಧ್ರುವನ ಸ್ತೋತ್ರ, ಧ್ರುವನ ಪೂರ್ವಜನ್ಮ ವೃತ್ತಾಂತ, ವಿಷ್ಣುವಿನ ವರಪ್ರದಾನ.

ಹದಿಮೂರನೆಯ ಅಧ್ಯಾಯ 165—183

ಧ್ರುವನ ವಂಶವರ್ಣನೆ, ಚಾಕ್ಷುಷಮನು, ವೇನ, ಪೃಥು ಇವರ ವೃತ್ತಾಂತ ವರ್ಣನೆ.

ಹದಿನಾಲ್ಕನೆಯ ಅಧ್ಯಾಯ 184—195

ಪೃಥುವಿನ ವಂಶವಿಸ್ತಾರ, ಪ್ರಚೇತಸ್ಸುಗಳ ತಪಸ್ಸು, ಅವರು ಮಾಡಿದ ವಿಷ್ಣುಸ್ತೋತ್ರ, ವಿಷ್ಣು ವರಪ್ರದಾನ.

ಹದಿನೈದನೆಯ ಅಧ್ಯಾಯ 192—227

ಹತ್ತು ಜನ ಪ್ರಚೇತಸ್ಸುಗಳಿಗೆ ಮಾರಿಷಾ ಎಂಬ ಒಬ್ಬಳೇ ಪತ್ನಿಯಾದುದು. ಮಾರಿಷೆಯ ಪೂರ್ವ ಜನ್ಮ ವೃತ್ತಾಂತ ವನ್ನನುಸರಿಸಿದ ಕಂಡುಮುನಿ ಮತ್ತು ಪ್ರಮ್ಲೋಚೆಯ ವೃತ್ತಾಂತ, ಮಾರಿಷೆಯಲ್ಲಿ ದಕ್ಷ ಪ್ರಜಾಪತಿಯ ಜನನ, ಕಾಶ್ಯಪನ ಪತ್ನಿಯಾದ ದಿತಿಯ ವಂಶ ವರ್ಣನೆ, ಪ್ರಹ್ಲಾದ ಚರಿತ್ರೆ.

ಹದಿನಾರನೆಯ ಅಧ್ಯಾಯ 228—231

ಪ್ರಹ್ಲಾದನ ಮಹಿಮೆಯ ವರ್ಣನೆ.

ಹದಿನೇಳನೆಯ ಅಧ್ಯಾಯ 232—253

ಪ್ರಹ್ಲಾದ—ಹಿರಣ್ಯಕಶಿಪು ಸಂವಾದ, ಹಿರಣ್ಯಕಶಿಪುವು ಪ್ರಹ್ಲಾದನಿಗೆ ಮಾಡಿದ ಹಿಂಸೆಗಳು, ದೈತ್ಯ ಬಾಲಕರಿಗೆ ಪ್ರಹ್ಲಾದನು ಮಾಡಿದ ವಿಷ್ಣುತತ್ತ್ವೋಪದೇಶ.

ಹದಿನೆಂಟನೆಯ ಅಧ್ಯಾಯ 254—263

ಪ್ರಹ್ಲಾದನಿಗೆ ವಿಷವನ್ನು ಕುಡಿಸುವುದು, ಅಭಿಚಾರಿಕ ಕೃತ್ಯವನ್ನು ಮಾಡಿಸುವುದು. ಅಭಿಚಾರ ಕೃತ್ಯದಿಂದ ನಾಶರಾಗುತ್ತಿದ್ದ ಗುರುಗಳನ್ನು ಪ್ರಹ್ಲಾದನು ರಕ್ಷಿಸುವುದು.

ಹತ್ತೊಂಬತ್ತನೆಯ ಅಧ್ಯಾಯ 264—282

ಪ್ರಹ್ಲಾದನು ತನ್ನ ಮಹಿಮೆಗೆ ಕಾರಣವನ್ನು ತಂದೆಗೆ ತಿಳಿಸುವುದು, ಶಂಬರನ ಮಾಯಾಪ್ರಯೋಗ, ರಾಜನೀತಿ ಶಾಸ್ತ್ರದ ವಿಷಯದಲ್ಲಿ ಪ್ರಹ್ಲಾದನ ಅಭಿಪ್ರಾಯ, ಅದ್ವೈತ ರೂಪವಾದ ವಿಷ್ಣುಸ್ತೋತ್ರ.

ಇಪತ್ತನೆಯ ಅಧ್ಯಾಯ 283—291

ಪ್ರಹ್ಲಾದನಿಗೆ ವರಪ್ರದಾನ, ಪ್ರಹ್ಲಾದ ಚರಿತ್ರೆಯ ಫಲಸ್ತುತಿ.

ಇಪ್ಪತ್ತೊಂದನೆಯ ಅಧ್ಯಾಯ 292—299

ಪ್ರಹ್ಲಾದನ ವಂಶ ಮತ್ತು ಕಶ್ಯಪ ವಂಶ ವರ್ಣನೆ.

ಇಪ್ಪತ್ತೆರಡನೆಯ ಅಧ್ಯಾಯ 300—317

ವಿಷ್ಣುವು ಸೃಷ್ಟಿಸ್ಥಿತಿ, ನಾಶಗಳನ್ನು ಮಾಡುವ ಬಗೆ.

ಶ್ರೀ ವಿಷ್ಣುಪುರಾಣದ ಎರಡನೆಯ ಅಂಶದ

ವಿಷಯಾನುಕ್ರಮಣಿಕೆ

ಪುಟಗಳು

ಒಂದನೆಯ ಅಧ್ಯಾಯ 318—325

ಪ್ರಿಯವ್ರತನ ವಂಶವರ್ಣನೆ.

ಎರಡನೆಯ ಅಧ್ಯಾಯ 326—336

ಭೂ ಮಂಡಲದ ವರ್ಣನೆ, ಸಪ್ತದ್ವೀಪಗಳ ಸ್ವರೂಪಾದಿಗಳು.

ಮೂರನೆಯ ಅಧ್ಯಾಯ 337—343

ಭಾರತ ವರ್ಷ ವರ್ಣನೆ.

ನಾಲ್ಕನೆಯ ಅಧ್ಯಾಯ 344—361

ಜಂಬೂದ್ವೀಪಾದಿ ಸಪ್ತ ದ್ವೀಪಗಳ ವರ್ಣನೆ.

ಐದನೆಯ ಅಧ್ಯಾಯ 362—367

ಪಾತಾಳ ಲೋಕಗಳ ವರ್ಣನೆ, ಅನಂತನ ಮಹಿಮೆ.

ಆರನೆಯ ಅಧ್ಯಾಯ 368—379

ನರಕವರ್ಣನೆ, ಪಾಪ ಕಾರಣಗಳು, ಪಾಪಗಳು ನಾಶವಾಗುವ ಬಗೆಗಳು.

ಏಳನೆಯ ಅಧ್ಯಾಯ 380—390

ಭುವರ್ಲೋಕಾದಿಗಳ ಸ್ವರೂಪ, ಗ್ರಹಗಳು, ನಕ್ಷತ್ರಗಳು ಮುಂತಾದ ಜ್ಯೋತಿರ್ಮಂಡಲಗಳ ವಿವರಣೆ, ಬ್ರಹ್ಮಾಂಡ ಕಟಾಹದ ಸ್ವರೂಪ.

ಎಂಟನೆಯ ಅಧ್ಯಾಯ 391—417

ಸೂರ್ಯಾದಿ ಗ್ರಹಗಳ ಸಂಚಾರ ಮತ್ತು ಅವುಗಳ ಸ್ವರೂಪ, ಸಂಧ್ಯೋಪಾಸನೆಯ ಕಾರಣ, ದೇವಯಾನ, ಪಿತೃಯಾನ ಮಾರ್ಗಗಳ ವಿವರಣೆ, ಗಂಗೆಯ ಮಹಿಮೆ.

ಒಂಭತ್ತನೆಯ ಅಧ್ಯಾಯ 418—423

ಶಿಂಶುಮಾರ ಚಕ್ರದ ಸ್ವರೂಪ ವರ್ಣನೆ.

ಹತ್ತನೆಯ ಅಧ್ಯಾಯ 424—428

ಸೂರ್ಯರಥ ವರ್ಣನೆ, ದ್ವಾದಶಾದಿತ್ಯರೇ ಮುಂತಾದ ಏಳು ಗಣಗಳು ಮತ್ತು ಮಾಸಾಧಿಕಾರಿಗಳು.

ಹನ್ನೊಂದನೆಯ ಅಧ್ಯಾಯ 429—434

ಸೂರ್ಯನೇ ವಿಷ್ಣುವಿನ ಪರಾಶಕ್ತಿಯು, ತ್ರಿಮೂರ್ತಿಗಳೂ ವೇದಸ್ವರೂಪರು, ಸೂರ್ಯನಿಂದಲೇ ದೇವತೆಗಳು, ಪಿತೃಗಳು, ಮನುಷ್ಯರು ತೃಪ್ತಿಯನ್ನು ಪಡೆವರು ಎಂಬುದರ ವಿವರಣೆ.

ಹನ್ನೆರಡನೆಯ ಅಧ್ಯಾಯ 435—446

ಚಂದ್ರಾದಿಸಕಲ ಗ್ರಹಗಳ ಸ್ವರೂಪ ಸಂಚಾರಾದಿಗಳ ವರ್ಣನೆ.

ಹದಿಮೂರನೆಯ ಅಧ್ಯಾಯ 447—468

ಭರತೋಪಾಖ್ಯಾನ, ಭರತರಾಜನು ವಿಷ್ಣುವಿನ ನಾಮಸ್ಮರಣೆಯಿಂದ ಯೋಗಿಯಾದುದು, ಅವನಿಗೆ ಜಿಂಕೆಯ ಜನ್ಮಪ್ರಾಪ್ತಿಯಾದುದು, ಪುನಃ ಬ್ರಾಹ್ಮಣ ಜನ್ಮಪ್ರಾಪ್ತಿ, ಆ ಜನ್ಮದಲ್ಲಿ ಯೋಗಾಭ್ಯಾಸ ಮಾಡುತ್ತಿದ್ದ ಬಗೆ, ರಾಜನ ಅಧಿಕಾರಿಯೊಬ್ಬನು ಅವನನ್ನು ಕಾಳಿಗೆ ಬಲಿಯನ್ನರ್ಪಿಸುವ ಯತ್ನ ಮಾಡಿದ್ದು, ಕಾಳಿಯ ಅನುಗ್ರಹ, ರಾಜನ ಪಲ್ಲಕ್ಕಿಯನ್ನು ಹೊರುವುದಕ್ಕೆ ಸೇರಿದ್ದು, ರಾಜನಿಗೂ—ಜಡಭರತನಿಗೂ ಸಂವಾದ, ಪರಮಾರ್ಥಾಪರಮಾರ್ಥ ವಿಚಾರ.

ಹದಿನಾಲ್ಕನೆಯ ಅಧ್ಯಾಯ 469—472

ಶ್ರೇಯಸ್ಸಿಗೂ, ಪರಮಾರ್ಥ ತತ್ವಕ್ಕೂ ಇರುವ ಪರಸ್ಪರ ಭೇಧಗಳು, ಪರಮಾರ್ಥ ಸ್ವರೂಪ, ಅಜ್ಞಾನಾವರಣವು ನಾಶವಾಗುವ ಬಗೆ.

ಹದಿನೈದನೆಯ ಅಧ್ಯಾಯ 473—485

ಜಡಭರತನು ರಾಜನಿಗೆ ಋಭುನಿದಾಘರ ಸಂವಾದ ರೂಪ ದಿಂದ ಆತ್ಮಜ್ಞಾನವನ್ನುಪದೇಶಿಸುವುದು.

ಹದಿನಾರನೆಯ ಅಧ್ಯಾಯ 486—492

ಋಬುನಿದಾಘ ಸಂವಾದ, ಅದ್ವೈತ ತತ್ವೋಪದೇಶ.

॥ ಶ್ರೀಃ ॥

॥ ಶ್ರೀಗಣೇಶ ಶಾರದಾ ಗುರುಭ್ಯೋನಮಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಪ್ರಥಮೋಽಧ್ಯಾಯಃ

ಪರಾಶರಂ ಮುನಿವರಂ ಕೃತಪೌರ್ವಾಹ್ಣಿಕಕ್ರಿಯಂ ।
ಮೈತ್ರೇಯಃ ಪರಿಪಪ್ರಚ್ಛ ಪ್ರಣಿಪತ್ಯಾಭಿವಾದ್ಯ ಚ ॥ ೧ ॥

ತ್ವತ್ತೋ ಹಿ ವೇದಾಧ್ಯಯನಮಧೀತಮಖಿಲಂ ಗುರೋ ।
ಧರ್ಮಶಾಸ್ತ್ರಾಣಿ ಸರ್ವಾಣಿ ತಥಾಂಗಾನಿ ಯಥಾಕ್ರಮಂ ॥ ೨ ॥

ತ್ವತ್ಪ್ರಸಾದಾನ್ಮುನಿಶ್ರೇಷ್ಠ ಮಾಮನ್ಯೇ ನಾಕೃತಶ್ರಮಂ ।
ವಕ್ಷ್ಯಂತಿ ಸರ್ವಶಾಸ್ತ್ರೇಷು ಪ್ರಾಯಶೋ ಯೇಽಪಿ ತದ್ವಿದಃ ॥ ೩ ॥

ಶ್ರೀ ವಿಷ್ಣುಪುರಾಣ ಪ್ರಥಮಾಂಶ ಒಂದನೆಯ ಅಧ್ಯಾಯವು.

೧. ಪ್ರಾತಃಕಾಲದಲ್ಲಿ ಮಾಡಬೇಕಾದ ಕರ್ಮಗಳೆಲ್ಲವನ್ನೂ ಮಾಡಿ ಶಾಂತರಾಗಿ ಕುಳಿತಿದ್ದ ಪರಾಶರ ಮುನಿಗಳ ಸಮೀಪಕ್ಕೆ ಬಂದು ಶಿಷ್ಯನಾದ ಮೈತ್ರೇಯನು ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಗೋತ್ರ ಪ್ರವರಪೂರ್ವಕವಾಗಿ ಪಾದಕ್ಕೆ ನಮಸ್ಕರಿಸಿ ಪ್ರಶ್ನೆ ಮಾಡಿದನು.

೨-೩. ಗುರುಗಳೇ ತಮ್ಮಿಂದ ವೇದಗಳನ್ನೆಲ್ಲ ಕಲಿತೆನು. ಧರ್ಮಶಾಸ್ತ್ರಗಳನ್ನೂ, ಸಮಸ್ತ ವೇದಾಂಗಗಳನ್ನೂ ಕಲಿತೆನು. ತಮ್ಮ ಅನುಗ್ರಹದಿಂದ ವಿಶ್ವ ವಿದ್ವಾಂಸರು ನನ್ನನ್ನು ಸರ್ವ ಶಾಸ್ತ್ರಜ್ಞನಲ್ಲವೆಂದು ಹೇಳುವುದಿಲ್ಲ.

ಸೋಽಹಮಿಚ್ಛಾಮಿ ಸರ್ವಜ್ಞ ಶ್ರೋತುಂ ತ್ವತ್ತೋ ಯಥಾ ಜಗತ್ ।
ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ ॥ ೪ ॥

ಯನ್ಮಯಂ ಚ ಜಗದ್ಬ್ರಹ್ಮನ್ಯತಶ್ಚೈತಚ್ಚರಾಚರಂ ।
ಲೀನಮಾಸೀದ್ಯಥಾ ಯತ್ರ ಲಯಮೇಷ್ಯತಿ ಯತ್ರ ಚ ॥ ೫ ॥

ಯತ್ಪ್ರಮಾಣಾನಿ ಭೂತಾನಿ ದೇವಾದೀನಾಂ ಚ ಸಂಭವಂ ।
ಸಮುದ್ರಪರ್ವತಾನಾಂ ಚ ಸಂಸ್ಥಾನಂ ಚ ತಥಾ ಭುವಃ ॥ ೬ ॥

ಸೂರ್ಯಾದೀನಾಂ ಚ ಸಂಸ್ಥಾನಂ ಪ್ರಮಾಣಂ ಮುನಿಸತ್ತಮ ।
ದೇವಾದೀನಾಂ ತಥಾ ವಂಶಾನ್ಮನೂರ್ ಮನ್ವಂತರಾಣಿ ಚ ॥ ೭ ॥

ಕಲ್ಪಾನ್ಕಲ್ಪವಿಭಾಗಾಂಶ್ಚ ಚತುರ್ಯುಗವಿಕಲ್ಪಿತಾನ್ ।
ಕಲ್ಪಾಂತಸ್ಯ ಸ್ವರೂಪಂ ಚ ಯುಗಧರ್ಮಾಂಶ್ಚ ಕೃತ್ಸ್ನಶಃ ॥ ೮ ॥

---

೪. ಸರ್ವಜ್ಞರಾದ ಗುರುಗಳೇ ತಮ್ಮಿಂದ ಕೆಲವು ಪ್ರಶ್ನೆಗಳಿಗೆ ಉತ್ತರವನ್ನು ತಿಳಿಯಬೇಕೆಂದಿರುವೆನು. ಮಹಾಮಹಿಮರಾದ ತಾವು ಅದಕ್ಕೆ ದಯವಿಟ್ಟು ಉತ್ತರಗಳನ್ನು ಹೇಳಬೇಕು. ಆ ಪ್ರಶ್ನೆಗಳಾವುವೆಂದರೆ:—ಈ ಜಗತ್ತು ಹಿಂದೆ ಹೇಗೆ ಹುಟ್ಟಿತು? ಮುಂದೆ ಹೇಗೆ ಹುಟ್ಟುವುದು? ಹೇಗೆ ಇರುವುದು.

೫. ಈ ಜಗತ್ತಿಗೆ ಉಪಾದಾನ ಕಾರಣವಾವುವುದು? ಈ ಚರಾಚರ ಪ್ರಪಂಚವು ಯಾವುದರ ದೆಸೆಯಿಂದ ವ್ಯಕ್ತವಾಯಿತು? ಯಾವ ರೀತಿಯಲ್ಲಿ ಯಾವುದರಲ್ಲಿ ಲಯವಾಯಿತು? ಮುಂದೆ ಯಾವುದರಲ್ಲಿ ಲಯವಾಗುವುದು?

೬.೮. ಪಂಚಭೂತಾದಿಗಳ ಅಳತೆಯೇನು? ದೇವಾದಿ ಜೀವರುಗಳು ಹುಟ್ಟಿದ ಬಗೆ ಹೇಗೆ? ಸಮುದ್ರಗಳು ಭೂಮಿ ಪರ್ವತಗಳು ಯಾವರೀತಿಯಲ್ಲಿವೆ? ಸೂರ್ಯಾದಿ ಗ್ರಹಗಳ ಅಳತೆಯೇನು? ಅವು ಯಾವ ಕ್ರಮದಲ್ಲಿವೆ? ದೇವಾದಿಗಳು ಮುನಿಗಳು ಅವರ ವಂಶಗಳು ಮನ್ವಂತರಗಳು, ಕಲ್ಪಗಳು, ಕಲ್ಪಭೇದಗಳು ಚತುರ್ಯುಗಗಳ ಪ್ರಮಾಣ ಕಲ್ಪಾಂತವಾಗುವ ರೀತಿ ಸಮಸ್ತ ಯುಗಧರ್ಮಗಳು ಇವುಗಳ ವಿಷಯವೇನು?

ದೇವರ್ಷಿಪಾರ್ಥಿವಾನಾಂ ಚ ಚರಿತಂ ಯನ್ಮಹಾಮುನೇ ।
ವೇದಶಾಖಾಪ್ರಣಯನಂ ಯಥಾವದ್ವ್ಯಾಸಕರ್ತೃಕಂ ॥ ೯ ॥

ಧರ್ಮಾಂಶ್ಚ ಬ್ರಾಹ್ಮಣಾದೀನಾಂ ತಥಾ ಚಾಶ್ರಮವಾಸಿನಾಂ ।
ಶ್ರೋತುಮಿಚ್ಛಾಮ್ಯಹಂ ಸರ್ವಂ ತ್ವತ್ತೋ ವಾಸಿಷ್ಠನಂದನ ॥ ೧೦ ॥

ಬ್ರಹ್ಮನ್ಪ್ರಸಾದಪ್ರವಣಂ ಕುರುಷ್ವ ಮಯಿ ಮಾನಸಂ ।
ಯೇನಾಹಮೇತಜ್ಜಾನೀಯಾಂ ತ್ವತ್ಪ್ರಸಾದಾನ್ಮಹಾಮುನೇ ॥ ೧೧ ॥

॥ ಶ್ರೀ ಪರಾಶರ ಉವಾಚ ॥

ಸಾಧು ಮೈತ್ರೇಯ ಧರ್ಮಜ್ಞ ಸ್ಮಾರಿತೋಽಸ್ಮಿ ಪುರಾತನಂ ।
ಪಿತುಃ ಪಿತಾ ಮೇ ಭಗವಾನ್ ವಸಿಷ್ಠೋ ಯದುವಾಚ ಹ ॥ ೧೨ ॥

೯-೧೧. ದೇವತೆಗಳು ಋಷಿಗಳು ರಾಜರು ಇವರುಗಳ ಚರಿತ್ರೆಯೇನು? ವ್ಯಾಸರು ವೇದಶಾಖೆಗಳನ್ನು ಹೇಗೆ ವಿಂಗಡಿಸಿದರು? ಬ್ರಾಹ್ಮಣಾದಿ ವರ್ಣಗಳ ಮತ್ತು ಆಶ್ರಮಗಳ ಧರ್ಮಗಳೆಂತು? ಇವೆಲ್ಲವನ್ನೂ ವಸಿಷ್ಠರ ಮಕ್ಕಳಾದ ಶಕ್ತಿ ಮುನಿಗಳ ಪುತ್ರರಾದ ತಾವು ಹೇಳಬೇಕು. ಬ್ರಹ್ಮಜ್ಞಾನಿಗಳಾದ ಗುರುಗಳೇ ತಮ್ಮ ಮನಸ್ಸು ನನ್ನ ಮೇಲೆ ಅನುಗ್ರಹದಿಂದ ಕೂಡಿದರೆ ಅದರಿಂದ ಇವುಗಳೆಲ್ಲ ವನ್ನೂ ನಾನು ತಿಳಿದುಕೊಳ್ಳುವೆನು! ಎಂದು ಪ್ರಶ್ನೆ ಮಾಡಿದನು.

೧೨. ಪರಾಶರರು ಹೇಳುವರು:—ಧರ್ಮವನ್ನು ತಿಳಿದ ಮೈತ್ರೇಯನೇ ನೀನು ಈ ಪ್ರಶ್ನೆಗಳನ್ನು ಕೇಳಿದುದು ಒಳ್ಳೆಯದಾಯಿತು. ಇದರಿಂದ ಮಹಾ ಮಹಿಮರೂ ನನ್ನ ತಂದೆಯ ತಂದೆಯೂ ಆದ ವಸಿಷ್ಠರು ಹಿಂದೆ ನನಗೆ ಹೇಳಿದ ಅಂಶವನ್ನು ಜ್ಞಾಪಕ ಕೊಟ್ಟಂತಾಯಿತು.

ವಿಶ್ವಾಮಿತ್ರಪ್ರಯುಕ್ತೇನ ರಕ್ಷಸಾ ಭಕ್ಷಿತಃ ಪುರಾ ।
ಶ್ರುತಸ್ತಾತಸ್ತತಃ ಕ್ರೋಧೋ ಮೈತ್ರೇಯಾಸೀನ್ಮಮಾತುಲಃ ॥ ೧೩ ॥

ತತೋಽಹಂ ರಕ್ಷಸಾಂ ಸತ್ರಂ ವಿನಾಶಾಯ ಸಮಾರಭಂ ।
ಭಸ್ಮೀಕೃತಾಶ್ಚ ಶತಶಸ್ತಸ್ಮಿನ್ ಸತ್ರೇ ನಿಶಾಚರಾಃ ॥ ೧೪ ॥

ತತಸ್ಸಂಕ್ಷೀಯಮಾಣೇಷು ತೇಷು ರಕ್ಷಸ್ಸ್ವಶೇಷತಃ ।
ಮಾಮುವಾಚ ಮಹಾಭಾಗೋ ವಸಿಷ್ಠೋಽಸ್ಮತ್ಪಿತಾಮಹಃ ॥ ೧೫ ॥

ಅಲಮತ್ಯಂತಕೋಪೇನ ತಾತ ಮನ್ಯುಮಿಮಂ ಜಹಿ ।
ರಾಕ್ಷಸಾನಾಪರಾಧ್ಯಂತಿ ಪಿತುಸ್ತೇ ವಿಹಿತಂ ಹಿ ತತ್ ॥ ೧೬ ॥

ಮೂಢಾನಾಮೇವ ಭವತಿ ಕ್ರೋಧೋ ಜ್ಞಾನವತಾಂ ಕುತಃ ।
ಹನ್ಯತೇ ತಾತ ಕಃ ಕೇನ ಯತಸ್ಸ್ವಕೃತಭುಕ್ಪುಮಾನ್ ॥ ೧೭ ॥

---

೧೩. ಮೈತ್ರೇಯನೇ ವಿಶ್ವಾಮಿತ್ರನ ಪ್ರೇರಣೆಯಿಂದ ಒಬ್ಬ ರಾಕ್ಷಸನು ನಮ್ಮ ತಂದೆಯನ್ನು ತಿಂದನೆಂಬುದನ್ನು ಕೇಳಿ ನನಗೆ ಮಹಾ ಕೋಪವುಂಟಾಯಿತು.

೧೪. ಆಮೇಲೆ ನಾನು ರಾಕ್ಷಸರ ನಾಶಕ್ಕಾಗಿ ಒಂದು ಯಾಗವನ್ನು ಪ್ರಾರಂಭಿಸಿದೆನು. ಆ ಯಾಗದಲ್ಲಿ ಅನೇಕ ರಾಕ್ಷಸರನ್ನು ಬೂದಿ ಮಾಡಿದೆನು.

೧೫. ರಾಕ್ಷಸರೆಲ್ಲ ಸಂಪೂರ್ಣವಾಗಿ ನಾಶವಾಗುತ್ತಿರುವ ಆ ಸಮಯದಲ್ಲಿ ಮಹಾಮಹಿಮನೂ ನಮ್ಮ ಪಿತಾಮಹನೂ ಆದ ವಸಿಷ್ಠನು ನನ್ನನ್ನು ಕುರಿತು ಮುಂದಿನ ಮಾತುಗಳನ್ನು ಹೇಳಿದನು.

೧೬-೧೭. ಪ್ರೀತಿಪಾತ್ರನಾದ ಮಗುವೇ ವಿಶೇಷವಾಗಿ ಕೋಪಮಾಡಬೇಡ. ಈ ಕೋಪವನ್ನು ಬಿಡು. ರಾಕ್ಷಸರು ನಿನ್ನ ತಂದೆಯ ವಿಷಯದಲ್ಲಿ ಯಾವ ತಪ್ಪನ್ನೂ ಮಾಡಿದವರಲ್ಲ. ಮನುಷ್ಯನು ತನ್ನ ಕರ್ಮಫಲವನ್ನು ತಾನು ಅನುಭವಿಸುವನು. ಹೀಗಿರುವಲ್ಲಿ ಯಾರು ಯಾರನ್ನು ಕೊಲ್ಲುವರು. ಮೂಢರಿಗೆ ಕೋಪವು ಬರುವುದು. ಜ್ಞಾನಿಗಳಿಗೆ ಅದು ಹೇಗೆ ಬರುವುದು ?

ಸಂಚಿತಸ್ಯಾಪಿ ಮಹತಾ ವತ್ಸ ಕ್ಲೇಶೇನ ಮಾನವೈಃ ।
ಯಶಸಸ್ತಪಸಶ್ಚೈವ ಕ್ರೋಧೋ ನಾಶಕರಃ ಪರಃ ॥ ೧೮ ॥

ಸ್ವರ್ಗಾಪವರ್ಗವ್ಯಾಸೇಧಕಾರಣಂ ಪರಮರ್ಷಯಃ ।
ವರ್ಜಯಂತಿ ಸದಾ ಕ್ರೋಧಂ ತಾತ ಮಾ ತದ್ವಶೋ ಭವ ॥ ೧೯ ॥

ಅಲಂ ನಿಶಾಚರೈರ್ದಗ್ಧೈರ್ದೀನೈರ್ನಿರಪರಾಧಿಭಿಃ ।
ಸತ್ರಂ ತೇ ವಿರಮತ್ವೇತತ್ಕ್ಷಮಾಸಾರಾ ಹಿ ಸಾಧವಃ ॥ ೨೦ ॥

ಏವಂ ತಾತೇನ ತೇನಾಹಮನುನೀತೋ ಮಹಾತ್ಮನಾ ।
ಉಪಸಂಹೃತವಾನ್ಸತ್ರಂ ಸದ್ಯಸ್ತದ್ವಾಕ್ಯಗೌರವಾತ್ ॥ ೨೧ ॥

ತತಃ ಪ್ರೀತಸ್ಸಭಗವಾನ್ವಸಿಷ್ಠೋ ಮುನಿಸತ್ತಮಃ ।
ಸಂಪ್ರಾಪ್ತಶ್ಚ ತದಾ ತತ್ರ ಪುಲಸ್ತ್ಯೋ ಬ್ರಹ್ಮಣಸ್ಸುತಃ ॥ ೨೨ ॥

೧೮-೧೯. ಮನುಷ್ಯರು ಬಹು ಕಷ್ಟದಿಂದ ಸಂಪಾದಿಸಿದ ಕೀರ್ತಿಯನ್ನೂ, ತಪಸ್ಸನ್ನೂ, ಕೋಪವು ನಾಶಮಾಡಿಬಿಡುವುದು. ಸ್ವರ್ಗಮೋಕ್ಷಗಳ ತಡೆಗೆ ಕಾರಣವಾದ ಕೋಪವನ್ನು ಮಹರ್ಷಿಗಳು ಯಾವಾಗಲೂ ಬಿಟ್ಟಿರುವರು. ಮಗುವೇ ನೀನು ಆ ಕೋಪಕ್ಕೆ ವಶನಾಗಬೇಡ.

೨೦. ದೀನರೂ, ತಪ್ಪಿಲ್ಲದವರೂ, ಆದ ರಾಕ್ಷಸರನ್ನು ಸುಟ್ಟಿದ್ದು ಸಾಕು. ಈ ಯಾಗವನ್ನು ಇಲ್ಲಿಗೆ ಬಿಡು. ಸಜ್ಜನರಿಗೆ ಕ್ಷಮಾಗುಣವೇ ಮುಖ್ಯವಾದುದು.

೨೧. ಹೀಗೆಂದು ಮಹಾತ್ಮನಾದ ತಾತನು ನನ್ನನ್ನು ಒಪ್ಪಿಸಿದುದರಿಂದ ಅವರ ಮಾತಿನ ಗೌರವಕ್ಕಾಗಿ ನಾನು ಆ ಕ್ಷಣದಲ್ಲಿಯೇ ಯಾಗಮಾಡುವುದನ್ನು ಬಿಟ್ಟೆನು.

೨೨-೨೩. ಮೈತ್ರೇಯನೇ ಆಮೇಲೆ ಮುನಿಶ್ರೇಷ್ಠನಾದ ವಸಿಷ್ಠನು ಸಂತೋಷ ಹೊಂದಿದನು. ಆ ಸಮಯಕ್ಕೆ ಸರಿಯಾಗಿ ಬ್ರಹ್ಮಪುತ್ರನಾದ ಪುಲಸ್ತ್ಯ-

ಪಿತಾಮಹೇನ ದತ್ತಾರ್ಘ್ಯಃ ಕೃತಾಸನಪರಿಗ್ರಹಃ ।
ಮಾಮುವಾಚ ಮಹಾಭಾಗೋ ಮೈತ್ರೇಯ ಪುಲಹಾಗ್ರಜಃ ॥ ೨೩ ॥

॥ ಪುಲಸ್ತ್ಯ ಉವಾಚ ॥

ವೈರೇ ಮಹತಿ ಯದ್ವಾಕ್ಯಾದ್ಗುರೋರದ್ಯಾಶ್ರಿತಾ ಕ್ಷಮಾ ।
ತ್ವಯಾ ತಸ್ಮಾತ್ಸಮಸ್ತಾನಿ ಭವಾನ್ ಶಾಸ್ತ್ರಾಣಿ ವೇತ್ಸ್ಯತಿ ॥ ೨೪ ॥

ಸಂತತೇರ್ನ ಮಮ ಚ್ಛೇದಃ ಕ್ರುದ್ಧೇನಾಪಿ ಯತಃ ಕೃತಃ ।
ತ್ವಯಾ ತಸ್ಮಾನ್ಮಹಾಭಾಗ ದದಾಮ್ಯನ್ಯಂ ಮಹಾವರಂ ॥ ೨೫ ॥

ಪುರಾಣಸಂಹಿತಾ ಕರ್ತಾ ಭವಾನ್ವತ್ಸ ಭವಿಷ್ಯತಿ ।
ದೇವತಾಪಾರಮಾರ್ಥ್ಯಂ ಚ ಯಥಾವದ್ವೇತ್ಸ್ಯತೇ ಭವಾನ್ ॥ ೨೬ ॥

ಪ್ರವೃತ್ತೇ ಚ ನಿವೃತ್ತೇ ಚ ಕರ್ಮಣ್ಯಸ್ತಮಲಾ ಮತಿಃ ।
ಮತ್ಪ್ರಸಾದಾದಸಂದಿಗ್ಧಾ ತವ ವತ್ಸ ಭವಿಷ್ಯತಿ ॥ ೨೭ ॥

ಮುನಿಯು ಅಲ್ಲಿಗೆ ಬಂದನು. ನಮ್ಮ ತಾತನು ಆ ಮುನಿಗೆ ಅರ್ಘ್ಯವನ್ನು ಕೊಟ್ಟ ಮೇಲೆ ಪುಲಹನ ಅಣ್ಣನಾದ ಆ ಪುಲಸ್ತ್ಯನು ಪೀಠದಮೇಲೆ ಕುಳಿತು ನನ್ನನ್ನು ಕುರಿತು ಮಾತನಾಡಿದನು.

೨೪-೨೫. ಪುಲಸ್ತ್ಯನು ಪರಾಶರನೇ ಮಹಾಕೋಪವಿದ್ದರೂ ಕೂಡ ಗುರುಗಳಾದ ವಸಿಷ್ಠರ ಮಾತಿನಿಂದ ನೀನು ಕ್ಷಮಾ ಗುಣವನ್ನು ಪಡೆದುದರಿಂದ ಸಮಸ್ತ ಶಾಸ್ತ್ರಗಳನ್ನೂ ತಿಳಿಯುವೆ. ಕೋಪವಿದ್ದರೂ ನೀನು ನನ್ನ ವಂಶವನ್ನು ನಾಶ ಮಾಡದಿದ್ದುದರಿಂದ ನಿನಗೆ ಮತ್ತೊಂದು ದೊಡ್ಡ ವರವನ್ನು ಕೊಡುವೆನು.

೨೬-೨೭. ಪ್ರೀತಿಪಾತ್ರನಾದ ಪರಾಶರನೇ ನೀನು ವೇದಕ್ಕೆ ಸಮಾನವಾದ ಪುರಾಣವನ್ನು ರಚಿಸುವೆ ಮತ್ತು ದೇವತೆಗಳ ಪರಮಾರ್ಥ ತತ್ತ್ವವನ್ನು ತಿಳಿಯುವೆ. ನನ್ನ ಅನುಗ್ರಹದಿಂದ ನಿನಗೆ ಪ್ರವೃತ್ತಿ ನಿವೃತ್ತಿ ಕರ್ಮಗಳ ವಿಷಯದಲ್ಲಿ ಸಂದೇಹವಿಲ್ಲದ ದೋಷರಹಿತವಾದಬುದ್ಧಿಯುಂಟಾಗುವುದು ಎಂದು ಹೇಳಿದನು.

ತತಶ್ಚ ಪ್ರಾಹ ಭಗವಾನ್ ವಸಿಷ್ಠೋ ಮೇ ಪಿತಾಮಹಃ ।
ಪುಲಸ್ತ್ಯೇನ ಯದುಕ್ತಂ ತೇ ಸರ್ವಮೇತದ್ಭವಿಷ್ಯತಿ ॥ ೨೮ ॥

ಇತಿ ಪೂರ್ವಂ ವಸಿಷ್ಠೇನ ಪುಲಸ್ತ್ಯೇನ ಚ ಧೀಮತಾ ।
ಯದುಕ್ತಂ ತತ್ ಸ್ಮೃತಿಂ ಯಾತಿ ತ್ವತ್ಪ್ರಶ್ನಾದಖಿಲಂ ಮಮ ॥ ೨೯ ॥

ಸೋಽಹಂ ವದಾಮ್ಯಶೇಷಂ ತೇ ಮೈತ್ರೇಯ ಪರಿಪೃಚ್ಛತೇ ।
ಪುರಾಣಸಂಹಿತಾಂ ಸಮ್ಯಕ್ತಾಂ ನಿಬೋಧ ಯಥಾತಥಂ ॥ ೩೦ ॥

ವಿಷ್ಣೋಸ್ಸಕಾಶಾದುದ್ಭೂತಂ ಜಗತ್ತತ್ರೈವ ಚ ಸ್ಥಿತಂ ।
ಸ್ಥಿತಿಸಂಯಮಕರ್ತಾಸೌ ಜಗತೋಽಸ್ಯ ಜಗಚ್ಚ ಸಃ ॥ ೩೧ ॥

ಮಿತ್ರಾಪುತ್ರವಚೋನಿಶಮ್ಯ ಸಕಲಂ ಸ್ಮೃತ್ವಾತ್ಮನಸ್ತದ್ವರಂ ।
ಸತ್ರಂ ಚೈವ ನಿವಾರಿತಂ ಸಸುಮಹಾಭಾಗೋಽಭವತ್ತಾರಣಂ ॥

---

೨೮. ಆಮೇಲೆ ಮಹಾಮಹಿಮನಾದ ನಮ್ಮ ತಾತನು ಪುಲಸ್ತ್ಯನು ಹೇಳಿದಂತೆ ನಿನಗೆ ಎಲ್ಲ ವರವೂ ಸಿದ್ಧಿಸುವುದು ಎಂದು ಹೇಳಿದನು.

೨೯-೩೦. ಮೈತ್ರೇಯನೇ ಹೀಗೆಂದು ವಶಿಷ್ಠನೂ ಪುಲಸ್ತ್ಯನೂ ಹೇಳಿದ ಮಾತುಗಳೆಲ್ಲವೂ ನಿನ್ನ ಪ್ರಶ್ನೆಯಿಂದ ಜ್ಞಾಪಕಕ್ಕೆ ಬಂದಿತು. ನಾನು ಸಂಹಿತಾ ಸಮಾನವಾದ ಪುರಾಣವನ್ನು ನಿನ್ನ ಪ್ರಶ್ನೆಗೆ ಉತ್ತರವಾಗಿ ಹೇಳುವೆನು ಕೇಳು.

೩೧. ಈ ಜಗತ್ತು ವಿಷ್ಣುವಿನ ಈಕ್ಷಣರೂಪವಾದ ಒಂದು ತೇಜಸ್ಸಿನಿಂದ ಹುಟ್ಟಿತು 'ಸೋಽಕಾಮಯತ ಬಹುಸ್ಯಾಂ ಪ್ರಜಾಯೇಯ' 'ಸಈಕ್ಷತ ಲೋಕಾನ್ನು ಸೃಜೇ' ಎಂಬ ವೇದವಚನಾನುಸಾರವಾಗಿ ಪರಮಾತ್ಮನ ಜ್ಞಾನೇಚ್ಛಾಶಕ್ತಿಗಳಿಂದ ಜಗತ್ತು ಹುಟ್ಟಿ ಅವನಲ್ಲಿಯೇ ಇದ್ದು, ಅವನಲ್ಲಿಯೇ ಲಯವಾಗುವುದು. ಈ ಜಗತ್ತು ಅವನ ಸ್ವರೂಪವೇ ಆಗಿರುವುದು.

೩೨. ಮಿತ್ರಾ ಎಂಬುವಳ ಮಗನಾದ ಮೈತ್ರೇಯನ ಮಾತನ್ನು ಕೇಳಿ ಪರಾಶರನು ಹಿಂದಿನದನ್ನೆಲ್ಲ ಜ್ಞಾಪಿಸಿಕೊಂಡು ತಾನು ರಾಕ್ಷಸರ ಯಾಗವನ್ನು ಬಿಟ್ಟು

ಕೃತ್ವಾ ವೈಷ್ಣವಮುತ್ತಮಂ ಮುನಿವರಂ ಮೈತ್ರೇಯ ಮಧ್ಯಾಪಯತ್ ।
ತತ್ತ್ವಾರ್ಥಪ್ರತಿಪಾದನಂ ಪ್ರವದತಾಂ ಸರ್ವಾರ್ಥದಂ ಶೃಣ್ವತಾಂ ॥ ೩೨ ॥

ಇತಿ ಸರ್ವಪುರಾಣಾನಾಮಾದಿ ಭೂತೇಬ್ರಹ್ಮಾಂಡಾಖ್ಯೇ ಮಹಾ
ಪುರಾಣೇ ಉದ್ಧೃತಾಯಾಂ ಪಾರಾಶರ್ಯಸಂಹಿತಾಯಾಂ
ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಪ್ರಥಮೋಽಧ್ಯಾಯಃ

ದನ್ನೂ ಇದರಿಂದ ತನಗೆ ಬಂದ ವರವನ್ನೂ ಮನಸ್ಸಿಗೆ ತಂದುಕೊಂಡು ಉತ್ತಮವಾದ ವಿಷ್ಣುಪುರಾಣವನ್ನು ರಚಿಸಿ ಪಾಠಮಾಡುವವರಿಗೆ ತತ್ತ್ವಾರ್ಥವನ್ನು ತಿಳಿಸುವುದಾಗಿಯೂ ಕೇಳುವವರಿಗೆ ಸಮಸ್ತ ಇಷ್ಟಾರ್ಥಗಳನ್ನು ಕೊಡುವುದಾಗಿಯೂ ಇರುವ ಆ ಪುರಾಣವನ್ನು ಮೈತ್ರೇಯನಿಗೆ ಹೇಳಿ ಪಾಠ ಮಾಡಿಸಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಮೊದಲನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪ್ರಥಮಾಂಶೇ

ದ್ವಿತೀಯೋಽಧ್ಯಾಯಃ

॥ ಪರಾಶರ ಉವಾಚ ॥

ಅವಿಕಾರಾಯ ಶುದ್ಧಾಯ ನಿತ್ಯಾಯ ಪರಮಾತ್ಮನೇ ।
ಸದೈಕರೂಪರೂಪಾಯ ವಿಷ್ಣವೇ ಸರ್ವಜಿಷ್ಣವೇ ॥ ೧ ॥

ನಮೋ ಹಿರಣ್ಯಗರ್ಭಾಯ ಹರಯೇ ಶಂಕರಾಯ ಚ ।
ವಾಸುದೇವಾಯ ತಾರಾಯ ಸರ್ಗಸ್ಥಿತ್ಯಂತಕಾರಿಣೇ ॥ ೨ ॥

ಎರಡನೆಯ ಅಧ್ಯಾಯವು.

೧. ಹಿಂದಿನ ಅಧ್ಯಾಯದ ಕೊನೆಯಲ್ಲಿ ಪುರಾಣದ ಮುಖ್ಯಾಭಿಪ್ರಾಯವನ್ನು ಒಂದು ಶ್ಲೋಕದಲ್ಲಿ ಹೇಳಿ ಜಗತ್ತಿಗೆ ಉಪಾದಾನ ಕಾರಣವು ಪರಮಾತ್ಮನೆಂದು ಹೇಳಿದುದರಿಂದ ಬಂದ ವಿಕಾರಿತ್ವಾದಿ ದೋಷಗಳ ನಿವಾರಣೆಗಾಗಿ ಈ ಅಧ್ಯಾಯದ ಆದಿಯಲ್ಲಿ ಆ ಪರಮಾತ್ಮನ ಮಹಿಮೆಯನ್ನು ವರ್ಣಿಸುವನು. ಲೋಕದಲ್ಲಿ ಮಣ್ಣು, ಚಿನ್ನ ಮುಂತಾದ ಉಪಾದಾನ ಕಾರಣಗಳು ಘಟ, ಕಟಕ ಮುಂತಾದ ವಸ್ತು ಪರಿಣಾಮದಿಂದ ಅನೇಕ ರೂಪವಾಗುವುವು. ಪರಮಾತ್ಮನಾದರೋ ಸದಾ ಏಕ ರೂಪವಾಗಿರುವುದರಿಂದ ವಿಕಾರವಾಗತಕ್ಕವನಲ್ಲ. ಆದುದರಿಂದಲೇ ಅವನು ಶುದ್ಧನು ಮತ್ತು ನಿತ್ಯನಾದವನು ತನ್ನ ಈಶ್ವರತ್ವದಿಂದ ಸರ್ವವನ್ನೂ ಜಯಿಸಿ ತನ್ನಧೀನ ಮಾಡಿಕೊಂಡಿರತಕ್ಕವನು.

೨. ಆ ಪರಮಾತ್ಮನು ಬ್ರಹ್ಮ, ವಿಷ್ಣು, ರುದ್ರಸ್ವರೂಪನಾಗಿ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವನು. ಹೀಗೆ ಸಂಸಾರ ಪ್ರವರ್ತಕನಾಗಿ ಭಕ್ತರನ್ನು ರಕ್ಷಿಸುತ್ತ ಸಂಸಾರ ನಿವರ್ತಕನಾಗಿ ಅವರಿಗೆ ಮೋಕ್ಷವನ್ನುಂಟುಮಾಡುವನು. ಅಂತಹ ವಾಸುದೇವನಿಗೆ ನಮಸ್ಕಾರ ಮಾಡುವೆನು.

ಏಕಾನೇಕಸ್ವರೂಪಾಯ ಸ್ಥೂಲಸೂಕ್ಷ್ಮಾತ್ಮನೇ ನಮಃ ।
ಅವ್ಯಕ್ತವ್ಯಕ್ತರೂಪಾಯ ವಿಷ್ಣವೇ ಮುಕ್ತಿಹೇತವೇ ॥ ೩ ॥

ಸರ್ಗಸ್ಥಿತಿವಿನಾಶಾನಾಂ ಜಗತೋ ಯೋ ಜಗನ್ಮಯಃ ।
ಮೂಲಭೂತೋ ನಮಸ್ತಸ್ಮೈ ವಿಷ್ಣವೇ ಪರಮಾತ್ಮನೇ ॥ ೪ ॥

ಆಧಾರಭೂತಂ ವಿಶ್ವಸ್ಯಾಪ್ಯಣೀಯಾಂಸಮಣೀಯಸಾಂ ।
ಪ್ರಣಮ್ಯ ಸರ್ವಭೂತಸ್ಥಮಚ್ಯುತಂ ಪುರುಷೋತ್ತಮಂ ॥ ೫ ॥

ಜ್ಞಾನಸ್ವರೂಪಮತ್ಯಂತನಿರ್ಮಲಂ ಪರಮಾರ್ಥತಃ ।
ತಮೇವಾರ್ಥಸ್ವರೂಪೇಣ ಭ್ರಾಂತಿದರ್ಶನತಸ್ಸ್ಥಿತಂ ॥ ೬ ॥

---

೩. ಅವ್ಯಕ್ತನಾದುದರಿಂದ ಸೂಕ್ಷ್ಮನೂ, ಏಕ ರೂಪನೂ ಆಗಿರುವ ವ್ಯಕ್ತನಾದುದರಿಂದ ಸ್ಥೂಲನೂ, ಅನೇಕ ರೂಪನೂ ಆಗಿರುವ ಹೀಗೆ ಸರ್ವಾತ್ಮಸ್ವರೂಪನಾಗಿ ಉಪಾಸನೆ ಮಾಡತಕ್ಕವರಿಗೆ ಮುಕ್ತಿಯನ್ನು ಕೊಡುವ ವಿಷ್ಣುವಿಗೆ ನಮಸ್ಕಾರ ಮಾಡುವೆನು.

೪. ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣ ಸ್ವರೂಪನೂ ಜಗದ್ರೂಪನಾಗಿ ಕಾರ್ಯಸ್ವರೂಪನೂ ಆಗಿರುವ ಸರ್ವ ವ್ಯಾಪಿಯಾಗಿ ಕಾರ್ಯ ಕಾರಣಗಳಿಗಿಂತ ಉತ್ಕೃಷ್ಟನಾಗಿ ಅಂದರೆ ಕಾರ್ಯ ಕಾರಣ ಸಂಗರಹಿತನಾಗಿ ಆತ್ಮಸ್ವರೂಪನಾಗಿರುವ ವಿಷ್ಣುವಿಗೆ ನಮಸ್ಕಾರ ಮಾಡುವೆನು.

೫–೮. ಪ್ರಪಂಚಕ್ಕೆ ಆಶ್ರಯನಾದ ಅತ್ಯಂತ ಸೂಕ್ಷ್ಮನಾದ ಸಮಸ್ತ ಪ್ರಾಣಿಗಳಲ್ಲಿಯೂ ನಿಯಾಮಕನಾಗಿದ್ದರೂ ನಾಶರಹಿತನಾದ ಜ್ಞಾನಸ್ವರೂಪನಾಗಿ ಅತ್ಯಂತ ಪರಿಶುದ್ಧನೂ, ಪರಮಾರ್ಥ ಸ್ವರೂಪನೂ ಆಗಿರುವ ದೃಶ್ಯ ವಸ್ತು ಸ್ವರೂಪನಾಗಿಯೂ ಭ್ರಾಂತಿ ಜ್ಞಾನದಿಂದ ಜೀವ ಸ್ವರೂಪನಾಗಿಯೂ ಇರುವ ಕಾಲರೂಪದಿಂದ ಸರ್ವ ವ್ಯಾಪಿಯಾಗಿ ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವ ಚಲನೆಯಿಲ್ಲದವನಾಗಿಯೂ, ನಾಶವಿಲ್ಲದವನಾಗಿಯೂ ಇರುವ ಜಗತ್ತಿಗೆ ಸ್ವಾಮಿಯಾದ ಪರಮಾತ್ಮ

ವಿಷ್ಣುಂ ಗ್ರಸಿಷ್ಣುಂ ವಿಶ್ವಸ್ಯ ಸ್ಥಿತಿಸರ್ಗೇ ತಥಾ ಪ್ರಭುಂ ।
ಪ್ರಣಮ್ಯ ಜಗತಾಮೀಶಮಜನ್ಮಕ್ಷಯಮವ್ಯಯಂ ॥ ೭ ॥

ಕಥಯಾಮಿ ಯಥಾಪೂರ್ವಂ ದಕ್ಷಾದ್ಯೈರ್ಮುನಿಸತ್ತಮೈಃ ।
ಪೃಷ್ಟಃ ಪ್ರೋವಾಚ ಭಗವಾನಬ್ಜಯೋನಿಃ ಪಿತಾಮಹಃ ॥ ೮ ॥

ತೈಶ್ಚೋಕ್ತಂ ಪುರುಕುತ್ಸಾಯ ಭೂಭುಜೇ ನರ್ಮದಾತಟೇ ।
ಸಾರಸ್ವತಾಯ ತೇನಾಪಿ ಮಹ್ಯಂ ಸಾರಸ್ವತೇನ ಚ ॥ ೯ ॥

ಪರಃಪರಾಣಾಂ ಪರಮಃ ಪರಮಾತ್ಮಾತ್ಮಸಂಸ್ಥಿತಃ ।
ರೂಪವರ್ಣಾದಿನಿರ್ದೇಶ ವಿಶೇಷಣವಿವರ್ಜಿತಃ ॥ ೧೦ ॥

ಅಪಕ್ಷಯವಿನಾಶಾಭ್ಯಾಂ ಪರಿಣಾಮರ್ದ್ಧಿಜನ್ಮಭಿಃ ।

ನಿಗೆ ನಮಸ್ಕಾರವನ್ನು ಮಾಡಿ ಹಿಂದೆ ದಕ್ಷಾದಿ ಮುನಿಶ್ರೇಷ್ಠರು ಪ್ರಶ್ನೆ ಮಾಡಿದುದಕ್ಕೆ ಕಮಲದಲ್ಲಿ ಹುಟ್ಟಿದ ಪಿತಾಮಹನಾದ ಬ್ರಹ್ಮನು ಏನು ಉತ್ತರವನ್ನು ಹೇಳಿದನೋ ಅದನ್ನೇ ನಿನಗೆ ಹೇಳುವೆನು.

೯. ಈ ವಿಷ್ಣುತತ್ವವನ್ನು ಆ ದಕ್ಷಾದಿಗಳು ನರ್ಮದಾನದಿಯ ತೀರದಲ್ಲಿ ಪುರುಕುತ್ಸನೆಂಬ ರಾಜನಿಗೆ ಹೇಳಿದರು. ಅವನು ಸಾರಸ್ವತನಿಗೆ ಹೇಳಿದನು. ಸಾರಸ್ವತನು ನನಗೆ ಹೇಳಿದನು,

೧೦. "ಇಂದ್ರಿಯೇಭ್ಯಃ ಪರಾಹ್ಯರ್ಥಾ ಅರ್ಥೇಭ್ಯಶ್ಚ ಪರಂಮನಃ" ಇತ್ಯಾದಿ ವೇದವಚನದಂತೆ ಇಂದ್ರಿಯಾದಿಗಳಿಗಿಂತ ಪುರಾತನನೂ, ಶ್ರೇಷ್ಠನೂ "ಯ ಆತ್ಮನಿತಿಷ್ಠನ್" ಎಂಬ ಶ್ರುತಿಯಂತೆ ಜೀವಾತ್ಮನ ಅಂತರ್ಯಾಮಿಯೂ ರೂಪ ವರ್ಣ ಮುಂತಾದ ವಿಶೇಷಣಗಳಿಲ್ಲದವನೂ.

೧೧. ಅಸ್ತಿ, ಜಾಯತೆ, ವರ್ಧತೇ, ವಿಪರಿಣಮತೇ, ಅಪಕ್ಷೀಯತೇ, ನಶ್ಯತಿ ಎಂಬ ಆರು ಬಗೆಯ ಭಾವವಿಕಾರಗಳಿಲ್ಲದ ನಿತ್ಯವಾಗಿರುವ (" ಅಸನ್ನೇವಸಭವತಿ ಅಸದ್ಬ್ರಹ್ಮೇತಿ ವೇದಚೇತ್ ಅಸ್ತಿಬ್ರಹ್ಮೇತಿ ಚೇದ್ವೇದ ಸಂತಮೇನಂತತೋವಿದುರಿತಿ

ವರ್ಜಿತಶ್ಶಕ್ಯತೇ ವಕ್ತುಂ ಯಸ್ಸದಾಸ್ತೀತಿ ಕೇವಲಂ ॥ ೧೧ ॥

ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ ।
ತತಸ್ಸ ವಾಸುದೇವೇತಿ ವಿದ್ವದ್ಭಿಃ ಪರಿಪಶ್ಯತೇ ॥ ೧ ॥

ತದ್ಬ್ರಹ್ಮ ಪರಮಂ ನಿತ್ಯಮಜಮಕ್ಷಯಮವ್ಯಯಂ ।
ಏಕಸ್ವರೂಪಂ ತು ಸದಾ ಹೇಯಾಭಾವಾಚ್ಚ ನಿರ್ಮಲಂ ॥ ೧೩ ॥

ತದೇವ ಸರ್ವಮೇತಚ್ಚ ವ್ಯಕ್ತಾವ್ಯಕ್ತಸ್ವರೂಪವತ್ ।
ತಥಾ ಪುರುಷರೂಪೇಣ ಕಾಲರೂಪೇಣ ಚ ಸ್ಥಿತಂ ॥ ೧೪ ॥

ಅಸ್ತಿತ್ಯೇವೋ ಫಲಬ್ಧವ್ಯಃ" ಎಂಬ ವೇದವಚನಾನುಸಾರವಾಗಿ ಸರ್ವದಾ ಅಸ್ತಿತ್ವ ವನ್ನು ಒಪ್ಪಿಕೊಳ್ಳಬೇಕು. ಇದು ಭಾವವಿಕಾರವೆಲ್ಲ ಹುಟ್ಟಿದ ಮೇಲೆ ಅಸ್ತಿತ್ವವೇ ಭಾವವಿಕಾರವು).

೧೨. ಎಲ್ಲೆಡೆಯಲ್ಲಿಯೂ ಸಮಸ್ತ ಜೀವರುಗಳಲ್ಲಿಯೂ ವಾಸಮಾಡುವುದ ರಿಂದ ವಿದ್ವಾಂಸರಿಂದ ವಾಸುದೇವನೆಂಬ ಹೆಸರನ್ನು ಪಡೆದಿರುವ,

೧೩. ಶ್ರೇಷ್ಠವೂ, ನಿತ್ಯವೂ, ಉತ್ಪತ್ತಿ ನಾಶರಹಿತವಾದುದೂ ಸದಾ ಏಕ ರೂಪವಾದುದೂ ಅವಿದ್ಯಾತತ್ಕಾರ್ಯಗಳಿಲ್ಲದುದರಿಂದ ನಿರ್ಮಲವಾದುದೂ ಆದ ವಸ್ತುವೇ ಪರಬ್ರಹ್ಮ ವಸ್ತುವು.

೧೪. ಆ ಪರಬ್ರಹ್ಮವಸ್ತುವೇ ತನ್ನ ಮಾಯಾಶಕ್ತಿಯಿಂದ ಮಹತ್ತತ್ವಾದಿ ರೂಪದಿಂದ ವ್ಯಕ್ತವಾದುದಾಗಿಯೂ ಪ್ರಕೃತಿ ಸ್ವರೂಪದಿಂದ ಅವ್ಯಕ್ತವಾದುದಾಗಿಯೂ ಪುರುಷ ರೂಪವಾಗಿಯೂ ಕಾಲರೂಪವಾಗಿಯೂ ನಾಲ್ಕು ರೂಪದಿಂದ ಈ ಸಮಸ್ತ ಪ್ರಪಂಚ ರೂಪವಾಗಿರುವುದು.

ಪರಸ್ಯ ಬ್ರಹ್ಮಣೋ ರೂಪಂ ಪುರುಷಃ ಪ್ರಥಮಂ ದ್ವಿಜ ।
ವ್ಯಕ್ತಾವ್ಯಕ್ತೇ ತಥೈವಾನ್ಯೇ ರೂಪೇ ಕಾಲಸ್ತಥಾ ಪರಂ ॥ ೧೫ ॥

ಪ್ರಧಾನಪುರುಷವ್ಯಕ್ತಕಾಲಾನಾಂ ಪರಮಂ ಹಿ ಯತ್ ।
ಪಶ್ಯಂತಿ ಸೂರಯಶ್ಶುದ್ಧಂ ತದ್ವಿಷ್ಣೋಃ ಪರಮಂ ಪದಂ ॥ ೧೬ ॥

ಪ್ರಧಾನಪುರುಷವ್ಯಕ್ತಕಾಲಾಸ್ತು ಪ್ರವಿಭಾಗಶಃ ।
ರೂಪಾಣಿ ಸ್ಥಿತಿಸರ್ಗಾಂತವ್ಯಕ್ತಿಸದ್ಭಾವಹೇತವಃ ॥ ೧೭ ॥

ವ್ಯಕ್ತಂ ವಿಷ್ಣುಸ್ತಥಾಽವ್ಯಕ್ತಂ ಪುರುಷಃ ಕಾಲ ಏವ ಚ ।
ಕ್ರೀಡತೋ ಬಾಲಕಸ್ಯೇವ ಚೇಷ್ಟಾಂ ತಸ್ಯ ನಿಶಾಮಯ ॥ ೧೮ ॥

---

೧೫. “ ಸ ಈಕ್ಷತ ” “ ಸೋಽಕಾಮಯತ ” ಇತ್ಯಾದಿ ಶ್ರುತಿಪ್ರಮಾಣದಂತೆ ಈಕ್ಷಣಕ ಕರ್ತೃವಾದ ಪುರುಷನೇ ಪರಬ್ರಹ್ಮನ ಮೊದಲನೆಯ ರೂಪವು. ಆಮೇಲೆ ಪುರುಷನ ಈ ಕ್ಷಣರೂಪ ಸಂಕಲ್ಪರೂಪದಿಂದ ಜಡವಾದ ಪ್ರಕೃತಿಯೂ ಮಹತ್ತತ್ತ್ವವೂ ಹುಟ್ಟಿದುವು. ಆಮೇಲೆ ಚಲನೆಯನ್ನುಂಟುಮಾಡುವ ಕಾಲವೆಂಬ ಮತ್ತೊಂದು ರೂಪವುಂಟಾಯಿತು.

೧೬. ಜ್ಞಾನಿಗಳಾದವರು ಪುರುಷ, ಪ್ರಕೃತಿ ಮಹತ್ತತ್ತ್ವಕಾಲ ಎಂಬ ಈ ನಾಲ್ಕು ರೂಪಗಳಿಗಿಂತ ಶ್ರೇಷ್ಠವೂ ಆನಂದ ಸ್ವರೂಪವೂ ನಿರ್ವಿಕಾರವೂ ಆದ ಯಾವ ರೂಪವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವರೋ ಅದೇ ವಿಷ್ಣುವಿನ ಪರಮ ಪದವು.

೧೭. ಪ್ರಕೃತಿ ಪುರುಷ ಮಹತ್ತತ್ತ್ವ ಕಾಲ ಎಂಬ ಈ ನಾಲ್ಕು ಭೇದಗಳೂ ಸೃಷ್ಟಿ, ಸ್ಥಿತಿ, ನಾಶಗಳಿಗೆ ಕಾರಣಗಳಾಗಿರುವುವು. “ ಚತುರ್ವಿಭಾಗಃ ಸಂಸೃಷ್ಟೌ ಚತುರ್ಧಾ ಸಂಸ್ಥಿತಸ್ಥಿತೌ । ಪ್ರಳಯಂ ಚ ಕರೋತ್ಯಂತೇ ಚತುರ್ಭೇದೋ ಜನಾರ್ದನಃ ” ಎಂಬುದೇ ಪ್ರಮಾಣವಚನವು.

೧೮. ‘ ಲೋಕವತ್ತು ಲೀಲಾಕೈವಲ್ಯಂ ’ ಬ್ರಂ. ಸೂ. ೨-೧-೩೩ ಎಂಬ ಪ್ರಮಾಣಾನುಸಾರವಾಗಿ ವಿಷ್ಣುವು ವ್ಯಕ್ತಾದಿ ನಾಲ್ಕುರೂಪದಿಂದ ಆಟವಾಡುತ್ತಿರುವ ಬಾಲಕನು ಕಲ್ಲು, ಇಟ್ಟಿಗೆಗಳಿಂದ ದೇವಾಲಯವನ್ನು ಕಟ್ಟಿ ಸ್ವಲ್ಪ ಹೊತ್ತಿನಲ್ಲಿಯೇ ಅಳಿಸಿಬಿಡುವ ಚೇಷ್ಟೆಯಂತೆ ಯಾವ ಪ್ರಯೋಜನವೂ ಇಲ್ಲದೆ ಸೃಷ್ಟಿ, ಸ್ಥಿತಿ ಸಂಹಾರಗಳನ್ನು ಮಾಡುವನು.

ಅವ್ಯಕ್ತಂ ಕಾರಣಂ ಯತ್ತತ್ಪ್ರಧಾನಮೃಷಿಸತ್ತಮೈಃ ।
ಪ್ರೋಚ್ಯತೇ ಪ್ರಕೃತಿಸ್ಸೂಕ್ಷ್ಮಾ ನಿತ್ಯಂ ಸದಸದಾತ್ಮಕಂ ॥ ೧೯ ॥

ಅಕ್ಷಯಂ ನಾನ್ಯದಾಧಾರಮಮೇಯಮಜರಂ ಧ್ರುವಂ ।
ಶಬ್ದಸ್ಪರ್ಶವಿಹೀನಂ ತದ್ರೂಪಾದಿಭಿರಸಂಯುತಂ ॥ ೨೦ ॥

ತ್ರಿಗುಣಂ ತಜ್ಜಗದ್ಯೋನಿರನಾದಿಪ್ರಭವಾಪ್ಯಯಂ ।
ತೇನಾಗ್ರೇ ಸರ್ವಮೇವಾಸೀದ್ವ್ಯಾಪ್ತಂ ವೈ ಪ್ರಳಯಾದನು ॥ ೨೧ ॥

ವೇದವಾದವಿದೋ ಬ್ರಹ್ಮನಿಯತಾ ಬ್ರಹ್ಮವಾದಿನಃ ।
ಪಠಂತಿ ಚೈತಮೇವಾರ್ಥಂ ಪ್ರಧಾನಪ್ರತಿಪಾದಕಂ ॥ ೨೨ ॥

---

೧೯. ಋಷಿಶ್ರೇಷ್ಠರು ಅವ್ಯಕ್ತವನ್ನು ಪ್ರಧಾನವೆಂದೂ ಪ್ರಕೃತಿಯೆಂದೂ ಹೇಳುವರು. ಅದು ಸೂಕ್ಷ್ಮವಾದುದಾಗಿಯೂ, ಏಕರೂಪವಾದುದಾಗಿಯೂ ಕಾರ್ಯ ಕಾರಣ ಶಕ್ತಿಯುಕ್ತವಾದುದಾಗಿಯೂ ಇರುವುದು.

೨೦. ಆ ಪ್ರಕೃತಿಯು ನಾಶವಾಗತಕ್ಕುದಲ್ಲ. ಮೂಲಕಾರಣವಾದುದರಿಂದ ಇದಕ್ಕೆ ಮತ್ತೊಂದು ಆಶ್ರಯವಿಲ್ಲ. ಅಳತೆಯಿಲ್ಲ. ನಾಶವಿಲ್ಲ. ಇದು ಶಬ್ದ ಸ್ಪರ್ಶಾದಿಗಳೂ ರೂಪಗಳೂ ಇಲ್ಲದೆ ನಿಶ್ಚಲವಾದುದಾಗಿರುವುದು.

೨೧. ಅದು ಗುಣತ್ರಯ ಸಾಮ್ಯರೂಪವಾದುದು. ಜಗತ್ತಿಗೆ ಕಾರಣವಾದುದು. ಉತ್ಪತ್ತಿಯಿಲ್ಲದುದು. ಸಕಲ ಕಾರ್ಯಗಳಿಗೂ ಲಯಸ್ಥಾನವಾದುದು. ಸೃಷ್ಟಿಗೆ ಪೂರ್ವದಲ್ಲಿಯೂ ಪ್ರಳಯವಾದಮೇಲೆಯೂ ಸಮಸ್ತ ಕಾರ್ಯಗಳೂ ಅದರಲ್ಲಿಯೇ ಐಕ್ಯವಾಗಿರುವುವು.

೨೨. ವೇದವಾಕ್ಯಗಳ ಅರ್ಥವನ್ನು ತಿಳಿದು ಅದನ್ನು ಇತರರಿಗೆ ಹೇಳತಕ್ಕವರಾದ ಜ್ಞಾನಿಗಳು ಪ್ರಕೃತಿಸ್ವರೂಪವನ್ನು ತಿಳಿಸುವ ಮುಂದಿನ ಶ್ಲೋಕವನ್ನು ಹೇಳಿರುವರು.

ನಾಹೋ ನ ರಾತ್ರಿರ್ನ ನಭೋ ನ ಭೂಮಿ-
ರ್ನಾಸೀತ್ತಮೋ ಜ್ಯೋತಿರಭೂನ್ನ ಚಾನ್ಯತ್ ।
ಶ್ರೋತ್ರಾದಿಬುದ್ಧ್ಯಾನುಪಲಭ್ಯಮೇಕಂ
ಪ್ರಾಧಾನಿಕಂ ಬ್ರಹ್ಮ ಪುಮಾಂಸ್ತದಾಸೀತ್ ॥ ೨೩ ॥

ವಿಷ್ಣೋಸ್ಸ್ವರೂಪಾತ್ಪರತೋದಿತೇ ದ್ವೇ-
ರೂಪೇ ಪ್ರಧಾನಂ ಪುರುಷಶ್ಚ ವಿಪ್ರ ।
ತಸ್ಯೈವ ಯೇಽನ್ಯೇ ನ ಧೃತೇ ವಿಯುಕ್ತೇ
ರೂಪಾಂತರಂ ತದ್ದ್ವಿಜ ಕಾಲಸಂಜ್ಞಂ ॥ ೨೪ ॥

ಪ್ರಕೃತೌ ಸಂಸ್ಥಿತಂ ವ್ಯಕ್ತಮತೀತಪ್ರಳಯೇ ತು ಯತ್ ।
ತಸ್ಮಾತ್ಪ್ರಾಕೃತಸಂಜ್ಞೋಽಯಮುಚ್ಯತೇ ಪ್ರತಿಸಂಚರಃ ॥ ೨೫ ॥

---

೨೩. ಹಿಂದಿನ ಪ್ರಳಯದಲ್ಲಿ ಹಗಲೂ, ರಾತ್ರಿಯೂ ಇರಲಿಲ್ಲ. ಆಕಾಶವೂ ಭೂಮಿಯೂ ಇರಲಿಲ್ಲ. ಕತ್ತಲೆಯಾಗಲಿ, ಬೆಳಕಾಗಲಿ ಇರಲಿಲ್ಲ. ಶಬ್ದಾದಿಗಳಿಲ್ಲದುದರಿಂದ ಶ್ರೋತ್ರಾದಿ ಇಂದ್ರಿಯಗಳಾಗಲಿ, ಮನಸ್ಸಾಗಲಿ, ಮತ್ತಾವ ವಸ್ತುವಾಗಲಿ ಇರಲಿಲ್ಲ. ಪ್ರಕೃತಿ, ಪುರುಷ, ಪರಬ್ರಹ್ಮ ಈ ಮೂರು ಮಾತ್ರ ಇದ್ದುವು.

೨೪. ನಿರುಪಾಧಿಕನಾದ ವಿಷ್ಣುವಿನ ಸ್ವರೂಪದ ದೆಸೆಯಿಂದ ಪ್ರಕೃತಿ ಪುರುಷರೆಂಬ ಎರಡು ರೂಪಗಳು ವ್ಯಕ್ತವಾದುವು. ಇವೆರಡೂ ಪರಮಾತ್ಮನಾದ ವಿಷ್ಣುವಿನ ಸ್ವರೂಪಕ್ಕಿಂತ ವಿಲಕ್ಷಣವಾದುವು. ಇವೆರಡೂ ಸೃಷ್ಟಿಕಾಲದಲ್ಲಿ ಕೂಡಿಯೂ ಪ್ರಳಯಕಾಲದಲ್ಲಿ ಬೇರೆ ಬೇರೆಯೂ ಇರುವುವು. ಮೈತ್ರೇಯನೇ ಇದು ಕಾಲವೆಂಬ, ಹೆಸರಿನ ಒಂದು ರೂಪಾಂತರವಾಗಿರುವುದು

೨೫. ಹಿಂದಿನ ಪ್ರಳಯದಲ್ಲಿ ವ್ಯಕ್ತವಾಗಿದ್ದ ಪ್ರಪಂಚವು ಪ್ರಕೃತಿಯಲ್ಲಿ ಲೀನವಾಯಿತು. ಆದುದರಿಂದ ಪ್ರಪಂಚವು ಪ್ರಕೃತಿಯಲ್ಲಿ ಲೀನವಾಗುವುದನ್ನು ಪ್ರಾಕೃತ ಪ್ರಳಯವೆನ್ನುವರು. ಇದು ಪ್ರಕೃತಿ ಪುರುಷರ ವಿಯೋಗವಿಲ್ಲದಿದ್ದರೆ ಉಂಟಾಗುವುದಿಲ್ಲವೆಂದು ಅಭಿಪ್ರಾಯವು.

ಅನಾದಿರ್ಭಗವಾನ್ ಕಾಲೋ ನಾಂತೋಽಸ್ಯ ದ್ವಿಜ ವಿದ್ಯತೇ ।
ಅವ್ಯುಚ್ಛಿನ್ನಾಸ್ತತಸ್ತ್ವೇತೇ ಸರ್ಗಸ್ಥಿತ್ಯಂತಸಂಯಮಾಃ ॥ ೨೬ ॥

ಗುಣಸಾಮ್ಯೇ ತತಸ್ತಸ್ಮಿನ್ ಪೃಥಕ್ಪುಂಸಿ ವ್ಯವಸ್ಥಿತೇ ।
ಕಾಲಸ್ವರೂಪಂ ತದ್ವಿಷ್ಣೋರ್ಮೈತ್ರೇಯ ಪರಿವರ್ತತೇ ॥ ೨೭ ॥

ತತಸ್ತು ತತ್ಪರಂ ಬ್ರಹ್ಮ ಪರಮಾತ್ಮಾ ಜಗನ್ಮಯಃ ।
ಸರ್ವಗಸ್ಸರ್ವಭೂತೇಶಸ್ಸರ್ವಾತ್ಮಾ ಪರಮೇಶ್ವರಃ ॥ ೨೮ ॥

ಪ್ರಧಾನಪುರುಷೌ ಚಾಪಿ ಪ್ರವಿಶ್ಯಾತ್ಮೇಚ್ಛಯಾ ಹರಿಃ ।
ಕ್ಷೋಭಯಾಮಾಸ ಸಂಪ್ರಾಪ್ತೇ ಸರ್ಗಕಾಲೇ ವ್ಯಯಾವ್ಯಯೌ ॥ ೨೯ ॥

---

೨೬. ಮೈತ್ರೇಯನೇ ಮಹಾ ಮಹಿಮೆಯುಳ್ಳ ಕಾಲವೆಂಬುದು ಅನಾದಿಯಾದುದು. ಅದಕ್ಕೆ ಕೊನೆಯೂ ಇಲ್ಲ. ಆ ಕಾರಣದಿಂದ ಸೃಷ್ಟಿ, ಸ್ಥಿತಿ ನಾಶಗಳು ಪ್ರವಾಹ ರೂಪವಾಗಿ ಬಿಡದೆ ನಡೆಯುತ್ತಿರುವುವು.

೨೭. ಪ್ರಳಯಕಾಲದಲ್ಲಿ ಪ್ರಕೃತಿಯು ಗುಣಸಾಮ್ಯಾವಸ್ಥೆಯಲ್ಲಿದ್ದು ಪುರುಷನು ಬೇರೆಯಾಗಿರುತ್ತಿರಲು ವಿಷ್ಣುಸ್ವರೂಪವಾದ ಕಾಲವು ಈ ಪ್ರಕೃತಿ ಪುರುಷರನ್ನು ಧರಿಸಿರುತ್ತದೆ. (ಆಗ ಸೂರ್ಯಾದಿಗತಿಯಿಂದ ಕೂಡಿದ ಸ್ಥೂಲರೂಪವಾದ ಕಾಲವಿಲ್ಲವೆಂದು ಅಭಿಪ್ರಾಯವು. ಇದರಿಂದ ಪ್ರಳಯಕಾಲದಲ್ಲಿ ಪುರುಷನು ಪ್ರಕೃತಿಯನ್ನಾಶ್ರಯಿಸಿ ಸೃಷ್ಟಿ ಮಾಡುವನೆಂದು ಪುರುಷನ ಸ್ವರೂಪವನ್ನೂ ಹೇಳಿದಂತಾಯಿತು.)

೨೮–೨೯. ಆಮೇಲೆ ಸೃಷ್ಟಿಕಾಲವು ಬರುತ್ತಲು ಸರ್ವಶ್ರೇಷ್ಠನೂ ಜಗದ್ರೂಪನೂ ಸರ್ವವ್ಯಾಪಿಯೂ ಸಮಸ್ತ ಜೀವರಿಗೂ ಆತ್ಮಶಕ್ತಿಸ್ವರೂಪನೂ ಆದ ಪರಮೇಶ್ವರನು ಪ್ರಳಯಕಾಲದಲ್ಲಿ ಬೇರೆ ಬೇರೆಯಾಗಿ ತನ್ನಲ್ಲಿಯೇ ಸುಮ್ಮನಿರುವ ತನ್ನ ಅಂಶವಾದ ಉಪಾದಾನ ನಿಮಿತ್ತಕಾರಣರಾದ ಪರಿಣಾಮವಾಗುವ ಮತ್ತು ಪರಿಣಾಮವಾಗದ ಸ್ವಭಾವದ ಪ್ರಕೃತಿ ಪುರುಷರನ್ನು ತನ್ನ ಕಾಲಶಕ್ತಿಯಿಂದ ಪ್ರೇರಿತವಾದ ಇಚ್ಛಾಶಕ್ತಿಯಿಂದ ಕೂಡಿಸಿ ಸೃಷ್ಟಿಕಾರ್ಯವನ್ನು ಮಾಡುವಂತೆ ಮಾಡಿದನು.

ಯಥಾ ಸನ್ನಿಧಿಮಾತ್ರೇಣ ಗಂಧಃ ಕ್ಷೋಭಾಯ ಜಾಯತೇ ।
ಮನಸೋ ನೋಪಕರ್ತೃತ್ವಾತ್ತಥಾಸೌ ಪರಮೇಶ್ವರಃ ॥ ೩೦ ॥

ಸ ಏವ ಕ್ಷೋಭಕೋ ಬ್ರಹ್ಮನ್ ಕ್ಷೋಭ್ಯಶ್ಚ ಪುರುಷೋತ್ತಮಃ ।
ಸಸಂಕೋಚವಿಕಾಸಾಭ್ಯಾಂ ಪ್ರಧಾನತ್ವೇಽಪಿ ಚ ಸ್ಥಿತಃ ॥ ೩೧ ॥

ವಿಕಾಸಾಣುಸ್ವರೂಪೈಶ್ಚ ಬ್ರಹ್ಮರೂಪಾದಿಭಿಸ್ತಥಾ ।
ವ್ಯಕ್ತಸ್ವರೂಪಶ್ಚ ತಥಾ ವಿಷ್ಣುಸ್ಸರ್ವೇಶ್ವರೇಶ್ವರಃ ॥ ೩೨ ॥

ಗುಣಸಾಮ್ಯಾತ್ತತಸ್ತಸ್ಮಾತ್ ಕ್ಷೇತ್ರಜ್ಞಾಧಿಷ್ಠಿತಾನ್ಮುನೇ ।
ಗುಣವ್ಯಂಜನ ಸಂಭೂತಿಸ್ಸರ್ಗಕಾಲೇ ದ್ವಿಜೋತ್ತಮ ॥ ೩೩ ॥

---

೩೦. ಹೀಗಾದರೂ ಪರಮೇಶ್ವರನು ಕ್ರಿಯಾಶ್ರಯನಾದ ಕರ್ತೃವಾಗುವುದಿಲ್ಲ. ಗಂಧವು ಸಮೀಪದಲ್ಲಿದ್ದ ಮಾತ್ರಕ್ಕೆ ಮನಸ್ಸಿಗೆ ಚಾಂಚಲ್ಯವನ್ನುಂಟುಮಾಡುವಂತೆ ಪರಮೇಶ್ವರನ ಸಾನ್ನಿಧ್ಯ ಮಾತ್ರದಿಂದ ಪ್ರಕೃತಿ ಪುರುಷರಲ್ಲಿ ಚಲನೆಯುಂಟಾಗುವುದು.

೩೧. ಮೈತ್ರೇಯನೇ, ಪ್ರಕೃತಿ ಪುರುಷರೂ ಆ ಪುರುಷೋತ್ತಮನಾದ ವಿಷ್ಣುವಿನ ಅಂಶವೇ ಆದುದರಿಂದ ಸಂಕೋಚವೆಂಬ ಗುಣಸಾಮ್ಯಾವಸ್ಥೆಯಿಂದಲೂ ವಿಕಾಸವೆಂಬ ಗುಣಗಳ ವಿಷಮಾವಸ್ಥೆಯಿಂದಲೂ ಆ ವಿಷ್ಣುವು ತಾನೇ ಪ್ರಕೃತಿ ಸ್ವರೂಪನಾಗಿಯೂ ಇರುವನು.

೩೨. ಸರ್ವೇಶ್ವರನಾದ ವಿಷ್ಣುವೇ ಮಹತ್ತತ್ವ ಮಹಾಭೂತಾದಿಗಳ ರೂಪದಿಂದಲೂ ಬ್ರಹ್ಮ, ವಿಷ್ಣು, ರುದ್ರಾದಿ ಜೀವಭೇದದಿಂದಲೂ ಸಮಷ್ಟಿ ವ್ಯಷ್ಟಿರೂಪವಾದ ದೇಹಗಳ ರೂಪದಿಂದಲೂ ಇರುವನು.

೩೩. ಮೈತ್ರೇಯ ಮುನಿಯೇ ಸೃಷ್ಟಿಕಾಲದಲ್ಲಿ ಚಲನೆಯುಂಟಾದ ಮೇಲೆ ಕ್ಷೇತ್ರಜ್ಞನಾದ ಪುರುಷನಿಂದ ಕೂಡಿದ ಗುಣಗಳ ಸಾಮ್ಯಾವಸ್ಥೆಯ ಮಹತ್ತತ್ವವು ಹುಟ್ಟುವುದು.

ಪ್ರಧಾನತತ್ತ್ವಮುದ್ಭೂತಂ ಮಹಾಂತಂ ತತ್ಸಮಾವೃಣೋತ್ ।
ಸಾತ್ತ್ವಿಕೋ ರಾಜಸಶ್ಚೈವ ತಾಮಸಶ್ಚ ತ್ರಿಧಾ ಮಹಾನ್ ॥ ೩೪ ॥

ಪ್ರಧಾನತತ್ತ್ವೇನ ಸಮಂ ತ್ವಚಾ ಬೀಜಮಿವಾವೃತಂ ।
ವೈಕಾರಿಕಸ್ತೈಜಸಶ್ಚ ಭೂತಾದಿಶ್ಚೈವ ತಾಮಸಃ ॥ ೩೫ ॥

ತ್ರಿವಿಧೋಽಯಮಹಂಕಾರೋ ಮಹತ್ತತ್ತ್ವಾದಜಾಯತ ।
ಭೂತೇಂದ್ರಿಯಾಣಾಂ ಹೇತುಸ್ಸ ತ್ರಿಗುಣತ್ವಾನ್ಮಹಾಮುನೇ ।
ಯಥಾ ಪ್ರಧಾನೇನ ಮಹಾನ್ ಮಹತಾ ಸ ತಥಾವೃತಃ ॥ ೩೬ ॥

ಭೂತಾದಿಸ್ತು ವಿಕುರ್ವಾಣಶ್ಶಬ್ದತನ್ಮಾತ್ರಕಂ ತತಃ ।
ಸಸರ್ಜ ಶಬ್ದತನ್ಮಾತ್ರಾದಾಕಾಶಂ ಶಬ್ದಲಕ್ಷಣಂ ॥ ೩೭ ॥

---

೩೪. ಪ್ರಕೃತಿ ತತ್ತ್ವವು (ಕಾರಣವು) ಹುಟ್ಟಿದ ಮಹತ್ತತ್ತ್ವವನ್ನು (ಕಾರ್ಯವನ್ನು) ವ್ಯಾಪಿಸಿರುವುದು. ಹೇಗೆಂದರೆ, ಮಣ್ಣು ಮುದ್ದೆಯಾಗುವುದೇ ಮುಂತಾದ ಸಣ್ಣ ಕಾರ್ಯದಿಂದ ಘಟಾದಿಗಳಿಗೆ ಉಪಾದಾನಕಾರಣವಾಗಿರುವುದು. ಮುದ್ದೆಯು ನಿಮಿತ್ತಕಾರಣ ಮಾತ್ರವಾದುದು. ಹಾಗೆಯೇ ಈಶ್ವರನೊಡನೆ ಕೂಡಿದ ಪ್ರಕೃತಿಯೇ ಮಹತ್ತತ್ತ್ವಾದಿ ಕಾರ್ಯಗಳಲ್ಲಿ ವ್ಯಾಪಿಸಿ ಕೊನೆಯ ಕಾರ್ಯಪರ್ಯಂತವಾಗಿ ಉಪದಾನ ಕಾರಣವಾಗುವುದು. ಮಹತ್ತತ್ತ್ವವು ಸಾತ್ವಿಕ, ರಾಜಸ, ತಾಮಸವೆಂದು ಮೂರು ಭೇದವಾಗಿರುವುದು.

೩೫–೩೬. ಹೊಟ್ಟು ಬೀಜವನ್ನು ಆವರಿಸಿರುವಂತೆ ಮಹತ್ತತ್ತ್ವವನ್ನು ಪ್ರಕೃತಿಯು ಆವರಿಸಿರುವುದು. ಮಹತ್ತತ್ತ್ವದಿಂದ ವೈಕಾರಿಕ, ತೈಜಸ, ಭೂತಾದಿ ಎಂಬ ಸಾತ್ವಿಕ, ರಾಜಸ, ತಾಮಸಾಹಂಕಾರಗಳು ಹುಟ್ಟಿದುವು. ತ್ರಿಗುಣದಿಂದ ಕೂಡಿದ ಈ ಅಹಂಕಾರ ತತ್ತ್ವವು ಪಂಚಭೂತಗಳ ಮತ್ತು ಇಂದ್ರಿಯಗಳ ಉತ್ಪತ್ತಿಗೆ ಕಾರಣವಾಗಿರುವುದು. ಪ್ರಕೃತಿಯು ಮಹತ್ತತ್ತ್ವವನ್ನಾವರಿಸಿದಂತೆ ಮಹತ್ತತ್ತ್ವವು ಅಹಂಕಾರತತ್ತ್ವವನ್ನಾವರಿಸಿರುವುದು.

೩೭–೩೮. ಭೂತಾದಿಯಾದ ತಾಮಸಾಹಂಕಾರವು ವಿಕಾರವಾಗಿ ಶಬ್ದತನ್ಮಾತ್ರವನ್ನು ಹುಟ್ಟಿಸಿತು. ಶಬ್ದತನ್ಮಾತ್ರದಿಂದ ಆಕಾಶವು ಹುಟ್ಟಿತು. ಆಕಾಶವನ್ನು

ಶಬ್ದಮಾತ್ರಂ ತಥಾಕಾಶಂ ಭೂತಾದಿಸ್ಸ ಸಮಾವೃಣೋತ್ ।
ಆಕಾಶಸ್ತು ವಿಕುರ್ವಾಣಃ ಸ್ಪರ್ಶಮಾತ್ರಂ ಸಸರ್ಜ ಹ ॥ ೩೮ ॥

ಬಲವಾನಭವದ್ವಾಯುಸ್ತಸ್ಯ ಸ್ಪರ್ಶೋ ಗುಣೋ ಮತಃ ।
ಆಕಾಶಂ ಶಬ್ದಮಾತ್ರಂ ತು ಸ್ಪರ್ಶಮಾತ್ರಂ ಸಮಾವೃಣೋತ್ ॥ ೩೯ ॥

ತತೋ ವಾಯುರ್ವಿಕುರ್ವಾಣೋ ರೂಪಮಾತ್ರಂ ಸಸರ್ಜ ಹ ।
ಜ್ಯೋತಿರುತ್ಪದ್ಯತೇ ವಾಯೋಸ್ತದ್ರೂಪಗುಣಮುಚ್ಯತೇ ॥ ೪೦ ॥

ಸ್ಪರ್ಶಮಾತ್ರಸ್ತು ವೈ ವಾಯುರೂಪಮಾತ್ರಂ ಸಮಾವೃಣೋತ್ ।
ಜ್ಯೋತಿಶ್ಚಾಪಿ ವಿಕುರ್ವಾಣಂ ರಸಮಾತ್ರಂ ಸಸರ್ಜ ಹ ॥ ೪೧ ॥

ಸಂಭವಂತಿ ತತೋಂಭಾಂಸಿ ರಸಾಧಾರಾಣಿ ತಾನಿ ತು ।
ರಸಮಾತ್ರಾಣಿ ಚಾಂಭಾಂಸಿ ರೂಪಮಾತ್ರಂ ಸಮಾವೃಣೋತ್ ॥ ೪೨ ॥

ವಿಕುರ್ವಾಣಾನಿ ಚಾಂಭಾಂಸಿ ಗಂಧಮಾತ್ರಂ ಸಸರ್ಜಿರೆ ।
ಸಂಘಾತೋ ಜಾಯತೇ ತಸ್ಮಾತ್ತಸ್ಯ ಗಂಧೋ ಗುಣೋ ಮತಃ ॥ ೪೩ ॥

ಭೂತಾದಿಯಾದ ತಾಮಸಾಹಂಕಾರವು ವ್ಯಾಪಿಸಿತು. ಆಕಾವು ವಿಕಾರಹೊಂದಿ ಸ್ಪರ್ಶತನ್ಮಾತ್ರವನ್ನು ಹುಟ್ಟಿಸಿತು. ಆಮೇಲೆ ಸ್ಪರ್ಶಗುಣವುಳ್ಳ ವಾಯುತತ್ವವೂ ಹುಟ್ಟಿತು. ಆಕಾಶವು ವಾಯುತತ್ವವನ್ನು ಆವರಿಸಿತು.

೪೦–೪೩ ಆಮೇಲೆ ವಾಯುತತ್ವವು ವಿಕಾರಹೊಂದಿ ರೂಪತನ್ಮಾತ್ರವನ್ನು ಹುಟ್ಟಿಸಿತು. ಅದರಿಂದ ರೂಪಗುಣವುಳ್ಳ ಅಗ್ನಿಯು ಹುಟ್ಟಿತು. ವಾಯುವು ಅಗ್ನಿಯನ್ನು ಆವರಿಸಿತು. ಅಗ್ನಿತತ್ವವು ವಿಕಾರವಾಗಿ ರಸತನ್ಮಾತ್ರವನ್ನು ಹುಟ್ಟಿಸಿತು ಅದರಿಂದ ನೀರು ಹುಟ್ಟಿತು. ಅಗ್ನಿಯು ನೀರನ್ನು ಆವರಿಸಿತು. ನೀರು ವಿಕಾರವಾಗಿ ಗಂಧತನ್ಮಾತ್ರವನ್ನು ಹುಟ್ಟಿಸಿತು. ಅದರಿಂದ ಭೂಮಿತತ್ವವು ಹುಟ್ಟಿತು.

ತಸ್ಮಿಂಸ್ತಸ್ಮಿಂಶ್ಚ ತನ್ಮಾತ್ರಂ ತೇನ ತನ್ಮಾತ್ರತಾ ಸ್ಮೃತಾ ॥ ೪೪ ॥

ತನ್ಮಾತ್ರಾಣ್ಯವಿಶೇಷಾಣಿ ಅವಿಶೇಷಾಸ್ತತೋ ಹಿತೇ ॥ ೪೫ ॥

ನ ಶಾಂತಾ ನಾಪಿ ಘೋರಾಸ್ತೇನ ಮೂಢಾಶ್ಚಾವಿಶೇಷಿಣಃ ।
ಭೂತತನ್ಮಾತ್ರಸರ್ಗೋಽಯಮಹಂಕಾರಾತ್ತು ತಾಮಸಾತ್ ॥ ೪೬ ॥

ತೈಜಸಾನೀಂದ್ರಿಯಾಣ್ಯಾಹುರ್ದೇವಾ ವೈಕಾರಿಕಾ ದಶ ।
ಏಕಾದಶಂ ಮನಶ್ಚಾತ್ರ ದೇವಾವೈಕಾರಿಕಾಸ್ಸ್ಮೃತಾಃ ॥ ೪೭ ॥

೪೪-೪೬. ಆಕಾಶಾದಿಗಳಲ್ಲಿ ಶಬ್ದಾದಿಗಳು ಸೂಕ್ಷ್ಮರೂಪಗಳಾದ್ದುದರಿಂದ ಆ ಗುಣಗಳಿಗೆ ತನ್ಮಾತ್ರಗಳೆಂದು ಹೆಸರು ಬಂದಿರುವುದು. ಈ ಶಬ್ದಾದಿ ತನ್ಮಾತ್ರಗಳಿಗೆ ಸಾಂಖ್ಯರು ಅವಿಶೇಷವೆಂದು ಹೇಳುವರು. ಅವಿಶೇಷವೆಂದರೆ, ಶಾಂತ, ಘೋರ, ಮೂಢ ಎಂಬ ಸತ್ವರಜಸ್ತಮೋಗುಣಗಳಿಂದುಂಟಾದ ವಿಶೇಷವಿಲ್ಲದುದೆಂದು ಅರ್ಥವು. ಒಟ್ಟಿನಲ್ಲಿ ತಾಮಸಾಹಂಕಾರದಿಂದ ಈ ಪಂಚತನ್ಮಾತ್ರಗಳೂ ಪಂಚಭೂತಗಳೂ ಹುಟ್ಟಿದುವು.

೪೭. ತೈಜಸವೆಂಬ ರಾಜಸಾಹಂಕಾರದಿಂದ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೆಂಬ ಹತ್ತು ಇಂದ್ರಿಯಗಳು ಹುಟ್ಟಿದುವು. ದಿಕ್ಕು, ವಾಯು, ಸೂರ್ಯ, ವರುಣ, ಅಶ್ವಿನೀದೇವತೆಗಳು, ಅಗ್ನಿ, ಇಂದ್ರ, ಉಪೇಂದ್ರ, ಮೃತ್ಯು, ಬ್ರಹ್ಮ. ಇವರೇ ಇಂದ್ರಿಯಾಧಿಷ್ಠಾನ ದೇವತೆಗಳು. ಹನ್ನೊಂದನೆಯ ಇಂದ್ರಿಯವಾದ ಮನಸ್ಸೂ ಸಾತ್ವಿಕಾಹಂಕಾರದಿಂದ ಹುಟ್ಟಿದುದು. ಇಲ್ಲಿ ಚಿತ್ತ, ಅಹಂಕಾರ ಮನಸ್ಸು, ಬುದ್ಧಿಯೆಂಬ ನಾಲ್ಕು ವೃತ್ತಿಗಳೂ ಈ ಅಂತಃಕರಣ ವೃತ್ತಿಗೆ ಅಧಿಷ್ಠಾನವಾದ ಕ್ಷೇತ್ರಜ್ಞ, ರುದ್ರ, ಚಂದ್ರ, ಬ್ರಹ್ಮರೆಂಬ ದೇವತೆಗಳೂ ವೈಕಾರಿಕರು ಎಂದರೆ ಸಾತ್ವಿಕಾಹಂಕಾರದಿಂದ ಹುಟ್ಟಿದವರೆಂದು ಅಭಿಪ್ರಾಯವು.

ತ್ವಕ್ಚಕ್ಷುರ್ನಾಸಿಕಾಜಿಹ್ವಾಶ್ರೋತ್ರಮತ್ರ ಚ ಪಂಚಮಂ ।
ಶಬ್ದಾದೀನಾಮವಾಪ್ತ್ಯರ್ಥಂ ಬುದ್ಧಿಯುಕ್ತಾನಿ ವೈ ದ್ವಿಜ ॥ ೪೮ ॥

ಪಾಯೂಪಸ್ಥೌ ಕರೌ ಪಾದೌ ವಾಕ್ಚ ಮೈತ್ರೇಯ ಪಂಚಮೀ ।
ವಿಸರ್ಗಶಿಲ್ಪಗತ್ಯುಕ್ತಿಕರ್ಮ ತೇಷಾಂ ಚ ಕಥ್ಯತೇ ॥ ೪೯ ॥

ಆಕಾಶವಾಯುತೇಜಾಂಸಿ ಸಲಿಲಂ ಪೃಥಿವೀ ತಥಾ ।
ಶಬ್ದಾದಿಭಿರ್ಗುಣೈರ್ಬ್ರಹ್ಮ ಸಂಯುಕ್ತಾನ್ಯುತ್ತರೋತ್ತರೈಃ ॥ ೫೦ ॥

ಶಾಂತಾ ಘೋರಾಶ್ಚ ಮೂಢಾಶ್ಚ ವಿಶೇಷಾಸ್ತೇನ ತೇ ಸ್ಮೃತಾಃ ॥ ೫೧ ॥

೪೮-೪೯. ಚರ್ಮ, ಕಣ್ಣು, ಮೂಗು, ನಾಲಿಗೆ, ಕಿವಿ ಇವು ಶಬ್ದಸ್ಪರ್ಶ ರೂಪ. ರಸ ಗಂಧಗಳನ್ನು ಗ್ರಹಿಸುವ ಜ್ಞಾನೇಂದ್ರಿಯಗಳು, ವಾಕ್ಕು. ಪಾದ, ಪಾಣಿ, ಪಾಯು, ಉಪಸ್ಥಗಳು, ಮಾತು, ನಡಿಗೆ, ಕೆಲಸ ವಿಸರ್ಜನೆಗಳನ್ನು ಮಾಡುವ ಕರ್ಮೇಂದ್ರಿಯಗಳು.

೫೦-೫೧. ಕ್ರಮವಾಗಿ ಆಕಾಶಾದಿ ಪಂಚಭೂತಗಳಲ್ಲಿ ತನ್ನ ಗುಣಗಳ ಜತೆಗೆ ತನಗೆ ಕಾರಣವಾದ ಹಿಂದಿನ ಭೂತದ ಗುಣಗಳೂ ಸೇರಿರುವುವು. ಹೇಗೆಂದರೆ ಆಕಾಶಕ್ಕೆ ಕಾರಣಗುಣವಿಲ್ಲದುದರಿಂದ ಶಬ್ದಗುಣ ಒಂದೇ ಇರುವುದು. ವಾಯುವಿಗೆ ಶಬ್ದ ಸ್ಪರ್ಶ ಗುಣಗಳು ತೇಜಸ್ಸಿಗೆ ಶಬ್ದ ಸ್ಪರ್ಶ ರೂಪಗಳೆಂಬ ಮೂರು ಗುಣಗಳು ನೀರಿಗೆ ಶಬ್ದ ಸ್ಪರ್ಶ ರೂಪ, ರಸವೆಂಬ ನಾಲ್ಕು ಗುಣಗಳು ಭೂಮಿಗೆ ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಐದು ಗುಣಗಳೂ ಇರುವುವು. ಆದುದರಿಂದ ಈ ಗುಣವಿಶೇಷಗಳು ಶಾಂತ, ಘೋರ, ಮೂಢ, ಎಂದರೆ ಸುಖ, ದುಃಖ, ಮೋಹಗಳನ್ನುಂಟುಮಾಡತಕ್ಕವುಗಳಾಗಿರುವುವು. ಭೂಮಿ, ನೀರು, ಎರಡೂ ಶಾಂತಗುಣವುಳ್ಳವು. ಅಗ್ನಿ ವಾಯುಗಳು ಘೋರ ಗುಣವುಳ್ಳವುಗಳು. ಆಕಾಶವು ಮೂಢಗುಣವುಳ್ಳದು. ಇವೇ ಪಂಚಭೂತಗಳ ಗುಣವಿಶೇಷಗಳು. ಇದರಿಂದ ಪಂಚಭೂತಗಳಿಗೆ ವಿಶೇಷಗಳೆಂದು ಮತ್ತೊಂದು ಹೆಸರು ಇರುವುದು.

ನಾನಾವೀರ್ಯಾಃ ಪೃಥಗ್ಭೂತಾಸ್ತತಸ್ತೇ ಸಂಹತಿಂ ವಿನಾ ।
ನಾಶಕ್ನುವನ್ ಪ್ರಜಾಸ್ಸ್ರಷ್ಟುಮಸಮಾಗಮ್ಯ ಕೃತ್ಸ್ನಶಃ ॥ ೨೨ ॥

ಸಮೇತ್ಯಾನ್ಯೋನ್ಯಸಂಯೋಗಂ ಪರಸ್ಪರ ಸಮಾಶ್ರಯಾಃ ।
ಏಕಸಂಘಾತಲಕ್ಷ್ಯಾಶ್ಚ ಸಂಪ್ರಾಪ್ಯೈಕ್ಯಮಶೇಷತಃ ॥ ೨೩ ॥

ಪುರುಷಾಧಿಷ್ಠಿತತ್ವಾಚ್ಚಾಪ್ಯವ್ಯಕ್ತಾನುಗ್ರಹೇಣ ಚ ।
ಮಹದಾದಯೋ ವಿಶೇಷಾಂತಾಹ್ಯಂಡಮುತ್ಪಾದಯಂತಿ ತೇ ॥ ೨೪ ॥

ತತ್ಕ್ರಮೇಣ ವಿವೃದ್ಧಂ ಸಜ್ಜಲಬುದ್ಬುದವತ್ಸಮಂ ।
ಭೂತೇಭ್ಯೋಽಂಡಂ ಮಹಾಬುದ್ಧೇ ಬೃಹತ್ತದುಕೇಶಯಂ ।
ಪ್ರಾಕೃತಂ ಬ್ರಹ್ಮರೂಪಸ್ಯ ವಿಷ್ಣೋಸ್ಸ್ಥಾನಮನುತ್ತಮಂ ॥ ೨೫ ॥

---

೨೨. ಬೇರೆ ಬೇರೆ ಶಕ್ತಿಯುಳ್ಳ ಈ ಪಂಚಭೂತಗಳು ಕೂಡದೇ ಬೇರೆ ಬೇರೆಯಾಗಿದ್ದು ಜೀವರಿಗೆ ಸುಖ ದುಃಖಾನುಭವಕ್ಕೆ ಕಾರಣವಾದ ಶರೀರವನ್ನು ಸೃಷ್ಟಿ ಮಾಡಲು ಶಕ್ತವಾಗಲಿಲ್ಲ.

೨೩-೨೪. ಆದುದರಿಂದ ಈ ಪಂಚಭೂತಗಳು ಒಟ್ಟಿಗೆ ಸೇರಿ ಒಂದು ಶರೀರವನ್ನು ಸೃಷ್ಟಿಸಬೇಕೆಂದು ಪುರುಷನ (ಈಶ್ವರನ) ಆಶ್ರಯದಿಂದಲೂ ಪ್ರಕೃತಿಯ ಅನುಗ್ರಹದಿಂದಲೂ ಮಹತ್ತತ್ವವೇ ಮೊದಲಾಗಿ ಪಂಚಭೂತಗಳೆಂಬ ವಿಶೇಷ ಪರ್ಯಂತವಾಗಿ ಕೂಡಿ ಬ್ರಹ್ಮಾಂಡವನ್ನು ಉತ್ಪತ್ತಿಮಾಡಿದುವು.

೨೫. ನೀರಿನಗುಳ್ಳೆಗೆ ಸಮಾನವಾದ ಪಂಚಭೂತಗಳಿಂದ ಹುಟ್ಟಿದ ಬ್ರಹ್ಮಾಂಡವು ಕ್ರಮವಾಗಿ ಬೆಳೆದು ದೊಡ್ಡದಾಗಿ ನೀರಿನಲ್ಲಿದ್ದು ಪ್ರಕೃತಿ ಕಾರ್ಯರೂಪವಾದ ಹಿರಣ್ಯಗರ್ಭನೆಂಬ ವಿಷ್ಣುವಿಗೆ ಶ್ರೇಷ್ಠಸ್ಥಾನವಾಯಿತು.

ತತ್ರಾವ್ಯಕ್ತಸ್ವರೂಪೋಽಸೌ ವ್ಯಕ್ತರೂಪೋ ಜಗತ್ಪತಿಃ ।
ವಿಷ್ಣುರ್ಬ್ರಹ್ಮಸ್ವರೂಪೇಣ ಸ್ವಯಮೇವ ವ್ಯವಸ್ಥಿತಃ ॥ ೫೬ ॥

ಮೇರುರುಲ್ಬಮಭೂತ್ತಸ್ಯ ಜರಾಯುಶ್ಚ ಮಹೀಧರಾಃ ।
ಗರ್ಭೋದಕಂ ಸಮುದ್ರಾಶ್ಚ ತಸ್ಯಾಸನ್ ಸುಮಹಾತ್ಮನಃ ॥ ೫೭ ॥

ಸಾದ್ರಿದ್ವೀಪಸಮುದ್ರಾಶ್ಚ ಸಜ್ಯೋತಿರ್ಲೋಕಸಂಗ್ರಹಃ ।
ತಸ್ಮಿನ್ನಂಡೇ ಭವೇದ್ವಿಪ್ರ ಸದೇವಾಸುರಮಾನುಷಃ ॥ ೫೮ ॥

ವಾರಿವಹ್ನ್ಯನಿಲಾಕಾಶೈಸ್ತತೋ ಭೂತಾದಿನಾ ಬಹಿಃ ।
ವೃತಂ ದಶಗುಣೈರಂಡಂ ಭೂತಾದಿರ್ಮಹತಾ ತಥಾ ॥ ೫೯ ॥

---

೫೬. ಆ ಬ್ರಹ್ಮಾಂಡದಲ್ಲಿ ಪ್ರಕೃತಿಗಿಂತ ಶ್ರೇಷ್ಠನೂ, ಅವ್ಯಕ್ತ ಸ್ವರೂಪನೂ ಆದ ವಿಷ್ಣುವು ಮಾಯೆಯಿಂದ ವ್ಯಕ್ತಸ್ವರೂಪನಾಗಿ ತಾನೇ ಬ್ರಹ್ಮರೂಪದಿಂದ ಇದ್ದನು.

೫೭. ಆ ಹಿರಣ್ಯಗರ್ಭನಿಗೆ ಮೇರುಪರ್ವತವೇ ಉಲ್ಬವೆಂಬ ಗರ್ಭವನ್ನು ಸುತ್ತಿಕೊಂಡ ಮಾಂಸವಾಯಿತು. ಪರ್ವತಗಳು ಜರಾಯುವೆಂಬ ಗರ್ಭಕೋಶವಾಯಿತು. ಸಮುದ್ರಗಳೇ ಗರ್ಭೋದಕಗಳಾದುವು.

೫೮. ಆ ಅಂಡದಲ್ಲಿ ಸೂರ್ಯಾದಿ ಜ್ಯೋತಿರ್ಲೋಕಗಳೂ, ಪರ್ವತಗಳೂ, ದ್ವೀಪಗಳೂ, ಸಮುದ್ರಗಳೂ ಇದ್ದುವು. ದೇವತೆಗಳೂ, ಅಸುರರೂ, ಮನುಷ್ಯರೂ ಇದ್ದರು.

೫೯–೬೦. ಬ್ರಹ್ಮಾಂಡವು ಕ್ರಮವಾಗಿ ನೀರು, ಬೆಂಕಿ, ಗಾಳಿ, ಆಕಾಶ, ಅಹಂಕಾರ, ಮಹತ್ತತ್ವ, ಪ್ರಕೃತಿ ಎಂಬ ಉತ್ತರೋತ್ತರವಾಗಿ ಹತ್ತರಷ್ಟು ಪ್ರಮಾಣದ ಏಳು ಆವರಣಗಳಿಂದ ತೆಂಗಿನಕಾಯಿನ ಒಳಗಿರುವ ಬೀಜವು ಹೊರಗಿನ ದಳಗಳಿಂದ ಆವರಿಸಿದಂತೆ ಆವರಿಸಿದ್ದಿತು. ಅಂದರೆ ಕೋಟಿಯೋಜನ ಪ್ರಮಾಣವಾದ

ಅವ್ಯಕ್ತೇನಾವೃತೋ ಬ್ರಹ್ಮನ್ ತೈಸ್ಸರ್ವೈಃ ಸಹಿತೋ ಮಹಾನ್ ।
ಏಭಿರಾವರಣೈರಂಡಂ ಸಪ್ತಭಿಃ ಪ್ರಾಕೃತೈರ್ವೃತಂ ।
ನಾರಿಕೇಳಫಲಸ್ಯಾಂತರ್ಬೀಜಂ ಬಾಹ್ಯದಳೈರಿವ ॥ ೬೦ ॥

ಜುಷನ್ ರಜೋಗುಣಂ ತತ್ರ ಸ್ವಯಂ ವಿಶ್ವೇಶ್ವರೋ ಹರಿಃ ।
ಬ್ರಹ್ಮಾಭೂತ್ವಾಸ್ಯ ಜಗತೋ ವಿಸೃಷ್ಟೌ ಸಂಪ್ರವರ್ತತೇ ॥ ೬೧ ॥

ಸೃಷ್ಟಂ ಚ ಪಾತ್ಯನುಯುಗಂ ಯಾವತ್ಕಲ್ಪವಿಕಲ್ಪನಾ ।
ಸತ್ತ್ವಭೃದ್ಭಗವಾನ್ ವಿಷ್ಣುರಪ್ರಮೇಯಪರಾಕ್ರಮಃ ॥ ೬೨ ॥

ತಮೋದ್ರೇಕೀ ಚ ಕಲ್ಪಾಂತೇ ರುದ್ರರೂಪೀ ಜನಾರ್ದನಃ ।
ಮೈತ್ರೇಯಾಖಿಲಭೂತಾನಿ ಭಕ್ಷಯತ್ಯತಿಭೀಷಣಃ ॥ ೬೩ ॥

ಸಂಭಕ್ಷ್ಯ ಸರ್ವಭೂತಾನಿ ಜಗತ್ಯೇಕಾರ್ಣವೀಕೃತೇ ।
ನಾಗಪರ್ಯಂಕಶಯನೇ ಶೇತೇಽಸೌ ಪರಮೇಶ್ವರಃ ॥ ೬೪ ॥

ಅಂಡಕಟಾಹಾವರಣವೇ ಭೂಮಿಯ ಆವರಣವು. ಅದರ ಹತ್ತರಷ್ಟು ನೀರಿನ ಆವರಣವು. ಅದರ ಹತ್ತರಷ್ಟು ಅಗ್ನಿಯ ಆವರಣವು. ಹೀಗೆಯೇ ಭೂಮ್ಯಾದಿಯಾಗಿ ಏಳು ಆವರಣಗಳು, ಎಂಟನೆಯದಾದ ಪ್ರಕೃತಿಯ ಆವರಣವು ಅಪರಿಮಿತವಾದುದು.

೬೧. ಸಮಸ್ತ ಪ್ರಪಂಚಾಧಿಪತಿಯಾದ ವಿಷ್ಣುವು ರಜೋಗುಣವನ್ನಾಶ್ರಯಿಸಿ ಬ್ರಹ್ಮನಾಗಿ ಆ ಬ್ರಹ್ಮಾಂಡದಲ್ಲಿ ಈ ಜಗತ್ತಿನ ಸೃಷ್ಟಿಕಾರ್ಯವನ್ನು ಮಾಡುತ್ತಿರುವನು.

೬೨-೬೩. ಅಳತೆಯಿಲ್ಲದ ಪರಾಕ್ರಮವುಳ್ಳ ಮಹಾಮಹಿಮನಾದ ವಿಷ್ಣುವು ಸತ್ತ್ವಗುಣವನ್ನಾಶ್ರಯಿಸಿ ಸೃಷ್ಟಿಮಾಡಿದ ಜಗತ್ತನ್ನು ಪ್ರಳಯಪರ್ಯಂತವಾಗಿ ಪ್ರತಿ ಯುಗದಲ್ಲಿಯೂ ಕಾಪಾಡುತ್ತಿರುವನು. ಪ್ರಳಯಕಾಲದಲ್ಲಿ ತಮೋಗುಣ ಪ್ರಧಾನನಾಗಿ ಭಯಂಕರವಾದ ರುದ್ರರೂಪನಾಗಿ ಸಮಸ್ತ ಭೂತಗಳನ್ನೂ ನುಂಗಿಬಿಡುವನು.

೬೪. ಪ್ರಳಯದಲ್ಲಿ ಸಮಸ್ತ ಭೂತಗಳನ್ನೂ ನುಂಗಿದಮೇಲೆ ಜಗತ್ತೆಲ್ಲವೂ ಒಂದೇ ಸಮುದ್ರವಾಗಿರಲು ಪರಮೇಶ್ವರನಾದ ವಿಷ್ಣುವು ಆದಿಶೇಷನ ಹಾಸಿಗೆಯ ಮೇಲೆ ಮಲಗಿರುವನು.

ಪ್ರಬುದ್ಧಶ್ಚ ಪುನಸ್ಸೃಷ್ಟಿಂ ಕರೋತಿ ಬ್ರಹ್ಮರೂಪಧೃತ್ ॥ ೬೫ ॥

ಸೃಷ್ಟಿಸ್ಥಿತ್ಯಂತಕರಣೀಂ ಬ್ರಹ್ಮವಿಷ್ಣು ಶಿವಾತ್ಮಿಕಾಂ ।
ಸಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ ॥ ೬೬ ॥

ಸ್ರಷ್ಟಾ ಸೃಜತಿ ಚಾತ್ಮಾನಂ ವಿಷ್ಣುಃ ಪಾಲ್ಯಂ ಚ ಪಾತಿ ಚ ।
ಉಪಸಂಹ್ರಿಯತೇ ಚಾಂತೇ ಸಂಹರ್ತಾ ಚ ಸ್ವಯಂ ಪ್ರಭುಃ ॥ ೬೭ ॥

ಪೃಥಿವ್ಯಾಪಸ್ತಥಾ ತೇಜೋ ವಾಯುರಾಕಾಶ ಏವ ಚ ।
ಸರ್ವೇಂದ್ರಿಯಾಂತಃಕರಣಂ ಪುರುಷಾಖ್ಯಂ ಹಿ ಯಜ್ಜಗತ್ ॥ ೬೮ ॥

ಸ ಏವ ಸರ್ವಭೂತಾತ್ಮಾ ವಿಶ್ವರೂಪೋ ಯತೋಽವ್ಯಯಃ ।
ಸರ್ಗಾದಿಕಂ ತತೋಽಸ್ಯೈವ ಭೂತಸ್ಥಮುಪಕಾರಕಂ ॥ ೬೯ ॥

೬೫–೬೬. ಪುನಃ ಎಚ್ಚರವಾಗಿ ಬ್ರಹ್ಮರೂಪದಿಂದ ಸೃಷ್ಟಿಯನ್ನು ಮಾಡುವನು. ಮಹಾಮಹಿಮನಾದ ಜನಾರ್ದನನೊಬ್ಬನೇ ಸೃಷ್ಟಿ, ಸ್ಥಿತಿ, ಸಂಹಾರಕಾರ್ಯಕ್ಕಾಗಿ ಬ್ರಹ್ಮ, ವಿಷ್ಣು, ಶಿವರೆಂಬ ಹೆಸರನ್ನು ಪಡೆದಿರುವನು.

೬೭. ಸ್ವತಂತ್ರನಾದ ವಿಷ್ಣುವು ತಾನೇ ಪ್ರಪಂಚರೂಪನಾಗಿ ಸೃಷ್ಟಿಯನ್ನು ಮಾಡುವನು. ಸ್ವಸ್ವರೂಪವಾದ ಪ್ರಪಂಚವನ್ನು ತಾನೇ ಪಾಲಿಸುವನು. ಪ್ರಳಯಕಾಲದಲ್ಲಿ ಸ್ವಸ್ವರೂಪದಲ್ಲಿ ತಾನೇ ಲೀನನಾಗುವನು. ಇದರಿಂದ ಸೃಷ್ಟ್ಯಾದಿಗಳಿಗೆ ವಿಷಯವಾದ ಪ್ರಪಂಚವು ತಾತ್ವಿಕವಾದುದಲ್ಲವೆಂದಭಿಪ್ರಾಯವು.

೬೮. ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಎಂಬ ಪಂಚಭೂತಗಳೂ ದಶೇಂದ್ರಿಯಗಳೂ ಮನಸ್ಸೂ ಕೂಡಿದ ಈ ಜಗತ್ತು ಪುರುಷಸ್ವರೂಪವಾದುದಾಗಿರುವುದು.

೬೯. ಆ ವಿಷ್ಣುವೇ ಪ್ರಪಂಚರೂಪನಾಗಿ ಸಮಸ್ತ ಜೀವರುಗಳನ್ನೂ ಕಾರ್ಯದಲ್ಲಿ ತೊಡಗಿಸಿರುವನು. ಋತ್ವಿಕ್ಕುಗಳು ಮಾಡುವ ಕೆಲಸಗಳು ಯಜಮಾನನಿಗೆ ಉಪಕಾರಕವಾಗಿರುವಂತೆ ಜೀವರುಗಳಲ್ಲಿರುವ ಸೃಷ್ಟ್ಯಾದಿ ಶಕ್ತಿಗಳು ಅವನ ಸೃಷ್ಟಿಗಳು ಕಾರ್ಯಕ್ಕೇ ಉಪಕಾರಕಗಳಾಗಿರುವುವು ಎಂದರೆ ಪಿತೃ ಪುತ್ರಾದಿಗಳಲ್ಲಿರುವ ಸೃಷ್ಟಿಶಕ್ತಿಗಳು ಹರಿಯ ವಿಭೂತಿ ವಿಸ್ತಾರವೆಂದು ಭಾವವು.

ಸ ಏವ ಸೃಜ್ಯಸ್ಸಚ ಸರ್ಗಕರ್ತಾ
ಸ ಏವ ಪಾತ್ಯತ್ತಿ ಚ ಪಾಲ್ಯತೇ ಚ ।
ಬ್ರಹ್ಮಾದ್ಯವಸ್ಥಾಭಿರಶೇಷಮೂರ್ತಿ-
ರ್ವಿಷ್ಣುರ್ವರಿಷ್ಠೋ ವರದೋ ವರೇಣ್ಯಃ ॥ ೭೦ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ದ್ವಿತೀಯೋಽಧ್ಯಾಯಃ.

---

೭೦. ಅತ್ಯಂತ ಶ್ರೇಷ್ಠನಾದ ವಿಷ್ಣುವು ವರವನ್ನು ಕೊಡುವವನಾಗಿಯೂ ವರವನ್ನು ಯಾಚಿಸುವವನಾಗಿಯೂ ಬ್ರಹ್ಮಾದಿ ತ್ರಿಮೂರ್ತಿ ಸ್ವರೂಪನಾಗಿಯೂ ಜಗದ್ರೂಪನಾಗಿಯೂ ಕರ್ತೃ ಕಾರಣ ಕಾರ್ಯರೂಪನಾಗಿಯೂ ಸೃಷ್ಟಿ, ಸ್ಥಿತಿ ಸಂಹಾರಗಳನ್ನು ಮಾಡುವನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ ಎರಡನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ತೃತೀಯೋಽಧ್ಯಾಯಃ

॥ ಮೈತ್ರೇಯಃ ॥

ನಿರ್ಗುಣಸ್ಯಾಪ್ರಮೇಯಸ್ಯ ಶುದ್ಧಸ್ಯಾಪ್ಯಮಲಾತ್ಮನಃ ।
ಕಥಂ ಸರ್ಗಾದಿಕರ್ತೃತ್ವಂ ಬ್ರಹ್ಮಣೋಽಭ್ಯುಪಪದ್ಯತೇ ॥ ೧ ॥

॥ ಶ್ರೀ ಪರಾಶರಃ ॥

ಶಕ್ತಯಸ್ಸರ್ವಭಾವಾನಾಮಚಿಂತ್ಯಜ್ಞಾನಗೋಚರಾಃ ।
ಯತೋಽತೋ ಬ್ರಹ್ಮಣಸ್ತಾಸ್ತು ಸರ್ಗಾದ್ಯಾ ಭಾವಶಕ್ತಯಃ ।

ಮೂರನೆಯ ಅಧ್ಯಾಯ

೧. ಮೈತ್ರೇಯನು ಪ್ರಶ್ನೆ ಮಾಡುವನು:— ಓ ಗುರುಗಳೇ ಸತ್ವಾದಿ ಗುಣಗಳಿಲ್ಲದ, ದೇಶ ಕಾಲಾದಿಗಳ ಅಳತೆಗೆ ಸಿಕ್ಕದ ಯಾವ ವಿಕಾರವೂ ಇಲ್ಲದ, ಪುಣ್ಯ ಪಾಪಗಳ ಸಂಸ್ಕಾರವಿಲ್ಲದ ಪರಬ್ರಹ್ಮನಿಗೆ ಜಗತ್ತಿನ ಸೃಷ್ಟಿಯೇ ಮುಂತಾದುವುಗಳ ಕರ್ತೃತ್ವವು ಹೇಗೆ ಸಂಭವಿಸುವುದು ?

೨. ಪರಾಶರರು ಉತ್ತರವನ್ನು ಹೇಳುವರು:— ತಪಸ್ವಿಗಳಲ್ಲಿ ಶ್ರೇಷ್ಠನಾದ ಮೈತ್ರೇಯನೇ ನಿನ್ನ ತಪಸ್ಸಿನ ಶಕ್ತಿಯನ್ನು ನೀನು ತಿಳಿದಿರುವೆಯಲ್ಲವೇ ? ಅಗ್ನಿಗೆ ಸುಡುವ ಶಕ್ತಿಯು ಹೇಗೋ ಹಾಗೆ ಮಣಿಮಂತ್ರಾದಿ ಸಮಸ್ತ ವಸ್ತುಗಳಿಗೂ ತಿಳಿಯಲಸಾಧ್ಯವಾದ ಕಾರ್ಯದಿಂದ ಊಹಿಸಿ ನಿರ್ಧರಿಸಿರುವ ಅರ್ಥಾಪತ್ತಿಯೆಂಬ

ಭವಂತಿ ತಪತಾಂ ಶ್ರೇಷ್ಠ ಪಾವಕಸ್ಯ ಯಥೋಷ್ಣತಾ ॥ ೨ ॥

ತನ್ನಿಬೋಧ ಯಥಾ ಸರ್ಗೇ ಭಗವಾನ್ ಸಂಪ್ರವರ್ತತೇ ।
ನಾರಾಯಣಾಖ್ಯೋ ಭಗವಾನ್ಬ್ರಹ್ಮಾ ಲೋಕಪಿತಾಮಹಃ ॥ ೩ ॥

ಉತ್ಪನ್ನಃ ಪ್ರೋಚ್ಯತೇ ವಿದ್ವನ್ನಿತ್ಯ ಏವೋಪಚಾರತಃ ॥ ೪ ॥

ನಿಜೇನ ತಸ್ಯ ಮಾನೇನ ಆಯುರ್ವರ್ಷಶತಂ ಸ್ಮೃತಂ ।
ತತ್ಪರಾಖ್ಯಂ ತದರ್ಧಂ ಚ ಪರಾರ್ಧಮಭಿಧೀಯತೇ ॥ ೫ ॥

ಜ್ಞಾನಪ್ರಮಾಣವುಳ್ಳ ಶಕ್ತಿಗಳು ಇದ್ದೇ ಇರುವುವು. ಹಾಗೆಯೇ ಪರಬ್ರಹ್ಮನಿಗೂ ಸೃಷ್ಟಿ ಸ್ಥಿತಿ ಸಂಹಾರವೇ ಮುಂತಾದ ಸ್ವಾಭಾವಿಕವಾದ ಶಕ್ತಿಗಳು ಇರುವುವು. 'ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ ನತತ್ಸಮಶ್ಚಾಭ್ಯಧಿಕಶ್ಚದೃಶ್ಯತೇ । ಪರಾಸ್ಯ ಶಕ್ತಿರ್ವಿವಿಧೈವಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ ॥' ಎಂಬ ಶ್ರುತಿಯೇ ಇದಕ್ಕೆ ಪ್ರಮಾಣವು. ಮಣಿಮಂತ್ರಾದಿಗಳ ಶಕ್ತಿಯನ್ನೂ ಅಗ್ನಿಯ ಉಷ್ಣತೆಯನ್ನೂ ಯಾರೂ ನಾಶಮಾಡಲಾಗುವುದಿಲ್ಲ. ಹಾಗೆಯೇ ಪರಮಾತ್ಮನ ಶಕ್ತಿಯು ನಿರಂಕುಶವಾದುದು. ಆದುದರಿಂದಲೇ ವೇದದಲ್ಲಿ 'ಸವಾ ಅಯಮಾತ್ಮಾ ಸರ್ವಸ್ಯವಶೀ ಸರ್ವಸ್ಯೇಶಾನಸ್ಸರ್ವಸ್ಯಾಧಿಪತಿಃ' ಎಂದು ಪರಮಾತ್ಮನನ್ನು ಹೊಗಳಿರುವುದು.

೩-೪. ಪರಮಾತ್ಮನು ಸೃಷ್ಟಿಕಾರ್ಯವನ್ನು ಹೇಗೆ ಮಾಡುವನೆಂಬುದನ್ನು ಹೇಳುವೆನು ಕೇಳು :-ಮಹಾಮಹಿಮನಾದ ನಾರಾಯಣನು ನಿತ್ಯನಾಗಿ ಅವನಿಗೆ ಉತ್ಪತ್ತಿಯಿಲ್ಲದಿದ್ದರೂ ಔಪಚಾರಿಕವಾಗಿ ವೇದದಲ್ಲಿ 'ಹಿರಣ್ಯಗರ್ಭಸ್ಸಮವರ್ತ ತಾಗ್ರೇ' ಎಂದು ಬ್ರಹ್ಮನಾಗಿ ಹುಟ್ಟಿದನೆಂದು ಹೇಳಿದೆ. ಇದಕ್ಕೆ ತನ್ನ ಇಚ್ಛೆಯಿಂದಲೇ ಬ್ರಹ್ಮರೂಪದಿಂದ ವ್ಯಕ್ತನಾದನೆಂದು ಅಭಿಪ್ರಾಯವು.

೫-೭. ಆ ಸೃಷ್ಟಿಕರ್ತನಾದ ಬ್ರಹ್ಮನಿಗೆ ತನ್ನ ಕಾಲದ ಅಳತೆಯನ್ನನುಸರಿಸಿ ಒಂದು ನೂರುವರ್ಷ ಆಯುಸ್ಸಿರುವುದು. ಅದನ್ನು ಪರಾರ್ಧಕಾಲವೆಂದು ಹೇಳು

ಕಾಲಸ್ವರೂಪಂ ವಿಷ್ಣೋಶ್ಚ ಯನ್ಮಯೋಕ್ತಂ ತವಾನಘ ।
ತೇನ ತಸ್ಯ ನಿಬೋಧತ್ವಂ ಪರಿಮಾಣೋಪಪಾದನಂ ॥ ೬ ॥

ಅನ್ಯೇಷಾಂ ಚೈವ ಜಂತೂನಾಂ ಚರಾಣಾಮಚರಾಶ್ಚ ಯೇ ।
ಭೂಭೂಭೃತ್ಸಾಗರಾದೀನಾಮಶೇಷಾಣಾಂ ಚ ಸತ್ತಮ ॥ ೭ ॥

ಕಾಷ್ಠಾ ಪಂಚದಶಾಖ್ಯಾತಾ ನಿಮೇಷಾ ಮುನಿಸತ್ತಮ ।
ಕಾಷ್ಠಾ ತ್ರಿಂಶತ್ಕಲಾತ್ರಿಂಶತ್ಕಲಾ ಮೌಹೂರ್ತಿಕೋ ವಿಧಿಃ ॥ ೮ ॥

ತಾವತ್ಸಂಖ್ಯೈರಹೋರಾತ್ರಂ ಮುಹೂರ್ತೈರ್ಮಾನುಷಂ ಸ್ಮೃತಂ ।
ಅಹೋರಾತ್ರಾಣಿ ತಾವಂತಿ ಮಾಸಃ ಪಕ್ಷದ್ವಯಾತ್ಮಕಃ ॥ ೯ ॥

ತೈಃಷಡ್ಭಿರಯನಂ ವರ್ಷಂ ದ್ವೇಯನೇ ದಕ್ಷಿಣೋತ್ತರೇ ।
ಅಯನಂ ದಕ್ಷಿಣಂ ರಾತ್ರಿರ್ದೇವಾನಾಮುತ್ತರಂ ದಿನಂ ॥ ೧೦ ॥

ವರು. ಆ ಕಾಲವನ್ನನುಸರಿಸಿ ಬ್ರಹ್ಮನಿಗೂ ಇತರ ಚರಾಚರ ಪ್ರಾಣಿಗಳಿಗೂ ಆಯುಸ್ಸಿನ ಅಳತೆಯನ್ನೂ, ಪರ್ವತಗಳು ಸಾಗರಗಳು ಇರುವ ಕಾಲವನ್ನೂ ಹೇಳುವೆನು ಕೇಳು :–

೮-೧೦. ಕಣ್ಣುರೆಪ್ಪೆಯನ್ನು ಒಂದಾವೃತಿ, ಮುಚ್ಚಿಬಿಡುವ ಕಾಲಕ್ಕೆ ನಿಮೇಷವೆಂದು ಹೆಸರು. ಹದಿನೈದು ನಿಮೇಷಗಳಿಗೆ ಒಂದು ಕಾಷ್ಠವೆನಿಸುವುದು. ಮೂವತ್ತುಕಾಷ್ಠಗಳಿಗೆ ಒಂದು ಕಲೆಯು. ಮೂವತ್ತು ಕಲೆಗಳಿಗೆ ಒಂದು ಮುಹೂರ್ತವೆನಿಸುವುದು. ಮೂವತ್ತು ಮುಹೂರ್ತಗಳಿಗೆ ಹಗಲು ರಾತ್ರಿಗಳಿಂದ ಕೂಡಿದ ಒಂದು ದಿನವು. ಮೂವತ್ತು ದಿನಗಳಿಂದ ಕೂಡಿದ ಎರಡು ಪಕ್ಷಗಳು ಒಂದು ಮಾಸವೆನಿಸುವುದು. ಸೌರಮಾನದ ಆರು ಮಾಸಗಳಿಗೆ ಒಂದು ಅಯನವು ದಕ್ಷಿಣಾಯನ ಉತ್ತರಾಯಣಗಳಿಂದು ಎರಡು ಅಯನಗಳು. ದೇವತೆಗಳಿಗೆ ದಕ್ಷಿಣಾಯನವು ರಾತ್ರಿಯು ಉತ್ತರಾಯಣವು ಹಗಲು.

ದಿವ್ಯೈರ್ವರ್ಷಸಹಸ್ರೈಸ್ತು ಕೃತತ್ರೇತಾದಿಸಂಜ್ಞಕಂ ।
ಚತುರ್ಯುಗಂ ದ್ವಾದಶಭಿಸ್ತದ್ವಿಭಾಗಂ ನಿಬೋಧ ಮೇ ॥ ೧೧ ॥

ಚತ್ವಾರಿ ತ್ರೀಣಿ ದ್ವೇ ಚೈಕಂ ಕೃತಾದಿಷು ಯಥಾಕ್ರಮಂ ।
ದಿವ್ಯಾಬ್ದಾನಾಂ ಸಹಸ್ರಾಣಿ ಯುಗೇಷ್ವಾಹುಃ ಪುರಾವಿದಃ ॥ ೧೨ ॥

ತತ್ಪ್ರಮಾಣೈಶ್ಶತೈಸ್ಸಂಧ್ಯಾ ಪೂರ್ವಾ ತತ್ರಾಭಿಧೀಯತೇ ।
ಸಂಧ್ಯಾಂಶಶ್ಚಾಪಿ ತತ್ತುಲ್ಯೋ ಯುಗಸ್ಯಾನಂತರೋ ಹಿಸಃ ॥ ೧೩ ॥

ಸಂಧ್ಯಾ ಸಂಧ್ಯಾಂಶಯೋರಂತರ್ಯಃ ಕಾಲೋ ಮುನಿಸತ್ತಮ ।
ಯುಗಾಖ್ಯಸ್ಸತು ವಿಜ್ಞೇಯಃ ಕೃತತ್ರೇತಾದಿಸಂಜ್ಞಿತಃ ॥ ೧೪ ॥

ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚೇತಿ ಚತುರ್ಯುಗಂ ।
ಪ್ರೋಚ್ಯತೇ ತತ್ಸಹಸ್ರಂ ಚ ಬ್ರಹ್ಮಣೋ ದಿವಸಂ ಮುನೇ ॥ ೧೫ ॥

ಬ್ರಹ್ಮಣೋ ದಿವಸೇ ಬ್ರಹ್ಮ ಮನವಸ್ತು ಚತುರ್ದಶ ।
ಭವಂತಿ ಪರಿಣಾಮಂ ಚ ತೇಷಾಂ ಕಾಲಕೃತಂ ಶೃಣು ॥ ೧೬ ॥

೧೧-೧೩. ಹೀಗೆ ದೇವತೆಗಳ ಮಾನದಿಂದ ಹನ್ನೆರಡುಸಾವಿರ ವರ್ಷಗಳಿಗೆ ಒಂದು ಚತುರ್ಯುಗವಾಗುವುದು. ಕ್ರಮವಾಗಿ ಕೃತ, ತ್ರೇತ, ದ್ವಾಪರ ಕಲಿಯುಗ ಗಳಿಗೆ ನಾಲ್ಕು, ಮೂರು ಎರಡು, ಒಂದು ಸಾವಿರ ದೇವಮಾನದ ವರ್ಷಗಳಾಗುವುವು. ಪ್ರತಿಯೊಂದು ಯುಗದ ಮೊದಲು ಮತ್ತು ಕಡೆಯಲ್ಲಿ ಕ್ರಮವಾಗಿ ನಾಲ್ಕು ಮೂರು, ಎರಡು, ಒಂದುನೂರು ದೇವಮಾನದ ವರ್ಷಗಳು ಸಂಧಿ ಸಂಧ್ಯಾಂಶ ಕಾಲವೆನಿಸುವುದು, ಸಂಧಿಕಾಲಕ್ಕೂ, ಸಂಧ್ಯಾಂಶಕಾಲಕ್ಕೂ ನಡುವೆ ಇರುವ ನಾಲ್ಕು, ಮೂರು, ಎರಡು, ಒಂದು ಸಾವಿರ ವರ್ಷಗಳೇ ಕೃತ, ತ್ರೇತ, ದ್ವಾಪರ ಯುಗಗಳ ಪ್ರಮಾಣಗಳಾಗಿರುವುವು.

೧೪-೧೬. ಚತುರ್ಯುಗಗಳು ಸಾವಿರವಾದರೆ ಬ್ರಹ್ಮನಿಗೆ ಒಂದು ಹಗಲಾಗುವುದು. ಆ ಬ್ರಹ್ಮನ ಒಂದು ಹಗಲಿನಲ್ಲಿ ಹದಿನಾಲ್ಕು ಮನುಗಳು ಆಗಿಹೋಗುವರು. ಅವರ ಕಾಲವನ್ನು ಮನ್ವಂತರಗಳೆಂದು ಹೇಳುವರು.

ಸಪ್ತರ್ಷಯಸ್ಸುರಾಶ್ಶಕ್ರೋ ಮನುಸ್ತತ್ಸೂನವೋ ನೃಪಾಃ ।
ಏಕಕಾಲೇ ಹಿ ಸೃಜ್ಯಂತೇ ಸಂಹ್ರಿಯಂತೇ ಚ ಪೂರ್ವವತ್ ॥ ೧೭ ॥

ಚತುರ್ಯುಗಾಣಾಂ ಸಂಖ್ಯಾತಾ ಸಾಧಿಕಾ ಹ್ಯೇಕಸಪ್ತತಿಃ ।
ಮನ್ವಂತರಂ ಮನೋಃ ಕಾಲಸ್ಸುರಾದೀನಾಂ ಚ ಸತ್ತಮ ॥ ೧೮ ॥

ಅಷ್ಟೌ ಶತಸಹಸ್ರಾಣಿ ದಿವ್ಯಯಾ ಸಂಖ್ಯಯಾ ಸ್ಮೃತಂ ।
ದ್ವಿಪಂಚಾಶತ್ತಥಾನ್ಯಾನಿ ಸಹಸ್ರಾಣ್ಯಧಿಕಾನಿ ತು ॥ ೧೯ ॥

ತ್ರಿಂಶತ್ಕೋಟ್ಯಸ್ತು ಸಂಪೂರ್ಣಾಸ್ಸಂಖ್ಯಾತಾಸ್ಸಂಖ್ಯಯಾ ದ್ವಿಜ ।
ಸಪ್ತಷಷ್ಟಿಸ್ತಥಾನ್ಯಾನಿ ನಿಯುತಾನಿ ಮಹಾಮುನೇ ॥ ೨೦ ॥

೧೭-೧೯. ಸಪ್ತರ್ಷಿಗಳು, ದೇವತೆಗಳು, ದೇವೇಂದ್ರ, ಮನು, ಮನುಪುತ್ರರಾದ ರಾಜರು ಇವರೆಲ್ಲರೂ ಒಂದೇ ಕಾಲದಲ್ಲಿ ಸೃಷ್ಟಿಯಾಗಿ ಅಧಿಕಾರಿಗಳಾಗಿ ಒಂದೇ ಕಾಲದಲ್ಲಿ ಉಪಸಂಹಾರದಿಂದ ಅಧಿಕಾರತ್ಯಾಗ ಮಾಡುವರು. ಒಂದೊಂದು ಮನ್ವಂತರಕ್ಕೆ ಎಪ್ಪತ್ತೊಂದು ಚತುರ್ಯುಗಗಳಿಗಿಂತ ಸ್ವಲ್ಪ ಹೆಚ್ಚು ಕಾಲವಾಗುವುದು. ಸಪ್ತರ್ಷಿಗಳು, ದೇವತೆಗಳು, ದೇವೇಂದ್ರನೂ ಅಷ್ಟು ಕಾಲದವರೆಗೆ ಅಧಿಕಾರವನ್ನು ಮಾಡುತ್ತಿರುವರು. ಎಪ್ಪತ್ತೊಂದು ಚತುರ್ಯುಗಕ್ಕೆ ದೇವಮಾನದಿಂದ ಎಂಟುಲಕ್ಷದ ಐವತ್ತೆರಡು ಸಾವಿರ ವರ್ಷಗಳಾಗುವುವು. (೮೫೨೦೦೦)

೨೦-೨೧. ಹೆಚ್ಚು ಕಾಲವನ್ನು ಬಿಟ್ಟು ಎಪ್ಪತ್ತೊಂದು ಚತುರ್ಯುಗಕ್ಕೆ ಮನುಷ್ಯರ ಕಾಲಮಾನದಂತೆ ಮೂವತ್ತು ಕೋಟಿ ಅರವತ್ತೇಳು ಲಕ್ಷದ ಇಪ್ಪತ್ತು ಸಾವಿರ ವರ್ಷಗಳಾಗುವುವು. (೩೦೬೭೨೦೦೦೦) ಒಂದು ಮನ್ವಂತರಕ್ಕೆ ದೇವಮಾನದಲ್ಲಿ ಐದು ಸಾವಿರದ ನೂರನಲವತ್ತೆರಡು ವರ್ಷ ಹತ್ತು ತಿಂಗಳು ಎಂಟು ದಿನ ನಾಲ್ಕು ಯಾಮ, ಎರಡು ಮುಹೂರ್ತ, ಎಂಟು ಕಲೆ, ಹದಿನೇಳು ಕಾಷ್ಠ, ಎರಡು ಏಳನೆ ಒಂದು ನಿಮೇಷ ಕಾಲವಾಗುವುದು. ಮನುಷ್ಯಮಾನದಲ್ಲಿ ೧೮೫೧೮೨೮

ವಿಂಶತಿಶ್ಚ ಸಹಸ್ರಾಣಿ ಕಾಲೋಯಮಧಿಕಂ ವಿನಾ ।
ಮನ್ವಂತರಸ್ಯ ಸಂಖ್ಯೇಯಂ ಮಾನುಷೈರ್ವತ್ಸರೈರ್ದ್ವಿಜ ॥ ೨೧

ಚತುರ್ದಶಗುಣೋ ಹ್ಯೇಷಕಾಲೋ ಬ್ರಾಹ್ಮಮಹಸ್ಸ್ಮೃತಂ ।
ಬ್ರಾಹ್ಮೋ ನೈಮಿತ್ತಿಕೋ ನಾಮ ತಸ್ಯಾಂತೇ ಪ್ರತಿಸಂಚರಃ ॥ ೨೨ ॥

ತದಾ ಹಿ ದಹ್ಯತೇ ಸರ್ವಂ ತ್ರೈಲೋಕ್ಯಂ ಭೂರ್ಭುವಾದಿಕಂ ।
ಜನಂ ಪ್ರಯಾಂತಿ ತಾಪಾರ್ತಾ ಮಹರ್ಲೋಕನಿವಾಸಿನಃ ॥ ೨೩ ॥

ಏಕಾರ್ಣವೇ ತು ತ್ರೈಲೋಕ್ಯೇ ಬ್ರಹ್ಮಾ ನಾರಾಯಣಾತ್ಮಕಃ ।
ಭೋಗಿಶಯ್ಯಾಂಗತಶ್ಶೇತೇ ತ್ರೈಲೋಕ್ಯಗ್ರಾಸ (ಜ್ಞಾನ) ಬೃಂಹಿತಃ ॥೨೪ ॥

ವರ್ಷ ೨೪ ದಿನ ೪ ಯಾಮ ೨ ಮುಹೂರ್ತ ೨೫ ಕಲೆ ೨೧ ಕಾಷ್ಟ ೬, ೩-೭ನಿಮೇಷ ಗಳಾಗುವುವು.

೨೨-೨೩. ಹದಿನಾಲ್ಕು ಮನ್ವಂತರಗಳ ಕೊನೆಯಲ್ಲಿ ಅಂದರೆ ಒಂದುಸಾವಿರ ಚತುರ್ಯುಗಗಳು ಕಳೆದರೆ ಬ್ರಹ್ಮನ ಒಂದು ಹಗಲು ಮುಗಿದು ಅವನ ನಿದ್ರಾ ನಿಮಿತ್ತವಾದ ಪ್ರಳಯವು ಉಂಟಾಗುವುದು. ಆ ಪ್ರಳಯದಲ್ಲಿ ಭೂಲೋಕ, ಭುವರ್ಲೋಕ, ಸ್ವರ್ಗಲೋಕವೆಂಬ ಮೂರು ಲೋಕಗಳು ಸುಟ್ಟುಹೋಗವುವು. ಆ ತಾಪದಿಂದ ಭಾಧೆ ಹೊಂದಿನ ಮಹರ್ಲೋಕ ನಿವಾಸಿಗಳು ಜನೋಲೋಕಕ್ಕೆ ಹೋಗುವರು.

೨೪-೨೫. ಮೂರು ಲೋಕವೂ ನೀರಿನಿಂದ ತುಂಬಿ ಒಂದೇ ಸಮುದ್ರವಾಗಿ ರಲು ನಾರಾಯಣ ಸ್ವರೂಪನಾದ ಬ್ರಹ್ಮನು ಮೂರು ಲೋಕವನ್ನೂ ನುಂಗಿದುದ ರಿಂದುಂಟಾದ ಶರೀರದ ಉಬ್ಬುವಿಕೆಯಿಂದ ಆದಿಶೇಷನ ಹಾಸಿಗೆಯಲ್ಲಿ ಮಲಗಿರುವನು. ಜ್ಞಾನಬೃಂಹಿತಃ ಎಂಬ ಪಾಠಾಂತರದಲ್ಲಿ ಸಮೃದ್ಧಿಯಾದ ಜ್ಞಾನಾನಂದದಿಂದ ಕೂಡಿ ಎಂದು ಅರ್ಥ ಮಾಡಬೇಕು.) ಆ ಬ್ರಹ್ಮನು ತನ್ನ ಹಗಲಿನ ಪ್ರಮಾಣದಷ್ಟೇ ಆದ

ಜನಸ್ಥೈರ್ಯೋಗಿಭಿರ್ದೇವಃ ಚಿಂತ್ಯಮಾನೋಬ್ಜಸಂಭವಃ ।
ತತ್ಪ್ರಮಾಣಾಂಹಿ ತಾಂ ರಾತ್ರಿಂ ತದಂತೇ ಸೃಜತೇ ಪುನಃ ॥ ೨೫ ॥

ಏವಂ ಚ ಬ್ರಹ್ಮಣೋ ವರ್ಷಂ ಏವಂ ವರ್ಷಶತಂ ತು ತತ್ ।
ಶತಂ ಹಿ ತಸ್ಯ ವರ್ಷಾಣಾಂ ಪರಮಾಯುರ್ಮಹಾತ್ಮನಃ ॥ ೨೬ ॥

ಏಕಮಸ್ಯಾಪ್ಯತೀತಂ ತು ಪರಾರ್ಧಂ ಬ್ರಹ್ಮಣೋಽನಘ ।
ತಸ್ಯಾಂತೇಭೂನ್ಮಹಾಕಲ್ಪಃ ಪಾದ್ಮ ಇತ್ಯಭಿವಿಶ್ರುತಃ ॥ ೨೭ ॥

ದ್ವಿತೀಯಸ್ಯ ಪರಾರ್ಧಸ್ಯ ವರ್ತಮಾನಸ್ಯ ವೈ ದ್ವಿಜ ।
ವಾರಾಹ ಇತಿ ಕಲ್ಪೋಽಯಂ ಪ್ರಥಮಃ ಪರಿಕೀರ್ತಿತಃ ॥ ೨೮ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ತೃತೀಯೋಽಧ್ಯಾಯಃ.

ರಾತ್ರಿಯಲ್ಲಿ ಜನೋಲೋಕವಾಸಿಗಳಾದ ಯೋಗಿಗಳೊಡನೆ ಯೋಗನಿದ್ರೆಯಲ್ಲಿರುವನು ರಾತ್ರಿಯ ಕೊನೆಯಲ್ಲಿ ಮತ್ತೆ ಸೃಷ್ಟಿಕಾರ್ಯವನ್ನು ಪ್ರಾರಂಭಿಸುವನು.

೨೬. ಈ ರೀತಿಯಾದ ಬ್ರಹ್ಮನ ದಿನಪ್ರಮಾಣದಂತೆ ಆ ಬ್ರಹ್ಮನಿಗೆ ಒಂದು ನೂರು ವರ್ಷವು ಆಯುಸ್ಸಿರುವುದು.

೨೭-೨೮. ಪಾಪರಹಿತನಾದ ಮೈತ್ರೇಯನೇ ಈ ಬ್ರಹ್ಮನಿಗೆ ಒಂದು ಪರಾರ್ಧ ಕಾಲವು ಕಳೆಯಿತು. ಈ ಕಾಲದ ಕೊನೆಯಲ್ಲಿ ಪಾದ್ಮವೆಂಬ ಮಹಾಕಲ್ಪವು ಕಳೆದು ಹೋಯಿತು. ಈಗ ಬ್ರಹ್ಮನಿಗೆ ಎರಡನೆಯ ಪರಾರ್ಧದಲ್ಲಿ ಮೊದಲನೆಯದಾದ ವರಾಹಕಲ್ಪವು ಪ್ರಾರಂಭವಾಗಿರುವುದು.

ಎಂಬಲ್ಲಿಗೆ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪ್ರಥಮಾಂಶೇ

ಚತುರ್ಥೋಽಧ್ಯಾಯಃ

॥ ಶ್ರೀ ಮೈತ್ರೇಯಃ ॥

ಬ್ರಹ್ಮಾ ನಾರಾಯಣಾಖ್ಯೋಽಸೌ ಕಲ್ಪಾದೌ ಭಗವಾನ್ ಯಥಾ ।
ಸಸರ್ಜ ಸರ್ವಭೂತಾನಿ ತನ್ಮೇ ವದ ಮಹಾಮುನೇ ॥ ೧ ॥

॥ ಶ್ರೀ ಪರಾಶರಃ ॥

ಪ್ರಜಾಸ್ಸಸರ್ಜ ಭಗವಾನ್ಬ್ರಹ್ಮಾ ನಾರಾಯಣಾತ್ಮಕಃ ।
ಪ್ರಜಾಪತಿಪತಿರ್ದೇವೋ ಯಥಾತನ್ಮೇ ನಿಶಾಮಯ ॥ ೨ ॥

ಅತೀತಕಲ್ಪಾವಸಾನೇ ನಿಶಾಸುಪ್ತೋತ್ಥಿತಃ ಪ್ರಭುಃ ।
ಸತ್ತ್ವೋದ್ರಿಕ್ತಸ್ತದಾ ಬ್ರಹ್ಮಾ ಶೂನ್ಯಂ ಲೋಕಮವೈಕ್ಷತ ॥ ೩ ॥

ನಾಲ್ಕನೆಯ ಅಧ್ಯಾಯವು

೧. ಮೈತ್ರೇಯನು ಪ್ರಶ್ನೆ ಮಾಡುವನು:—ನಾರಾಯಣನೆಂಬ ಹೆಸರುಳ್ಳ ಬ್ರಹ್ಮನು ಕಲ್ಪದ ಪ್ರಾರಂಭದಲ್ಲಿ ಸಮಸ್ತ ಚರಾಚರ ಪ್ರಾಣಿಗಳನ್ನು ಹೇಗೆ ಸೃಷ್ಟಿಸಿದನೆಂಬುದನ್ನು ಹೇಳಬೇಕು. ಎಂದು ಪ್ರಶ್ನೆ ಮಾಡಿದನು.

೨-೩. ಪರಾಶರರು ಹೇಳುವರು:—ಮೈತ್ರೇಯನೇ! ಮಹಾಮಹಿಮನಾದ ನಾರಾಯಣಸ್ವರೂಪನಾದ ಬ್ರಹ್ಮನು ಕಸ್ಯಪಾದಿ ಪ್ರಜಾಪತಿಗಳಿಗೆ ಅಧಿಪತಿಯಾಗಿ ಹೇಗೆ ಪ್ರಜೆಗಳನ್ನು ಸೃಷ್ಟಿಸಿದನೆಂಬುದನ್ನು ಹೇಳುವೆನು ಕೇಳು. ಬ್ರಹ್ಮನು ಹಿಂದಿನ ಕಲ್ಪದ ಕೊನೆಯಲ್ಲಿ ತನ್ನ ರಾತ್ರಿಯಲ್ಲಿ ನಿದ್ರೆಮಾಡಿ ಎದ್ದಮೇಲೆ ಸತ್ತ್ವಗುಣದಿಂದ ಕೂಡಿದವನಾಗಿ ಪ್ರಪಂಚವೆಲ್ಲ ಶೂನ್ಯವಾಗಿರುವುದನ್ನು ನೋಡಿದನು.

ನಾರಾಯಣಃ ಪರೋಽಚಿಂತ್ಯಃ ಪರೇಷಾಮಪಿ ಸ ಪ್ರಭುಃ ।
ಬ್ರಹ್ಮಸ್ವರೂಪೀ ಭಗವಾನ್ ಅನಾದಿಸ್ಸರ್ವಸಂಭವಃ ॥ ೪ ॥

ಇಮಂ ಚೋದಾಹರಂತ್ಯತ್ರ ಶ್ಲೋಕಂ ನಾರಾಯಣಂ ಪ್ರತಿ ।
ಬ್ರಹ್ಮಸ್ವರೂಪಿಣಂ ದೇವಂ ಜಗತಃ ಪ್ರಭವಾಪ್ಯಯಂ ॥ ೫ ॥

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣಸ್ಸ್ಮೃತಃ ॥ ೬ ॥

ತೋಯಾಂತಸ್ಸ್ಥಾಂ ಮಹೀಂ ಜ್ಞಾತ್ವಾ ಜಗತ್ಯೇಕಾರ್ಣವೇ ಪ್ರಭುಃ ।
ಅನುಮಾನಾತ್ತದುದ್ಧಾರಂ ಕರ್ತುಕಾಮಃ ಪ್ರಜಾಪತಿಃ ॥ ೭ ॥

ಅಕರೋತ್ಸ್ವತನೂಮನ್ಯಾಂ ಕಲ್ಪಾದಿಷು ಯಥಾ ಪುರಾ ।
ಮತ್ಸ್ಯಕೂರ್ಮಾದಿಕಾಂ ತದ್ವದ್ವಾರಾಹಂ ವಪುರಾಸ್ಥಿತಃ ॥ ೮ ॥

೪–೬. ಅತ್ಯಂತ ಶ್ರೇಷ್ಠನೂ, ಮನಸ್ಸಿಗೆ ಅಗೋಚರನೂ, ಸಮಸ್ತಕ್ಕೂ ಒಡೆಯನೂ, ಮಹಾಮಹಿಮನೂ, ಸಮಸ್ತಕ್ಕೂ ಕಾರಣನೂ, ಅನಾದಿಯಾದವನೂ, ಪರಬ್ರಹ್ಮನೂ ಆದ ನಾರಾಯಣನು ಸಮಸ್ತ ಜಗತ್ತನ್ನೂ ಸೃಷ್ಟಿಸಿ ಅವುಗಳನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುವನು. ನೀರಿಗೆ ನಾರ ಎಂದು ಹೆಸರು. ನರನೆಂದರೆ ಪುರುಷೋತ್ತಮನು ಅವನಿಂದ ಹುಟ್ಟಿದುದರಿಂದ ನೀರು ನಾರ ಎಂಬ ಹೆಸರನ್ನು ಪಡೆದಿರುವುದು. ಆ ನೀರೇ ಅವನಿಗೆ ಹಿಂದೆ ವಾಸಸ್ಥಾನವಾಗಿದ್ದುದರಿಂದ ಆ ದೇವನನ್ನು ನಾರಾಯಣನೆಂದು ಹೇಳುವರು.

೭–೮. ಆ ಬ್ರಹ್ಮನು ಜಗತ್ತೆಲ್ಲವೂ ಒಂದೇ ಸಮುದ್ರರೂಪವಾಗಿರುವಲ್ಲಿ ಭೂಮಿಯು ನೀರಿನಲ್ಲಿ ಮುಳುಗಿರುವುದೆಂದು ಊಹಿಸಿ ಅದನ್ನು ಮೇಲಕ್ಕೆ ಎತ್ತಿ ತರಬೇಕೆಂದು ಅಪೇಕ್ಷಿಸಿ ಹಿಂದಿನ ಕಲ್ಪದ ಪ್ರಾರಂಭದಲ್ಲಿ ಸೃಷ್ಟಿಕಾರ್ಯಕ್ಕಾಗಿ ಮತ್ಸ್ಯ ಕೂರ್ಮಾದಿ ಶರೀರವನ್ನು ಪಡೆದಂತೆ ಈ ಕಲ್ಪದಲ್ಲಿ ವರಾಹ ಶರೀರವನ್ನು ಪಡೆದನು.

ವೇದಯಜ್ಞಮಯಂ ರೂಪಂ ಅಶೇಷಜಗತಃ ಸ್ಥಿತೌ ।
ಸ್ಥಿತಃ ಸ್ಥಿರಾತ್ಮಾ ಸರ್ವಾತ್ಮಾ ಪರಮಾತ್ಮಾ ಪ್ರಜಾಪತಿಃ ॥ ೯ ॥

ಜನಲೋಕಗತೈಸ್ಸಿದ್ಧೈಸ್ಸನಕಾದ್ಯೈರಭಿಷ್ಟುತಃ ।
ಪ್ರವಿವೇಶ ತದಾ ತೋಯಮಾತ್ಮಾಧಾರೋ ಧರಾಧರಃ ॥ ೧೦ ॥

ನಿರೀಕ್ಷ್ಯ ತಂ ತದಾ ದೇವೀ ಪಾತಾಳತಲಮಾಗತಂ ।
ತುಷ್ಟಾವ ಪ್ರಣತಾ ಭೂತ್ವಾ ಭಕ್ತಿನಮ್ರಾ ವಸುಂಧರಾ ॥ ೧೧ ॥

॥ ಪೃಥಿವ್ಯುವಾಚ ॥

ನಮಸ್ತೇ ಪುಂಡರೀಕಾಕ್ಷ ತುಭ್ಯಂ ಶಂಖಗದಾಧರ ।
ಮಾಮುದ್ಧರಾಸ್ಮಾದದ್ಯತ್ವಂ ತ್ವತ್ತೋಽಹಂ ಪೂರ್ವಮುತ್ಥಿತಾ ॥ ೧೨ ॥

ತ್ವಯಾಹಮುದ್ಧೃತಾ ಪೂರ್ವಂ ತ್ವನ್ಮಯಾಹಂ ಜನಾರ್ದನ ।
ತಥಾನ್ಯಾನಿ ಚ ಭೂತಾನಿ ಗಗನಾದೀನ್ಯಶೇಷತಃ ॥ ೧೩ ॥

೯–೧೦. ಸಮಸ್ತ ಜಗತ್ತು ವೈದಿಕ ಧರ್ಮದಿಂದಲೇ ಇರುವುದೆಂದು ತಿಳಿದ ನಿತ್ಯನಾದ ಪರಮಾತ್ಮನು ಯಜ್ಞ ವರಾಹ ರೂಪವನ್ನು ಧರಿಸಿರಲು ಜನೋಲೋಕ ವಾಸಿಗಳಾದ ಸಿದ್ಧರೂ, ಸನಕಾದಿಗಳೂ ಅವನನ್ನು ಸ್ತೋತ್ರಮಾಡಿದರು. ಆಗ ತಾನೇ ಸಮಸ್ತಕ್ಕೂ ಆಶ್ರಯನಾಗಿದ್ದರೂ ಭೂಮಿಯನ್ನು ತರುವುದಕ್ಕಾಗಿ ಆ ವರಾಹರೂಪನಾದ ನಾರಾಯಣನು ನೀರಿನೊಳಕ್ಕೆ ಪ್ರವೇಶಿಸಿದನು.

೧೧ ಪಾತಾಳಲೋಕಕ್ಕೆ ಬಂದ ವರಾಹರೂಪನಾದ ನಾರಾಯಣನನ್ನು ನೋಡಿ ಭೂದೇವಿಯು ಭಕ್ತಿಯಿಂದ ನಮಸ್ಕರಿಸಿ ಸ್ತೋತ್ರಮಾಡಿದಳು.

೧೨. ಭೂದೇವಿಯು ಹೇಳಿದಳು:—ಕಮಲದಂತೆ ಕಣ್ಣುಗಳುಳ್ಳ ದೇವನೇ, ಶಂಖ, ಚಕ್ರ, ಗದೆಗಳನ್ನು ಧರಿಸಿದವನೇ, ಹಿಂದೆ ನೀನು ನನ್ನನ್ನು ಸೃಷ್ಟಿಮಾಡಿರುವೆ. ಈಗ ಈ ಪಾತಾಳದಿಂದ ನನ್ನನ್ನು ಮೇಲಕ್ಕೆ ಎತ್ತಿ ಉದ್ಧಾರಮಾಡು.

೧೩. ಎಲೈ ಜನಾರ್ದನನೇ! ನಾನೂ ಆಕಾಶಾದಿ ಸಮಸ್ತ ಭೂತಗಳೂ ನಿನ್ನ ಸ್ವರೂಪರು. ಹಿಂದೆ ನನ್ನನ್ನು ಉದ್ಧರಿಸಿದಂತೆ ಈಗಲೂ ಉದ್ಧಾರಮಾಡು.

ನಮಸ್ತೇ ಪರಮಾತ್ಮಾತ್ಮನ್ ಪುರುಷಾತ್ಮನ್ನಮೋಽಸ್ತು ತೇ ।
ಪ್ರಧಾನವ್ಯಕ್ತಭೂತಾಯ ಕಾಲಭೂತಾಯ ತೇ ನಮಃ ॥ ೧೪ ॥

ತ್ವಂ ಕರ್ತಾ ಸರ್ವಭೂತಾನಾಂ ತ್ವಂ ಪಾತಾ ತ್ವಂ ವಿನಾಶಕೃತ್ ।
ಸರ್ಗಾದಿಷು ಪ್ರಭೋ ಬ್ರಹ್ಮವಿಷ್ಣುರುದ್ರಾತ್ಮರೂಪಧೃಕ್ ॥ ೧೫ ॥

ಸಂಭಕ್ಷಯಿತ್ವಾ ಸಕಲಂ ಜಗತ್ಯೇಕಾರ್ಣವೀಕೃತೇ ।
ಶೇಷೇ ತ್ವಮೇವ ಗೋವಿಂದ ಚಿಂತ್ಯಮಾನೋ ಮನೀಷಿಭಿಃ ॥ ೧೬ ॥

ಭವತೋ ಯತ್ಪರಂ ರೂಪಂ ತನ್ನ ಜಾನಾತಿ ಕಶ್ಚನ ।
ಅವತಾರೇಷು ಯದ್ರೂಪಂ ತದರ್ಚಂತಿ ದಿವೌಕಸಃ ॥ ೧೭ ॥

ತ್ವಾಮಾರಾಧ್ಯ ಪರಂಬ್ರಹ್ಮ ಯಾತಾ ಮುಕ್ತಿಂ ಮುಮುಕ್ಷವಃ ।
ವಾಸುದೇವಮನಾರಾಧ್ಯ ಕೋ ಮೋಕ್ಷಂ ಸಮವಾಪ್ಸ್ಯತಿ ॥ ೧೮ ॥

---

೧೪. ಪರಮಾತ್ಮನೇ, ಪರಮಪುರುಷನೇ, ಪ್ರಕೃತಿರೂಪದಿಂದ ವ್ಯಕ್ತನಾದವನೇ, ಕಾಲಸ್ವರೂಪನೇ ನಿನಗೆ ನಮಸ್ಕಾರಮಾಡುವೆನು.

೧೫–೨೦. ನೀನೇ ಬ್ರಹ್ಮ, ವಿಷ್ಣು, ರುದ್ರರೂಪನಾಗಿ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವೆ. ಸಮಸ್ತ ಜಗತ್ತನ್ನೂ ಪ್ರಳಯಕಾಲದಲ್ಲಿ ನಿನ್ನಲ್ಲಿಯೇ ಲಯಮಾಡಿಕೊಂಡು ಜಗತ್ತೆಲ್ಲಾ ಒಂದೇ ಸಮುದ್ರರೂಪವಾಗಿರಲು ಯೋಗನಿದ್ರೆಯನ್ನು ಮಾಡುತ್ತಿರುವ ನಿನ್ನನ್ನು ಜ್ಞಾನಿಗಳು ಧ್ಯಾನಮಾಡುತ್ತಿರುವರು. ನಿರ್ವಿಕಾರವಾದ ನಿನ್ನ ಪರಸ್ವರೂಪವನ್ನು ಯಾರೂ ಕಾಣರು. ದೇವತೆಗಳು ನಿನ್ನ ಅವತಾರರೂಪಗಳನ್ನು ಪೂಜಿಸುವರು. ಪರಬ್ರಹ್ಮನಾದ ನಿನ್ನನ್ನು ಪೂಜಿಸಿ ಮುಮುಕ್ಷುಗಳು ಮೋಕ್ಷವನ್ನು ಪಡೆದರು. ವಾಸುದೇವನಾದ ನಿನ್ನನ್ನು ಪೂಜಿಸದೆ ಯಾರೂ ಮೋಕ್ಷವನ್ನು ಹೊಂದಲಾರರು. ಮನಸ್ಸಿನಲ್ಲಿ ಗ್ರಹಿಸುವ ವಿಷಯಗಳೂ, ಕಣ್ಣು ಮೊದಲಾದ ಇಂದ್ರಿಯಗಳಿಂದ ತಿಳಿಯುವ ವಿಷಯಗಳೂ, ಬುದ್ಧಿಯಿಂದ ನಿರ್ಣಯಿಸಿ ತಿಳಿವ ವಿಷಯಗಳೂ ಇವೆಲ್ಲವೂ ನಿನ್ನ ರೂಪಗಳೇ ಆಗಿರುವುವು. ನಾನು ನಿನ್ನ

ಯತ್ಕಿಂಚಿನ್ಮನಸಾ ಗ್ರಾಹ್ಯಂ ಯದ್ಗ್ರಾಹ್ಯಂ ಚಕ್ಷುರಾದಿಭಿಃ ।
ಬುದ್ಧ್ಯಾ ಚ ಯತ್ಪರಿಚ್ಛೇದ್ಯಂ ತದ್ರೂಪಮಖಿಲಂ ತವ ॥ ೧೯ ॥

ತ್ವನ್ಮಯಾಹಂ ತ್ವದಾಧಾರಾ ತ್ವತ್ಸೃಷ್ಟಾ ತ್ವತ್ಸಮಾಶ್ರಯಾ ।
ಮಾಧವೀಮಿತಿ ಲೋಕೋಽಯಮಭಿಧತ್ತೇ ತತೋ ಹಿ ಮಾಂ ॥ ೨೦ ॥

ಜಯಾಖಿಲಜ್ಞಾನಮಯ ಜಯ ಸ್ಥೂಲಮಯಾವ್ಯಯ ।
ಜಯಾನಂತ ಜಯಾವ್ಯಕ್ತ ಜಯ ವ್ಯಕ್ತಮಯ ಪ್ರಭೋ ॥ ೨೧ ॥

ಪರಾಪರಾತ್ಮನ್ ಸರ್ವಾತ್ಮನ್ ಜಯ ಯಜ್ಞಪತೇಽನಘ ।
ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಸ್ತ್ವಮಗ್ನಯಃ ॥ ೨೨ ॥

ತ್ವಂ ವೇಧಾಸ್ತ್ವಂ ತದಂಗಾನಿ ತ್ವಂ ಯಜ್ಞಪುರುಷೋ ಹರೇ ।
ಸೂರ್ಯಾದಯೋ ಗ್ರಹಾಸ್ತಾರಾ ನಕ್ಷತ್ರಾಣ್ಯಖಿಲಾನಿ ಚ ॥ ೨೩ ॥

ಸ್ವರೂಪಳು. ನಿನ್ನಲ್ಲಿಯೇ ಇರತಕ್ಕವಳು. ನೀನೇ ನನ್ನನ್ನು ಸೃಷ್ಟಿಸಿರುವೆ. ನಿನ್ನನ್ನೇ ಆಶ್ರಯಿಸಿದವಳಾದುದರಿಂದ ಜನರು ನನ್ನನ್ನು ನಿನ್ನವಳೆಂದು ಹೇಳುವರು.

೨೧. ಸಮಸ್ತ ಜ್ಞಾನಸ್ವರೂಪನೇ, ಸಮಸ್ತ ಸ್ಥೂಲ ವಸ್ತು ಸ್ವರೂಪನೇ, ನಾಶರಹಿತನೇ, ಅವ್ಯಕ್ತ ವ್ಯಕ್ತಸ್ವರೂಪನೇ ನಿನಗೆ ಜಯವಾಗಲಿ.

೨೨-೨೪. ಕಾರಣ ಕಾರ್ಯಸ್ವರೂಪನೇ, ಸಮಸ್ತ ಜೀವಾತ್ಮಸ್ವರೂಪನೇ, ಯಜ್ಞಗಳಿಗೆ ಒಡೆಯನೇ,ಯಜ್ಞಸ್ವರೂಪನೆ, ವಷಟ್ ಎಂಬ ಮಂತ್ರಾರ್ಥಸ್ವರೂಪನೇ, ಓಂಕಾರಸ್ವರೂಪನೇ, ತ್ರೇತಾಗ್ನಿ ಸ್ವರೂಪನೇ, ವೇದವೇದಾಂಗ ಸ್ವರೂಪನೇ, ಯಜ್ಞ ಮೂರ್ತಿಯೇ, ಸೂರ್ಯಾದಿ ಗ್ರಹಸ್ವರೂಪನೇ, ಅಶ್ವಿನ್ಯಾದಿ ತಾರಾ ಸ್ವರೂಪನೇ, ಸಕಲ ನಕ್ಷತ್ರರೂಪನೇ, ಸರ್ವಗತನಾಗಿಯೂ, ಅದೃಶ್ಯನಾಗಿಯೂ ಇರುವವನೇ ಈ ಸ್ತೋತ್ರ

ಮೂರ್ತಾಮೂರ್ತಮದೃಶ್ಯಂ ಚ ದೃಶ್ಯಂ ಚ ಪುರುಷೋತ್ತಮ ।
ಯಚ್ಚೋಕ್ತಂ ಯಚ್ಚ ನೈವೋಕ್ತಂ ಮಯಾತ್ರ ಪರಮೇಶ್ವರ ।
ತತ್ಸರ್ವಂ ತ್ವಂ ನಮಸ್ತುಭ್ಯಂ ಭೂಯೋ ಭೂಯೋ ನಮೋ ನಮಃ ॥೨೪॥

॥ ಶ್ರೀ ಪರಾಶರಃ ॥

ಏವಂ ಸಂಸ್ತೂಯಮಾನಸ್ತು ಪೃಥಿವ್ಯಾ ಪೃಥಿವೀಧರಃ ।
ಸಾಮಸ್ವರಧ್ವನಿಶ್ಶ್ರೀಮಾನ್ ಜಗರ್ಜ ಪರಿಘರ್ಘರಂ ॥ ೨೫ ॥

ತತಸ್ಸಮುತ್ಕ್ಷಿಪ್ಯ ಧರಾಂ ಸ್ವದಂಷ್ಟ್ರಯಾ
ಮಹಾವರಾಹಸ್ಸ್ಫುಟಪದ್ಮಲೋಚನಃ ।
ರಸಾತಲಾದುತ್ಪಲಪತ್ರಸನ್ನಿಭ-
ಸ್ಸಮುತ್ಥಿತೋ ನೀಲ ಇವಾಚಲೋ ಮಹಾನ್ ॥ ೨೬ ॥

ಉತ್ತಿಷ್ಠತಾ ತೇನಮುಖಾನಿಲಾಹತಂ
ತತ್ಸಂಭವಾಂಭೋಜನಲೋಕಸಂಶ್ರಯಾನ್ ।
ಸನಂದನಾದೀನಪಕಲ್ಮಷಾನ್ಮುನೀಂ-
ಶ್ಚಕಾರ ಭೂಯೋಽಪಿ ಪವಿತ್ರತಾ ಪದಂ ॥ ೨೭ ॥

ದಲ್ಲಿ ನಾನು ಹೇಳಿರುವ ಮತ್ತು ಹೇಳದಿರುವ ಸಮಸ್ತ ವಸ್ತುಸ್ವರೂಪನಾಗಿ ನೀನಿರು ವುದರಿಂದ ನಿನಗೆ ಪುನಃ ಪುನಃ ನಮಸ್ಕಾರಮಾಡುವೆನು.

೨೫–೨೭. ಭೂದೇವಿಯು ಹೀಗೆ ಸ್ತೋತ್ರಮಾಡುತ್ತಿರಲು ವರಾಹರೂಪ ವನ್ನು ಧರಿಸಿದ ವಿಷ್ಣುವು ಸಾಮ ಗಾನ ಸ್ವರ ರೂಪದಿಂದ ಗರ್ಜನೆಮಾಡಿದನು. ಆಮೇಲೆ ಕಮಲದಂತೆ ಕಣ್ಣುಗಳುಳ್ಳ ಆ ಮಹಾವರಾಹಸ್ವಾಮಿಯು ತನ್ನ ಹಲ್ಲು ಗಳಿಂದ ಭೂಮಿಯನ್ನೆತ್ತಿಕೊಂಡು ಪಾತಾಳದಿಂದ ಎದ್ದು ಬಂದ ದೊಡ್ಡ ಅಂಜನ ಪರ್ವತದಂತೆ ಎದ್ದುಬಂದನು. ಎದ್ದು ಬರುತ್ತಿದ್ದ ಆ ವರಾಹಸ್ವಾಮಿಯ ಮುಖ ವಾಯುವಿನಿಂದ ಮೇಲಕ್ಕೆ ಹಾರಿದ ನೀರಿನ ಹನಿಗಳು ಜನಲೋಕವಾಸಿಗಳಾದ ಪಾಪರಹಿತರಾದ ಸನಂದನಾದಿ ಮುನಿಗಳನ್ನು ಮತ್ತೆ ಪವಿತ್ರನಾಗಿ ಮಾಡಿದುವು.

ಪ್ರಯಾಂತಿ ತೋಯಾನಿ ಖುರಾಗ್ರವಿಕ್ಷತೇ
ರಸಾತಲೇಧಃಕೃತಶಬ್ದಸಂತತಿಃ ।
ಶ್ವಾಸಾನಿಲಾಸ್ತಾಃ ಪರತಃ ಪ್ರಯಾಂತಿ
ಸಿದ್ಧಾ ಜನೇ ಯೇ ನಿಯತಂ ವಸಂತಿ ॥ ೨೮ ॥

ಉತ್ತಿಷ್ಠತಸ್ತಸ್ಯ ಜಲಾರ್ದ್ರಕುಕ್ಷೇ-
ರ್ಮಹಾವರಾಹಸ್ಯ ಮಹೀಂ ವಿಗೃಹ್ಯ ।
ವಿಧೂನ್ವತೋ ವೇದಮಯಂ ಶರೀರಂ
ರೋಮಾಂತರಸ್ಥಾ ಮುನಯಸ್ತುವಂತಿ ॥ ೨೯ ॥

ತಂ ತುಷ್ಟುವುಸ್ತೋಷಪರೀತಚೇತಸೋ
ಲೋಕೇ ಜನೇ ಯೇ ನಿವಸಂತಿ ಯೋಗಿನಃ ।
ಸನಂದನಾದ್ಯಾ ಹ್ಯತಿನಮ್ರಕಂಧರಾ
ಧರಾಧರಂ ಧೀರತರೋದ್ಧತೇಕ್ಷಣಂ ॥ ೩೦ ॥

---

೨೮. ವರಾಹಸ್ವಾಮಿಯ ಗೊರಸಿನ ತುದಿಯ ಏಟಿನಿಂದ ಬಿರುಕುಬಿಟ್ಟ ರಸಾತಲದ ಬಿರುಕಿನಿಂದ ನೀರು ಶಬ್ದಮಾಡಿಕೊಂಡು ಹೊರಟಿತು. ಉಸುರಿನ ಗಾಳಿಯು ನೀರನ್ನು ಎರಚಿದರೆ ಆ ನೀರಿನ ಹನಿಗಳು ಜನೋಲೋಕದಲ್ಲಿ ಸಿದ್ಧರು ವಾಸಮಾಡುವ ವಾಸಸ್ಥಾನಗಳವರೆಗೂ ಹೋದುವು.

೨೯. ಭೂಮಿಯನ್ನೆತ್ತಿಕೊಂಡು ಸಮುದ್ರದಲ್ಲಿ ಮೇಲಕ್ಕೆ ಏಳುತ್ತಿದ್ದ ವರಾಹ ಸ್ವಾಮಿಯು ತನ್ನ ನೀರಿನಲ್ಲಿ ನೆನೆದ ಶರೀರವನ್ನು ಕೊಡಹುತ್ತಲು ವೇದಸ್ವರೂಪ ವಾದ ಆ ಶರೀರವನ್ನು ರೋಮಗಳ ನಡುವೆ ಸೇರಿದ ಜನಲೋಕದ ಮುನಿಗಳು ಸ್ತೋತ್ರಮಾಡುತ್ತಲಿದ್ದರು, ಅಂದರೆ ಮಹಾವರಾಹನ ರೋಮಗಳು ಜನಲೋಕದ ವರೆಗೂ ಪ್ರಸರಿಸಿದ್ದುವೆಂದು ಭಾವವು.

೩೦. ಜನಲೋಕದಲ್ಲಿ ವಾಸಮಾಡುವ ಸನಂದನಾದಿ ಯೋಗಿಗಳು ತಮ್ಮ ಕುತ್ತಿಗೆಗಳನ್ನು ಬಗ್ಗಿಸಿ ಸಂತೋಷದ ಮನಸ್ಸಿನಿಂದ ಕೂಡಿ ಉದಾರವಾದ ನೋಟ ವುಳ್ಳ ಆ ವರಾಹಸ್ವಾಮಿಯನ್ನು ಸ್ತೋತ್ರಮಾಡಿದರು.

ಜಯೇಶ್ವರಾಣಾಂ ಪರಮೇಶ ಕೇಶವ
ಪ್ರಭೋ ಗದಾಶಂಖಧರಾಸಿಚಕ್ರಭೃತ್ ।
ಪ್ರಸೂತಿನಾಶಸ್ಥಿತಿಹೇತುರೀಶ್ವರ
ಸ್ತ್ವಮೇವ ನಾನ್ಯತ್ಪರಮಂ ಚ ಯತ್ಪದಂ ॥ ೩೧ ॥

ಪಾದೇಷು ವೇದಾಸ್ತವ ಯೂಪದಂಷ್ಟ್ರ
ದಂತೇಷು ಯಜ್ಞಾಶ್ಚಿತಯಶ್ಚ ವಕ್ತ್ರೇ ।
ಹುತಾಶಜಿಹ್ವೋಽಸಿ ತನೂರುಹಾಣಿ
ದರ್ಭಾಃ ಪ್ರಭೋ ಯಜ್ಞಪುಮಾಂ ಸ್ತ್ವಮೇವ ॥ ೩೨ ॥

ವಿಲೋಚನೇ ರಾತ್ರ್ಯಹನೀ ಮಹಾತ್ಮ
ನ್ಸರ್ವಾತ್ಮಕಂ ಬ್ರಹ್ಮಪರಂ ಶಿರಸ್ತೇ ।
ಸೂಕ್ತಾನ್ಯಶೇಷಾಣಿ ಸಟಾಕಲಾಪೋ
ಘ್ರಾಣಂ ಸಮಸ್ತಾನಿ ಹವೀಂಷಿ ದೇವ ॥ ೩೩ ॥

---

೩೧. ಬ್ರಹ್ಮಾದಿ ತ್ರಿಮೂರ್ತಿಗಳಿಗೂ ಸ್ವಾಮಿಯಾದವನೇ ಯಾವಾಗಲೂ ಶಂಖ ಚಕ್ರ ಗದಾ ಖಡ್ಗಗಳನ್ನು ಧರಿಸಿದವನೇ ಪರಮೇಶ್ವರನಾದ ನಿನಗೆ ಜಯವಾಗಲಿ. ನೀನೇ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ಕಾರಣನಾಗಿರುವೆ. ನಿನಗಿಂತ ಶ್ರೇಷ್ಟವಾದ ತತ್ವವಾವುದೂ ಇಲ್ಲದಿರುವುದರಿಂದ ನೀನೇ ಪರಬ್ರಹ್ಮನಾಗಿರುವೆ.

೩೨–೩೩. ಹೇ ಸ್ವಾಮಿಯೇ ನಿನ್ನ ನಾಲ್ಕು ಪಾದಗಳೇ ವೇದಗಳು. ನಿನ್ನ ಕೋರೆದಾಡೆಯೇ ಯೂಪಸ್ತಂಭವು, ನಿನ್ನ ಹಲ್ಲುಗಳೇ ಯಜ್ಞಗಳು ನಿನ್ನ ಬಾಯಿಯೇ ಶ್ಯೇನಕಂಕ ಮುಂತಾದ ಚಯನಗಳ ಸ್ಥಾನವಾಗಿರುವುದು. ನಿನ್ನ ನಾಲಗೆಯೇ ಅಗ್ನಿಯು. ನಿನ್ನ ಶರೀರದ ಕೂದಲುಗಳೇ ದರ್ಭೆಗಳು ಆಗಿರುವುದರಿಂದ ನೀನೇ ಯಜ್ಞಪುರುಷನಾಗಿರುವೆ. ನಿನ್ನ ಕಣ್ಣುಗಳೇ ಹಗಲು ರಾತ್ರಿಗಳು. ನಿನ್ನ ಶಿರಸ್ಸೇ ಪರಬ್ರಹ್ಮ ತತ್ವವು. ಕುತ್ತಿಗೆಯ ಕೂದಲುಗಳೇ ಸಮಸ್ತ ವೇದಸೂಕ್ತಗಳು. ಮೂಗೇ ಗಂಧವತ್ವ ಸಾಮ್ಯದಿಂದ ಸಮಸ್ತವಾದ ಹವಿಸ್ಸುಗಳಾಗಿರುವುವು.

ಸ್ರುಕ್ತುಂಡಸಾಮಸ್ವರಧೀರನಾದ
ಪ್ರಾಗ್ವಂಶಕಾಯಾಖಿಲಸತ್ರಸಂಧೇ ।
ಪೂರ್ತೇಷ್ಟಧರ್ಮಶ್ರವಣೋಽಸಿ ದೇವ
ಸನಾತನಾತ್ಮನ್ ಭಗವನ್ ಪ್ರಸೀದ ॥ ೩೪ ॥

ಪದಕ್ರಮಾಕ್ರಾಂತಭುವಂ ಭವಂತ
ಮಾದಿಸ್ಥಿತಿಂ ಚಾಕ್ಷರವಿಶ್ವಮೂರ್ತೇ ।
ವಿಶ್ವಸ್ಯ ವಿದ್ಮಃ ಪರಮೇಶ್ವರೋಽಸಿ
ಪ್ರಸೀದ ನಾಥೋಽಸಿ ಚರಾಚರಸ್ಯ ॥ ೩೫ ॥

ದಂಷ್ಟ್ರಾಗ್ರವಿನ್ಯಸ್ತಮಶೇಷಮೇತ
ದ್ಭೂಮಂಡಲಂ ನಾಥ ವಿಭಾವ್ಯತೇ ತೇ ।
ವಿಗಾಹತಃ ಪದ್ಮವನಂ ವಿಲಗ್ನಂ
ಸರೋಜಿನೀಪತ್ರಮಿವೋಢಪಂಕಂ ॥ ೩೬ ॥

೩೪–೩೫. ಹೋಮಮಾಡುವ ಸ್ರುಕ್ಕೆಂಬ ಪಾತ್ರೆಯಂತೆ ಮುಖವುಳ್ಳವನೇ, ಸಾಮಗಾನದಂತೆ ಗಂಭೀರವಾದ ನಾದ ಉಳ್ಳವನೇ, ಯಜ್ಞಶಾಲೆಯ ಪೂರ್ವಭಾಗ ದಂತೆ ಶರೀರ ಮಧ್ಯಪ್ರದೇಶ ಉಳ್ಳವನೇ ಸತ್ರಗಳೆಂಬ ಸಂಧಿಬಂಧಗಳುಳ್ಳವನೇ, ಇಷ್ಟಾಪೂರ್ತ ಕರ್ಮಗಳೆಂಬ ಕಿವಿಗಳುಳ್ಳವನೇ ನಿತ್ಯಸ್ವರೂಪನಾದ ನೀನು ಪ್ರಸನ್ನ ನಾಗು. ನಾಶರಹಿತನಾದ ಪ್ರಪಂಚರೂಪನಾದ ಪಾದವಿನ್ಯಾಸದಿಂದ ಭೂಮಿಯನ್ನಾ ಕ್ರಮಿಸಿದ ನಿನ್ನನ್ನು ಪ್ರಪಂಚದ ಸೃಷ್ಟಿ ಸ್ಥಿತಿಗಳಿಗೆ ಕಾರಣನೆಂದು ತಿಳಿದಿರುವೆವು. ಈ ಚರಾಚರ ಪ್ರಪಂಚಕ್ಕೆ ಸ್ವಾಮಿಯಾದ ನೀನು ಪರಮೇಶ್ವರನಾಗಿರುವೆ. ಎಂದು ಪ್ರಾರ್ಥಿಸುವೆವು. ಆದುದರಿಂದ ನಮ್ಮಲ್ಲಿ ಅನುಗ್ರಹವನ್ನು ಮಾಡು.

೩೬. ನಿನ್ನ ಕೋರದಾಡೆಯ ಮೇಲಿರುವ ಭೂಮಂಡಲವು ಕಮಲ ವನು ವನ್ನು ಪ್ರವೇಶಿಸಿ ಕ್ರೀಡಿಸುತ್ತ ಗಜೇಂದ್ರನು ಸೊಂಡಲಿನಿಂದ ಎತ್ತಿಹಿಡಿದ ಕೆಸರು ಬಳಿದುಕೊಂಡಿರುವ ಕಮಲದ ಎಲೆಯಂತೆ ಶೋಭಿಸುತ್ತಿರುವುದು.

ದ್ಯಾವಾಪೃಥಿವ್ಯೋರತುಲಪ್ರಭಾವ
ಯದಂತರಂ ತದ್ವಪುಷಾ ತವೈವ ।
ವ್ಯಾಪ್ತಂ ಜಗದ್ವ್ಯಾಪ್ತಿಸಮರ್ಥದೀಪ್ತೇ
ಹಿತಾಯ ವಿಶ್ವಸ್ಯ ವಿಭೋ ಭವತ್ವಂ ॥ ೩೭ ॥

ಪರಮಾರ್ಥಸ್ತ್ವಮೇವೈಕೋ ನಾನ್ಯೋಽಸ್ತಿ ಜಗತಃ ಪತೇ ।
ತವೈವ ಮಹಿಮಾ ಯೇನ ವ್ಯಾಪ್ತಮೇತಚ್ಚರಾಚರಂ ॥ ೩೮ ॥

ಯದೇತದ್ದೃಶ್ಯತೇ ಮೂರ್ತಮೇತಜ್ಜ್ಞಾನಾತ್ಮನಸ್ತವ ।
ಭ್ರಾಂತಿಜ್ಞಾನೇನ ಪಶ್ಯಂತಿ ಜಗದ್ರೂಪಮಯೋಗಿನಃ ॥ ೩೯ ॥

ಜ್ಞಾನಸ್ವರೂಪಮಖಿಲಂ ಜಗದೇತದಬುದ್ಧಯಃ ।
ಅರ್ಥಸ್ವರೂಪಂ ಪಶ್ಯಂತೋ ಭ್ರಾಮ್ಯಂತೆ ಮೋಹಸಂಪ್ಲವೇ ॥ ೪೦ ॥

---

೩೭. ಲೋಕವನ್ನೆಲ್ಲ ಆವರಿಸಿರುವ ಪ್ರಕಾಶ ಸಾಮರ್ಥ್ಯವುಳ್ಳ ಸ್ವಾಮಿಯೇ ಭೂಮಿಗೂ ಸ್ವರ್ಗಕ್ಕೂ ನಡುವೆ ಇರುವ ಆಕಾಶ ಪ್ರದೇಶವೆಲ್ಲವೂ ಮಹಾಮಹಿಮೆಯುಳ್ಳ ನಿನ್ನ ಶರೀರದಿಂದಲೇ ವ್ಯಾಪಿಸಿರುವುದು. ಇಂತಹ ಸರ್ವವ್ಯಾಪಿಯಾದ ನೀನು ಈ ಜಗತ್ತಿಗೆ ಹಿತವನ್ನುಂಟುಮಾಡು.

೩೮-೪೦. ಲೋಕಕ್ಕೆಲ್ಲ ಸ್ವಾಮಿಯಾದ ನೀನೊಬ್ಬನೇ ಪರಮಾರ್ಥ ತತ್ವ ಸ್ವರೂಪನು. ಮತ್ತೊಂದು ಪರಮಾರ್ಥ ತತ್ವವಿಲ್ಲ ಈ ಚರಾಚರ ಪ್ರಪಂಚವನ್ನು ವ್ಯಾಪಿಸಿರುವುದು. ನಿನ್ನ ಮಹಿಮೆಯೇ ಯೋಗಿಗಳಲ್ಲದವರು ಈ ಜಗತ್ತಿನ ಸ್ವರೂಪವನ್ನು ಭ್ರಾಂತಿಯಿಂದ ಪಂಚಭೂತಾತ್ಮಕವೆಂದು ತಿಳಿಯುತ್ತಾರೆ. ಜ್ಞಾನ ಸ್ವರೂಪವಾದ ಈ ಸಮಸ್ತ ಪ್ರಪಂಚವನ್ನೂ ಬುದ್ಧಿಹೀನರು ಪದಾರ್ಥರೂಪಗಳಿಂದ ನೋಡುತ್ತ ಮೋಹಮಯವಾದ ಸಂಸಾರಸಮುದ್ರದಲ್ಲಿ ಸುತ್ತುತ್ತಿರುವರು.

ಯೇ ತು ಜ್ಞಾನವಿದಶ್ಶುದ್ಧಚೇತಸಸ್ತೇಽಖಿಲಂ ಜಗತ್ ।
ಜ್ಞಾನಾತ್ಮಕಂ ಪ್ರಪಶ್ಯಂತಿ ತ್ವದ್ರೂಪಂ ಪರಮೇಶ್ವರ ॥ ೪೧ ॥

ಪ್ರಸೀದ ಸರ್ವ ಸರ್ವಾತ್ಮನ್ ವಾಸಾಯ ಜಗತಾಮಿಮಾಂ ।
ಉದ್ಧರೋರ್ವೀಮಮೇಯಾತ್ಮನ್ ಶಂ ನೋ ದೇಹ್ಯಬ್ಜಲೋಚನ ॥ ೪೨ ॥

ಸತ್ತ್ವೋದ್ರಿಕ್ತೋಽಸಿ ಭಗವನ್ ಗೋವಿಂದ ಪೃಥಿವೀಮಿಮಾಂ ।
ಸಮುದ್ಧರ ಭವಾಯೇಶ ಶಂ ನೋ ದೇಹ್ಯಬ್ಜಲೋಚನ ॥ ೪೩ ॥

ಸರ್ಗಪ್ರವೃತ್ತಿರ್ಭವತೋ ಜಗತಾಮುಪಕಾರಿಣೀ ।
ಭವತ್ವೇಷಾ ನಮಸ್ತೇಽಸ್ತು ಶಂ ನೋ ದೇಹ್ಯಬ್ಜಲೋಚನ ॥ ೪೪ ॥

॥ ಶ್ರೀ ಪರಾಶರಃ ॥

ಏವಂ ಸಂಸ್ತೂಯಮಾನಸ್ತು ಪರಮಾತ್ಮಾ ಮಹೀಧರಃ ।
ಉಜ್ಜಹಾರ ಕ್ಷಿತಿಂ ಕ್ಷಿಪ್ರಂ ನ್ಯಸ್ತವಾಂಶ್ಚ ಮಹಾಂಭಸಿ ॥ ೪೫ ॥

೪೧–೪೪. ಹೇ ಪರಮೇಶ್ವರನೇ ಜ್ಞಾನಿಗಳಾದವರು ಶುದ್ಧವಾದ ಮನಸ್ಸಿನಿಂದ ಈ ಪ್ರಪಂಚವನ್ನೆಲ್ಲ ಜ್ಞಾನಸ್ವರೂಪಿಯಾದ ನಿನ್ನ ರೂಪವೆಂದೇ ತಿಳಿಯುವರು. ಸಮಸ್ತ ವಸ್ತುಸ್ವರೂಪನೂ ಸರ್ವಾತ್ಮಸ್ವರೂಪನೂ ಅಳತೆಗೆ ಸಿಕ್ಕದವನೂ ಆದ ಕಮಲಲೋಚನನಾದ ವಿಷ್ಣುವೇ ನೀನು ಪ್ರಸನ್ನನಾಗು. ಸಮಸ್ತ ಜಗತ್ತಿನ ಸ್ಥಿತಿಗಾಗಿ ಈ ಭೂಮಿಯನ್ನು ಎತ್ತಿ ನಮಗೆ ಸುಖವನ್ನುಂಟುಮಾಡು. ಮಹಾಮಹಿಮನಾದ ಗೋವಿಂದನೇ ನೀನು ವಿಶೇಷವಾದ ಸತ್ವಗುಣದಿಂದ ಕೂಡಿದವನು. ಈಶ್ವರನಾದ ನೀನು ಪುನಃ ಪ್ರಪಂಚ ಸೃಷ್ಟಿಗಾಗಿ ಈ ಭೂಮಿಯನ್ನು ಉದ್ಧಾರಮಾಡಿ ನಮಗೆ ಸುಖವನ್ನುಂಟುಮಾಡು. ನಿನ್ನ ಸೃಷ್ಟಿಸ್ಥಿತಿಕಾರ್ಯಗಳು ಲೋಕಕ್ಕೆ ಉಪಕಾರವನ್ನುಂಟುಮಾಡಲಿ. ನಿನಗೆ ನಮಸ್ಕಾರವನ್ನು ಮಾಡುವೆವು. ಕಮಲಲೋಚನನಾದ ನೀನು ನಮಗೆ ಸುಖವನ್ನುಂಟುಮಾಡು.

೪೫–೪೮. ಪರಾಶರರು ಹೇಳುವರು:—ಹೀಗೆ ಜನೋಲೋಕವಾಸಿಗಳು ಸ್ತೋತ್ರಮಾಡುತ್ತಿರಲು ವರಾಹರೂಪಿಯಾದ ಪರಮಾತ್ಮನು ಬೇಗ ಭೂಮಿಯನ್ನೆತ್ತಿ

ತಸ್ಯೋಪರಿ ಜಲೌಘಸ್ಯ ಮಹತೀ ನೌರಿವ ಸ್ಥಿತಾ ।
ವಿತತತ್ವಾತ್ತು ದೇವಸ್ಯ ನ ಮಹೀ ಯಾತಿ ಸಂಪ್ಲವಂ ॥ ೪೬ ॥

ತತಃ ಕ್ಷಿತಿಂ ಸಮಾಂ ಕೃತ್ವಾ ಪೃಥಿವ್ಯಾಂ ಸೋಽಚಿನೋದ್ಗಿರೀನ್ ।
ಯಥಾ ವಿಭಾಗಂ ಭಗವಾನ್ ಅನಾದಿಃ ಪರಮೇಶ್ವರಃ ॥ ೪೭ ॥

ಪ್ರಾಕ್ಸರ್ಗದಗ್ಧಾನಖಿಲಾನ್ ಪರ್ವತಾನ್ ಪೃಥಿವೀತಲೇ ।
ಅಮೋಘೇನ ಪ್ರಭಾವೇಣ ಸಸರ್ಜಾಮೋಘವಾಂಛಿತಃ ॥ ೪೮ ॥

ಭೂಮಿಭಾಗಂ ತತಃ ಕೃತ್ವಾ ಸಪ್ತದ್ವೀಪಾನ್ ಯಥಾತಥಂ ।
ಭೂರಾದ್ಯಾಂಶ್ಚತುರೋ ಲೋಕಾನ್ಪೂರ್ವವತ್ಸಮಕಲ್ಪಯತ್ ॥ ೪೯ ॥

ಬ್ರಹ್ಮರೂಪಧರೋ ದೇವಸ್ತತೋಽಸೌ ರಜಸಾವೃತಃ ।
ಚಕಾರ ಸೃಷ್ಟಿಂ ಭಗವಾಂಶ್ಚತುರ್ವಕ್ತ್ರಧರೋ ಹರಿಃ ॥ ೫೦ ॥

ಆ ಮಹಾಸಮುದ್ರದ ಮೇಲೆ ಇರಿಸಿದನು. ಆ ಭೂಮಿಯು ಆ ಜಲರಾಶಿಯ ಮೇಲೆ ದೊಡ್ಡ ನಾವೆಯಂತೆ ತೇಲಾಡುತ್ತಿದ್ದಿತು. ಆ ಭೂಮಿಯ ಶರೀರವು ವಿಸ್ತಾರವಾಗಿದ್ದುದರಿಂದ ಮತ್ತೆ ಸಮುದ್ರದಲ್ಲಿ ಮುಳುಗಲಿಲ್ಲ. ಆಮೇಲೆ ಭೂತಲವನ್ನು ಸಮವಾಗಿ ಮಾಡಿ ಅಲ್ಲಲ್ಲಿ ಪರ್ವತಗಳನ್ನು ಅದರದರ ವಿಭಾಗಕ್ಕನುಸಾರವಾಗಿ ಮಹಾಮಹಿಮನೂ ಅನಾದಿಯೂ ಆದ ಆ ಪರಮೇಶ್ವರನೇ ವಿಸ್ತರಿಸಿದನು. ಹಿಂದಿನ ಸೃಷ್ಟಿಯಲ್ಲಿದ್ದು ಸುಟ್ಟುಹೋದ ಸಮಸ್ತ ಪರ್ವತಗಳನ್ನೂ ತನ್ನ ಮಹಾಮಹಿಮೆಯಿಂದ ಭೂಮಂಡಲದಲ್ಲಿ ಸೃಷ್ಟಿಸಿದನು.

೪೯-೫೦. ಆ ದೇವನೇ ಹಿಂದಿನಂತೆ ಭೂಮಿಯಲ್ಲಿ ಸಪ್ತದ್ವೀಪಗಳನ್ನೂ ಭೂರ್ಭುವಸ್ಸ್ವರ್ಲೋಕ ಮಹೋಲೋಕಗಳನ್ನೂ ಸಂಕಲ್ಪಮಾತ್ರದಿಂದಲೇ ಕಲ್ಪಿಸಿದನು. ರಜೋಗುಣದಿಂದ ಕೂಡಿ ನಾಲ್ಕು ಮುಖವುಳ್ಳ ಬ್ರಹ್ಮನಾಗಿ ಸೃಷ್ಟಿಕಾರ್ಯವನ್ನು ಮಾಡಿದನು.

ನಿಮಿತ್ತಮಾತ್ರಮೇವಾಸೌ ಸೃಜ್ಯಾನಾಂ ಸರ್ಗಕರ್ಮಣಿ ।
ಪ್ರಧಾನಕಾರಣೀಭೂತಾ ಯತೋ ವೈ ಸೃಜ್ಯಶಕ್ತಯಃ ॥ ೫೧ ॥

ನಿಮಿತ್ತಮಾತ್ರಂ ಮುಕ್ತ್ವೈವಂ ನಾನ್ಯತ್ಕಿಂಚಿದಪೇಕ್ಷತೇ ।
ನೀಯತೇ ತಪತಾಂ ಶ್ರೇಷ್ಠ ಸ್ವಶಕ್ತ್ಯಾ ವಸ್ತುವಸ್ತುತಾಂ ॥ ೫೨ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಚತುರ್ಥೋಽಧ್ಯಾಯಃ

---

೫೧. ಆ ಮಹಾಮಹಿಮನಾದ ವಿಷ್ಣುವು ಸೃಷ್ಟಿಕಾರ್ಯದಲ್ಲಿ ಸಾನ್ನಿಧ್ಯರೂಪವಾದ ನಿಮಿತ್ತ ಕಾರಣಮಾತ್ರವಾಗಿರುವನು. ಆವನ ಶಕ್ತಿರೂಪವಾದು ಪ್ರಕೃತಿಯೇ ಸೃಷ್ಟಿಸಬೇಕಾದ ವಸ್ತುಗಳಿಗೆ ಉಪದಾನಕಾರಣವಾಗಿರುವುದು.

೫೨. ತಪಸ್ವಿಗಳಲ್ಲಿ ಶ್ರೇಷ್ಠನಾದ ಮೈತ್ರೇಯನೇ ಸೃಷ್ಟಿಸಬೇಕಾದ ನಿವಸ್ತುಗಳ ಬೀಜದಲ್ಲಿರುವ ಸೂಕ್ಷ್ಮವಾದ ಅಂಕುರಶಕ್ತಿಯು. ಮಳೆಯಿಂದ ಪರಿಣಾಮವಾಗಿ (ಉಬ್ಬಿ) ಸ್ಥೂಲವಾದ ಮರವಾಗುವಂತೆ ಪರಮಾತ್ಮನ ಸಾನ್ನಿಧ್ಯದಿಂದ ಸೂಕ್ಷ್ಮವಾಗಿ ಸಂಸ್ಕಾರರೂಪದಲ್ಲಿದ್ದ ಪ್ರಕೃತಿರೂಪವಾದ ಆತ್ಮಶಕ್ತಿಯು ಪ್ರಕಟವಾಗಿ ಸ್ಥೂಲವಾದ ಪ್ರಪಂಚರೂಪವಾಗುವುದು.

ಎಂಬಲ್ಲಿಗೆ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಪಂಚಮೋಽಧ್ಯಾಯಃ

॥ ಮೈತ್ರೇಯಃ ॥

ಯಥಾ ಸಸರ್ಜ ದೇವೋಽಸೌ ದೇವರ್ಷಿಪಿತೃದಾನವಾನ್ ।
ಮನುಷ್ಯತಿರ್ಯಗ್ವೃಕ್ಷಾದೀನ್ ಭೂವ್ಯೋಮಸಲಿಲೌಕಸಃ ॥ ೧ ॥

ಯದ್ಗುಣಂ ಯತ್ಸ್ವಭಾವಂ ಚ ಯತ್ಸ್ವರೂಪಂ ಜಗದ್ದ್ವಿಜ ।
ಸರ್ಗಾದೌ ಸೃಷ್ಟವಾನ್ಬ್ರಹ್ಮಾ ತನ್ಮಮಾಚಕ್ಷ್ವ ವಿಸ್ತರಾತ್ ॥ ೨ ॥

॥ ಶ್ರೀ ಪರಾಶರಃ ॥

ಮೈತ್ರೇಯ ಕಥಯಾಮ್ಯೇತಚ್ಛೃಣುಷ್ವ ಸುಸಮಾಹಿತಃ ।
ಯಥಾ ಸಸರ್ಜ ದೇವೋಽಸೌ ದೇವಾದೀನಖಿಲಾನ್ವಿಭುಃ ॥ ೩ ॥

ಐದನೆಯ ಅಧ್ಯಾಯವು

೧–೨. ಮೈತ್ರೇಯನು "ಪರಾಶರ ಮಹರ್ಷಿಯೇ ಸೃಷ್ಟಿಯ ಪ್ರಾರಂಭದಲ್ಲಿ ಬ್ರಹ್ಮನು, ದೇವತೆಗಳು, ಮುನಿಗಳು, ದಾನವರು, ಮನುಷ್ಯರು ತಿರ್ಯಗ್ಯೋನಿಗಳಾದ ಪ್ರಾಣಿಗಳು, ಸಸ್ಯಗಳು, ಭೂಮಿ, ಅಂತರಿಕ್ಷ, ನೀರು ಇವುಗಳಲ್ಲಿ ವಾಸಮಾಡುವ ಪ್ರಾಣಿಗಳು ಇವುಗಳನ್ನು ಹೇಗೆ ಸೃಷ್ಟಿಸಿದನು ? ಅವುಗಳ ಗುಣ ಸ್ವರೂಪ ಸ್ವಭಾವ ಇವುಗಳನ್ನು ನನಗೆ ಹೇಳಬೇಕು" ಎಂದು ಪ್ರಶ್ನೆ ಮಾಡಿದನು.

೩–೪. ಪರಾಶರನು ಹೇಳುವನು:—ಮೈತ್ರೇಯನೇ ಸರ್ವವ್ಯಾಪಿಯಾದ ಪರಮಾತ್ಮನು ದೇವಾದಿಗಳನ್ನು ಹೇಗೆ ಸೃಷ್ಟಿಮಾಡಿದನೆಂಬುದನ್ನು ಹೇಳುವೆನು.

ಸೃಷ್ಟಿಂ ಚಿಂತಯತಸ್ತಸ್ಯ ಸರ್ಗಾದಿಷು ಯಥಾ ಪುರಾ ।
ಅಬುದ್ಧಿಪೂರ್ವಕಸ್ಸರ್ಗಃ ಪ್ರಾದುರ್ಭೂತಸ್ತಮೋಮಯಃ ॥ ೪ ॥

ತಮೋ ಮೋಹೋ ಮಹಾಮೋಹಸ್ತಾಮಿಸ್ರೋ ಹ್ಯಂಧಸಂಜ್ಞಿತಃ ।
ಅವಿದ್ಯಾಪಂಚ ಪರ್ವೈಷಾ ಪ್ರಾದುರ್ಭೂತಾ ಮಹಾತ್ಮನಃ ॥ ೫ ॥

ಪಂಚಧಾವಸ್ಥಿತಸ್ಸರ್ಗೋ ಧ್ಯಾಯತೋ ಪ್ರತಿಬೋಧವಾನ್ ।
ಬಹಿರಂತಶ್ಚಾಪ್ರಕಾಶಸ್ಸಂವೃತಾತ್ಮಾ ನಗಾತ್ಮಕಃ ॥ ೬ ॥

ಚೆನ್ನಾಗಿ ಗಮನವಿಟ್ಟು ಕೇಳು. ಸೃಷ್ಟಿಯ ಪ್ರಾರಂಭದಲ್ಲಿ ಹಿಂದಿನ ಕಲ್ಪದಂತೆ ಸೃಷ್ಟಿಯನ್ನು ಮಾಡಬೇಕೆಂದು ಯೋಚಿಸುತ್ತಿದ್ದ ಪರಮಾತ್ಮನಿಗೆ ಅನಾಸಕ್ತಿಯಿಂದ ಕೂಡಿದ ಅವಿದ್ಯಾವೃತ್ತಿರೂಪವಾದ ಸೃಷ್ಟಿಯು ವ್ಯಕ್ತವಾಯಿತು. ಆ ಮಹಾಮಹಿಮನ ದೆಸೆಯಿಂದ ತಮ, ಮೋಹ, ಮಹಾಮೋಹ, ತಾಮಿಸ್ರ, ಅಂಧತಾಮಿಸ್ರ ಎಂಬ ಐದುಬಗೆಯ ಅವಿದ್ಯೆಯ ವೃತ್ತಿಗಳು ವ್ಯಕ್ತವಾದುವು. ಇಲ್ಲಿ ತಮವೆಂಬುದು ಅನಾತ್ಮರೂಪವಾದ ದೇಹಾದಿಗಳಲ್ಲಿ ಆತ್ಮಾಭಿಮಾನವು. ಮೋಹವೆಂಬುದು ತನ್ನ ಸಂಬಂಧಿಗಳಾದ ಪುತ್ರಾದಿಗಳಲ್ಲಿ ನಾನೇ ಇವರ ರಕ್ಷಕನೆಂಬ ಅಭಿಮಾನವು. ಮಹಾಮೋಹವೆಂಬುದು ಇಂದ್ರಿಯ ಸುಖಾಭಿಲಾಷೆಯು. ತಾಮಿಸ್ರವೆಂಬುದು ಸುಖಪ್ರತಿ ಬಂಧಕವಾದಲ್ಲಿ ಉಂಟಾಗುವ ಕ್ರೋಧವು. ಅಂಧತಾಮಿಸ್ರವೆಂಬುದು ಸುಖಸಾಧನವಾದ ಪದಾರ್ಥಗಳು ನಾಶವಾದೀತೆಂಬ ಸಂದೇಹದಿಂದ ಅವುಗಳನ್ನು ರಕ್ಷಣೆ ಮಾಡುವುದೇ ಮುಂತಾವುಗಳಲ್ಲಿರುವ ಆಸಕ್ತಿಯು. ಈ ಐದನ್ನೂ ಪತಂಜಲಿಮುನಿಯು ಯೋಗಸೂತ್ರದಲ್ಲಿ "ಅವಿದ್ಯಾ ಮಮತಾಸ್ಮಿತರಾಗ ದ್ವೇಷಾಭಿನಿವೇಶಾಃ ಪಂಚಕ್ಲೇಶಾಃ" ಎಂದು ಹೇಳಿರುವುದು.

೬–೭. ಪರಮಾತ್ಮನು ಸೃಷ್ಟಿಮಾಡಬೇಕೆಂದು ಯೋಚಿಸುತ್ತಿರಲು ಸ್ಥಾವರರೂಪವಾದ ಐದು ಬಗೆಯ ಸೃಷ್ಟಿಯು ವ್ಯಕ್ತವಾಯಿತು. ಈ ಐದು ಬಗೆಯ ಸ್ಥಾವರ ಸೃಷ್ಟಿಯನ್ನು ವೃಕ್ಷ ಗುಲ್ಮ ಲತಾ ವೀರುತ್ ತೃಣ ಎಂದು ಪಂಚಮಾಂಶದಲ್ಲಿ ಹೇಳಿರುವುದು. ನಾನು ಇಂಥವನೆಂಬ ತಿಳವಳಿಕೆಯಿಲ್ಲದ ಹೊರಗಿನ ಶಬ್ದಾದಿ

ಮುಖ್ಯಾ ನಗಾ ಯತಶ್ಚೋಕ್ತಾ ಮುಖ್ಯಸರ್ಗಸ್ತತಸ್ಸ್ಮೃತಃ ॥ ೭ ॥

ತಂ ದೃಷ್ಟ್ವಾಽಸಾಧಕಂ ಸರ್ಗಮಮನ್ಯತ ಪರಂ ಪುನಃ ॥ ೮ ॥

ತಸ್ಯಾಭಿಧ್ಯಾಯತಸ್ಸರ್ಗಸ್ತಿರ್ಯಕ್ಸ್ರೋತಾಭ್ಯವರ್ತತ ।
ಯಸ್ಮಾತ್ತಿರ್ಯಕ್ಪ್ರವೃತ್ತಿಸ್ಸ ತಿರ್ಯಕ್ಸ್ರೋತಾಸ್ತತಸ್ಸ್ಮೃತಃ ॥ ೯ ॥

ಪಶ್ವಾದಯಸ್ತೇ ವಿಖ್ಯಾತಾಸ್ತಮಃಪ್ರಾಯಾ ಹ್ಯವೇದಿನಃ ।
ಉತ್ಪಥಗ್ರಾಹಿಣಶ್ಚೈವ ತೇಽಜ್ಞಾನೇ ಜ್ಞಾನಮಾನಿನಃ ॥ ೧೦ ॥

ವಿಷಯಗಳಲ್ಲಿಯೂ ಒಳಗಿನ ಸುಖಾದಿಗಳ ವಿಷಯಗಳಲ್ಲಿಯೂ ಜ್ಞಾನವಿಲ್ಲದ ಮೂಢ ಸ್ವಭಾವವೇ ಸ್ಥಾವರರೂಪವು. ಬ್ರಹ್ಮಸೃಷ್ಟಿಯಲ್ಲಿ ಸ್ಥಾವರಸೃಷ್ಟಿಯೇ ಮೊದಲನೆಯದಾದುದರಿಂದ ಇದನ್ನೇ ಮುಖ್ಯ ಸೃಷ್ಟಿಯೆಂದು ಹೇಳಿದೆ. ಪರ್ವತಗಳು ಸ್ಥಾವರಗಳೇ ಆದರೂ ಬ್ರಹ್ಮಸೃಷ್ಟಿಗಿಂತ ಮುಂಚಿತವಾಗಿಯೇ ವರಾಹರೂಪಿಯಾದ ವಿಷ್ಣುವಿನಿಂದ ಸೃಷ್ಟಿಯಾದುದರಿಂದ ಅವುಗಳನ್ನು ಈ ಗುಂಪಿನಲ್ಲಿ ಸೇರಿಸಲಿಲ್ಲ

೮-೧೧. ಬ್ರಹ್ಮನು ಸ್ಥಾವರ ಸೃಷ್ಟಿಯನ್ನು ಇವು ಪುರುಷಾರ್ಥ ಸಾಧಕವಲ್ಲವೆಂದು ತಿಳಿದು ಬೇರೆ ಸೃಷ್ಟಿಯನ್ನು ಮಾಡಬೇಕೆಂದು ಯೋಚಿಸಿದನು. ಹೀಗೆ ಯೋಚಿಸುತ್ತಿರಲು ಆಹಾರಪಾನಗಳಲ್ಲಿ ಆಸಕ್ತಿಯುಳ್ಳ ಪಶ್ವಾದಿಗಳು ವ್ಯಕ್ತವಾದುವು. ಈ ತಿರ್ಯಗ್ಯೋನಿಗಳಾದ ಪಶುಪಕ್ಷಿಮೃಗಾದಿಗಳು ತಮೋಗುಣ ಪ್ರಧಾನವಾದವುಗಳು ತಿಳಿವಳಿಕೆಯಿಲ್ಲದವುಗಳು. ಯುಕ್ತಾಯುಕ್ತ ಪರಿಜ್ಞಾನವಿಲ್ಲದೆ ಮನಬಂದಂತೆ ನಡೆಯತಕ್ಕವು. ಅಜ್ಞಾನವನ್ನೇ ಜ್ಞಾನವೆಂದು ತಿಳಿದುಕೊಂಡಿರತಕ್ಕವುಗಳು. ಅಹಂಕಾರದಿಂದ ತಾನೇ ಹೆಚ್ಚೆಂದು ತಿಳಿದುಕೊಂಡಿರುವುವು. ಇಪ್ಪತ್ತೆಂಟು ಬಗೆಯ ನಾಶಸ್ವಭಾವವುಳ್ಳವುಗಳು. ತಂತಮ್ಮ ಸುಖವಿಷಯಗಳ ಜ್ಞಾನ ಮಾತ್ರ ಉಳ್ಳವುಗಳು ತಂತಮ್ಮಲ್ಲಿ ಪರಸ್ಪರ ಸುಗುಣ, ದುರ್ಗಣಗಳನ್ನೂ ಪಿತೃ ಪುತ್ರಾದಿ ಸಂಬಂಧಗಳನ್ನೂ ಅರಿಯದವು. (ಇಪ್ಪತ್ತೆಂಟು ಬಗೆಯ ನಾಶಸ್ವಭಾವಗಳನ್ನು ವಾಯು ಪುರಾಣದಲ್ಲಿಯೂ ಸಾಂಖ್ಯಶಾಸ್ತ್ರದಲ್ಲಿಯೂ ಹೇಳಿರುವುದು. ಅವಾವುವೆಂದರೆ, ಜ್ಞಾನಕರ್ಮೇಂದ್ರಿಯ ಮನಸ್ಸು ಎಂಬ ಹನ್ನೊಂದು ಇಂದ್ರಿಯವಧ ಎಂದರೆ, ಇಂದ್ರಿಯಗಳ ಶಕ್ತಿಯಿಲ್ಲ

ಅಹಂಕೃತಾ ಅಹಂಮಾನಾ ಅಷ್ಟಾವಿಂಶದ್ವಧಾತ್ಮಕಾಃ ।
ಅಂತಃ ಪ್ರಕಾಶಾಸ್ತೇ ಸರ್ವೇ ಹ್ಯಾವೃತಾಶ್ಚ ಪರಸ್ಪರಂ ॥ ೧೧ ॥

ತಮುಸ್ಯಸಾಧಕಂ ಮತ್ವಾ ಧ್ಯಾಯತೋಽನ್ಯಸ್ತತೋಽಭವತ್ ।
ಊರ್ಧ್ವಸ್ರೋತಾಸ್ತೃತೀಯಸ್ತು ಸಾತ್ತ್ವಿಕೋರ್ಧ್ವಮವರ್ತತ ॥ ೧೨ ॥

ದಿರುವುದು. ಕಿವುಡು ಕುರುಡು ಮುಂತಾದುವು. ನವತುಷ್ಟಿಗಳು, ಅಷ್ಟಸಿದ್ಧಿಗಳು ಸೇರಿ ಹದಿನೇಳು. ಇವೆರಡೂ ಕೂಡಿ ಇಪ್ಪತ್ತೆಂಟಾಗುವುವು. ಇವುಗಳಲ್ಲಿ ಹದಿನೇಳು ಬುದ್ಧಿವಧಾರೂಪವಾದುವು. ನವತುಷ್ಟಿಗಳಲ್ಲಿ ಪಕ್ವತಿಯಲ್ಲಿ ಚಿತ್ತಲಯದಿಂದ ಮುಕ್ತನಾದೆನೆಂದು ತಿಳಿವುದು ಪ್ರಕೃತಿಸೃಷ್ಟಿಯು. ಸನ್ಯಾಸವೇಷ ಗ್ರಹಣಮಾತ್ರದಿಂದ ಮುಕ್ತನಾದನೆಂದು ತಿಳಿವುದು ಉಪಾದಾನ ತುಷ್ಟಿಯು. ಕಾಲಬಂದಾಗ ಮುಕ್ತಿಯಾಗುತ್ತದೆ. ಧ್ಯಾನಾದಿಗಳಿಂದೇನು ಪ್ರಯೋಜನವೆಂದು ತಿಳಿವುದು ಕಾಲತುಷ್ಟಿಯು. ಪುಣ್ಯಫಲಬಂದಾಗ ಮುಕ್ತಿಯಾಗುವುದೆಂದು ತಿಳಿಸುವುದು, ಭಾಗ್ಯತುಷ್ಟಿಯು. ಈ ನಾಲ್ಕು ಆಧ್ಯಾತ್ಮಿಕ ತುಷ್ಟಿಗಳು ಧನವನ್ನು ಸಂಪಾದಿಸುವುದು, ರಕ್ಷಿಸುವುದು, ವೆಚ್ಚಮಾಡುವುದು ಇವುಗಳಲ್ಲಿ ದೋಷವನ್ನು ಕಂಡು ಶಬ್ದಾದಿ ಪಂಚ ವಿಷಯಗಳನ್ನು ತ್ಯಜಿಸುವುದರಿಂದುಂಟಾದ ಐದು ತುಷ್ಟಿಗಳು ಬಾಹ್ಯವಿಷಯವಾದುವುಗಳು ಹೀಗೆ ಒಂಭತ್ತು ತುಷ್ಟಿಗಳನ್ನು ಹೇಳಿದುದಾಯಿತು. ಅಷ್ಟಸಿದ್ಧಿಗಳಾವುವೆಂದರೆ ಉಪದೇಶವಿಲ್ಲದೆ ಅರ್ಥವನ್ನು ತಿಳಿವುದು ಊಹಾ ಸಿದ್ಧಿ. ಶಬ್ದವನ್ನು ಕೇಳಿದುದರಿಂದ ಅರ್ಥಜ್ಞಾನವುಂಟಾಗುವುದು ಶಬ್ದ ಸಿದ್ಧಿ. ಗುರೂಪದೇಶದಿಂದಲೇ ಹೆಚ್ಚು ವಿಷಯಗಳನ್ನು ತಿಳಿವುದು ಅಧ್ಯಯನ ಸಿದ್ಧಿ. ಆಧ್ಯಾತ್ಮಿಕಾದಿ ದುಃಖತ್ರಯನಾಶದಿಂದ ಮೂರು ಸಿದ್ಧಿಗಳು. ಮಿತ್ರನ ಪ್ರಾರ್ಥನೆಯಿಂದ ಅರ್ಥಸಿದ್ಧಿ ವಿದ್ವಾಂಸರು, ತಪಸ್ವಿಗಳು ಇವರ ಸೇವೆಯಿಂದುಂಟಾಗುವ ಅರ್ಥಸಿದ್ಧಿ ಹೀಗೆ ಸಿದ್ಧಿಗಳು ಎಂಟು ಬಗೆಗಳು. ಈ ಸಿದ್ಧಿಗಳಿಗೆ ತಾರ, ಸುತರ ಮುಂತಾದ ಬೇರೆ ಬೇರೆ ಹೆಸರುಗಳೂ ಅವುಗಳ ಭೇದಗಳೂ ಶಾಸ್ತ್ರಾಂತರದಲ್ಲಿರುವುವು ಅವನ್ನು ಅಲ್ಲಿಯೇ ತಿಳಿಯಬೇಕು.)

೧೨-೧೪. ತಿರ್ಯಗ್ಸ್ರೋತಸಿಯ ಪ್ರಾಣಿಗಳನ್ನು ಸೃಷ್ಟಿಸಿ ಬ್ರಹ್ಮನು ಇವೂ ಪುರುಷಾರ್ಥ ಸಾಧಕವಲ್ಲವೆಂದು ತಿಳಿದು ಧ್ಯಾನಾಸಕ್ತನಾಗಲು ಮೂರನೆಯದಾದ

ತೇ ಸುಖಪ್ರೀತಿಬಹುಲಾ ಬಹಿರಂತಶ್ಚ ನಾವೃತಾಃ ।
ಪ್ರಕಾಶಾ ಬಹಿರಂತಶ್ಚ ಊರ್ಧ್ವಸ್ರೋತೋದ್ಭವಾಸ್ಸ್ಮೃತಾಃ ॥ ೧೩ ॥

ತುಷ್ಟಾತ್ಮನಸ್ತೃತೀಯಸ್ತು ದೇವಸರ್ಗಸ್ತು ಸಸ್ಮೃತಃ ।
ತಸ್ಮಿನ್ ಸರ್ಗೇಽಭವತ್ಪ್ರೀತಿರ್ನಿಷ್ಪನ್ನೇ ಬ್ರಹ್ಮಣಸ್ತದಾ ॥ ೧೪ ॥

ತತೋಽನ್ಯಂ ಸ ತದಾ ದಧ್ಯೌ ಸಾಧಕಂ ಸರ್ಗಮುತ್ತಮಂ ।
ಅಸಾಧಕಾಂಸ್ತು ತಾನ್ ಜ್ಞಾತ್ವಾ ಮುಖ್ಯಸರ್ಗಾದಿಸಂಭವಾನ್ ॥ ೧೫ ॥

ತಥಾಭಿಧ್ಯಾಯತಸ್ತಸ್ಯ ಸತ್ಯಾಭಿಧ್ಯಾಯಿನಸ್ತತಃ ।
ಪ್ರಾದುರ್ಭೂತಸ್ತದಾವ್ಯಕ್ತಾದರ್ವಾಕ್ಸ್ರೋತಾಸ್ತು ಸಾಧಕಃ ॥ ೧೬ ॥

ಸುಖಾಧಿಕ್ಯವುಳ್ಳ ಊರ್ಧ್ವ ಸ್ರೋತ ಪ್ರಾಣಿಗಳು ಅಂದರೆ ದೇಹದ ಹೊರಗೇ ಆಹಾರ ಗ್ರಹಣಮಾಡುವ ಅಥವಾ ಭೂಮಿ ಸ್ಪರ್ಶವಿಲ್ಲದ ದೇವಯೋನಿ ವಿಶೇಷಗಳು ವ್ಯಕ್ತವಾದುವು, 'ಶ್ರುತಿಯಲ್ಲಿ ನಹವೈದೇವಾ ಅಶ್ನಂತಿ ನಪಿಬಂತ್ಯೇತದೇವಾಮೃತಂ ದೃಷ್ಟ್ವಾ ತೃಪ್ಯಂತಿ' ಎಂದು ಹೇಳಿರುವುದರಿಂದ ದೇವತೆಗಳಿಗೆ ಅಮೃತದರ್ಶನದಿಂದಲೇ ತೃಪ್ತಿಯಾಗುವುದೆಂದು ತಿಳಿಯಬೇಕು. ಆ ದೇವತೆಗಳು ಸತ್ವಗುಣಾಧಿಕ್ಯವುಳ್ಳವ ರಾದುದರಿಂದ ವಿಷಯೇಂದ್ರಿಯ ಸಂಯೋಗದಿಂದುಂಟಾದ ಸಂತೋಷವನ್ನು ವಿಶೇಷವಾಗಿ ಹೊಂದುವರು. ಅವರು ಹೊರಗೂ ಒಳಗೂ ಪ್ರಕಾಶಸ್ವರೂಪರಾಗಿ ಆವರಣವಿಲ್ಲದವರಾಗಿರುವರು. ಸಂತೋಷ ಸ್ವಭಾವದವರು ಆದುದರಿಂದ ಊರ್ಧ್ವ ಸ್ರೋತವೆಂಬ ಈ ಮೂರನೆಯದಾದ ದೇವತೆಗಳ ಸೃಷ್ಟಿಯಿಂದ ಬ್ರಹ್ಮನಿಗೆ ಸಂತೋಷವೂ ಪ್ರೀತಿಯೂ ಉಂಟಾಯಿತು.

೧೫-೧೬. ಆಮೇಲೆ ಬ್ರಹ್ಮನು ಈ ಸೃಷ್ಟಿಯೂ ಪುರುಷಾರ್ಥ ಸಾಧಕವಲ್ಲ ವೆಂದು ತಿಳಿದು ಉತ್ತಮವಾದ ಸೃಷ್ಟಿಯನ್ನು ಮಾಡಬೇಕೆಂದು ಧ್ಯಾನಾಸಕ್ತನಾದನು. ಸತ್ಯ ಸಂಕಲ್ಪನಾದ ಬ್ರಹ್ಮನು ಧ್ಯಾನಮಾಡುತ್ತಿರಲು ಅವ್ಯಕ್ತವೆಂಬ ಪ್ರಕೃತಿಯ ದೆಸೆಯಿಂದ ಪುರುಷಾರ್ಥ ಸಾಧಕವಾದ ಅರ್ವಾಕ್ ಸ್ರೋತವೆಂದರೆ ಭೂಮಿಯ ಮೇಲೆ ಆಹಾರಾದಿಗಳಿಂದ ಜೀವಿಸುವ ಮನುಷ್ಯ ಯೋನಿಗಳು ವ್ಯಕ್ತವಾದುವು.

ಯಸ್ಮಾದರ್ವಾಗ್ವ್ಯವರ್ತಂತ ತತೋಽರ್ವಾಕ್ಸ್ರೋತಸಸ್ತು ತಾಃ ।
ತೇ ಚ ಪ್ರಕಾಶಬಹುಳಾಸ್ತಮೋದ್ರಿಕ್ತಾ ರಜೋಽಧಿಕಾಃ ॥ ೧೭ ॥

ತಸ್ಮಾತ್ತೇ ದುಃಖಬಹುಳಾ ಭೂಯೋ ಭೂಯಶ್ಚ ಕಾರಿಣಃ ।
ಪ್ರಕಾಶಾಬಹಿರಂತಶ್ಚ ಮನುಷ್ಯಾಸ್ಸಾಧಕಾಸ್ತು ತೇ ॥ ೧೮ ॥

ಇತ್ಯೇತೇ ಕಥಿತಾಸ್ಸರ್ಗಾಷ್ಷಡೇತೇ ಮುನಿಸತ್ತಮ ।
ಪ್ರಥಮೋ ಮಹತಸ್ಸರ್ಗೋ ವಿಜ್ಞೇಯೋ ಬ್ರಹ್ಮಣಸ್ತು ಸಃ ॥ ೧೯ ॥

ತನ್ಮಾತ್ರಾಣಾಂ ದ್ವಿತೀಯಶ್ಚ ಭೂತಸರ್ಗಸ್ತು ಸಂಸ್ಮೃತಃ ।
ವೈಕಾರಿಕಸ್ತೃತೀಯಸ್ತು ಸರ್ಗ ಐಂದ್ರಿಯಕಸ್ಸ್ಮೃತಃ ॥ ೨೦ ॥

೧೭-೧೮. ಭೂಮಿಯಮೇಲೆ ವಾಸಮಾಡುತ್ತ ಆಹಾರವು ಶರೀರದೊಳಗೆ ಪ್ರವೇಶಿಸುವುದರಿಂದ ಅಭಿವೃದ್ಧಿಯಾಗುವುದರಿಂದ ಅರ್ವಾಕ್ ಸ್ರೋತ್ರ ಸೃಷ್ಟಿಯೆಂದು ಮನುಷ್ಯ ಸೃಷ್ಟಿಗೆ ಹೆಸರಾಗಿರುವುದು. ಮನುಷ್ಯರು ಸತ್ವರಜಸ್ತಮೋಗುಣಗಳ ಆಧಿಕ್ಯದಿಂದ ಕೂಡಿದವರು. ತಮೋಗುಣದ ಹೆಚ್ಚಿಗೆಯಿಂದ ವಿಶೇಷವಾದ ದುಃಖವುಳ್ಳವರಾಗಿಯೂ ರಜೋಗುಣದ ಹೆಚ್ಚಿಗೆಯಿಂದ ವಿಶೇಷವಾಗಿ ಕಾರ್ಯಗಳನ್ನು ಮಾಡತಕ್ಕವರಾಗಿಯೂ ಸತ್ವಗುಣಾಧಿಕ್ಯದಿಂದ ವಿಶೇಷ ಜ್ಞಾನವುಳ್ಳವರಾಗಿಯೂ ಕರ್ಮ ಜ್ಞಾನಾಧಿಕಾರಗಳಾದುದರಿಂದ ಇಷ್ಟಾರ್ಥಗಳನ್ನು ಸಾಧಿಸತಕ್ಕವರಾಗಿಯೂ ಇರುವರು.

೧೯-೨೩. ಮುನಿಶ್ರೇಷ್ಠನಾದ ಮೈತ್ರೇಯನೇ ಮಹತ್ತತ್ವ ಪಂಚಭೂತಗಳು ಇಂದ್ರಿಯಗಳು ಎಂಬ ಮೂರು, ಮುಖ್ಯ ತಿರ್ಯಕ್ ಮನುಷ್ಯ ಎಂಬ ಮೂರು ಸೇರಿ ಆರುಬಗೆಯ ಸೃಷ್ಟಿಗಳನ್ನು ಹೇಳಿದೆನು. ಬ್ರಹ್ಮಸೃಷ್ಟಿಯಲ್ಲಿ ಸಮಷ್ಟಿ ಶರೀರಾಭಿಮಾನಿಯಾದ ವಿರಾಟ್ಪುರುಷನೇ ಮಹತ್ತತ್ವವು. ಇದೇ ಮೊದಲನೆಯ ಸೃಷ್ಟಿಯು. ಪಂಚತನ್ಮಾತ್ರಗಳ ಸೃಷ್ಟಿಯೇ ಎರಡನೆಯದು. ಇಂದ್ರಿಯಗಳ ಸೃಷ್ಟಿಯೇ ವೈಕಾರಿಕವೆಂಬ ಮೂರನೆಯ ಸೃಷ್ಟಿಯು. ಇವುಗಳು ಅವಿದ್ಯಾ ಪೂರ್ವಕವಾದ ಪ್ರಾಕೃತ ಸೃಷ್ಟಿಯು ಮುಖ್ಯ ಸೃಷ್ಟಿಯೆಂಬ ಸ್ಥಾವರ ಸೃಷ್ಟಿಯು ನಾಲ್ಕನೆಯದು. ತಿರ್ಯ

ಇತ್ಯೇಷ ಪ್ರಾಕೃತಸ್ಸರ್ಗಸ್ಸಂಭೂತೋ ಬುದ್ಧಿಪೂರ್ವಕಃ ।
ಮುಖ್ಯಸರ್ಗಶ್ಚತುರ್ಥಸ್ತು ಮುಖ್ಯಾ ವೈ ಸ್ಥಾವರಾಸ್ಸ್ಮೃತಾಃ ॥ ೨೧ ॥

ಪಂಚಮಶ್ಚ ಹಿ ಯಃ ಪ್ರೋಕ್ತಸ್ತೈರ್ಯಗ್ಯೋನ್ಯಸ್ಸ ಉಚ್ಯತೇ ।
ತತೋರ್ಧ್ವಸ್ರೋತಸಾಂ ಷಷ್ಠೋ ದೇವಸರ್ಗಸ್ತು ಸಂಸ್ಮೃತಃ ॥ ೨೨ ॥

ತತೋಽರ್ವಾಕ್ಸ್ರೋತಸಾಂ ಸರ್ಗಸ್ಸಪ್ತಮಸ್ಸತು ಮಾನುಷಃ ॥ ೨೩ ॥

ಅಷ್ಟಮೋಽನುಗ್ರಹಸ್ಸರ್ಗಸ್ಸಾತ್ವಿಕಸ್ತಾಮಸಶ್ಚ ಸಃ ।
ಪಂಚೈತೇ ವೈಕೃತಾಸ್ಸರ್ಗಾಃ ಪ್ರಾಕೃತಾಸ್ತು ತ್ರಯಸ್ಸ್ಮೃತಾಃ ॥ ೨೪ ॥

ಗ್ಯೋನಿಗಳ ಸೃಷ್ಟಿಯು ಐದನೆಯದು. ಊರ್ಧ್ವಸ್ರೋತವೆಂಬ ದೇವತೆಗಳ ಸೃಷ್ಟಿಯು ಆರನೆಯದು. ಅರ್ವಾಕ್ ಸ್ರೋತವೆಂಬ ಮನುಷ್ಯ ಸೃಷ್ಟಿಯು ಏಳನೆಯದು.

೨೪–೨೫. ಎಂಟನೆಯದು ಅನುಗ್ರಹ ಸೃಷ್ಟಿಯು. ಇದು ಸಾತ್ವಿಕ ತಾಮಸ ಸ್ವಭಾವವಾದ ಮತ್ತೊಂದು ದೇವತಾ ಸೃಷ್ಟಿಯು ವಾಯು ಪುರಾಣದಲ್ಲಿ ಇದನ್ನು ವಿಪರ್ಯಯ ಅಶಕ್ತಿ, ಸಿದ್ಧಿ, ತುಷ್ಟಿ ಎಂದು ನಾಲ್ಕು ಬಗೆಯಾಗಿ ಹೇಳಿರುವುದು. ಸ್ಥಾವರ ಸೃಷ್ಟಿಯೇ ವಿಪರ್ಯವು. ಇದು ಐದು ಬಗೆ ತಿರ್ಯಗ್ಯೋನಿ ಸೃಷ್ಟಿಯೇ ಅಶಕ್ತಿಯು, ಇದು ಹನ್ನೊಂದು ಬಗೆ ಮನುಷ್ಯ ಸೃಷ್ಟಿಯೇ ಸಿದ್ಧಿಯು. ಇದು ಎಂಟು ಬಗೆ ದೇವ ಸೃಷ್ಟಿಯೇ ತುಷ್ಟಿಯು ಇದು ಒಂಭತ್ತು ಬಗೆಯು ಇದನ್ನು ಹಿಂದೆಯೇ ಹನ್ನೊಂದನೇ ಶ್ಲೋಕ ವಿವರಣೆಯಲ್ಲಿ ಹೇಳಿದೆ. ಇವುಗಳಲ್ಲಿ ಸ್ಥಾವರತಿರ್ಯಗ್ಯೋನಿಗಳು ತಾಮಸಗಳು ಮನುಷ್ಯಸೃಷ್ಟಿಯು ಸಾತ್ವಿಕವು ಮುಖ್ಯ ಸೃಷ್ಟಿಯೇ ಮೊದಲಾದ ಐದು ವಿಕೃತಿ ಸೃಷ್ಟಿಗಳು ಮಹತ್ತತ್ವವೇ ಮೊದಲಾದ ಮೂರು ಪ್ರಕೃತಿ ಸೃಷ್ಟಿಗಳು ಪ್ರಕೃತಿ ವಿಕೃತಿಯೆಂಬ ಕೌಮಾರ ಸೃಷ್ಟಿಯು ಒಂಭತ್ತನೆಯದು. ಪ್ರಜಾಪತಿರೂಪನಾದ ಬ್ರಹ್ಮನ ಈ ಒಂಭತ್ತು ಬಗೆಯ ಸೃಷ್ಟಿಗಳನ್ನು ಹೇಳಿರುವೆನು. (ಒಂಭತ್ತನೆಯದಾದ ಪ್ರಕೃತಿ ವಿಕೃತಿಯೆಂಬ ಕೌಮಾರ ಸೃಷ್ಟಿಯಲ್ಲಿ ನೀಲಲೋಹಿತ ರುದ್ರ ಸನತ್ಕುಮಾರಾದಿ ಸೃಷ್ಟಿಯನ್ನು ಹೇಳಿ ಸನತ್ಕುಮಾರ ಸೃಷ್ಟಿಯನ್ನು ಬ್ರಹ್ಮನು ಮಾಡಿದುದರಿಂದ ವಿಕೃತಿ ಸೃಷ್ಟಿಯೆಂದೂ ನೀಲಲೋಹಿತ ರುದ್ರನು ಸ್ವಾಭಾವಿಕವಾಗಿ

ಪ್ರಾಕೃತೋ ವೈಕೃತಶ್ಚೈವ ಕೌಮಾರೋ ನವಮಸ್ಸ್ಮೃತಃ ।
ಇತ್ಯೇತೇ ವೈ ಸಮಾಖ್ಯಾತಾ ನವಸರ್ಗಾಃ ಪ್ರಜಾಪತೇಃ ॥ ೨೫ ॥

ಪ್ರಾಕೃತಾವ್ವೈಕೃತಾಶ್ಚೈವ ಜಗತೋ ಮೂಲಹೇತವಃ ।
ಸೃಜತೋ ಜಗದೀಶಸ್ಯ ಕಿಮನ್ಯಚ್ಛ್ರೋತುಮಿಚ್ಛಸಿ ॥ ೨೬ ॥

॥ ಮೈತ್ರೇಯಃ ॥

ಸಂಕ್ಷೇಪಾತ್ಕಥಿತಸ್ಸರ್ಗೋ ದೇವಾದೀನಾಂ ತ್ವಯಾ ಮುನೇ ।
ವಿಸ್ತರಾಚ್ಛ್ರೋತುಮಿಚ್ಛಾಮಿ ತ್ವತ್ತೋ ಮುನಿವರೋತ್ತಮ ॥ ೨೭ ॥

॥ ಶ್ರೀ ಪರಾಶರಃ ॥

ಕರ್ಮಭಿರ್ಭಾವಿತಾಃ ಪೂರ್ವೈಃ ಕುಶಲಾಃ ಕುಶಲೈಸ್ತು ತಾಃ ।
ಖ್ಯಾತ್ಯಾ ತಯಾ ಹ್ಯನಿರ್ಮುಕ್ತಾಸ್ಸಂಹಾರೇಪ್ಯುಪಸಂಹೃತಾಃ ॥ ೨೮ ॥

ತಾನೇ ವ್ಯಕ್ತನಾದುದರಿಂದ ಪ್ರಕೃತಿ ಸೃಷ್ಟಿಯೆಂದೂ ಕೆಲವರು ಹೇಳುವರು. ಮತ್ತೆ ಕೆಲವರು ರುದ್ರಸೃಷ್ಟಿಯು ಮತ್ತೊಂದು ವಿಕೃತಿಸೃಷ್ಟಿಗೆ ಕಾರಣವಾದುದರಿಂದ ಪ್ರಕೃತಿ ಸೃಷ್ಟಿಯೆಂದೂ ಸನತ್ಕುಮಾರಾದಿ ನೈಷ್ಠಿಕ ಬ್ರಹ್ಮಚಾರಿಗಳ ಸೃಷ್ಟಿಯು ಬೇರೆ ವಿಕೃತಿ ಸೃಷ್ಟಿಗೆ ಕಾರಣವಲ್ಲದುದರಿಂದ ವಿಕೃತಿ ಸೃಷ್ಟಿಯೆಂದೂ ಹೇಳುವರು.)

೨೬. ಒಟ್ಟಿನಲ್ಲಿ ಸೃಷ್ಟಿಮಾಡಬೇಕೆಂಬ ಸಂಕಲ್ಪವುಳ್ಳ ಈಶ್ವರನಿಗೆ ಪ್ರಕೃತಿ ವಿಕೃತಿ ಸೃಷ್ಟಿಗಳೇ ಜಗತ್ತಿನ ಸೃಷ್ಟಿಗೆ ಮೂಲಕಾರಣಗಳಾಗಿರುವುವು. ಮೈತ್ರೇಯನೇ ನೀನು ಮತ್ತೇನನ್ನು ಕೇಳಬೇಕೆಂದು ಅಪೇಕ್ಷಿಸುವೆ? ಎಂದು ಪರಾಶರು ಹೇಳಿದರು.

೨೭. ಮೈತ್ರೇಯನು "ಮಹಾಮುನಿಯೇ ನೀನು ಸಂಕ್ಷೇಪವಾಗಿ ದೇವತಾದಿಗಳ ಸೃಷ್ಟಿಯನ್ನು ಹೇಳಿರುವೆ. ಅದನ್ನೇ ನನಗೆ ವಿಸ್ತರಿಸಿ ಹೇಳಬೇಕು" ಎಂದನು.

೨೮–೨೯. ಪರಾಶನು ಹೇಳುವನು:—ಬ್ರಹ್ಮಜ್ಞಾನಿಯಾದ ಮೈತ್ರೇಯನೇ ಹಿಂದಿನ ಕಲ್ಪದ ಕೊನೆಯಲ್ಲಿ ಉಂಟಾದ ಪ್ರಾಕೃತ ಪ್ರಳಯದಲ್ಲಿ ಉಪಸಂಹಾರ

ಸ್ಥಾವರಾಂತಾಸ್ಸುರಾದ್ಯಾಶ್ಚ ಪ್ರಜಾ ಬ್ರಹ್ಮಂಶ್ಚತುರ್ವಿಧಾಃ ।
ಬ್ರಹ್ಮಣಃ ಕುರ್ವತಸ್ಸೃಷ್ಟಿಂ ಜಜ್ಞಿರೇ ಮಾನಸಾಸ್ತು ತಾಃ ॥ ೨೯ ॥

ತತೋ ದೇವಾಸುರಪಿತ್ರ್‌ನ್ ಮನುಷ್ಯಾಂಶ್ಚ ಚತುಷ್ಟಯಂ ।
ಸಿಸೃಕ್ಷುರಂಭಾಂಸ್ಯೇತಾನಿ ಸ್ವಮಾತ್ಮಾನಮಯೂಯುಜತ್ ॥ ೩೦ ॥

ಯುಕ್ತಾತ್ಮನಸ್ತಮೋಮಾತ್ರಾ ಹ್ಯುದ್ರಿಕ್ತಾಭೂತ್ಪ್ರಜಾಪತೇಃ ।
ಸಿಸೃಕ್ಷೋರ್ಜಘನಾತ್ಪೂರ್ವಮಸುರಾಜಜ್ಞಿರೇ ತತಃ ॥ ೩೧ ॥

ಉತ್ಸಸರ್ಜ ತತಸ್ತಾಂ ತು ತಮೋ ಮಾತ್ರಾತ್ಮಿಕಾಂ ತನುಂ ।
ಸಾ ತು ತ್ಯಕ್ತಾ ತನುಸ್ತೇನ ಮೈತ್ರೇಯಾಭೂದ್ವಿಭಾವರೀ ॥ ೩೨ ॥

ಮಾಡಿದರೂ ಬಿಡದೆ ಇರುವ ಹಿಂದಿನ ಜನ್ಮದ ಶುಭಾಶುಭ ಕರ್ಮಗಳ ಸಂಸ್ಕಾರದಿಂದ ಕೂಡಿದ ದೇವಾದಿ ಸ್ಥಾವರಾಂತವಾದ ಸುರನರ ತಿರ್ಯಕ್ ಸ್ಥಾವರವೆಂಬ ನಾಲ್ಕು ವಿಧವಾದ ಜೀವರುಗಳನ್ನು ಈ ಕಲ್ಪದಲ್ಲಿ ಸೃಷ್ಟಿಮಾಡಬೇಕೆಂದು ಅಪೇಕ್ಷಿಸುತ್ತಿರುವ ಬ್ರಹ್ಮನಿಗೆ ಮಾನಸಪುತ್ರರು ಹುಟ್ಟಿದರು.

೩೦-೩೨. ಆಮೇಲೆ ಬ್ರಹ್ಮನು ದೇವತೆಗಳು ಅಸುರರು ಪಿತೃಗಳು ಮನುಷ್ಯರು ಎಂಬ ಅಂಭಸ್ ಎಂಬ ಸಂಜ್ಞೆಯುಳ್ಳ ನಾಲ್ಕು ಬಗೆಯ ಪ್ರಾಣಿಗಳನ್ನು ತನ್ನ ಶರೀರದಿಂದ ಸೃಷ್ಟಿಮಾಡಬೇಕೆಂದು ಮನಸ್ಸುಮಾಡಿದನು. “ ತಾನಿವಾ ಏತಾನಿ ಚತ್ವಾರ್ಯಂಭಾಂಸಿ ದೇವಾ ಮನುಷ್ಯಾಪಿತರೋ ಸುರಾಇತಿ” ಎಂಬ ವೇದವಚನದಿಂದ ದೇವಾದಿಗಳಿಗೆ ಅಂಭಸ್ ಎಂಬ ಸಂಜ್ಞೆಯು ಬಂದಿರುವುದು. ಹೀಗೆ ಸೃಷ್ಟಿಮಾಡ ಬೇಕೆಂದು ಮನಸ್ಸುಮಾಡಿದ ಬ್ರಹ್ಮನ ತಮೋಗುಣದ ಆ ವೇಶದಿಂದ ಅವನ ಸೊಂಟ ದಿಂದ ಮೊದಲು ಅಸುರರು ಹುಟ್ಟಿದರು. ಆಮೇಲೆ ಬ್ರಹ್ಮನು ತನ್ನ ತಮೋ ಮ ಯ ವಾದ ಶರೀರವನ್ನು ಬಿಟ್ಟುಬಿಟ್ಟನು. ಆ ಬಿಟ್ಟ ಶರೀರವೇ ರಾತ್ರಿಯಾಯಿತು.

ಸಿಸೃಕ್ಷೋರನ್ಯದೇಹಸ್ಥಃ ಪ್ರೀತಿಮಾಪತತಸ್ಸುರಾಃ ।
ಸತ್ತ್ವೋದ್ರಿಕ್ತಾಸ್ಸಮುದ್ಭೂತಾ ಮುಖತೋ ಬ್ರಹ್ಮಣೋ ದ್ವಿಜ ॥ ೩೩ ॥

ತ್ಯಕ್ತಾ ಸಾಪಿ ತನುಸ್ತೇನ ಸತ್ತ್ವಪ್ರಾಯಮಭೂದ್ದಿನಂ ।
ತತೋ ಹಿ ಬಲಿನೋ ರಾತ್ರಾವಸುರಾ ದೇವತಾ ದಿವಾ ॥ ೩೪ ॥

ಸತ್ತ್ವಮಾತ್ರಾತ್ಮಿಕಾಮೇವ ತತೋಽನ್ಯಾಂಸ ಜಗೃಹೇ ತನುಂ ।
ಪಿತೃವನ್ಮನ್ಯಮಾನಸ್ಯ ಪಿತರಸ್ತಸ್ಯ ಜಜ್ಞಿರೇ ॥ ೩೫ ॥

ಉತ್ಸಸರ್ಜ ಪಿತೄನ್ ಸೃಷ್ಟ್ವಾ ತತಸ್ತಾಮಪಿ ಸ ಪ್ರಭುಃ ।
ಸಾ ಚೋತ್ಸೃಷ್ಟಾಭವತ್ಸಂಧ್ಯಾ ದಿನನಕ್ತಾಂತರಸ್ಥಿತಾ ॥ ೩೬ ॥

೩೩-೩೪. ತರುವಾಯ ಬ್ರಹ್ಮನು ಮತ್ತೊಂದು ಶರೀರದಲ್ಲಿ ಸೃಷ್ಟಿ ಮಾಡಬೇಕೆಂದು ಅಪೇಕ್ಷಿಸಿ ಸತ್ವಗುಣಾಧಿಕ್ಯದಿಂದ ಕೂಡಿರಲು ಆ ಬ್ರಹ್ಮನ ಮುಖದಿಂದ ದೇವತೆಗಳು ಹುಟ್ಟಿದರು. ಬಳಿಕ ಬ್ರಹ್ಮನು ಸತ್ವಗುಣಾಧಿಕವಾದ ಶರೀರವನ್ನು ಬಿಟ್ಟುಬಿಡಲು ಅದು ಪ್ರಕಾಶಸ್ವರೂಪವಾದ ಹಗಲಾಯಿತು. ಆ ಕಾರಣದಿಂದ ರಾತ್ರಿಯಲ್ಲಿ ಅಸುರರೂ ಹಗಲಿನಲ್ಲಿ ದೇವತೆಗಳೂ ಬಲವುಳ್ಳವರಾದರು. (ರಾಕ್ಷಸರ ಪೂಜೆಯನ್ನು ರಾತ್ರಿಯಲ್ಲಿಯೂ ದೇವತೆಗಳ ಪೂಜೆಯನ್ನು ಹಗಲಿನಲ್ಲಿಯೂ ಮಾಡಬೇಕೆಂದು ಇದರ ಅಭಿಪ್ರಾಯವು.)

೩೫-೩೬. ಆಮೇಲೆ ಬ್ರಹ್ಮನು ಸತ್ವಗುಣಮಾತ್ರ ಪ್ರಧಾನವಾದ ಮತ್ತೊಂದು ಶರೀರವನ್ನು ಗ್ರಹಿಸಿ ಜಗತ್ತಿಗೆ ತಾನೇ ಪಿತೃವೆಂದು ತಿಳಿದುಕೊಳ್ಳುತ್ತಲು ಅವನ ಪಾರ್ಶಗಳಿಂದ ಪಿತೃದೇವತೆಗಳು ಉತ್ಪತ್ತಿಯಾದರು. ಆ ಬ್ರಹ್ಮನು ಪಿತೃದೇವತೆಗಳನ್ನು ಸೃಷ್ಟಿಮಾಡಿದಮೇಲೆ ಆ ಶರೀರವನ್ನು ಬಿಟ್ಟುಬಿಟ್ಟನು. ಆ ಬಿಟ್ಟ ಶರೀರವು ಹಗಲು ರಾತ್ರಿಗಳ ನಡುವೆ ಇರುವ ಸಂಧ್ಯಾಕಾಲವಾಯಿತು.

ರಜೋಮಾತ್ರಾತ್ಮಿಕಾಮನ್ಯಾಂ ಜಗೃಹೇ ಸತನುಂ ತತಃ ।
ರಜೋಮಾತ್ರೋತ್ಕಟಾ ಜಾತಾ ಮನುಷ್ಯಾ ದ್ವಿಜಸತ್ತಮ ॥ ೩೭ ॥

ತಾಮಪ್ಯಾಶು ಸ ತತ್ಯಾಜ ತನುಂ ಸದ್ಯಃ ಪ್ರಜಾಪತಿಃ ।
ಜ್ಯೋತ್ಸ್ನಾ ಸಮಭವತ್ಸಾಪಿ ಪ್ರಾಕ್ಸಂಧ್ಯಾ ಯಾಭಿಧೀಯತೇ ॥ ೩೮ ॥

ಜ್ಯೋತ್ಸ್ನಾಗಮೇ ತು ಬಲಿನೋ ಮನುಷ್ಯಾಃ ಪಿತರಸ್ತಥಾ ।
ಮೈತ್ರೇಯ ಸಂಧ್ಯಾ ಸಮಯೇ ತಸ್ಮಾದೇತೇ ಭವಂತಿ ವೈ ॥ ೩೯ ॥

ಜ್ಯೋತ್ಸ್ನಾ ರಾತ್ರ್ಯಹನೀ ಸಂಧ್ಯಾ ಚತ್ವಾರ್ಯೇತಾನಿ ವೈ ವಿಭೋಃ ।
ಬ್ರಹ್ಮಣಸ್ತು ಶರೀರಾಣಿ ತ್ರಿಗುಣೋಪಾಶ್ರಯಾಣಿ ತು ॥ ೪೦ ॥

ರಜೋಮಾತ್ರಾತ್ಮಿಕಾಮೇವ ತತೋಽನ್ಯಾಂ ಜಗೃಹೇ ತನುಂ ।
ತತಃ ಕ್ಷುದ್ಬ್ರಹ್ಮಣೋ ಜಾತಾ ಜಜ್ಞೇ ಕೋಪಸ್ತಯಾ ತತಃ ॥ ೪೧ ॥

೩೭-೩೯. ಬಳಿಕ ಬ್ರಹ್ಮನು ರಜೋಗುಣ ಮಾತ್ರ ಪ್ರಧಾನವಾದ ಮತ್ತೊಂದು ಶರೀರವನ್ನು ಗ್ರಹಿಸಿ ಸೃಷ್ಟಿ ಸಂಕಲ್ಪವನ್ನು ಮಾಡುತ್ತಲು ಆ ಶರೀರದಿಂದ ರಜೋಗುಣವೇ ಅಧಿಕವಾಗುಳ್ಳ ಮನುಷ್ಯರು ಹುಟ್ಟಿದರು. ಮೈತ್ರೇಯನೇ ಬ್ರಹ್ಮನು ಆ ಕ್ಷಣದಲ್ಲಿಯೇ ಆ ಶರೀರವನ್ನು ಬಿಟ್ಟುಬಿಟ್ಟನು. ಅದು ಪ್ರಾತಃಕಾಲದ ಬೆಳದಿಂಗಳಾಯಿತು. (ಇವುಗಳಲ್ಲೆಲ್ಲ ಶರೀರತ್ಯಾಗವೆಂಬುದು ಮನೋವೃತ್ತಿ ತ್ಯಾಗವೆಂದು ತಿಳಿಯಬೇಕು) ಆದುದರಿಂದ ಮನುಷ್ಯರು ಪ್ರಾತಃಕಾಲದಲ್ಲಿಯೂ ಪಿತೃಗಳು ಸಂಧ್ಯಾ ಸಮಯದಲ್ಲಿಯೂ ಬಲಶಾಲಿಗಳಾಗಿರುವರು.

೪೦. ಪ್ರಾತಃಕಾಲ, ರಾತ್ರಿ, ಹಗಲು, ಸಂಧ್ಯಾ ಈ ನಾಲ್ಕೂ ಸೃಷ್ಟಿಕರ್ತನಾದ ಬ್ರಹ್ಮನ ತ್ರಿಗುಣಾತ್ಮಕವಾದ ಶರೀರಗಳು ಉಪಾಸಕರ ಉಪಾಸನಾರ್ಥವಾಗಿ ಹೀಗೆ ಹೇಳಿರುವುದು.

೪೧-೪೩. ಆಮೇಲೆ ಬ್ರಹ್ಮನು ರಜೋಗುಣ ಮಾತ್ರವಾದ ಮತ್ತೊಂದು ಶರೀರವನ್ನು ಗ್ರಹಿಸಿದನು. ಅದರಿಂದ ಬ್ರಹ್ಮನಿಗೆ ಹಸಿವು ಉಂಟಾಯಿತು. ಆ

ಕ್ಷುತ್ಕ್ಷಾಮಾನಂಧಕಾರೇಽಥ ಸೋಽಸೃಜದ್ಭಗವಾನ್ಪ್ರಭುಃ ।
ವಿರೂಪಾಶ್ಮಶ್ರುಲಾ ಜಾತಾಸ್ತೇಽಭ್ಯಧಾವಂಸ್ತತಃ ಪ್ರಭುಂ ॥ ೪೨ ॥

ಮೈವಂ ಭೋ ರಕ್ಷ್ಯತಾಮೇಷ ಯೈರುಕ್ತಂ ರಾಕ್ಷಸಾಸ್ತು ತೇ ।
ಊಚುರ್ಜಕ್ಷಾಮ ಇತ್ಯನ್ಯೇ ಯೇ ತೇ ಯಕ್ಷಾಸ್ತು ಜಕ್ಷಣಾತ್ ॥ ೪೩ ॥

ಅಪ್ರಿಯೇಣ ತು ತಾನ್ದೃಷ್ಟ್ವಾ ಕೇಶಾಃಶೀರ್ಯಂತ ವೇಧಸಃ ।
ಹೀನಾಶ್ಚ ಶಿರಸೋ ಭೂಯಃ ಸಮಾರೋಹಂತ ತಚ್ಛಿರಃ ॥ ೪೪ ॥

ಸರ್ಪಣಾತ್ತೇಽಭವನ್ ಸರ್ಪಾ ಹೀನತ್ವಾದಹಯಸ್ಸ್ಮೃತಾಃ ।
ತತಃ ಕ್ರುದ್ಧೋ ಜಗತ್ಸ್ರಷ್ಟಾ ಕ್ರೋಧಾತ್ಮಾನೋ ವಿನಿರ್ಮಮೇ ॥
ವರ್ಣೇನ ಕಪಿಶೇನೋಗ್ರಾ ಭೂತಾಸ್ತೇ ಪಿಶಿತಾಶನಾಃ ॥ ೪೫ ॥

ಹಸಿವಿನಿಂದ ಕೋಪವೂ ಹುಟ್ಟಿತು. ಬಳಿಕ ಮಹಾಮಹಿಮನಾದ ಬ್ರಹ್ಮನು ಕತ್ತಲೆಯಲ್ಲಿ ಹಸಿವಿನಿಂದ ಕೃಶವಾದ ಪ್ರಾಣಿಗಳನ್ನು ಸೃಷ್ಟಿಸಿದನು. ಆ ಪ್ರಾಣಿಗಳು ವಿಕಾರವಾಗಿಯೂ ಮುಖದಲ್ಲಿ ವಿಶೇಷವಾದ ಮೀಸೆಯ ಕೂದಲುಗಳುಳ್ಳವರಾಗಿಯೂ ಹುಟ್ಟಿದರು. ಅವರು ಆ ಬ್ರಹ್ಮನನ್ನೇ ತಿನ್ನಬೇಕೆಂದು ಓಡಿಬಂದರು. ಅವರಲ್ಲಿ ಕೆಲವರು ಬ್ರಹ್ಮನನ್ನು ತಿನ್ನಬೇಡಿ ರಕ್ಷಿಸಿ ಎಂದು ಹೇಳಿದವರು ರಾಕ್ಷಸರಾದರು. ಜಕ್ಷಾಮಃ ಎಂದರೆ ತಿನ್ನೋಣ ಎಂದು ಹೇಳಿದವರು ಯಕ್ಷರಾದರು. ಇಲ್ಲಿ 'ಪರೋಕ್ಷ ಪ್ರಿಯಾ ಇವಹಿ ದೇವಾಃ' ಎಂಬ ಶ್ರುತಿಯಂತೆ ಜಕಾರ ಸ್ಥಾನದಲ್ಲಿ ಯಕಾರವು ಬಂದಿದೆ. ಆ ಕಾರಣದಿಂದಲೇ ಜಕ್ಷರೆಂದು ಹೇಳುವುದಕ್ಕೆ ಬದಲಾಗಿ ಯಕ್ಷರೆಂದು ಹೇಳುತ್ತಾರೆ.

೪೪–೪೬. ಆ ಸೃಷ್ಟಿಸಿದ ಪ್ರಾಣಿಗಳನ್ನು ಕಂಡು ಬ್ರಹ್ಮನು ಸಂತೋಷವಿಲ್ಲದವನಾದನು. ಈ ಕಾರಣದಿಂದ ಆ ಬ್ರಹ್ಮನ ತಲೆಯ ಕೂದಲುಗಳು ಬಿದ್ದು ಹೋದುವು. ಬಳಿಕ ಮತ್ತೆ ತಲೆಯನ್ನೇರಿದುವು. ಆ ತಲೆಯ ಕೂದಲುಗಳು ತಲೆಯಿಂದಿಳಿದು ಹೀನವಾದುದರಿಂದ ಅಹಿಗಳೆಂದೂ ಸರ್ಪಣವೆಂದರೆ ತಲೆಯನ್ನೇರಿದುದರಿಂದ ಸರ್ಪಗಳೆಂದೂ ಹೆಸರನ್ನು ಪಡೆದುವು. ಬ್ರಹ್ಮನು ಕೋಪದಿಂದ ಕೋಪ

ಧ್ಯಾಯತೋಽಂಗಾತ್ಸಮುತ್ಪನ್ನಾ ಗಂಧರ್ವಾಸ್ತಸ್ಯ ತತ್ಕ್ಷಣಾತ್ ।
ಪಿಬಂತೋ ಜಜ್ಞಿರೇ ಗಾಂ ವೈ ಗಂಧರ್ವಾಸ್ತೇನ ತೇ ದ್ವಿಜ ॥ ೪೬ ॥

ಏತಾನಿ ಸೃಷ್ಟ್ವಾ ಭಗವಾನ್ಬ್ರಹ್ಮಾ ತಚ್ಛಕ್ತಿಚೋದಿತಃ ।
ತತಸ್ಸ್ವಚ್ಛಂದತೋಽನ್ಯಾನಿ ವಯಾಂಸಿ ವಯಸೋಽಸೃಜತ್ ॥ ೪೭ ॥

ಅವಯೋ ವಕ್ಷಸಶ್ಚಕ್ರೇ ಮುಖತೋಽಜಾಸ್ಸಸೃಷ್ಟವಾನ್ ।
ಸೃಷ್ಟವಾನುದರಾದ್ಗಾಶ್ಚ ಪಾರ್ಶ್ವಾಭ್ಯಾಂ ಚ ಪ್ರಜಾಪತಿಃ ॥ ೪೮ ॥

ಪದ್ಭ್ಯಾಂ ಚಾಶ್ವಾನ್ಸಮಾತಂಗಾನ್ ರಾಸಭಾನ್ ಗವಯಾನ್ಮೃಗಾನ್ ।
ಉಷ್ಟ್ರಾನಶ್ವತರಾಂಶ್ಚೈವ ನ್ಯಂಕೂನನ್ಯಾಶ್ಚ ಜಾತಯಃ ॥ ೪೯ ॥

ಓಷಧ್ಯಃ ಫಲಮೂಲಿನ್ಯೋ ಲೋಮಭ್ಯಸ್ತಸ್ಯ ಜಜ್ಞಿರೇ ।
ತ್ರೇತಾಯುಗಮುಖೇ ಬ್ರಹ್ಮಾ ಕಲ್ಪಸ್ಯಾದೌ ದ್ವಿಜೋತ್ತಮ ॥

ಸ್ವಭಾವದ ಇವುಗಳನ್ನು ಸೃಷ್ಟಿಸಿದನು. ಮೈತ್ರೇಯನೇ ಗಾಂ ಎಂದರೆ ವಾಕ್ಕನ್ನ ಧಯತಃ ಎಂದರೆ ಪಾನಮಾಡುವವರು ಎಂದರೆ ಗಾನಮಾಡುವವರು ಎಂಬ ಅರ್ಥದಿಂದ ಆ ಬ್ರಹ್ಮನ ಶರೀರದಿಂದ ಗಂಧರ್ವರು ಹುಟ್ಟಿದರು.

೪೭–೫೦. ಮಹಾಮಹಿಮನಾದ ಬ್ರಹ್ಮನು ಆ ಪ್ರಾಣಿಗಳ ಪೂರ್ವಕರ್ಮ ರೂಪವಾದ ಶಕ್ತಿಗಳಿಂದ ಪ್ರೇರಿತನಾಗಿ ಈ ಪ್ರಾಣಿಗಳನ್ನೆಲ್ಲ ಸೃಷ್ಟಿಸಿ ಆಮೇಲೆ ಅವರವರ ಕರ್ಮವಶದಿಂದ ಹುಟ್ಟಿದ ತನ್ನ ಬುದ್ಧಿಯಿಂದ ದೇವತೆಗಳ ಆಕಾಶಗಮನಾದಿ ಅವಸ್ಥಾವಿಶೇಷಗಳಿಂದ ಕೂಡಿದ ಪಕ್ಷಿಗಳನ್ನು ಸೃಷ್ಟಿಸಿದನು. ಬಳಿಕ ಬ್ರಹ್ಮನು ತನ್ನ ಎದೆಯಿಂದ ಕುರಿಗಳನ್ನೂ, ಮುಖದಿಂದ ಆಡುಗಳನ್ನೂ, ಹೊಟ್ಟೆಯಿಂದಲೂ ಪಕ್ಕೆಗಳಿಂದಲೂ ಗೋವುಗಳನ್ನೂ, ಪಾದಗಳಿಂದ ಕುದುರೆಗಳನ್ನೂ, ಆನೆ, ಕತ್ತೆ, ಗವಯವೆಂಬ ಹಸುವಿನ ಜಾತಿಯ ಪ್ರಾಣಿ, ಜಿಂಕೆ, ಒಂಟೆ, ಹೇಸರಕತ್ತೆ, ಸಾರಂಗ ಮುಂತಾದ ಮೃಗಗಳ ಜಾತಿಗಳನ್ನೂ ಸೃಷ್ಟಿಸಿದನು. ಅವನ ಲೋಮಗಳಿಂದ ಓಷಧಿಗಳೂ ಕಂದಮೂಲ ಫಲಗಳೂ ಹುಟ್ಟಿದುವು. ಕೃತಯುಗದಲ್ಲಿ ಯಜ್ಞಗಳಿಲ್ಲ

ಸೃಷ್ಟ್ವಾ ಪಶ್ವೌಷಧೀಸ್ಸಮ್ಯಗ್ಯುಯೋಜ ಸತಥಾಧ್ವರೇ ॥ ೩೦ ॥

ಗೌರಜಃ ಪುರುಷೋ ಮೇಷಶ್ಚಾಶ್ವಾಶ್ವತರಗರ್ದಭಾಃ ।
ಏತಾನ್ಗ್ರಾಮ್ಯಾನ್ಪಶೂನಾಹುರಾರಣ್ಯಾಂಶ್ಚ ನಿಬೋಧ ಮೇ ॥ ೩೧ ॥

ಶ್ವಾಪದಾ ದ್ವಿಖುರಾ ಹಸ್ತಿ ವಾನರಾಃ ಪಕ್ಷಿಪಂಚಮಾಃ ।
ಔದಕಾಃ ಪಶವಷ್ಷಷ್ಠಾಃ ಸಪ್ತಮಾಸ್ತು ಸರೀಸೃಪಾಃ ॥ ೩೨ ॥

ಗಾಯತ್ರಂ ಚ ಋಚಶ್ಚೈವ ತ್ರಿವೃತ್ಸ್ತೋಮಂ ರಥಂತರಂ ।
ಅಗ್ನಿಷ್ಟೋಮಂ ಚ ಯಜ್ಞಾನಾಂ ನಿರ್ಮಮೇ ಪ್ರಥಮಾನ್ಮುಖಾತ್ ॥ ೩೩ ॥

ಯಜೂಂಷಿ ತ್ರೈಷ್ಟುಭಂ ಛಂದಸ್ತೋಮಂ ಪಂಚದಶಂ ತಥಾ ।
ಬೃಹತ್ಸಾಮತಥೋಕ್ಥ್ಯಂ ಚ ದಕ್ಷಿಣಾದಸೃಜನ್ಮುಖಾತ್ ॥ ೩೪ ॥

ದುದರಿಂದ ತ್ರೇತಾಯುಗದ ಆದಿಯಲ್ಲಿ ಬ್ರಹ್ಮನು ಗ್ರಾಮ ಅರಣ್ಯ ಮುಂತಾದ ವ್ಯವಸ್ಥೆಗನುಸಾರವಾಗಿ ಓಷಧಿಗಳನ್ನೂ ಪಶುಗಳನ್ನೂ ಸೃಷ್ಟಿಸಿ ಅವುಗಳನ್ನು ಯಜ್ಞದಲ್ಲಿ ಉಪಯೋಗಿಸಿದನು.

೩೧-೩೨. ಹಸು, ಆಡು, ಮನುಷ್ಯ, ಕುರಿ, ಕುದುರೆ, ಹೇಸರಕತ್ತೆ, ಕತ್ತೆ ಇವುಗಳೆಲ್ಲಾ ಗ್ರಾಮದ ಪಶುಗಳು. ಹುಲಿ ಮುಂತಾದುವು ಎರಡು ಗೊರಸುಳ್ಳ ಜಿಂಕೆ ಮುಂತಾದುವು ಆನೆ, ಕಪಿ, ಪಕ್ಷಿಗಳು, ನೀರಿನಲ್ಲಿರುವ ಆಮೆ ಮುಂತಾದುವು ಹಾವು ಮೊದಲಾದುವು ಇವು ಅರಣ್ಯದ ಪ್ರಾಣಿಗಳು.

೩೩. ಆ ಬ್ರಹ್ಮನು ತನ್ನ ಪೂರ್ವದಿಕ್ಕಿನ ಮುಖದಿಂದ ಗಾಯತ್ರೀಛಂದಸ್ಸು ಋಗ್ವೇದ, ತ್ರಿವೃತ್‌ಸ್ತೋಮವೆಂಬ ಸ್ತೋತ್ರಕ್ಕೆ ಉಪಯೋಗಿಸುವ ಮಂತ್ರ ಸಮುದಾಯ, ರಥಂತರವೆಂಬ ಸಾಮ, ಅಗ್ನಿಷ್ಟೋಮವೆಂಬ ಸೋಮಯಾಗ ಇವುಗಳನ್ನು ಸೃಷ್ಟಿಸಿದನು.

೩೪. ದಕ್ಷಿಣದಿಕ್ಕಿನ ಮುಖದಿಂದ ಯಜುರ್ವೇದ, ತ್ರಿಷ್ಟುಪ್‌ಛಂದಸ್ಸು, ಪಂಚದಶಸ್ತೋಮ, ಬೃಹತ್ ಎಂಬ ಸಾಮ, ಉಕ್ಥ್ಯ ಎಂಬ ಸಂಸ್ಥಾವಿಶೇಷ ಇವುಗಳನ್ನು ಸೃಷ್ಟಿಸಿದನು.

ಸಾಮಾನಿ ಜಗತೀಛಂದಸ್ತೋಮಂ ಸಪ್ತದಶಂ ತಥಾ ।
ವೈರೂಪಮತಿರಾತ್ರಂ ಚ ಪಶ್ಚಿಮಾದಸೃಜನ್ಮುಖಾತ್ ॥ ೫೫ ॥

ಏಕವಿಂಶಮಥರ್ವಾಣಮಪ್ತೋರ್ಯಾಮಾಣಮೇವ ಚ ।
ಅನುಷ್ಟುಭಂಚವೈರಾಜ ಮುತ್ತರಾದಸೃಜನ್ಮುಖಾತ್ ॥ ೫೬ ॥

ಉಚ್ಚಾವಚಾನಿ ಭೂತಾನಿ ಗಾತ್ರೇಭ್ಯಸ್ತಸ್ಯ ಜಜ್ಞಿರೇ ।
ದೇವಾಸುರಪಿತೄನ್ ಸೃಷ್ಟ್ವಾ ಮನುಷ್ಯಾಂಶ್ಚ ಪ್ರಜಾಪತಿಃ ॥ ೫೭ ॥

ತತಃ ಪುನಸ್ಸಸರ್ಜಾದೌ ಸಂಕಲ್ಪಸ್ಯ ಸ ಪಿತಾಮಹಃ ।
ಯಕ್ಷಾನ್ಪಿಶಾಚಾನ್ಗಂಧರ್ವಾಂಸ್ತಥೈವಾಪ್ಸರಸಾಂ ಗಣಾನ್ ॥ ೫೮ ॥

---

೫೫. ಪಶ್ಚಿಮದಿಕ್ಕಿನ ಮುಖದಿಂದ ಸಾಮವೇದ, ಜಗತೀ, ಛಂದಸ್ಸು, ಸಪ್ತದಶಸ್ತೋಮ, ವೈರೂಪವೆಂಬ ಸಾಮ, ಅತಿರಾತ್ರವೆಂಬ ಯಜ್ಞ ಇವುಗಳನ್ನು ಸೃಷ್ಟಿಸಿದನು.

೫೬. ಉತ್ತರದಿಕ್ಕಿನ ಮುಖದಿಂದ ಅಥರ್ವವೇದ, ಏಕವಿಂಶತಿಸ್ತೋಮ, ಅನುಷ್ಟುಪ್, ಛಂದಸ್ಸು, ಅಪ್ತೋರ್ಯಾಮವೆಂಬ ಯಜ್ಞ, ವೈರಾಜಸಾಮ ಇವುಗಳನ್ನು ಸೃಷ್ಟಿಸಿದನು.

೫೭–೫೮. ಆ ಬ್ರಹ್ಮನ ಶರೀರದಿಂದ ಉತ್ಕೃಷ್ಟ ನಿಕೃಷ್ಟರಾದ ದೇವಾಸುರಾದಿಗಳೂ ಹುಟ್ಟಿದರು. ಪ್ರಜಾಪತಿಯಾದ ಬ್ರಹ್ಮನು ದೇವಾಸುರ ಮನುಷ್ಯರನ್ನು ಸೃಷ್ಟಿಮಾಡಿ ಪುನಃ ಸಂಕಲ್ಪರೂಪದಿಂದ ಯಕ್ಷರು, ಪಿಶಾಚಿಗಳು, ಗಂಧರ್ವರು, ಅಪ್ಸರಸ್ಸುಗಳ ಗುಂಪು, ನರರು, ಕಿನ್ನರರು, ರಾಕ್ಷಸರು, ಪಶುಗಳು, ಮೃಗಪಕ್ಷಿಗಳು, ಉರಗರು, ಬಹಳಕಾಲ ಬದುಕುವ ಮತ್ತು ಸ್ವಲ್ಪಕಾಲ ಜೀವಿಸುವ ಚರಾಚರ ಪ್ರಾಣಿಗಳನ್ನು ಸೃಷ್ಟಿಸಿದನು.

ನರಕಿನ್ನರಯಕ್ಷಾಂಸಿ ವಯಃ ಪಶುಮೃಗೋರಗಾಃ ।
ಅವ್ಯಯಂ ಚ ವ್ಯಯಂ ಚೈವ ಯದಿದಂ ಸ್ಥಾಣುಜಂಗಮಂ ॥ ೫೯ ॥

ತತ್ಸಸರ್ಜ ತದಾ ಬ್ರಹ್ಮಾ ಭಗವಾನಾದಿಕೃದ್ವಿಭುಃ ।
ತೇಷಾಂ ಯೇ ಯಾನಿ ಕರ್ಮಾಣಿ ಪ್ರಾಕ್ಸೃಷ್ಟ್ಯಾಂ ಪ್ರತಿಪೇದಿರೇ ॥
ತಾನ್ಯೇವ ತೇ ಪ್ರಪದ್ಯಂತೇ ಸೃಜ್ಯಮಾನಾಃ ಪುನಃ ಪು ॥ ೬೦ ॥

ಹಿಂಸ್ರಾಹಿಂಸ್ರೇ ಮೃದುಕ್ರೂರೇ ಧರ್ಮಾಧರ್ಮಾವೃತಾನೃತೇ ।
ತದ್ಭಾವಿತಾಃ ಪ್ರಪದ್ಯಂತೇ ತಸ್ಮಾತ್ತತ್ತಸ್ಯ ರೋಚತೇ ॥ ೬೧ ॥

---

೬೦. ಸೃಷ್ಟಿಕರ್ತನಾದ ಬ್ರಹ್ಮನು ಯಾವ ಜೀವರುಗಳನ್ನು ಸೃಷ್ಟಿ ಮಾಡಿದನೋ ಅವರು ಹಿಂದಿನ ಸೃಷ್ಟಿಯಲ್ಲಿ ಯಾವ ಯಾವ ಕರ್ಮಫಲಗಳನ್ನು ಪಡೆದರೋ ಆ ಫಲಗಳನ್ನೇ ಅನುಸರಿಸಿ ಪುನಃ ಪುನಃ ಸೃಷ್ಟಿಯಲ್ಲಿ ಆ ಫಲಗಳನ್ನೇ ಪಡೆವರು.

೬೧. ಹಿಂಸೆ, ಅಹಿಂಸೆ, ಇವೆರಡೂ ಶಾರೀರ ಕರ್ಮ ಮೃದು, ಕ್ರೂರ ಇವೆರಡೂ ಮಾನಸಿಕ ಕರ್ಮ, ಸತ್ಯ ಅನೃತ, ಇವೆರಡೂ ವಾಚಕ ಕರ್ಮ ಇವು ಸಂದರ್ಭಾನುಸಾರವಾಗಿ ಧರ್ಮಾಧರ್ಮಗಳಾಗುವುವು. ಹೇಗೆಂದರೆ ಅಗ್ನೀಷೋಮಯಾಗದಲ್ಲಿ ಪಶ್ವಾಲಂಭನವು ಹಿಂಸೆಯಾದರೂ ಧರ್ಮವಾಗುವುದು. ಪರಸ್ತ್ರೀಗಮನಾದಿಗಳು ಅಹಿಂಸೆಯಾದರೂ ಅಧರ್ಮವಾಗುವುದು. ರಾಜರು ಕಳ್ಳರೇ ಮೊದಲಾದವರನ್ನು ರಕ್ಷಿಸುವುದು ಮೃದು ಸ್ವಭಾವವಾದರೂ ಅಧರ್ಮವು ದುಷ್ಟರನ್ನು ದಂಡಿಸುವುದು ಕ್ರೂರವಾದರೂ ಧರ್ಮವಾಗುವುದು. ಬ್ರಾಹ್ಮಣಾದಿಗಳ ವಧೆಯು ಪ್ರಾಪ್ತವಾದಾಗ ಸುಳ್ಳನ್ನು ಹೇಳಿ ಅವನನ್ನು ಉಳಿಸುವುದು ಧರ್ಮವಾಗುವುದು. ಈ ಸಂದರ್ಭದಲ್ಲಿ ನಿಜವನ್ನು ಹೇಳುವುದು ಅಧರ್ಮವಾಗುವುದು. ಜೀವರು ಹಿಂದಿನ ಸಂಸ್ಕಾರಕ್ಕನುಸಾರವಾಗಿ ಆ ಪೂರ್ವಜನ್ಮವಾಸನಾನುಸಾರವಾಗಿ ಈ ಜನ್ಮದಲ್ಲಿಯೂ ಅದೇ ಸ್ವಭಾವವನ್ನು ಪಡೆವರು.

ಇಂದ್ರಿಯಾರ್ಥೇಷು ಭೂತೇಷು ಶರೀರೇಷು ಚ ಸ ಪ್ರಭುಃ ।
ನಾನಾತ್ವಂ ವಿನಿಯೋಗಂ ಚ ತಥೈವ ವ್ಯಸೃಜತ್ಸ್ವಯಂ ॥ ೬೨ ॥

ನಾಮರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರಪಂಚನಂ ।
ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ ॥ ೬೩ ॥

ಋಷೀಣಾಂ ನಾಮಧೇಯಾನಿ ಯಥಾ ವೇದಶ್ರುತಾನಿ ವೈ ।
ತಥಾ ನಿಯೋಗಯೋಗ್ಯಾನಿ ಹ್ಯನ್ಯೇಷಾಮಪಿ ಸೋಕರೋತ್ ॥ ೬೪ ॥

ಯಥರ್ತುಷ್ವೃತುಲಿಂಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯಂತೇ ತಾನಿ ತಾನ್ಯೇವ ತಥಾಭಾವ ಯುಗಾದಿಷು ॥ ೬೫ ॥

---

೬೨. ಹೀಗೆ ಆ ಬ್ರಹ್ಮನು ಜೀವರ ಕರ್ಮಫಲಾನುಸಾರವಾಗಿ ಇಂದ್ರಿಯಾರ್ಥಗಳಾದ ಆಹಾರಾದಿ ವಿಷಯಗಳನ್ನೂ ಅಂದರೆ ಅಮೃತ, ಅನ್ನ, ಫಲ, ಹುಲ್ಲು ಇತ್ಯಾದಿಗಳನ್ನೂ ಭೂತಗಳಲ್ಲಿ ಜಲಚರ ಸ್ಥಳಚರಗಳನ್ನೂ ಶರೀರಗಳಲ್ಲಿ ದ್ವಿಪಾದ ಚತುಷ್ಪಾದಗಳನ್ನೂ ಅನುಸರಿಸಿ ಅನೇಕ ರೂಪವಾಗಿ ಸೃಷ್ಟಿಯನ್ನು ಮಾಡಿದನು.

೬೩-೬೪. ಮತ್ತು ಅವನು ದೇವತೆಗಳಲ್ಲಿ ಇಂದ್ರಾಗ್ನಿಯಮ ಮುಂತಾದ ಹೆಸರುಗಳನ್ನೂ ವಜ್ರಹಸ್ತಾದಿ ರೂಪಗಳನ್ನೂ ಮಳೆ ಮುಂತಾದ ಕಾರ್ಯಗಳನ್ನೂ ವೇದಶಬ್ದಗಳನ್ನನುಸರಿಸಿ ವಿಸ್ತರಿಸಿದನು. ಋಷಿಗಳ ಹೆಸರುಗಳನ್ನೂ ವೇದದ ಸೂಕ್ತಗಳಲ್ಲಿಯೂ ಮಂತ್ರಗಳಲ್ಲಿಯೂ ಹೇಳಿದಂತೆಯೇ ಗೊತ್ತುಮಾಡಿದನು.

೬೫. ದೇವತೆಗಳು ಅನಿತ್ಯರಾದರೂ ನಿತ್ಯವಾದ ವೇದದಲ್ಲಿ ಹೇಳಿದ ಹೆಸರುಗಳೇ ಹೇಗೆ ಬರುವುದೆಂದರೆ ವಸಂತಾದಿ ಋತುಗಳು ಬಂದರೆ ಆ ಋತುವನ್ನು ಅನುಸರಿಸಿ ಹೂ ಹಣ್ಣು ಮುಂತಾದುವು ಪುನಃ ಅವುಗಳೇ ಬರುವಂತೆ ಮನ್ವಂತರ ಕಲ್ಪಾದಿಗಳ ಆದಿಯಲ್ಲಿ ದೇವತೆಗಳಿಗೆ ಹಿಂದಿನ ಹೆಸರೇ ಬರುವುದೆಂದು ತಿಳಿಯಬೇಕು.

ಕರೋತ್ಯೇವಂ ವಿಧಾಂ ಸೃಷ್ಟಿಂ ಸರ್ಗಾದೌ ಸ ಪುನಃಪುನಃ ।
ಸಿಸೃಕ್ಷಾಶಕ್ತಿಯುಕ್ತೋಽಸೌ ಸೃಜ್ಯಶಕ್ತಿಪ್ರಚೋದಿತಃ ॥ ೬೬ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಪಂಚಮೋಽಧ್ಯಾಯಃ

---

೬೬. ಹೀಗೆ ಬ್ರಹ್ಮನು ಸೃಷ್ಟಿಯ ಪ್ರಾರಂಭದಲ್ಲಿ ಈ ಕ್ಷಣಪೂರ್ವಕವಾದ ಸೃಷ್ಟಿಶಕ್ತಿಯಿಂದ ಕೂಡಿ ಸೃಷ್ಟಿಸಬೇಕಾದ ಜೀವರ ಕರ್ಮವಾಸನಾರೂಪವಾದ ಶಕ್ತಿಯಿಂದ ಪ್ರೇರಿತನಾಗಿ ಬಗೆ ಬಗೆಯ ಸೃಷ್ಟಿಯನ್ನು ಮತ್ತೆ ಮತ್ತೆ ಮಾಡುತ್ತಿರುವನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಐದನೆಯ
ಅಧ್ಯಾಯವು ಮುಗಿದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಷಷ್ಠೋಽಧ್ಯಾಯಃ

॥ ಮೈತ್ರೇಯಃ ॥

ಅರ್ವಾಕ್ಸ್ರೋತಾಸ್ತು ಕಥಿತೋ ಭವತಾ ಯಸ್ತು ಮಾನುಷಃ ।
ಬ್ರಹ್ಮನ್ವಿಸ್ತರತೋ ಬ್ರೂಹಿ ಬ್ರಹ್ಮಾ ತಮಸೃಜದ್ಯಥಾ ॥ ೧ ॥

ಯಥಾ ಚ ವರ್ಣಾನಸೃಜದ್ಯದ್ಗುಣಾಂಶ್ಚ ಮಹಾಮುನೇ ।
ಯಚ್ಚ ತೇಷಾಂ ಸ್ಮೃತಂ ಕರ್ಮ ವಿಪ್ರಾದೀನಾಂ ತದುಚ್ಯತಾಂ ॥ ೨ ॥

॥ ಶ್ರೀಪರಾಶರಃ ॥

ಸತ್ಯಾಭಿಧ್ಯಾಯಿನಃ ಪೂರ್ವಂ ಸಿಸೃಕ್ಷೋರ್ಬ್ರಹ್ಮಣೋ ಜಗತ್ ।
ಅಜಾಯಂತ ದ್ವಿಜಶ್ರೇಷ್ಠ ಸತ್ತ್ವೋದ್ರಿಕ್ತಾ ಮುಖಾತ್ಪ್ರಜಾಃ ॥ ೩ ॥

ಆರನೆಯ ಅಧ್ಯಾಯವು

೧-೨. ಮೈತ್ರೇಯನು 'ಪರಾಶರರೇ ಅರ್ವಾಕ್ ಸ್ರೋತವೆಂಬ ಮನುಷ್ಯ ಸೃಷ್ಟಿಯನ್ನು ಹೇಳಿದಿರಲ್ಲವೇ, ಅದನ್ನೇ ಬ್ರಹ್ಮನು ಸೃಷ್ಟಿಮಾಡಿದ ಕ್ರಮವನ್ನು ವಿಸ್ತರಿಸಿ ಹೇಳಬೇಕು. ಮತ್ತು ವರ್ಣಗಳನ್ನೂ ಅವುಗಳ ಗುಣಕರ್ಮಗಳನ್ನೂ ವಿಸ್ತಾರವಾಗಿ ಹೇಳಬೇಕು" ಎಂದನು.

೩-೬. ಪರಾಶರರು ಹೇಳುವರು :— ಮೈತ್ರೇಯನೇ ಸತ್ಯ ಸಂಕಲ್ಪನಾದ ಬ್ರಹ್ಮನು ಸೃಷ್ಟಿಮಾಡಬೇಕೆಂದು ಅಪೇಕ್ಷಿಸುತ್ತಲು ಅವನ ಮುಖದಿಂದ ಸತ್ವಗುಣ ಪ್ರಧಾನವಾದ ಜೀವರುಗಳೂ ಎದೆಯಿಂದ ರಜೋಗುಣಾಧಿಕ್ಯದಿಂದ ಕೂಡಿದ

ವಕ್ಷಸೋ ರಜಸೋದ್ರಿಕ್ತಾಸ್ತಥಾನ್ಯಾ ಬ್ರಹ್ಮಣೋಭವನ್ ।
ರಜಸಾ ತಮಸಾ ಚೈವ ಸಮುದ್ರಿಕ್ತಾಸ್ತಥೋರುತಃ ॥ ೪ ॥

ಪದ್ಭ್ಯಾಮನ್ಯಾಃ ಪ್ರಜಾ ಬ್ರಹ್ಮಾ ಸಸರ್ಜ ದ್ವಿಜಸತ್ತಮ ।
ತಮಃಪ್ರಧಾನಾಸ್ತಾಸ್ಸರ್ವಾಶ್ಚಾತುರ್ವರ್ಣ್ಯಮಿದಂ ತತಃ ॥ ೫ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಶ್ಶೂದ್ರಾಶ್ಚ ದ್ವಿಜಸತ್ತಮ ।
ಪಾದೋರುವಕ್ಷಸ್ಸ್ಥಲತೋ ಮುಖತಶ್ಚ ಸಮುದ್ಗತಾಃ ॥ ೬ ॥

ಯಜ್ಞನಿಷ್ಪತ್ತಯೇ ಸರ್ವಮೇತದ್ಬ್ರಹ್ಮಾ ಚಕಾರ ವೈ ।
ಚಾತುರ್ವರ್ಣ್ಯಂ ಮಹಾಭಾಗ ಯಜ್ಞಸಾಧನಮುತ್ತಮಂ ॥ ೭ ॥

ಯಜ್ಞೈರಾಪ್ಯಾಯಿತಾ ದೇವಾ ವೃಷ್ಟ್ಯುತ್ಸರ್ಗೇಣ ತಾಃ ಪ್ರಜಾಃ ।
ಆಪ್ಯಾಯಯಂತೇ ಧರ್ಮಜ್ಞ ಯಜ್ಞಾಃ ಕಲ್ಯಾಣಹೇತವಃ ॥ ೮ ॥

ಜೀವರುಗಳೂ, ತೊಡೆಗಳಿಂದ ರಜಸ್ತಮೋಗುಣಾಧಿಕ್ಯದಿಂದ ಕೂಡಿದ ಜೀವರುಗಳೂ, ಪಾದಗಳಿಂದ ತಮೋಗುಣ ಪ್ರಧಾನರಾದ ಜೀವರುಗಳೂ, ಮನುಷ್ಯರಾಗಿ ಹುಟ್ಟಿದರು. ಇವರೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರಾದರು.

೭-೧೦. ಬ್ರಹ್ಮನು ಯಜ್ಞಾದಿ ವೇದೋಕ್ತವಾದ ಕರ್ಮಗಳನ್ನು ಮಾಡುವುದಕ್ಕಾಗಿ ಈ ನಾಲ್ಕು ವರ್ಣಗಳನ್ನು ಸೃಷ್ಟಿಸಿದನು. ಯಜ್ಞಗಳಿಂದ ದೇವತೆಗಳನ್ನು ತೃಪ್ತಿಪಡಿಸಿದರೆ ಅವರು ಮಳೆಯನ್ನುಂಟುಮಾಡಿ ಪ್ರಜೆಗಳನ್ನು ತೃಪ್ತಿಪಡಿಸುವರು ಆದುದರಿಂದ ಯಜ್ಞಕರ್ಮಗಳು ಮಂಗಳಕ್ಕೆ ಕಾರಣವಾದುವುಗಳು. ಆ ಯಜ್ಞಕರ್ಮಗಳನ್ನು ಪರಿಶುದ್ಧವಾದ ಆಚಾರವುಳ್ಳವರೂ, ಸಜ್ಜನರೂ, ಸನ್ಮಾರ್ಗದಲ್ಲಿ ನಡೆವವರೂ, ಸ್ವಧರ್ಮಾಸಕ್ತರೂ ಆದ ಮನುಜರು ಮಾಡುವರು. ಆದುದರಿಂದ

ಇಕ್ಷ್ವಾದ್ಯಂಶೇ ನರೈಸ್ತೈಸ್ತು ಸ್ವಧರ್ಮಾಭಿರತೈಸ್ಸದಾ ।
ವಿಶುದ್ಧಾಚರಣೋಪೇತೈಸ್ಸದ್ಭಿಸ್ಸನ್ಮಾರ್ಗಗಾಮಿಭಿಃ ॥ ೯ ॥

ಸ್ವರ್ಗಾಪವರ್ಗೌ ಮಾನುಷ್ಯಾತ್ಪ್ರಾಪ್ನುವಂತಿ ಮಹಾಮುನೇ ।
ಯಥಾಭಿರುಚಿತಂ ಸ್ಥಾನಂ ತದ್ಯಾಂತಿ ಮನುಜಾ ದ್ವಿಜ ॥ ೧೦ ॥

ಪ್ರಜಾಸ್ತಾ ಬ್ರಹ್ಮಣಾ ಸೃಷ್ಟಾಶ್ಚಾತುರ್ವರ್ಣ್ಯವ್ಯವಸ್ಥಿತಾಃ ।
ಸಮ್ಯಕ್ಛ್ರದ್ಧಾಸಮಾಚಾರಪ್ರವಣಾ ಮುನಿಸತ್ತಮ ॥ ೧೧ ॥

ಯಥೇಚ್ಛಾವಾಸನಿರತಾಸ್ಸರ್ವಬಾಧಾವಿವರ್ಜಿತಾಃ ।
ಶುದ್ಧಾಂತಃಕರಣಾಶ್ಶುದ್ಧಾಸ್ಸರ್ವಾನುಷ್ಠಾನ ನಿರ್ಮಲಾಃ ॥ ೧೨ ॥

ಶುದ್ಧೇ ಚ ತಾಸಾಂ ಮನಸಿ ಶುದ್ಧೇಂತಸ್ಸಂಸ್ಥಿತೇ ಹರೌ ।
ಶುದ್ಧಜ್ಞಾನಂ ಪ್ರಪಶ್ಯಂತಿ ವಿಷ್ಣ್ವಾಖ್ಯಂ ಯೇನ ತತ್ಪದಂ ॥ ೧೩ ॥

ಮನುಷ್ಯರೇ ಧರ್ಮಕ್ಕೆ ಅಧಿಕಾರಿಗಳು. ಅವರು ಸ್ವರ್ಗ ಮೋಕ್ಷಪ್ರದವಾದ ಕರ್ಮಗಳನ್ನು ಮಾಡಿ ತಮಗಿಷ್ಟವಾದ ಫಲಗಳನ್ನು ಪಡೆವರು.

೧೧-೧೩. ಬ್ರಹ್ಮನು ಚತುರ್ವರ್ಣ ವ್ಯವಸ್ಥೆಗನುಸಾರವಾಗಿ ಸೃಷ್ಟಿಸಿದ ಪ್ರಜೆಗಳು ಉತ್ತಮವಾದ ಕರ್ಮಶ್ರದ್ಧೆಯುಳ್ಳವರಾಗಿ ಪರ್ವತಗಳ ಗುಹೆ ಮುಂತಾದ ಏಕಾಂತ ಸ್ಥಳದಲ್ಲಿ ವಾಸಮಾಡುತ್ತಾ ಶೀತೋಷ್ಣ, ಹಸಿವು, ಬಾಯಾರಿಕೆ ಮುಂತಾದ ಬಾಧೆಗಳಿಲ್ಲದವರಾಗಿ ಶುದ್ಧವಾದ ಮನಸ್ಸಿನಿಂದ ಕೂಡಿ ಸತ್ಕುಲ ಪ್ರಸೂತರಾಗಿ ಸಮಸ್ತ ವಿಹಿತಕರ್ಮಗಳನ್ನೂ ಅನುಷ್ಠಾನ ಮಾಡುತ್ತಾ ಮನಸ್ಸು ಪರಿಶುದ್ಧ ವಾಗುತ್ತಲೂ ಜ್ಞಾನಸ್ವರೂಪನಾದ ಹರಿಯು ಅವರ ಮನಸ್ಸಿನಲ್ಲಿ ನೆಲಸುತ್ತಲು ಅಜ್ಞಾನದಿಂದ ವಿಷ್ಣುವೆಂಬ ಹೆಸರುಳ್ಳ ಆ ಪರಮಪದವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವರು.

ತತಃ ಕಾಲಾತ್ಮಕೋ ಯೋಽಸೌ ತಸ್ಯಾಂಶಃ ಕಥಿತೋ ಹರೇಃ ।
ಸ ಪಾತಯತ್ಯಘಂ ಘೋರಮಲ್ಪಮಲ್ಪಾಲ್ಪಸಾರವತ್ ॥ ೧೪ ॥

ಅಧರ್ಮಬೀಜಮುದ್ಭೂತಂ ತಮೋಲೋಭಸಮುದ್ಭವಂ ।
ಪ್ರಜಾಸು ತಾಸು ಮೈತ್ರೇಯ ರಾಗಾದಿಕಮಸಾಧಕಂ ॥ ೧೫ ॥

ತತಸ್ಸಾ ಸಹಜಾಸಿದ್ಧಿಸ್ತಾಸಾಂ ನಾತೀವ ಜಾಯತೇ ।

೧೪-೧೫. ತ್ರೇತಾಯುಗವು ಸ್ವಲ್ಪ ಕಳೆದಮೇಲೆ ಕಾಲವೆಂಬ ಹರಿಯ ಒಂದಂಶವು ಆ ಕಾಲದ ಪ್ರಜೆಗಳಲ್ಲಿ ವಿಷಯಾಭಿಲಾಷೆ, ಮಾತ್ಸರ್ಯ ಮುಂತಾದ ಪುರುಷಾರ್ಥಸಿದ್ಧಿಗೆ ವಿಘ್ನರೂಪವಾದ ಭಯಂಕರವಾದ ಅಂದರೆ ಅತ್ಯಲ್ಪ ಸುಖವೂ, ಬಹು ದುಃಖವೂ ಉಳ್ಳ ಪಾಪಗಳನ್ನು ಹರಡುವುದು. ಈ ಪಾಪವು ಅಧರ್ಮಕ್ಕೆ ಕಾರಣವಾಗಿಯೂ, ಮೋಹವನ್ನೂ ಅಜ್ಞಾನವನ್ನೂ ಹುಟ್ಟಿಸುವುದಾಗಿಯೂ ವಿಷಯಾಭಿಲಾಷೆಯಿಂದುಂಟಾದ ಕಾಮಕ್ರೋಧಾದಿಗಳನ್ನು ಹುಟ್ಟಿಸಿ ಪುರುಷಾರ್ಥ ಸಿದ್ಧಿಗೆ ವಿಘ್ನರೂಪವಾದುದಾಗಿಯೂ ಇರುವುದು.

೧೬. ಆಮೇಲೆ ಪ್ರಜೆಗಳಿಗೆ ಕೃತಯುಗದಲ್ಲಿ ಸ್ವಾಭಾವಿಕವಾಗಿ ಉಂಟಾಗುತ್ತಿದ್ದ ಹಸಿವು ಬಾಯಾರಿಕೆ ಮುಂತಾದ ದ್ವಂದ್ವಗಳನ್ನು ಜಯಿಸುವ ರಸೋಲ್ಲಾಸಾದಿ ಅಷ್ಟಸಿದ್ಧಿಗಳು ಉಂಟಾಗುವುದಿಲ್ಲ. ಸ್ಕಾಂದಪುರಾಣದಲ್ಲಿ ರಸೋಲ್ಲಾಸಾದಿ ಅಷ್ಟ ಸಿದ್ಧಿಗಳನ್ನು ಹೇಳಿರುವುದು. " ರಸಸ್ಯಸ್ವತ ಏವಾಂತರುಲ್ಲಾಸಸ್ಸ್ಯಾತ್ಕೃತೇಯುಗೇ । ರಸೋಲ್ಲಾಸಾಖ್ಯಕಾಸಿದ್ಧಿಸ್ತಯಾ ಹಂತಿಕ್ಷುಧಂನರಃ ॥ ಸ್ತ್ರ್ಯಾದೀನಾಂ ನೈರಪೇಕ್ಷ್ಯೇಣ ಸದಾತೃಪ್ತಾಃ ಪ್ರಜಾಸ್ತಥಾ । ದ್ವಿತೀಯಾ ಸಿದ್ಧಿರುದ್ದಿಷ್ಟಾಸಾತೃಪ್ತಿರ್ಮುನಿಸತ್ತಮೈಃ ॥ ಧರ್ಮೋತ್ತಮಂಚನಾಸ್ತ್ಯಾಸಾಂ ಸಾತೃತೀಯಾಭಿಧೀಯತೇ । ಚತುರ್ಥೀತುಲ್ಯತಾ ತಾಸಾಮಾಯುಷಸ್ಸುಖರೂಪಯೋಃ ॥ ಐಕಾಂತ ಬಲಬಾಹುಳ್ಯಂ ವಿಶೋಕಾನಾಮ ಪಂಚಮೀ ॥ ಪರಮಾತ್ಮ ಪರತ್ವೇನ ತಪೋಧ್ಯಾನಾದಿ ನಿಷ್ಠತಾ । ಷಷ್ಠೀಚ ಕಾಮ ಚಾರಿತ್ವಂ ಸಪ್ತಮೀ ಸಿದ್ಧಿರುಚ್ಯತೇ । ಅಷ್ಟಮೀಚ ಯಥಾಪ್ರೋಕ್ತಾಯತ್ರಕ್ವಚನ ಶಾಯಿತಾ ॥ ಇತಿ " ಸ್ಕಾಂದಪುರಾಣದಲ್ಲಿ (೧) ಮಿಥುನೋತ್ಪತ್ತಿಯಿಂದ ರಸೋಲ್ಲಾಸ

ರಸೋಲ್ಲಾಸಾದಾಯಶ್ಚಾನ್ಯಾಸ್ಸಿದ್ಧಯೋಽಷ್ಟೌ ಭವಂತಿ ಯಾಃ ॥ ೧೬ ॥

ತಾಸು ಕ್ಷೀಣಾಸ್ವಶೇಷಾಸು ವರ್ಧಮಾನೇ ಚ ಪಾತಕೇ ।
ದ್ವಂದ್ವಾಭಿಭವದುಃಖಾರ್ತಾಸ್ತಾ ಭವಂತಿ ತತಃ ಪ್ರಜಾಃ ॥ ೧೭ ॥

ತತೋ ದುರ್ಗಾಣಿ ತಾಶ್ಚಕ್ರುರ್ವಾರ್ಕ್ಷಂ ಪಾರ್ವತಮೌದಕಂ ।
ಕೃತ್ರಿಮಂ ಚ ತಥಾ ದುರ್ಗಂ ಪುರಖರ್ವಟಕಾದಿ ಯತ್ ॥ ೧೮ ॥

ಗೃಹಾಣಿ ಚ ಯಥಾನ್ಯಾಯಂ ತೇಷು ಚಕ್ರುಃ ಪುರಾದಿಷು ।
ಶೀತಾತಪಾದಿ ಬಾಧಾನಾಂ ಪ್ರಶಮಾಯ ಮಹಾಮುನೇ ॥ ೧೯ ॥

ಅಂದರೆ ಸ್ತ್ರ್ಯಾದಿನಿರಪೇಕ್ಷೆ (೨) ಸರ್ವಾನಂದದಿಂದ ತೃಪ್ತಿ ಸಿದ್ಧಿ (೩) ಒಂದಾವೃತ್ತಿ ಬಂದ ಮಳೆಯಿಂದ ಸಸ್ಯೋತ್ಪತ್ತಿಯಾಗುವ ಸಕೃದ್ವೃಷ್ಟಿ ಸಿದ್ಧಿ. (೪) ಮನೆ, ಮಠ ಮುಂತಾದುವುಗಳಾಗುವ ಸಂಕಲ್ಪ ಸಿದ್ಧಿ. (೫) ಭರದ್ವಾಜಾಶ್ರಮದಂತೆ ಕಲ್ಪವೃಕ್ಷ ರೂಪವಾದ ಅಭಿಮತ ಸಿದ್ಧಿ. (೬) ಕೇಳಿದಾಗ ಮಳೆಯಾಗುವ ಪ್ರಕಾಮವೃಷ್ಟಿ ಸಿದ್ಧಿ. (೭) ಅಕೃಷ್ಟ ಫಲಸಿದ್ಧಿ. (೮) ಅಕೃಷ್ಟಭೂಮಿತ್ವ ಎಂಬ ಎಂಟು ಸಿದ್ಧಿಗಳನ್ನು ಹೇಳಿರುವುದು.

೧೭–೨೦. ತ್ರೇತಾಯುಗದಲ್ಲಿ ಜನರಿಗೆ ಅಷ್ಟಸಿದ್ಧಿಶಕ್ತಿಗಳು ಕಡಿಮೆಯಾಗುತ್ತಿರಲು ಪಾಪಗಳು ಹೆಚ್ಚುತ್ತ ಶೀತೋಷ್ಣ ಸುಖದುಃಖಾದಿ ದ್ವಂದ್ವಗಳ ಬಾಧೆಯು ಹೆಚ್ಚುವುದು. ಆಮೇಲೆ ಜನರು ಕಳ್ಳರೇ ಮುಂತಾದವರ ಭಯಪರಿಹಾರಕ್ಕಾಗಿ ಕೃತ್ರಿಮವಾದ ವೃಕ್ಷ ಪರ್ವತ ಜಲ ದುರ್ಗಗಳನ್ನೂ, ಶಿತೋಷ್ಣಗಳ ಪರಿಹಾರಕ್ಕಾಗಿ ಮನೆಗಳನ್ನೂ, ಜೀವನಕ್ಕಾಗಿ ಕೈಗಾರಿಕೆ ಕೃಷಿ ವಾಣಿಜ್ಯಗಳನ್ನೂ, ಕೋಟೆಯಿಂದ ಕೂಡಿದ ಮನೆಗಳನ್ನೂ ಮಾಡಿಕೊಂಡರು. (ಇಲ್ಲಿ ರಾಜನು ವಾಸವಾಗಿರುವ ಸ್ಥಳವನ್ನು ಪುರಿ ಎಂದೂ ಒಂದೆಡೆ ಗ್ರಾಮವೂ ಮತ್ತೊಂದೆಡೆ ನಗರವೂ ಇರುವ ನದೀತೀರ ಪ್ರದೇಶವನ್ನು ಖರ್ವಟವೆಂದೂ ಬ್ರಾಹ್ಮಣರೂ ಅವರ ಸೇವಕರೂ ಇರುವ ಪ್ರದೇಶವನ್ನು ಗ್ರಾಮವೆಂದೂ, ಚತುರ್ವರ್ಣದವರೂ, ಅನೇಕ ಜಾತಿಯ ಜನರೂ, ಕೈಕೆಲಸದವರೂ

ಪ್ರತಿಕಾರಮಿಮಂ ಕೃತ್ವಾ ಶೀತಾದೇಸ್ತಾಃ ಪ್ರಜಾಃ ಪುನಃ ।
ವಾರ್ತೋಪಾಯಂ ತತಶ್ಚಕ್ರುರ್ಹಸ್ತಸಿದ್ಧಿಂ ಚ ಕರ್ಮಜಾಂ ॥ ೨೦ ॥

ವ್ರೀಹಯಶ್ಚ ಯವಾಶ್ಚೈವ ಗೋಧೂಮಾ ಅಣವಸ್ತಿಲಾಃ ।
ಪ್ರಿಯಂಗವೋ ಹ್ಯುದಾರಾಶ್ಚ ಕೋರದೂಷಾಸ್ಸತೀನಕಾಃ ॥ ೨೧ ॥

ಮಾಷಾಮುದ್ಗಾ ಮಸೂರಾಶ್ಚ ನಿಷ್ಪಾವಾಸ್ಸಕುಳುತ್ಥಕಾಃ ।
ಆಢಕ್ಯಶ್ಚಣಕಾಶ್ಚೈವ ಶಣಾಸ್ಸಪ್ತದಶ ಸ್ಮೃತಾಃ ॥ ೨೨ ॥

ಇತ್ಯೇತಾ ಓಷಧೀನಾಂ ತು ಗ್ರಾಮ್ಯಾಣಾಂ ಜಾತಯೋ ಮುನೇ ।
ಓಷಧ್ಯೋ ಯಾಜ್ಞಿಕಾಶ್ಚೈವ ಗ್ರಾಮ್ಯಾರಣ್ಯಾಶ್ಚತುರ್ದಶ ॥ ೨೩ ॥

ವ್ರೀಹಯಸ್ಸಯವಾ ಮಾಷಾ ಗೋಧೂಮಾ ಅಣವಸ್ತಿಲಾಃ ।
ಪ್ರಿಯಂಗುಸಪ್ತಮಾ ಹ್ಯೇತೇ ಅಷ್ಟಮಾಸ್ತು ಕುಳುತ್ಥಕಾಃ ॥ ೨೪ ॥

ಶ್ಯಾಮಾಕಾಸ್ತ್ವಥ ನೀವಾರಾಜರ್ತಿಲಾಸ್ಸಗವೇಧುಕಾಃ ।
ತಥಾ ವೇಣುಯವಾಃ ಪ್ರೋಕ್ತಾಸ್ತದ್ವನ್ಮರ್ಕಟಕಾ ಮುನೇ ॥ ೨೫ ॥

ವ್ಯಾಪಾರಗಾರರೂ ವಾಸಮಾಡುತ್ತಾ ಅನೇಕ ಬಗೆಯ ಕಟ್ಟಡಗಳಿಂದ ಕೂಡಿ ಅನೇಕ ದೇವಾಲಯಗಳುಳ್ಳ ಪ್ರದೇಶವನ್ನು ನಗರವೆಂದೂ ಹೇಳುವರು. ಆಯವನ್ನನುಸರಿಸಿ ವಾಸ್ತು ಶಾಸ್ತ್ರನಿಯಮದಂತೆ ಕಟ್ಟಿದ ಮನೆಗಳಲ್ಲಿ ಧ್ರುವ, ಧನ್ಯ, ಜಯ, ಕಾಂತ, ವಿಜಯ, ವಿಪುಲ, ಸುಪಕ್ಷ, ಸುಮುಖ, ನಂದ, ಧನದ, ಮನೋರಥ ಎಂಬಿವೇ ಮೊದಲಾದ ಮನೆಗಳಿರುವುವು.)

೨೧–೨೬. ಜನರು ಗ್ರಾಮ್ಯಜಾತಿಗೆ ಸೇರಿದ ಬತ್ತ, ಯವೆ, ಗೋಧಿ, ಎಳ್ಳು, ಹಾರಕ, ಹೆಸರು, ತಡಗಣಿ, ಉದ್ದು, ಅವರೆ, ಕುಸುವೆ, ಹುರುಳಿ, ತೊಗರಿ, ಸಾವೆ, ಕಡಲೆ, ಶಣಬು, ಹುಚ್ಚೆಳ್ಳು, ನವಣೆ ಈ ಹದಿನೇಳು ಬಗೆಯ ಸಸ್ಯಗಳನ್ನೂ ಯಜ್ಞಗಳಿಗೆ ಉಪಯೋಗವಾಗುವ ಹದಿನಾಲ್ಕು ಬಗೆಯ ಗ್ರಾಮ್ಯಾರಣ್ಯ ಜಾತಿಯ

ಗ್ರಾಮ್ಯಾರಣ್ಯಾಸ್ಸ್ಮೃತಾ ಹ್ಯೇತಾ ಓಷಧ್ಯಸ್ತು ಚತುರ್ದಶ ।
ಯಜ್ಞನಿಷ್ಪತ್ತಯೇ ಯಜ್ಞಸ್ತಥಾಸಾಂ ಹೇತುರುತ್ತಮಃ ॥ ೨೬ ॥

ಏತಾಶ್ಚ ಸಹ ಯಜ್ಞೇನ ಪ್ರಜಾನಾಂ ಕಾರಣಂ ಪರಂ ।
ಪರಾಪರವಿದಃ ಪ್ರಾಜ್ಞಾಸ್ತತೋ ಯಜ್ಞಾನ್ ವಿತನ್ವತೇ ॥ ೨೭ ॥

ಅಹನ್ಯಹನ್ಯನುಷ್ಠಾನಂ ಯಜ್ಞಾನಾಂ ಮುನಿಸತ್ತಮ ।
ಉಪಕಾರಕರಂ ಪುಂಸಾಂ ಕ್ರಿಯಮಾಣಾಘಶಾಂತಿದಂ ॥ ೨೮ ॥

ಯೇಷಾಂ ತು ಕಾಲಸೃಷ್ಟೋಽಸೌ ಪಾಪಬಿಂದುರ್ಮಹಾಮತೇ ।
ಚೇತಸ್ಸು ವವೃಧೇ ಚಕ್ರುಸ್ತೇನ ಯಜ್ಞೇಷು ಮಾನಸಂ ॥ ೨೯ ॥

ವೇದಾನ್ವೇದ್ಯಂ ತಥಾ ದೇವಾನ್ಯಜ್ಞಕರ್ಮಾದಿಕಂ ಚ ಯತ್ ।
ತತ್ಸರ್ವಂ ನಿಂದಮಾನಾಸ್ತೇ ಯಜ್ಞವ್ಯಾಸೇಧಕಾರಿಣಃ ॥ ೩೦ ॥

ಸಸ್ಯಗಳನ್ನೂ ಬೆಳೆಮಾಡಿದರು. ಯಜ್ಞವು ಮಳೆಯನ್ನು ಕೊಡುವುದರಿಂದ ಈ ಸಸ್ಯಗಳ ಬೆಳೆಗೆ ಕಾರಣವಾದುದಾಯಿತು.

೨೭-೨೮. ಈ ಸಸ್ಯಗಳು ಯಜ್ಞಕ್ಕೆ ಉಪಯೋಗವಾಗುವುದರಿಂದ ಮಳೆಗೂ ಪ್ರಜಾವೃದ್ಧಿಗೂ ಕಾರಣಗಳೆಂದು ಧರ್ಮವನ್ನು ತಿಳಿದ ಜ್ಞಾನಿಗಳು ಯಜ್ಞಗಳನ್ನು ಮಾಡುವರು. ಪ್ರತಿದಿನವೂ ಪಂಚ ಮಹಾಯಜ್ಞಗಳನ್ನು ಮಾಡುವುದು ಜನರು ಮಾಡುವ ಪಾಪಗಳನ್ನು ನಾಶಮಾಡುವುದರಿಂದ ಉಪಕಾರಕವಾಗಿರುವುದು.

೨೯-೩೧. ಮಹಾಬುದ್ಧಿಶಾಲಿಯಾದ ಮೈತ್ರೇಯನೇ ಕಾಲದಿಂದ ಸೃಷ್ಟಿಯಾದ ಪಾಪಲೇಶವು ಯಾವ ಜನರ ಮನಸ್ಸಿನಲ್ಲಿ ಬೆಳೆವುದೋ ಅವರು ಯಜ್ಞವನ್ನು ಮಾಡಲು ಮನಸ್ಸುಮಾಡುವುದಿಲ್ಲ. ವೇದಗಳನ್ನೂ, ಜ್ಞಾನವನ್ನೂ, ದೇವತೆಗಳನ್ನೂ ಯಜ್ಞಕರ್ಮಗಳನ್ನೂ ನಿಂದೆಮಾಡುತ್ತ ಯಜ್ಞನಾಶಕ್ಕೆ ಕಾರಣರಾಗುವರು. ಪ್ರವೃತ್ತಿ ಮಾರ್ಗವನ್ನು ನಾಶಮಾಡುವುದಕ್ಕೆ ಕಾರಣರಾದ ವೇದನಿಂದಕರು ದುಷ್ಟರೂ ದುರಾಚಾರಿಗಳೂ, ವಕ್ರಬುದ್ಧಿಯುಳ್ಳವರೂ ಆಗುವರು. ಪ್ರವೃತ್ತಿಮಾರ್ಗನಾಶದಿಂದ ಯಜ್ಞಾನುಷ್ಠಾನವಿಲ್ಲದೆ ಮಳೆಯಾಗದ ಕಾರಣದಿಂದ ಅನ್ನವು ಸಿಕ್ಕದೆ ಪ್ರಜಾವೃದ್ಧಿಯಾಗುವುದಿಲ್ಲ.

ಪ್ರವೃತ್ತಿಮಾರ್ಗವ್ಯುಚ್ಛಿತ್ತಿಕಾರಿಣೋ ವೇದನಿಂದಕಾಃ ।
ದುರಾತ್ಮಾನೋ ದುರಾಚಾರಾ ಬಭೂವುಃ ಕುಟಿಲಾಶಯಾಃ ॥ ೩೧ ॥

ಸಂಸಿದ್ಧಾಯಾಂ ತು ವಾರ್ತಾಯಾಂ ಪ್ರಜಾಸ್ಸೃಷ್ಟ್ವಾ ಪ್ರಜಾಪತಿಃ ।
ಮರ್ಯಾದಾಂ ಸ್ಥಾಪಯಾಮಾಸ ಯಥಾಸ್ಥಾನಂ ಯಥಾಗುಣಂ ॥ ೩೨ ॥

ವರ್ಣಾನಾಮಾಶ್ರಮಾಣಾಂ ಚ ಧರ್ಮಾನ್ಧರ್ಮಭೃತಾಂ ವರ ।
ಲೋಕಾಂಶ್ಚ ಸರ್ವವರ್ಣಾನಾಂ ಸಮ್ಯಗ್ಧರ್ಮಾನುಪಾಲಿನಾಂ ॥ ೩೩ ॥

ಪ್ರಾಜಾಪತ್ಯಂ ಬ್ರಾಹ್ಮಣಾನಾಂ ಸ್ಮೃತಂ ಸ್ಥಾನಂ ಕ್ರಿಯಾವತಾಂ ।
ಸ್ಥಾನಮೈಂದ್ರಂ ಕ್ಷತ್ರಿಯಾಣಾಂ ಸಂಗ್ರಾಮೇಷ್ವನಿವರ್ತಿನಾಂ ॥ ೩೪ ॥

ವೈಶ್ಯಾನಾಂ ಮಾರುತಂ ಸ್ಥಾನಂ ಸ್ವಧರ್ಮನಿರತಾತ್ಮನಾಂ ।
ಗಾಂಧರ್ವಂ ಶೂದ್ರಜಾತೀನಾಂ ಪರಿಚರ್ಯಾನುವರ್ತಿನಾಂ ॥ ೩೫ ॥

೩೨–೩೩. ಕೃಷ್ಯಾದಿ ಕರ್ಮಸಿದ್ಧಿಯಾದ ಮೇಲೆ ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಮಾಡಿ ಅವರಲ್ಲಿ ಸ್ಥಾನಗುಣಗಳಿಗನುಸಾರವಾಗಿ ಬ್ರಾಹ್ಮಣಾದಿ ವರ್ಣಗಳನ್ನೂ ಗೃಹಸ್ಥಾದ್ಯಾಶ್ರಮಗಳನ್ನೂ, ಧರ್ಮವ್ಯವಸ್ಥೆಯನ್ನೂ ಅವರವರ ಧರ್ಮಾನುಷ್ಠಾನದಿಂದ ಅವರು ಪಡೆದ ಲೋಕಗಳನ್ನೂ, ದೇಶ ಕಾಲ ಮುಂತಾದ ನಿಯಮಗಳನ್ನೂ ಗೊತ್ತುಮಾಡಿದನು.

೩೪–೩೯. ನಿತ್ಯನೈಮಿತ್ತಿಕ ಅಗ್ನಿಹೋತ್ರ ಮುಂತಾದ ಕರ್ಮಗಳನ್ನು ಅನುಷ್ಠಾನಮಾಡುವ ಬ್ರಾಹ್ಮಣರಿಗೆ ' ಕರ್ಮಣಾ ಪಿತೃಲೋಕಃ ' ಎಂಬ ಶ್ರುತಿಗನುಸಾರವಾಗಿ ಪ್ರಾಜಾಪತ್ಯವೆಂಬ ಪಿತೃಲೋಕ ವಾಸವನ್ನೂ, ಯುದ್ಧದಲ್ಲಿ ಹಿಮ್ಮೆಟ್ಟದ ಕ್ಷತ್ರಿಯರಿಗೆ ಇಂದ್ರಲೋಕ ವಾಸವನ್ನೂ, ತಮ್ಮ ಧರ್ಮವನ್ನಾಚರಿಸುವ ವೈಶ್ಯರಿಗೆ ದೇವಲೋಕವಾಸವನ್ನೂ, ಉತ್ತಮವರ್ಣದವರ ಸೇವೆಯನ್ನು ಮಾಡಿಕೊಂಡಿರುವ ಶೂದ್ರರಿಗೆ ಗಂಧರ್ವಲೋಕ ವಾಸವನ್ನೂ ಗೊತ್ತುಮಾಡಿ ಊರ್ಧ್ವರೇತಸ್ಸುಳ್ಳ ಯತಿಗಳಿಗೂ ಗುರುಕುಲವಾಸಮಾಡುವ ನೈಷ್ಠಿಕ ಬ್ರಹ್ಮಚಾರಿಗಳಿಗೂ ಎಂಭತ್ತೆಂಟು

ಅಷ್ಟಾಶೀತಿ ಸಹಸ್ರಾಣಿ ಯತೀನಾಮೂರ್ಧ್ವರೇತಸಾಂ ।
ಸ್ಮೃತಂ ತೇಷಾಂ ತು ಯತ್ ಸ್ಥಾನಂ ತದೇವ ಗುರುವಾಸಿನಾಂ ॥ ೩೬ ॥

ಸಪ್ತರ್ಷೀಣಾಂ ಚ ಯತ್ಸ್ಥಾನಂ ಸ್ಮೃತಂ ತದ್ವೈ ವನೌಕಸಾಂ ।
ಪ್ರಾಜಾಪತ್ಯಂ ಗೃಹಸ್ಥಾನಾಂ ನ್ಯಾಸಿನಾಂ ಬ್ರಹ್ಮಸಂಜ್ಞಿತಃ ॥ ೩೭ ॥

ಯೋಗಿನಾಮಮೃತಂ ಸ್ಥಾನಂ ಸ್ವಾತ್ಮಸಂತೋಷಕಾರಿಣಾಂ ॥ ೩೮ ॥

ಏಕಾಂತಿನಸ್ಸದಾ ಬ್ರಹ್ಮಧ್ಯಾಯಿನೋ ಯೋಗಿನೋ ಹಿ ಯೇ ।
ತೇಷಾಂ ತತ್ಪರಮಂ ಸ್ಥಾನಂ ಯದ್ವೈ ಪಶ್ಯಂತಿ ಸೂರಯಃ ॥ ೩೯ ॥

ಗತ್ವಾ ಗತ್ವಾ ನಿವರ್ತಂತೇ ಚಂದ್ರಸೂರ್ಯಾದಯೋ ಗ್ರಹಾಃ ।
ಅದ್ಯಾಪಿ ನ ನಿವರ್ತಂತೇ ದ್ವಾದಶಾಕ್ಷರಚಿಂತಕಾಃ ॥ ೪೦ ॥

ಸಾವಿರ ವಾಲಖಿಲ್ಯರೆಂಬ ಋಷಿಗಳು ವಾಸಮಾಡುವ ಸೂರ್ಯಲೋಕವೂ ವಾನಪ್ರಸ್ಥಾಶ್ರಮಿಗಳಿಗೆ ಸಪ್ತರ್ಷಿಲೋಕ ವಾಸವೂ, ಗೃಹಸ್ಥರಿಗೂ ಸನ್ಯಾಸಿಗಳಿಗೂ ಪ್ರಜಾಪತ್ಯವೆಂಬ ಬ್ರಹ್ಮನ ಸತ್ಯಲೋಕ ವಾಸವೂ ಏಕಾಗ್ರಚಿತ್ತದಿಂದ ಯಾವಾಗಲೂ ಪರಬ್ರಹ್ಮಸ್ವರೂಪವನ್ನು ಧ್ಯಾನಮಾಡುತ್ತಿರುವ ಯೋಗಿಗಳಿಗೆ ಪರಬ್ರಹ್ಮ ಪ್ರಾಪ್ತಿರೂಪವಾದ ಮೋಕ್ಷವೂ ಉಂಟಾಗುವುದೆಂದು ಬ್ರಹ್ಮನು ಗೊತ್ತುಮಾಡಿರುವನು.

೪೦. ಚಂದ್ರಸೂರ್ಯಾದಿ ಗ್ರಹಗಳೂ ಬ್ರಹ್ಮಾದಿ ದೇವತೆಗಳೂ ತಮ್ಮ ಅಧಿಕಾರವನ್ನು ಪಡೆದು ತಮ್ಮ ಪುಣ್ಯವಿರುವವರೆಗೂ ಅಧಿಕಾರವನ್ನು ನಡೆಸಿ ಪ್ರಳಯ ಕಾಲದಲ್ಲಿ ಪುಣ್ಯಕ್ಷಯದಿಂದ ಹಿಂದಿರುಗುವರು. ' ಓಂ ನಮೋ ಭಗವತೇ ವಾಸುದೇವಾಯ ' ಎಂಬ ದ್ವಾದಶಾಕ್ಷರ ಮಂತ್ರಜಪವನ್ನು ಮಾಡುವವರು ಎಷ್ಟು ಪ್ರಳಯಗಳಾದರೂ ಆ ಪರಮಪದದಿಂದ ಹಿಂದಿರುಗಿ ಬರುವುದಿಲ್ಲ.

ತಾಮಿಸ್ರಮಂಧತಾಮಿಸ್ರಂ ಮಹಾ ರೌರವರೌರವೌ ।
ಅಸಿಪತ್ರವನಂ ಘೋರಂ ಕಾಲಸೂತ್ರಮವೀಚಿಕಂ ॥ ೪೧ ॥

ವಿನಿಂದಕಾನಾಂ ವೇದಸ್ಯ ಯಜ್ಞವ್ಯಾಘಾತಕಾರಿಣಾಂ ।
ಸ್ಥಾನಮೇತತ್ಸಮಾಖ್ಯಾತಂ ಸ್ವಧರ್ಮತ್ಯಾಗಿನಶ್ಚ ಯೇ ॥ ೪೨ ॥

೪೧-೪೨. ವೇದವನ್ನು ನಿಂದಿಸುವವರಿಗೂ, ಯಜ್ಞಕ್ಕೆ ವಿಘ್ನವನ್ನು ಮಾಡುವವರಿಗೂ, ಸ್ವಧರ್ಮವನ್ನು ಬಿಟ್ಟವರಿಗೂ ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾರೌರವ, ಅಸಿಪತ್ರವನ, ಕಾಲಸೂತ್ರ, ಅವೀಚಿ ಎಂಬ ನರಕಗಳ ವಾಸವು ಗೊತ್ತಾಗಿರುವುದು.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದ ಪ್ರಥಮಾಂಶದಲ್ಲಿ ಆರನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಸಪ್ತಮೋಽಧ್ಯಾಯಃ

॥ ಶ್ರೀ ಪರಾಶರಃ ॥

ತತೋಽಭಿಧ್ಯಾಯತಸ್ತಸ್ಯ ಜಜ್ಞಿರೇ ಮಾನಸಾಃ ಪ್ರಜಾಃ ।
ತಚ್ಛರೀರಸಮುತ್ಪನ್ನೈಃ ಕಾರ್ಯೈಸ್ತತ್ಕರಣೈಸ್ಸಹ ॥
ಕ್ಷೇತ್ರಜ್ಞಾಸ್ಸಮವರ್ತಂತ ಗಾತ್ರೇಭ್ಯಸ್ತಸ್ಯ ಧೀಮತಃ ॥ ೧ ॥

ತೇ ಸರ್ವೇ ಸಮವರ್ತಂತ ಯೇ ಮಯಾ ಪ್ರಾಗುದೀರಿತಾಃ ।
ದೇವಾದ್ಯಾ ಸ್ಥಾವರಾಂತಾಶ್ಚ ತ್ರೈಗುಣ್ಯವಿಷಯೇ ಸ್ಥಿತಾಃ ॥ ೨ ॥

ಏವಂ ಭೂತಾನಿ ಸೃಷ್ಟಾನಿ ಚರಾಣಿ ಸ್ಥಾವರಾಣಿ ಚ ॥ ೩ ॥

ಯದಾಸ್ಯ ತಾಃ ಪ್ರಜಾಸ್ಸರ್ವಾ ನ ವ್ಯವರ್ಧಂತ ಧೀಮತಃ ।
ತದಾನ್ಯಾನ್ ಮಾನಸಾನ್ಪುತ್ರಾನ್ಸದೃಶಾನಾತ್ಮನೋಽಸೃಜತ್ ॥ ೪ ॥

ಏಳನೆಯ ಅಧ್ಯಾಯವು

೧-೪. ತರುವಾಯ ಸೃಷ್ಟಿಮಾಡಬೇಕೆಂದು ಯೋಚಿಸುತ್ತಿದ್ದ ಆ ಬ್ರಹ್ಮನ ಮನಸ್ಸಿನಿಂದ ಮಾನಸಪುತ್ರರು ಜನಿಸಿದರು. ಹಿರಣ್ಯಗರ್ಭನೆಂಬ ಬ್ರಹ್ಮನ ಶರೀರದಿಂದ ಹುಟ್ಟಿದ ದೇಹಗಳಿಂದಲೂ ಇಂದ್ರಿಯಗಳಿಂದಲೂ ಕೂಡಿ ಆ ಬ್ರಹ್ಮನ ಶರೀರದಿಂದಲೇ ಕ್ಷೇತ್ರಜ್ಞರೆಂಬ ಜೀವರುಗಳು ಹುಟ್ಟಿದವು. ಹಿಂದೆ ನಾನು ಹೇಳಿದ ದೇವಾದಿ ಸ್ಥಾವರಾಂತವಾದ ಜೀವರುಗಳೆಲ್ಲರೂ ಸತ್ವರಜಸ್ತಮೋಗುಣಗಳಿಗೆ ಅಧೀನರಾಗಿದ್ದರು. ಈ ರೀತಿಯಾಗಿ ಸೃಷ್ಟಿಸಿದ ಚರಾಚರ ಪ್ರಾಣಿಗಳು ಅಭಿವೃದ್ಧಿಯಾಗಲಿಲ್ಲ. ಆಗ ಬ್ರಹ್ಮನು ತನಗೆ ಸಮಾನರಾದ ಬೇರೆ ಮಾನಸಪುತ್ರರನ್ನು ಸೃಷ್ಟಿಮಾಡಿದನು.

ಭೃಗುಂ ಪುಲಸ್ತ್ಯಂ ಪುಲಹಂ ಕ್ರತುಮಂಗಿರಸಂ ತಥಾ ।
ಮರೀಚಿಂ ದಕ್ಷಮತ್ರಿಂ ಚ ವಸಿಷ್ಠಂ ಚೈವ ಮಾನಸಾನ್ ॥ ೫ ॥

ನವ ಬ್ರಹ್ಮಾಣಿ ಇತ್ಯೇತೇ ಪುರಾಣೇ ನಿಶ್ಚಯಂ ಗತಾಃ ॥ ೬ ॥

ಖ್ಯಾತಿಂ ಭೂತಿಂ ಚ ಸಂಭೂತಿಂ ಕ್ಷಮಾಂ ಪ್ರೀತಿಂ ತಥೈವ ಚ ।
ಸನ್ನತಿಂ ಚ ತಥೈವೋರ್ಜಾಮನಸೂಯಾಂ ತಥೈವ ಚ ॥ ೭ ॥

ಪ್ರಸೂತಿಂ ಚ ತತಸ್ಸೃಷ್ಟ್ವಾ ದದೌ ತೇಷಾಂ ಮಹಾತ್ಮನಾಂ ।
ಪತ್ನ್ಯೋ ಭವಧ್ವಮಿತ್ಯುಕ್ತ್ವಾ ತೇಷಾಮೇವ ತು ದತ್ತವಾನ್ ॥ ೮ ॥

ಸನಂದನಾದಯೋ ಯೇ ಚ ಪೂರ್ವಸೃಷ್ಟಾಸ್ತು ವೇಧಸಾ ।
ನತೇ ಲೋಕೇಷ್ವಸಜ್ಜಂತ ನಿರಪೇಕ್ಷಾಃ ಪ್ರಜಾಃ ಪ್ರತಿ ॥ ೯ ॥

೫–೬. ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗೀರಸ, ಮರೀಚಿ, ದಕ್ಷ, ಅತ್ರಿ, ವಸಿಷ್ಠ ಇವರೇ ಒಂಭತ್ತುಜನ ಬ್ರಹ್ಮಮಾನಸಪುತ್ರರೆಂದೂ ನವಬ್ರಹ್ಮರೆಂದೂ ಪುರಾಣಗಳಲ್ಲಿ ಪ್ರಸಿದ್ಧರಾಗಿರುವರು.

೭–೮. ಖ್ಯಾತಿ, ಭೂತಿ, ಸಂಭೂತಿ, ಕ್ಷಮಾ ಪ್ರೀತಿ, ಸನ್ನತಿ, ಊರ್ಜಾ, ಅನಸೂಯಾ, ಪ್ರಸೂತಿ ಎಂಬ ಒಂಭತ್ತುಜನ ಸ್ತ್ರೀಯರನ್ನು ಬ್ರಹ್ಮನು ಸೃಷ್ಟಿಸಿ ಕ್ರಮವಾಗಿ ನೀವು ನವಬ್ರಹ್ಮರ ಪತ್ನಿಯರಾಗಿರಿ ಎಂದು ಹೇಳಿ ಅವರನ್ನು ಆ ನವಬ್ರಹ್ಮರಿಗೇ ಕೊಟ್ಟನು.

೯–೧೩. ಬ್ರಹ್ಮನು ಹಿಂದೆಯೇ ಸೃಷ್ಟಿಸಿದ ಸನಂದನಾದಿಗಳು ಪ್ರಜಾಸೃಷ್ಟಿಯಲ್ಲಿ ಅಪೇಕ್ಷೆಯಿಲ್ಲದವರಾಗಿ ವೈರಾಗ್ಯವುಳ್ಳವರಾಗಿ ಕಾಮಕ್ರೋಧಾದಿಗಳಿಲ್ಲದೆ ಜ್ಞಾನವುಳ್ಳವರಾದರು. ಆಗ ಬ್ರಹ್ಮನಿಗೆ ಮೂರು ಲೋಕವನ್ನೂ ಸುಡುವಷ್ಟು ಕೋಪವು ಉಂಟಾಯಿತು. ಅವನ ಕೋಪಾಗ್ನಿಯ ಜ್ವಾಲೆಯು ಮೂರು ಲೋಕವನ್ನೂ ಆವರಿಸಿತು. ಆಗ ಕೋಪದಿಂದ ಪ್ರಕಾಶಿಸುತ್ತಿರುವ ಹುಬ್ಬುಗಂಟಿಕ್ಕಿದ ಬ್ರಹ್ಮನ ಹಣೆಯಿಂದ ಮಧ್ಯಾಹ್ನದ ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯುಳ್ಳ ಮಹಾ

ಸರ್ವೇ ತೇsಭ್ಯಾಗತಜ್ಞಾನಾಃ ವೀತರಾಗಾ ವಿಮತ್ಸರಾಃ ।
ತೇಷ್ವೇವಂ ನಿರಪೇಕ್ಷೇಷು ಲೋಕಸೃಷ್ಟೌ ಮಹಾತ್ಮನಃ ॥ ೧೦ ॥

ಬ್ರಹ್ಮಣೋಭೂನ್ಮಹಾನ್ಕ್ರೋಧಸ್ತ್ರೈಲೋಕ್ಯದಹನಕ್ಷಮಃ ।
ತಸ್ಯ ಕ್ರೋಧಸಮುದ್ಭೂತ ಜ್ವಾಲಾಮಾಲಾಭಿದೀಪಿತಂ ।
ಬ್ರಹ್ಮಣೋಭೂತ್ತದಾ ಸರ್ವಂ ತ್ರೈಲೋಕ್ಯಮಖಿಲಂ ಮುನೇ ॥ ೧೧ ॥

ಭ್ರುಕುಟೀಕುಟಿಲಾತ್ತಸ್ಯ ಲಲಾಟಾತ್ಕ್ರೋಧದೀಪಿತಾತ್ ।
ಸಮುತ್ಪನ್ನಸ್ತದಾ ರುದ್ರೋ ಮಧ್ಯಾಹ್ನಾರ್ಕಸಮಪ್ರಭಃ ॥ ೧೨ ॥

ಅರ್ಧನಾರೀನರವಪುಃ ಪ್ರಚಂಡೋತಿಶರೀರವಾನ್ ।
ವಿಭಜಾತ್ಮಾನಮಿತ್ಯುಕ್ತ್ವಾ ತಂ ಬಹ್ಮಾಂತರ್ದಧೇ ತತಃ ॥ ೧೩ ॥

ತಥೋಕ್ತೋsಸೌ ದ್ವಿಧಾ ಸ್ತ್ರೀತ್ವಂ ಪುರುಷತ್ವಂ ತಥಾಕರೋತ್ ।
ಬಿಭೇದ ಪುರುಷತ್ವಂ ಚ ದಶಧಾ ಚೈಕಧಾ ಚ ಸಃ ॥ ೧೪ ॥

ಪರಾಕ್ರಮಿಯೂ, ಅರ್ಧ ಶರೀರವು ಪುರುಷನದಾಗಿಯೂ, ಅರ್ಧ ಶರೀರವು ಸ್ತ್ರೀರೂಪ ವಾಗಿಯೂ ಇರುವ ರುದ್ರನು ಹುಟ್ಟಿದನು. ಬ್ರಹ್ಮನು ಆ ರುದ್ರನನ್ನು ಕುರಿತು ನಿನ್ನ ಶರೀರವನ್ನು ವಿಭಾಗಮಾಡಿಕೊಳ್ಳೆಂದು ಹೇಳಿ ಅದೃಶ್ಯನಾದನು.

೧೪–೧೭. ಆ ಮಾತನ್ನು ಕೇಳಿದ ರುದ್ರನು ತನ್ನ ಶರೀರವನ್ನು ಸ್ತ್ರೀಪುರುಷ ರೂಪದಿಂದ ಎರಡು ಭಾಗವಾಗಿ ಮಾಡಿಕೊಂಡನು. ಸ್ತ್ರೀರೂಪವನ್ನೂ ಶಾಂತರೂಪ ದಿಂದಲೂ, ಅಶಾಂತರೂಪದಿಂದಲೂ ಬಿಳುಪು ಕಪ್ಪು ಬಣ್ಣಗಳಿಂದ ಕೂಡಿರುವಂತೆ ಅನೇಕ ಭಾಗವಾಗಿ ಮಾಡಿದನು. ಹೀಗೆ ಬ್ರಹ್ಮನ ಕೋಪವು ಹನ್ನೊಂದು ಭಾಗವಾಗಿ ಏಕಾದಶ ರುದ್ರರೂಪದಿಂದ ಪ್ರಕಟವಾದ ಮೇಲೆ ಬ್ರಹ್ಮನು ಸತ್ವಗುಣ ಉಳ್ಳ ಹಿಂದೆಯೇ ತನ್ನ ಶರೀರದಿಂದಲೇ ಹುಟ್ಟಿದ ಸ್ವಾಯಂಭುವ ಮನುವನ್ನು ಪ್ರಜಾಪತಿಯನ್ನಾಗಿ ಮಾಡಿದನು. ದೇವನಾದ ಸ್ವಾಯಂಭುವ ಮನುವು ತನ್ನ

ಸೌಮ್ಯಾಸೌಮ್ಯೈಸ್ತಥಾ ಶಾಂತಾಶಾಂತೈಸ್ತ್ರೀತ್ವಂ ಚ ಸ ಪ್ರಭುಃ ।
ಬಿಭೇದ ಬಹುಧಾ ದೇವಸ್ವರೂಪೈರಸಿತೈಸ್ಸಿತೈಃ ॥ ೧೫ ॥

ತತೋ ಬ್ರಹ್ಮಾತ್ಮಸಂಭೂತಂ ಪೂರ್ವಂ ಸ್ವಾಯಂಭುವಂ ಪ್ರಭುಂ ।
ಆತ್ಮಾನಮೇವ ಕೃತವಾನ್ ಪ್ರಾಜಾಪತ್ಯೇ ಮನುಂ ದ್ವಿಜ ॥ ೧೬ ॥

ಶತರೂಪಾಂ ಚ ತಾಂ ನಾರೀಂ ತಪೋ ನಿರ್ಧೂತಕಲ್ಮಷಾಂ ।
ಸ್ವಾಯಂಭುವೋ ಮನುರ್ದೇವಃ ಪತ್ನೀತ್ವೇ ಜಗೃಹೇ ವಿಭುಃ ॥ ೧೭ ॥

ತಸ್ಮಾಚ್ಚ ಪುರುಷಾದ್ದೇವಿ ಶತರೂಪಾ ವ್ಯಜಾಯತ ।
ಪ್ರಿಯವ್ರತೋತ್ತಾನಪಾದೌ ಪ್ರಸೂತ್ಯಾಕೂತಿಸಂಜ್ಞಿತಂ ॥ ೧೮ ॥

ಕನ್ಯಾದ್ವಯಂ ಚ ಧರ್ಮಜ್ಞ ರೂಪೌದಾರ್ಯಗುಣಾನ್ವಿತಂ ।
ದದೌ ಪ್ರಸೂತಿಂ ದಕ್ಷಾಯ ಆಕೂತಿಂ ರುಚಯೇ ಪುರಾ ॥ ೧೯ ॥

ಶರೀರದ ಅರ್ಧಸ್ವರೂಪಳಾದ, ತಪಸ್ಸಿನಿಂದ ಪಾಪಗಳನ್ನೆಲ್ಲ ಕಳೆದುಕೊಂಡ ಶತರೂಪಾ ದೇವಿಯನ್ನು ಪತ್ನಿಯನ್ನಾಗಿ ಗ್ರಹಿಸಿದನು.

೧೮–೨೧. ಸ್ವಾಯಂಭುವ ಮನುವಿನಿಂದ ಶತರೂಪಾದೇವಿಯು ಪ್ರಿಯವ್ರತ ಉತ್ತಾನಪಾದ ಎಂಬಿಬ್ಬರು ಗಂಡುಮಕ್ಕಳನ್ನೂ, ಪ್ರಸೂತಿ, ಆಕೂತಿಯೆಂಬಿಬ್ಬರು ಕನ್ಯೆಯರನ್ನೂ ಪಡೆದಳು. ಮನುವು ರೂಪ, ಔದಾರ್ಯ ಮುಂತಾದ ಗುಣಗಳಿಂದ ಕೂಡಿದ ಕನ್ಯೆಯರಲ್ಲಿ ಪ್ರಸೂತಿಯನ್ನು ದಕ್ಷನಿಗೂ, ಆಕೂತಿಯನ್ನು ರುಚಿಯೆಂಬ ಮುನಿಗೂ ಕೊಟ್ಟು ವಿವಾಹಮಾಡಿದನು. ದಕ್ಷನಿಗೆ ಪ್ರಸೂತಿಯಲ್ಲಿ ದಕ್ಷಿಣಾಸಹಿತನಾದ ಯಜ್ಞನೆಂಬ ಮಗನು ಜನಿಸಿದನು. ಯಜ್ಞನಿಗೆ ದಕ್ಷಿಣಾ ಎಂಬ ಪತ್ನಿಯಲ್ಲಿ ಯಾಮಾ

ಪ್ರಜಾಪತಿಸ್ಸಜಗ್ರಾಹ ತಯೋರ್ಜಜ್ಞೇ ಸದಕ್ಷಿಣಃ ।
ಪುತ್ರೋ ಯಜ್ಞೋ ಮಹಾಭಾಗ ದಂಪತ್ಯೋರ್ಮಿಥುನಂ ತತಃ ॥ ೨೦ ॥

ಯಜ್ಞಸ್ಯ ದಕ್ಷಿಣಾಯಾಂತು ಪುತ್ರಾ ದ್ವಾದಶ ಜಜ್ಞಿರೇ ।
ಯಾಮಾ ಇತಿ ಸಮಾಖ್ಯಾತಾ ದೇವಾಸ್ಸ್ವಾಯಂಭುವೇ ಮನೌ ॥ ೨೧ ॥

ಪ್ರಸೂತ್ಯಾಂ ಚ ತಥಾ ದಕ್ಷಶ್ಚತಸ್ರೋ ವಿಂಶತಿಂ ತಥಾ ।
ಸಸರ್ಜ ಕನ್ಯಾಸ್ತಾಸಾಂ ತು ಸಮ್ಯಜ್ನಾಮಾನಿ ಮೇ ಶೃಣು ॥ ೨೨ ॥

ಶ್ರದ್ಧಾ ಲಕ್ಷ್ಮೀರ್ಧೃತಿಸ್ತುಷ್ಟಿಃ ಪುಷ್ಟಿರ್ಮೇಧಾ ಕ್ರಿಯಾ ತಥಾ ।
ಬುದ್ಧಿರ್ಲಜ್ಜಾ ವಪುಶ್ಶಾಂತಿಃ ಸಿದ್ಧಿಃ ಕೀರ್ತಿಸ್ತ್ರಯೋದಶೀ ॥ ೨೩ ॥

ಪತ್ನ್ಯರ್ಥಂ ಪ್ರತಿಜಗ್ರಾಹ ಧರ್ಮೋ ದಾಕ್ಷಾಯಣೀಃ ಪ್ರಭುಃ ।
ತಾಭ್ಯಶ್ಶಿಷ್ಟಾ ಯವೀಯಸ್ಯಃ ಏಕಾದಶ ಸುಲೋಚನಾಃ ॥ ೨೪ ॥

ಖ್ಯಾತಿಸ್ಸತ್ಯಥ ಸಂಭೂತಿಃ ಸ್ಮೃತಿಃ ಪ್ರೀತಿಃ ಕ್ಷಮಾ ತಥಾ ।
ಸನ್ನತಿಶ್ಚಾನಸೂಯಾ ಚ ಊರ್ಜಾ ಸ್ವಾಹಾ ಸ್ವಧಾ ತಥಾ ॥ ೨೫ ॥

ಎಂಬ ಹೆಸರುಳ್ಳ ಹನ್ನೆರಡು ಜನ ಮಕ್ಕಳು ಹುಟ್ಟಿದರು. ಇವರು ಸ್ವಾಯಂಭುವ ಮನ್ವಂತರದಲ್ಲಿ ದೇವತೆಗಳಾಗಿದ್ದರು.

೨೨–೨೭ ಆಮೇಲೆ ದಕ್ಷನು ಪ್ರಸೂತಿಯಲ್ಲಿ ಇಪ್ಪತ್ತುನಾಲ್ಕು ಕನ್ಯೆಯರನ್ನು ಪಡೆದನು. ಅವರಲ್ಲಿ ಶ್ರದ್ಧಾ, ಲಕ್ಷ್ಮಿ, ಧೃತಿ, ತುಷ್ಟಿ, ಪುಷ್ಟಿ, ಮೇಧಾ, ಕ್ರಿಯಾ, ಬುದ್ಧಿ, ಲಜ್ಜಾ, ವಪು, ಶಾಂತಿ, ಸಿದ್ಧಿ, ಕೀರ್ತಿ ಎಂಬ ಹದಿಮೂರು ಕನ್ಯೆಯರನ್ನು ಧರ್ಮನು ಪತ್ನಿಯರನ್ನಾಗಿ ಗ್ರಹಿಸಿದನು. ಮಿಕ್ಕ ಖ್ಯಾತಿ, ಸತಿ, ಸಂಭೂತಿ ಸ್ಮೃತಿ, ಪ್ರೀತಿ, ಕ್ಷಮಾ, ಸನ್ನತಿ, ಅನಸೂಯಾ, ಊರ್ಜಾ, ಸ್ವಾಹಾ, ಸ್ವಧಾ ಎಂಬ ಹನ್ನೊಂದು ಕನ್ಯೆಯರನ್ನು ಕ್ರಮವಾಗಿ ಭೃಗು, ಶಿವ, ಮರೀಚಿ, ಅಂಗಿರಸ್ಸು

ಭೃಗುರ್ಭವೋ ಮರೀಚಿಶ್ಚ ತಥಾ ಚೈವಾಂಗಿರಾಮುನಿಃ ।
ಪುಲಸ್ತ್ಯಃ ಪುಲಶ್ಚೈವ ಕ್ರತುಶ್ಚರ್ಷಿವರಸ್ತಥಾ ॥ ೨೬ ॥

ಅತ್ರಿರ್ವಸಿಷ್ಠೋ ವಹ್ನಿಶ್ಚ ಪಿತರಶ್ಚ ಯಥಾಕ್ರಮಂ ।
ಖ್ಯಾತ್ಯಾದ್ಯಾ ಜಗೃಹುಃ ಕನ್ಯಾ ಮುನಯೋ ಮುನಿಸತ್ತಮ ॥ ೨೭ ॥

ಶ್ರದ್ಧಾ ಕಾಮಂ ಚಲಾ ದರ್ಪಂ ನಿಯಮಂ ಧೃತಿರಾತ್ಮಜಂ ।
ಸಂತೋಷಂ ಚತಥಾ ತುಷ್ಟಿರ್ಲೋಭಂ ಪುಷ್ಟಿರಸೂಯತ ॥ ೨೮ ॥

ಮೇಧಾ ಶ್ರುತಂ ಕ್ರಿಯಾ ದಂಡಂ ನಯಂ ವಿನಯಮೇವ ಚ ।
ಬೋಧಂ ಬುದ್ಧಿ ಸ್ತಥಾ ಲಜ್ಜಾ ವಿನಿಯಂ ವಪುರಾತ್ಮಜಂ ।
ವ್ಯವಸಾಯಂ ಪ್ರಜಜ್ಞೇ ವೈ ಕ್ಷೇಮಂ ಶಾಂತಿರಸೂಯತ ॥ ೩೦ ॥

ಸುಖಂ ಸಿದ್ಧಿರ್ಯಶಃ ಕೀರ್ತಿರಿತ್ಯೇತೇ ಧರ್ಮಸೂನವಃ ।
ಕಾಮಾದ್ರತಿಸ್ಸುತಂ ಹರ್ಷಂ ಧರ್ಮಪೌತ್ರಮಸೂಯತ ॥ ೩೧ ॥

ಪುಲಸ್ತ್ಯ, ಪುಲಹ, ಕ್ರತು, ಅತ್ರಿ, ವಸಿಷ್ಠ, ಅಗ್ನಿ, ಪಿತೃದೇವತೆಗಳು ಇವರು ವಿವಾಹ ಮಾಡಿಕೊಂಡರು.

೨೮–೩೧. ಧರ್ಮನು ತನ್ನ ಪತ್ನಿಯಾದ ಶ್ರದ್ಧೆಯಲ್ಲಿ ಕಾಮನನ್ನೂ, ಲಕ್ಷ್ಮಿಯಲ್ಲಿ ದರ್ಪನನ್ನೂ, ಧೃತಿಯಲ್ಲಿ ನಿಯಮನನ್ನೂ, ತುಷ್ಟಿಯಲ್ಲಿ ಸಂತೋಷನನ್ನೂ, ಕ್ರಿಯೆಯಲ್ಲಿ ತಮ, ರಜ, ಸತ್ವಗುಣಗಳಿಂದ ದಂಡ, ನಯ, ವಿನಯ (ಬುದ್ಧಿಸಂಬಂಧ) ಎಂಬವರನ್ನೂ, ಬುದ್ಧಿಯಲ್ಲಿ ಜ್ಞಾನನನ್ನೂ, ಲಜ್ಜೆಯಲ್ಲಿ ವಿನಯನನ್ನೂ, (ಶರೀರ ಸಂಬಂಧ) ವಪುವಿನಲ್ಲಿ ವ್ಯವಸಾಯನನ್ನೂ, ಶಾಂತಿಯಲ್ಲಿ ಕ್ಷೇಮನನ್ನೂ, ಸಿದ್ಧಿಯಲ್ಲಿ ಸುಖನನ್ನೂ, ಕೀರ್ತಿಯಲ್ಲಿ ಯಶಸ್ಸನ್ನೂ, ಮಕ್ಕಳಾಗಿ ಪಡೆದನು. ಇವರೆಲ್ಲರೂ ಧರ್ಮನ ಮಕ್ಕಳು. ಕಾಮನಿಂದ ರತಿಯು ಹರ್ಷನೆಂಬ ಮಗನನ್ನು ಪಡೆದಳು. ಈ ಹರ್ಷನು ಧರ್ಮನ ಮೊಮ್ಮಗನು.

ಹಿಂಸಾ ಭಾರ್ಯಾತ್ವ ಧರ್ಮಸ್ಯ ತಯೋರ್ಜಜ್ಞೇ ತಥಾನೃತಂ ।
ಕನ್ಯಾ ಚ ನಿಕೃತಿಸ್ತಾಭ್ಯಾಂ ಭಯಂ ನರಕಮೇವಚ ॥ ೩೨ ॥

ಮಾಯಾ ಚ ವೇದನಾ ಚೈವ ಮಿಥುನಂ ತ್ವಿದಮೇತಯೋಃ ।
ತಯೋರ್ಜಜ್ಞೇಽಥ ವೈ ಮಾಯಾ ಮೃತ್ಯುಂ ಭೂತಾಪಹಾರಿಣಂ ॥ ೩೩ ॥

ವೇದನಾ ಸ್ವಸುತಂ ಚಾಪಿ ದುಃಖಂ ಜಜ್ಞೇಽಥ ರೌರವಾತ್ ।
ಮೃತ್ಯೋರ್ವ್ಯಾಧಿಜರಾಶೋಕತೃಷ್ಣಾ ಕ್ರೋಧಾಶ್ಚ ಜಜ್ಞಿರೇ ॥ ೩೪ ॥

ದುಃಖೋತ್ತರಾ ಸ್ಮೃತಾ ಹ್ಯೇತೇ ಸರ್ವೇ ಚಾಧರ್ಮಲಕ್ಷಣಾಃ ।
ನೈಷಾಂ ಭಾರ್ಯಾಸ್ತಿ ಪುತ್ರೋ ವಾ ತೇ ಸರ್ವೇ ಹ್ಯೂರ್ಧ್ವರೇತಸಃ ॥ ೩೫ ॥

ರೌದ್ರಾಣ್ಯೇತಾನಿ ರೂಪಾಣಿ ವಿಷ್ಣೋರ್ಮುನಿವರಾತ್ಮಜ ।
ನಿತ್ಯಪ್ರಳಯಹೇತುತ್ವಂ ಜಗತೋಽಸ್ಯ ಪ್ರಯಾಂತಿ ವೈ ॥ ೩೬ ॥

೩೨–೩೫, ಅಧರ್ಮನಿಗೆ ಹಿಂಸೆಯೇ ಪತ್ನಿಯು. ಇವರಿಬ್ಬರಿಗೂ ಅನೃತ ನಿಕೃತಿ (ವಂಚನಾ) ಎಂಬಿಬ್ಬರು ಮಕ್ಕಳು ಹುಟ್ಟಿದರು. ಇವರಿಬ್ಬರಿಗೂ ಭಯ, ನರಕ ಎಂಬಿಬ್ಬರು ಮಕ್ಕಳಾದರು. ಇವರಿಗೆ ಕ್ರಮವಾಗಿ ಮಾಯಾ, ವೇದನಾ ಎಂಬವರು ಪತ್ನಿಯರಾದರು. ಭಯನಿಂದ ಮಾಯೆಯು ಮೃತ್ಯುವೆಂಬ ಪುತ್ರನನ್ನು ಪಡೆದಳು. ನರಕನಿಂದ ವೇದನೆಯು ದುಃಖನೆಂಬ ಪುತ್ರನನ್ನು ಪಡೆದಳು. ವ್ಯಾಧಿ, ಜರಾ, ಶೋಕ, ತೃಷ್ಣಾ, ಕ್ರೋಧ ಎಂಬಿವರು ಮೃತ್ಯುವಿನ ಮಕ್ಕಳು. ಇವರೆಲ್ಲರೂ ದುಃಖವೇ ಫಲವಾಗಿ ಉಳ್ಳವರು. ಪಾಪ ಸ್ವರೂಪರು ಇವರಿಗೆ ಪತ್ನಿಯರಿಲ್ಲ. ಮಕ್ಕಳೂ ಇಲ್ಲ. ಇವರೆಲ್ಲರೂ ಊರ್ಧ್ವರೇತಸ್ಕರು. ಅಂದರೆ ಇವರಿಂದ ಮತ್ತೊಂದು ಕಾರ್ಯವು ಹುಟ್ಟುವುದಿಲ್ಲವೆಂದು ಭಾವವು. ದುಃಖಾನುಭವವೇ ಕೊನೆಯ ಕಾರ್ಯವು.

೩೬. ಮೈತ್ರೇಯನೇ, ಇವುಗಳೆಲ್ಲ ವಿಷ್ಣುವಿನ ತಾಮಸಗುಣದಿಂದಾದ- ಭಯಂಕರ ರೂಪಗಳು. ಇವು ಜಗತ್ತಿನಲ್ಲಿ ನಿತ್ಯ ಪ್ರಳಯ ಕಾರಣಗಳಾಗಿರುವುವು

ದಕ್ಷೋ ಮರೀಚಿರತ್ರಿಶ್ಚ ಭೃಗುಶ್ಚಾದ್ಯಾಃ ಪ್ರಜೇಶ್ವರಾಃ ।
ಜಗತ್ಯತ್ರ ಮಹಾಭಾಗ ನಿತ್ಯಸರ್ಗಸ್ಯ ಹೇತವಃ ॥ ೩೬ ॥

ಮನವೋ ಮನುಪುತ್ರಾಶ್ಚ ಭೂಪಾ ವೀರ್ಯಧನಾಶ್ಚ ಯೇ ।
ಸನ್ಮಾರ್ಗಾಭಿರತಾಶ್ಶೂರಾಸ್ತೇ ನಿತ್ಯಸ್ಥಿತಿಕಾರಿಣಃ ॥ ೩೭ ॥

॥ ಮೈತ್ರೇಯಃ ॥

ಯೇಯಂ ನಿತ್ಯಸ್ಥಿತಿರ್ಬ್ರಹ್ಮನ್ ನಿತ್ಯಸರ್ಗಸ್ತಥೇರಿತಃ ।
ನಿತ್ಯಾಭಾವಶ್ಚ ತೇಷಾಂ ವೈ ಸ್ವರೂಪಂ ಮಮ ಕಥ್ಯತಾಂ ॥ ೩೯ ॥

॥ ಶ್ರೀ ಪರಾಶರಃ ॥

ಸರ್ಗಸ್ಥಿತಿವಿನಾಶಾಂಶ್ಚ ಭಗವಾನ್ ಮಧುಸೂದನಃ ।
ತೈಸ್ತೈ ರೂಪೈರಚಿಂತ್ಯಾತ್ಮಾ ಕರೋತ್ಯವ್ಯಾಹತೋ ವಿಭುಃ ॥ ೪೦ ॥

೩೭-೩೮. ದಕ್ಷ, ಮರೀಚಿ, ಅತ್ರಿ, ಭೃಗು, ಮುಂತಾದ ನವಬ್ರಹ್ಮರು ಈ ಜಗತ್ತಿನಲ್ಲಿ ನಿತ್ಯಸೃಷ್ಟಿಗೆ ಕಾರಣರಾಗಿರುವರು. ಮನುಗಳೂ, ಮನುಪುತ್ರರೂ ಪರಾಕ್ರಮಿಗಳಾದ ರಾಜರಾಗಿ ಸನ್ಮಾರ್ಗದಲ್ಲಿ ನಡೆಯುತ್ತ ನಿತ್ಯಸ್ಥಿತಿಗೆ ಕಾರಣರಾಗಿರುವರು.

೩೯. ಬ್ರಹ್ಮಜ್ಞಾನಿಗಳಾದ ಪರಾಶರರೇ, ನಿತ್ಯಸೃಷ್ಟಿ, ನಿತ್ಯಸ್ಥಿತಿ, ನಿತ್ಯಪ್ರಳಯ ಎಂದರೇನು ? ಅವುಗಳ ಸ್ವರೂಪವನ್ನು ನನಗೆ ಹೇಳಬೇಕು, ಎಂದು ಮೈತ್ರೇಯನು ಪ್ರಶ್ನೆಮಾಡಿದನು.

೪೦-೪೧. ಪರಾಶರರು ಹೇಳುವರು :–ಮೈತ್ರೇಯನೇ, ಮಹಾಮಹಿಮನಾದ ವಿಷ್ಣುವು ಅಚಿಂತ್ಯ ಸ್ವರೂಪನೂ ಸರ್ವವ್ಯಾಪಿಯೂ ಆಗಿ ದಕ್ಷಾದಿ ರೂಪಗಳಿಂದಲೂ

ನೈಮಿತ್ತಿಕಃ ಪ್ರಾಕೃತಿಕಸ್ತಥೈವಾತ್ಯಂತಿಕೋ ದ್ವಿಜ ।
ನಿತ್ಯಶ್ಚ ಸರ್ವಭೂತಾನಾಂ ಪ್ರಳಯೋಽಯಂ ಚತುರ್ವಿಧಃ ॥ ೪೧ ॥

ಬ್ರಾಹ್ಮೋ ನೈಮಿತ್ತಿಕಸ್ತತ್ರ ಯಚ್ಛೇತೇ ಜಗತೀಪತಿಃ ।
ಪ್ರಯಾತಿ ಪ್ರಾಕೃತಶ್ಚೈವ ಬ್ರಹ್ಮಾಂಡಂ ಪ್ರಕೃತೌ ಲಯಂ ॥ ೪೨ ॥

ಜ್ಞಾನಾದಾತ್ಯಂತಿಕಃ ಪ್ರೋಕ್ತೋ ಯೋಗಿನಃ ಪರಮಾತ್ಮನಿ ।
ನಿತ್ಯಸ್ಸದೈವ ಜಾತಾನಾಂ ಯೋ ವಿನಾಶೋ ದಿವಾನಿಶಂ ॥ ೪೩ ॥

ಪ್ರಸೂತಿಃ ಪ್ರಕೃತೇರ್ಯಾತು ಸಾ ಸೃಷ್ಟಿಃ ಪ್ರಾಕೃತಾ ಸ್ಮೃತಾ ।
ದೈನಂದಿನೀ ತಥಾ ಪ್ರೋಕ್ತಾ ಯಾಂತರಪ್ರಳಯಾದನು ॥ ೪೪ ॥

ಭೂತಾನ್ಯನುದಿನಂ ಯತ್ರ ಜಾಯಂತೇ ಮುನಿಸತ್ತಮ ।
ನಿತ್ಯಸರ್ಗೋ ಹಿ ಸ ಪ್ರೋಕ್ತಃ ಪುರಾಣಾರ್ಥವಿಚಕ್ಷಣೈಃ ॥ ೪೫ ॥

ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವನು. ನೈಮಿತ್ತಿಕ, ಪ್ರಾಕೃತಿಕ, ಅತ್ಯಂತಿಕ, ನಿತ್ಯ ಎಂಬುದಾಗಿ ಸಮಸ್ತ ಪ್ರಾಣಿಗಳಿಗೂ ನಾಲ್ಕು ವಿಧವಾದ ಪ್ರಳಯಗಳಿರುವುವು.

೪೨-೪೩. ಸೃಷ್ಟಿಕರ್ತನಾದ ಬ್ರಹ್ಮನು ತನ್ನ ರಾತ್ರಿಯಲ್ಲಿ ನಿದ್ರೆಮಾಡುತ್ತಿರುವ ಕಾಲವನ್ನು ನೈಮಿತ್ತಿಕ ಪ್ರಳಯವೆಂದೂ, ಬ್ರಹ್ಮಾಂಡವು ಪ್ರಕೃತ್ತಿಯಲ್ಲಿ ಲಯವಾಗಿರುವ ಕಾಲವನ್ನು ಪ್ರಾಕೃತ ಪ್ರಳಯವೆಂದೂ ಯೋಗಿಗಳು ಜ್ಞಾನಪ್ರಾಪ್ತಿಯಿಂದಪರಮಾತ್ಮನಲ್ಲಿ ಐಕ್ಯವಾಗುವುದನ್ನು ಅತ್ಯಂತಿಕ ಪ್ರಳಯವೆಂದೂ, ಹುಟ್ಟಿದ ಪ್ರಾಣಿಗಳು ಹಗಲೂ ರಾತ್ರಿಯೂ ನಾಶವಾಗುತ್ತಿರುವುದನ್ನು ನಿತ್ಯಪ್ರಳಯವೆಂದೂ ಹೇಳುವರು.

೪೪-೪೫. ಪಕೃತಿಯಿಂದ ಮಹತ್ತತ್ವವೇ ಮೊದಲಾದುವುಗಳ ಸೃಷ್ಟಿಯು, ಪ್ರಾಕೃತ ಸೃಷ್ಟಿಯು. ಬ್ರಹ್ಮನ ಹಗಲಿನ ಕೊನೆಯಲ್ಲಿ ಅವಾಂತರ ಪ್ರಳಯವಾದಮೇಲೆ ಮತ್ತೆ ಹಗಲಿನ ಪ್ರಾರಂಭದಲ್ಲಿ ಆಗುವ ಸೃಷ್ಟಿಯು, ದೈನಂದಿನ ದೃಷ್ಟಿಯು ಪ್ರಪಂಚದಲ್ಲಿ ಪ್ರಾಣಿಗಳು ಪ್ರತಿದಿನವೂ ಹುಟ್ಟುತ್ತಿರುವುದೇ ನಿತ್ಯಸೃಷ್ಟಿಯು. ಹೀಗೆ ಸೃಷ್ಟಿಯು ಮೂರು ಬಗೆಯಾಗಿರುವುದು. ಎಂದು ಪುರಾಣಾರ್ಥವನ್ನು ತಿಳಿದವರು ಹೇಳುವರು

ಏವಂ ಸರ್ವ ಶರೀರೇಷು ಭಗವಾನ್ ಭೂತಭಾವನಃ ।
ಸಂಸ್ಥಿತಃ ಕುರುತೇ ವಿಷ್ಣುರುತ್ಪತ್ತಿಸ್ಥಿತಿಸಂಯಮಾನ್ ॥ ೪೬ ॥

ಸೃಷ್ಟಿಸ್ಥಿತಿವಿನಾಶಾನಾಂ ಶಕ್ತಯಸ್ಸರ್ವದೇಹಿಷು ।
ವೈಷ್ಣವ್ಯಃ ಪರಿವರ್ತಂತೇ ಮೈತ್ರೇಯಾಹರ್ನಿಶಂ ಸಮಾಃ ॥ ೪೭ ॥

ಗುಣತ್ರಯಮಯಂ ಹ್ಯೇತದ್ಬ್ರಹ್ಮನ್ ಶಕ್ತಿತ್ರಯಂ ಮಹತ್ ।
ಯೋಽತಿಯಾತಿ ಸ ಯಾತ್ಯೇವ ಪರಂ ನಾವರ್ತತೇ ಪುನಃ ॥ ೪೮ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ಸಪ್ತಮೋಽಧ್ಯಾಯಃ

೪೬-೪೭. ಹೀಗೆ ಮಹಾಮಹಿಮನಾದ ವಿಷ್ಣುವು ಸಮಸ್ತ ಶರೀರಗಳಲ್ಲಿಯೂ ಇದ್ದುಕೊಂಡು ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಿರುವನು. ಮೈತ್ರೇಯನೇ ವಿಷ್ಣುವಿನ ಸೃಷ್ಟಿ, ಸ್ಥಿತಿ ಸಂಹಾರ ಶಕ್ತಿಗಳು ಸತ್ವಾದಿಗುಣರೂಪದಿಂದ ಯಾವಾಗಲೂ ಸಮಸ್ತ ಜೀವರುಗಳಲ್ಲಿಯೂ ಸಂಚರಿಸುತ್ತಿರುವುವು.

೪೮. ಬ್ರಹ್ಮಜ್ಞಾನಿಯಾದ ಮೈತ್ರೇಯನೇ, ಗುಣತ್ರಯಾತ್ಮಕವಾದ ಈ ಮೂರು ಶಕ್ತಿಗಳನ್ನು ಯಾವನು ಅತಿಕ್ರಮಿಸುತ್ತಾನೆಯೋ ಅವನು ಪರಬ್ರಹ್ಮನಲ್ಲಿ ಐಕ್ಯನಾಗುವನು. ಅವನಿಗೆ ಪುನರ್ಜನ್ಮವಿರುವುದಿಲ್ಲ.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಏಳನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಅಷ್ಟಮೋಽಧ್ಯಾಯಃ

॥ ಶ್ರೀ ಪರಾಶರಃ ॥

ಕಥಿತಸ್ತಾಮಸಸ್ಸರ್ಗೋ ಬ್ರಹ್ಮಣಸ್ತೇ ಮಹಾಮುನೇ ।
ರುದ್ರಸರ್ಗಂ ಪ್ರವಕ್ಷ್ಯಾಮಿ ತನ್ಮೇ ನಿಗದತಶ್ಶೃಣು ॥ ೧ ॥

ಕಲ್ಪಾದಾವಾತ್ಮನಸ್ತುಲ್ಯಂ ಸುತಂ ಪ್ರಧ್ಯಾಯತಸ್ತತಃ ।
ಪ್ರಾದುರಾಸೀತ್ಪ್ರಭೋರಂಕೇ ಕುಮಾರೋ ನೀಲಲೋಹಿತಃ ॥ ೨ ॥

ರುರೋದ ಸುಸ್ವರಂ ಸೋಽಥ ಪ್ರಾದ್ರವದ್ದ್ವಿಜಸತ್ತಮ ।
ಕಿಂ ರೋದಿಷೀತಿ ತಂ ಬ್ರಹ್ಮಾ ರುದಂತಂ ಪ್ರತ್ಯುವಾಚ ವೈ ॥ ೩ ॥

ಎಂಟನೆಯ ಅಧ್ಯಾಯವು

೧–೨. ಪರಾಶರನು, ಮೈತ್ರೇಯ ಮಹಾಮುನಿಯೇ ಬ್ರಹ್ಮನ ತಾಮಸ ಸೃಷ್ಟಿಯನ್ನು ಹೇಳಿದೆನು. ಇನ್ನು ಮುಂದೆ ರುದ್ರಸೃಷ್ಟಿಯನ್ನು ಹೇಳುವೆನು ಕೇಳು:- ಸೃಷ್ಟಿಕರ್ತನಾದ ಬ್ರಹ್ಮನು ಕಲ್ಪದ ಪ್ರಾರಂಭದಲ್ಲಿ ತನಗೆ ಸಮಾನನಾದ ಪುತ್ರನನ್ನು ಪಡೆಯಬೇಕೆಂದು ಧ್ಯಾನಿಸುತ್ತಿರಲು ಅವನ ತೊಡೆಯಮೇಲೆ ನೀಲಲೋಹಿತನೆಂಬ ಕುಮಾರನು ಪ್ರಕಟನಾದನು.

೩–೫. ಆ ಬಾಲಕನು ಮಧುರಸ್ವರದಿಂದ ಅಳುತ್ತ ಓಡಾಡುತ್ತಿದ್ದನು. ಇದನ್ನು ಕಂಡು ಬ್ರಹ್ಮನು ಅಳುವುದಕ್ಕೆ ಕಾರಣವೇನೆಂದು ಪ್ರಶ್ನೆ ಮಾಡಿದನು. ಬಾಲಕನು

ನಾಮ ದೇಹೀತಿ ತಂ ಸೋಽಥ ಪ್ರತ್ಯುವಾಚ ಪ್ರಜಾಪತಿಃ ।
ರುದ್ರಸ್ತ್ವಂ ದೇವ ನಾಮ್ನಾಸಿ ಮಾ ರೋದೀರ್ಧೈರ್ಯಮಾವಹ ।
ಏವಮುಕ್ತಃ ಪುನಸ್ಸೋಽಥ ಸಪ್ತಕೃತ್ವೋ ರುರೋದ ಹ ॥ ೫ ॥

ತತೋಽನ್ಯಾನಿ ದದೌ ತಸ್ಮೈ ಸಪ್ತ ನಾಮಾನಿ ವೈ ಪ್ರಭುಃ ।
ಸ್ಥಾನಾನಿ ಚೈಷಾಮಷ್ಟಾನಾಂ ಪತ್ನೀಃ ಪುತ್ರಾಂಶ್ಚ ವೈ ಪ್ರಭುಃ

ಭವಂ ಶರ್ವಮಥೇಶಾನಂ ತಥಾ ಪಶುಪತಿಂ ದ್ವಿಜ ।
ಭೀಮಮುಗ್ರಂ ಮಹಾದೇವಮುವಾಚ ಸಪಿತಾಮಹಃ ॥ ೬ ॥

ಚಕ್ರೇ ನಾಮಾನ್ಯಥೈತಾನಿ ಸ್ಥಾನಾನ್ಯೇಷಾಂ ಚಕಾರ ಸಃ ।
ಸೂರ್ಯೋ ಜಲಂ ಮಹೀ ವಾಯುರ್ವಹ್ನಿರಾಕಾಶಮೇವ ಚ ।
ದೀಕ್ಷಿತೋ ಬ್ರಾಹ್ಮಣಸ್ಸೋಮ ಇತ್ಯೇತಾಸ್ತನವಃ ಕ್ರಮಾತ್ ॥ ೭ ॥

ಸುವರ್ಚಲಾ ತಥೈವೋಷಾ ಸುಕೇಶೀ ಚಾಪರಾ ಶಿವಾ ।
ಸ್ವಾಹಾ ದಿಶಸ್ತಥಾ ದೀಕ್ಷಾ ರೋಹಿಣೀ ಚ ಯಥಾಕ್ರಮಂ ॥ ೮ ॥

ತನಗೆ ಒಂದು ಹೆಸರನ್ನು ಇಡು ಎಂದು ಹೇಳಿದನು. ಆಗ ಬ್ರಹ್ಮನು ನಿನಗೆ ರುದ್ರನೆಂಬ ಹೆಸರಾಗುವುದು. ಅಳಬೇಡ. ಧೈರ್ಯವನ್ನು ಹೊಂದು ಎಂದು ಹೇಳಿದನು. ಈ ಮಾತನ್ನು ಕೇಳಿದ ಮೇಲೆಯೂ ಅವನು ಏಳುಬಾರಿ ಅತ್ತನು. ಆಮೇಲೆ ಅವನಿಗೆ ಮತ್ತೆ ಏಳು ಹೆಸರುಗಳನ್ನಿಟ್ಟನು. ಬಳಿಕ ಬ್ರಹ್ಮನು ಈ ಎಂಟು ಜನರಿಗೂ ಎಂಟು ಸ್ಥಾನಗಳನ್ನೂ, ಪತ್ನೀಪುತ್ರರನ್ನೂ ಕೊಟ್ಟನು.

೬-೮. ಆ ಏಳು ಹೆಸರುಗಳಾವುವೆಂದರೆ:-ಭವ, ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮಹಾದೇವ ಎಂಬಿವೇ ಏಳು ಹೆಸರುಗಳು. ರುದ್ರನೇ ಆದಿಯಾಗಿ ಈ ಎಂಟು ಜನರಿಗೆ ಸೂರ್ಯ, ಜಲ, ಭೂಮಿ, ವಾಯು, ಅಗ್ನಿ, ಆಕಾಶ, ದೀಕ್ಷಿತನಾದ ಬ್ರಾಹ್ಮಣ, ಚಂದ್ರ ಈ ಎಂಟು ಶರೀರಗಳು. ಸುವರ್ಚಲಾ, ಉಷಾ, ಸುಕೇಶೀ ಶಿವಾ, ಸ್ವಾಹಾ, ದಿಶ, ದೀಕ್ಷಾ, ರೋಹಿಣಿ ಎಂಬ ಎಂಟುಜನ ಪತ್ನಿಯರು.

ಸೂರ್ಯಾದೀನಾಂ ದ್ವಿಜಶ್ರೇಷ್ಠ ರುದ್ರಾದ್ಯೈರ್ನಾಮಭಿಸ್ಸಹ ।
ಪತ್ನ್ಯಸ್ಸ್ಮೃತಾ ಮಹಾಭಾಗ ತದಪತ್ಯಾನಿ ಮೇ ಶೃಣು ॥ ೯ ॥

ಏಷಾಂ ಸೂತಿಪ್ರಸೂತಿಭ್ಯಾಂ ಇದಮಾಪೂರಿತಂ ಜಗತ್ ॥ ೧೦ ॥

ಶನೈಶ್ಚರಸ್ತಥಾ ಶುಕ್ರೋ ಲೋಹಿತಾಂಗೋ ಮನೋಜವಃ ।
ಸ್ಕಂದಃ ಸ್ವರ್ಗೋಽಥ ಸಂತಾನೋ ಬುಧಶ್ಚಾನುಕ್ರಮಾತ್ಸುತಾಃ ॥ ೧೧ ॥

ಏವಂ ಪ್ರಕಾರೋ ರುದ್ರೋಽಸೌ ಸತೀಂ ಭಾರ್ಯಾಮವಿಂದತ ।
ಉಪಯೇಮೇ ದುಹಿತರಂ ದಕ್ಷಸ್ಯೈವ ಪ್ರಜಾಪತೇಃ ॥ ೧೨ ॥

ದಕ್ಷಕೋಪಾಚ್ಚ ತತ್ಯಾಜ ಸಾ ಸತೀ ಸ್ವಕಳೇಬರಂ ।
ಹಿಮವದ್ದುಹಿತಾ ಸಾಭೂನ್ಮೇನಾಯಾಂ ದ್ವಿಜಸತ್ತಮ ॥ ೧೩ ॥

೯–೧೧. ಕ್ರಮವಾಗಿ ರುದ್ರನೇ ಮೊದಲಾದ ಹೆಸರಿನ ಸೂರ್ಯಾದಿಯಾದ ಎಂಟು ಶರೀರಗಳಿಗೆ ಸುವರ್ಚಲಾ ಮುಂತಾದ ಎಂಟುಜನ ಪತ್ನಿಯರಾದರು ಶನಿ, ಶುಕ್ರ, ಅಂಗಾರಕ, ಮನಸ್ಸು, ವೇಗ, ಸ್ಕಂದ, ಸ್ವರ್ಗ, ಬುಧ ಎಂಬ ಎಂಟು ಜನರು ಕ್ರಮವಾಗಿ ಮಕ್ಕಳಾದರು. ಇವರ ಮಕ್ಕಳು, ಮೊಮ್ಮಕ್ಕಳುಗಳಿಂದಲೇ ಪ್ರಪಂಚವು ತುಂಬಿ ಹೋಗಿರುವುದು.

೧೨–೧೫. ಈ ಪ್ರಕಾರವಾಗಿ ರುದ್ರನು ದಕ್ಷಪ್ರಜಾಪತಿಯ ಮಗಳಾದ ಸತೀದೇವಿಯನ್ನು ವಿವಾಹಮಾಡಿಕೊಂಡನು. ದಕ್ಷನ ಕೋಪದಿಂದ ಸತೀದೇವಿಯು ತನ್ನ ಶರೀರವನ್ನು ತ್ಯಾಗಮಾಡಿ, ಹಿಮವಂತನ ಪತ್ನಿಯಾದ ಮೇನೆಗೆ ಮಗಳಾಗಿ ಹುಟ್ಟಿದಳು. ಶಿವನು ತನ್ನನ್ನೇ ಧ್ಯಾನಮಾಡುತ್ತಿದ್ದ ಉಮಾದೇವಿಯನ್ನು ವಿವಾಹ ಮಾಡಿಕೊಂಡನು. (ಯಜ್ಞದಲ್ಲಿ ದಕ್ಷನು ರುದ್ರನಿಗೆ ಅಪಮಾನ ಮಾಡಿದುದರಿಂದ ಅವನ ಸಂತತಿಯು ಅಭಿವೃದ್ಧಿಯಾಗಲಿಲ್ಲವೆಂದು ಅಭಿಪ್ರಾಯವು.) ಭೃಗುಮುನಿಯು

ಉಪಯೇಮೇ ಪುನಶ್ಚೋಮಾಮನನ್ಯಾಂ ಭಗವಾನ್ ಹರಃ । ॥ ೧೪ ॥
ದೇವೌ ಧಾತೃವಿಧಾತಾರೌ ಭೃಗೋಃ ಖ್ಯಾತಿರಸೂಯತ ।
ಶ್ರಿಯಂ ಚ ದೇವದೇವಸ್ಯ ಪತ್ನೀ ನಾರಾಯಣಸ್ಯ ಯಾ ॥ ೧೫ ॥

॥ ಮೈತ್ರೇಯಃ ॥

ಕ್ಷೀರೋದಾಬ್ಧೌ ಶ್ರೀಸ್ಸಮುತ್ಪನ್ನಾ ಶ್ರೂಯತೇಽಮೃತಮಂಥನೇ ।
ಭೃಗೋಃ ಖ್ಯಾತ್ಯಾಂ ಸಮುತ್ಪನ್ನೇತ್ಯೇತದಾಹ ಕಥಂ ಭವಾನ್ ॥ ೧೬ ॥

॥ ಶ್ರೀ ಪರಾಶರಃ ॥

ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃಶ್ರೀರನಪಾಯಿನೀ ।

ಪತ್ನಿಯಾದ ಖ್ಯಾತಿಯು ಧಾತಾ, ವಿಧಾತಾ ಎಂಬ ದೇವತೆಗಳನ್ನೂ, ನಾರಾಯಣನ ಪತ್ನಿಯಾದ ಶ್ರೀದೇವಿಯನ್ನೂ ಪಡೆದಳು ಎಂದು ಹೇಳಿದನು.

೧೬. ಮೈತ್ರೇಯನು ಪ್ರಶ್ನೆ ಮಾಡುವನು:—ಪರಾಶರರೇ ಲಕ್ಷ್ಮೀದೇವಿಯು ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಕಡೆಯುವಾಗ ಅಲ್ಲಿಯೇ ಹುಟ್ಟಿದಳೆಂದು ಕೇಳಿರುವೆನು. ಭೃಗುಮುನಿಯಿಂದ ಖ್ಯಾತಿಯಲ್ಲಿ ಹುಟ್ಟಿದಳೆಂದು ನೀವು ಹೇಳಿದುದು ಹೇಗೆ ಹೊಂದುವುದು ?

೧೭. ಪರಾಶರು ಉತ್ತರವನ್ನು ಹೇಳುವರು:—ವಿಷ್ಣುಶಕ್ತಿಸ್ವರೂಪಳಾದ ಲಕ್ಷ್ಮಿಯು ನಿತ್ಯಳೂ, ಸರ್ವಗತಳೂ, ಸರ್ವಸ್ವರೂಪಳೂ ಆಗಿ ಕಾರ್ಯವಶದಿಂದ ಆವಿರ್ಭಾವತಿರೋಭಾವಗಳನ್ನು ಹೊಂದುವಳು. ಆದುದರಿಂದ ಮೊದಲು ಭೃಗುಪುತ್ರಿಯಾಗಿ ಆವಿರ್ಭವಿಸಿ, ದುರ್ವಾಸರ ಶಾಪದಿಂದ ತಿರೋಧಾನಳಾಗಿ ಮತ್ತೆ ಕ್ಷೀರಸಮುದ್ರದಲ್ಲಿ ಆವಿರ್ಭವಿಸಿದುದು ವಿರೋಧವಾದುದಲ್ಲವೆಂದು ಮುಂದಿನ ಅಧ್ಯಾಯವು ಪೂರ್ತಿಯಾಗುವವರೆಗೂ ಆ ಲಕ್ಷ್ಮೀದೇವಿಯ ಚರಿತ್ರೆಯನ್ನೇ ವಿಸ್ತಾರವಾಗಿ ಹೇಳುವರು. ಬ್ರಾಹ್ಮಣಶ್ರೇಷ್ಠನಾದ ಮೈತ್ರೇಯನೇ, ವಿಷ್ಣುವಿನಂತೆಯೇ ಲಕ್ಷ್ಮೀ

ಯಥಾ ಸರ್ವಗತೋ ವಿಷ್ಣುಸ್ತಥೈವೇಯಂ ದ್ವಿಜೋತ್ತಮ ॥ ೧೭ ॥

ಅರ್ಥೋ ವಿಷ್ಣುರಿಯಂ ವಾಣೀ ನೀತಿರೇಷಾ ನಯೋ ಹರಿಃ ।
ಬೋಧೋ ವಿಷ್ಣುರಿಯಂ ಬುದ್ಧಿರ್ಧರ್ಮೋಽಸೌ ಸತ್ಕ್ರಿಯಾತ್ವಿಯಂ ॥ ೧೮ ॥

ಸ್ರಷ್ಟಾ ವಿಷ್ಣುರಿಯಂ ಸೃಷ್ಟಿಶ್ರೀರ್ಭೂಮಿರ್ಭೂಧರೋ ಹರಿಃ ।
ಸಂತೋಷೋ ಭಗವಾನ್ ಲಕ್ಷ್ಮೀಸ್ತುಷ್ಟಿರ್ಮೈತ್ರೇಯ ಶಾಶ್ವತೀ ॥ ೧೯ ॥

ಇಚ್ಛಾ ಶ್ರೀರ್ಭಗವಾನ್ಕಾಮೋ ಯಜ್ಞೋಽಸೌ ದಕ್ಷಿಣಾ ತು ಸಾ ।
ಆಜ್ಯಾಹುತಿರಸೌ ದೇವೀ ಪುರೋಡಾಶೋ ಜನಾರ್ದನಃ ॥ ೨೦ ॥

ಪತ್ನೀ ಶಾಲಾ ಮುನೇ ಲಕ್ಷ್ಮೀಃ ಪ್ರಾಗ್ವಂಶೋ ಮಧುಸೂದನಃ ।
ಚಿತಿರ್ಲಕ್ಷ್ಮೀರ್ಹರಿರ್ಯೂಪ ಇಧ್ಮ ಶ್ರೀರ್ಭಗವಾನ್ ಕುಶಃ ॥ ೨೧ ॥

ದೇವಿಯೂ ಸರ್ವಗತಳೂ, ನಿತ್ಯಳೂ, ಜಗತ್ತಿಗೆ ತಾಯಿಯಾದವಳೂ ಆಗಿ ಆ ದೇವನನ್ನು ಬಿಟ್ಟಿರತಕ್ಕವಳಲ್ಲ.

೧೮-೨೫. ಈ ಲಕ್ಷ್ಮೀದೇವಿಯೇ ಮಾತಿನ ಸ್ವರೂಪಳು. ವಿಷ್ಣುವು ಅರ್ಥ ಸ್ವರೂಪನು. ಲಕ್ಷ್ಮಿಯು ನೀತಿಸ್ವರೂಪಳು. ಹರಿಯು ಸಾಮದಾದ್ಯುಪಾಯಸ್ವರೂಪನು. ವಿಷ್ಣುವು ಜ್ಞಾನಸ್ವರೂಪನು. ಲಕ್ಷ್ಮಿಯು ಬುದ್ಧಿಶಕ್ತಿ ಸ್ವರೂಪಳು. ಹರಿಯು ಧರ್ಮ ಸ್ವರೂಪನು. ಲಕ್ಷ್ಮಿಯು ಕ್ರಿಯಾಸ್ವರೂಪಳು. ಹರಿಯು ಸೃಷ್ಟಿಕರ್ತನು. ಲಕ್ಷ್ಮಿಯು ಸೃಷ್ಟಿರೂಪಳು. ಲಕ್ಷ್ಮಿಯೇ ಭೂಮಿಯು. ಹರಿಯು ಭೂಮಿಯ ಪತಿಯು. ವಿಷ್ಣುವು ಸಂತೋಷಸ್ವರೂಪನು. ಲಕ್ಷ್ಮಿಯು ತೃಪ್ತಿಸ್ವರೂಪಳು. ಹರಿಯು ಕಾಮನು. ಲಕ್ಷ್ಮಿಯು ಇಚ್ಛೆಯು. ಹರಿಯು ಯಜ್ಞಸ್ವರೂಪನು. ಶ್ರೀಯು ದಕ್ಷಿಣಾಸ್ವರೂಪಳು. ದೇವಿಯು ಆಜ್ಯಾಹುತಿಯು. ದೇವನು ಪುರೋಡಾಶವೆಂಬ ಹವಿಸ್ಸು. ದೇವಿಯು ಯಜ್ಞಶಾಲಾಸ್ವರೂಪಳು. ದೇವನು ಪ್ರಾಗ್ವಂಶ ಸ್ವರೂಪನು. ಲಕ್ಷ್ಮಿಯು ಚಯನ ಸ್ವರೂಪಳು. ಹರಿಯು ಯೂಪಸ್ವರೂಪನು. ಶ್ರೀಯು ಇಧ್ಮರೂಪಳು. ಹರಿಯು ಕುಶಸ್ವರೂಪನು. ಹರಿಯು ಸಾಮವೇದವು ಶ್ರೀಯು ಉದ್ಗೀತಸ್ವರೂಪಳು ಶ್ರೀಯು

ಸಾಮಸ್ವರೂಪೀ ಭಗವಾನುದ್ಗೀತಿಃ ಕಮಲಾಲಯಾ ।
ಸ್ವಾಹಾ ಲಕ್ಷ್ಮೀರ್ಜಗನ್ನಾಥೋ ವಾಸುದೇವೋ ಹುತಾಶನಃ ॥ ೨೨ ॥

ಶಂಕರೋ ಭಗವಾನ್ವಿಷ್ಣುಃ ಗೌರೀಲಕ್ಷ್ಮೀರ್ದ್ವಿಜೋತ್ತಮ ।
ಮೈತ್ರೇಯ ಕೇಶವಸ್ಸೂರ್ಯಸ್ತತ್ಪ್ರಭಾ ಕಮಲಾಲಯಾ ॥ ೨೩ ॥

ವಿಷ್ಣುಃ ಪಿತೃಗಣಃ ಪದ್ಮಾ ಸ್ವಧಾ ಶಾಶ್ವತಪುಷ್ಟಿದಾ ।
ದ್ಯೌಶ್ಶ್ರೀಸ್ಸರ್ವಾತ್ಮಕೋ ವಿಷ್ಣುರವಕಾಶೋಽತಿವಿಸ್ತರಃ ॥ ೨೪ ॥

ಶಶಾಂಕಶ್ಶ್ರೀಧರಃ ಕಾಂತಿಶ್ಶ್ರೀಸ್ತಸ್ಯೈವಾನಪಾಯಿನೀ ।
ಧೃತಿರ್ಲಕ್ಷ್ಮೀರ್ಜಗಚ್ಚೇಷ್ಟಾ ವಾಯುಸ್ಸರ್ವತ್ರಗೋ ಹರಿಃ ॥ ೨೫ ॥

ಜಲಧಿರ್ದ್ವಿಜ ಗೋವಿಂದಸ್ತದ್ವೇಲಾ ಶ್ರೀರ್ಮಹಾಮತೇ ।
ಲಕ್ಷ್ಮೀಸ್ವರೂಪಮಿಂದ್ರಾಣೀ ದೇವೇಂದ್ರೋ ಮಧುಸೂದನಃ ॥ ೨೬ ॥

ಯಮಶ್ಚಕ್ರಧರಸ್ಸಾಕ್ಷಾದ್ಧೂಮೋರ್ಣಾ ಕಮಲಾಲಯಾ ।
ಋದ್ಧಿಶ್ಶ್ರೀಶ್ಶ್ರೀಧರೋ ದೇವಃ ಸ್ವಯಮೇವ ಧನೇಶ್ವರಃ ॥ ೨೭ ॥

ಸ್ವಾಹಾದೇವಿಯು. ಹರಿಯು ಅಗ್ನಿದೇವನು. ವಿಷ್ಣುವೇ ಶಂಕರನು. ಲಕ್ಷ್ಮಿಯೇ ಗೌರಿಯು. ವಿಷ್ಣುವೇ ಸೂರ್ಯನು. ಲಕ್ಷ್ಮಿಯೇ ಅವನ ಕಾಂತಿಯು. ವಿಷ್ಣುವೇ. ಪಿತೃ ದೇವತೆಗಳು. ಲಕ್ಷ್ಮಿಯೇ ಸ್ವಧಾದೇವಿಯು. ವಿಷ್ಣುವೇ ಆಕಾಶವು. ಲಕ್ಷ್ಮಿಯೇ ದ್ಯುಲೋಕವು. ವಿಷ್ಣುವೇ ಚಂದ್ರನು. ಲಕ್ಷ್ಮಿಯೇ ಅವನ ಕಾಂತಿಯು. ಹರಿಯೇ ವಾಯುಸ್ವರೂಪನು. ಲಕ್ಷ್ಮಿಯು ಧೃತಿಯೆಂಬ ಮೇಧಾಶಕ್ತಿಸ್ವರೂಪಳು.

೨೬–೨೭. ವಿಷ್ಣುವೇ ಸಮುದ್ರವು. ಲಕ್ಷ್ಮಿಯೇ ಅದರ ದಡವು ಹರಿಯೇ ದೇವೇಂದ್ರನು. ಲಕ್ಷ್ಮಿಯೇ ಶಚೀದೇವಿಯು. ಹರಿಯೇ ಚಕ್ರಧರನಾದ ಯಮನು. ಲಕ್ಷ್ಮಿಯೇ ಧೂಮೋರ್ಣಾ ಎಂಬ ಯಮನ ಪತ್ನಿಯು. ಹರಿಯೇ ಕುಬೇರನು. ಲಕ್ಷ್ಮಿಯೇ ಅವನ ಪತ್ನಿಯಾದ ಬುದ್ಧಿಯು. ಹರಿಯೇ ವರುಣನು. ಲಕ್ಷ್ಮಿಯೇ

ಗೌರೀ ಲಕ್ಷ್ಮೀರ್ಮಹಾಭಾಗ ಕೇಶವೋ ವರುಣಸ್ಸ್ವಯಂ ।
ಶ್ರೀರ್ದೇವಸೇನಾ ತದ್ಭರ್ತಾ ದೇವಸೇನಾಪತಿರ್ಹರಿಃ ॥ ೨೮ ॥

ಅವಷ್ಟಂಭೋ ಗದಾಪಾಣಿಃ ಶಕ್ತಿರ್ಲಕ್ಷ್ಮೀರ್ದ್ವಿಜೋತ್ತಮ ।
ಕಾಷ್ಠಾ ಲಕ್ಷ್ಮೀರ್ನಿಮೇಷೋಽಸೌ ಮುಹೂರ್ತೋಽಸೌ ಕಲಾ ತು ಸಾ ॥

ಜ್ಯೋತ್ಸ್ನಾ ಲಕ್ಷ್ಮೀಃ ಪ್ರದೀಪೋಽಸೌ ಸರ್ವಸ್ಸರ್ವೇಶ್ವರೋ ಹರಿಃ ।
ಲತಾ ಭೂತಾ ಜಗನ್ಮಾತಾ ಶ್ರೀರ್ವಿಷ್ಣುರ್ದ್ರುಮಸಂಸ್ಥಿತಿಃ ॥ ೩೦ ॥

ವಿಭಾವರೀ ಶ್ರೀರ್ದಿವಸೋ ದೇವಶ್ಚಕ್ರಗದಾಧರಃ ।
ವರಪ್ರದೋ ವರೋ ವಿಷ್ಣುರ್ವಧೂಃ ಪದ್ಮವನಾಲಯಾ ॥ ೩೧ ॥

ನದಸ್ವರೂಪೀ ಭಗವಾನ್ ಶ್ರೀರ್ನದೀರೂಪಸಂಸ್ಥಿತಾ ।
ಧ್ವಜಶ್ಚ ಪುಂಡರೀಕಾಕ್ಷಃ ಪತಾಕಾ ಕಮಲಾಲಯಾ ॥ ೩೨ ॥

ಅವನ ಪತ್ನಿಯಾದ ಗೌರಿಯು. ಹರಿಯೇ ಕುಮಾರಸ್ವಾಮಿಯು. ಲಕ್ಷ್ಮಿಯೇ ಅವನ ಪತ್ನಿಯಾದ ದೇವಸೇನೆಯು.

೨೯–೩೫. ವಿಷ್ಣುವು ಪ್ರಯತ್ನ ಸ್ವರೂಪನು. ಲಕ್ಷ್ಮಿಯು ಶಕ್ತಿಸ್ವರೂಪಳು. ಲಕ್ಷ್ಮಿಯು ಕಲಾಕಾಷ್ಠಾ ಎಂಬ ಕಾಲಸ್ವರೂಪಳು. ವಿಷ್ಣುವು ನಿಮಿಷಮುಹೂರ್ತವೆಂಬ ಕಾಲಸ್ವರೂಪನು. ಲಕ್ಷ್ಮಿಯು ಪ್ರಭಾಸ್ವರೂಪಳು. ಹರಿಯು ದೀಪಸ್ವರೂಪನು. ಲಕ್ಷ್ಮಿಯು ಲತಾರೂಪಳು. ವಿಷ್ಣುವು ಲತೆಗೆ ಆಧಾರವಾದ ವೃಕ್ಷಸ್ವರೂಪನು. ಲಕ್ಷ್ಮಿಯು ರಾತ್ರಿಸ್ವರೂಪಳು. ಹರಿಯು ಹಗಲಿನ ಸ್ವರೂಪನು. ವಿಷ್ಣುವು ವರನು. ಲಕ್ಷ್ಮಿಯು ವಧುವು ವಿಷ್ಣುವು ನದಸ್ವರೂಪನು ಲಕ್ಷ್ಮಿಯು ನದೀಸ್ವರೂಪಳು ಹರಿಯು ಧ್ವಜರೂಪನು. ಲಕ್ಷ್ಮಿಯು ಪತಾಕೆಯ ಸ್ವರೂಪಳು. ಲಕ್ಷ್ಮಿಯು ತೃಷ್ಣಾ ಸ್ವರೂಪಳು. ವಿಷ್ಣುವು ಲೋಭಸ್ವರೂಪನು. ಲಕ್ಷ್ಮಿಯು ರತಿಸ್ವರೂಪಳು

ತೃಷ್ಣಾ ಲಕ್ಷ್ಮೀರ್ಜಗತ್ಸ್ವಾಮೀ ಲೋಭೋ ನಾರಾಯಣಃ ಪರಃ ।
ರತೀ ರಾಗಶ್ಚ ಧರ್ಮಜ್ಞ ಲಕ್ಷ್ಮೀರ್ಗೋವಿಂದ ಏವ ಚ ॥ ೩೩ ॥

ಕಿಂ ವಾತ್ರ ಬಹುನೋಕ್ತೇನ ಸಂಕ್ಷೇಪೇಣೇದಮುಚ್ಯತೇ ॥ ೩೪ ॥

ದೇವತಿರ್ಯಙ್ಮನುಷ್ಯೇಷು ಪುಂನಾಮಾ ಭಗವಾನ್ಹರಿಃ ।
ಸ್ತ್ರೀನಾಮ್ನೀ ಶ್ರೀಶ್ಚ ವಿಜ್ಞೇಯಾ ನಾನಯೋರ್ವಿದ್ಯತೇ ಪರಂ ॥ ೩೫ ॥

ಇತಿ ಶ್ರೀವಿಷ್ಣುಪುರಾಣೇ ಪ್ರಥಮಾಂಶೇ ಅಷ್ಟಮೋಽಧ್ಯಾಯಃ.

ಗೋವಿಂದನು ರಾಗಸ್ವರೂಪನು. ವಿಶೇಷವಾಗಿ ಹೇಳುವುದರಿಂದೇನು ಪ್ರಯೋಜನ ಸಾರವಾದ ಒಂದು ಮಾತನ್ನು ಹೇಳುವೆನು. ದೇವತೆಗಳು, ತಿರ್ಯಗ್ಯೋನಿಗಳು, ಮನುಷ್ಯರು ಇವರಲ್ಲಿ ಪುರುಷರ ಹೆಸರುಳ್ಳವರೆಲ್ಲ ಮಹಾಮಹಿಮನಾದ ವಿಷ್ಣು ಸ್ವರೂಪರು. ಸ್ತ್ರೀಯರ ಹೆಸರುಳ್ಳವರೆಲ್ಲ ಲಕ್ಷ್ಮೀಸ್ವರೂಪರು. ಇವರಿಬ್ಬರಿಗಿಂತ ಬೇರೆಯಾದ ವಸ್ತುವೇ ಇಲ್ಲ.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದ ಪ್ರಥಮಾಂಶದಲ್ಲಿ ಎಂಟನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ನವಮೋऽಧ್ಯಾಯಃ

॥ ಶ್ರೀ ಪರಾಶರಃ ॥

ಇದಂ ಚ ಶ್ರುಣು ಮೈತ್ರೇಯ ಯತ್ಪೃಷ್ಟೋऽಹಮಿಹ ತ್ವಯಾ ।
ಶ್ರೀಸಂಬಂಧಂ ಮಯಾಪ್ಯೇತಚ್ಛ್ರುತಮಾಸೀನ್ಮರೀಚಿತಃ ॥ ೧ ॥

ದುರ್ವಾಸಾಶ್ಯಂಕರಸ್ಯಾಂಶಶ್ಚಚಾರ ಪೃಥಿವೀಮಿಮಾಂ ।
ಸ ದದರ್ಶ ಸ್ರಜಂ ದಿವ್ಯಾಮೃಷಿರ್ವಿದ್ಯಾಧರೀ ಕರೇ ॥ ೨ ॥

ಸಂತಾನಕಾನಾಮಖಿಲಂ ಯಸ್ಯಾ ಗಂಧೇನ ವಾಸಿತಂ ।
ಅತಿಸೇವ್ಯಮಭೂದ್ಬ್ರಹ್ಮಂಸ್ತದ್ವನಂ ವನಚಾರಿಣಾಂ ॥ ೩ ॥

ಒಂಭತ್ತನೆಯ ಅಧ್ಯಾಯವು

೧–೩. ಪರಾಶರನು ಹೇಳುವನು:—ಮೈತ್ರೇಯನೇ ಲಕ್ಷ್ಮೀದೇವಿಯ ವಿಚಾರವಾಗಿ ನೀನು ಪ್ರಶ್ನೆಮಾಡಿದೆಯಷ್ಟೆ? ನಾನು ಮರೀಚಿಋಷಿಯಿಂದ ಕೇಳಿದ ಆ ವಿಚಾರವನ್ನೇ ನಿನಗೆ ಹೇಳುವೆನು ಕೇಳು. ಶಿವನ ಅಂಶನಾದ ದುರ್ವಾಸಮುನಿಯು ಈ ಭೂಮಿಯಲ್ಲಿ ಸಂಚರಿಸುತ್ತಿದ್ದನು. ಆ ಋಷಿಯು ಒಂದುದಿನ ಒಬ್ಬ ವಿದ್ಯಾಧರಸ್ತ್ರೀಯ ಕೈಯಲ್ಲಿದ್ದ ದಿವ್ಯವಾದ ಹೂಮಾಲೆಯನ್ನು ಕಂಡನು. ಅದು ಸಂತಾನವೆಂಬ ಕಲ್ಪವೃಕ್ಷದ ಹೂಮಾಲೆಯು. ಅದರ ಸುವಾಸನೆಯಿಂದ ಆ ವನವೆಲ್ಲವೂ ವನವಾಸಿಗಳಿಗೆ ಮನೋಹರವಾಗಿದ್ದಿತು.

ಉನ್ಮತ್ತವ್ರತಧೃದ್ವಿಪ್ರಸ್ತಾಂ ದೃಷ್ಟ್ವಾ ಶೋಭನಸ್ರಜಂ ।
ತಾಂ ಯಯಾಚೇ ವರಾರೋಹಾಂ ವಿದ್ಯಾಧರವಧೂಂ ತತಃ ॥ ೪ ॥

ಯಾಚಿತಾ ತೇನ ತನ್ವಂಗೀ ಮಾಲಾಂ ವಿದ್ಯಾಧರಾಂಗನಾ ।
ದದೌ ತಸ್ಮೈ ವಿಶಾಲಾಕ್ಷೀ ಸಾದರಂ ಪ್ರಣಿಪತ್ಯ ತಂ ॥ ೫ ॥

ತಾಮಾದಾಯಾತ್ಮನೋ ಮೂರ್ಧ್ನಿ ಸ್ರಜಮುನ್ಮತ್ತರೂಪಧೃಕ್ ।
ಕೃತ್ವಾ ಸ ವಿಪ್ರೋ ಮೈತ್ರೇಯ ಪರಿಬಭ್ರಾಮ ಮೇದಿನೀಂ ॥ ೬ ॥

ಸ ದದರ್ಶ ಸಮಾಯಾಂತಂ ಉನ್ಮತ್ತೈರಾವತೇ ಸ್ಥಿತಂ ।
ತ್ರೈಲೋಕ್ಯಾಧಿಪತಿಂ ದೇವಂ ಸಹ ದೇವೈಶ್ಶಚೀಪತಿಂ ॥ ೭ ॥

ತಾಮಾತ್ಮನಸ್ಸಶಿರಸಸ್ಸ್ರಜಮುನ್ಮತ್ತಷಟ್ಪದಾಂ ।
ಆದಾಯಾಮರರಾಜಾಯ ಚಿಕ್ಷೇಪೋನ್ಮತ್ತವನ್ಮುನಿಃ ॥ ೮ ॥

ಗೃಹೀತ್ವಾ ಸುರರಾಜೇನ ಸ್ರಗೈರಾವತಮೂರ್ಧನಿ ।
ನ್ಯಸ್ತಾ ರರಾಜ ಕೈಲಾಸಶಿಖರೇ ಜಾಹ್ನವೀ ಯಥಾ ॥ ೯ ॥

೪–೬. ಉನ್ಮತ್ತನಂತಿದ್ದ ಆ ದುರ್ವಾಸನು ಮಂಗಳಕರವಾದ ಆ ಹಾರವನ್ನು ನೋಡಿ ತನಗೆ ಹೂಮಾಲೆಯನ್ನು ಕೊಡಬೇಕೆಂದು ಆ ವಿದ್ಯಾಧರ ಸ್ತ್ರೀಯನ್ನು ಕೇಳಿದನು. ಆ ಕ್ಷಣವೇ ಆ ವಿದ್ಯಾಧರಿಯು ಮುನಿಗೆ ನಮಸ್ಕಾರಮಾಡಿ ಆ ಮಾಲೆಯನ್ನು ಕೊಟ್ಟಳು. ಹುಚ್ಚನಂತಿದ್ದ ದುರ್ವಾಸ ಮುನಿಯು ಆ ಮಾಲೆಯನ್ನು ತೆಗೆದುಕೊಂಡು ತನ್ನ ತಲೆಯ ಕೂದಲಿಗೆ ಸುತ್ತಿಕೊಂಡು ಭೂಮಿಯಲ್ಲಿ ಸಂಚರಿಸುತ್ತಿದ್ದನು.

೭–೯. ಆ ಮುನಿಯು ಮದಿಸಿದ ಐರಾವತವೆಂಬ ಆನೆಯಮೇಲೆ ಕುಳಿತು ದೇವತೆಗಳೊಡನೆ ಬರುತ್ತಿರುವ, ಮೂರುಲೋಕಕ್ಕೂ ಒಡೆಯನಾದ, ಶಚೀದೇವಿಯ ಪತಿಯಾದ ದೇವೇಂದ್ರನನ್ನು ಕಂಡು ತನ್ನ ತಲೆಯಮೇಲಿದ್ದ, ಭ್ರಮರಗಳು ಮುತ್ತಿಕೊಂಡಿದ್ದ ಆ ಮಾಲೆಯನ್ನು ತೆಗೆದುಕೊಂಡು ಹುಚ್ಚನಂತೆ ದೇವೇಂದ್ರನಿಗೆ ಎಸೆದನು. ದೇವೇಂದ್ರನು ಅದನ್ನು ತೆಗೆದುಕೊಂಡು ಐರಾವತದ ಕುಂಭಸ್ಥಳದಲ್ಲಿಟ್ಟನು ಅಲ್ಲಿ ಆ ಮಾಲೆಯು ಕೈಲಾಸ ಶಿಖರದಲ್ಲಿ ಗಂಗೆಯು ಇದ್ದಂತೆ ಶೋಭಿಸುತ್ತಿದ್ದಿತು.

ಮದಾಂಧಕಾರಿತಾಕ್ಷೋಽಸೌ ಗಂಧೋತ್ಕೃಷ್ಟೇನ ವಾರಣಃ ।
ಕರೇಣಾಘ್ರಾಯ ಚಿಕ್ಷೇಪ ತಾಂ ಸ್ರಜಂ ಧರಣೀತಲೇ ॥ ೧೦ ॥

ತತಶ್ಚುಕ್ರೋಧ ಭಗವಾನ್ದುರ್ವಾಸಾ ಮುನಿಸತ್ತಮಃ ।
ಮೈತ್ರೇಯ ದೇವರಾಜಾನಂ ಕ್ರುದ್ಧಶ್ಚೈತದುವಾಚ ಹ ॥ ೧೧ ॥

ಐಶ್ವರ್ಯಮದದುಷ್ಟಾತ್ಮನ್ನತಿಸ್ತಬ್ಧೋಽಸಿ ವಾಸವ ।
ಶ್ರಿಯೋ ಧಾಮ ಸ್ರಜಂ ಯಸ್ತ್ವಂ ಮದ್ದತ್ತಾಂ ನಾಭಿನಂದಸಿ ॥ ೧೨ ॥

ಪ್ರಸಾದ ಇತಿ ನೋಕ್ತಂ ತೇ ಪ್ರಣಿಪಾತಪುರಸ್ಸರಂ ।
ಹರ್ಷೋತ್ಫುಲ್ಲಕಪೋಲೇನ ನ ಚಾಪಿ ಶಿರಸಾ ಧೃತಾ ॥ ೧೩ ॥

ಮಯಾ ದತ್ತಾಮಿಮಾಂ ಮಾಲಾಂ ಯಸ್ಮಾನ್ನ ಬಹುಮನ್ಯಸೇ ।
ತ್ರೈಲೋಕ್ಯಶ್ರೀರತೋ ಮೂಢ ವಿನಾಶಮುಪಯಾಸ್ಯತಿ ॥ ೧೪ ॥

೧೦–೧೧. ಹೆಚ್ಚಾದ ಮದದಿಂದ ಕಣ್ಣುಕಾಣದ ಆ ಐರಾವತವು ಹೆಚ್ಚಾದ ಸುವಾಸನೆಯುಳ್ಳ ಆ ಮಾಲೆಯನ್ನು ತನ್ನ ಸೊಂಡಲಿನಲ್ಲಿ ಮೂಸಿನೋಡಿ ಅದನ್ನು ಭೂಮಿಗೆ ಹಾಕಿತು. ಇದನ್ನು ಕಂಡು ಋಷಿಶ್ರೇಷ್ಠನಾದ ದುರ್ವಾಸನು ಕೋಪವನ್ನು ಹೊಂದಿ ದೇವೇಂದ್ರನನ್ನು ಕುರಿತು ಮಾತನಾಡಿದನು.

೧೨–೧೪. ಎಲೈ ದೇವೇಂದ್ರನೇ, ದುಷ್ಟನಾದ ನೀನು ಐಶ್ವರ್ಯಮದದಿಂದ ಗರ್ವಪಡುತ್ತಿರುವೆ. ನಾನು ಕೊಟ್ಟ ಸಂಪತ್ತಿಗೆ ನೆಲೆಯಾದ ಮಾಲೆಯನ್ನು ಅಭಿನಂದಿಸಲಿಲ್ಲ. ನಮಸ್ಕಾರಮಾಡಿ ಅನುಗ್ರಹವಾಯಿತೆಂದೂ ಹೇಳಲಿಲ್ಲ. ಸಂತೋಷದ ಮುಖದಿಂದ ತಲೆಯಲ್ಲಿಯೂ ಧರಿಸಲಿಲ್ಲ. ನಾನು ಕೊಟ್ಟ ಈ ಮಾಲೆಯನ್ನು ನೀನು ಗೌರವಿಸದಿದ್ದುದರಿಂದ ಮೂಢನಾದ ನಿನ್ನ ತ್ರೈಲೋಕ್ಯದ ಸಂಪತ್ತು ನಾಶವಾಗುವುದು. ದೇವೇಂದ್ರನೇ ನನ್ನನ್ನು ಸಾಮಾನ್ಯನಾದ ಬ್ರಾಹ್ಮಣನೆಂದು ನೀನು ತಿಳಿದಿರುವೆ ಆದುದರಿಂದಲೇ ಗರ್ವಿತನಾದ ನೀನು ನನಗೆ ಅಪಮಾನವನ್ನು ಮಾಡಿದೆ. ನಾನು ಕೊಟ್ಟ ಮಾಲೆಯನ್ನು ಭೂಮಿಯಮೇಲೆ ಹಾಕಿದ್ದುದರಿಂದ ನಿನ್ನ ಮೂರು ಲೋಕದ ಸಂಪತ್ತೂ ಹಾಳಾಗುವುದು. ನನಗೆ ಕೋಪವು ಬಂದರೆ ಈ ಚರಾಚರ ಪ್ರಪಂಚವೇ

ಮಾಂ ಮನ್ಯತೇನ್ಯೈಃ ಸದೃಶಂ ನೂನಂ ಶಕ್ರ ಭವಾನ್ದ್ವಿಜೈಃ ।
ಅತೋಽವಮಾನಮಸ್ಮಾಸು ಮಾನಿನಾ ಭವತಾ ಕೃತಂ ॥ ೧೫ ॥

ಮದ್ದತ್ತಾ ಭವತಾ ಯಸ್ಮಾತ್ ಕ್ಷಿಪ್ತಾ ಮಾಲಾ ಮಹೀತಲೇ ।
ತಸ್ಮಾತ್ಪ್ರಣಷ್ಟಲಕ್ಷ್ಮೀಕಂ ತ್ರೈಲೋಕ್ಯಂ ತೇ ಭವಿಷ್ಯತಿ ॥ ೧೬ ॥

ಯಸ್ಯ ಸಂಜಾತಕೋಪಸ್ಯ ಭಯಮೇತಿ ಚರಾಚರಂ ।
ತಂ ತ್ವಂ ಮಾಮತಿಗರ್ವೇಣ ದೇವರಾಜಾವಮನ್ಯಸೇ ॥ ೧೭ ॥

॥ ಶ್ರೀ ಪರಾಶರಃ ॥

ಮಹೇಂದ್ರೋ ವಾರಣಸ್ಕಂಧಾದವತೀರ್ಯ ತ್ವರಾನ್ವಿತಃ ।
ಪ್ರಸಾದಯಾಮಾಸ ತದಾ ದುರ್ವಾಸಸಮಕಲ್ಮಷಂ ॥ ೧೮ ॥

ಪ್ರಸಾದ್ಯಮಾನಸ್ಸ ತದಾ ಪ್ರಣಿಪಾತಪುರಸ್ಸರಂ ।
ಪ್ರತ್ಯುವಾಚ ಸಹಸ್ರಾಕ್ಷಂ ದುರ್ವಾಸಾ ಮುನಿಸತ್ತಮಃ ॥ ೧೯ ॥

ನಾಹಂ ಕೃಪಾಳುಹೃದಯೋ ನಚ ಮಾಂ ಭಜತೇ ಕ್ಷಮಾ ।
ಅನ್ಯೇ ತೇ ಮುನಯಶ್ಶಕ್ರ ದುರ್ವಾಸಸಮವೇಹಿ ಮಾಂ ॥ ೨೦ ॥

ಭಯಪಡುವುದು. ಅಂತಹ ನನ್ನನ್ನು ದೇವರಾಜನಾದ ನೀನು ಗರ್ವದಿಂದ ನಿಕೃಷ್ಟವಾಗಿ ತಿಳಿದಿರುವೆ ಎಂದನು.

೧೮-೧೯. ಆ ಕ್ಷಣವೇ ದೇವೇಂದ್ರನು ಆನೆಯ ಮೇಲಿನಿಂದ ಇಳಿದು ತಪ್ಪು ಮಾಡಿದ ತನಗೆ ಶಾಪಕೊಟ್ಟುದರಿಂದ ಯಾವ ದೋಷಕ್ಕೂ ಗುರಿಯಾಗದ ಆ ದುರ್ವಾಸಮುನಿಯನ್ನು ಬೇಡಿಕೊಂಡನು. ನಮಸ್ಕಾರ ಮಾಡಿ ಕೇಳಿಕೊಂಡುದರಿಂದ ದುರ್ವಾಸಮುನಿಶ್ರೇಷ್ಠನು ದೇವೇಂದ್ರನನ್ನು ಕುರಿತು ಹೇಳಿದನು :-

೨೦-೨೫. ದೇವೇಂದ್ರನೇ ದಯಾಳುಗಳಾದ ಇತರ ಋಷಿಗಳಂತೆ ನಾನು ದಯಾವಂತನಲ್ಲ ನನಗೆ ಕ್ಷಮಾ ಗುಣವಿಲ್ಲ. ನನ್ನನ್ನು ದುರ್ವಾಸನೆಂದು ತಿಳಿ. ನಿನ್ನ

ಗೌತಮಾದಿಭಿರನ್ಯೈಸ್ತ್ವಂ ಗರ್ವಮಾರೋಪಿತೋ ಮುಧಾ ।
ಅಕ್ಷಾಂತಿಸಾರಸರ್ವಸ್ವಂ ದುರ್ವಾಸಸಮವೇಹಿ ಮಾಂ ॥ ೨೧ ॥

ವಸಿಷ್ಠಾದ್ಯೈರ್ದಯಾಸಾರೈಸ್ತ್ಸ್ತೋತ್ರಂ ಕುರ್ವದ್ಭಿರುಚ್ಚಕೈಃ ।
ಗರ್ವಂ ಗತೋಽಸಿ ಯೇನೈವಂ ಮಾಮಪ್ಯದ್ಯಾವಮನ್ಯಸೇ ॥ ೨೨ ॥

ಜ್ವಲಜ್ಜಟಾಕಲಾಪಸ್ಯ ಭ್ರುಕುಟೀಕುಟಿಲಂ ಮುಖಂ ।
ನಿರೀಕ್ಷ್ಯ ಕ ಸ್ತ್ರಿಭುವನೇ ಮಮ ಯೋ ನ ಗತೋ ಭಯಂ ॥ ೨೩ ॥

ನಾಹಂ ಕ್ಷಮಿಷ್ಯೇ ಬಹುನಾ ಕಿಮುಕ್ತೇನ ಶತಕ್ರತೋ ।
ವಿಡಂಬನಾಮಿಮಾಂ ಭೂಯಃ ಕರೋಷ್ಯನುನಯಾತ್ಮಿಕಾಂ ॥ ೨೪ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಪ್ರಯಯೌ ವಿಪ್ರೋ ದೇವರಾಜೋಽಪಿ ತಂ ಪುನಃ ।
ಆರುಹ್ಯೈರಾವತಂ ನಾಗಂ ಪ್ರಯಯಾವಮರಾವತೀಂ ॥ ೨೫ ॥

ತಪ್ಪನ್ನು ಕ್ಷಮಿಸಿದ ಗೌತಮಾದಿ ಮುನಿಗಳು ವ್ಯರ್ಥವಾಗಿ ನಿನಗೆ ಗರ್ವವನ್ನುಂಟು ಮಾಡಿದರು. ಕ್ಷಮಾಗುಣವಿಲ್ಲದ ತಪೋಬಲವುಳ್ಳ ನಾನು ದುರ್ವಾಸನೆಂದು ತಿಳಿ ದಯಾವಂತರಾದ ವಸಿಷ್ಠಾದಿಋಷಿಗಳು ಎತ್ತರವಾದ ಸಿಂಹಾಸನದಲ್ಲಿ ಕುಳಿತ ನಿನ್ನನ್ನು ಸ್ತೋತ್ರಮಾಡಿದುದರಿಂದ ಗರ್ವವನ್ನು ಹೊಂದಿ ಈ ದಿನ ನನ್ನನ್ನೂ ಅಪಮಾನ ಮಾಡಿದೆ. ಉರಿಯುತಿರುವ ಜಟೆಗಳೂ, ಹುಬ್ಬು ಗಂಟಿಕ್ಕಿದ ಮುಖವೂ ಉಳ್ಳ ನನ್ನನ್ನು ನೋಡಿ ಮೂರು ಲೋಕದಲ್ಲಿ ಯಾವನು ಭಯಪಡುವುದಿಲ್ಲ? ಶತಕ್ರತು ವನ್ನು ಮಾಡಿದ ದೇವೇಂದ್ರನೇ ಹೆಚ್ಚು ಹೇಳುವುದೇನು? ನಾನು ಕ್ಷಮಿಸುವುದಿಲ್ಲ. ಮತ್ತೆ ನೀನು ಸಮಾಧಾನರೂಪವಾದ ನಟನೆಯಿಂದ ನನ್ನನ್ನು ಹಾಸ್ಯಮಾಡುತ್ತಿರುವೆ. ಎಂದು ಹೇಳಿ ದುರ್ವಾಸನು ಹೊರಟುಹೋದನು. ದೇವೇಂದ್ರನೂ ಐರಾವತವ ನ್ನೇರಿ ಅಮರಾವತಿಗೆ ಪ್ರಯಾಣ ಮಾಡಿದನು.

ತತಃ ಪ್ರಭೃತಿ ನಿಶ್ಶ್ರೀಕಂ ಸ ಶಕ್ರಂ ಭುವನತ್ರಯಂ ।
ಮೈತ್ರೇಯಾಸೀದಪಧ್ವಸ್ತಂ ಸಂಕ್ಷೀಣೌಷಧಿವೀರುಧಂ ॥ ೨೬ ॥

ನ ಯಜ್ಞಾಸ್ಸಂಪ್ರವರ್ತಂತೇ ನ ತಪಸ್ಯಂತಿ ತಾಪಸಾಃ ।
ನ ಚ ದಾನಾದಿಧರ್ಮೇಷು ಮನಶ್ಚಕ್ರೇ ತದಾ ಜನಃ ॥ ೨೭ ॥

ನಿಸ್ಸತ್ತ್ವಾಸ್ಸಕಲಾಲೋಕಾ ಲೋಭಾದ್ಯುಪಹತೇಂದ್ರಿಯಾಃ ।
ಸ್ವಲ್ಪೇಪಿ ಹಿ ಬಭೂವುಸ್ತೇ ಸಾಭಿಲಾಷಾ ದ್ವಿಜೋತ್ತಮ ॥ ೨೮ ॥

ಯತಸ್ಸತ್ತ್ವಂ ತತೋ ಲಕ್ಷ್ಮೀಸ್ಸತ್ತ್ವಂ ಭೂತ್ಯನುಸಾರಿ ಚ ।
ನಿಶ್ಶ್ರೀಕಾಣಾಂ ಕುತಸ್ಸತ್ತ್ವಂ ವಿನಾ ತೇನ ಗುಣಾಃ ಕುತಃ ॥ ೨೯ ॥

ಬಲಶೌರ್ಯಾದ್ಯಭಾವಾಶ್ಚ ಪುರುಷಾಣಾಂ ಗುಣೈರ್ವಿನಾ ।
ಲಂಘನೀಯಸ್ಸಮಸ್ತಸ್ಯ ಬಲಶೌರ್ಯವಿವರ್ಜಿತಃ ॥ ೩೦ ॥

೨೬-೨೮. ಮೈತ್ರೇಯನೇ, ಅಲ್ಲಿಂದ ಮುಂದೆ ಇಂದ್ರನೊಡನೆ ಕೂಡಿದ ಮೂರು ಲೋಕವೂ ಸಂಪತ್ತಿಲ್ಲದೆ ನಾಶವಾಗಿ ಹೋಯಿತು. ಓಷಧಿಗಳೂ, ಬಳ್ಳಿಗಳೂ ಒಣಗಿಹೋದವು. ಯಜ್ಞಕರ್ಮಗಳು ನಡೆಯಲಿಲ್ಲ. ಋಷಿಗಳು ತಪಸ್ಸು ಮಾಡಲಿಲ್ಲ. ಸಮಸ್ತ ಲೋಕವೂ ಧೈರ್ಯವಿಲ್ಲದುದಾಗಿ ಲೋಭಾದಿಗಳಿಂದ ಇಂದ್ರಿಯಗಳು ದೋಷಯುಕ್ತವಾಗಲು ಜನರು ಅಲ್ಪ ಪದಾರ್ಥಗಳನ್ನೂ ಆಶಿಸುತ್ತಿದ್ದರು.

೨೯-೩೨. ಧೈರ್ಯವೆಲ್ಲಿರುವುದೋ ಅಲ್ಲಿ ಸಂಪತ್ತಿರುವುದು. ಧೈರ್ಯವು ಸಂಪತ್ತನ್ನನುಸರಿಸಿರುವುದು. ಸಂಪತ್ತಿಲ್ಲದವರಿಗೆ ಬಲವೂ ಇರುವುದಿಲ್ಲ. ಸತ್ತ್ವವಿಲ್ಲದವರಿಗೆ ಔದಾರ್ಯ, ಸಂತೋಷ, ಕ್ಷಮೆ, ಮುಂತಾದ ಗುಣಗಳೂ ಇರುವುದಿಲ್ಲ. ಗುಣವಿಲ್ಲದ ಪುರುಷನಿಗೆ ಬಲ ಶೌರ್ಯಾದಿಗಳಿಲ್ಲದಿರುವುದರಿಂದ ಅವನನ್ನು ಎಲ್ಲರೂ ತಿರಸ್ಕರಿಸುವರು. ಪ್ರಸಿದ್ಧನಾದ ಮನುಷ್ಯನನ್ನು ಎಲ್ಲರೂ ತಿರಸ್ಕರಿಸಿದರೆ ಅವನು ಬುದ್ಧಿಹೀನನಾಗುವನು. ಹೀಗೆ ಸಂಪೂರ್ಣವಾಗಿ ಸಂಪತ್ತು ನಾಶವಾದ ಮೂರು

ಭವತ್ಯಪಧ್ವಸ್ತಮತಿರ್ಲಂಘಿತಃ ಪ್ರಥಿತಃ ಪುಮಾನ್ ।
ಏವಮತ್ಯಂತನಿಶ್ರೀಕೇ ತ್ರೈಲೋಕ್ಯೇ ಸತ್ತ್ವವರ್ಜಿತೇ ॥ ೩೦ ॥

ದೇವಾನ್ಪ್ರತಿ ಬಲೋದ್ಯೋಗಂ ಚಕ್ರುರ್ದೈತೇಯದಾನವಾಃ ॥ ೩೨ ॥

ಲೋಭಾಭಿಭೂತಾ ನಿಶ್ರೀಕಾ ದೈತ್ಯಾಸ್ಸತ್ತ್ವವಿವರ್ಜಿತಾಃ ।
ಶ್ರಿಯಾ ವಿಹೀನೈರ್ನಿಸ್ಸತ್ತ್ವೈರ್ದೇವೈಶ್ಚಕ್ರುಸ್ತತೋ ರಣಂ ॥ ೩೩ ॥

ವಿಜಿತಾಸ್ತ್ರಿದಶಾ ದೈತ್ಯೈರಿಂದ್ರಾದ್ಯಾಶ್ಶರಣಂ ಯಯುಃ ।
ಪಿತಾಮಹಂ ಮಹಾಭಾಗಂ ಹುತಾಶನಪುರೋಗಮಾಃ ॥ ೩೪ ॥

ಯಥಾವತ್ಕಥಿತೋ ದೇವೈರ್ಬ್ರಹ್ಮಾ ಪ್ರಾಹ ತತಸ್ಸುರಾನ್ ।
ಪರಾಪರೇಶಂ ಶರಣಂ ವ್ರಜಧ್ವಮಸುರಾರ್ದನಂ ॥ ೩೫ ॥

ಲೋಕವೂ ಬಲಹೀನವಾಗುತ್ತಿರಲು ದೈತ್ಯರೂ ದಾನವರೂ ದೇವತೆಗಳ ಮೇಲೆ ಯುದ್ಧಕ್ಕೆ ಹೋದರು.

೩೩-೩೪. ಬಳಿಕ ಸಂಪತ್ತಿಲ್ಲದೆ ಲೋಭ ಬುದ್ಧಿಯಿಂದ ಕೂಡಿ ಬಲವಿಲ್ಲದ ದೈತ್ಯರು ಸಂಪತ್ತಿಲ್ಲದೆ ಬಲಹೀನರಾದ ದೇವತೆಗಳೊಡನೆ ಯುದ್ಧವನ್ನು ಮಾಡಿದರು. ದೈತ್ಯರು ದೇವತೆಗಳನ್ನು ಗೆದ್ದರು. ಇಂದ್ರಾದಿ ದೇವತೆಗಳು ಅಗ್ನಿಯನ್ನು ಮುಂದು ಮಾಡಿಕೊಂಡು ಮಹಾಮಹಿಮನಾದ ಬ್ರಹ್ಮನ ಸಮೀಪಕ್ಕೆ ಹೋಗಿ ಅವನನು ಶರಣು ಹೊಂದಿದರು.

೩೫-೩೭. ದೇವತೆಗಳ ಮಾತನ್ನು ಕೇಳಿ ಬ್ರಹ್ಮನು ಅವರನ್ನು ಕುರಿತು, ನೀವೆಲ್ಲರೂ ಪರಾಪ್ರಕೃತಿಗೂ ಅಪರಾಪ್ರಕೃತಿಗೂ ಸ್ವಾಮಿಯಾದ, ಅಸುರರನ್ನು ನಾಶ ಮಾಡುವ ಸೃಷ್ಟಿ, ಸ್ಥಿತಿ, ನಾಶಗಳಿಗೆ ಕಾರಣನಾದ, ತನಗೆ ಯಾವ ಕಾರಣವೂ ಇಲ್ಲದ, ಸಮಸ್ತಕ್ಕೂ ಒಡೆಯನೂ, ಬ್ರಹ್ಮನಿಗೂ ಸ್ವಾಮಿಯೂ, ಸರ್ವ ವ್ಯಾಪಕನೂ, ನಾಶವಿಲ್ಲದವನೂ, ಯಾರಿಂದಲೂ ಜಯಿಸಲು ಅಸಾಧ್ಯನೂ, ಕಾರ್ಯರೂಪರಾದ

ಉತ್ಪತ್ತಿಸ್ಥಿತಿನಾಶಾನಾಮಹೇತುಂ ಹೇತುಮೀಶ್ವರಂ ।
ಪ್ರಜಾಪತಿಪತಿಂ ವಿಷ್ಣುಮನಂತಮಪರಾಜಿತಂ ॥ ೩೬ ॥

ಪ್ರಧಾನಪುಂಸೋ ರಜಯೋಃ ಕಾರಣಂ ಕಾರ್ಯಭೂತಯೋಃ ।
ಪ್ರಣತಾರ್ತಿಹರಂ ವಿಷ್ಣುಂ ಸ ವಶ್ಶ್ರೇಯೋ ವಿಧಾಸ್ಯತಿ ॥ ೩೭ ॥

॥ ಶ್ರೀ ಪರಾಶರಃ ॥

ಏವಮುಕ್ತ್ವಾ ಸುರಾನ್ಸರ್ವಾನ್ಬ್ರಹ್ಮಾ ಲೋಕಪಿತಾಮಹಃ ।
ಕ್ಷೀರೋದಸ್ಯೋತ್ತರಂ ತೀರಂ ತೈರೇವ ಸಹಿತೋ ಯಯೌ ॥ ೩೮ ॥

ಸ ಗತ್ವಾ ತ್ರಿದಶೈಸ್ಸರ್ವೈಸ್ಸಮವೇತಃ ಪಿತಾಮಹಃ ।
ತುಷ್ಟಾವ ವಾಗ್ಭಿರಿಷ್ಟಾಭಿಃ ಪರಾಪರಪತಿಂ ಹರಿಂ ॥ ೩೯ ॥

॥ ಬ್ರಹ್ಮೋವಾಚ ॥

ನಮಾಮಿ ಸರ್ವಂ ಸರ್ವೇಶಮನಂತಮಜಮವ್ಯಯಂ ।
ಲೋಕಧಾಮ ಧರಾಧಾರಮಪ್ರಕಾಶಮಭೇದಿನಂ ॥ ೪೦ ॥

ಪ್ರಧಾನ ಪುರುಷರಿಗೂ ಬ್ರಹ್ಮನಿಗೂ ಕಾರಣನೂ, ನಮಸ್ಕಾರ ಮಾಡಿದವರ ದುಃಖವನ್ನು ನಾಶಮಾಡತಕ್ಕವನೂ, ಆದ ವಿಷ್ಣುವನ್ನು ಶರಣು ಹೊಂದಿರಿ. ಅವನು ನಿಮಗೆ ಮಂಗಳವನ್ನುಂಟುಮಾಡುವನು ಎಂದು ಹೇಳಿದನು.

೩೮-೩೯. ಬ್ರಹ್ಮನು ಹೀಗೆ ದೇವತೆಗಳಿಗೆ ಹೇಳಿ ಅವರೊಡನೆ ಕ್ಷೀರಸಮುದ್ರದ ಉತ್ತರದಿಕ್ಕಿನ ದಡಕ್ಕೆ ಹೋಗಿ, ಪರಾಪರ ಪ್ರಪಂಚಕ್ಕೆ ಸ್ವಾಮಿಯಾದ ಹರಿಯನ್ನು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸುವ ಮಾತುಗಳಿಂದ ಸ್ತೋತ್ರಮಾಡಿದನು.

೪೦. ಸಮಸ್ತ ಪ್ರಪಂಚಸ್ವರೂಪನೂ, ಸಮಸ್ತ ಪ್ರಪಂಚಕ್ಕೂ ಈಶ್ವರನೂ, ಸಮಸ್ತ ಬ್ರಹ್ಮಾಂಡಗಳಲ್ಲಿರುವ ಇಂದ್ರಾದಿ ದೇವತೆಗಳ ಮಹಿಮೆಗೆ ಆಶ್ರಯನೂ, ಸೂಕ್ಷ್ಮಸ್ವರೂಪನಾದುದರಿಂದ ಇಂದ್ರಿಯಾದಿಗಳಿಗೆ ಗೋಚರನಲ್ಲದವನೂ, ಸರ್ವವ್ಯಾಪಿಯಾದುದರಿಂದ ಭೇದಶೂನ್ಯನೂ ಆದ ದೇವನಿಗೆ ನಮಸ್ಕಾರಮಾಡುವೆನು.

ನಾರಾಯಣಮಣೀಯಾಂಸಮಶೇಷಾಣಾಮಣೀಯಸಾಂ ।
ಸಮಸ್ತಾನಾಂ ಗರಿಷ್ಠಂ ಚ ಭೂರಾದೀನಾಂ ಗರೀಯಸಾಂ ॥ ೪೧ ॥

ಯತ್ರ ಸರ್ವಂ ಯತಸ್ಸರ್ವಮುತ್ಪನ್ನಂ ಮತ್ಪುರಸ್ಸರಂ ।
ಸರ್ವಭೂತಶ್ಚ ಯಃ ಪ್ರೋಕ್ತಃ ಪರಾಣಾಮಪಿ ಯಃ ಪರಃ ॥ ೪೨ ॥

ಪರಃ ಪರಸ್ಮಾತ್ಪುರುಷಾತ್ಪರಮಾತ್ಮಸ್ವರೂಪಧೃಕ್ ।
ಯೋಗಿಭಿಶ್ಚಿಂತ್ಯತೇ ಯೋಽಸೌ ಮುಕ್ತಿಹೇತೋರ್ಮುಮುಕ್ಷುಭಿಃ ॥ ೪೩ ॥

ಸತ್ವಾದಯೋ ನ ಸಂತೀಶೇ ಯತ್ರ ಚ ಪ್ರಾಕೃತಾಗುಣಾಃ ।
ಸಶುದ್ಧಸ್ಸರ್ವಶುದ್ಧೇಭ್ಯಃ ಪುಮಾನಾದ್ಯಃ ಪ್ರಸೀದತು ॥ ೪೪ ॥

---

೪೧. ನೀರೇ ವಾಸಸ್ಥಾನವಾಗಿ ಉಳ್ಳವನೂ, ಅತ್ಯಂತ ಸೂಕ್ಷ್ಮಸ್ವರೂಪನೂ, ಸರ್ವವ್ಯಾಪಿಯಾಗಿ ಭೂಮಿಯೇ ಮುಂತಾದ ಸಮಸ್ತ ವಸ್ತುಗಳಿಗಿಂತ ದೊಡ್ಡವನೂ ಆದ ದೇವನಿಗೆ ನಮಸ್ಕಾರವು.

೪೨. ಯಾವ ಪರಮಾತ್ಮನಲ್ಲಿಯೇ ಸಮಸ್ತ ಜಗತ್ತೂ ಇದ್ದು, ನಾನು ಮೊದಲಾಗಿ ಸಮಸ್ತವೂ ಉತ್ಪನ್ನವಾಗಿರುವುದೋ ಸಮಸ್ತ ಭೂತಸ್ವರೂಪನಾಗಿಯೂ ಅತ್ಯಂತ ಶ್ರೇಷ್ಠನಾಗಿಯೂ ಯಾವ ದೇವನಿರುವನೋ, ಅವನಿಗೆ ನಮಸ್ಕಾರವು.

೪೩. ಪುರುಷನಿಗಿಂತಲೂ ಶ್ರೇಷ್ಠನಾಗಿ, ಪರಮಾತ್ಮಸ್ವರೂಪನಾಗಿ, ಯೋಗಿಗಳ ಧ್ಯಾನಗೋಚರನಾದ ಮುಮುಕ್ಷುಗಳಿಗೆ ಮೋಕ್ಷವನ್ನು ಕೊಡುವ ದೇವನಿಗೆ ನಮಸ್ಕಾರಮಾಡುವೆನು.

೪೪. ಸತ್ವಾದಿಗುಣಗಳು ಪ್ರಕೃತಿಸಂಬಂಧವಾದುವುಗಳು. ಇವು ಪರಮಾತ್ಮನಲ್ಲಿಲ್ಲ. ಆದುದರಿಂದ ಪರಮಾತ್ಮನು ಶುದ್ಧವಾದ ಸಮಸ್ತವಸ್ತುಗಳಿಗಿಂತ ಪರಿಶುದ್ಧನಾಗಿ ಆದಿಪುರುಷನೆಂದು ಪ್ರಸಿದ್ಧನಾಗಿರುವನು. ಆ ದೇವನು ಪ್ರಸನ್ನನಾಗಲಿ.

ಕಲಾಕಾಷ್ಠಾ ನಿಮೇಷಾದಿ ಕಾಲಸೂತ್ರಸ್ಯ ಗೋಚರೇ ।
ಯಸ್ಯ ಶಕ್ತಿರ್ನ ಶುದ್ಧಸ್ಯ ಪ್ರಸೀದತು ಸ ನೋ ಹರಿಃ ॥ ೪೫ ॥

ಪ್ರೋಚ್ಯತೇ ಪರಮೇಶೋಽಜೋ ಯಶ್ಶುದ್ಧೋಽಪ್ಯುಪಚಾರತಃ ।
ಪ್ರಸೀದತು ಸನೋ ವಿಷ್ಣುರಾತ್ಮಾ ಯಸ್ಸರ್ವದೇಹಿನಾಂ ॥ ೪೬ ॥

ಯಃ ಕಾರಣಂ ಚ ಕಾರ್ಯಂ ಚ ಕಾರಣಸ್ಯಾಪಿ ಕಾರಣಂ ।
ಕಾರ್ಯಸ್ಯಾಪಿ ಚ ಯಃ ಕಾರ್ಯಂ ಪ್ರಸೀದತು ಸನೋ ಹರಿಃ ॥ ೪೭ ॥

ಕಾರ್ಯಕಾರ್ಯಸ್ಯ ಯತ್ಕಾರ್ಯಂ ತತ್ಕಾರ್ಯಸ್ಯಾಪಿ ಯಸ್ಸ್ವಯಂ ।
ತತ್ಕಾರ್ಯಕಾರ್ಯಭೂತೋ ಯಸ್ತತಶ್ಚ ಪ್ರಣತಾಸ್ಸ್ಮತಂ ॥ ೪೮ ॥

---

೪೫. ಕಲಾಕಾಷ್ಠಾ ಮುಹೂರ್ತ ಮುಂತಾದ ಕಾಲನಿಯಮವನ್ನು ಸೂಚಿಸುವ ಲಕ್ಷ್ಮೀರೂಪಳಾದ ಶಕ್ತಿಯು ಸ್ವಸ್ವರೂಪವಾದುದರಿಂದ ಯಾವ ದೇವನಲ್ಲಿ ಕಾಣುವುದಿಲ್ಲವೊ ಈ ಕಾರಣದಿಂದಲೇ ಪರಿಶುದ್ಧಸ್ವರೂಪನಾದ ಹರಿಯು ನನಗೆ ಪ್ರಸನ್ನನಾಗಲಿ.

೪೬. ಯಾವ ದೇವನೊಬ್ಬನೇ ಪರಿಶುದ್ಧನಾಗಿದ್ದರೂ, ಪರಮೇಶ್ವರನೆಂದೂ, ಬ್ರಹ್ಮನೆಂದೂ, ಔಪಚಾರಿಕವಾಗಿ ಹೇಳುವರೋ ಅಂತಹ ಸರ್ವವ್ಯಾಪಿಯಾದ, ಸಮಸ್ತ ದೇಹಗಳಿಗೂ ಆತ್ಮಸ್ವರೂಪನಾದ ವಿಷ್ಣುವು ನನಗೆ ಪ್ರಸನ್ನವಾಗಲಿ.

೪೭–೫೦. ಪ್ರಕೃತಿಕಾರ್ಯ, ಮಹತ್ತತ್ವ, ಆದರ ಕಾರ್ಯ, ಅಹಂಕಾರ ಇದರ ಕಾರ್ಯ, ಸೂಕ್ಷ್ಮಪಂಚ-ಭೂತ, ಇದರ ಕಾರ್ಯ, ಸ್ಥೂಲಪಂಚ ಮಹಾಭೂತ, ಆದರ ಕಾರ್ಯ, ಬ್ರಹ್ಮಾಂಡ, ಆದರ ಕಾರ್ಯ, ಬ್ರಹ್ಮ ಮತ್ತು ಅವನ ಪುತ್ರಪೌತ್ರಾದಿಗಳು ಈ ಕಾರ್ಯಗಳಲ್ಲೆಲ್ಲಾ ಪ್ರವಾಹರೂಪದಿಂದ ತಾನೇ ಇರುವನು. ಬ್ರಹ್ಮನ ಪುತ್ರಪೌತ್ರಾದಿ ಪ್ರವಾಹರೂಪವಾದ ಸೃಷ್ಟಿಗೆ ಬ್ರಹ್ಮ, ಬ್ರಹ್ಮಾಂಡ, ಪಂಚ ಮಹಾಭೂತಗಳು, ಸೂಕ್ಷ್ಮಭೂತಗಳು, ಅಹಂಕಾರ, ಮಹತ್ತತ್ವ, ಪ್ರಕೃತಿ ಇವು ಕಾರಣಗಳಾಗಿರುವುವು. ಮೂಲಕಾರಣವಾದ ಪ್ರಕೃತಿಯನ್ನು ಪ್ರೇರಿಸುವ ಕಾರಣ ಸ್ವರೂಪನಾದ ವಿಷ್ಣುವಿಗೆ ನಮಸ್ಕಾರಮಾಡುವೆನು. ಸುಖಾನುಭವರೂಪನೂ, ಸುಖ ವಿಷಯನೂ, ಸೃಷ್ಟಿಕರ್ತನೂ, ಸೃಷ್ಟಿವಿಷಯನೂ, ಕರ್ತೃರೂಪನೂ, ಕಾರ್ಯ

ಕಾರಣಂ ಕಾರಣಸ್ಯಾಪಿ ತಸ್ಯ ಕಾರಣಕಾರಣಂ ।
ತತ್ಕಾರಣಾನಾಂ ಹೇತುಂ ತಂ ಪ್ರಣತಾಸ್ಸ್ಮ ಸುರೇಶ್ವರಂ ॥ ೪೯ ॥

ಭೋಕ್ತಾರಂ ಭೋಜ್ಯಭೂತಂ ಚ ಸ್ರಷ್ಟಾರಂ ಸೃಜ್ಯಮೇವ ಚ ।
ಕಾರ್ಯಕರ್ತೃಸ್ವರೂಪಂ ತಂ ಪ್ರಣತಾಸ್ಸ್ಮ ಪರಂ ಪದಂ ॥ ೫೦ ॥

ವಿಶುದ್ಧಬೋಧವನ್ನಿತ್ಯಮಜಮಕ್ಷಯಮವ್ಯಯಂ ।
ಅವ್ಯಕ್ತಮವಿಕಾರಂ ಯತ್ತದ್ವಿಷ್ಣೋಃ ಪರಮಂ ಪದಂ ॥ ೫೧ ॥

ನ ಸ್ಥೂಲಂ ನಚ ಸೂಕ್ಷ್ಮಂ ಯನ್ನ ವಿಶೇಷಣಗೋಚರಂ ।
ತತ್ಪದಂ ಪರಮಂ ವಿಷ್ಣೋಃ ಪ್ರಣಮಾಮ ಸದಾಮಲಂ ॥ ೫೨ ॥

ಯಸ್ಯಾಯುತಾಯುತಾಂಶಾಂಶೇ ವಿಶ್ವಶಕ್ತಿರಿಯಂ ಸ್ಥಿತಾ ।
ಪರಬ್ರಹ್ಮಸ್ವರೂಪಸ್ಯ ಪ್ರಣಮಾಮಸ್ತಮವ್ಯಯಂ ॥ ೫೩ ॥

ರೂಪನೂ ಆದ ಪರಮಪದ ಸ್ವರೂಪನಾದ ದೇವನಿಗೆ ನಮಸ್ಕರಿಸುವೆವು.

೫೧–೫೨. ಆ ವಿಷ್ಣುವಿನ ಪರಮಪದವೆಂಬುದು ಶುದ್ಧ ಜ್ಞಾನಸ್ವರೂಪವಾಗಿ ನಿತ್ಯವಾದುದು. ಷಡ್ಭಾವ ವಿಕಾರವಿಲ್ಲದುದು. ಸ್ಥೂಲವಾದುದೂ ಅಲ್ಲ ಸೂಕ್ಷ್ಮವಾದುದೂ ಅಲ್ಲ. ಯಾವ ವಿಶೇಷಣ ಶಬ್ದಗಳಿಂದಲೂ ಅನುಭವಗೋಚರವಾದುದಲ್ಲ. ಯಾವಾಗಲೂ ಪರಿಶುದ್ಧವಾದುದು. ಆ ಶ್ರೇಷ್ಠಸ್ಥಿತಿಗೆ ನಮಸ್ಕಾರಮಾಡುವೆವು.

೫೩–೫೭. ಆ ಪರಬ್ರಹ್ಮನ ಕೋಟ್ಯಂಶದ ಒಂದಂಶವಾದ ಸೂಕ್ಷ್ಮವಾದ ಮಾಯಾಶಕ್ತಿಯ ರಜೋಗುಣದಲ್ಲಿ ಈ ಪ್ರಪಂಚ ರಚನಾಶಕ್ತಿಯು ಇರುವುದು. ಆ ಪರಮಪದವನ್ನು ಯೋಗಿಗಳು ಪ್ರಯತ್ನಪೂರ್ವಕವಾಗಿ ಏಕಾಗ್ರಚಿತ್ತದಿಂದ ಪ್ರಣವ ಜಪವನ್ನು ಮಾಡುತ್ತಾ ತಮ್ಮ ಪುಣ್ಯಾಪಾಪಗಳೆಲ್ಲ ಕ್ಷೀಣವಾದ ಮೇಲೆ ನಾಶರಹಿತವಾದ ಆ ಪದವಿಯನ್ನು ಅನುಭವಗೋಚರಮಾಡಿಕೊಳ್ಳುವರು. ಆ

ಯದ್ಯೋಗಿನಸ್ಸದೋದ್ಯುಕ್ತಾಃ ಪುಣ್ಯಪಾಪಕ್ಷಯೇಽಕ್ಷಯಂ ।
ಪಶ್ಯಂತಿ ಪ್ರಣವೇಽಚಿಂತ್ಯಂ ತದ್ವಿಷ್ಣೋಃ ಪರಮಂ ಪದಂ ॥ ೫೪ ॥

ಯನ್ನ ದೇವಾ ನ ಮುನಯೋ ನಚಾಹಂ ನಚ ಶಂಕರಃ ।
ಜಾನಂತಿ ಪರಮೇಶಸ್ಯ ತದ್ವಿಷ್ಣೋಃ ಪರಮಂ ಪದಂ ॥ ೫೫ ॥

ಶಕ್ತಯೋ ಯಸ್ಯ ದೇವಸ್ಯ ಬ್ರಹ್ಮವಿಷ್ಣುಶಿವಾತ್ಮಿಕಾಃ ।
ಭವಂತ್ಯಭೂತಪೂರ್ವಸ್ಯ ತದ್ವಿಷ್ಣೋಃ ಪರಮಂ ಪದಂ ॥ ೫೬ ॥

ಸರ್ವೇಶ ಸರ್ವಭೂತಾತ್ಮನ್ ಸರ್ವಸರ್ವಾಶ್ರಯಾಚ್ಯುತ ।
ಪ್ರಸೀದ ವಿಷ್ಣೋ ಭಕ್ತಾನಾಂ ವ್ರಜ ನೋ ದೃಷ್ಟಿಗೋಚರಂ ॥ ೫೭ ॥

॥ ಶ್ರೀ ಪರಾಶರಃ ॥

ಇತ್ಯುದೀರಿತಮಾಕರ್ಣ್ಯ ಬ್ರಹ್ಮಣಸ್ತ್ರಿದಶಾಸ್ತತಃ ।
ಪ್ರಣಮ್ಯೋಚುಃ ಪ್ರಸೀದೇತಿ ವ್ರಜ ನೋ ದೃಷ್ಟಿಗೋಚರಂ ॥ ೫೮ ॥

ಪರಮೇಶ್ವರನ ಪರಮಪದವಿಯನ್ನು ದೇವತೆಗಳೂ, ಮುನಿಗಳೂ, ನಾನೂ, ಶಂಕರನೂ ತಿಳಿದಿಲ್ಲ. ಬ್ರಹ್ಮ, ವಿಷ್ಣು, ಶಿವ ಎಂಬ ಮೂರು ಶಕ್ತಿಗಳೂ ಅಭೂತಪೂರ್ವ (ಅನಾದಿಯಾದ) ನಾದ ಸರ್ವವ್ಯಾಪಿಯಾದ ವಿಷ್ಣುವಿನ ಶಕ್ತಿಗಳಾಗಿರುವುವು. ಸರ್ವೇಶ್ವರನೇ, ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪನಾದವನೇ, ಪ್ರಪಂಚ ಸ್ವರೂಪನೇ, ಪ್ರಪಂಚಕ್ಕೆ ಆಶ್ರಯನಾದವನೇ, ಸರ್ವವ್ಯಾಪಿಯೇ, ನಾಶರಹಿತನೇ ಭಕ್ತರಾದ ನಮಗೆ ದೃಷ್ಟಿಗೋಚರನಾಗು.

೫೮-೬೦. ಬ್ರಹ್ಮನು ಹೀಗೆ ಹೇಳಿದುದನ್ನು ಕೇಳಿ ದೇವತೆಗಳೆಲ್ಲರೂ ನಮಸ್ಕರಿಸಿ ನಾವೂ, ಬ್ರಹ್ಮನೂ ದಿಗಂತಪ್ರಕಾಶಕವಾದ ನಿನ್ನ ನಾಶರಹಿತವಾದ ತೇಜಸ್ಸನ್ನು ಕಂಡಿಲ್ಲ. ಪ್ರಸನ್ನನಾಗಿ ನಮ್ಮ ದೃಷ್ಟಿಗೆ ಗೋಚರನಾಗೆಂದು ಹೇಳಿದರು.

ಯನ್ನಾಯಂ ಭಗವಾನ್ ಬ್ರಹ್ಮಾ ಜಾನಾತಿ ಪರಮಂ ಪದಂ ।
ತನ್ನತಾಸ್ಸ್ಮ ಜಗದ್ಧಾಮ ತವ ಸರ್ವಗತಾಚ್ಯುತ ॥ ೫೯ ॥

ಇತ್ಯಂತೇ ವಚಸಸ್ತೇಷಾಂ ದೇವಾನಾಂ ಬ್ರಹ್ಮಣಸ್ತಥಾ ।
ಊಚುರ್ದೇವರ್ಷಯಸ್ಸರ್ವೇ ಬೃಹಸ್ಪತಿಪುರೋಗಮಾಃ ॥ ೬೦ ॥

ಆದ್ಯೋ ಯಜ್ಞಃ ಪುಮಾನೀಡ್ಯೋ ಯಃ ಪೂರ್ವೇಷಾಂ ಚ ಪೂರ್ವಜಃ ।
ತಂ ನತಾಸ್ಸ್ಮ ಜಗತ್ಸ್ರಷ್ಟುಃ ಸ್ರಷ್ಟಾರಮವಿಶೇಷಣಂ ॥ ೬೧ ॥

ಭಗವನ್ಭೂತಭವ್ಯೇಶ ಯಜ್ಞಮೂರ್ತಿಧರಾವ್ಯಯ ।
ಪ್ರಸೀದ ಪ್ರಣತಾನಾಂ ತ್ವಂ ಸರ್ವೇಷಾಂ ದೇಹಿ ದರ್ಶನಂ ॥ ೬೨ ॥

ಏಷ ಬ್ರಹ್ಮಾ ಸಹಾಸ್ಮಾಭಿಸ್ಸಹ ರುದ್ರೈಸ್ತ್ರಿಲೋಚನಃ ।
ಸರ್ವಾದಿತ್ಯೈಸ್ಸಮಂ ಪೂಷಾ ಪಾವಕೋಽಯಂ ಸಹಾಗ್ನಿಭಿಃ ॥ ೬೩ ॥

ಅಶ್ವಿನೌ ವಸವಶ್ಚೇವ ಸರ್ವೇ ಚೈತೇ ಮರುದ್ಗಣಾಃ ।
ಸಾಧ್ಯಾವಿಶ್ವೇ ತಥಾ ದೇವಾ ದೇವೇಂದ್ರಶ್ಚಾಯಮೀಶ್ವರಃ ॥ ೬೪ ॥

ಬ್ರಹ್ಮನೂ ದೇವತೆಗಳೂ ಈ ಮಾತನ್ನು ಹೇಳಿದಮೇಲೆ ಬೃಹಸ್ಪತಿಯೇ ಮುಂತಾದ ದೇವರ್ಷಿಗಳೆಲ್ಲರೂ ಹೇಳಿದರು.

೬೧–೬೪. ಯಜ್ಞಪುರುಷನಾಗಿ ಪೂಜ್ಯನಾದವನೂ, ಅನಾದಿಯಾದವನೂ, ಲೋಕವನ್ನು ಸೃಷ್ಟಿಸುವ ಬ್ರಹ್ಮನನ್ನು ಸೃಷ್ಟಿಮಾಡಿದವನೂ, ವಿಶೇಷಣ ರಹಿತನೂ ಆದ ಮಹಾಮಹಿಮನೇ, ಸೃಷ್ಟಿಸಿದ ಮತ್ತು ಮುಂದೆ ಸೃಷ್ಟಿಯಾಗುವ ಪ್ರಪಂಚಕ್ಕೆ ಒಡೆಯನೇ, ಯಜ್ಞಮೂರ್ತಿ ಸ್ವರೂಪನೇ ನಿನಗೆ ನಾವು ನಮಸ್ಕಾರಮಾಡುವೆವು ನಮ್ಮೆಲ್ಲರಿಗೂ ದರ್ಶನವನ್ನು ಕೊಡು. ನಮ್ಮೊಡನೆ ಕೂಡಿದ ಈ ಬ್ರಹ್ಮನೂ ಏಕಾದಶ ರುದ್ರರೊಡನೆ ಕೂಡಿದ ಮುಕ್ಕಣ್ಣನಾದ ಶಿವನೂ, ದ್ವಾದಶಾದಿತ್ಯರಿಂದ ಕೂಡಿದ ಸೂರ್ಯನೂ, ತ್ರೇತಾಗ್ನಿಗಳಿಂದ ಕೂಡಿದ ಅಗ್ನಿಯೂ, ಅಶ್ವಿನಿದೇವತೆಗಳೂ,

ಪ್ರಣಾಮ ಪ್ರವಣಾನಾಥ ದೈತ್ಯಸೈನ್ಯಪರಾಜಿತಾಃ ।
ಶರಣಂ ತ್ವಾಮನುಪ್ರಾಪ್ತಾಸ್ಸಮಸ್ತಾ ದೇವತಾಗಣಾಃ ॥ ೬೫ ॥

॥ ಶ್ರೀ ಪರಾಶರಃ ॥

ಏವಂ ಸಂಸ್ತೂಯಮಾನಸ್ತು ಭಗವಾನ್ ಶಂಖಚಕ್ರಧೃತ್ ।
ಜಗಾಮ ದರ್ಶನಂ ತೇಷಾಂ ಮೈತ್ರೇಯ ಪರಮೇಶ್ವರಃ ॥ ೬೬ ॥

ತಂ ದೃಷ್ಟ್ವಾ ತೇ ತದಾ ದೇವಾಶ್ಶಂಖಚಕ್ರಗದಾಧರಂ ।
ಅಪೂರ್ವರೂಪಸಂಸ್ಥಾನಂ ತೇಜಸಾಂ ರಾಶಿಮೂರ್ಜಿತಂ ॥ ೬೭ ॥

ಪ್ರಣಮ್ಯ ಪ್ರಣತಾಃ ಪೂರ್ವಂ ಸಂತೋಷಸ್ತಿಮಿತೇಕ್ಷಣಾಃ ।
ತುಷ್ಟುವುಃ ಪುಂಡರೀಕಾಕ್ಷಂ ಪಿತಾಮಹಪುರೋಗಮಾಃ ॥ ೬೮ ॥

ಅಷ್ಟವಸುಗಳೂ, ಸಾಧ್ಯರೂ, ವಿಶ್ವೇದೇವತೆಗಳೂ ಮುಂತಾದ ದೇವಗಣಗಳಿಂದ ಕೂಡಿದ ದೇವೇಂದ್ರನೂ ದೈತ್ಯರ ಸೈನ್ಯಗಳಿಗೆ ಸೋತು ಸ್ವಾಮಿಯಾದ ನಿನಗೆ ನಮಸ್ಕಾರಮಾಡಿ ಶರಣುಹೊಂದಿರುವೆವು.

೬೬. ಹೀಗೆಂದು ಸ್ತೋತ್ರಮಾಡುತ್ತಿದ್ದಾಗ ಶಂಖಚಕ್ರಧಾರಿಯೂ, ಮಹಾ ಮಹಿಮನೂ ಆದ ಪರಮೇಶ್ವರನು ಅವರಿಗೆ ಪ್ರತ್ಯಕ್ಷನಾದನು.

೬೭–೬೮. ಮೈತ್ರೇಯನೇ ಕೇಳು:—ದೇವತೆಗಳು ಶಂಖ, ಚಕ್ರ, ಗದಾಧಾರಿಯಾದ ವಿಷ್ಣುವಿನ ಅಪೂರ್ವವಾದ ಆ ರೂಪವನ್ನೂ, ಶ್ರೇಷ್ಠವಾದ ತೇಜಸ್ಸನ್ನೂ ಕಂಡು ಪುನಃ ಭಕ್ತಿಯಿಂದ ನಮಸ್ಕರಿಸಿ ಸಂತೋಷದಿಂದ ಕೂಡಿದ ಸ್ಥಿರವಾದ ದೃಷ್ಟಿಯಿಂದ ನೋಡುತ್ತ ಬ್ರಹ್ಮನನ್ನು ಮುಂದು ಮಾಡಿಕೊಂಡು ಸ್ತೋತ್ರಮಾಡಲು ಪ್ರಾರಂಭಿಸಿದರು.

॥ ದೇವಾಃ ॥

ನಮೋ ನಮೋಽವಿಶೇಷಸ್ತ್ವಂ ತ್ವಂ ಬ್ರಹ್ಮಾತ್ವಂ ಪಿನಾಕಧೃತ್ ।
ಇಂದ್ರಸ್ತ್ವಮಗ್ನಿಃ ಪವನೋ ವರುಣಸ್ಸವಿತಾ ಯಮಃ ॥ ೬೯ ॥

ವಸವೋ ಮರುತಸ್ಸಾಧ್ಯಾ ವಿಶ್ವೇದೇವಗಣಾ ಭವಾನ್ ।
ಯೋಽಯಂ ತವಾಗ್ರತೋ ದೇವ ಸಮಸ್ತೋ ದೇವತಾಗಣಃ ।
ಸರ್ವಮೇವ ಜಗತ್ಸ್ರಷ್ಟಾ ಯತಸ್ಸರ್ವಗತೋ ಭವಾನ್ ॥ ೭೦ ॥

ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಃ ಪ್ರಜಾಪತಿಃ ।
ವೇತ್ತಾ ವೇದ್ಯಂ ಚ ಸರ್ವಾತ್ಮಂ ತ್ವನ್ಮಯಂ ಚಾಖಿಲಂ ಜಗತ್ ॥ ೭೧ ॥

ತ್ವಾಮಾರ್ತಾಶ್ಶರಣಂ ವಿಷ್ಣೋ ಪ್ರಯಾತಾ ದೈತ್ಯನಿರ್ಜಿತಾಃ ।
ವಯಂ ಪ್ರಸೀದ ಸರ್ವಾತ್ಮಂಸ್ತೇಜಸಾಪ್ಯಾಯಯಸ್ವ ನಃ ॥ ೭೨ ॥

ತಾವದಾರ್ತಿಸ್ತಥಾ ವಾಂಛಾ ತಾವನ್ಮೋಹಸ್ತಥಾ ಸುಖಂ ।
ಯಾವನ್ನಯಾತಿ ಶರಣಂ ತ್ವಾಮಶೇಷಾಘನಾಶನಂ ॥ ೭೩ ॥

೬೯–೭೪. ಮಹಾಮಹಿಮನೇ ನೀನೇ ಸೃಷ್ಟಿಕರ್ತನಾದ ಬ್ರಹ್ಮನು. ಪಿನಾಕಪಾಣಿಯಾದ ಶಿವನು. ಇಂದ್ರಾಗ್ನಿ, ವರುಣ, ವಾಯುಸ್ವರೂಪನು. ಸೂರ್ಯನೂ ನೀನೇ. ಯಮನೂ ನೀನೇ. ವಿಶ್ವೇದೇವತೆಗಳು, ವಸುಗಳು, ಸಾಧ್ಯರು, ನಿನ್ನ ಮುಂದಿರುವ ಸಮಸ್ತ ದೇವಗಣಗಳೂ, ಸಮಸ್ತ ಜಗತ್ತೂ ಸರ್ವಗತನಾದ ನಿನ್ನ ಸ್ವರೂಪವೇ ಆಗಿರುವುದು. ನೀನೇ ಯಜ್ಞಸ್ವರೂಪನು. ವಷಟ್ಕಾರ, ಓಂಕಾರ, ಪ್ರಜಾಪತಿಸ್ವರೂಪನು. ತಿಳಿಯತಕ್ಕವನೂ, ಜ್ಞಾನವಿಷಯನೂ ನೀನೇ. ಸಮಸ್ತ ಜಗತ್ತೂ ಸರ್ವಗತನಾದ ನಿನ್ನ ಸ್ವರೂಪವೇ. ದೈತ್ಯರಿಗೆ ಸೋತುಹೋದ ನಾವು ದುಃಖಿತರಾಗಿ ನಿನ್ನ ಮರೆಹೊಕ್ಕಿರುವೆವು. ಸರ್ವಾತ್ಮನಾದ ನೀನು ಪ್ರಸನ್ನನಾಗಿ ನಮ್ಮನ್ನು ಸಂತೋಷಪಡಿಸು. ಸಮಸ್ತ ಪಾಪನಾಶಕನಾದ ನಿನ್ನನ್ನು ಶರಣು ಹೊಂದುವ ಪರಿಯಂತವಾಗಿ ಜನರಿಗೆ ಶತ್ರುಬಾಧೆಯೂ, ಆಸೆಯೂ, ಅಜ್ಞಾನವೂ,

ತ್ವಂ ಪ್ರಸಾದಂ ಪ್ರಸನ್ನಾತ್ಮನ್ ಪ್ರಪನ್ನಾನಾಂ ಕುರುಷ್ವ ನಃ ।
ತೇಜಸಾಂ ನಾಥ ಸರ್ವೇಷಾಂ ಸ್ವಶಕ್ತ್ಯಾಪ್ಯಾಯನಂ ಕುರು ॥ ೭೪ ॥

॥ ಶ್ರೀಪರಾಶರಃ ॥

ಏವಂ ಸಂಸ್ತೂಯಮಾನಸ್ತು ಪ್ರಣತೈರಮರೈರ್ಹರಿಃ ।
ಪ್ರಸನ್ನದೃಷ್ಟಿರ್ಭಗವಾನಿದಮಾಹ ಸ ವಿಶ್ವಕೃತ್ ॥ ೭೫ ॥

ತೇಜಸೋ ಭವತಾಂ ದೇವಾಃ ಕರಿಷ್ಯಾಮ್ಯುಪಬೃಂಹಣಂ ।
ವದಾಮ್ಯಹಂ ಯತ್ಕ್ರಿಯತಾಂ ಭವದ್ಭಿಸ್ತದಿದಂ ಸುರಾಃ ॥ ೭೬ ॥

ಆನೀಯ ಸಹಿತಾ ದೈತ್ಯೈಃ ಕ್ಷೀರಾಬ್ಧೌ ಸಕಲೌಷಧೀಃ ।
ಮಂಥಾನಂ ಮಂದರಂ ಕೃತ್ವಾ ಯೋಕ್ತ್ರಂ ಕೃತ್ವಾ ಚ ವಾಸುಕಿಂ ॥ ೭೭ ॥

ಕಷ್ಟವೂ ಇರುವುದು. ತೇಜೋನಿಧಿಯಾದ ನೀನು ಶರಣಾಗತರಾದ ನಮಗೆ ಪ್ರಸನ್ನನಾಗಿ ಅನುಗ್ರಹವನ್ನು ಮಾಡು.

೭೫. ಹೀಗೆ ನಮಸ್ಕಾರಮಾಡಿ ಸ್ತೋತ್ರಮಾಡಿದ ದೇವತೆಗಳನ್ನು ಕುರಿತು ಪ್ರಸನ್ನನಾದ ವಿಷ್ಣುವು ಮುಂದೆ ಹೇಳುವ ಮಾತುಗಳನ್ನಾಡಿದನು.

೭೬–೮೧. ದೇವತೆಗಳೇ, ನಾನು ನಿಮ್ಮ ತೇಜಸ್ಸನ್ನು ಹೆಚ್ಚಿಸುವೆನು. ಅದಕ್ಕಾಗಿ ನೀವು ಮಾಡಬೇಕಾದ ಕೆಲಸಗಳನ್ನು ಹೇಳುವೆನು. ನೀವು ದೈತ್ಯರೊಡನೆ ಕೂಡಿ ಸಮಸ್ತ ಓಷಧಿಗಳನ್ನೂ ತಂದು ಕ್ಷೀರಸಮುದ್ರದಲ್ಲಿ ಹಾಕಿ, ಮಂದರಪರ್ವತವನ್ನು ಕಡೆಗೋಲಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಆ ಸಮುದ್ರವನ್ನು ಕಡೆಯಿರಿ. ಅಮೃತವು ಉತ್ಪತ್ತಿಯಾಗುವುದು. ಇದಕ್ಕೆ ನಾನೂ ಸಹಾಯಕನಾಗಿರುವೆನು. ಅಲ್ಲಿ ಮಾಡಬೇಕಾದ ಕೆಲಸಗಳನ್ನು ನೀವೂ, ದೈತ್ಯರೂ, ಸಮಾನವಾಗಿ ಮಾಡಿರಿ. ಸಮಾನವಾದ ಫಲವನ್ನನುಭವಿಸೋಣವೆಂದು ಅವರಿಗೆ ಸಮಾಧಾನಕರವಾದ ಮಾತುಗಳನ್ನು ಹೇಳಿರಿ. ಕೊನೆಗೆ ನೀವೇ ಅದರ ಫಲವನ್ನನುಭವಿಸುವಿರಿ. ಕ್ಷೀರಸಮುದ್ರವನ್ನು ಕಡೆದುದರಿಂದ ಹುಟ್ಟಿದ ಅಮೃತವನ್ನು ನೀವು

ಮಥ್ಯಮಾನಮಮೃತಂ ದೇವಾಸ್ಸಹಾಯೇ ಮಯ್ಯವಸ್ಥಿತೇ ॥ ೭೮ ॥

ಸಾಮಪೂರ್ವಂ ಚ ದೈತೇಯಾಸ್ತತ್ರ ಸಾಮಾನ್ಯಕರ್ಮಣಿ ।
ಸಾಮಾನ್ಯಫಲಭೋಕ್ತಾರೋ ಯೂಯಂ ವಾಚ್ಯಾ ಭವಿಷ್ಯಥ ॥ ೭೯ ॥

ಮಥ್ಯಮಾನೇ ಚ ತತ್ರಾಬ್ಧೌ ಯತ್ಸಮುತ್ಪದ್ಯತೇಽಮೃತಂ ।
ತತ್ಪಾನಾದ್ಬಲಿನೋ ಯೂಯಮಮರಾಶ್ಚ ಭವಿಷ್ಯಥ ॥ ೮೦ ॥

ತಥಾ ಚಾಹಂ ಕರಿಷ್ಯಾಮಿ ತೇ ಯಥಾ ತ್ರಿದಶದ್ವಿಷಃ ।
ನ ಪ್ರಾಪ್ಸ್ಯಂತ್ಯಮೃತಂ ದೇವಾಃ ಕೇವಲಂ ಕ್ಲೇಶಭಾಗಿನಃ ॥ ೮೧ ॥

॥ ಶ್ರೀಪರಾಶರಃ ॥

ಇತ್ಯುಕ್ತಾ ದೇವದೇವೇನ ಸರ್ವ ಏವ ತತಸ್ಸುರಾಃ ।
ಸಂಧಾನಮಸುರೈಃ ಕೃತ್ವಾ ಯತ್ನವಂತೋಽಮೃತೇಭವನ್ ॥ ೮೨ ॥

ಕುಡಿದು ಬಲಶಾಲಿಗಳಾಗಿಯೂ, ಮರಣವಿಲ್ಲದವರಾಗಿಯೂ ಆಗುವಿರಿ. ಆ ನಿಮ್ಮ ಶತ್ರುಗಳಾದ ರಾಕ್ಷಸರು ಅಮೃತವನ್ನು ಪಡೆಯದೆ ಕಷ್ಟಕ್ಕೆ ಮಾತ್ರ ಭಾಗಿಗಳಾಗುವಂತೆ ನಾನು ಮಾಡುತ್ತೇನೆ.

೮೨–೮೭. ಮೈತ್ರೇಯನೇ ಕೇಳು:—ಹೀಗೆಂದು ದೇವದೇವನಾದ ವಿಷ್ಣುವು ಹೇಳಿದಮೇಲೆ ದೇವತೆಗಳೆಲ್ಲರೂ ಅಸುರರೊಡನೆ ಸಂಧಾನಮಾಡಿ ಅಮೃತವನ್ನು ಪಡೆವುದಕ್ಕಾಗಿ ಪ್ರಯತ್ನಮಾಡಿದರು. ದೇವತೆಗಳೂ, ದೈತ್ಯರೂ, ದಾನವರೂ ಬಗೆಬಗೆಯ ಮೂಲಿಕೆಗಳನ್ನು ತಂದು, ಶರತ್ಕಾಲದ ಮೇಘದಂತೆ ನಿರ್ಮಲವಾಗಿ ಕಾಂತಿಯುಕ್ತವಾದ ಕ್ಷೀರಸಮುದ್ರದಲ್ಲಿ ಹಾಕಿ, ಮಂದರಪರ್ವತವನ್ನು ಕಡೆಗೋಲಾಗಿಯೂ, ವಾಸುಕಿಯನ್ನು ಹಗ್ಗವನ್ನಾಗಿಯೂ ಮಾಡಿ ವೇಗವಾಗಿ ಕಡೆಯುವುದಕ್ಕೆ ಪ್ರಾರಂಭಿಸಿದರು. ವಿಷ್ಣುವು ದೇವತೆಗಳನ್ನೆಲ್ಲ ವಾಸುಕಿಯ ಬಾಲದ ಕಡೆಯಲ್ಲಿ ಸೇರಿಸಿದನು. ದೈತ್ಯರನ್ನು ತಲೆಯ ಕಡೆಯಲ್ಲಿ ಸೇರಿಸಿದನು. ಮಹಾಪರಾಕ್ರಮಿಗಳಾದ ದೈತ್ಯರು ವಾಸುಕಿಯ ಬಾಯಿಯ ಉಸುರಿನಿಂದ ಉಂಟಾದ ಬೆಂಕಿಯಿಂದ ತೇಜೋ

ನಾನೌಷಧೀಸ್ಸಮಾನೀಯ ದೇವ ದೈತ್ಯೇಯದಾನವಾಃ ।
ಕ್ಷಿಪ್ತ್ವಾ ಕ್ಷೀರಾಬ್ಧಿಪಯಸಿ ಶರದಭ್ರಾಮಲತ್ವಿಷಿ ॥ ೮೩ ॥

ಮಂಥಾನಂ ಮಂದರಂ ಕೃತ್ವಾ ಯೋಕ್ತ್ರಂ ಕೃತ್ವಾ ಚ ವಾಸುಕಿಂ ।
ತತೋ ಮಥಿತುಮಾರಬ್ಧಾ ಮೈತ್ರೇಯ ತರಸಾಮೃತಂ ॥ ೮೪ ॥

ವಿಬುಧಾಸ್ಸಹಿತಾಸ್ಸರ್ವೇ ಯತಃ ಪುಚ್ಛಂ ತತಃ ಕೃತಾಃ ।
ಕೃಷ್ಣೇನ ವಾಸುಕೇರ್ದೈತ್ಯಾಃ ಪೂರ್ವಕಾಯೇ ನಿವೇಶಿತಾಃ ॥ ೮೫ ॥

ತೇ ತಸ್ಯ ಮುಖನಿಶ್ವಾಸವಹ್ನಿನೋಪಹತತ್ವಿಷಃ ।
ನಿಸ್ತೇಜಸೋ ಸುರಾಸ್ಸರ್ವೇ ಬಭೂವುರಮಿತೌಜಸಃ ॥ ೮೬ ॥

ಪುಚ್ಛಪ್ರದೇಶೇ ವರ್ಷದ್ಭಿಃ ತಥಾಚಾಪ್ಯಾಯಿತಾಸ್ಸುರಾಃ ॥ ೮೭ ॥

ಕ್ಷೀರೋದಮಧ್ಯೇ ಭಗವಾನ್ ಕೂರ್ಮರೂಪೀ ಸ್ವಯಂ ಹರಿಃ ।
ಮಂದರಾದ್ರೇರಧಿಷ್ಠಾನಂ ಭ್ರಮತೋಭೂನ್ಮಹಾಮುನೇ ॥ ೮೮ ॥

ಹೀನರಾದರು. ವಾಸುಕಿಯ ಉಸುರಿನ ವೇಗದಿಂದ ತಲೆಯ ಕಡೆಯಲ್ಲಿದ್ದ ಮೇಘಗಳೆಲ್ಲವೂ ಬಾಲದ ಕಡೆಗೆ ಹೋಗಿ ಮಳೆಯನ್ನು ಸುರಿಸುತ್ತಿದ್ದುದರಿಂದ ಅಲ್ಲಿದ್ದ ದೇವತೆಗಳು ಸುಖಿಗಳಾಗಿದ್ದರು.

೮೮-೯೧. ಮಹಾಮುನಿಯಾದ ಮೈತ್ರೇಯನೇ, ಮಹಾಮಹಿಮನಾದ ವಿಷ್ಣುವು ತಾನು ಸಹಾಯಕನಾಗಿರುತ್ತೇನೆಂದು ಹೇಳಲಿಲ್ಲವೇ! ಅದರಂತೆ ಅವನು ಕ್ಷೀರಸಮುದ್ರದನಡುವೆ ಕೂರ್ಮರೂಪದಿಂದ ಮಂದರಪರ್ವತಕ್ಕೆ ಆಶ್ರಯನಾಗಿದ್ದನು. ಚಕ್ರಗದಾಧರನಾಗಿದ್ದ ಮತ್ತೊಂದು ರೂಪದಿಂದ ದೇವತೆಗಳ ನಡುವೆ ಸೇರಿಕೊಂಡು ಬೇರೊಂದು ರೂಪದಿಂದ ದೈತ್ಯರ ನಡುವೆಯೂ ಸೇರಿಕೊಂಡು, ಹಗ್ಗವಾದ ವಾಸುಕಿಯನ್ನು ಎಳೆಯುತ್ತಿದ್ದನು. ಇದಲ್ಲದೆ ದೈತ್ಯರಿಗೂ, ದೇವತೆಗಳಿಗೂ ಗೋಚರವಾಗದ ಮತ್ತೊಂದು ದೊಡ್ಡ ರೂಪದಿಂದ ಪರ್ವತವನ್ನಾಕ್ರಮಿಸಿಕೊಂಡಿದ್ದನು. ಮತ್ತು

ರೂಪೇಣಾನ್ಯೇನ ದೇವಾನಾಂ ಮಧ್ಯೇ ಚಕ್ರಗದಾಧರಃ ।
ಚಕರ್ಷ ನಾಗರಾಜಾನಂ ದೈತ್ಯಮಧ್ಯೇ ಪರೇಣ ಚ ॥ ೮೯ ॥

ಉಪರ್ಯಾಕ್ರಾಂತವಾನ್ ಶೈಲಂ ಬೃಹದ್ರೂಪೇಣ ಕೇಶವಃ ।
ತಥಾಪರೇಣ ಮೈತ್ರೇಯ ಯನ್ನ ದೃಷ್ಟಂ ಸುರಾಸುರೈಃ ॥ ೯೦ ॥

ತೇಜಸಾ ನಾಗರಾಜಾನಂ ತಥಾಪ್ಯಾಯಿತವಾನ್ ಹರಿಃ ।
ಅನ್ಯೇನ ತೇಜಸಾ ದೇವಾನುಪಬೃಂಹಿತವಾನ್ಪ್ರಭುಃ ॥ ೯೧ ॥

ಮಥ್ಯಮಾನೇ ತತಸ್ತಸ್ಮಿನ್ ಕ್ಷೀರಾಬ್ಧೌ ದೇವದಾನವೈಃ ।
ಹವಿರ್ಧಾಮಾಭವತ್ಪೂರ್ವಂ ಸುರಭಿಸ್ಸುರಪೂಜಿತಾ ॥ ೯೨ ॥

ವಿಷ್ಣುವು ತನ್ನ ತೇಜಸ್ಸಿನಿಂದ ನಾಗರಾಜನನ್ನು ಸಂತೋಷಪಡಿಸುತ್ತ, ಮತ್ತೊಂದು ಬಗೆಯ ತೇಜಸ್ಸಿನಿಂದ ದೇವತೆಗಳ ತೇಜಸ್ಸನ್ನು ಹೆಚ್ಚಿಸುತ್ತಿದ್ದನು.

೯೨-೯೯. ಮೈತ್ರೇಯಮುನಿಯೆ ಕೇಳು:— ದೇವದಾನವರು ಕ್ಷೀರ ಸಮುದ್ರವನ್ನು ಕಡೆಯುತ್ತಿರಲು ಮೊದಲು ಹಾಲು ಮೊಸರು ಮುಂತಾದ ಯಜ್ಞ ಕರ್ಮಗಳಿಗೆ ಉಪಯುಕ್ತವಾದ, ಹವಿಸ್ಸಿಗೆ ಕಾರಣವಾದ, ದೇವತೆಗಳಿಗೆ ಪೂಜಾ ಯೋಗ್ಯವಾದ ಕಾಮಧೇನುವುಹುಟ್ಟಿತು. ಇದನ್ನು ನೋಡಿ ದೇವದಾನವರು ಸಂತೋಷ ವನ್ನು ಹೊಂದಿ, ಆ ಕಾಮಧೇನುವಿನ ಆಸೆಯಿಂದ ಕೂಡಿ ನೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ಸಿದ್ಧರು ಅಂತರಿಕ್ಷದಲ್ಲಿದ್ದು ಇದೇನಾಶ್ಚರ್ಯವೆಂದು ನೋಡುತ್ತಿರಲು ಮದದಿಂದ ಮತ್ತವಾದ ನೋಟವುಳ್ಳ ಮದಿರಾದೇವಿಯು ಹುಟ್ಟಿದಳು. ಬಳಿಕ ಕಡೆ ವುದರಿಂದ ವಿಶೇಷವಾದ ಸುಳಿಗಳುಂಟಾದ ಆ ಕ್ಷೀರಸಮುದ್ರದಿಂದ, ದಿಕ್ಕುಗಳನ್ನೆಲ್ಲ ಸುವಾಸನೆಯಿಂದ ತುಂಬುತ್ತಿರುವ ಪಾರಿಜಾತವೆಂಬ ದೇವಸ್ತ್ರೀಯರನ್ನು ಆನಂದ ಪಡಿಸುವ ಮರವು ಹುಟ್ಟಿತು. ಆಮೇಲೆ ರೂಪದಿಂದಲೂ ಔದಾರ್ಯಾದಿಗುಣಗಳಿಂದಲೂ ಕೂಡಿದ ಆಶ್ಚರ್ಯಕರವಾದ ಅಪ್ಸರಸ್ತ್ರೀಯರ ಗುಂಪು ಹುಟ್ಟಿತು. ಬಳಿಕ ಚಂದ್ರನು ಹುಟ್ಟಿದನು. ಅವನನ್ನು ಶಿವನು ಶಿರೋಭೂಷಣವಾಗಿ ಮಾಡಿಕೊಂಡನು. ಆಮೇಲೆ ಹುಟ್ಟಿದ ವಿಷವನ್ನು ಶಿವನೇ ಗ್ರಹಿಸಿದನು. ಅವನು ಕುಡಿಯುವಾಗ ಚಲ್ಲಿಹೋದ

ಜಗ್ಮುರ್ಮುದಂ ತದಾ ದೇವಾ ದಾನವಾಶ್ಚ ಮಹಾಮುನೇ ।
ವ್ಯಾಕ್ಷಿಪ್ತಚೇತಸಶ್ಚೈವ ಬಭೂವುಸ್ತಿಮಿತೇಕ್ಷಣಾಃ ॥ ೯೩ ॥

ಕಿಮೇತದಿತಿ ಸಿದ್ಧಾನಾಂ ದಿವಿ ಚಿಂತಯತಾಂ ತತಃ ।
ಬಭೂವ ವಾರುಣೀ ದೇವೀ ಮದಾಘೂರ್ಣಿತಲೋಚನಾ ॥ ೯೪ ॥

ಕೃತಾವರ್ತಾತ್ತತಸ್ತಸ್ಮಾತ್ ಕ್ಷೀರೋದಾದ್ವಾಸಯಞ್ಜಗತ್ ।
ಗಂಧೇನ ಪಾರಿಜಾತೋಭೂದ್ದೇವಸ್ತ್ರೀನಂದನಸ್ತರುಃ ॥ ೯೫ ॥

ರೂಪೌದಾರ್ಯಗುಣೋಪೇತಸ್ತತಶ್ಚಾಪ್ಸರಸಾಂ ಗಣಃ ।
ಕ್ಷೀರೋದಧೇಸ್ಸಮುತ್ಪನ್ನೋ ಮೈತ್ರೇಯ ಪರಮಾದ್ಭುತಃ ॥ ೯೬ ॥

ತತಶ್ಶೀತಾಂಶುರಭವಜ್ಜಗೃಹೇ ತಂ ಮಹೇಶ್ವರಃ ।
ಜಗೃಹುಶ್ಚ ವಿಷಂ ನಾಗಾಃ ಕ್ಷೀರೋದಾಬ್ಧಿಸಮುದ್ಭವಂ ॥ ೯೭ ॥

ತತೋ ಧನ್ವಂತರಿರ್ದೇವಶ್ಶ್ವೇತಾಂಬರಧರಸ್ಸ್ವಯಂ ।
ಬಿಭ್ರತ್ಕಮಂಡಲುಂ ಪೂರ್ಣಮಮೃತಸ್ಯ ಸಮುತ್ಥಿತಃ ॥ ೯೮ ॥

ತತಸ್ಸ್ವಸ್ಥಮನಸ್ಕಾಸ್ತೇ ಸರ್ವೇ ದೈತೇಯದಾನವಾಃ ।
ಬಭೂವುರ್ಮುದಿತಾಸ್ಸದ್ಯೋ ಮೈತ್ರೇಯ ಮುನಿಭಿಸ್ಸಹ ॥ ೯೯ ॥

ತತಸ್ಸ್ಫುರತ್ಕಾಂತಿಮತೀ ವಿಕಾಸಿ ಕಮಲೇ ಸ್ಥಿತಾ ।
ಶ್ರೀರ್ದೇವೀ ಪಯಸಸ್ತಸ್ಮಾದುತ್ಥಿತಾ ಧೃತಪಂಕಜಾ ॥ ೧೦೦ ॥

ಸ್ವಲ್ಪ ವಿಷವನ್ನು ನಾಗಗಳು ಗ್ರಹಿಸಿದುವು. ಆಮೇಲೆ ಧನ್ವಂತರಿಯೆಂಬ ದೇವನು ಬಿಳಿಯ ವಸ್ತ್ರವನ್ನು ಧರಿಸಿ, ಕಮಂಡಲುವಿನಲ್ಲಿ ಅಮೃತವನ್ನು ತುಂಬಿಕೊಂಡು, ಕ್ಷೀರಸಮುದ್ರದಿಂದ ಹುಟ್ಟಿದನು. ಇದನ್ನು ಕಂಡು ದೈತ್ಯದಾನವರೂ ಮುನಿಗಳೂ ಸ್ವಸ್ಥ ಚಿತ್ತರಾಗಿ ಸಂತೋಷವನ್ನು ಹೊಂದಿದರು.

೧೦೦-೧೦೫. ಆಮೇಲೆ ವಿಸ್ತಾರವಾದ ಅರಳಿದ ಕಮಲದಲ್ಲಿ ನಿಂತುಕೊಂಡಿರುವ ಪ್ರಕಾಶಿಸುತ್ತಿರುವ ಕಾಂತಿಯಿಂದ ಕೂಡಿದ, ಶ್ರೀ ದೇವಿಯು ಕೈಯ್ಯಲ್ಲಿ

ತಾಂ ತುಷ್ಟುವುರ್ಮುದಾ ಯುಕ್ತಾಶ್ಶ್ರೀಸೂಕ್ತೇನ ಮಹರ್ಷಯಃ ॥೧೦೦॥

ವಿಶ್ವಾವಸುಮುಖಾಸ್ತಸ್ಯಾ ಗಂಧರ್ವಾಃ ಪುರತೋ ಜಗುಃ ।
ಘೃತಾಚೀಪ್ರಮುಖಾ ಬ್ರಹ್ಮನ್ ನನೃತುಶ್ಚಾಪ್ಸರೋ ಗಣಾಃ ॥ ೧೦೨ ॥

ಗಂಗಾದ್ಯಾಸ್ಸರಿತಸ್ತೋಯೈಸ್ಸ್ನಾನಾರ್ಥಮುಪತಸ್ಥಿರೇ ।
ದಿಗ್ಗಜಾ ಹೇಮಪಾತ್ರಸ್ಥಮಾದಾಯ ವಿಮಲಂ ಜಲಂ ।
ಸ್ನಾಪಯಾಂಚಕ್ರಿರೇ ದೇವೀಂ ಸರ್ವಲೋಕಮಹೇಶ್ವರೀಂ ॥ ೧೦೩

ಕ್ಷೀರೋದೋ ರೂಪಧೃಕ್ತಸ್ಯೈ ಮಾಲಾಮಮ್ಲಾನಪಂಕಜಾಂ ।
ದದೌ ವಿಭೂಷಣಾನ್ಯಂಗೇ ವಿಶ್ವಕರ್ಮಾ ಚಕಾರ ಹ ॥ ೧೦೪ ॥

ದಿವ್ಯಮಾಲ್ಯಾಂಬರಧರಾ ಸ್ನಾತಾ ಭೂಷಣಭೂಷಿತಾ ।
ಪಶ್ಯತಾಂ ಸರ್ವದೇವಾನಾಂ ಯಯೌ ವಕ್ಷಸ್ಸ್ಥಲಂ ಹರೇಃ ॥ ೧೦೫ ॥

ಕಮಲವನ್ನು ಹಿಡಿದುಕೊಂಡು ಆ ಕ್ಷೀರಸಮುದ್ರದ ನೀರಿನಲ್ಲಿ ಹುಟ್ಟಿದಳು. ಆಗ ಮಹರ್ಷಿಗಳು ಸಂತೋಷದಿಂದ ಆ ದೇವಿಯನ್ನು 'ಹಿರಣ್ಯವರ್ಣಾಂ' ಎಂಬ ಹದಿನೈದು ಮಂತ್ರಗಳಿಂದ ಕೂಡಿದ ಶ್ರೀಸೂಕ್ತದಿಂದ ಸ್ತೋತ್ರ ಮಾಡಿದರು. ವಿಶ್ವಾವಸುವೇ ಮುಂತಾದ ಗಂಧರ್ವರು ಆ ದೇವಿಯ ಮುಂದೆ ಗಾನಮಾಡಿದರು. ಘೃತಾಚಿಯೇ ಮುಂತಾದ ಅಪ್ಸರ ಸ್ತ್ರೀಯರು ನರ್ತನ ಮಾಡಿದರು. ಆ ದೇವಿಯ ಸ್ನಾನಾರ್ಥವಾಗಿ ಗಂಗಾದಿ ನದಿಗಳು ತಮ್ಮ ನೀರಿನೊಡನೆ ದೇವಿಯ ಸಮೀಪಕ್ಕೆ ಬಂದುವು. ಸಮಸ್ತ ಲೋಕಾಧಿದೇವಿಯಾದ ಆ ಮಹೇಶ್ವರಿಯನ್ನು ದಿಗ್ಗಜಗಳು ಚಿನ್ನದ ಕಲಶದಲ್ಲಿದ್ದ ನೀರಿನಿಂದ ಅಭಿಷೇಕಮಾಡಿದುವು. ಕ್ಷೀರಸಮುದ್ರನೇ ಒಂದು ಆಕಾರವನ್ನು ಧರಿಸಿ ಬಂದು ಬಾಡದಿರುವ ಕಮಲದ ಮಾಲೆಯನ್ನು ಕೊಟ್ಟನು. ವಿಶ್ವಕರ್ಮನು ಆ ದೇವಿಯ ಅವಯವಗಳಿಗೆ ತಕ್ಕ ಆಭರಣಗಳನ್ನು ಕೊಟ್ಟನು. ಆ ದೇವಿಯು ಸ್ನಾನಮಾಡಿ ದಿವ್ಯವಾದ ವಸ್ತ್ರಾಭರಣಗಳನ್ನು ಧರಿಸಿ ಸಮಸ್ತ ದೇವತೆಗಳೂ ನೋಡುತ್ತಿರಲು ವಿಷ್ಣುವಿನ ವಕ್ಷಸ್ಥಳಕ್ಕೆ ಹೋಗಿ ಸೇರಿದಳು.

ತತೋಽವಲೋಕಿತಾ ದೇವಾ ಹರಿವಕ್ಷಃಸ್ಥಲಸ್ಥಯಾ ।
ಲಕ್ಷ್ಮ್ಯಾ ಮೈತ್ರೇಯ ಸಹಸಾ ಪರಾಂ ನಿರ್ವೃತಿಮಾಗತಾಃ ॥೧೦೬॥

ಉದ್ವೇಗಂ ಪರಮಂ ಜಗ್ಮುರ್ದೈತ್ಯಾ ವಿಷ್ಣುಪರಾಙ್ಮುಖಾಃ ।
ತ್ಯಕ್ತಾ ಲಕ್ಷ್ಮ್ಯಾ ಮಹಾಭಾಗ ವಿಪ್ರಚಿತ್ತಿಪುರೋಗಮಾಃ ॥ ೧೦೭ ॥

ತತಸ್ತೇ ಜಗೃಹುರ್ದೈತ್ಯಾ ಧನ್ವಂತರಿಕರಸ್ಥಿತಂ ।
ಕಮಂಡಲುಂ ಮಹಾವೀರ್ಯಾ ಯತ್ರಾಸ್ತೇ ತದ್ದ್ವಿಜಾಮೃತಂ ॥ ೧೦೮ ॥

ಮಾಯಯಾ ಲೋಭಯಿತ್ವಾ ತಾನ್ವಿಷ್ಣುಃ ಸ್ತ್ರೀರೂಪಸಂಸ್ಥಿತಃ ।
ದಾನವೇಭ್ಯಸ್ತದಾದಾಯ ದೇವೇಭ್ಯಃ ಪ್ರದದೌ ಹರಿಃ ॥ ೧೦೯ ॥

ತತಃ ಪಪುಸ್ಸುರಗಣಾಶ್ಶಕ್ರಾದ್ಯಾಸ್ತತ್ತದಾಮೃತಂ ।
ಉದ್ಯತಾಯುಧನಿಸ್ತ್ರಿಂಶಾ ದೈತ್ಯಾಸ್ತಾಂಶ್ಚ ಸಮಭ್ಯಯುಃ ॥ ೧೧೦ ॥

---

೧೦೬. ವಿಷ್ಣುವಿನ ವಕ್ಷಸ್ಥಳವನ್ನು ಸೇರಿದ ದೇವಿಯು ಕೃಪಾದೃಷ್ಟಿಯಿಂದ ದೇವತೆಗಳನ್ನು ನೋಡುತ್ತಿರಲು ಅವರೆಲ್ಲರೂ ಅತ್ಯಂತ ಸುಖವನ್ನು ಹೊಂದಿದರು.

೧೦೭-೧೧೦ ವಿಪ್ರಚಿತ್ತಿಯೇ ಮುಂತಾದ ದೈತ್ಯರು ಲಕ್ಷ್ಮಿಯ ಕೃಪಾದೃಷ್ಟಿಯಿಲ್ಲದೆ ವಿಷ್ಣುಭಕ್ತಿಯಿಲ್ಲದವರಾಗಿ ಮನಸ್ಸಿನಲ್ಲಿ ಕ್ಲೇಶವನ್ನು ಹೊಂದಿದರು. ಬಳಿಕ ಮಹಾಪರಾಕ್ರಮಿಗಳಾದ ದೈತ್ಯರು ಧನ್ವಂತರಿಯ ಕೈಯಲ್ಲಿದ್ದ ಅಮೃತದಿಂದ ತುಂಬಿದ ಕಮಂಡಲುವನ್ನು ತೆಗೆದುಕೊಂಡರು. ಆಗ ವಿಷ್ಣುವು ಮೋಹಿನೀ ರೂಪವನ್ನು ಧರಿಸಿ ಮಾಯೆಯಿಂದ ಅವರನ್ನು ಭ್ರಾಂತಿಗೊಳಿಸಿ ಆ ಕಮಂಡಲುವನ್ನು ಅವರಿಂದ ತೆಗೆದುಕೊಂಡು ದೇವತೆಗಳಿಗೆ ಕೊಟ್ಟನು. ಇಂದ್ರಾದಿ ದೇವತೆಗಳೆಲ್ಲರೂ ಅದನ್ನು ಪಾನಮಾಡಿದರು. ದೈತ್ಯರು ಕತ್ತಿಯೇ ಮುಂತಾದ ಆಯುಧಗಳನ್ನು ಹಿಡಿದು ದೇವತೆಗಳಮೇಲೆ ಯುದ್ಧಮಾಡಿದರು.

ಹೀಶೇಽಮೃತೇ ಚ ಬಲಿಭಿರ್ದೇವೈರ್ದೈತ್ಯಚಮೂಸ್ತದಾ ।
ವಧ್ಯಮಾನಾ ದಿಶೋ ಭೇಜೇ ಪಾತಾಳಂ ಚ ವಿವೇಶಹ ॥ ೧೧೧ ॥

ತತೋ ದೇವಾ ಮುದಾಯುಕ್ತಾಶ್ಶಂಖಚಕ್ರಗದಾಧರಂ ।
ಪ್ರಣಿಪತ್ಯ ಯಥಾಪೂರ್ವಮಶಾಸಂಸ್ತ್ರಿವಿಷ್ಟಪಂ ॥ ೧೧೨ ॥

ತತಃ ಪ್ರಸನ್ನಭಾಸ್ಸೂರ್ಯಃ ಪ್ರಯಯೌ ಸ್ವೇನ ವರ್ತ್ಮನಾ ।
ಜ್ಯೋತೀಂಷಿ ಚ ಯಥಾಮಾರ್ಗಂ ಪ್ರಯಯುರ್ಮುನಿಸತ್ತಮ ॥ ೧೧೩ ॥

ಜಜ್ವಾಲ ಭಗವಾಂಶ್ಚೋಚ್ಚೈಶ್ಚಾರುದೀಪ್ತಿರ್ವಿಭಾವಸುಃ ।
ಧರ್ಮೇ ಚ ಸರ್ವಭೂತಾನಾಂ ತದಾ ಮತಿರಜಾಯತ ॥ ೧೧೪ ॥

ಶ್ರಿಯಾ ಜುಷ್ಟಂ ಚ ತ್ರೈಲೋಕ್ಯಂ ಬಭೂವ ದ್ವಿಜಸತ್ತಮ ।
ಶಕ್ರಶ್ಚ ತ್ರಿದಶಶ್ರೇಷ್ಠಃ ಪುನಶ್ಶ್ರೀಮಾನಜಾಯತ ॥ ೧೧೫ ॥

೧೧೧-೧೧೬. ಅಮೃತಪಾನ ಮಾಡಿದ ದೇವತೆಗಳು ಬಲಶಾಲಿಗಳಾಗಿ ರಾಕ್ಷಸರ ಸೇನೆಯನ್ನು ಕೊಲ್ಲುತ್ತಿರಲು, ಅವರೆಲ್ಲರೂ ದಿಕ್ಕುದಿಕ್ಕಿಗೆ ಓಡಿಹೋಗಿ ಪಾತಾಳಲೋಕಕ್ಕೆ ಹೋಗಿ ಸೇರಿಕೊಂಡರು. ಅಮೇಲೆ ದೇವತೆಗಳು ಸಂತೋಷ ದಿಂದ ಕೂಡಿದವರಾಗಿ ಶಂಖ ಚಕ್ರಗದಾಧಾರಿಯಾದ ವಿಷ್ಣುವಿಗೆ ನಮಸ್ಕಾರಮಾಡಿ ಹಿಂದಿನಂತೆ ದೇವಲೋಕವನ್ನು ಆಳುತ್ತಿದ್ದರು. ಆಗ ಸೂರ್ಯನು ಪ್ರಸನ್ನವಾದ ಕಾಂತಿಯುಳ್ಳವನಾಗಿ ತನ್ನ ದಾರಿಯಲ್ಲಿ (ಅಯನಾದಿ ವ್ಯತ್ಯಾಸಗಳಿಲ್ಲದೆ) ಸಂಚರಿಸು ತ್ತಿದ್ದನು. ಜ್ಯೋತಿರ್ಮಂಡಲಗಳಾದ ಅಂಗಾರಕಾದಿ ಗ್ರಹಗಳು ವಕ್ರಾತಿಚಾರಗಳಿಲ್ಲದೆ ಸಂಚರಿಸುತ್ತಿದ್ದುವು. ಅಗ್ನಿಯು ಪ್ರಕಾಶವಾದ ತೇಜಸ್ಸಿನಿಂದ ಕೂಡಿ ಉರಿಯುತ್ತಿ ದ್ದಿತು. ಆಗ ಸಮಸ್ತ ಭೂತಗಳಿಗೂ ಧರ್ಮಬುದ್ಧಿಯುಂಟಾಗಿದ್ದಿತು. ಮೂರು ಲೋಕವೂ ಸಂಪತ್ತಿನಿಂದ ಕೂಡಿದ್ದಿತು. ದೇವಶ್ರೇಷ್ಠನಾದ ದೇವೇಂದ್ರನು ಮತ್ತೆ

ಸಿಂಹಾಸನಗತಶ್ಶಕ್ರಸ್ಸಂಪ್ರಾಪ್ಯ ತ್ರಿದಿವಂ ಪುನಃ ।
ದೇವರಾಜ್ಯೇ ಸ್ಥಿತೋ ದೇವೀಂ ತುಷ್ಟಾವಾಬ್ಜಕರಾಂ ತತಃ ॥ ೧೧೬ ॥

॥ ಇಂದ್ರ ಉವಾಚ ॥

ನಮಾಮಿ ಸರ್ವಲೋಕಾನಾಂ ಜನನೀಮಬ್ಧಿಸಂಭವಾಂ ।
ಶ್ರಿಯಮುನ್ನಿದ್ರ ಪದ್ಮಾಕ್ಷೀಂ ವಿಷ್ಣುವಕ್ಷಸ್ಥಲಸ್ಥಿತಾಂ ॥ ೧೧೭ ॥

ಪದ್ಮಾಲಯಾಂ ಪದ್ಮಕರಾಂ ಪದ್ಮಪತ್ರನಿಭೇಕ್ಷಣಾಂ ।
ವಂದೇ ಪದ್ಮಮುಖೀಂ ದೇವೀಂ ಪದ್ಮನಾಭಪ್ರಿಯಾಮಹಂ ॥ ೧೧೮ ॥

ತ್ವಂ ಸಿದ್ಧಿಸ್ತ್ವಂ ಸ್ವಧಾ ಸ್ವಾಹಾ ಸುಧಾತ್ವಂ ಲೋಕಪಾವನಿ ।
ಸಂಧ್ಯಾ ರಾತ್ರಿಃ ಪ್ರಭಾ ಭೂತಿರ್ಮೇಧಾ ಶ್ರದ್ಧಾ ಸರಸ್ವತೀ ॥ ೧೧೯ ॥

ಸಂಪದ್ಯುಕ್ತನಾದನು. ದೇವೇಂದ್ರನು ಸಿಂಹಾಸನದಲ್ಲಿ ಕುಳಿತು ದೇವರಾಜ್ಯವನ್ನು ಪಾಲಿಸುತ್ತಾ ಕಮಲಹಸ್ತಳಾದ ದೇವಿಯನ್ನು ಸ್ತೋತ್ರಮಾಡಿದನು.

೧೧೭–೧೧೮. ದೇವೇಂದ್ರನ ಸ್ತೋತ್ರವೇನೆಂದರೆ :–ಸಮಸ್ತ ಲೋಕಕ್ಕೂ ತಾಯಿಯಾದ ಕ್ಷೀರಸಮುದ್ರದಲ್ಲಿ ಹುಟ್ಟಿ ಅರಳಿದ ಕಮಲಕ್ಕೆ ಸಮಾನವಾದ ಕಣ್ಣುಗಳುಳ್ಳ ವಿಷ್ಣುವಿನ ವಕ್ಷಸ್ಥಳದಲ್ಲಿ ವಾಸಮಾಡುವ ದೇವಿಗೆ ನಮಸ್ಕಾರ ಮಾಡುವೆನು. ಕಮಲವೇ ಮನೆಯಾಗಿ, ಆ ಕಮಲವನ್ನೇ ಕೈಯ್ಯಲ್ಲಿ ಹಿಡಿದು ಅದರ ದಳದಂತೆ ಕಣ್ಣುಗಳುಳ್ಳ ಕಮಲಮುಖಿಯಾದ ಪದ್ಮನಾಭನಿಗೆ ಪ್ರೀತಿಪಾತ್ರಳಾದ ದೇವಿಗೆ ನಮಸ್ಕರಿಸುವೆನು.

೧೧೯–೧೨೦. ದೇವಿಯೇ ನೀನೇ ಅಣಿಮಾದಿ ಸಿದ್ಧಿಸ್ವರೂಪಳೂ, ಸ್ವಧಾ ದೇವಿಯೂ, ಸ್ವಾಹಾ ದೇವಿಯೂ. ಅಮೃತ ಸ್ವರೂಪಳೂ ಆಗಿ ಲೋಕಗಳನ್ನು ಪರಿಶುದ್ಧಿಗೊಳಿಸುತ್ತಿರುವೆ. ನೀನೇ ಸಂಧ್ಯಾಸ್ವರೂಪಳೂ, ರಾತ್ರಿ ಸ್ವರೂಪಳೂ, ಪ್ರಕಾಶ ಸ್ವರೂಪಳೂ, ಸಂಪದ್ರೂಪಳೂ, ಬುದ್ಧಿರೂಪಳೂ, ಶ್ರದ್ಧಾರೂಪಳೂ, ಸರಸ್ವತಿ ಸ್ವರೂಪಳೂ ಆಗಿರುವೆ. ಕರ್ಮರೂಪವಾದ ಯಜ್ಞವಿದ್ಯಾಸ್ವರೂಪಳೂ

ಯಜ್ಞವಿದ್ಯಾ ಮಹಾವಿದ್ಯಾ ಗುಹ್ಯ ವಿದ್ಯಾ ಚ ಶೋಭನೇ ।
ಆತ್ಮವಿದ್ಯಾ ಚ ದೇವಿತ್ವಂ ವಿಮುಕ್ತಿಫಲದಾಯಿನೀ　　॥ ೧೨೦ ॥

ಆನ್ವೀಕ್ಷಕೀ ತ್ರಯೀ ವಾರ್ತಾ ದಂಡನೀತಿಸ್ತ್ವಮೇವ ಚ ।
ಸೌಮ್ಯಾಸೌಮ್ಯೈರ್ಜಗದ್ರೂಪೈಸ್ತ್ವಯ್ಯೈತದ್ದೇವಿ ಪೂರಿತಂ　　॥ ೧೨೧ ॥

ಕಾ ತ್ವನ್ಯಾ ತ್ವಾಮೃತೇ ದೇವಿ ಸರ್ವಯಜ್ಞಮಯಂ ವಪುಃ ।
ಅಧ್ಯಾಸ್ತೇ ದೇವದೇವಸ್ಯ ಯೋಗಿಚಿಂತ್ಯಂ ಗದಾಭೃತಃ　　॥ ೧೨೨ ॥

ತ್ವಯಾ ದೇವಿ ಪರಿತ್ಯಕ್ತಂ ಸಕಲಂ ಭುವನತ್ರಯಂ ।
ವಿನಷ್ಟಪ್ರಾಯಮಭವತ್ತ್ವಯೇದಾನೀಂ ಸಮೇಧಿತಂ　　॥ ೧೨೩ ॥

ವಿಶ್ವರೂಪವೇ ಮುಂತಾದ ಉಪಾಸನೆಯಿಂದ ಪ್ರಾಪ್ತವಾಗುವ ಮಹಾ ವಿದ್ಯಾ ಸ್ವರೂಪಳೂ ರಹಸ್ಯವಾದ ಮಂತ್ರೋಪಾಸನಾ ರೂಪವಾದ ವಿದ್ಯಾಸ್ವರೂಪಳೂ ಪರಬ್ರಹ್ಮ ಸಾಕ್ಷಾತ್ಕಾರಕ್ಕೆ ಕಾರಣವಾದ ಉಪನಿಷತ್ತುಗಳಲ್ಲಿ ಹೇಳುವ ಆತ್ಮ ವಿದ್ಯಾ ಸ್ವರೂಪಳೂ ಆಗಿ ಮೋಕ್ಷಫಲವನ್ನು ಕೊಡುವವಳಾಗಿರುವೆ.

೧೨೧-೧೨೬. ತರ್ಕವಿದ್ಯಾಸ್ವರೂಪಳೂ, ವೇದವಿದ್ಯಾಸ್ವರೂಪಳೂ, ಶಿಲ್ಪ ಶಾಸ್ತ್ರ, ಆಯುರ್ವೇದ, ರಾಜನೀತಿ ಮುಂತಾದ ಶಾಸ್ತ್ರಸ್ವರೂಪಳೂ ಆಗಿ ನೀನೇ ಶಾಂತವಾದ ಮತ್ತು ಕ್ರೂರವಾದ ಜಗತ್ತಿನ ರೂಪದಿಂದ ಈ ಬ್ರಹ್ಮಾಂಡವನ್ನು ತುಂಬಿರುವೆ. ದೇವಿಯೇ, ನಿನ್ನನ್ನು ಬಿಟ್ಟು ಮತ್ತಾವಳು ಯಜ್ಞಸ್ವರೂಪನೂ, ದೇವದೇವನೂ, ಗದಾಧರನೂ ಆದ, ಯೋಗಿಗಳು ಧ್ಯಾನಮಾಡತಕ್ಕ ವಿಷ್ಣುವಿನ ವಕ್ಷಸ್ಥಳದಲ್ಲಿ ವಾಸಮಾಡುವಳು. ನೀನು ಬಿಟ್ಟ ಮೂರುಲೋಕವೂ ನಾಶವಾದ ಹಾಗಿದ್ದಿತು. ಈಗ ಅದು ವೃದ್ಧಿಯನ್ನು ಹೊಂದಿರುವುದು. ಮಹಾ ಮಹಿಮಳೇ ನಿನ್ನ ಕೃಪಾದೃಷ್ಟಿಯಿಂದ ಜನರಿಗೆ ಹೆಂಡತಿ, ಮಕ್ಕಳು, ಮನೆ, ಸ್ನೇಹಿತರು, ಧಾನ್ಯ, ಧನ ಮುಂತಾದ ಸಂಪತ್ತುಗಳುಂಟಾಗುವುವು. ನಿನ್ನ ದೃಷ್ಟಿಗೆ ಸಿಕ್ಕಿದ ಜನರಿಗೆ ಶರೀರಾರೋಗ್ಯವೂ, ಐಶ್ವರ್ಯವೂ, ಶತ್ರುನಾಶವೂ, ಸುಖವೂ ಸುಲಭವಾಗಿ ದೊರೆ

ದಾರಾಃ ಪುತ್ರಾಸ್ತಥಾಗಾರಸುಹೃದ್ಧಾನ್ಯಧನಾದಿಕಂ ।
ಭವತ್ಯೇತನ್ಮಹಾಭಾಗೇ ನಿತ್ಯಂ ತ್ವದ್ವೀಕ್ಷಣಾನ್ನೃಣಾಂ ॥ ೧೨೪ ॥

ಶರೀರಾರೋಗ್ಯಮೈಶ್ವರ್ಯಮರಿಪಕ್ಷಕ್ಷಯಸ್ಸುಖಂ ।
ದೇವಿ ತ್ವದ್ದೃಷ್ಟಿದೃಷ್ಟಾನಾಂ ಪುರುಷಾಣಾಂ ನ ದುರ್ಲಭಂ ॥ ೧೨೫ ॥

ತ್ವಂ ಮಾತಾ ಸರ್ವಲೋಕಾನಾಂ ದೇವದೇವೋ ಹರಿಃ ಪಿತಾ ।
ತಯೈತದ್ವಿಷ್ಣುನಾ ಚಾಂಬ ಜಗದ್ವ್ಯಾಪ್ತಂ ಚರಾಚರಂ ॥ ೧೨೬ ॥

ಮಾ ನಃ ಕೋಶಂ ತಥಾ ಗೋಷ್ಠಂ ಮಾ ಗೃಹಂ ಮಾ ಪರಿಚ್ಛದಂ ।
ಮಾ ಶರೀರಂ ಕಳತ್ರಂ ಚ ತ್ಯಜೇಥಾಸ್ಸರ್ವಪಾವನಿ ॥ ೧೨೭ ॥

ಯುವುವು. ಸಮಸ್ತ ಲೋಕಕ್ಕೂ ನೀನೇ ತಾಯಿಯು. ದೇವದೇವನಾದ ಹರಿಯೇ ತಂದೆಯು. ತಾಯೇ ನಿನ್ನಿಂದಲೂ, ವಿಷ್ಣುವಿನಿಂದಲೂ ಈ ಚರಾಚರವಾದ ಜಗತ್ತು ತುಂಬಿರುವುದು.

೧೨೭–೧೩೪. ನೀನು ತಾಯಿಯಾದುದರಿಂದ ನಮ್ಮ ಬೊಕ್ಕಸವನ್ನೂ, ಮನೆಯನ್ನೂ, ಗೋವುಗಳ ಹಟ್ಟಿಯನ್ನೂ, ಪರಿಕರಗಳನ್ನೂ, ಶರೀರವನ್ನೂ, ಪತ್ನಿಯನ್ನೂ, ಮಕ್ಕಳನ್ನೂ, ಸ್ನೇಹಿತರನ್ನೂ, ಪಶುಗಳನ್ನೂ, ಆಭರಣಗಳನ್ನೂ, ಬಿಟ್ಟುಹೋಗಬೇಡ. ನೀನು ಉದಾಸೀನಮಾಡಿ ಯಾವ ಮನುಜರನ್ನು ಬಿಟ್ಟು ಹೋಗುವೆಯೋ ಅವರಲ್ಲಿ ಸತ್ಯ, ಶುಚಿತ್ವ, ಶೀಲಾದಿ ಸದ್ಗುಣಗಳು ಇರುವುದಿಲ್ಲ. ನೀನು ಕೃಪಾದೃಷ್ಟಿಯಿಂದ ನೋಡಿದ ಜನರು ಗುಣಹೀನರಾದರೂ ಶೀಲಾದಿ ಸದ್ಗುಣಗಳಿಂದಲೂ ಧನದಿಂದಲೂ ಅಧಿಕಾರ ಶಕ್ತಿಯಿಂದಲೂ ಕೂಡಿದವರಾಗುವರು. ದೇವಿಯೇ ನೀನು ಯಾವನನ್ನು ದಯಾದೃಷ್ಟಿಯಿಂದ ನೋಡುವೆಯೋ ಅವನು ಗುಣವಂತನೂ ಶ್ಲಾಘ್ಯನೂ, ಕೃತಾರ್ಥನೂ, ಸತ್ಕುಲಪ್ರಸೂತನೂ ಬುದ್ಧಿವಂತನೂ, ಶೂರನೂ, ಪರಾಕ್ರಮಿಯೂ ಆಗುವನು. ವಿಷ್ಣುವಿನ ಪ್ರೀತಿಪಾತ್ರಳಾದ ಲೋಕಮಾತೆಯಾದ ನೀನು ಯಾವನ ವಿಷಯದಲ್ಲಿ ಉದಾಸೀನಳಾಗುವೆಯೋ

ಮಾ ಪುತ್ರಾನ್ಮಾ ಸುಹೃದ್ವರ್ಗಾನ್ಮಾ ಪಶೂನ್ ಮಾ ವಿಭೂಷಣಂ ।
ತ್ಯಜೇಥಾ ಮಮ ದೇವಸ್ಯ ವಿಷ್ಣೋರ್ವಕ್ಷಸ್ಥಲಾಲಯೇ ॥ ೧೨೮

ಸತ್ತ್ವೇನ ಶೌಚಸತ್ಯಾಭ್ಯಾಂ ತಥಾ ಶೀಲಾದಿಭಿರ್ಗುಣೈಃ ।
ತ್ಯಜ್ಯಂತೇ ತೇ ನರಾಸ್ಸದ್ಯಸ್ಸಂತ್ಯಕ್ತಾ ಯೇ ತ್ವಯಾಮಲೇ ॥ ೧೨೯ ॥

ತ್ವಯಾವಲೋಕಿತಾಸ್ಸದ್ಯಶ್ಶೀಲಾದ್ಯೈಃ ಸಕಲೈರ್ಗುಣೈಃ ।
ಧನೈಶ್ವರ್ಯೈಶ್ಚ ಯುಜ್ಯಂತೇ ಪುರುಷಾ ನಿರ್ಗುಣಾ ಅಪಿ ॥ ೧೩೦ ॥

ಸ ಶ್ಲಾಘ್ಯಸ್ಸಗುಣೀ ಧನ್ಯಸ್ಸಕುಲೀನಸ್ಸಬುದ್ಧಿಮಾನ್ ।
ಸಶೂರಸ್ಸ ಚ ವಿಕ್ರಾಂತೋ ಯಂ ತ್ವಂ ದೇವಿ ನಿರೀಕ್ಷಸೇ ॥ ೧೩೧ ॥

ಸದ್ಯೋ ವೈಗುಣ್ಯಮಾಯಾಂತಿ ಶೀಲಾದ್ಯಾಸ್ಸಕಲಾ ಗುಣಾಃ ।
ಪರಾಙ್ಮುಖೀ ಜಗದ್ಧಾತ್ರೀ ಯಸ್ಯ ತ್ವಂ ವಿಷ್ಣುವಲ್ಲಭೇ ॥ ೧೩೨ ॥

ನ ತೇ ವರ್ಣಯಿತುಂ ಶಕ್ತಾ ಗುಣಾನ್ ಜಿಹ್ವಾಪಿ ವೇಧಸಃ ।
ಪ್ರಸೀದ ದೇವಿ ಪದ್ಮಾಕ್ಷಿ ಮಾಸ್ಮಾಂಸ್ತ್ಯಾಕ್ಷೀಃ ಕದಾಚನ ॥ ೧೩೩ ॥

॥ ಶ್ರೀ ಪರಾಶರ ಉವಾಚ ॥

ಏವಂ ಶ್ರೀಸ್ಸಂಸ್ತುತಾ ಸಮ್ಯಕ್ಪ್ರಾಹಾದೃಶ್ಯಾ ಶತಕ್ರತುಂ ।
ಪಶ್ಯತಾಂ ಸರ್ವದೇವಾನಾಂ ಸರ್ವಭೂತಸ್ಥಿತಾ ದ್ವಿಜ ॥ ೧೩೪ ॥

ಆ ಕ್ಷಣವೇ ಅವನ ಶೀಲಾದಿಸದ್ಗುಣಗಳೆಲ್ಲವೂ ದುರ್ಗುಣಗಳಾಗಿ ಪರಿಣಮಿಸುವುವು. ಬ್ರಹ್ಮನ ನಾಲಗೆಯೂ ನಿನ್ನ ಗುಣಗಳನ್ನು ವರ್ಣನೆ ಮಾಡಲು ಶಕ್ತವಾಗದು. ಕಮಲಾಕ್ಷಿಯಾದ ದೇವಿಯೆ ಪ್ರಸನ್ನಳಾಗಿ ನಮ್ಮನ್ನೆಂದಿಗೂ ಬಿಟ್ಟುಹೋಗದೆ ಇರು. ಹೀಗೆಂದು ದೇವೇಂದ್ರನು ಸ್ತೋತ್ರಮಾಡುತ್ತಲು ಸರ್ವಭೂತಸ್ಥಿತಳಾದ ದೇವಿಯು

॥ ಶ್ರೀರುವಾಚ ॥

ಪರಿತುಷ್ಟಾಸ್ಮಿ ದೇವೇಶ ಸ್ತೋತ್ರೇಣಾನೇನ ತೇ ಹರೇ ।
ವರಂ ವೃಣೀಷ್ವ ಯಸ್ತ್ವಿಷ್ಟೋ ವರದಾಹಂ ತವಾಗತಾ ॥ ೧೩೫ ॥

॥ ಇಂದ್ರ ಉವಾಚ ॥

ವರದಾ ಯದಿ ಮೇ ದೇವಿ ವರಾರ್ಹೋ ಯದಿ ಚಾಪ್ಯಹಂ ।
ತ್ರೈಲೋಕ್ಯಂ ನ ತ್ವಯಾ ತ್ಯಾಜ್ಯಮೇಷ ಮೇಽಸ್ತು ವರಃ ಪರಃ ॥ ೧೩೬ ॥

ಸ್ತೋತ್ರೇಣ ಯಸ್ತ್ವಥೈತೇನ ತ್ವಾಂ ತೋಷ್ಯತ್ಯಬ್ಧಿಸಂಭವೇ ।
ಸ ತ್ವಯಾ ನ ಪರಿತ್ಯಾಜ್ಯೋ ದ್ವಿತೀಯೋಽಸ್ತು ವರೋ ಮಮ ॥ ೧೩೭ ॥

ಅದೃಶ್ಯಳಾಗಿಯೇ ದೇವೇಂದ್ರನನ್ನು ಕುರಿತು ಮಾತನಾಡಿದಳು. ಇದನ್ನು ಸಮಸ್ತ ದೇವತೆಗಳೂ ನೋಡುತ್ತಿದ್ದರು.

೧೩೫. ಲಕ್ಷ್ಮೀದೇವಿಯು "ದೇವಾಧಿಪತಿಯಾದ ದೇವೇಂದ್ರನೇ ನೀನು ಮಾಡಿದ ಸ್ತೋತ್ರದಿಂದ ಸಂತೋಷ ಹೊಂದಿದೆನು. ವರವನ್ನು ಕೊಡಬೇಕೆಂದು ನಿನ್ನೆದುರಿಗೆ ಬಂದಿರುವೆನು ನಿನಗಿಷ್ಟವಾದುದನ್ನು ಕೇಳು" ಎಂದು ಹೇಳಿದಳು.

೧೩೬–೧೩೭. ದೇವೇಂದ್ರನು 'ಶ್ರೀ ದೇವಿಯೇ ನಾನು ನೀನು ಕೊಡುವ ವರಕ್ಕೆ ತಕ್ಕವನಾಗಿದ್ದು ನೀನು ವರವನ್ನು ಕೊಡುವುದಾಗಿದ್ದರೆ, ನನ್ನಧೀನದಲ್ಲಿರುವ ಮೂರು ಲೋಕವನ್ನೂ ನೀನು ಬಿಟ್ಟು ಹೋಗಲಾಗದು. ಇದೇ ನನಗೆ ಮುಖ್ಯವಾದ ವರವು. ಈ ನಾನು ಮಾಡಿದ ಸ್ತೋತ್ರದಿಂದ ನಿನ್ನನ್ನು ಯಾವ ಮನುಜನು ಸ್ತುತಿಸಿ ಸಂತೋಷಪಡಿಸುವನೋ ಅವನನ್ನು ನೀನು ಬಿಟ್ಟುಹೋಗಬಾರದು. ಇದು ನನಗೆ ಬೇಕಾದ ಎರಡನೆ ವರವು' ಎಂದನು

॥ ಶ್ರೀರುವಾಚ ॥

ತ್ರೈಲೋಕ್ಯಂ ತ್ರಿದಶಶ್ರೇಷ್ಠ ನ ಸಂತ್ಯಕ್ಷ್ಯಾಮಿ ವಾಸವ ।
ದತ್ತೋ ವರೋ ಮಯಾಯಂ ತೇ ಸ್ತೋತ್ರಾರಾಧನತುಷ್ಟಯಾ ॥ ೧೩೮ ॥

ಯಶ್ಚ ಸಾಯಂ ತಥಾ ಪ್ರಾತಃಸ್ತೋತ್ರೇಣಾನೇನ ಮಾನವಃ ।
ಮಾಂ ಕೋಷ್ಯತಿ ನ ತಸ್ಯಾಹಂ ಭವಿಷ್ಯಾಮಿ ಪರಾಙ್ಮುಖೀ ॥ ೧೩೯ ॥

॥ ಶ್ರೀ ಪರಾಶರ ಉವಾಚ ॥

ಏವಂ ದದೌ ವರೌ ದೇವೀ ದೇವರಾಜಾಯ ವೈ ಪುರಾ ।
ಮೈತ್ರೇಯ ಶ್ರೀರ್ಮಹಾಭಾಗ ಸ್ತೋತ್ರಾರಾಧನತೋಷಿತಾ ॥ ೧೪೦ ॥

ಭೃಗೋಃ ಖ್ಯಾತ್ಯಾಂ ಸಮುತ್ಪನ್ನಾ ಶ್ರೀಃ ಪೂರ್ವಮುದಧೇಃ ಪುನಃ ।
ದೇವದಾನವಯತ್ನೇನ ಪ್ರಸೂತಾಮೃತಮಂಥನೇ ॥ ೧೪೧ ॥

೧೩೮-೧೩೯. ಶ್ರೀದೇವಿಯು ' ದೇವಶ್ರೇಷ್ಠನೇ ನಿನ್ನ ಸ್ತೋತ್ರಕ್ಕೆ ಮೆಚ್ಚಿ ನಾನು ಮೂರು ಲೋಕವನ್ನೂ ಬಿಟ್ಟುಹೋಗುವುದಿಲ್ಲವೆಂಬ ವರವನ್ನು ಕೊಟ್ಟಿರುವೆನು. ಈ ಸ್ತೋತ್ರದಿಂದ ಯಾವ ಮನುಜನು ಸಾಯಂಕಾಲದಲ್ಲಿಯೂ, ಪ್ರಾತಃ ಕಾಲದಲ್ಲಿಯೂ ನನ್ನನ್ನು ಸ್ತೋತ್ರಮಾಡುವನೋ ಅವನಿಗೆ ನಾನು ಅನುಗ್ರಹವನ್ನು ಮಾಡುವೆನು ' ಎಂದು ಹೇಳಿದಳು.

೧೪೦-೧೪೩. ಪರಾಶರನು, ಮೈತ್ರೇಯನೇ ಹಿಂದೆ ದೇವರಾಜನಾದ ದೇವೇಂದ್ರನಿಗೆ ಶ್ರೀದೇವಿಯು ಅವನು ಮಾಡಿದ ಸ್ತೋತ್ರಕ್ಕೆ ಮೆಚ್ಚಿ ಎರಡು ವರಗಳನ್ನು ಕೊಟ್ಟಳು ಹಿಂದೆ ಭೃಗುವಿನ ಹೆಂಡತಿಯಾದ ಖ್ಯಾತಿಯ ಮಗಳಾಗಿ ಹುಟ್ಟಿದ ಶ್ರೀದೇವಿಯೇ ಪುನಃ ದೇವದಾನವರ ಸಮುದ್ರಮಥನ ರೂಪವಾದ ಪ್ರಯತ್ನದಿಂದ ಕ್ಷೀರಸಮುದ್ರದಲ್ಲಿ ಹುಟ್ಟಿದಳು. ಹೀಗೆಯೇ ಲೋಕಗಳಿಗೆಲ್ಲಾ

ಏವಂ ಯದಾ ಜಗತ್ಸ್ವಾಮೀ ದೇವದೇವೋ ಜನಾರ್ದನಃ ।
ಅವತಾರಂ ಕರೋತ್ಯೇಷಾ ತದಾ ಶ್ರೀಸ್ತತ್ಸಹಾಯಿನೀ ॥ ೧೪೨ ॥

ಪುನಶ್ಚ ಪದ್ಮಾ ಸಂಭೂತಾ ಹ್ಯಾದಿತ್ಯೋಽಭೂದ್ಯದಾ ಹರಿಃ ।
ಯದಾ ಚ ಭಾರ್ಗವೋ ರಾಮಸ್ತದಾ ಭೂದ್ಧರಣೀ ತ್ವಿಯಂ ॥ ೧೪೩ ॥

ರಾಘವತ್ವೇಽಭವತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ ।
ಅನ್ಯೇಷು ಚಾವತಾರೇಷು ವಿಷ್ಣೋರೇಷಾನಪಾಯಿನೀ ॥ ೧೪೪ ॥

ದೇವತ್ವೇ ದೇವದೇಹೇಯಂ ಮನುಷ್ಯತ್ವೇ ಚ ಮಾನುಷೀ ।
ವಿಷ್ಣೋರ್ದೇಹಾನುರೂಪಾಂ ವೈ ಕರೋತ್ಯೇಷಾತ್ಮನಸ್ತನುಂ ॥ ೧೪೫ ॥

ಯಸ್ತ್ವೇತಚ್ಛೃಣುಯಾಜ್ಜನ್ಮ ಲಕ್ಷ್ಮ್ಯಾ ಯಶ್ಚ ಪಠೇನ್ನರಃ ।
ಶ್ರಿಯೋ ನ ವಿಚ್ಯುತಿಸ್ತಸ್ಯ ಗೃಹೇ ಯಾವತ್ಕುಲತ್ರಯಂ ॥ ೧೪೬ ॥

ಸ್ವಾಮಿಯಾದ ವಿಷ್ಣುವು ಯಾವಾಗ ಅವತಾರ ಮಾಡುವನೋ ಆಗ ಶ್ರೀದೇವಿಯು ಅವನಿಗೆ ಸಹಾಯಕಳಾಗಿ ಹುಟ್ಟುವಳು.

೧೪೩–೧೪೫. ಹರಿಯು ವಾಮನನಾದಾಗ ಲಕ್ಷ್ಮಿಯು ಪದ್ಮಾ ಎಂಬ ಹೆಸರಿನಿಂದ ಹುಟ್ಟಿದಳು. ಭೃಗುವಂಶದಲ್ಲಿ ರಾಮನಾಗಿ ಹುಟ್ಟಿದಾಗ ಭೂದೇವಿಯಾಗಿ ಹುಟ್ಟಿದಳು. ರಾಮನಾಗಿ ಅವತಾರ ಮಾಡಿದಾಗ ರಾವಣಾದಿಗಳ ಸಂಹಾರಕ್ಕೆ ಸಹಾಯಕಳಾಗಿ ಸೀತೆಯಾಗಿ ಹುಟ್ಟಿದಳು. ಕೃಷ್ಣಾವತಾರಮಾಡಿದಾಗ ರುಕ್ಮಿಣಿಯಾಗಿ ಹುಟ್ಟಿದಳು. ಈ ಶ್ರೀದೇವಿಯು ಹರಿಯು ಮಾಡಿದ ಬೇರೆ ಅವತಾರಗಳಲ್ಲಿಯೂ ವಿಷ್ಣುವನ್ನು ಅಗಲದೆ ಇದ್ದಳು ವಿಷ್ಣುವು ದೇವ ಶರೀರಧಾರಿಯಾಗಿದ್ದರೆ ಇವಳೂ ದೇವಶರೀರವನ್ನೂ ಮನುಷ್ಯ ಶರೀರಧಾರಿಯಾಗಿದ್ದರೆ ಮನುಷ್ಯ ಶರೀರವನ್ನೂ ಧರಿಸಿ ವಿಷ್ಣುವಿಗೆ ಅನುರೂಪಳಾಗಿದ್ದಳು.

೧೪೬–೧೪೭. ಈ ಶ್ರೀದೇವಿಯ ಅವತಾರ ವಿಚಾರವನ್ನು ಯಾರು ಕೇಳುವರೋ ಅಥವಾ ಈ ಅಧ್ಯಾಯವನ್ನು ಓದುವರೋ ಅವರ ಮನೆಯಲ್ಲಿ ಮೂರು

ಪಠ್ಯತೇ ಯೇಷು ಚೈವೈಷಾ ಗೃಹೇಷು ಶ್ರೀಕಥಾ ಮುನೇ ।
ಅಲಕ್ಷ್ಮೀಃ ಕಲಹಾಧಾರಾ ನ ತೇಷ್ವಾಸ್ತೇ ಕದಾಚನ ॥ ೧೪೭ ॥

ಏತತ್ತೇ ಕಥಿತಂ ಸರ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಕ್ಷೀರಾಬ್ಧೌ ಶ್ರೀರ್ಯಥಾ ಜಾತಾ ಪೂರ್ವಂ ಭೃಗುಸುತಾ ಸತೀ ॥ ೧೪೮ ॥

ಇತಿ ಸಕಲವಿಭೂತ್ಯವಾಪ್ತಿಹೇತು-
ಸ್ತುತಿರಿಯಮಿಂದ್ರಮುಖೋದ್ಗತಾ ಹಿ ಲಕ್ಷ್ಮ್ಯಾಃ ।
ಅನುದಿನಮಿಹ ಪಠ್ಯತೇ ನೃಭಿರ್ಯೈ-
ರ್ವಸತಿ ನ ತೇಷು ಕದಾಚಿದಪ್ಯಲಕ್ಷ್ಮೀಃ ॥ ೧೪೯ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ನವಮೋಽಧ್ಯಾಯಃ

ತಲೆಯುವರೆಗೆ ಲಕ್ಷ್ಮಿಯು ಅಗಲದೆ ಇರುವಳು. ಯಾರ ಮನೆಯಲ್ಲಿ ಈ ಲಕ್ಷ್ಮೀ ದೇವಿಯ ಕಥೆಯನ್ನು ಓದುವರೋ ಅವರ ಮನೆಯಲ್ಲಿ ಜಗಳಕ್ಕೆ ಕಾರಣವಾದ ಅಲಕ್ಷ್ಮಿಯು ಇರುವುದಿಲ್ಲ.

೧೪೮-೧೪೯. ಮೈತ್ರೇಯನೇ, ಭೃಗು ಪುತ್ರಿಯಾದ ಲಕ್ಷ್ಮಿಯು ಕ್ಷೀರ ಸಮುದ್ರದಲ್ಲಿ ಹೇಗೆ ಹುಟ್ಟಿದಳೆಂದು ನೀನು ಕೇಳಿದ ಪ್ರಶ್ನೆಗೆ ಈ ಕಥೆಯನ್ನು ನಿನಗೆ ಹೇಳಿರುವೆನು. ಸಕಲ ಸಂಪತ್ತುಗಳಿಗೂ ಕಾರಣವಾದ ದೇವೇಂದ್ರನ ಮುಖ ದಿಂದ ಹೊರಟ ಈ ಲಕ್ಷ್ಮೀಸ್ತೋತ್ರವನ್ನು ಪ್ರತಿದಿನವೂ ಯಾವ ಮನುಜರು ಪಠನ ಮಾಡುವರೋ ಅವರ ಮನೆಯಲ್ಲಿ ಅಲಕ್ಷ್ಮಿಯು ಎಂದಿಗೂ ಇರುವುದಿಲ್ಲ.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದ ಪ್ರಥಮಾಂಶದಲ್ಲಿ ಒಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ದಶಮೋಽಧ್ಯಾಯಃ

॥ ಮೈತ್ರೇಯ ಉವಾಚ ॥

ಕಥಿತಂ ಮೇ ತ್ವಯಾ ಸರ್ವಂ ಯತ್ಪೃಷ್ಟೋಽಸಿ ಮಹಾಮುನೇ ।
ಭೃಗುಸರ್ಗಾತ್ಪ್ರಭೃತ್ಯೇಷ ಸರ್ಗೋ ಮೇ ಕಥ್ಯತಾಂ ಪುನಃ ॥ ೧ ॥

॥ ಶ್ರೀ ಪರಾಶರ ಉವಾಚ ॥

ಭೃಗೋಃ ಖ್ಯಾತ್ಯಾಂ ಸಮುತ್ಪನ್ನಾ ಲಕ್ಷ್ಮೀರ್ವಿಷ್ಣುಪರಿಗ್ರಹಃ ।
ತಥಾ ಧಾತೃವಿಧಾತಾರೌ ಖ್ಯಾತ್ಯಾಂ ಜಾತೌ ಸುತೌ ಭೃಗೋಃ ॥ ೨ ॥

ಆಯತಿರ್ನಿಯತಿಶ್ಚೈವ ಮೇರೋಃ ಕನ್ಯೇ ಮಹಾತ್ಮನಃ ।
ಭಾರ್ಯೇ ಧಾತೃವಿಧಾತ್ರೋಸ್ತೇ ತಯೋರ್ಜಾತೌ ಸುತಾವುಭೌ ॥ ೩ ॥

ಹತ್ತನೆಯ ಅಧ್ಯಾಯವು

೧. ಮೈತ್ರೇಯನು, ಮಹಾಮುನಿಯಾದ ಪರಾಶರನೇ, ನನ್ನ ಪ್ರಶ್ನೆಗೆ ಉತ್ತರವಾಗಿ ಎಲ್ಲವನ್ನೂ ಹೇಳಿರುವೆ. ಆದರೆ ಭೃಗುಸೃಷ್ಟಿ ಮೊದಲಾಗಿ ಈ ಸೃಷ್ಟಿ ಕ್ರಮವನ್ನು ಪುನಃ ನನಗೆ ಹೇಳಬೇಕು ಎಂದು ಪ್ರಶ್ನೆಮಾಡಿದನು.

೨-೫. ಪರಾಶರನು ಹೇಳುವನು:— ಮೈತ್ರೇಯನೇ, ಭೃಗುವಿನ ಹೆಂಡತಿಯಾದ ಖ್ಯಾತಿಯಲ್ಲಿ ಹುಟ್ಟಿದ ಲಕ್ಷ್ಮಿಯು ವಿಷ್ಣುಶಕ್ತಿಯಾದಳು. ಆ ಖ್ಯಾತಿಯಲ್ಲಿ ಧಾತೃ ವಿಧಾತೃ ಎಂಬಿಬ್ಬರು ಮಕ್ಕಳು ಹುಟ್ಟಿದರು. ಅವರಿಗೆ ಮೇರುಪುತ್ರಿಯರಾದ

ಪ್ರಾಣಶ್ಚೈವ ಮೃಕಂಡುಶ್ಚ ಮಾರ್ಕಂಡೇಯೋ ಮೃಕಂಡುತಃ ।
ತತೋ ವೇದಶಿರಾ ಜಜ್ಞೇ ಪ್ರಾಣಸ್ಯಾಪಿ ಸುತಂ ಶೃಣು ॥ ೪ ॥

ಪ್ರಾಣಸ್ಯ ದ್ಯುತಿಮಾನ್ ಪುತ್ರ ಅಜಾವಾಂಶ್ಚ ತತೋಽಭವತ್ ।
ತತೋ ವಂಶೋ ಮಹಾಭಾಗ ವಿಸ್ತರಂ ಭಾರ್ಗವೋ ಗತಃ ॥ ೫ ॥

ಪತ್ನೀ ಮರೀಚೇಸ್ಸಂಭೂತಿಃ ಪೌರ್ಣಮಾಸಮಸೂಯತ ।
ವಿರಜಾಃ ಪರ್ವತಶ್ಚೈವ ತಸ್ಯ ಪುತ್ರೌ ಮಹಾತ್ಮನಃ ।
ವಂಶಸಂಕೀರ್ತನೇ ಪುತ್ರಾನ್ ವದಿಷ್ಯೇಽಹಂ ತತೋ ದ್ವಿಜ ॥ ೬ ॥

ಆಯತಿ ನಿಯತಿ ಎಂಬವರು ಪತ್ನಿಯರಾದರು. ಅವರಿಬ್ಬರಿಗೂ ಪ್ರಾಣ ಮೃಕಂಡು ಎಂಬಿಬ್ಬರು ಮಕ್ಕಳಾದರು. ಮೃಕಂಡುವಿಗೆ ಮಾರ್ಕಂಡೇಯನೂ ವೇದಶಿರನೆಂಬವನೂ ಮಕ್ಕಳಾದರು. ಪ್ರಾಣನಿಗೆ ದ್ಯುತಿಮಂತನೆಂಬವನೂ, ಅಜಾವಂತನೆಂಬವನೂ ಮಕ್ಕಳಾದರು. ಹೀಗೆ ಭಾರ್ಗವನ ವಂಶವು ವಿಸ್ತಾರವಾಗಿ ಬೆಳೆಯಿತು. (ದಕ್ಷ-ಕನ್ಯೆಯರಾದ ಇಪ್ಪತ್ತನಾಲ್ಕು ಕನ್ಯೆಯರಲ್ಲಿ ಧರ್ಮನ ಪತ್ನಿಯರಾದ ಹದಿಮೂರು ಕನ್ಯೆಯರ ವಂಶವನ್ನು ಹಿಂದೆ ಹೇಳಿಯಾಯಿತು. ಆಮೇಲೆ ಭೃಗು ಪತ್ನಿಯಾದ ಖ್ಯಾತಿಯ ಸಂತತಿಯನ್ನು ಹೇಳಿಯಾಯಿತು. ಶಿವನ ಪತ್ನಿಯಾದ ಸತೀದೇವಿಯು ದಕ್ಷನ ಕೋಪದಿಂದ ಕನ್ಯೆಯಾಗಿದ್ದಾಗಲೇ ಶರೀರತ್ಯಾಗ ಮಾಡಿದುದರಿಂದ ಆಕೆಯ ವಂಶವು ಬೆಳೆಯಲಿಲ್ಲ. ಕ್ರಮಪ್ರಾಪ್ತವಾದ ಮರೀಚಿ ಪತ್ನಿಯಾದ ಸಂಭೂತಿಯ ವಂಶವನ್ನೂ ಹೇಳಲಾಗುವುದು.)

೬. ಮರೀಚಿಯ ಪತ್ನಿಯಾದ ಸಂಭೂತಿಯು ಪೌರ್ಣಮಾಸನೆಂಬ ಮಗನನ್ನು ಹೆತ್ತಳು. ವಿರಜೆಯೂ ಪರ್ವತನೂ ಆ ಪೌರ್ಣಮಾಸನ ಮಕ್ಕಳು. ಮರೀಚಿಗೆ ಕಶ್ಯಪನು ಮತ್ತೊಬ್ಬ ಮಗನು. ಅವನ ವಂಶವನ್ನು ಇದೇ ಪ್ರಥಮಾಂಶದಲ್ಲಿ ಮುಂದೆ ವಿವರಿಸಲಾಗುವುದು.

ಸ್ಮೃತಿಶ್ಚಾಂಗಿರಸಃ ಪತ್ನೀ ಪ್ರಸೂತಾ ಕನ್ಯಕಾಸ್ತಥಾ ।
ಸಿನೀವಾಲೀ ಕುಹೂಶ್ಚೈವ ರಾಕಾ ಚಾನುಮತಿಸ್ತಥಾ ॥ ೭ ॥

ಅನಸೂಯಾ ತಥೈವಾತ್ರೇರ್ಜಜ್ಞೇ ಪುತ್ರಾನಕಲ್ಮಷಾನ್ ।
ಸೋಮಂ ದುರ್ವಾಸಸಂ ಚೈವ ದತ್ತಾತ್ರೇಯಂ ಚ ಯೋಗಿನಂ ॥ ೮ ॥

ಪ್ರೀತ್ಯಾಂ ಪುಲಸ್ತ್ಯಭಾರ್ಯಾಯಾಂ ದಂಭೋಲಿ
ಸ್ತತ್ಸುತೋಽಭವತ್ ।

ಪೂರ್ವಜನ್ಮನಿ ಸೋಽಗಸ್ತ್ಯಃ ಸ್ಮೃತಸ್ಸ್ವಾಯಂಭುವೇಽಂತರೇ ॥ ೯ ॥

ಕರ್ದಮಶ್ಚೋರ್ವರೀವಾಂಶ್ಚ ಸಹಿಷ್ಣುಶ್ಚ ಸುತತ್ರಯಂ ।
ಕ್ಷಮಾ ತು ಸುಷುವೇ ಭಾರ್ಯಾ ಪುಲಹಸ್ಯ ಪ್ರಜಾಪತೇಃ । ॥ ೧೦ ॥

೭-೮. ಸ್ಮೃತಿಯೆಂಬುವಳು ಅಂಗಿರಸ ಮುನಿಯ ಪತ್ನಿಯು. ಇವರಿಬ್ಬರಿಗೂ ಸಿನೀವಾಲಿ (ಚತುರ್ದಶೀಯುಕ್ತಾಮಾವಾಸ್ಯಾ) ಕುಹೂ (ಪ್ರತಿಪದ್ಯುತಾಮಾವಾಸ್ಯ)ರಾಕಾ(ಚತುರ್ದಶೀಯುತ ಪೂರ್ಣಿಮಾ)ಅನುಮತಿ(ಪ್ರತಿಪದ್ಯುತಪೂರ್ಣಿಮಾ) ಎಂಬ ನಾಲ್ವರು ಕನ್ಯೆಯರು ಮಕ್ಕಳಾದರು. ಅತ್ರಿಪತ್ನಿಯಾದ ಅನಸೂಯೆಯಲ್ಲಿ ಚಂದ್ರ, ದುರ್ವಾಸ, ದತ್ತಾತ್ರೇಯ ಎಂಬ ಮಕ್ಕಳಾದರು

೯-೧೦. ಪುಲಸ್ತ್ಯರ ಪತ್ನಿಯಾದ ಪ್ರೀತಿಯಲ್ಲಿ ದಂಭೋಲಿಯೆಂಬ ಮಗನಾದನು. ಸ್ವಾಯಂಭುವ ಮನ್ವಂತರದಲ್ಲಿ ಅಂದರೆ ಹಿಂದಿನ ಜನ್ಮದಲ್ಲಿ ದಂಭೋಲಿಯಾಗಿದ್ದವನು ಈ ಜನ್ಮದಲ್ಲಿ ಈ ವೈವಸ್ವತ ಮನ್ವಂತರದಲ್ಲಿ ಅಗಸ್ತ್ಯನಾಗಿರುವನು. ಪುಲಹನೆಂಬ ಪ್ರಜಾಪತಿಯ ಪತ್ನಿಯಾದ ಕ್ಷಮೆಯೆಂಬುವಳು ಕರ್ದಮ, ವರೀವಂತ ಸಹಿಷ್ಣು ಎಂಬ ಮೂವರು ಮಕ್ಕಳನ್ನು ಪಡೆದಳು.

ಕ್ರತೋಶ್ಚ ಸಂನತಿರ್ಭಾರ್ಯಾ ವಾಲಖಿಲ್ಯಾನಸೂಯತ ।
ಷಷ್ಟಿಃ ಪುತ್ರಸಹಸ್ರಾಣಿ ಋಷೀಣಾಮೂರ್ಧ್ವರೇತಸಾಂ ।
ಅಂಗುಷ್ಠಪರ್ವಮಾತ್ರಾಣಾಂ ಜ್ವಲದ್ಭಾಸ್ಕರತೇಜಸಾಂ ॥ ೧೧ ॥

ಊರ್ಜಾಯಾಂ ಚ ವಸಿಷ್ಠಸ್ಯ ಸಪ್ತಾಜಾಯಂತ ವೈ ಸುತಾಃ । ॥ ೧೨ ॥

ರಜೋ ಗೋತ್ರೋರ್ಧ್ವಬಾಹೂ ಚ ಸವನಶ್ಚಾನಘಸ್ತಥಾ ।
ಸುತಪಾಶ್ಶುಕ್ರ ಇತ್ಯೇತೇ ಸರ್ವೇ ಸಪ್ತರ್ಷಯೋಽಮಲಾಃ ॥ ೧೩ ॥

ಯೋಽಸಾವಗ್ನ್ಯಭಿಮಾನೀ ಸ್ಯಾತ್ ಬ್ರಹ್ಮಣಸ್ತನಯೋಽಗ್ರಜಃ ।
ತಸ್ಮಾತ್ಸ್ವಾಹಾ ಸುತಾನ್ ಲೇಭೇ ತ್ರೀನುದಾರೌಜಸೋ ದ್ವಿಜ ॥ ೧೪ ॥

---

೧೧. ಕ್ರತುವಿನ ಪತ್ನಿಯಾದ ಸಂನತಿಯು ವಾಲಖಿಲ್ಯರೆಂಬ ಅರವತ್ತು ಸಾವಿರ ಮಕ್ಕಳನ್ನು ಹೆತ್ತಳು. ಅವರೆಲ್ಲರೂ ಕೈಯ ಹೆಬ್ಬೆರಳು ಗಾತ್ರದವರಾಗಿಯೂ ಊರ್ಧ್ವರೇತಸ್ಸುಗಳಾದ ಋಷಿಗಳಾಗಿಯೂ ಸೂರ್ಯನಂತೆ ಪ್ರಕಾಶವಾದ ತೇಜಸ್ಸುಳ್ಳವರಾಗಿಯೂ ಇದ್ದರು.

೧೨–೧೩. ವಸಿಷ್ಠನ ಪತ್ನಿಯಾದ ಊರ್ಜೆಯಲ್ಲಿ ರಜ, ಗೋತ್ರ, ಊರ್ಧ್ವಬಾಹು, ಸವನ, ಅನಘ ಸುತಪ, ಶುಕ್ರ ಎಂಬ ಪರಿಶುದ್ಧರಾದ ಸಪ್ತರ್ಷಿಗಳು ಮಕ್ಕಳಾಗಿ ಹುಟ್ಟಿದರು.

೧೪–೧೭. ‘ಮುಖಾದಗ್ನಿರಜಾಯತ’ ಎಂಬ ಶ್ರುತಿಯಂತೆ ಬೆಂಕಿಗೆ ಅಭಿಮಾನಿ ದೇವತೆಯಾದ ಅಗ್ನಿಯು, ಬ್ರಹ್ಮನ ಹಿರಿಯಮಗನು. ಆ ಅಗ್ನಿಯಿಂದ ಸ್ವಾಹಾ ದೇವಿಯಲ್ಲಿ ವಿಶೇಷವಾದ ಕಾಂತಿಯಿಂದ ಕೂಡಿದ ಪಾವಕ, ಪವಮಾನ, ಶುಚಿ ಎಂಬ ಮೂವರು ಮಕ್ಕಳು ಹುಟ್ಟಿದರು. ಮಥನದಿಂದ ಹುಟ್ಟಿದ ಅಗ್ನಿಯನ್ನು ಪವಮಾನನೆಂದೂ, ವಿದ್ಯುತ್ತಿನ ಅಗ್ನಿಯನ್ನು ಪಾವಕನೆಂದೂ, ಸೂರ್ಯನ ತಾಪದಿಂದ ಉಂಟಾದ ಅಗ್ನಿಯನ್ನು ಶುಚಿಯೆಂದೂ ಹೇಳುವರು. ಈ ಮೂವರಲ್ಲಿ ಪ್ರತಿಯೊಬ್ಬರಿಗೂ

ಪಾವಕಂ ಪವಮಾನಂ ಚ ಶುಚಿಂ ಚಾಪಿ ಜಲಾಶಿನಂ ॥ ೧೫ ॥

ತೇಷಾಂ ತು ಸಂತತಾವನ್ಯೇ ಚತ್ವಾರಿಂಶಚ್ಚ ಪಂಚ ಚ ।
ಕಥ್ಯಂತೇ ವಹ್ನಯಶ್ಚೈತೇ ಪಿತಾಪುತ್ರತ್ರಯಂ ಚ ಯತ್ ॥ ೧೬ ॥

ಏವಮೇಕೋನಪಂಚಾಶದ್ವಹ್ನಯಃ ಪರಿಕೀರ್ತಿತಾಃ ॥ ೧೭ ॥

ಪಿತರೋ ಬ್ರಹ್ಮಣಾ ಸೃಷ್ಟಾ ವ್ಯಾಖ್ಯಾತಾ ಯೇ ಮಯಾ ತವ ।
ಅಗ್ನಿಷ್ವಾತ್ತಾ ಬರ್ಹಿಷದೋಽನಗ್ನಯಸ್ಸಾಗ್ನಯಶ್ಚ ಯೇ ॥
ತೇಭ್ಯಸ್ಸ್ವಧಾ ಸುತೇ ಜಜ್ಞೇ ಮೇನಾಂ ವೈತರಣೀಂ ತಥಾ ॥ ೧೮ ॥

ತೇ ಉಭೇ ಬ್ರಹ್ಮವಾದಿನ್ಯೌ ಯೋಗಿನ್ಯೌ ಚಾಪ್ಯುಭೇ ದ್ವಿಜ ।
ಉತ್ತಮಜ್ಞಾನಸಂಪನ್ನೇ ಸರ್ವೈಸ್ಸಮುದಿತೈರ್ಗುಣೈಃ ॥ ೧೯ ॥

ಹದಿನೈದು ಜನ ಮಕ್ಕಳು. ಒಟ್ಟು ನಲವತ್ತೈದು ಜನರು. ತಂದೆಯೊಬ್ಬ, ಮೂವರು ಮಕ್ಕಳೂ ಸೇರಿ ನಲವತ್ತೊಂಭತ್ತು ಜನರನ್ನೂ ಅಗ್ನಿಗಳೆಂದು ಹೇಳುವರು.

೧೮-೧೯. ಮೈತ್ರೇಯನೇ, ಬ್ರಹ್ಮನು ಪಿತೃದೇವತೆಗಳನ್ನು ಸೃಷ್ಟಿಸಿದನೆಂದು ನಾನು ಹೇಳಲಿಲ್ಲವೇ, ಯಾಗಮಾಡದ ಗೃಹಸ್ಥರು ಅಗ್ನಿಷ್ವಾತ್ತಾ ಎಂಬ ಪಿತೃದೇವತೆಗಳಾಗಿಯೂ, ಯಾಗಮಾಡಿದವರು ಬರ್ಹಿಷದರೆಂಬ ಪಿತೃದೇವತೆಗಳಾಗಿಯೂ ಆಗುವರು. ಆ ಪಿತೃದೇವತೆಗಳಿಂದ ಸ್ವಧಾದೇವಿಯು ಮೇನಾ. ವೈತರಣಿ ಎಂಬ ಇಬ್ಬರು ಮಕ್ಕಳನ್ನು ಪಡೆದಳು. ಅವರಿಬ್ಬರೂ ಬ್ರಹ್ಮವಾದಿಗಳಾಗಿಯೋಗಿನಿಗಳೆಂದೆನಿಸಿಕೊಂಡು ಸಮಸ್ತ ಸದ್ಗುಣಗಳಿಂದ ಕೂಡಿ ಉತ್ತಮವಾದ ಜ್ಞಾನ ಸಂಪತ್ತುಳ್ಳವರೆಂದೆನಿಸಿಕೊಂಡಿರುವರು.

ಇತ್ಯೇಷಾ ದಕ್ಷಕನ್ಯಾನಾಂ ಕಥಿತಾಪತ್ಯ ಸಂತತಿಃ ।
ಶ್ರದ್ಧಾವಾನ್ ಸಂಸ್ಮರನ್ನೇತಾಂ ನಾನಪತ್ಯೋಽಭಿಜಾಯತೇ ॥ ೨೦ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ದಶಮೋಽಧ್ಯಾಯಃ

---

೨೦. ಮೈತ್ರೇಯನೇ, ದಕ್ಷಪುತ್ರಿಯರ ಸಂತತಿಯನ್ನು ನಿನಗೆ ಹೇಳಿರುವೆನು. ಭಕ್ತಿಯಿಂದ ನಂಬಿ ಇದನ್ನು ಸ್ಮರಿಸುತ್ತಿದ್ದವರಿಗೆ ಅನಪತ್ಯದೋಷವಿರುವುದಿಲ್ಲ. ಅಂದರೆ ಶೀಘ್ರವಾಗಿ ಪುತ್ರೋತ್ಪತ್ತಿಯಾಗುವುದೆಂದು ಭಾವವು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಏಕಾದಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಪ್ರಿಯವ್ರತೋತ್ತಾನಪಾದೌ ಮನೋಸ್ಸ್ವಾಯಂಭುವಸ್ಯ ತು ।
ದ್ವೌ ಪುತ್ರೌ ಸುಮಹಾವೀರ್ಯೌ ಧರ್ಮಜ್ಞೌ ಕಥಿತೌ ತವ ॥ ೧ ॥

ತಯೋರುತ್ತಾನಪಾದಸ್ಯ ಸುರುಚ್ಯಾಮುತ್ತಮಸ್ಸುತಃ ।
ಅಭೀಷ್ಟಾಯಾಮಭೂದ್ಬ್ರಹ್ಮನ್ ಪಿತುರತ್ಯಂತವಲ್ಲಭಃ ॥ ೨ ॥

ಹನ್ನೊಂದನೆಯ ಅಧ್ಯಾಯವು

೧–೩. ಪರಾಶರನು ಹೇಳುವನು. ಮೈತ್ರೇಯನೇ ಸ್ವಾಯಂಭುವ ಮನುವಿಗೆ ಪ್ರಿಯವ್ರತ, ಉತ್ತಾನಪಾದ ಎಂಬಿಬ್ಬರು ಮಕ್ಕಳಿದ್ದರು. ಅವರು ಧರ್ಮವನ್ನರಿತವರಾಗಿ ಮಹಾ ಶೂರರಾಗಿದ್ದರು. ಅವರಿಬ್ಬರಲ್ಲಿ ಉತ್ತಾನಪಾದನೆಂಬುವನಿಗೆ ಪ್ರೀತಿಪಾತ್ರಳಾದ ಸುರುಚಿಯೆಂಬ ಹೆಂಡತಿಯಲ್ಲಿ ಉತ್ತಮನೆಂಬ ಅತ್ಯಂತ ಪ್ರೀತಿಪಾತ್ರನಾದ ಮಗನು ಇದ್ದನು. ಆ ರಾಜನಿಗೆ ಪಟ್ಟದ ಹೆಂಡತಿಯಾದ ಸುನೀತಿಗೆ ಧ್ರುವನೆಂಬ ಮಗನಿದ್ದನು. ಪಟ್ಟಮಹಿಷಿಯಲ್ಲಿ ರಾಜನಿಗೆ ಅಷ್ಟು ಪ್ರೀತಿ ಇರಲಿಲ್ಲ.

ಸುನೀತಿರ್ನಾಮ ಯಾ ರಾಜ್ಞಸ್ತಸ್ಯಾಸೀನ್ಮಹಿಷೀ ದ್ವಿಜ ।
ಸ ನಾತಿಪ್ರೀತಿಮಾಂಸ್ತಸ್ಯಾಂ ತಸ್ಯಾಶ್ಚಾಸೀದ್ಧ್ರುವಸ್ಸುತಃ ॥ ೩ ॥

ರಾಜಾಸನಸ್ಥಿತಸ್ಯಾಂಕಂ ಪಿತುರ್ಭ್ರಾತರಮಾಶ್ರಿತಂ ।
ದೃಷ್ಟ್ವೋತ್ತಮಂ ಧ್ರುವಶ್ಚಕ್ರೇ ತಮಾರೋಢುಂ ಮನೋರಥಂ ॥ ೪ ॥

ಪ್ರತ್ಯಕ್ಷಂ ಭೂಪತಿಸ್ತಸ್ಯಾಸ್ಸುರುಚ್ಯಾ ನಾಭ್ಯನಂದತ ।
ಪ್ರಣಯೇನಾಗತಂ ಪುತ್ರಮುತ್ಸಂಗಾರೋಹಣೋತ್ಸುಕಂ ॥ ೫ ॥

ಸಪತ್ನೀತನಯಂ ದೃಷ್ಟ್ವಾ ತಮಂಕಾರೋಹಣೋತ್ಸುಕಂ ।
ಸ್ವಪುತ್ರಂ ಚ ತಥಾರೂಢಂ ಸುರುಚಿರ್ವಾಕ್ಯಮಬ್ರವೀತ್ ॥ ೬ ॥

ಕ್ರಿಯತೇ ಕಿಂ ವೃಥಾ ವತ್ಸ ಮಹಾನೇಷ ಮನೋರಥಃ ।
ಅನ್ಯಸ್ತ್ರೀಗರ್ಭಜಾತೇನ ಹ್ಯಸಂಭೂಯ ಮಮೋದರೇ ॥ ೭ ॥

೪-೬. ಧ್ರುವನು, ಸಿಂಹಾಸನದಲ್ಲಿ ಕುಳಿತಿದ್ದ, ತಂದೆಯ ತೊಡೆಯಮೇಲಿದ್ದ ಉತ್ತಮನನ್ನು ನೋಡಿ ತಾನೂ ತಂದೆಯ ತೊಡೆಯಮೇಲೆ ಕುಳಿತುಕೊಳ್ಳಬೇಕೆಂದು ಇಷ್ಟಪಟ್ಟನು. ತಂದೆಯು, ಸವತಿ ತಾಯಿಯಾದ ಸುರುಚಿಯು ಎದುರಿಗೆ ಇದ್ದುದರಿಂದ ತೊಡೆಯನ್ನೇರಲು ಬಂದ ಮಗನನ್ನು ಪುರಸ್ಕರಿಸಲಿಲ್ಲ. ಸವತಿ ತಾಯಿಯಾದ ಸುರುಚಿಯು ತನ್ನ ಮಗನು ದೊರೆಯ ತೊಡೆಯಮೇಲಿದ್ದುದನ್ನೂ, ಧ್ರುವನು ತಂದೆಯ ತೊಡೆಯನ್ನೇರಲು ಬಂದುದನ್ನೂ ನೋಡಿ ಮಾತನಾಡಿದಳು.

೭-೧೦. 'ಮಗುವೇ ನನ್ನ ಹೊಟ್ಟೆಯಲ್ಲಿ ಹುಟ್ಟದೆ ಬೇರೊಬ್ಬರ ಹೊಟ್ಟೆಯಲ್ಲಿ ಹುಟ್ಟಿದ ನೀನು ವ್ಯರ್ಥವಾದ ಈ ದೊಡ್ಡ ಆಸೆಯನ್ನೇಕೆ ಇಟ್ಟುಕೊಂಡಿರುವೆ? ನಿನಗೆ ದೊರಕದೆ ಇರುವ ಅತ್ಯುತ್ತಮವಾದ ರಾಜಪದವಿಯನ್ನು ಅವಿವೇಕದಿಂದ ಅಪೇಕ್ಷಿಸುತ್ತಿರುವೆ. ನೀನು ರಾಜಪುತ್ರನು ನಿಜವಾದರೂ ನನ್ನ ಮಗನಲ್ಲ. ಈ ಸಿಂಹಾಸನವು ಚಕ್ರವರ್ತಿಗಳಿಗೇ ಯೋಗ್ಯವಾದುದು. ಆದುದರಿಂದ ನನ್ನ ಮಗನಿಗೇ ಸಲ್ಲತಕ್ಕುದು. ನೀನು ವ್ಯರ್ಥವಾಗಿ ಆಸೆಪಡುವೆ. ನನ್ನ ಮಗನಂತೆ ನಿನಗೆ ಇರುವ ಆ ದೊಡ್ಡ ಆಸೆಯು ವ್ಯರ್ಥವಾದುದಲ್ಲವೇ? ನೀನು ಸುನೀತಿಯ ಮಗನೆಂಬುದನ್ನು ಅರಿಯೆಯಾ? ಎಂದು ಹೇಳಿದಳು.

ಉತ್ತಮೋತ್ತಮಮಪ್ರಾಪ್ಯಮವಿವೇಕೋಭಿವಾಂಛಸಿ ।
ಸತ್ಯಂ ಸುತಸ್ತ್ವಮಪ್ಯಸ್ಯ ಕಿಂ ತು ನ ತ್ವಂ ಮಯಾ ಧೃತಃ ॥ ೮ ॥

ಏತದ್ರಾಜಾಸನಂ ಸರ್ವಭೂಭೃತ್ಸಂಶ್ರಯಕೇತನಂ ।
ಯೋಗ್ಯಂ ಮಮೈವ ಪುತ್ರಸ್ಯ ಕಿಮಾತ್ಮಾ ಕ್ಲಿಶ್ಯತೇ ತ್ವಯಾ ॥ ೯ ॥

ಉಚ್ಚೈರ್ಮನೋರಥಸ್ತೇಽಯಂ ಮತ್ಪುತ್ರಸ್ಯೇವ ಕಿಂ ವೃಥಾ ।
ಸುನೀತ್ಯಾಮಾತ್ಮನೋ ಜನ್ಮ ಕಿಂ ತ್ವಯಾ ನಾವಗಮ್ಯತೇ ॥ ೧೦ ॥

॥ ಶ್ರೀ ಪರಾಶರಃ ॥

ಉತ್ಸೃಜ್ಯ ಪಿತರಂ ಬಾಲಸ್ತಚ್ಛ್ರುತ್ವಾ ಮಾತೃಭಾಷಿತಂ ।
ಜಗಾಮ ಕುಪಿತೋ ಮಾತುರ್ನಿಜಾಯಾ ದ್ವಿಜ ಮಂದಿರಂ ॥ ೧೧ ॥

ತಂ ದೃಷ್ಟ್ವಾ ಕುಪಿತಂ ಪುತ್ರಮೀಷತ್ಪ್ರಸ್ಫುರಿತಾಧರಂ ।
ಸುನೀತಿರಂಕಮಾರೋಪ್ಯ ಮೈತ್ರೇಯೇದಮಭಾಷತ ॥ ೧೨ ॥

ವತ್ಸ ಕಃ ಕೋಪಹೇತುಸ್ತೇ ಕಶ್ಚ ತ್ವಾಂ ನಾಭಿನಂದತಿ ।
ಕೋಽವಜಾನಾತಿ ಪಿತರಂ ತವ ಯಸ್ತೇಽಪರಾಧ್ಯತಿ ॥ ೧೩ ॥

೧೧-೧೨. ಮೈತ್ರೇಯನೇ ಕೇಳು, ಬಾಲಕನಾದ ಧ್ರುವನು ಸವತಿತಾಯಿಯ ಮಾತನ್ನು ಕೇಳಿ ಕೋಪದಿಂದ ತಂದೆಯನ್ನು ಬಿಟ್ಟು ತನ್ನ ತಾಯಿಯ ಮನೆಗೆ ಹೋದನು. ಸುನೀತಿಯು ಕೋಪದಿಂದ ಚಲಿಸುತ್ತಿರುವ ತುಟಿಯುಳ್ಳ ಮಗನನ್ನು ಕಂಡು ತೊಡೆಯಮೇಲೆ ಕುಳ್ಳಿರಿಸಿಕೊಂಡು ಮಾತನಾಡಿದಳು.

೧೩-೧೫. ಮಗುವೇ ನಿನ್ನ ಕೋಪಕ್ಕೆ ಕಾರಣವೇನು? ನಿನ್ನನ್ನೂ ನಿನ್ನ ತಂದೆಯನ್ನೂ ಅಪಮಾನ ಮಾಡಿದವರಾರು? ಎಂದು ತಾಯಿಯು ಕೇಳುತ್ತಲು, ಧ್ರುವನು ರಾಜನೆದುರಿಗೆ ಸುರುಚಿಯು ಗರ್ವದಿಂದ ಆಡಿದ ಮಾತುಗಳೆಲ್ಲವನ್ನೂ ತಾಯಿಗೆ ಹೇಳಿದನು. ಮಗನು ಸುರುಚಿಯು ಮಾತನಾಡಿದಳೆಂದು ಹೇಳುತ್ತಲು, ಸುನೀತಿಯು ದುಃಖದಿಂದ ಕೂಡಿದ ಮನಸ್ಸಿನಿಂದ ನಿಟ್ಟುಸಿರುಬಿಡುತ್ತ ಮಾಸಿದ ಕಣ್ಣುಗಳ ಕಾಂತಿಯಿಂದ ಕೂಡಿ ಅತಿ ದೈನ್ಯದಿಂದ ಮಾತನಾಡಿದಳು.

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತ್ವಾಸಕಲಂ ಮಾತ್ರೇ ಕಥಯಾಮಾಸ ತದ್ಯಥಾ ।
ಸುರುಚಿಃ ಪ್ರಾಹ ಭೂಪಾಲಪ್ರತ್ಯಕ್ಷಮತಿಗರ್ವಿತಾ ॥ ೧೪ ॥

ನಿಶ್ವಸ್ಯ ಸಾಽಪಿ ಕಥಿತೇ ತಸ್ಮಿನ್ ಪುತ್ರೇಣ ದುರ್ಮನಾಃ ।
ಶ್ವಾಸಕ್ಷಾಮೇಕ್ಷಣಾ ದೀನಾ ಸುನೀತಿರ್ವಾಕ್ಯಮಬ್ರವೀತ್ ॥ ೧೫ ॥

॥ ಸುನೀತಿರುವಾಚ ॥

ಸುರುಚಿಸ್ಸತ್ಯಮಾಹೇದಂ ಸ್ವಲ್ಪಭಾಗ್ಯೋಽಸಿ ಪುತ್ರಕ ।
ನ ಹಿ ಪುಣ್ಯವತಾಂ ವತ್ಸ ಸಪತ್ನೈರೇವಮುಚ್ಯತೇ ॥ ೧೬ ॥

ತತ್ತ್ವಯಾ ನಾತ್ರ ಕರ್ತವ್ಯಂ ದುಃಖಂ ತದ್ವಾಕ್ಯಸಂಭವಂ ॥ ೧೭ ॥

ನೋದ್ವೇಗಸ್ತಾತ ಕರ್ತವ್ಯಃ ಕೃತಂ ಯದ್ಭವತಾ ಪುರಾ ।
ತತ್ಕೋಽಪಹರ್ತುಂ ಶಕ್ನೋತಿ ದಾತುಂ ಕಶ್ಚಾಕೃತಂ ತ್ವಯಾ ॥ ೧೮ ॥

ರಾಜಾಸನಂ ತಥಾ ಛತ್ರಂ ವರಾಶ್ವಾ ವರವಾರಣಾಃ ।
ಯಸ್ಯ ಪುಣ್ಯಾನಿ ತಸ್ಯೈತೇ ಮತ್ವೈತಚ್ಛಾಮ್ಯ ಪುತ್ರಕ ॥ ೧೯ ॥

ಅನ್ಯಜನ್ಮ ಕೃತೈಃ ಪುಣ್ಯೈಸ್ಸುರುಚ್ಯಾಂ ಸುರುಚಿರ್ನೃಪಃ ।
ಭಾರ್ಯೇತಿ ಪ್ರೋಚ್ಯತೇ ಚಾನ್ಯಾ ಮದ್ವಿಧಾ ಪುಣ್ಯವರ್ಜಿತಾ ॥ ೨೦ ॥

ಪುಣ್ಯೋಪಚಯಸಂಪನ್ನಸ್ತಸ್ಯಾಃ ಪುತ್ರಸ್ತಥೋತ್ತಮಃ ।
ಮಮ ಪುತ್ರಸ್ತಥಾ ಜಾತಸ್ಸ್ವಲ್ಪಪುಣ್ಯೋ ಧ್ರುವಂ ಭವಾನ್ ॥ ೨೧ ॥

೧೬-೨೧. ಸುನೀತಿಯು "ಎಲೈ ಮಗನೇ, ಸುರುಚಿಯು ನಿಜವಾದ ಮಾತನ್ನೇ ಹೇಳಿದಳು. ನೀನು ಪೂರ್ಣ ಭಾಗ್ಯವಂತನಲ್ಲ. ಪುಣ್ಯವಂತೆಯ ಮಗನನ್ನು ಸವತಿಯು ಇಂತಹ ಮಾತನ್ನಾಡುವುದಿಲ್ಲ. ಅಪ್ಪಾ, ಮಗನೇ ದುಃಖ ಪಡಬೇಡ. ನೀನು ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯ ಫಲವನ್ನು ಯಾರೂ ಅಪಹರಿಸಲಾರರು. ನೀನು ಮಾಡದಿರುವ ಕರ್ಮಫಲವನ್ನು ಯಾರೂ ನಿನಗೆ ಕೊಡಲಾರರು. ಆದುದರಿಂದ ಅವಳಾಡಿದ ಮಾತಿಗೆ ನೀನು ದುಃಖಪಡಬಾರದು. ಮಗನೇ ಸಿಂಹಾಸನವೂ, ಛತ್ರಿಯೂ, ಪಟ್ಟದಾನೆ ಕುದುರೆಗಳೂ, ಯಾರಿಗೆ ಪುಣ್ಯ

ತಥಾಪಿ ದುಃಖಂ ನ ಭವಾನ್ ಕರ್ತುಮರ್ಹತಿ ಪುತ್ರಕ ।
ಯಸ್ಯ ಯಾವತ್ಸತೇನೈವ ಸ್ವೇನ ತುಷ್ಯತಿ ಬುದ್ಧಿಮಾನ್ ॥ ೨೨ ॥

ಯದಿ ಚೇದ್ದುಃಖಮತ್ಯರ್ಥಂ ಸುರುಚ್ಯಾ ವಚನಾತ್ತವ ।
ತತ್ಪುಣ್ಯೋಪಚಯೇ ಯತ್ನಂ ಕುರು ಸರ್ವಫಲಪ್ರದೇ ॥ ೨೩ ॥

ಸುಶೀಲೋ ಭವ ಧರ್ಮಾತ್ಮಾ ಮೈತ್ರಃ ಪ್ರಾಣಿಹಿತೇ ರತಃ ।
ನಿಮ್ನಂ ಯಥಾಪಃ ಪ್ರವಣಾಃ ಪಾತ್ರಮಾಯಾಂತಿ ಸಂಪದಃ ॥ ೨೪ ॥

ವಿದೆಯೋ ಅವರಿಗೆ ಬರುವುದು. ಎಂದು ತಿಳಿದು ನೀನು ಶಾಂತಿಯನ್ನು ಹೊಂದು. ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದಿಂದ ಸುರುಚಿಯಲ್ಲಿ ರಾಜನು ವಿಶೇಷವಾದ ಪ್ರೀತಿಯನ್ನಿಟ್ಟಿರುವನು. ನನ್ನಂತಹ ಪುಣ್ಯಹೀನೆಯರು ರಾಜನ ರಕ್ಷಣೆಗೆ ಮಾತ್ರ ಪಾತ್ರರು. ಉತ್ತಮನು ವಿಶೇಷವಾದ ಪುಣ್ಯದಿಂದ ಆ ಸುರುಚಿಯ ಮಗನಾದನು. ನೀನು ಸ್ವಲ್ಪ ಪುಣ್ಯವಂತನಾದುದರಿಂದ ನನ್ನ ಮಗನಾಗಿ ಹುಟ್ಟಿರುವೆ. ಇದು ನಿಜವಾದುದು.

೨೨-೨೪. ಎಲೈ ಮಗನೇ ನೀನು ದುಃಖಪಡಬಾರದು. ಬುದ್ಧಿವಂತನಾದ ಮನುಜನು ತನ್ನ ಅದೃಷ್ಟ ಫಲದಿಂದ ತನಗೆಷ್ಟು ದೊರೆವುದೋ ಅಷ್ಟರಿಂದಲೇ ಸಂತೋಷಪಡುವನು. ಸುರುಚಿಯ ಮಾತಿನಿಂದ ನಿನಗೆ ವಿಶೇಷ ದುಃಖವಾಗಿದ್ದರೆ ಸಮಸ್ತ ಫಲಗಳನ್ನೂ ಕೊಡತಕ್ಕ ಪುಣ್ಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಮಾಡು. ಅದಕ್ಕಾಗಿ ನೀನು ಧರ್ಮಾತ್ಮನಾಗಿ ಒಳ್ಳೆಯ ನಡತೆಯಿಂದಿರು. ಪ್ರಾಣಿಗಳಿಗೆ ಹಿತವನ್ನು ಮಾಡುತ್ತ ಎಲ್ಲರಲ್ಲಿಯೂ ಸ್ನೇಹದಿಂದಿರು. ನೀರು ಹಳ್ಳವಾದ ಪ್ರದೇಶಕ್ಕೆ ತಾನಾಗಿಹರಿದುಬರುವಂತೆ ಯೋಗ್ಯನಾದವನಿಗೆ ಸಂಪತ್ತು ತಾನಾಗಿಯೇ ಬರುವುದು" ಎಂದು ಹೇಳಿದಳು.

॥ ಧ್ರುವ ಉವಾಚ ॥

ಅಂಬ ಯತ್ತ್ವಮಿದಂ ಪ್ರಾತ್ಥ ಪ್ರಶಮಾಯ ವಚೋ ಮಮ ।
ನೈತದ್ದುರ್ವಚಸಾ ಭಿನ್ನೇ ಹೃದಯೇ ಮಮ ತಿಷ್ಠತಿ ॥ ೨೪ ॥

ಸೋಽಹಂ ತಥಾ ಯತಿಷ್ಯಾಮಿ ಯಥಾ ಸರ್ವೋತ್ತಮೋತ್ತಮಂ ।
ಸ್ಥಾನಂ ಪ್ರಾಪ್ಸ್ಯಾಮ್ಯಶೇಷಾಣಾಂ ಜಗತಾಮಭಿಪೂಜಿತಂ ॥ ೨೫ ॥

ಸುರುಚಿರ್ದಯಿತಾ ರಾಜ್ಞಸ್ತಸ್ಯಾ ಜಾತೋಽಸ್ಮಿ ನೋದರಾತ್ ।
ಪ್ರಭಾವಂ ಪಶ್ಯ ಮೇಽಂಬ ತ್ವಂ ವೃದ್ಧಸ್ಯಾಪಿ ತವೋದರೇ ॥ ೨೬ ॥

ಉತ್ತಮಸ್ಸ ಮಮ ಭ್ರಾತಾ ಯೋ ಗರ್ಭೇಣ ಧೃತಸ್ತಯಾ ।
ಸ ರಾಜಾಸನಮಾಪ್ನೋತು ಪಿತ್ರಾ ದತ್ತಂ ತಥಾಸ್ತು ತಂ ॥ ೨೭ ॥

ನಾನ್ಯದತ್ತಮಭೀಪ್ಸಾಮಿ ಸ್ಥಾನಮಂಬ ಸ್ವಕರ್ಮಣಾ ।
ಇಚ್ಛಾಮಿ ತದಹಂ ಸ್ಥಾನಂ ಯನ್ನ ಪ್ರಾಪ ಪಿತಾ ಮಮ ॥ ೨೮ ॥

೨೪–೨೮ ಧ್ರುವನು "ಅಮ್ಮಾ, ನನ್ನನ್ನು ಸಮಾಧಾನ ಪಡಿಸುವುದಕ್ಕಾಗಿ ನೀನು ಹೇಳಿದ ಮಾತುಗಳು ಒಡೆದ ಮಡಕೆಯಲ್ಲಿ ಹಾಲು ನಿಲ್ಲದಂತೆ ಸವತಿತಾಯಿಯ ಕೆಟ್ಟಮಾತುಗಳಿಂದ ಸೀಳಿದ ನನ್ನ ಮನಸ್ಸಿನಲ್ಲಿ ನಿಲ್ಲುವುದಿಲ್ಲ. ನಾನು ಸಮಸ್ತ ಜಗತ್ತಿಗೂ ಪೂಜ್ಯವಾದ ಸರ್ವೋತ್ತಮವಾದ ಸ್ಥಾನವನ್ನು ಪಡೆವುದಕ್ಕೆ ತಕ್ಕ ಪ್ರಯತ್ನವನ್ನು ಮಾಡುವೆನು. ಸುರುಚಿಯು ರಾಜನ ಪ್ರೀತಿಗೆ ಪಾತ್ರಳಾದವಳು. ಅವಳ ಹೊಟ್ಟೆಯಲ್ಲಿ ನಾನು ಹುಟ್ಟಲಿಲ್ಲ. ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ನನ್ನ ಮಹಿಮೆಯನ್ನು ನೋಡು. ಅವಳ ಹೊಟ್ಟೆಯಲ್ಲಿ ಹುಟ್ಟಿದ ನನ್ನ ತಮ್ಮನಾದ ಉತ್ತಮನು ತಂದೆಯು ಕೊಟ್ಟ ಸಿಂಹಾಸನವನ್ನು ಪಡೆದು ರಾಜನಾಗಲಿ. ಅಮ್ಮಾ! ನಾನು ಮತ್ತೊಬ್ಬನು ಕೊಟ್ಟುದನ್ನು ಅಪೇಕ್ಷಿಸುವುದಿಲ್ಲ. ನನ್ನ ಪುಣ್ಯಕರ್ಮದಿಂದಲೇ ನನ್ನ ತಂದೆಯೂ ಪಡೆಯದಿದ್ದ ಉತ್ತಮವಾದ ಪದವಿಯನ್ನು ಪಡೆವೆನು." ಎಂದು ಹೇಳಿದನು.

॥ ಶ್ರೀಪರಾಶರ ಉವಾಚ ॥

ನಿರ್ಜಗಾಮ ಗೃಹಾನ್ಮಾತುರಿತ್ಯುಕ್ತ್ವಾ ಮಾತರಂ ಧ್ರುವಃ ।
ಪುರಾಚ್ಚ ನಿರ್ಗಮ್ಯ ತತಸ್ತದ್ಬಾಹ್ಯೋಪವನಂ ಯಯೌ ॥ ೩೦ ॥

ಸ ದದರ್ಶ ಮುನೀಂಸ್ತತ್ರ ಸಪ್ತ ಪೂರ್ವಾಗತಾನ್ಧ್ರುವಃ ।
ಕೃಷ್ಣಾಜಿನೋತ್ತರೀಯೇಷು ವಿಷ್ಟರೇಷು ಸಮಾಸ್ಥಿತಾನ್ ॥ ೩೧ ॥

ಸ ರಾಜಪುತ್ರಸ್ತಾನ್ಸರ್ವಾನ್ಪ್ರಣಿಪತ್ಯಾಭ್ಯಭಾಷತ ।
ಪ್ರಶ್ರಯಾವನತಸ್ಸಮ್ಯಗಭಿವಾದನಪೂರ್ವಕಂ ॥ ೩೨ ॥

॥ ಧ್ರುವ ಉವಾಚ ॥

ಉತ್ತಾನಪಾದತನಯಂ ಮಾಂ ನಿಬೋಧತ ಸತ್ತಮಾಃ ।
ಜಾತಂ ಸುನೀತ್ಯಾಂ ನಿರ್ವೇದಾದ್ಯುಷ್ಮಾಕಂ ಪ್ರಾಪ್ತಮಂತಿಕಂ ॥ ೩೩ ॥

೩೦–೩೩. ಧ್ರುವನು ತಾಯಿಗೆ ಈ ಮಾತನ್ನು ಹೇಳಿ ಪಟ್ಟಣದಿಂದ ಹೊರಟು ಹೊರಗಿರುವ ಉಪವನಕ್ಕೆ ಹೋದನು. ಅಲ್ಲಿ ಧ್ರುವನು ತನಗೆ ಅನುಗ್ರಹ ಮಾಡುವುದಕ್ಕಾಗಿ ಮುಂಚಿತವಾಗಿಯೇ ಬಂದು ದರ್ಭೆಯನ್ನೂ ಕೃಷ್ಣಾಜಿನವನ್ನೂ ಉತ್ತರೀಯವನ್ನೂ ಹಾಸಿಕೊಂಡು ಅದರ ಮೇಲೆ ಕುಳಿತುಕೊಂಡಿರುವ ಸಪ್ತಋಷಿಗಳನ್ನು ಕಂಡನು. ಆ ರಾಜಪುತ್ರನು ಎಲ್ಲರಿಗೂ ಒಟ್ಟಿಗೆ ನಮಸ್ಕಾರವನ್ನು ಮಾಡಿ ವಿನಯದಿಂದ ತನ್ನ ಹೆಸರನ್ನು ಹೇಳಿಕೊಂಡು ಪ್ರತಿಯೊಬ್ಬರ ಪಾದಗಳನ್ನೂ ಮುಟ್ಟಿ ನಮಸ್ಕಾರ ಮಾಡಿದನು. ಬಳಿಕ ಧ್ರುವನು ಆ ಋಷಿಗಳನ್ನು ಕುರಿತು “ಮಹಾಮಹಿಮರಾದ ಮುನಿಗಳೇ ನಾನು ಉತ್ತಾನಪಾದರಾಯನ ಪತ್ನಿಯಾದ ಸುನೀತಿಯ ಗರ್ಭದಲ್ಲಿ ಹುಟ್ಟಿದ ಮಗನು. ದುಃಖದಿಂದ (ವೈರಾಗ್ಯದಿಂದ) ನಿಮ್ಮ ಸಮೀಪಕ್ಕೆ ಬಂದಿರುವೆನು” ಎಂದು ಹೇಳಿದನು.

॥ ಋಷಯ ಊಚುಃ ॥

ಚತುಃಪಂಚಾಬ್ದಸಂಭೂತೋ ಬಾಲಸ್ತ್ವಂ ನೃಪನಂದನ ।
ನಿರ್ವೇದಕಾರಣಂ ಕಿಂಚಿತ್ತವ ನಾದ್ಯಾಪಿ ವಿದ್ಯತೇ ॥ ೩೪ ॥

ನ ಚಿಂತ್ಯಂ ಭವತಃ ಕಿಂಚಿದ್ಧ್ರಿಯತೇ ಭೂಪತಿಃ ಪಿತಾ ।
ನ ಚೈವೇಷ್ಟ ವಿಯೋಗಾದಿ ತವ ಪಶ್ಯಾಮ ಬಾಲಕೇ ॥ ೩೫ ॥

ಶರೀರೇ ನ ಚ ತೇ ವ್ಯಾಧಿರಸ್ಮಾಭಿರುಪಲಕ್ಷ್ಯತೇ ।
ನಿರ್ವೇದಃ ಕಿಂ ನಿಮಿತ್ತಸ್ತೇ ಕಥ್ಯತಾಂ ಯದಿ ವಿದ್ಯತೇ ॥ ೩೬ ॥

॥ ಶ್ರೀಪರಾಶರ ಉವಾಚ ॥

ತತಸ್ಸ ಕಥಯಾಮಾಸ ಸುರುಚ್ಯಾ ಯದುದಾಹೃತಂ ।
ತನ್ನಿಶಮ್ಯ ತತಃ ಪ್ರೋಚುರ್ಮುನಯಸ್ತೇ ಪರಸ್ಪರಂ ॥ ೩೭ ॥

ಅಹೋ ಕ್ಷಾತ್ರಂ ಪರಂ ತೇಜೋ ಬಾಲಸ್ಯಾಪಿ ಯದಕ್ಷಮಾ ।
ಸಪತ್ನ್ಯಾ ಮಾತುರುಕ್ತಂ ಯದ್ಧೃದಯಾನ್ನಾಪಸರ್ಪತಿ ॥ ೩೮ ॥

೩೪-೩೬. ಋಷಿಗಳು "ಎಲೈ ಬಾಲಕನೇ ನೀನು ರಾಜಪುತ್ರನು. ಮತ್ತು ನಾಲ್ಕು ಅಥವಾ ಐದು ವರ್ಷ ವಯಸ್ಸಿನವನು. ನಿನಗೆ ವೈರಾಗ್ಯವು ಉಂಟಾಗಲು ಕಾರಣವಾವುದೂ ಇರುವುದಿಲ್ಲ. ನಿನ್ನ ತಂದೆಯು ಜೀವಿಸಿರುವುದರಿಂದಲೂ ರಾಜನಾಗಿರುವುದರಿಂದಲೂ ಕುಟುಂಬಾದಿಗಳನ್ನು ರಕ್ಷಿಸುವ ಕಷ್ಟವೂ ನಿನಗೆ ಇರುವುದಿಲ್ಲ. ಬಾಲಕನಾದ ನಿನಗೆ ಇಷ್ಟರಾದ ಬಂಧುಗಳ ಅಗಲಿಕೆಯೂ ಉಂಟಾಗಿಲ್ಲ. ನಿನ್ನ ಶರೀರದಲ್ಲಿ ರೋಗಗಳಾವುವೂ ಇಲ್ಲ. ಹೀಗಿರುವಲ್ಲಿ ನಿನಗೆ ವೈರಾಗ್ಯವು ಯಾವ ಕಾರಣದಿಂದ ಉಂಟಾಗಿರುವುದು? ಅದನ್ನು ಹೇಳು." ಎಂದು ಕೇಳಿದರು.

೩೭-೩೮. ಆಮೇಲೆ ಧ್ರುವನು ಸುರುಚಿಯು ಹೇಳಿದ ಮಾತನ್ನು ಹೇಳಿದನು. ಅದನ್ನು ಕೇಳಿ ಆ ಮುನಿಗಳು ಇವನು ಬಾಲಕನಾದರೂ ಕ್ಷತ್ರಿಯ ತೇಜಸ್ಸು ಅಧಿಕವಾಗಿರುವುದರಿಂದ ತನಗಾದ ಮಾನಭಂಗವನ್ನು ಸಹಿಸದಿರುವನು. ಸವತಿ ತಾಯಿಯು ಹೇಳಿದ ಮಾತು ಇವನ ಮನಸ್ಸಿನಿಂದ ಹೋಗಿಲ್ಲ, ಎಂದು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡರು.

ಭೋ ಭೋ ಕ್ಷತ್ರಿಯದಾಯಾದ ನಿರ್ವೇದಾದ್ಯತ್ತ್ವಯಾಧುನಾ ।
ಕರ್ತುಂ ವ್ಯವಸಿತಂ ತನ್ನಃ ಕಥ್ಯತಾಂ ಯದಿ ರೋಚತೇ ॥ ೩೯ ॥

ಯಚ್ಚ ಕಾರ್ಯಂ ತವಾಸ್ಮಾಭಿಸ್ಸಾಹಾಯ್ಯಮಮಿತದ್ಯುತೇ ।
ತತ್ಕಥ್ಯತಾಂ ವಿವಕ್ಷುಸ್ತ್ವಮಸ್ಮಾಭಿರುಪಲಕ್ಷ್ಯಸೇ ॥ ೪೦ ॥

॥ ಧ್ರುವ ಉವಾಚ ॥

ನಾಹಮರ್ಥಮಭೀಪ್ಸಾಮಿ ನ ರಾಜ್ಯಂ ದ್ವಿಜಸತ್ತಮಾಃ ।
ತತ್ಸ್ಥಾನಮೇಕಮಿಚ್ಛಾಮಿ ಭುಕ್ತಂ ನಾನ್ಯೇನ ಯತ್ಪುರಾ ॥ ೪೧ ॥

ಏತನ್ಮೇ ಕ್ರಿಯತಾಂ ಸಮ್ಯಕ್ಕಥ್ಯತಾಂ ಪ್ರಾಪ್ಯತೇ ಯಥಾ ।
ಸ್ಥಾನಮಗ್ರ್ಯಂ ಸಮಸ್ತೇಭ್ಯಸ್ಥಾನೇಭ್ಯೋ ಮುನಿಸತ್ತಮಾಃ ॥ ೪೨ ॥

॥ ಮರೀಚಿರುವಾಚ ॥

ಅನಾರಾಧಿತಗೋವಿಂದೈರ್ನರೈಃ ಸ್ಥಾನಂ ನೃಪಾತ್ಮಜ ।
ನ ಹಿ ಸಂಪ್ರಾಪ್ಯತೇ ಶ್ರೇಷ್ಠಂ ತಸ್ಮಾದಾರಾಧಯಾಚ್ಯುತಂ ॥ ೪೩ ॥

೩೯–೪೦. ಬಳಿಕ ಆ ಋಷಿಗಳು “ ಎಲೈ ಕ್ಷತ್ರಿಯ ಪುತ್ರನೇ, ಈಗ ನೀನು ವೈರಾಗ್ಯದಿಂದ ಏನು ಮಾಡಬೇಕೆಂದು ನಿಶ್ಚಯಿಸಿರುವೆ ? ನಿನಗೆ ಇಷ್ಟವಿದ್ದರೆ ಅದನ್ನು ನಮಗೆ ಹೇಳು. ಮಹಾ ತೇಜಶ್ಶಾಲಿಯಾದ ನಿನಗೆ ನಮ್ಮಿಂದ ಏನಾದರೂ ಸಹಾಯವಾಗಬೇಕಾಗಿದ್ದರೆ ಅದನ್ನು ಹೇಳು. ನಿನ್ನನ್ನು ನೋಡಿದರೆ ನಮ್ಮೊಡನೆ ಮಾತನಾಡಬೇಕೆಂಬ ಆಸೆಯಿಂದ ಇರುವಂತೆ ತೋರುವುದು ” ಎಂದರು.

೪೧–೪೨. ಧ್ರುವನು “ ಬ್ರಾಹ್ಮಣಶ್ರೇಷ್ಠರೇ ! ನನಗೆ ಹಣದಾಸೆಯಿಲ್ಲ ರಾಜ್ಯವೂ ಬೇಡ. ಹಿಂದೆ ಯಾರೂ ಅನುಭವಿಸದಿರುವ ಉತ್ತಮವಾದ ಸ್ಥಾನವೊಂದೇ ನನಗೆ ಬೇಕಾದುದು. ಆ ಸ್ಥಾನವು ಎಲ್ಲ ಸ್ಥಾನಗಳಿಗಿಂತ ಉತ್ತಮವಾದುದಾಗಿರಬೇಕು. ಅದು ನನಗೆ ಯಾವ ರೀತಿಯಿಂದ ದೊರಕುವುದೋ ಆ ಉಪಾಯವನ್ನು ಹೇಳಿಕೊಡಬೇಕು ” ಎಂದನು.

೪೩. ಮರೀಚಿಯು “ ರಾಜಪುತ್ರನೇ ಗೋವಿಂದನನ್ನು ಪೂಜಿಸದಿದ್ದರೆ ಮನುಜರಿಗೆ ಶ್ರೇಷ್ಠವಾದ ಪದವಿಯು ದೊರೆಯುವುದಿಲ್ಲ. ಆದುದರಿಂದ ನಾಶರಹಿತನಾದ ಆ ದೇವನನ್ನು ಪೂಜಿಸು ” ಎಂದನು.

॥ ಅತ್ರಿರುವಾಚ ॥

ಪರಃ ಪರಾಣಾಂ ಪುರುಷೋ ಯಸ್ಯ ತುಷ್ಟೋ ಜನಾರ್ದನಃ ।
ಸ ಪ್ರಾಪ್ನೋತ್ಯಕ್ಷಯಂ ಸ್ಥಾನಮೇತತ್ಸತ್ಯಂ ಮಯೋದಿತಂ ॥ ೪೪ ॥

॥ ಅಂಗಿರೋವಾಚ ॥

ಯಸ್ಯಾಂತಸ್ಸರ್ವಮೇವೇದಮಚ್ಯುತಸ್ಯ ಮಹಾತ್ಮನಃ ।
ತಮಾರಾಧಯ ಗೋವಿಂದಂ ಸ್ಥಾನಮಗ್ರ್ಯಂ ಯದೀಚ್ಛಸಿ ॥ ೪೫ ॥

॥ ಪುಲಹೋವಾಚ ॥

ಪರಂ ಬ್ರಹ್ಮಪರಂ ಧಾಮ ಯೋಽಸೌ ಬ್ರಹ್ಮಾ ತಥಾ ಪರಂ ।
ತಮಾರಾಧ್ಯ ಹರಿಂ ಯಾತಿ ಮುಕ್ತಿಮಪ್ಯತಿದುರ್ಲಭಾಂ ॥ ೪೬ ॥

---

೪೪. ಅತ್ರಿಯು "ಪರಮಪುರುಷನಾದ ಜನಾರ್ದನನು ಯಾರಿಗೆ ಪ್ರಸನ್ನನಾಗುವನೋ ಅವನು ನಾಶರಹಿತವಾದ ಸ್ಥಾನವನ್ನು ಪಡೆವನು. ಇದು ಸತ್ಯವಾದುದೆಂದು ನಾನು ಹೇಳುವೆನು" ಎಂದನು.

೪೫. ಅಂಗಿರನು "ಉತ್ತಮವಾದ ಪದವಿಯು ನಿನಗೆ ಬೇಕಾದರೆ ನಾಶರಹಿತನೂ, ಮಹಾಮಹಿಮನೂ ಆದ ಯಾವ ದೇವನಲ್ಲಿ ಈ ಸಮಸ್ತ ಪ್ರಪಂಚವೂ ಇರುವುದೋ ಆ ಗೋವಿಂದನನ್ನು ಪೂಜಿಸು" ಎಂದನು.

೪೬. ಪುಲಹನು "ನಿರ್ವಿಕಾರವಾದ ಬ್ರಹ್ಮಸ್ವರೂಪನೂ, ಶ್ರೇಷ್ಠವಾದ ತೇಜೋರೂಪನೂ, ಅಪರಬ್ರಹ್ಮವಾದ ಪ್ರಪಂಚರೂಪನೂ ಆದ ಹರಿಯನ್ನು ಪೂಜಿಸು. ಮುಕ್ತಿಯನ್ನು ಪಡೆಯಬಹುದು" ಎಂದನು.

॥ ಕ್ರತುರುವಾಚ ॥

ಯೋ ಯಜ್ಞಪುರುಷೋ ಯಜ್ಞೋ ಯಜ್ಞೇಶಃ ಪರಮಃ ಪುಮಾನ್ ।
ತಸ್ಮಿಂಸ್ತುಷ್ಟೇ ಯದಪ್ರಾಪ್ಯಂ ಕಿಂ ತದಸ್ತಿ ಜನಾರ್ದನೇ ॥ ೪೭ ॥

॥ ಪುಲಸ್ತ್ಯೋವಾಚ ॥

ಐಂದ್ರಮಿಂದ್ರಃ ಪರಂ ಸ್ಥಾನಂ ಯಮಾರಾಧ್ಯ ಜಗತ್ಪತಿಂ ।
ಪ್ರಾಪ ಯಜ್ಞಪತಿಂ ವಿಷ್ಣುಂ ತಮಾರಾಧಯ ಸುವ್ರತ ॥ ೪೮ ॥

॥ ವಸಿಷ್ಠೋವಾಚ ॥

ಪ್ರಾಪ್ನೋಷ್ಯಾರಾಧಿತೇ ವಿಷ್ಣೌ ಮನಸಾ ಯದ್ಯದಿಚ್ಛಸಿ ।
ತ್ರೈಲೋಕ್ಯಾಂತರ್ಗತಂ ಸ್ಥಾನಂ ಕಿಮು ವತ್ಸೋತ್ತಮೋತ್ತಮಂ ॥ ೪೯ ॥

---

೪೭. ಕ್ರತುವು "ಯಜ್ಞರೂಪನೂ, ಯಜ್ಞಕ್ರಿಯಾರೂಪನೂ, ಯಜ್ಞಕರ್ಮಗಳಿಗೆ ಅಧಿಪತಿಯೂ, ಪರಮಾತ್ಮನೂ ಆದ ಜನಾರ್ದನನು ಸಂತೋಷ ಹೊಂದಿದರೆ ಆ ಸಂತೋಷವನ್ನುಂಟುಮಾಡಿದವನಿಗೆ ದೊರಕದುದಾವುದೂ ಇರುವುದಿಲ್ಲ" ಎಂದನು.

೪೮. ಪುಲಸ್ತ್ಯನು "ಎಲೈ ಒಳ್ಳೆಯ ವ್ರತಾಚರಣೆಯನ್ನು ಮಾಡುವ ಧ್ರುವನೇ, ದೇವೇಂದ್ರನು ಯಜ್ಞಾಧಿಪತಿಯಾದ ವಿಷ್ಣುವನ್ನು ಪೂಜಿಸಿ ಶ್ರೇಷ್ಠವಾದ ಇಂದ್ರಪದವಿಯನ್ನು ಪಡೆದನು. ನೀನೂ ಆ ದೇವನನ್ನು ಪೂಜಿಸು" ಎಂದನು.

೪೯. ವಸಿಷ್ಠನು "ಬಾಲಕನೇ; ವಿಷ್ಣುವನ್ನು ಪೂಜಿಸಿದರೆ ನಿನ್ನ ಮನಸ್ಸಿನಲ್ಲಿ ಮೂರು ಲೋಕದಲ್ಲಿರುವ ಯಾವ ಉತ್ತಮಸ್ಥಾನವನ್ನಪೇಕ್ಷಿಸುವೆಯೋ ಅದನ್ನು ಪಡೆಯುವೆ" ಎಂದನು.

॥ ಧ್ರುವೋವಾಚ ॥

ಆರಾಧ್ಯಃ ಕಥಿತೋ ದೇವೋ ಭವದ್ಭಿಃ ಪ್ರಣತಸ್ಯ ನಃ ।
ಮಯಾ ತತ್ಪರಿತೋಷಾಯ ಯಜ್ಜಪ್ತವ್ಯಂ ತದುಚ್ಯತಾಂ ॥ ೫೦ ॥

ಯಥಾ ಚಾರಾಧನಂ ತಸ್ಯ ಮಯಾ ಕಾರ್ಯಂ ಮಹಾತ್ಮನಃ ।
ಪ್ರಸಾದಸುಮುಖಾಸ್ತನ್ಮೇ ಕಥಯಂತು ಮಹರ್ಷಯಃ ॥ ೫೧ ॥

॥ ಋಷಯ ಊಚುಃ ॥

ರಾಜಪುತ್ರ ಯಥಾ ವಿಷ್ಣೋರಾರಾಧನಪರೈರ್ನರೈಃ ।
ಕಾರ್ಯಮಾರಾಧನಂ ತನ್ನೋ ಯಥಾವಚ್ಛ್ರೋತುಮರ್ಹಸಿ ॥ ೫೨ ॥

೫೦–೫೧. ಧ್ರುವನು, " ಮಹಾಮಹಿಮರಾದ ಮಹರ್ಷಿಗಳೇ ನಮಸ್ಕಾರ ಮಾಡಿದ ನನಗೆ ನೀವೆಲ್ಲರೂ ವಿಷ್ಣುವನ್ನು ಪೂಜಿಸೆಂದು ಹೇಳಿದಿರಿ. ಆ ವಿಷ್ಣುವನ್ನು ಸಂತೋಷಪಡಿಸಲು ನಾನು ಯಾವ ಮಂತ್ರವನ್ನು ಜಪಿಸಬೇಕೆಂಬುದನ್ನೂ " ದೇವನನ್ನು ಹೇಗೆ ಪೂಜಿಸಬೇಕೆಂಬುದನ್ನೂ ಅನುಗ್ರಹ ಮಾಡಿ ಹೇಳಿಕೊಡಬೇಕು" ಎಂದು ಹೇಳಿದನು.

೫೨–೫೩. ಋಷಿಗಳು ' ಎಲೈ ರಾಜಪುತ್ರನೇ ! ವಿಷ್ಣುವನ್ನು ಪೂಜಿಸುವ ಜನರು ಹೇಗೆ ಪೂಜಿಸಬೇಕೆಂಬುದನ್ನು ಹೇಳುವೆವು ಕೇಳು; ಮನುಜನು ಮೊದಲು ಹೊರಗಿನ ವಿಷಯಗಳಿಂದ ಮನಸ್ಸನ್ನು ಬಿಡಿಸಿ, ಆ ಮನಸ್ಸನ್ನು ಜಗತ್ತಿಗೆ ಆಶ್ರಯನೂ, ತೇಜೋರೂಪನೂ ಆದ ದೇವನಲ್ಲಿ ನೆಲೆಗೊಳಿಸಬೇಕು. (ಇದರಿಂದ ಅಷ್ಟಾಂಗ ಯೋಗಗಳಲ್ಲಿ ಯಮಾದಿ ಧಾರಣಾಂತವಾದ ಆರು ಅಂಗಗಳನ್ನು ಹೇಳಿದಂತಾಯಿತು) ರಾಜಪುತ್ರನೇ ಹೀಗೆ ಚಿತ್ತವು ಏಕಾಗ್ರವಾಗಿದ್ದಾಗ ಜಪಮಾಡುವ ಮಂತ್ರವನ್ನು ಹೇಳುವೆವು ಕೇಳು. ಹಿರಣ್ಯಗರ್ಭನೆಂಬ ಬ್ರಹ್ಮಸ್ವರೂಪನೂ, ಪುರುಷನಾದ ವಿಷ್ಣುಸ್ವರೂಪನೂ, ಪ್ರಧಾನವೆಂಬ ಪ್ರಕೃತಿ

ಬಾಹ್ಯಾರ್ಥಾದಖಿಲಾಚ್ಚಿತ್ತಂ ತ್ಯಾಜಯೇತ್ಪ್ರಥಮಂ ನರಃ ।
ತಸ್ಮಿನ್ನೇವ ಜಗದ್ಧಾಮ್ನಿ ತತಃ ಕುರ್ವೀತ ನಿಶ್ಚಲಂ ॥ ೫೩ ॥

ಏವಮೇಕಾಗ್ರಚಿತ್ತೇನ ತನ್ಮಯೇನ ಧೃತಾತ್ಮನಾ ।
ಜಪ್ತವ್ಯಂ ಯನ್ನಿಬೋಧೈತತ್ತನ್ನಃ ಪಾರ್ಥಿವನಂದನ ॥ ೫೪ ॥

ಹಿರಣ್ಯಗರ್ಭಪುರುಷಪ್ರಧಾನಾವ್ಯಕ್ತರೂಪಿಣೇ ।
ಓಂ ನಮೋ ವಾಸುದೇವಾಯ ಶುದ್ಧಜ್ಞಾನಸ್ವಭಾವಿನೇ ॥ ೫೫ ॥

ಏತಜ್ಜಜಾಪ ಭಗವಾನ್ ಜಪ್ಯಂ ಸ್ವಾಯಂಭುವೋ ಮನುಃ ।
ಪಿತಾಮಹಸ್ತವ ಪುರಾ ತಸ್ಯ ತುಷ್ಟೋ ಜನಾರ್ದನಃ ॥ ೫೬ ॥

ದದೌ ಯಥಾಭಿಲಷಿತಾಮೃದ್ಧಿಂ ತ್ರೈಲೋಕ್ಯದುರ್ಲಭಾಂ ।
ತಥಾ ತ್ವಮಪಿ ಗೋವಿಂದಂ ತೋಷಯೈತತ್ಸದಾ ಜಪನ್ ॥ ೫೭ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಏಕಾದಶೋಽಧ್ಯಾಯಃ

ರೂಪನೂ ಆಗಿ ಈ ಮೂರನ್ನೂ ನಿಯಮನ ಮಾಡುವ ಅವ್ಯಕ್ತರೂಪನಾದ ದೇವನನ್ನು ಶುದ್ಧಜ್ಞಾನರೂಪದಿಂದ ' ಓಂ ನಮೋ ಭಗವತೇ ವಾಸುದೇವಾಯ ' ಎಂಬ ಜಪ ಮಂತ್ರದಿಂದ ಧ್ಯಾನಮಾಡುತ್ತಿರಬೇಕು. ಈ ಮಂತ್ರವನ್ನು ಮಹಾಮಹಿಮನೂ, ನಿನ್ನ ಪಿತಾಮಹನೂ ಆದ ಸ್ವಾಯಂಭುವ ಮನುವು ಹಿಂದೆ ಜಪಿಸಿದನು ಇದರಿಂದ ಜನಾರ್ದನನು ಸಂತುಷ್ಟನಾಗಿ ಅವನಿಗೆ ಇಷ್ಟವಾದ ಮೂರು ಲೋಕದಲ್ಲಿಯೂ ದುರ್ಲಭವಾದ ಸಮಸ್ತ ವಸ್ತುಸಮೃದ್ಧಿಯನ್ನೂ ಕೊಟ್ಟನು. ಹಾಗೆಯೇ ನೀನೂ ಈಮಂತ್ರವನ್ನು ಯಾವಾಗಲೂ ಜಪಿಸುತ್ತ ಆ ಗೋವಿಂದನನ್ನು ಸಂತೋಷಪಡಿಸು " ಎಂದು ಹೇಳಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಹನ್ನೊಂದನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ದ್ವಾದಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ನಿಶಮ್ಯ ತದಶೇಷೇಣ ಮೈತ್ರೇಯ ನೃಪತೇಸ್ಸುತಃ ।
ನಿರ್ಜಗಾಮ ವನಾತ್ತಸ್ಮಾತ್ಪ್ರಣಿಪತ್ಯ ತಾನೃಷೀನ್ ॥ ೧ ॥

ಕೃತಕೃತ್ಯಮಿವಾತ್ಮಾನಂ ಮನ್ಯಮಾನಸ್ತತೋ ದ್ವಿಜ ।
ಮಧುಸಂಜ್ಞಂ ಮಹಾಪುಣ್ಯಂ ಜಗಾಮ ಯಮುನಾತಟಂ ॥ ೨ ॥

ಪುನಶ್ಚ ಮಧುಸಂಜ್ಞೇನ ದೈತ್ಯೇನಾಧಿಷ್ಠಿತಂ ಯತಃ ।
ತತೋ ಮಧುವನಂ ನಾಮ್ನಾ ಖ್ಯಾತಮತ್ರ ಮಹೀತಲೇ ॥ ೩ ॥

ಹತ್ವಾ ಚ ಲವಣಂ ರಕ್ಷೋ ಮಧುಪುತ್ರಂ ಮಹಾಬಲಂ ।
ಶತ್ರುಘ್ನೋ ಮಧುರಾಂ ನಾಮ ಪುರೀಂ ಯತ್ರ ಚಕಾರ ವೈ ॥ ೪ ॥

೧–೫. ಮೈತ್ರೇಯ ಮುನಿಯೇ, ರಾಜಪುತ್ರನಾದ ಧ್ರುವನು ಋಷಿಗಳು ಹೇಳಿದುದನ್ನೆಲ್ಲಾ ಕೇಳಿ ಅವರಿಗೆ ನಮಸ್ಕಾರ ಮಾಡಿ ತಾನು ಕೃತಾರ್ಥನಾದೆನೆಂದು ತಿಳಿದುಕೊಂಡು ಆ ವನದಿಂದ ಹೊರಟು ಯಮುನಾನದಿಯ ದಡದಲ್ಲಿನ ಪರಮ ಪುಣ್ಯಸ್ಥಳವಾದ ಮಧುವನಕ್ಕೆ ಹೋದನು. ಮಧುವೆಂಬ ದೈತ್ಯನು ಅಲ್ಲಿ ವಾಸವಾಗಿ ಇದ್ದುದರಿಂದ ಆ ಸ್ಥಳಕ್ಕೆ ಮಧುವನವೆಂದು ಹೆಸರಾಗಿರುವುದು. ಶತ್ರುಘ್ನನು ಮಧುಪುತ್ರನಾದ ಲವಣಾಸುರನನ್ನು ಕೊಂದು ಅಲ್ಲಿ ಮಧುರಾ ಎಂಬ ಪಟ್ಟಣವನ್ನು

ಯತ್ರಾಸ್ಯ ದೇವದೇವಸ್ಯ ಸಾನ್ನಿಧ್ಯಂ ಹರಿಮೇಧಸಃ ।
ಸರ್ವಪಾಪಹರೇ ತಸ್ಮಿಂಸ್ತಪಸ್ತೀರ್ಥೇ ಚಕಾರ ಸಃ ॥ ೫ ॥

ಮರೀಚಿಮಿಶ್ರೈರ್ಮುನಿಭಿರ್ಯಥೋದ್ದಿಷ್ಟಮಭೂತ್ತಥಾ ।
ಆತ್ಮನ್ಯ ಶೇಷ ದೇವೇಶಂ ಸ್ಥಿತಂ ವಿಷ್ಣುಮಮನ್ಯತ ॥ ೬ ॥

ಅನನ್ಯಚೇತಸಸ್ತಸ್ಯ ಧ್ಯಾಯತೋ ಭಗವಾನ್ ಹರಿಃ ।
ಸರ್ವಭೂತಗತೋ ವಿಪ್ರ ಸರ್ವಭಾವಗತೋಽಭವತ್ ॥ ೭ ॥

ಮನಸ್ಯವಸ್ಥಿತೇ ತಸ್ಯ ವಿಷ್ಣೌ ಮೈತ್ರೇಯ ಯೋಗಿನಃ ।
ನ ಶಶಾಕ ಧರಾಭಾರಮುದ್ವೋಢುಂ ಭೂತಧಾರಿಣೀ ॥ ೮ ॥

ವಾಮಪಾದಸ್ಥಿತೇ ತಸ್ಮಿನ್ ನನಾಮಾರ್ಧೇನ ಮೇದಿನೀ ।
ದ್ವಿತೀಯಂ ಚ ನನಾಮಾರ್ಧಂ ಕ್ಷಿತೇರ್ದಕ್ಷಿಣತಸ್ಥಿತೇ ॥ ೯ ॥

ಪಾದಾಂಗುಷ್ಠೇನ ಸಂಪೀಡ್ಯ ಯದಾ ಸ ವಸುಧಾಂ ಸ್ಥಿತಃ ।
ತದಾ ಸಮಸ್ತಾ ವಸುಧಾ ಚಚಾಲ ಸಹ ಪರ್ವತೈಃ ॥ ೧೦ ॥

ಕಟ್ಟಿಸಿದನು. ಆ ಪ್ರದೇಶದಲ್ಲಿ ಪಾಪನಾಶಕವಾದ ಬುದ್ಧಿಯೂ, ವಿಷ್ಣುಸಾನ್ನಿಧ್ಯವೂ ಉಂಟಾಗುವುದೆಂದು ಸರ್ವಪಾಪಗಳನ್ನೂ ನಾಶಮಾಡುವ ಆ ಕ್ಷೇತ್ರದಲ್ಲಿ ಧ್ರುವನು ತಪಸ್ಸನ್ನು ಮಾಡಿದನು.

೬–೧೧. ಮರೀಚಿಯೇ ಮುಂತಾದ ಮುನಿಗಳು ಉಪದೇಶ ಮಾಡಿದಂತೆ ತನ್ನ ಮನಸ್ಸಿನಲ್ಲಿಯೇ ದೇವದೇವನಾದ ವಿಷ್ಣುವು ಇರುವನೆಂದು ಭಾವಿಸಿದನು. ಏಕಾಗ್ರಚಿತ್ತದಿಂದ ಧ್ಯಾನಮಾಡುತ್ತಿದ್ದ ಆ ಧ್ರುವನ ಮನಸ್ಸಿನಲ್ಲಿ ಸರ್ವ ವ್ಯಾಪಿಯಾದ ವಿಷ್ಣುವು ವಿಶ್ವರೂಪದಿಂದ ವಾಸವಾಗಿದ್ದನು. ವಿಷ್ಣುವು ಯೋಗಿಯಾದ ಆ ಧ್ರುವನ ಮನಸ್ಸಿನಲ್ಲಿ ನೆಲೆಯಾಗಿರಲು ಸಮಸ್ತ ಪ್ರಾಣಿಗಳನ್ನೂ ಧರಿಸಿದ ಭೂಮಿಯು ಅವನ ಭಾರವನ್ನು ಹೊರಲು ಸಮರ್ಥವಾಗಲಿಲ್ಲ. ಧ್ರುವನು ಎಡಗಾಲನ್ನೂರಿ ನಿಂತುಕೊಂಡರೆ ಎಡಭಾಗದ ಅರ್ಧ ಭೂಮಿಯು ಬಗ್ಗಿಹೋಯಿತು.

ನದ್ಯೋ ನದಾಸ್ಸಮುದ್ರಾಶ್ಚ ಸಂಕ್ಷೋಭಂ ಪರಮಂ ಯಯುಃ ।
ತತ್ಕ್ಷೋಭಾದಮರಾಃ ಕ್ಷೋಭಂ ಪರಂ ಜಗ್ಮುರ್ಮಹಾಮುನೇ ॥ ೧೧ ॥

ಯಾಮಾ ನಾಮ ತದಾ ದೇವಾ ಮೈತ್ರೇಯ ಪರಮಾಕುಲಾಃ
ಇಂದ್ರೇಣ ಸಹ ಸಂಮಂತ್ರ್ಯ ಧ್ಯಾನಭಂಗಂ ಪ್ರಚಕ್ರಮುಃ ॥ ೧೨ ॥

ಕೂಷ್ಮಾಂಡಾ ವಿವಿಧೈರ್ರೂಪೈರ್ಮಹೇಂದ್ರೇಣ ಮಹಾಮುನೇ ।
ಸಮಾಧಿಭಂಗಮತ್ಯರ್ಥಮಾರಬ್ಧಾಃ ಕರ್ತುಮಾತುರಾಃ ॥ ೧೩ ॥

ಸುನೀತಿರ್ನಾಮ ತನ್ಮಾತಾ ಸಾಸ್ರಾ ತತ್ಪುರತಸ್ಥಿತಾ ।
ಪುತ್ರೇತಿ ಕರುಣಾಂ ವಾಚಮಾಹ ಮಾಯಾಮಯೀ ತದಾ ॥ ೧೪ ॥

ಪುತ್ರಕಾಸ್ಮಾನ್ನಿವರ್ತಸ್ವ ಶರೀರಾತ್ಯಯದಾರುಣಾತ್ ।
ನಿರ್ಬಂಧತೋ ಮಯಾ ಲಬ್ಧೋ ಬಹುಭಿಸ್ತ್ವಂ ಮನೋರಥೈಃ ॥ ೧೫ ॥

ಬಲಗಾಲನ್ನೂರಿ ನಿಂತುಕೊಂಡರೆ ಬಲಭಾಗದ ಅರ್ಧ ಭೂಮಿಯು ಬಗ್ಗಿಹೋಯಿತು ಕಾಲಿನ ಹೆಬ್ಬೆರಳನ್ನೂರಿ ನಿಂತುಕೊಂಡಾಗ ಪರ್ವತ ಸಹಿತವಾದ ಭೂಮಿಯೆಲ್ಲವೂ ಚಲಿಸಿತು. ನದಿ ನದಗಳು ವಿಶೇಷವಾಗಿ ಚಲಿಸಿದುವು. ಇದರಿಂದ ದೇವತೆಗಳೂ ವಿಶೇಷವಾಗಿ ನಡುಗಿದರು.

೧೨–೧೩. ಮೈತ್ರೇಯನೆ ಕೇಳು, ಆ ಸಮಯದಲ್ಲಿ ಯಾಮಾ ಎಂಬ ಹೆಸರಿನ ದೇವತೆಗಳು ವ್ಯಾಕುಲಚಿತ್ತರಾಗಿ ದೇವೇಂದ್ರನೊಡನೆ ಮಂತ್ರಾಲೋಚನೆಯನ್ನು ಮಾಡಿ ಧ್ರುವನ ತಪೋ ಭಂಗವನ್ನು ಮಾಡಲು ಪ್ರಯತ್ನಿಸಿದರು. ಕೂಷ್ಮಾಂಡಾದಿ ಉಪದೇವತೆಗಳು ಅನೇಕ ರೂಪಗಳಿಂದ ದೇವೇಂದ್ರನೊಡನೆ ಧ್ರುವನ ಸಮಾಧಿಭಂಗವನ್ನು ಮಾಡಬೇಕೆಂದು ವಿಶೇಷವಾಗಿ ಪ್ರಯತ್ನ ಮಾಡಿದರು.

೧೪–೧೫. ಆಗ ಆ ಧ್ರುವನ ತಾಯಿಯಾದ ಸುನೀತಿಯು ಕಣ್ಣಿನಲ್ಲಿ ನೀರು ಸುರಿಸುತ್ತ ಅಜ್ಞಾನದಿಂದ ಕೂಡಿದವಳಾಗಿ ಅತ್ಯಂತ ದೀನಸ್ವರದಿಂದ ಮಾತನಾಡುತ್ತ "ಮಗನೇ ಶರೀರಕ್ಕೆ ಕಷ್ಟವನ್ನು ಕೊಡುತಕ್ಕ ಈ ತಪಸ್ಸನ್ನು ಬಿಡು. ಅನೇಕ

ದೀನಾಮೇಕಾಂ ಪರಿತ್ಯಕ್ತುಮನಾಥಾಂ ನತ್ವಮರ್ಹಸಿ ।
ಸಪತ್ನೀವಚನಾದ್ವತ್ಸ ಹ್ಯಗತೇ ಸ್ತ್ವಂಗತಿರ್ಮಮ ॥ ೧೬ ॥

ಕ್ವ ಚ ತ್ವಂ ಪಂಚವರ್ಷೀಯಃ ಕ್ವ ಚೈತದ್ದಾರುಣಂ ತಪಃ ।
ನಿವರ್ತ್ಯತಾಂ ಮನಃ ಕಷ್ಟಾನ್ನಿರ್ಬಂಧಾತ್ಫಲವರ್ಜಿತಾತ್ ॥ ೧೭ ॥

ಕಾಲಃ ಕ್ರೀಡನಕಾನಾಂ ತೇ ತದಂತೇಧ್ಯಯನಸ್ಯ ತೇ ।
ತತಸ್ಸಮಸ್ತಭೋಗಾನಾಂ ತದಂತೇ ಚೇಷ್ಯತೇ ತಪಃ ॥ ೧೮ ॥

ಕಾಲಃ ಕ್ರೀಡನಕಾನಾಂ ಯಸ್ತವ ಬಾಲಸ್ಯ ಪುತ್ರಕ ।
ತಸ್ಮಿಂಸ್ತ್ವಮಿಚ್ಛಂಸ್ತಪಸೇ ವಿನಾಶಾಯಾತ್ಮನೋರತಃ ॥ ೧೯ ॥

ಮತ್ಪ್ರೀತಿಃ ಪರಮೋ ಧರ್ಮೋ ವಯೋವಸ್ಥಾ ಕ್ರಿಯಾಕ್ರಮಂ ।
ಅನುವರ್ತಸ್ವ ಮಾಂ ಮೋಹಾನ್ನಿವರ್ತ್ಯಾಸ್ಮಾದಧರ್ಮತಃ ॥ ೨೦ ॥

ಪರಿತ್ಯಜತಿ ವತ್ಸಾದ್ಯ ಯದ್ಯೇತನ್ನ ಭವಾಂಸ್ತಪಃ ।
ತ್ಯಕ್ಷ್ಯಾಮ್ಯಹಮಪಿ ಪ್ರಾಣಾಂಸ್ತತೋ ವೈ ಪಶ್ಯತಸ್ತವ ॥ ೨೧ ॥

ವ್ರತಗಳನ್ನು ಮಾಡಿ ನಿನ್ನನ್ನು ಮಗನನ್ನಾಗಿ ಪಡೆದಿರುವೆನು. ನೀನು ಸವತಿಯ ಮಾತಿನಿಂದ ಕೋಪವನ್ನು ಹೊಂದಿ ದಿಕ್ಕಿಲ್ಲದ ಈ ದೀನಳನ್ನು ಬಿಡಬಾರದು ನನಗೆ ನೀನೇ ದಿಕ್ಕಾಗಿರುವೆ.

೧೭-೨೧. ಐದು ವರ್ಷ ವಯಸ್ಸಿನ ನೀನೆಲ್ಲಿ! ಕ್ರೂರವಾದ ಈ ತಪಸ್ಸೆಲ್ಲಿ! ಕಷ್ಟವಾದ ಯಾವ ಫಲವೂ ಇಲ್ಲದ ಈ ಮನಸ್ಸಿನ ನಿರ್ಬಂಧವನ್ನು ಬಿಡು. ಈಗ ನಿನಗೆ ಬಾಲಕರೊಡನೆ ಆಟವಾಡುವ ಕಾಲವಾಗಿರುವುದು. ಮುಂದೆ ವಿದ್ಯಾಭ್ಯಾಸ ಕಾಲವು ಬರುವುದು. ಬಳಿಕ ಸಮಸ್ತ ಸುಖಗಳನ್ನೂ ಅನುಭವಿಸಿ ಕೊನೆಯ ವಯಸ್ಸಿನಲ್ಲಿ ತಪಸ್ಸನ್ನು ಮಾಡಬಹುದು. ಮಗನೇ ಆಟವಾಡುವ ಕಾಲವಾದ ಈ ಬಾಲ್ಯ ವಯಸ್ಸಿನಲ್ಲಿ ನೀನು ತಪಸ್ಸು ಮಾಡಬೇಕೆಂದಪೇಕ್ಷಿಸಿ ಆತ್ಮನಾಶವನ್ನು ಮಾಡಿಕೊಳ್ಳುತ್ತಿರುವೆ. ನಿನ್ನ ವಯಸ್ಸಿಗೆ ಅನುರೂಪವಾದ ಕಾರ್ಯಗಳನ್ನು ಕ್ರಮ

॥ ಶ್ರೀ ಪರಾಶರಃ ॥

ತಾಂ ಪ್ರಲಾಪವತೀಮೇವಂ ಬಾಷ್ಪಾವಿಲವಿಲೋಚನಾಂ ।
ಸಮಾಹಿತಮನಾ ವಿಷ್ಣೌ ಪಶ್ಯನ್ನಪಿ ನ ದೃಷ್ಟವಾನ್ ॥ ೨೨ ॥

ವತ್ಸ ವತ್ಸ ಸುಘೋರಾಣಿ ರಕ್ಷಾಂಸ್ಯೇತಾನಿ ಭೀಷಣೇ ।
ವನೇಭ್ಯುದ್ಯತ ಶಸ್ತ್ರಾಣಿ ಸಮಾಯಾಂತ್ಯಪಗಮ್ಯತಾಂ ॥ ೨೩ ॥

ಇತ್ಯುಕ್ತ್ವಾ ಪ್ರಯಯೌ ಸಾಥ ರಕ್ಷಾಂಸ್ಯಾವಿರ್ಬಭುಸ್ತತಃ ।
ಅಭ್ಯುದ್ಯತೋಗ್ರಶಸ್ತ್ರಾಣಿ ಜ್ವಾಲಾಮಾಲಾಕುಲೈರ್ಮುಖೈಃ ॥ ೨೪ ॥

ತತೋ ನಾದಾನತೀವೋಗ್ರಾನ್ ರಾಜಪುತ್ರಸ್ಯ ತೇ ಪುರಃ ।
ಮುಮುಚುರ್ದೀಪ್ತಶಸ್ತ್ರಾಣಿ ಭ್ರಾಮಯಂತೋ ನಿಶಾಚರಾಃ ॥ ೨೫ ॥

ಶಿವಾಶ್ಚ ಶತಶೋ ನೇದುಸ್ಸಜ್ವಾಲಾ ಕಬಳೈರ್ಮುಖೈಃ ।
ತ್ರಾಸಾಯ ತಸ್ಯ ಬಾಲಸ್ಯ ಯೋಗಯುಕ್ತಸ್ಯ ಸರ್ವತಃ ॥ ೨೬ ॥

ಹನ್ಯತಾಂ ಹನ್ಯತಾಮೇಷ ಛಿದ್ಯತಾಂ ಛಿದ್ಯತಾಮಯಂ ।
ಭಕ್ಷ್ಯತಾಂ ಭಕ್ಷ್ಯತಾಂ ಚಾಯಮಿತ್ಯೂಚುಸ್ತೇ ನಿಶಾಚರಾಃ ॥ ೨೭ ॥

ತತೋ ನಾನಾವಿಧಾನ್ ನಾದಾನ್ ಸಿಂಹೋಷ್ಟ್ರಮಕರಾನನಾಃ ।
ತ್ರಾಸಾಯ ರಾಜಪುತ್ರಸ್ಯ ನೇದುಸ್ತೇ ರಜನೀಚರಾಃ ॥ ೨೮ ॥

ವಾಗಿ ಮಾಡುತ್ತ ನನಗೆ ಸಂತೋಷವನ್ನುಂಟುಮಾಡುವುದು ನಿನ್ನ ಮುಖ್ಯವಾದ ಧರ್ಮವು. ನಿನ್ನ ವಯಸ್ಸಿಗೆ ತಕ್ಕ ಕಾರ್ಯಕ್ರಮವನ್ನು ಅನುಸರಿಸು. ಅಜ್ಞಾನದಿಂದುಂಟಾದ ಈ ಧರ್ಮವನ್ನು ಬಿಡು. ಪ್ರೀತಿಪಾತ್ರನಾದ ಪುತ್ರನೇ ಈ [illegible] ನೀನು ತಪಸ್ಸು ಮಾಡುವುದನ್ನು ಬಿಡದಿದ್ದರೆ ನಿನ್ನೆದುರಿಗೆ ನಾನು ಪ್ರಾಣತ್ಯಾಗವನ್ನು ಮಾಡುವೆನು" ಎಂದು ಹೇಳಿದಳು.

೨೨-೨೮ ಹೀಗೆ ಹೇಳಿಕೊಂಡು ಕಣ್ಣಿನಲ್ಲಿ ನೀರನ್ನು ಸುರಿಸುತ್ತ ಅಳುತ್ತಿರುವ ಅವಳನ್ನು ಧ್ರುವನು ನೋಡುತ್ತಿದ್ದರೂ ತನ್ನ ಮನಸ್ಸನ್ನು ವಿಷ್ಣುವಿನಲ್ಲಿಯೇ ಏಕಾ

ರಕ್ಷಾಂಸಿ ತಾನಿ ತೇ ನಾದಾಶ್ಚಿವಾಸ್ತ್ರಾಣ್ಯಾಯುಧಾನಿ ಚ ।
ಗೋವಿಂದಾಸಕ್ತಚಿತ್ತಸ್ಯ ಯಯುರ್ನೇಂದ್ರಿಯಗೋಚರಂ ॥ ೨೯ ॥

ಏಕಾಗ್ರಚೇತಾಸ್ಸತತಂ ವಿಷ್ಣುಮೇವಾತ್ಮಸಂಶ್ರಯಂ ।
ದೃಷ್ಟವಾನ್ ಪೃಥಿವೀನಾಥ ಪುತ್ರೋ ನಾನ್ಯಂ ಕಥಂಚನ ॥ ೩೦ ॥

ತತಸ್ಸರ್ವಾಸು ಮಾಯಾಸು ವಿನಷ್ಟಾಸು ಪುನಸ್ಸುರಾಃ ।
ಸಂಕ್ಷೋಭಂ ಪರಮಂ ಜಗ್ಮುಸ್ತತ್ಪರಾಭವಶಂಕಿತಾಃ ॥ ೩೧ ॥

ತೇ ಸಮೇತ್ಯ ಜಗದ್ಯೋನಿಮನಾದಿನಿಧನಂ ಹರಿಂ ।
ಶರಣ್ಯಂ ಶರಣಂ ಯಾತಾಸ್ತಪಸಾ ತಸ್ಯ ತಾಪಿತಾಃ ॥ ೩೨ ॥

ಗ್ರವಾಗಿ ನೆಲೆಗೊಳಿಸಿದ್ದುದರಿಂದ ನೋಡಲೇ ಇಲ್ಲ. ಆಗ ಅವಳು ಮಗನೇ! ಮಗನೇ ಭಯಂಕರರಾದ ರಾಕ್ಷಸರು ಈ ಕಾಡಿನಲ್ಲಿ ಆಯುಧಗಳನ್ನು ಹಿಡಿದುಕೊಂಡು ಬರುತ್ತಿರುವರು. ಇಲ್ಲಿಂದ ಬಿಟ್ಟು, ಬೇಗ ಹೋಗು, ಎಂದು ಹೇಳುತ್ತ ಹೊರಟು ಹೋದಳು. ಆ ಮೇಲೆ ರಾಕ್ಷಸರು ಆಯುಧಗಳನ್ನು ಹಿಡಿದು ಉರಿಯನ್ನುಗುಳು ತ್ತಿರುವ ಮುಖಗಳಿಂದ ಕೂಡಿ ರಾಜಪುತ್ರನೆದುರಿಗೆ ಬಂದು ಕ್ರೂರವಾದ ಧ್ವನಿಗಳನ್ನು ಮಾಡುತ್ತಾ ಹರಿತವಾದ ಆಯುಧಗಳನ್ನು ತಿರುಗಿಸಿ ಅವನ ಮೇಲೆ ಪ್ರಯೋಗಿಸಿದರು. ಯೋಗಿಯಾದ ಆ ಬಾಲಕನನ್ನು ಹೆದರಿಸಬೇಕೆಂದು ಸುತ್ತಲೂ ಅನೇಕ ನರಿಗಳು ಉರಿಯನ್ನುಗುಳುವ ಬಾಯಿಯಿಂದ ಕೂಗುತ್ತಿದ್ದುವು. ರಾಕ್ಷಸರು ಇವನನ್ನು ಕೊಲ್ಲಿರಿ! ಕೊಲ್ಲಿರಿ! ಸೀಳಿರಿ! ಸೀಳಿರಿ! ತಿನ್ನಿರಿ! ತಿನ್ನಿರಿ! ಎಂದು ಹೇಳುತ್ತಿದ್ದರು. ಸಿಂಹ, ಒಂಟೆ, ಮೊಸಳೆ, ಮುಂತಾದ ಮುಖಗಳಿಂದ ಕೂಡಿದ ರಾಕ್ಷಸರು ರಾಜ ಪುತ್ರನನ್ನು ಭಯಪಡಿಸುವುದಕ್ಕಾಗಿ ಬಗೆ ಬಗೆಯ ಧ್ವನಿಗಳಿಂದ ಕೂಗಿದರು.

೨೯-೩೦ ರಾಕ್ಷಸರೂ, ಅವರ ಧ್ವನಿಗಳೂ, ನರಿಗಳ ಕೂಗೂ, ಆಯುಧಗಳೂ ವಿಷ್ಣುವಿನಲ್ಲಿಯೇ ನೆಲಸಿದ ಮನಸ್ಸುಳ್ಳ ಆ ಬಾಲಕನ ಇಂದ್ರಿಯಗಳಿಗೆ ಗೋಚರ ವಾಗಲೇ ಇಲ್ಲ. ಆ ರಾಜಪುತ್ರನು ಏಕಾಗ್ರಚಿತ್ತದಿಂದ ಯಾವಾಗಲೂ ತನ್ನಲ್ಲಿಯೇ ವಿಷ್ಣುವನ್ನು ನೆಲೆಗೊಳಿಸಿ ಅವನನ್ನೇ ನೋಡುತ್ತಿದ್ದನು. ಮತ್ತೊಂದರ ಮೇಲೆ ಅವನ ಗಮನವಿರಲಿಲ್ಲ.

೩೧-೩೨ ದೇವತೆಗಳು ತಮ್ಮ ಮಾಯೆಯೆಲ್ಲವೂ ಫಲವಿಲ್ಲದೆ ನಾಶವಾಗುತ್ತಲು ಅವನ ತಪಸ್ಸನ್ನು ಕೆಡಿಸಲಾರದೆ ಸೋತು ಮತ್ತೆ ಚಾಂಚಲ್ಯವನ್ನು ಹೊಂದಿ

॥ ದೇವಾ ಊಚುಃ ॥

ದೇವದೇವ ಜಗನ್ನಾಥ ಪರೇಶ ಪುರುಷೋತ್ತಮ ।
ಧ್ರುವಸ್ಯ ತಪಸಾ ತಪ್ತಾಸ್ತ್ವಾಂ ವಯಂ ಶರಣಂ ಗತಾಃ ॥ ೩೩ ॥

ದಿನೇ ದಿನೇ ಕಲಾಲೇಶೈಃ ಶಶಾಂಕಃ ಪೂರ್ಯತೇ ಯಥಾ ।
ತಥಾಯಂ ತಪಸಾ ದೇವ ಪ್ರಯಾತ್ಯೃದ್ಧಿಮಹರ್ನಿಶಂ ॥ ೩೪ ॥

ಔತ್ತಾನಪಾದಿತಪಸಾ ವಯಮಿತ್ಥಂ ಜನಾರ್ದನ ।
ಭೀತಾಸ್ತ್ವಾಂ ಶರಣಂ ಯಾತಾಸ್ತಪಸಸ್ತಂ ನಿವರ್ತಯ ॥ ೩೫ ॥

ನ ವಿದ್ಮಃ ಕಿಂ ಸಶಕ್ರತ್ವಂ ಕಿಂ ಸೂರ್ಯತ್ವಮಭೀಪ್ಸತಿ ।
ವಿತ್ತಪಾಂಬುಪಸೋಮಾನಾಂ ಸಾಭಿಲಾಷಃ ಪದೇಷು ಕಿಂ ॥ ೩೬ ॥

ತದಸ್ಮಾಕಂ ಪ್ರಸೀದೇಶ ಹೃದಯಾಚ್ಛಲ್ಯಮುದ್ಧರ ।
ಉತ್ತಾನಪಾದತನಯಂ ತಪಸಸ್ಸನ್ನಿವರ್ತಯ ॥ ೩೭ ॥

ಅವರೆಲ್ಲರೂ ಒಟ್ಟಿಗೆ ಸೇರಿ ತಮ್ಮ ಪದವಿಯು ನಾಶವಾಗುವುದೆಂದು ಅವನ ತಪಸ್ಸಿನಿಂದ ಪೀಡಿತರಾಗಿ ಜಗತ್ತಿಗೆ ಕಾರಣನೂ, ಅನಾದಿಯಾದವನೂ, ನಾಶರಹಿತನೂ, ಸಮಸ್ತರನ್ನೂ ರಕ್ಷಿಸುವವನೂ ಆದ ಹರಿಯನ್ನು ಶರಣು ಹೊಂದಿದರು.

೩೩-೩೭ ದೇವತೆಗಳು "ಜಗತ್ತಿಗೆ ಒಡೆಯನಾದ ಪರಮ ಪುರುಷನಾದ ಪುರುಷೋತ್ತಮನೇ ನಾವು ಧ್ರುವನ ತಪೋಜ್ವಾಲೆಯಿಂದ ಸಂತಾಪವನ್ನು ಹೊಂದಿ ನಿನ್ನನ್ನು ಶರಣು ಹೊಂದಿರುವೆವು. ಪ್ರತಿದಿನವೂ ಚಂದ್ರನು ಕಾಂತಿಯಿಂದ ಪೂರ್ಣನಾಗುವಂತೆ ಈ ಧ್ರುವನು ತಪಸ್ಸಿನಿಂದ ಯಾವಾಗಲೂ ಅಭಿವೃದ್ಧಿಯಾಗುತ್ತಿರುವನು. ಉತ್ತಾನಪಾದರಾಯನ ವಗನ ತಪಸ್ಸಿಗೆ ಹೆದರಿ ನಾವು ನಿನ್ನನ್ನು ಮರೆಹೊಕ್ಕಿರುವೆವು. ಅವನು ತಪಸ್ಸು ಮಾಡುವುದನ್ನು ಬಿಡಿಸು. ಅವನು ದೇವೇಂದ್ರನಾಗಬೇಕೋ, ಚಂದ್ರ, ವರುಣ, ಕುಬೇರರ ಪದವಿಗಳಲ್ಲಿ ಅವನಿಗೆ ಯಾವುದು ಬೇಕಾಗಿದೆಯೊ, ನಾವರಿಯೆವು. ಆದುದರಿಂದ ನೀನು ನಮ್ಮಲ್ಲಿ ಪ್ರಸನ್ನನಾಗಿ ನಮ್ಮ ಮನಸ್ಸಿನಲ್ಲಿರುವ

॥ ಶ್ರೀ ಭಗವಾನುವಾಚ ॥

ನೇಂದ್ರತ್ವಂ ನಚ ಸೂರ್ಯತ್ವಂ ನೈವಾಂಬುಪಧನೇಶತಾಂ ।
ಪ್ರಾರ್ಥಯತ್ಯೇಷ ಯಂ ಕಾಮಂ ತಂ ಕರೋಮ್ಯಖಿಲಂ ಸುರಾಃ ॥ ೩೮ ॥

ಯಾತ ದೇವಾ ಯಥಾಕಾಮಂ ಸ್ವಸ್ಥಾನಂ ವಿಗತಜ್ವರಾಃ ।
ನಿವರ್ತಯಾಮ್ಯಹಂ ಬಾಲಂ ತಪಸ್ಯಾಸಕ್ತಮಾನಸಂ ॥ ೩೯ ॥

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತಾಸ್ತೇನ ದೇವೇನ ಪ್ರಣಮ್ಯ ತ್ರಿದಶಾಸ್ತತಃ ।
ಪ್ರಯಯುಸ್ಸ್ವಾನಿ ಧಿಷ್ಣ್ಯಾನಿ ಶತಕ್ರತುಪುರೋಗಮಾಃ ॥ ೪೦ ॥

ಭಗವಾನಪಿ ಸರ್ವಾತ್ಮಾ ತನ್ಮಯತ್ವೇನ ತೋಷಿತಃ ।
ಗತ್ವಾ ಧ್ರುವಮುವಾಚೇದಂ ಚತುರ್ಭುಜವಪುರ್ಹರಿಃ ॥ ೪೧

ಸಂದೇಹವೆಂಬ ಬಾಣವನ್ನು ಕಿತ್ತುಹಾಕಿ ಧ್ರುವನು ತಪಸ್ಸು ಮಾಡುವುದನ್ನು ಬಿಡಿಸಿ ನಮ್ಮನ್ನು ರಕ್ಷಿಸು" ಎಂದು ಸ್ತೋತ್ರ ಮಾಡಿದರು,

೩೮-೩೯ ಮಹಾಮಹಿಮನಾದ ನಾರಾಯಣನು "ದೇವತೆಗಳೇ ಈ ಧ್ರುವನು ಇಂದ್ರ, ವರುಣ, ಕುಬೇರರ ಅಧಿಕಾರವನ್ನಪೇಕ್ಷಿಸುವುದಿಲ್ಲ. ಅವನಿಗಿಷ್ಟವಾದ ಸಕಲ ಇಷ್ಟಾರ್ಥಗಳನ್ನೂ ನಾನು ಕೊಡುವೆನು ನೀವು ಮನಸ್ಸಿನಲ್ಲಿ ಸಂದೇಹ ಪಡದೆ ಹೊರಟುಹೋಗಿರಿ ತಪಸ್ಸಿನಲ್ಲಿ ಆಸಕ್ತವಾದ ಮನಸ್ಸುಳ್ಳ ಅವನನು ನಾನು ಅವನ ಇಷ್ಟವನ್ನು ನೆರವೇರಿಸಿ ಹಿಂದಿರುಗಿಸುವೆನು" ಎಂದು ಹೇಳಿದನು

೪೦-೪೧ ವಿಷ್ಣುವು ಹೇಳಿದ ಮಾತನ್ನು ಕೇಳಿ ಇಂದ್ರಾದಿ ದೇವತೆಗಳು ಅವನಿಗೆ ನಮಸ್ಕಾರ ಮಾಡಿ ತಂತಮ್ಮ ವಾಸಸ್ಥಾನವನ್ನು ಸೇರಿದರು. ಸರ್ವಾತ್ಮನಾದ ಭಗವಂತನು ತನ್ಮಯವಾದ ಮನಸ್ಸುಳ್ಳ ಧ್ರುವನ ತಪಸ್ಸಿಗೆ ಸಂತೋಷಪಟ್ಟು ಚತುರ್ಭುಜವುಳ್ಳ ಶರೀರವನ್ನು ಧರಿಸಿ ಧ್ರುವನ ಸಮೀಪಕ್ಕೆ ಹೋಗಿ ಮಾತನಾಡಿದನು.

॥ ಶ್ರೀ ಭಗವಾನುವಾಚ ॥

ಔತ್ತಾನಪಾದೇ ಭದ್ರಂ ತೇ ತಪಸಾ ಪರಿತೋಷಿತಃ ।
ವರದೋಽಹಮನುಪ್ರಾಪ್ತೋ ವರಂ ವರಯ ಸುವ್ರತ ॥ ೪೨ ॥

ಬಾಹ್ಯಾರ್ಥನಿರಪೇಕ್ಷಂ ತೇ ಮಯಿ ಚಿತ್ತಂ ಯದಾಹಿತಂ ।
ತುಷ್ಟೋಽಹಂ ಭವತಸ್ತೇನ ತದ್ವೃಣೀಷ್ವ ವರಂ ವರಂ ॥ ೪೩ ॥

॥ ಶ್ರೀ ಪರಾಶರ ಉವಾಚ ॥

ಶ್ರುತ್ವೇತ್ಥಂ ಗದಿತಂ ತಸ್ಯ ದೇವದೇವಸ್ಯ ಬಾಲಕಃ ।
ಉನ್ಮೀಲಿತಾಕ್ಷೋ ದದೃಶೇ ಧ್ಯಾನದೃಷ್ಟಿರ್ಹರಿಂ ಪುರಃ ॥ ೪೪ ॥

ಶಂಖಚಕ್ರಗದಾಶಾರ್ಙ್ಗವರಾಸಿಧರಮಚ್ಯುತಂ ।
ಕಿರೀಟಿನಂ ಸಮಾಲೋಕ್ಯ ಜಗಾಮ ಶಿರಸಾ ಮಹೀಂ ॥ ೪೫ ॥

ರೋಮಾಂಚಿತಾಂಗಸ್ಸಹಸಾ ಸಾಧ್ವಸಂ ಪರಮಂ ಗತಃ ।
ಸ್ತವಾಯ ದೇವದೇವಸ್ಯ ಸ ಚಕ್ರೇ ಮಾನಸಂ ಧ್ರುವಃ ॥ ೪೬ ॥

೪೨-೪೩ ಭಗವಂತನು "ಉತ್ತಾನಪಾದರಾಯನ ಮಗನಾದ ಧ್ರುವನೇ ನಿನಗೆ ಜಯವಾಗಲಿ, ನಿನ್ನ ತಪಸ್ಸಿಗೆ ನಾನು ಸಂತೋಷಪಟ್ಟೆನು. ವರವನ್ನು ಕೊಡುವುದಕ್ಕಾಗಿ ನಾನು ಬಂದಿರುವೆನು. ಬೇಕಾದ ವರವನ್ನು ಕೇಳು. ಹೊರಗಿನ ಪದಾರ್ಥಗಳಲ್ಲಿ ಅಪೇಕ್ಷೆಯಿಲ್ಲದೆ ನಿನ್ನ ಮನಸ್ಸನ್ನು ನನ್ನಲ್ಲಿಯೇ ಇಟ್ಟುದರಿಂದ ನಾನು ಸಂತುಷ್ಟನಾದೆನು. ಶ್ರೇಷ್ಠವಾದ ವರವನ್ನು ಕೇಳು. ಕೊಡುವೆನು" ಎಂದನು.

೪೪-೪೬ ದೇವದೇವನಾದ ನಾರಾಯಣನ ಈ ಮಾತನ್ನು ಕೇಳಿ ಬಾಲಕನಾದ ಧ್ರುವನು ಕಣ್ಣುಬಿಟ್ಟು ನೋಡಿ ತನ್ನ ಧ್ಯಾನದೃಷ್ಟಿಗೆ ಗೋಚರನಾಗಿದ್ದ ಶಂಖ, ಚಕ್ರ, ಗದಾ, ಶಾರ್ಙ, ಧನುಸ್ಸು, ಕತ್ತಿ ಇವುಗಳನ್ನು ಧರಿಸಿದ ಕಿರೀಟವನ್ನಿಟ್ಟುಕೊಂಡಿದ್ದ ಹರಿಯನ್ನು ಪ್ರತ್ಯಕ್ಷವಾಗಿ ಕಂಡು, ಭೂಮಿಯ ಮೇಲೆ ನಮಸ್ಕಾರ

ಕಿಂ ವದಾಮಿ ಸ್ತುತಾವಸ್ಯ ಕೇನೋಕ್ತೇನಾಸ್ಯ ಸಂಸ್ತುತಿಃ ।
ಇತ್ಯಾಕುಲಮತಿರ್ದೇವಂ ತಮೇವ ಶರಣಂ ಯಯೌ ॥ ೪೭ ॥

॥ ಧ್ರುವ ಉವಾಚ ॥

ಭಗವನ್ ಯದಿ ಮೇ ತೋಷಂ ತಪಸಾ ಪರಮಂ ಗತಃ ।
ಸ್ತೋತುಂ ತ್ವಾಮಹಮಿಚ್ಛಾಮಿ ತತ್ರ ಪ್ರಜ್ಞಾಂ ಪ್ರಯಚ್ಛ ಮೇ ॥ ೪೮ ॥

ಬ್ರಹ್ಮಾದ್ಯೈರ್ವೇದತತ್ತ್ವಜ್ಞೈರ್ಜ್ಞಾಯತೇ ಯಸ್ಯ ನೋ ಗತಿಃ ।
ತಂ ತ್ವಾಂ ಕಥಮಹಂ ದೇವ ಸ್ತೋತುಂ ಶಕ್ಷ್ಯಾಮಿ ಬಾಲಕಃ ॥
ತದ್ಭಕ್ತಿಪ್ರವಣಂ ಹ್ಯೇತತ್ಪರಮೇಶ್ವರಮನ್ಮನಃ ।
ಸ್ತೋತುಂ ಕಾಮಯತೇ ವಿಷ್ಣೋ ತತ್ರ ಪ್ರಜ್ಞಾಂ ಪ್ರಯಚ್ಛ ಮೇ ॥

ಮಾಡಿ ಮೈಯಲ್ಲಿ ರೋಮಾಂಚವಾಗುತ್ತಿರಲು ವಿಶೇಷವಾಗಿ ಭಯಪಡುತ್ತ ದೇವ ದೇವನಾದ ಆ ವಿಷ್ಣುವನ್ನು ಸ್ತೋತ್ರಮಾಡಬೇಕೆಂದು ಮನಸ್ಸು ಮಾಡಿದನು.

೪೭-೪೮ ಧ್ರುವನು "ಈ ದೇವನನ್ನು ಸ್ತೋತ್ರಮಾಡಲು ಏನೆಂದು ಹೇಳಲಿ ! ಈ ದೇವನನ್ನು ಸರ್ವಾತ್ಮ ರೂಪದಲ್ಲಿ ಯಾರು ಸ್ತೋತ್ರ ಮಾಡಿರುವರು , ಎಂದು ವ್ಯಾಕುಲಪಡುತ್ತ ಆ ದೇವನನ್ನೇ ಶರಣು ಹೊಂದಿದನು. ಮಹಾಮಹಿಮನೇ ನನ್ನ ತಪಸ್ಸಿನಿಂದ ನೀನು ಸಂತೋಷಪಟ್ಟಿದ್ದರೆ ನಿನ್ನನ್ನು ಸ್ತೋತ್ರಮಾಡಬೇಕೆಂದಿರುವ ನನಗೆ ಆ ಶಕ್ತಿಯನ್ನು ಕೊಡು" (ಅಧಿಕಪಾಠ ಶ್ಲೋಕಗಳ ತಾತ್ಪರ್ಯ:- ವೇದಗಳ ತತ್ವವನ್ನು ತಿಳಿದ ಬ್ರಹ್ಮಾದಿ ದೇವತೆಗಳು ಯಾವ ಪರಮಾತ್ಮನ ತತ್ವವನ್ನು ತಿಳಿಯಲಾರರೋ ಅಂತಹ ನಿನ್ನನ್ನು ಬಾಲಕನಾದ ನಾನು ಸ್ತೋತ್ರಮಾಡಲು ಹೇಗೆ ಶಕ್ತನಾಗುವೆನು. ಪರಮೇಶ್ವರನೇ ನನ್ನ ಮನಸ್ಸು ನಿನ್ನ ವಿಷಯದಲ್ಲಿ ಭಕ್ತಿಯಿಂದ ತುಂಬಿ ಸ್ತೋತ್ರ ಮಾಡಬೇಕೆಂದು ಅಪೇಕ್ಷಿಸುತ್ತಿರುವುದು. ಸರ್ವವ್ಯಾಪಿಯಾದ ನೀನು ಆ ವಿಷಯದಲ್ಲಿ ನನಗೆ ಜ್ಞಾನವನ್ನು ಅನುಗ್ರಹಿಸು.) ಎಂದು ಪ್ರಾರ್ಥಿಸಿದನು.

॥ ಶ್ರೀ ಪರಾಶರ ಉವಾಚ ॥

ಶಂಖಪ್ರಾಂತೇನ ಗೋವಿಂದಸ್ತಂ ಪಸ್ಪರ್ಶ ಕೃತಾಂಜಲಿಂ ।
ಉತ್ತಾನಪಾದತನಯಂ ದ್ವಿಜವರ್ಯ ಜಗತ್ಪತಿಃ ॥ ೪೯ ॥

ತತಃ ಪ್ರಸನ್ನವದನಃ ತತ್ಕ್ಷಣಾನ್ನೃಪನಂದನಃ ।
ತುಷ್ಟಾವ ಪ್ರಣತೋ ಭೂತ್ವಾ ಭೂತಧಾತಾರಮಚ್ಯುತಂ ॥ ೫೦ ॥

॥ ಧ್ರುವ ಉವಾಚ ॥

ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ ।
ಭೂತಾದಿರಾದಿಪ್ರಕೃತಿರ್ಯಸ್ಯ ರೂಪಂ ನತೋಽಸ್ಮಿ ತಂ ॥ ೫೧ ॥

೪೯-೫೦ ಬ್ರಾಹ್ಮಣಶ್ರೇಷ್ಠನಾದ ಮೈತ್ರೇಯನೇ ಮಹಾವಿಷ್ಣುವು ವೇದಮಯವಾದ ತನ್ನ ಶಂಖದ ವೇದಾಂತ ಭಾಗವಾದ ಒಂದು ತುದಿಯಿಂದ ಕೈಮುಗಿದುಕೊಂಡು ನಿಂತಿದ್ದ ಧ್ರುವನನ್ನು ಮುಟ್ಟಿದನು. ಆ ಕ್ಷಣವೇ ರಾಜಪುತ್ರನು ಜ್ಞಾನಪ್ರಾಪ್ತಿಯಿಂದ ಪ್ರಕಾಶವಾದ ಮುಖವುಳ್ಳವನಾಗಿ ಸಮಸ್ತ ಭೂತಗಳನ್ನೂ ಸೃಷ್ಟಿಮಾಡಿದ ನಾಶರಹಿತನಾದ ಹರಿಯನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು

॥ ಧ್ರುವನ ಸ್ತೋತ್ರವು ॥

೫೧ ಭೂಮಿ, ನೀರು, ಅಗ್ನಿ, ವಾಯು, ಆಕಾಶ, ಎಂಬ ಪಂಚಭೂತಗಳೂ, ಪಂಚತನ್ಮಾತ್ರೆಗಳೂ ಮನಸ್ಸಿನೊಡನೆ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಕೂಡಿ ಹನ್ನೊಂದು ಇಂದ್ರಿಯಗಳೂ, ಬುದ್ಧಿಯೂ, ಭೂತಾದಿಯಾದ ಅಹಂಕಾರವೂ ಮೂಲಪ್ರಕೃತಿಯೂ ಸೇರಿ ಇಪ್ಪತ್ತನಾಲ್ಕು ತತ್ವಗಳೂ ಯಾವ ದೇವನ ಸ್ವರೂಪಗಳೋ ಆ ದೇವನಿಗೆ ನಮಸ್ಕಾರ ಮಾಡುವೆನು.

ಶುದ್ಧಸ್ಸೂಕ್ಷ್ಮೋಽಖಿಲವ್ಯಾಪೀ ಪ್ರಧಾನಾತ್ಪರತಃ ಪುಮಾನ್ ।
ಯಸ್ಯ ರೂಪಂ ನಮಸ್ತಸ್ಮೈ ಪುರುಷಾಯ ಗುಣಾತ್ಮನೇ ॥ ೫೨ ॥
ಭೂತಾದೀನಾಂ ಸಮಸ್ತಾನಾಂ ಗಂಧಾದೀನಾಂ ಚ ಶಾಶ್ವತಃ ।

ಬುದ್ಧ್ಯಾದೀನಾಂ ಪ್ರಧಾನಸ್ಯ ಪುರುಷಸ್ಯ ಚ ಯಃ ಪರಃ ॥ ೫೩ ॥
ತಂ ಬ್ರಹ್ಮಭೂತಮಾತ್ಮಾನಮಶೇಷ ಜಗತಃ ಪತಿಂ ।

ಪ್ರಪದ್ಯೇ ಶರಣಂ ಶುದ್ಧಂ ತ್ವದ್ರೂಪಂ ಪರಮೇಶ್ವರ ॥ ೫೪ ॥
ಬೃಹತ್ತ್ವಾದ್ಬೃಂಹಣತ್ವಾಚ್ಚ ಯದ್ರೂಪಂ ಬ್ರಹ್ಮಸಂಜ್ಞಿತಂ ।

ತಸ್ಮೈ ನಮಸ್ತೇ ಸರ್ವಾತ್ಮನ್ ಯೋಗಿಚಿಂತ್ಯಾವಿಕಾರವತ್ ॥ ೫೫ ॥
ಸಹಸ್ರಶೀರ್ಷಾ ಪುರುಷಸ್ಸಹಸ್ರಾಕ್ಷಸ್ಸಹಸ್ರಪಾತ್ ।

---

೫೨ ಪರಿಶುದ್ಧನೂ, ಸೂಕ್ಷ್ಮನೂ, ಸರ್ವವ್ಯಾಪಿಯೂ, ಪ್ರಕೃತಿಯನ್ನೂ ನಿಯಮನ ಮಾಡುವ ಪುರುಷನೂ, ಗುಣಗಳಿಗೆ ಸಾಕ್ಷಿಸ್ವರೂಪನೂ ಆದ ಪುರುಷನಿಗೆ ನಮಸ್ಕಾರವು.

೫೩-೫೪ ಪಂಚ ಭೂತಗಳಿಗೂ, ಗಂದಾದಿ ಪಂಚತನ್ಮಾತ್ರಗಳಿಗೂ, ಮನಸ್ಸೇ ಮುಂತಾದ ಇಂದ್ರಿಯಗಳಿಗೂ, ಬುದ್ಧಿ, ಅಹಂಕಾರ, ಪ್ರಕೃತಿ ಜೀವರಿಗೂ ಸಾಕ್ಷಿಸ್ವರೂಪನಾಗಿ ಶ್ರೇಷ್ಠನಾಗಿರುವ ಸಮಸ್ತ ಜಗತ್ತಿಗೂ ಸ್ವಾಮಿಯಾಗಿ ಪರಬ್ರಹ್ಮನೆಂದೂ, ಪರಮಾತ್ಮನೆಂದೂ, ಪರಮೇಶ್ವರನೆಂದೂ ಪ್ರಸಿದ್ಧನಾದ ಶುದ್ಧಸ್ವರೂಪನಾದ ನಿನ್ನನ್ನು ಶರಣುಹೊಂದಿರುವೆನು.

೫೫ ಸರ್ವಗತನಾಗಿ ಸಮಸ್ತವನ್ನೂ ಅಭಿವೃದ್ಧಿಪಡಿಸುತ್ತಿರುವುದರಿಂದ ಬ್ರಹ್ಮನೆಂಬ ಹೆಸರನ್ನು ಪಡೆದು ನಿರ್ವಿಕಾರಿಯಾಗಿ ಸರ್ವಾತ್ಮನಾಗಿರುವ ಯೋಗಿಗಳ ಧ್ಯಾನಗೋಚರವಾದ ನಿನ್ನ ಸ್ವರೂಪಕ್ಕೆ ನಮಸ್ಕಾರ ಮಾಡುವೆನು. ಎಂದು ಮುಂದೆ ಪುರುಷಸೂಕ್ತದ ಅರ್ಥವನ್ನು ಪ್ರಕಾಶಪಡಿಸಿ ಸ್ತೋತ್ರಮಾಡುವನು.

ಸರ್ವವ್ಯಾಪೀ ಭುವಸ್ಪರ್ಶಾದತ್ಯತಿಷ್ಠದ್ದಶಾಂಗುಲಂ ॥ ೫೬ ॥
ಯದ್ಭೂತಂ ಯಚ್ಚ ವೈ ಭವ್ಯಂ ಪುರುಷೋತ್ತಮ ತದ್ಭವಾನ್ ।
ತ್ವತ್ತೋ ವಿರಾಟ್ಸ್ವರಾಟ್ಸಮ್ರಾಟ್ ತ್ವತ್ತಶ್ಚಾಪ್ಯಧಿಪೂರುಷಃ ॥ ೫೭ ॥
ಅತ್ಯರಿಚ್ಯತ ಸೋಽಧಶ್ಚ ತಿರ್ಯಗೂರ್ಧ್ವಂ ಚ ವೈ ಭುವಃ ।
ತ್ವತ್ತೋ ವಿಶ್ವಮಿದಂ ಜಾತಂ ತ್ವತ್ತೋ ಭೂತಂ ಭವಿಷ್ಯತಿ ॥ ೫೮ ॥
ತ್ವದ್ರೂಪಧಾರಿಣಶ್ಚಾಂತಸ್ಸರ್ವಭೂತಮಿದಂ ಜಗತ್ ।
ತ್ವತ್ತೋ ಯಜ್ಞಸ್ಸರ್ವಹುತಃ ಪೃಷದಾಜ್ಯಂ ಪಶುರ್ದ್ವಿಧಾ ॥ ೫೯ ॥
ತ್ವತ್ತೋ ಋಚೋಽಥ ಸಾಮಾನಿ ತ್ವತ್ತಶ್ಛಂದಾಂಸಿ ಜಜ್ಞಿರೇ ।
ತ್ವತ್ತೋ ಯಜೂಂಷ್ಯಜಾಯಂತ ತ್ವತ್ತೋಽಶ್ವಾಶ್ಚೈಕತೋದತಃ ॥ ೬೦ ॥

೫೬-೫೭ ಅನೇಕ ಶಿರಸ್ಸು, ಅನೇಕ ಕಣ್ಣುಗಳು, ಅನೇಕ ಪಾದಗಳು ಉಳ್ಳ ವಿಶ್ವರೂಪನಾಗಿ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿ ಅದನ್ನು ಮೀರಿ ಎಲ್ಲೆಯಿಲ್ಲದೆ ಇರುವೆ. ಹಿಂದೆ ಸೃಷ್ಟಿಯಾದ, ಮುಂದೆ ಸೃಷ್ಟಿಯಾಗುವ ಜಗತ್ತೆಲ್ಲ ಪುರುಷೋತ್ತಮನಾದ ನಿನ್ನ ಸ್ವರೂಪವೇ ಆಗಿರುವುದು. ವಿರಾಟ್ ಎಂಬ ಬ್ರಹ್ಮನೂ, ಸಾಮ್ರಾಟ್ ಎಂಬ ಮನುವೂ ಇವರಿಗೆ ಆಶ್ರಯನಾದ ಪುರುಷನೂ ನಿನ್ನಿಂದಲೇ ವ್ಯಕ್ತರಾಗಿರುವರು

೫೮ ನಿನ್ನಿಂದಲೇ ಈ ಜಗತ್ತು ಹುಟ್ಟಿದುದರಿಂದ ಈ ಭೂಮಿಯ ಕೆಳಗೂ, ಮೇಲೂ, ಮಧ್ಯದಲ್ಲಿಯೂ ನೀನೇ ವ್ಯಾಪಿಸಿರುವೆ. ನಿನ್ನಿಂದಲೇ ಈ ಪ್ರಪಂಚವು ಹುಟ್ಟಿತು, ಮುಂದೆ ಹುಟ್ಟುವುದು.

೫೯-೬೦ ನಿನ್ನ ಸ್ವರೂಪವಾದ ಈ ಬ್ರಹ್ಮಾಂಡದೊಳಗೆ ಸಮಸ್ತ ಪ್ರಾಣಿಗಳಿಂದ ಕೂಡಿದ ಈ ಜಗತ್ತು ಇರುವುದು. ಪುರೋಡಾಶವೇ ಮುಂತಾದ ಸಮಸ್ತ ದ್ರವ್ಯಗಳನ್ನೂ ಹೋಮ ಮಾಡತಕ್ಕ ಯಜ್ಞವೂ, ಪೃಷದಾಜ್ಯವೆಂಬ ಮೊಸರಿನೊಡನೆ ಕೂಡಿದ ತುಪ್ಪವೂ ಗ್ರಾಮ್ಯಾರಣ್ಯರೂಪವಾದ ಎರಡು ಬಗೆಯ ಪಶುಗಳೂ ನಿನ್ನಿಂದಲೇ ಉತ್ಪತ್ತಿಯಾಗಿರುವುವು. ನಿನ್ನಿಂದಲೇ ಋಗ್ವೇದ, ಯಜುರ್ವೇದ,

ಗಾವಸ್ತ್ವತ್ತಸ್ಸಮುದ್ಭೂತಾಸ್ತ್ವತ್ತೋಜಾ ಅವಯೋ ಮೃಗಾಃ ।
ತ್ವನ್ಮುಖಾದ್ಬ್ರಾಹ್ಮಣಾ ಬಾಹ್ವೋಸ್ತ್ವತ್ತಃ ಕ್ಷತ್ರಮಜಾಯತ ॥ ೬೧ ॥

ವೈಶ್ಯಾಸ್ತವೋರುಜಾಶ್ಶೂದ್ರಾಸ್ತವ ಪದ್ಭ್ಯಾಂ ಸಮುದ್ಗತಾಃ ।
ಅಕ್ಷ್ಣೋಸ್ಸೂರ್ಯೋನಿಲಃ ಪ್ರಾಣಾಚ್ಚಂದ್ರಮಾ ಮನಸಸ್ತವ ॥ ೬೨ ॥

ಪ್ರಾಣೋಂತಸ್ಸುಷಿರಾಜ್ಜಾತೋ ಮುಖಾದಗ್ನಿರಜಾಯತ ।
ನಾಭಿತೋ ಗಗನಂ ದ್ಯೌಶ್ಚ ಶಿರಸಸ್ಸಮವರ್ತತ ॥ ೬೩ ॥

ದಿಶಶ್ಶ್ರೋತ್ರಾತ್ಕ್ಷಿತಿಃ ಪದ್ಭ್ಯಾಂ ತ್ವತ್ತಸ್ಸರ್ವಮಭೂದಿದಂ ॥ ೬೪ ॥
ನ್ಯಗ್ರೋಧಸ್ಸುಮಹಾನಲ್ಪೇ ಯಥಾ ಬೀಜೇ ವ್ಯವಸ್ಥಿತಃ ।

ಸಂಯಮೇ ವಿಶ್ವಮಖಿಲಂ ಬೀಜಭೂತೇ ತಥಾ ತ್ವಯಿ ॥ ೬೫ ॥

ಸಾಮವೇದಗಳೂ, ಗಾಯತ್ರಿಯೇ ಮುಂತಾದ ಛಂದಸ್ಸುಗಳೂ, ಎರಡು ಕಡೆಯೂ ಹುಲ್ಲುಗಳುಳ್ಳ ಕುದುರೆಗಳೂ, ಒಂದೇಕಡೆ ಹಲ್ಲುಗಳುಳ್ಳ ಗೋವುಗಳೂ, ಆಡುಗಳೂ, ಕುರಿಗಳೂ, ಮೃಗಗಳೂ, ಹುಟ್ಟಿದುವು. ನಿನ್ನ ಮುಖದಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ ಹುಟ್ಟಿದರು. ಕಣ್ಣುಗಳಿಂದ ಸೂರ್ಯನೂ, ಪ್ರಾಣದಿಂದ ವಾಯುವೂ, ಮನಸ್ಸಿನಿಂದ ಚಂದ್ರನೂ ಹುಟ್ಟಿದರು. ನಿನ್ನ ಶರೀರದೊಳಗಿನ ರಂಧ್ರದಿಂದ ಪ್ರಾಣವ್ಯಕ್ತಿಯುಂಟಾಯಿತು. ಬಾಯಿಯಿಂದ ಅಗ್ನಿಯೂ, ಹೊಕ್ಕುಳಿನಿಂದ ಆಕಾಶವೂ, ತಲೆಯಿಂದ ಸ್ವರ್ಗವೂ, ಕಿವಿಯಿಂದ ದಿಕ್ಕುಗಳೂ, ಪಾದಗಳಿಂದ ಭೂಮಿಯೂ ಹುಟ್ಟಿದುವು. ಇವೆಲ್ಲವೂ ನಿನ್ನಿಂದಲೇ ವ್ಯಕ್ತವಾದುವು.

೬೫-೬೬ ಅತ್ಯಂತ ಸಣ್ಣದಾದ ಆಲದ ಬೀಜದಲ್ಲಿ ದೊಡ್ಡ ಆಲದ ಮರವು ಹೇಗಿರುವುದೋ ಹಾಗೆ ಸಂಹಾರ ಕಾಲದಲ್ಲಿ ಈ ಜಗತ್ತೆಲ್ಲವೂ ಬೀಜಸ್ವರೂಪನಾದ ನಿನ್ನಲ್ಲಿ ಅಡಗಿರುವುದು. ಬೀಜವು ಮೊಳಕೆಯಾಗಿ ದೊಡ್ಡ ಆಲದ ಮರವಾಗುವಂತೆ ನೀನು ಸೃಷ್ಟಿಮಾಡಿದ ಜಗತ್ತು ವಿಸ್ತಾರವಾಗುವುದು. ಬಾಳೆಯ ಗಿಡವು ಎಳೆಯ

ಬೀಜಾದಂಕುರಸಂಭೂತೋ ನ್ಯಗ್ರೋಧಸ್ಸಮುಚ್ಛ್ರಿತಃ
ವಿಸ್ತಾರಂ ಚ ಯಥಾ ಯಾತಿ ತ್ವಯಾ ಸೃಷ್ಟಂ ತಥಾ ಜಗತ್ ॥ ೬೬ ॥

ಯಥಾ ಹಿ ಕದಲೀ ನಾನ್ಯಾ ತ್ವಕ್ಪತ್ರಾದಥ ದೃಶ್ಯತೇ ।
ಏವಂ ವಿಶ್ವಸ್ಯ ನಾನ್ಯಸ್ತ್ವಂ ತ್ವತ್ಸ್ಥಾಯೀಶ್ವರ ದೃಶ್ಯತೇ ॥ ೬೭ ॥

ಹ್ಲಾದಿನೀ ಸಂಧಿನೀ ಸಂವಿತ್ತ್ವಯ್ಯೇಕಾ ಸರ್ವಸಂಸ್ಥಿತಾ ।
ಹ್ಲಾದತಾಪಕರೀ ಮಿಶ್ರಾ ತ್ವಯಿ ನೋ ಗುಣವರ್ಜಿತೇ ॥ ೬೮ ॥

ಪೃಥಗ್ಭೂತೈಕಭೂತಾಯ ಭೂತಭೂತಾಯ ತೇ ನಮಃ ।
ಪ್ರಭೂತಭೂತರೂಪಾಯ ತುಭ್ಯಂ ಭೂತಾತ್ಮನೇ ನಮಃ ॥ ೬೯ ॥

ವ್ಯಕ್ತಂ ಪ್ರಧಾನಪುರುಷೌ ವಿರಾಟ್ಸಮ್ರಾಟ್ಸ್ವರಾಟ್ತಥಾ ।
ವಿಭಾವ್ಯತೇಂತಃಕರಣೇ ಪುರುಷೇಷ್ವಕ್ಷಯೋ ಭವಾನ್ ॥ ೭೦ ॥

ದಾಗಿದ್ದಾಗ ಇದ್ದ ಎಲೆ ಮತ್ತು ತೊಗಟೆಗಳು ಬಲಿತ ಮೇಲೂ ಅವೇ ಇರುವಂತೆ ಸರ್ವ ನಿಯಾಮಕನಾದ ನಿನ್ನಲ್ಲಿರುವ (ನೀನು ಸೃಷ್ಟಿಸಿದ) ಜಗತ್ತು ನಿನ್ನ ಸ್ವರೂಪವೇ ಆಗಿರುವುದು. ನಿನಗಿಂತ ಬೇರೆಯಾದುದಲ್ಲ. ಸಮಸ್ತಕ್ಕೂ ಆಶ್ರಯರೂಪನಾದ ನಿನ್ನಲ್ಲಿ ಸಂತತವಾಗಿ ಆನಂದ ಸ್ವರೂಪವಾದ ಜ್ಞಾನವು ಇರುವುದು. ನೀನು ತ್ರಿಗುಣಗಳಿಲ್ಲದವನಾದುದರಿಂದ ಸತ್ವಗುಣದಿಂದ ಸಂತೋಷವನ್ನೂ, ತಮೋಗುಣದಿಂದ ದುಃಖವನ್ನೂ, ರಜೋಗುಣದಿಂದ ಸುಖ ದುಃಖಗಳನ್ನೂ ಉಂಟುಮಾಡುವ ಜ್ಞಾನವು ನಿನ್ನಲ್ಲಿರುವುದಿಲ್ಲ.

೬೯. ಕಾರ್ಯವಾಗಿ ಅನೇಕ ರೂಪವಾಗಿ ಕಾರಣವಾಗಿ ಒಂದೇ ರೂಪವಾಗಿಯೂ, ಸೂಕ್ಷ್ಮಭೂತ ಸ್ವರೂಪನಾಗಿಯೂ, ಮಹಾಭೂತ ಸ್ವರೂಪನಾಗಿಯೂ, ಚರಾಚರ ಪ್ರಾಣಿರೂಪನಾಗಿಯೂ, ಇರುವ ನಿನಗೆ ನಮಸ್ಕಾರವು.

೭೦-೭೪. ಯೋಗಿಗಳು ತಮ್ಮ ಅಂತಃಕರಣದಲ್ಲಿ ನಿನ್ನನ್ನು ಪ್ರಕೃತಿ, ಪುರುಷ, ವಿರಾಟ್, ಸಮ್ರಾಟ್ ಎಂಬುದಾಗಿಯೂ, ನಾಶವಾಗತಕ್ಕ ಜೀವರುಗಳಲ್ಲಿ

ಸರ್ವಸ್ಮಿನ್ ಸರ್ವಭೂತಸ್ತ್ವಂ ಸರ್ವಸ್ಸರ್ವಸ್ವರೂಪಧೃಕ್ ।
ಸರ್ವಂ ತ್ವತ್ತಸ್ತತಶ್ಚ ತ್ವಂ ನಮಸ್ಸರ್ವಾತ್ಮನೇಽಸ್ತು ತೇ ॥ ೭೧ ॥

ಸರ್ವಾತ್ಮಕೋಽಸಿ ಸರ್ವೇಶ ಸರ್ವಭೂತಸ್ಥಿತೋ ಯತಃ ।
ಕಥಯಾಮಿ ತತಃ ಕಿಂ ತೇ ಸರ್ವಂ ವೇತ್ಸಿ ಹೃದಿ ಸ್ಥಿತಂ ॥ ೭೨ ॥

ಸರ್ವಾತ್ಮನ್ ಸರ್ವಭೂತೇಶ ಸರ್ವಸತ್ತ್ವಸಮುದ್ಭವ ।
ಸರ್ವಭೂತೋ ಭವಾನ್ವೇತ್ತಿ ಸರ್ವಸತ್ತ್ವ ಮನೋಗತಂ ॥ ೭೩ ॥

ಯೋ ಮೇ ಮನೋರಥೋ ನಾಥ ಸಫಲಸ್ಸತ್ವಯಾ ಕೃತಃ ।
ತಪಶ್ಚ ತಪ್ತಂ ಸಫಲಂ ಯದ್ದೃಷ್ಟೋಽಸಿ ಜಗತ್ಪತೇ ॥ ೭೪ ॥

ನಾಶರಹಿತನಾಗಿ ಇರುವನನ್ನಾಗಿಯೂ ಭಾವಿಸುತ್ತಾರೆ. ನೀನು ದೇವಾದಿ ಶರೀರದಲ್ಲಿ ಕ್ಷೇತ್ರಜ್ಞ (ಜೀವ) ರೂಪದಿಂದಲೂ ಕ್ಷೇತ್ರ (ಶರೀರ) ರೂಪದಿಂದಲೂ ಇರುವುದರಿಂದ ಎಲ್ಲವೂ ನಿನ್ನಿಂದಲೇ ಉತ್ಪತ್ತಿಯಾಯಿತು. ಆ ಕಾರಣದಿಂದ ನೀನು ಸರ್ವಾತ್ಮನಾಗಿರುವೆ ನಿನಗೆ ನಮಸ್ಕಾರವು. ಸರ್ವೇಶ್ವರನೇ ನೀನು ಸಮಸ್ತ ಭೂತಗಳಲ್ಲಿಯೂ ಇದ್ದು ಸರ್ವಾತ್ಮನಾಗಿರುವದರಿಂದ ಎಲ್ಲರ ಮನಸ್ಸಿನಲ್ಲಿರುವುದನ್ನೂ ತಿಳಿದಿರುವೆ. ಎಂದಮೇಲೆ ನಾನು ಹೇಳುವದೇನಿರುವದು. ಸರ್ವಾತ್ಮನೇ ನೀನು ಸಮಸ್ತ ಪ್ರಾಣಿಗಳಿಗೂ ಉತ್ಪತ್ತಿ ಕಾರಣನಾಗಿ ಅವುಗಳಿಗೆ ಸ್ವಾಮಿಯಾಗಿರುವುದರಿಂದ ಸಮಸ್ತ ಪ್ರಾಣಿಗಳ ಇಷ್ಟಾರ್ಥವೇನೆಂಬುದನ್ನು ತಿಳಿದಿರುವೆ. ಸ್ವಾಮಿಯೇ ನಿನ್ನನ್ನು ಸ್ತೋತ್ರ ಮಾಡಬೇಕೆಂಬ ನನ್ನ ಇಷ್ಟಕ್ಕೆ ತಕ್ಕ ಶಕ್ತಿಯನ್ನು ಅನುಗ್ರಹಿಸಿ ಇಷ್ಟವನ್ನು ಪೂರ್ತಿ ಮಾಡಿದೆ. ಲೋಕಸ್ವಾಮಿಯಾದ ನಿನ್ನ ದರ್ಶನದಿಂದ ನನ್ನ ತಪಸ್ಸು ಸಫಲವಾಯಿತು. ಎಂದು ಧ್ರುವನು ಸ್ತೋತ್ರಮಾಡಿದನು.

॥ ಶ್ರೀ ಭಗವಾನುವಾಚ ॥

ತಪಸಸ್ತು ಫಲಂ ಪ್ರಾಪ್ತಂ ಯದ್ದ್ರಷ್ಟೋಽಹಂ ತ್ವಯಾ ಧ್ರುವ ।
ಮದ್ದರ್ಶನಂ ಹಿ ವಿಫಲಂ ರಾಜಪುತ್ರ ನ ಜಾಯತೇ ॥ ೫೭ ॥

ವರಂ ವರಯ ತಸ್ಮಾತ್ತ್ವಂ ಯಥಾಭಿಮತಮಾತ್ಮನಃ ।
ಸರ್ವಂ ಸಂಪದ್ಯತೇ ಪುಂಸಾಂ ಮಯಿ ದೃಷ್ಟಿಪಥಂ ಗತೇ ॥ ೫೬ ॥

॥ ಧ್ರುವ ಉವಾಚ ॥

ಭಗವನ್ ಸರ್ವಭೂತೇಶ ಸರ್ವಸ್ಯಾಸ್ತೇ ಭವಾನ್ ಹೃದಿ ।
ಕಿಮಜ್ಞಾತಂ ತವ ಸ್ವಾಮಿನ್ ಮನಸಾ ಯನ್ಮಯೇಪ್ಸಿತಂ ॥ ೭೭ ॥

ತಥಾಪಿ ತುಭ್ಯಂ ದೇವೇಶ ಕಥಯಿಷ್ಯಾಮಿ ಯನ್ಮಯಾ ।
ಪ್ರಾರ್ಥ್ಯತೇ ದುರ್ವಿನೀತೇನ ಹೃದಯೇನಾತಿದುರ್ಲಭಂ ॥ ೭೮ ॥

ಕಿಂವಾ ಸರ್ವಜಗತ್ಸ್ರಷ್ಟುಃ ಪ್ರಸನ್ನೇ ತ್ವಯಿ ದುರ್ಲಭಂ ।
ತ್ವತ್ಪ್ರಸಾದಫಲಂ ಭುಂಕ್ತೇ ತ್ರೈಲೋಕ್ಯಂ ಮಘವಾಅಪಿ ॥ ೭೯ ॥

೭೫–೭೬. ನಾರಾಯಣನು ‘ ಎಲೈ ಧ್ರುವನೇ ನಿನ್ನ ತಪಸ್ಸಿಗೆ ಫಲವಾದ ನನ್ನ ದರ್ಶನವು ನಿನಗೆ ದೊರೆಯಿತು ನನ್ನ ದರ್ಶನವು ಫಲವಿಲ್ಲದುದಾಗುವುದಿಲ್ಲ. ಆದುದರಿಂದ ನಿನಗೆ ಇಷ್ಟವಾದ ವರವನ್ನು ಕೇಳು. ನನ್ನ ದರ್ಶನವನ್ನು ಮಾಡಿದ ಮನುಜರಿಗೆ ಸಮಸ್ತ ಇಷ್ಟಾರ್ಥಗಳೂ ಉಂಟಾಗುವುವು ’ ಎಂದನು.

೭೭–೭೯. ಧ್ರುವನು “ ಮಹಾಮಹಿಮನಾದ ಸ್ವಾಮಿಯೇ ನೀನು ಸಮಸ್ತ ಪ್ರಾಣಿಗಳಿಗೂ ಸ್ವಾಮಿಯಾಗಿ ಎಲ್ಲರ ಮನಸ್ಸಿನಲ್ಲಿಯೂ ಇರುವೆ ನಿನಗೆ ತಿಳಿಯದುದು ಯಾವುದೂ ಇರುವುದಿಲ್ಲ. ಹೀಗಿರುವಲ್ಲಿ ನನ್ನ ಮನದಿಷ್ಟವು ನಿನಗೆ ತಿಳಿಯದೇ ? ಹಾಗಾದರೂ ದುಷ್ಟವಾದ ಮನಸ್ಸಿನಿಂದ ದುರ್ಲಭವಾದುದನ್ನು ಕೇಳಿಕೊಳ್ಳುತ್ತೇನೆಂಬುದನ್ನು ನಿನಗೆ ಹೇಳುತ್ತೇನೆ. ಅಥವಾ ಸಮಸ್ತ ಜಗತ್ತನ್ನೂ ಸೃಷ್ಟಿಸಿದ ನೀನು ಪ್ರಸನ್ನನಾದ ಮೇಲೆ ಯಾವುದು ದುರ್ಲಭವಾಗುವುದು ? ನಿನ್ನ

ನೈತದ್ರಾಜಾಸನಂ ಯೋಗ್ಯಮಜಾತಸ್ಯ ಮಮೋದರಾತ್ ।
ಇತಿ ಗರ್ವಾದವೋಚನ್ಮಾಂ ಸಪತ್ನೀಮಾತುರಚ್ಯುತ ॥ ೮೦ ॥

ಆಧಾರಭೂತಂ ಜಗತಸ್ಸರ್ವೇಷಾಮುತ್ತಮೋತ್ತಮಂ ।
ಪ್ರಾರ್ಥಯಾಮಿ ಪ್ರಭೋ ಸ್ಥಾನಂ ತ್ವತ್ಪ್ರಸಾದಾದತೋಽವ್ಯಯಂ ॥ ೮೧ ॥

॥ ಶ್ರೀ ಭಗವಾನುವಾಚ ॥

ಯತ್ತ್ವಯಾ ಪ್ರಾರ್ಥಿತಂ ಸ್ಥಾನಮೇತತ್ಪ್ರಾಪ್ಸ್ಯತಿ ವೈ ಭವಾನ್ ।
ತ್ವಯಾಹಂ ತೋಷಿತಃ ಪೂರ್ವಮನ್ಯಜನ್ಮನಿ ಬಾಲಕ ॥ ೮೨ ॥

ತ್ವಮಾಸೀರ್ಬ್ರಾಹ್ಮಣಃ ಪೂರ್ವಂ ಮಯ್ಯೇಕಾಗ್ರಮತಿಸ್ಸದಾ ।
ಮಾತಾಪಿತ್ರೋಶ್ಚ ಶುಶ್ರೂಷುರ್ನಿಜಧರ್ಮಾನುಪಾಲಕಃ ॥ ೮೩ ॥

ಕಾಲೇನ ಗಚ್ಛತಾ ಮಿತ್ರಂ ರಾಜಪುತ್ರಸ್ತವಾಭವತ್ ।
ಯೌವನೇಽಖಿಲಭೋಗಾಢ್ಯೋ ದರ್ಶನೀಯೋಜ್ಜ್ವಲಾಕೃತಿಃ

ಅನುಗ್ರಹದ ಫಲವನ್ನು ಮೂರು ಲೋಕವೂ ದೇವೇಂದ್ರನೂ ಅನುಭವಿಸುವರು ನಿನ್ನ ಅನುಗ್ರಹವುಳ್ಳವರಿಗೆ ಎಲ್ಲವೂ ಸುಲಭವಾಗಿ ದೊರೆಯುವುದು.

೮೦-೮೧. ನಾಶರಹಿತನಾದ ದೇವನೇ ನನ್ನ ಸವತಿ ತಾಯಿಯು ಗರ್ವದಿಂದ ನನ್ನ ಹೊಟ್ಟೆಯಲ್ಲಿ ಹುಟ್ಟದ ನಿನಗೆ ಈ ರಾಜನ ಸಿಂಹಾಸನವನ್ನೇರುವ ಯೋಗ್ಯತೆಯಿಲ್ಲ ಎಂದಳು. ಆದುದರಿಂದ ನಿನ್ನ ಅನುಗ್ರಹದಿಂದ ನಾಶರಹಿತವೂ, ಸಮಸ್ತ ಜಗತ್ತಿಗೂ ಆಶ್ರಯವೂ ಆದ ಅತ್ಯುತ್ತಮವಾದ ಸ್ಥಾನವನ್ನು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ' ಎಂದು ಹೇಳಿದನು.

೮೨-೮೩. ಭಗವಂತನು ಹೇಳುವನು. "ಎಲೈ ಬಾಲಕನೇ ನೀನು ಕೇಳಿದ ಸ್ಥಾನವನ್ನು ಪಡೆಯುವೆ. ಹಿಂದಿನ ಜನ್ಮದಲ್ಲಿ ನೀನು ನನ್ನನ್ನು ಸಂತೋಷಪಡಿಸಿದೆ. ಆಗ ನೀನು ನನ್ನಲ್ಲಿಯೇ ಸದಾ ನಿಶ್ಚಲವಾದ ಮನಸ್ಸನ್ನಿಟ್ಟಿದ್ದ ಒಬ್ಬ ಬ್ರಾಹ್ಮಣ

ತತ್ಸಂಗಾತ್ತಸ್ಯ ತಾಮೃದ್ಧಿಮವಲೋಕ್ಯಾತಿದುರ್ಲಭಾಂ ।
ಭವೇಯಂ ರಾಜಪುತ್ರೋಽಹಮಿತಿ ವಾಂಛಾ ತ್ವಯಾ ಕೃತಾ ॥ ೮೫ ॥

ತತೋ ಯಥಾಭಿಲಷಿತಾ ಪ್ರಾಪ್ತಾ ತೇ ರಾಜಪುತ್ರತಾ ।
ಉತ್ತಾನಪಾದಸ್ಯ ಗೃಹೇ ಜಾತೋಽಸಿ ಧ್ರುವದುರ್ಲಭೇ ॥ ೮೬ ॥

ಅನ್ಯೇಷಾಂ ತತ್ಪರಂ ಸ್ಥಾನಂ ಕುಲೇ ಸ್ವಾಯಂಭುವಸ್ಯ ಯತ್ ॥ ೮೭ ॥

ತಸ್ಯೈತದಪರಂ ಬಾಲ ಯೇನಾಹಂ ಪರಿತೋಷಿತಃ ।
ಮಾಮಾರಾಧ್ಯ ನರೋ ಮುಕ್ತಿಮವಾಪ್ನೋತ್ಯವಿಲಂಬಿತಂ ॥ ೮೮ ॥

ಮಯ್ಯರ್ಪಿತಮನಾ ಬಾಲ ಕಿಮು ಸ್ವರ್ಗಾದಿಕಂ ಪದಂ ॥ ೮೯ ॥

ತ್ರೈಲೋಕ್ಯಾದಧಿಕೇ ಸ್ಥಾನೇ ಸರ್ವತಾರಾಗ್ರಹಾಶ್ರಯಃ ।
ಭವಿಷ್ಯತಿ ನ ಸಂದೇಹೋ ಮತ್ಪ್ರಸಾದಾದ್ಭವಾನ್ ಧ್ರುವ ॥ ೯೦ ॥

ಸೂರ್ಯಾತ್ಸೋಮಾತ್ತಥಾ ಭೌಮಾತ್ಸೋಮಪುತ್ರಾದ್ಬೃಹಸ್ಪತೇಃ ।
ಸಿತಾರ್ಕತನಯಾದೀನಾಂ ಸರ್ವರ್ಕ್ಷಾಣಾಂ ತಥಾ ಧ್ರುವ ॥ ೯೧ ॥

ನಾಗಿದ್ದೆ. ತಂದೆ ತಾಯಿಗಳ ಸೇವೆಯನ್ನು ಮಾಡುತ್ತ ನಿನ್ನ ಧರ್ಮವನ್ನು ನಡೆಸುತ್ತಿದ್ದೆ. ಕೆಲವು ಕಾಲವಾದಮೇಲೆ ನಿನಗೆ ಒಬ್ಬ ರಾಜಪುತ್ರನು ಸ್ನೇಹಿತನಾದನು. ಅವನು ತನ್ನ ಪ್ರಾಯದಲ್ಲಿ ಸಮಸ್ತ ಸುಖಗಳನ್ನೂ ಅನುಭವಿಸುತ್ತ ಸುಂದರನಾಗಿದ್ದನು. ಅವನ ಸಹವಾಸದಿಂದ ದುರ್ಲಭವಾದ ಅವನ ಸಂಪತ್ತನ್ನು ನೋಡಿ ನಾನೂ ರಾಜಪುತ್ರನಾಗಬೇಕೆಂದು ಬಯಸಿದೆ. ಆದುದರಿಂದ ನಿನ್ನ ಇಷ್ಟದಂತೆ ಈ ಜನ್ಮದಲ್ಲಿ ರಾಜಪುತ್ರನಾದೆ. ದುರ್ಲಭವಾದ ಉತ್ತಾನಪಾದರಾಯನ ವಂಶದಲ್ಲಿ ಹುಟ್ಟುವುದು ಇತರ ತಪಸ್ವಿಗಳಿಗೆ ಅತ್ಯಂತ ಶ್ರೇಷ್ಠವಾದ ಫಲವಾಗಿರುವುದು

೮೮-೯೨. ಎಲೈ ಬಾಲಕನೇ ನನ್ನನ್ನು ಸಂತೋಷಪಡಿಸಿದ ನಿನಗೆ ಆ ವಂಶದಲ್ಲಿ ಹುಟ್ಟುವುದು ಅಷ್ಟು ಶ್ರೇಷ್ಠವಾದುದಲ್ಲ. ನನ್ನನ್ನು ಪೂಜಿಸಿದ ಮನುಜನು ಶೀಘ್ರವಾಗಿ ಮುಕ್ತಿಯನ್ನು ಪಡೆವನು. ನನ್ನಲ್ಲೇ ಮನಸ್ಸನ್ನು ನಿಲ್ಲಿಸಿದ ನಿನಗೆ ಸ್ವರ್ಗಾದಿಗಳಿಂದೇನು ಪ್ರಯೋಜನ? ಎಲೈ ಧ್ರುವನೇ, ನನ್ನ ಅನುಗ್ರಹದಿಂದ ನೀನು ಮೂರು ಲೋಕಕ್ಕಿಂತ ಉತ್ತಮವಾದ ಸ್ಥಳದಲ್ಲಿ ಸಮಸ್ತ ನಕ್ಷತ್ರಗಳಿಗೂ, ಗ್ರಹಗಳಿಗೂ ಆಶ್ರಯನಾಗಿರುವೆ ಇದರಲ್ಲಿ ಸಂದೇಹವಿಲ್ಲ. ಸೂರ್ಯ, ಚಂದ್ರ, ಅಂಗಾರಕ

ಸಪ್ತರ್ಷೀಣಾಮಶೇಷಾಣಾಂ ಯೇ ಚ ವೈಮಾನಿಕಾಸ್ಸುರಾಃ ।
ಸರ್ವೇಷಾಮುಪರಿಸ್ಥಾನಂ ತವ ದತ್ತಂ ಮಯಾ ಧ್ರುವ ॥ ೯೨ ॥

ಕೇಚಿಚ್ಚತುರ್ಯುಗಂ ಯಾವತ್ಕೇಚಿನ್ಮನ್ವಂತರಂ ಸುರಾಃ ।
ತಿಷ್ಠಂತಿ ಧ್ರುವ ತೇ ದತ್ತಾ ಮಯಾ ವೈಕಲ್ಪಸಂಸ್ಥಿತಿಃ ॥ ೯೩ ॥

ಸುನೀತಿರಪಿ ತೇ ಮಾತಾ ತ್ವದಾಸನ್ನಾತಿನಿರ್ಮಲಾ ।
ವಿಮಾನೇ ತಾರಕಾ ಭೂತ್ವಾ ತಾವತ್ಕಾಲಂ ನಿವತ್ಸ್ಯತಿ ॥ ೯೪ ॥

ಯೇ ಚ ತ್ವಾಂ ಮಾನವಾಃ ಪ್ರಾತಸ್ಸಾಯಂ ಚ ಸುಸಮಾಹಿತಾಃ ।
ಕೀರ್ತಯಿಷ್ಯಂತಿ ತೇಷಾಂ ಚ ಮಹತ್ಪುಣ್ಯಂ ಭವಿಷ್ಯತಿ ॥ ೯೫ ॥

॥ ಶ್ರೀ ಪರಾಶರ ಉವಾಚ ॥

ಏವಂ ಪೂರ್ವಂ ಜಗನ್ನಾಥಾದ್ದೇವದೇವಾಜ್ಜನಾರ್ದನಾತ್ ।
ವರಂ ಪ್ರಾಪ್ಯ ಧ್ರುವಸ್ಥಾನಮಧ್ಯಾಸ್ತೇ ಸುಮಹಾಮತೇ ॥ ೯೬ ॥

ಬುಧ, ಬೃಹಸ್ಪತಿ, ಶುಕ್ರ, ಶನಿ ಮುಂತಾದ ಸಮಸ್ತ ಗ್ರಹಗಳಿಗೂ, ನಕ್ಷತ್ರಗಳಿಗೂ, ಸಪ್ತರ್ಷಿ ಮಂಡಲಕ್ಕೂ, ವೈಮಾನಿಕರಾದ ದೇವತೆಗಳ ಸ್ಥಾನಕ್ಕೂ ಮೇಲಿನ ಸ್ಥಾನವನ್ನು ಕೊಟ್ಟಿರುವೆನು.

೯೩-೯೫ ಧ್ರುವನೇ ಅದರಲ್ಲಿ ಕೆಲವರು ಚತುರ್ಯುಗ ಕಳೆಯುವವರೆಗೂ, ಕೆಲವರು ಮನ್ವಂತರ ಕಳೆಯುವವರೆಗೂ, ಆ ಸ್ಥಾನದಲ್ಲಿದ್ದರು. ನಿನಗೆ ಕೊಟ್ಟಿರುವ ಸ್ಥಾನವು ಒಂದು ಕಲ್ಪವೆಂದರೆ ಪ್ರಳಯಪರ್ಯಂತವಾಗಿರುವುದು. ನಿನ್ನ ತಾಯಿಯಾದ ಸುನೀತಿಯೂ ನಿನ್ನ ಸಮೀಪದಲ್ಲಿಯೇ ನಿರ್ಮಲವಾದ ವಿಮಾನದಲ್ಲಿ ನಕ್ಷತ್ರರೂಪದಿಂದ ಅಲ್ಲಿರುವವರೆಗೂ ಇರುವಳು ಯಾವ ಮನುಜರು ನಿನ್ನನ್ನು ಪ್ರಾತಃಕಾಲದಲ್ಲಿಯೂ, ಸಾಯಂಕಾಲದಲ್ಲಿಯೂ ಏಕಾಗ್ರಚಿತ್ತದಿಂದ ಹೊಗಳುವರೋ ಅವರಿಗೆ ಮಹಾ ಪುಣ್ಯಫಲವು ಪ್ರಾಪ್ತವಾಗುವುದು" ಎಂದು ಹೇಳಿದನು.

೯೬. ಮೈತ್ರೇಯನೇ, ಹೀಗೆ ಹಿಂದೆ ಧ್ರುವನು ಜಗತ್ತಿಗೆ ಒಡೆಯನೂ, ದೇವದೇವನೂ ಆದ ವಿಷ್ಣುವಿನಿಂದ ವರವನ್ನು ಪಡೆದು ಧ್ರುವಮಂಡಲದಲ್ಲಿರುವನು.

ಸ್ವಯಂ ಶುಶ್ರೂಷಣಾದ್ಧರ್ಮ್ಯಾನ್ಮಾತಾಪಿತ್ರೋಶ್ಚ ವೈ ತಥಾ ।
ದ್ವಾದಶಾಕ್ಷರಮಾಹಾತ್ಮ್ಯಾತ್ತಪಸಶ್ಚ ಪ್ರಭಾವತಃ ॥ ೯೭ ॥

ತಸ್ಯಾಭಿಮಾನವೃದ್ಧಿಂ ಚ ಮಹಿಮಾನಂ ನಿರೀಕ್ಷ್ಯ ಚ ।
ದೇವಾಸುರಾಣಾಮಾಚಾರ್ಯಃ ಶ್ಲೋಕಮತ್ರೋಶನಾ ಜಗೌ ॥ ೯೮ ॥

ಅಹೋಸ್ಯ ತಪಸೋ ವೀರ್ಯಮಹೋಸ್ಯ ತಪಸಃ ಫಲಂ ।
ಯದೇನಂ ಪುರತಃ ಕೃತ್ವಾ ಧ್ರುವಂ ಸಪ್ತರ್ಷಯಃ ಸ್ಥಿತಾಃ ॥ ೯೯ ॥

ಧ್ರುವಸ್ಯ ಜನನೀ ಚೇಯಂ ಸುನೀತಿರ್ನಾಮ ಸೂನೃತಾ ।
ಅಸ್ಯಾಶ್ಚ ಮಹಿಮಾನಂ ಕಶ್ಶಕ್ತೋ ವರ್ಣಯಿತುಂ ಭುವಿ ॥ ೧೦೦ ॥

ತ್ರೈಲೋಕ್ಯಾಶ್ರಯತಾಂ ಪ್ರಾಪ್ತಂ ಪರಂ ಯತ್ಸ್ಥಿರಾಯತಿ ।
ಸ್ಥಾನಂ ಪ್ರಾಪ್ತಾ ಪರಂ ಧೃತ್ವಾ ಯಾಕುಕ್ಷಿವಿವರೇ ಧ್ರುವಂ ॥ ೧೦೧ ॥

೯೭–೯೮. ಧ್ರುವನು ಹಿಂದಿನ ಜನ್ಮದಲ್ಲಿ ತಾಯಿ ತಂದೆಗಳ ಸೇವೆಯನ್ನು ಮಾಡಿದ ಧರ್ಮದಿಂದಲೂ ದ್ವಾದಶಾಕ್ಷರ ಮಂತ್ರದ ಮಹಿಮೆಯಿಂಲೂ, ಏಕಾಗ್ರಚಿತ್ತದಿಂದ ತಪಸ್ಸು ಮಾಡಿದುದರಿಂದಲೂ, ಅವನಿಗಾದ ಫಲವನ್ನು ಕಂಡು ದೇವಾಸುರರ ಗುರುವಾದ ಶುಕ್ರಾಚಾರ್ಯರು ಮುಂದಿನ ಶ್ಲೋಕಗಳನ್ನು ಗಾನರೂಪವಾಗಿ ಹೇಳಿರುವರು.

೯೯–೧೦೧. ಧ್ರುವನ ತಪಸ್ಸಿನ ಶಕ್ತಿಯನ್ನೂ, ಅದರ ಫಲವನ್ನೂ ಏನೆಂದು ಹೊಗಳಲಿ? ಸಪ್ತರ್ಷಿಗಳೂ ಈ ಧ್ರುವನನ್ನು ಮುಂದುಮಾಡಿಕೊಂಡಿರುವರು. ಧ್ರುವನ ತಾಯಿಯಾದ ಸತ್ಯವಂತೆಯಾದ ಸುನೀತಿಯ ಮಹಿಮೆಯನ್ನು ವರ್ಣಿಸಲು ಯಾರು ಶಕ್ತರು? ಧ್ರುವನನ್ನು ತನ್ನ ಹೊಟ್ಟೆಯೊಳಗೆ ಧರಿಸಿದ್ದುದರಿಂದ ಮೂರು ಲೋಕಕ್ಕೂ ಆಶ್ರಯವಾದ ಉತ್ಕೃಷ್ಟವಾದ ಸ್ಥಾನವನ್ನು ಪಡೆದಳು.

ಯಶ್ಚೈತತ್ಕೀರ್ತಯನ್ನಿತ್ಯಂ ಧ್ರುವಸ್ಯಾರೋಹಣಂ ದಿವಿ ।
ಸರ್ವಪಾಪವಿನಿರ್ಮುಕ್ತಃ ಸ್ವರ್ಗಲೋಕೇ ಮಹೀಯತೇ ॥ ೧೦೨ ॥

ಸ್ಥಾನಭ್ರಂಶಂ ನಚಾಪ್ನೋತಿ ದಿವಿ ವಾ ಯದಿ ವಾ ಭುವಿ ।
ಸರ್ವಕಲ್ಯಾಣಸಂಯುಕ್ತೋ ದೀರ್ಘಕಾಲಂ ಸ ಜೀವತಿ ॥ ೧೦೩ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ದ್ವಾದಶೋಽಧ್ಯಾಯಃ

೧೦೨–೧೦೩. ಧ್ರುವನು ಉತ್ತಮವಾದ ಪದವಿಯನ್ನು ಪಡೆದ ಈ ಚರಿತ್ರೆಯನ್ನು ಯಾವ ಮನುಜನು ಪ್ರತಿದಿನವೂ ಪಾರಾಯಣ ಮಾಡುವನೋ ಅವನು ಸ್ವರ್ಗಲೋಕದಲ್ಲಿ ಮಹಾಮಹಿಮೆಯಿಂದ ವಾಸಮಾಡುವನು. ಸ್ವರ್ಗದಲ್ಲಾಗಲಿ, ಭೂಮಿಯಲ್ಲಾಗಲಿ, ಅವನಿಗೆ ಸ್ಥಾನಭ್ರಷ್ಟತೆಯುಂಟಾಗುವುದಿಲ್ಲ. ಅವನು ಸಮಸ್ತ ಮಂಗಳಗಳಿಂದ ಕೂಡಿ ಬಹಳಕಾಲ ಜೀವಿಸುವನು.

ಎಂಬಲ್ಲಿಗೆ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ತ್ರಯೋದಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಧ್ರುವಾಚ್ಛಿಷ್ಟಿಂ ಚ ಭವ್ಯಂ ಚ ಭವ್ಯಾಚ್ಛಂಭುರ್ವ್ಯಜಾಯತ ।
ಶಿಷ್ಟೇರಾಧತ್ತ ಸುಚ್ಛಾಯಾ ಪಂಚಪುತ್ರಾನಕಲ್ಮಷಾನ್ ॥ ೧ ॥

ರಿಪುಂ ರಿಪುಂಜಯಂ ವಿಪ್ರಂ ವೃಕಲಂ ವೃಕತೇಜಸಂ ।
ರಿಪೋರಾಧತ್ತ ಬೃಹತೀ ಚಾಕ್ಷುಷಂ ಸರ್ವತೇಜಸಂ ॥ ೨ ॥

ಹದಿಮೂರನೆಯ ಅಧ್ಯಾಯವು

೧-೫. ಪರಾಶರನು ಧ್ರುವನ ವಂಶವನ್ನು ಹೇಳುವನು :—ಶ್ರೇಷ್ಠನಾದ ಧ್ರುವನಿಂದ ಪತ್ನಿಯಾದ ಶಂಭು ಎಂಬುವಳು ಶಿಷ್ಟಿ, ಭವ್ಯ ಎಂಬಿಬ್ಬರು ಮಕ್ಕಳನ್ನು ಪಡೆದಳು. ಶಿಷ್ಟಿಯ ಪತ್ನಿಯಾದ ಸುಚ್ಛಾಯಾ ಎಂಬುವಳು ರಿಪು, ರಿಪುಂಜಯ, ವಿಪ್ರ, ವೃಕಲ, ವೃಕತೇಜಸ ಎಂಬ ಐದು ಜನ ಮಕ್ಕಳನ್ನು ಪಡೆದಳು. ರಿಪುವಿನ ಪತ್ನಿಯಾದ ಬೃಹತಿ ಎಂಬುವಳು ತೇಜಶ್ಶಾಲಿಯಾದ ಚಾಕ್ಷುಷನೆಂಬ ಮಗನನ್ನು ಪಡೆದಳು. ಚಾಕ್ಷುಷನು ವರುಣನ ವಂಶದಲ್ಲಿ ಹುಟ್ಟಿದ ಮಹಾಮಹಿಮನಾದ ವೀರಣಪ್ರಜಾಪತಿಯ ಮಗಳಾದ ವಾರುಣಿಯಲ್ಲಿ, ಆರನೆಯ ಮನ್ವಂತರಕ್ಕೆ ಅಧಿಪತಿಯಾದ ಮನುವೆಂಬ ಮಗನನ್ನು ಪಡೆದನು. ಮನುವಿನ ಹೆಂಡತಿಯೂ ವೈರಾಜ

ಅಜೀಜನತ್ಪುಷ್ಕರಿಣ್ಯಾಂ ವಾರುಣ್ಯಾಂ ಚಾಕ್ಷುಷೋ ಮನುಂ ।
ಪ್ರಜಾಪತೇರಾತ್ಮಜಾಯಾಂ ವೀರಣಸ್ಯ ಮಹಾತ್ಮನಃ ॥ ೩ ॥

ಮನೋರಜಾಯಂತ ದಶ ನಡ್ವಲಾಯಾಂ ಮಹೌಜಸಃ ।
ಕನ್ಯಾಯಾಂ ತಪತಾಂ ಶ್ರೇಷ್ಠ ವೈರಾಜಸ್ಯ ಪ್ರಜಾಪತೇಃ ॥ ೪ ॥

ಊರುಃ ಪೂರುಶ್ಶತದ್ಯುಮ್ನಸ್ತಪಸ್ವೀ ಸತ್ಯವಾನ್ಶುಚಿಃ ।
ಅಗ್ನಿಷ್ಟೋಮೋತಿರಾತ್ರಶ್ಚ ಸುದ್ಯುಮ್ನಶ್ಚೇತಿ ತೇ ನವ ।
ಅಭಿಮನ್ಯುಶ್ಚ ದಶಮೋ ನಡ್ವಲಾಯಾಂ ಮಹೌಜಸಃ ॥ ೫ ॥

ಊರೋರಜನಯತ್ಪುತ್ರಾನ್ ಷಡಾಗ್ನೇಯೀ ಮಹಾಪ್ರಭಾನ್ ।
ಅಂಗಂ ಸುಮನಸಂ ಸ್ವಾತಿಂ ಕ್ರತುಮಂಗಿರಸಂ ಶಿಬಿಂ ॥ ೬ ॥

ಅಂಗಾತ್ಸುನೀಥಾಪತ್ಯಂ ವೈ ವೇನಮೇಕಮಜಾಯತ ।
ಪ್ರಜಾರ್ಥಮೃಷಯಸ್ತಸ್ಯ ಮಮಂಥುರ್ದಕ್ಷಿಣಂ ಕರಂ ॥ ೭ ॥

ವೇನಸ್ಯ ಪಾಣೌ ಮಥಿತೇ ಸಂಬಭೂವ ಮಹಾದ್ಯುತೇ ।
ವೈನ್ಯೋ ನಾಮ ಮಹೀಪಾಲೋ ಯಃ ಪೃಥುಃ ಪರಿಕೀರ್ತ್ಯತೇ ॥ ೮ ॥

ಯೇನ ದುಗ್ಧಾ ಮಹೀಪೂರ್ವಂ ಪ್ರಜಾನಾಂ ಹಿತಕಾರಣಾತ್ । ॥ ೯ ॥

ನೆಂಬ ಪ್ರಜಾಪತಿಯ ಮಗಳೂ ಆದ ನಡ್ವಲೆಯಲ್ಲಿ ಮಹಾ ತೇಜಸ್ವಿಗಳಾದ ಊರು, ಪೂರು, ಶತದ್ಯುಮ್ನ, ತಪಸ್ವಿ, ಸತ್ಯವಂತ, ಶುಚಿ, ಅಗ್ನಿಷ್ಟೋಮ, ಅತಿರಾತ್ರ ಸುದ್ಯುಮ್ನ, ಅಭಿಮನ್ಯು, ಎಂಬ ಹತ್ತು ಜನ ಮಕ್ಕಳು ಹುಟ್ಟಿದರು.

೬-೯. ಊರುವಿನಿಂದ ಆಗ್ನೇಯಿ ಎಂಬ ಅವನ ಪತ್ನಿಯು ಅಂಗ, ಸುಮನ, ಸ್ವಾತಿ, ಕ್ರತು, ಅಂಗಿರಸ, ಶಿಬಿ ಎಂಬ ಆರು ಜನ ಸುಂದರರಾದ ಮಕ್ಕಳನ್ನು ಪಡೆದಳು. ಅಂಗನ ಹೆಂಡತಿಯಾದ ಸುನೀಥೆಯೆಂಬುವಳು ವೇನನೆಂಬ ಒಬ್ಬನೇ ಮಗನನ್ನು ಹೆತ್ತಳು. ಋಷಿಗಳು ಮಗನಾಗಬೇಕೆಂದು ವೇನನ ಬಲಗೈಯ್ಯನ್ನು ಮಥಿಸಿದರು. ಮಥನ ಮಾಡಿದ ಆ ವೇನನ ಕೈಯಿಂದ ತೇಜಸ್ಸಿನಿಂದ ಕೂಡಿದ ವೈನ್ಯನೆಂಬ ರಾಜನು ಹುಟ್ಟಿದನು. ಅವನಿಗೆ ಪೃಥುವೆಂದು ಮತ್ತೊಂದು ಹೆಸರು. ಅವನು ಹಿಂದೆ ಪ್ರಜೆಗಳಿಗೆ ಹಿತವನ್ನುಂಟುಮಾಡಬೇಕೆಂದು ಗೋರೂಪವಾದ ಭೂಮಿಯಲ್ಲಿ ಹಾಲನ್ನು ಕರೆದನು.

॥ ಮೈತ್ರೇಯ ಉವಾಚ ॥

ಕಿಮರ್ಥಂ ಮಥಿತಃ ಪಾಣಿರ್ವೇನಸ್ಯ ಪರಮರ್ಷಿಭಿಃ ।
ಯತ್ರ ಜಜ್ಞೇ ಮಹಾವೀರ್ಯಸ್ಸಪೃಥುರ್ಮುನಿಸತ್ತಮ ॥ ೧೦ ॥

॥ ಶ್ರೀಪರಾಶರ ಉವಾಚ ॥

ಸುನೀಥಾ ನಾಮ ಯಾ ಕನ್ಯಾ ಮೃತ್ಯೋಃ ಪ್ರಥಮಜಾಭವತ್ ।
ಅಂಗಸ್ಯ ಭಾರ್ಯಾ ಸಾ ದತ್ತಾ ತಸ್ಯಾಂ ವೇನೋ ವ್ಯಜಾಯತ ॥ ೧೧ ॥

ಸ ಮಾತಾಮಹದೋಷೇಣ ತೇನ ಮೃತ್ಯುಸುತಾತ್ಮಜಃ ।
ನಿಸರ್ಗಾದೇವ ಮೈತ್ರೇಯ ದುಷ್ಟ ಏವ ವ್ಯಜಾಯತ ॥ ೧೨ ॥

ಅಭಿಷಿಕ್ತೋ ಯದಾ ರಾಜ್ಯೇ ಸ ವೇನಃ ಪರಮರ್ಷಿಭಿಃ ।
ಘೋಷಯಾಮಾಸ ಸ ತಥಾ ಪೃಥಿವ್ಯಾಂ ಪೃಥಿವೀಪತಿಃ ॥ ೧೩ ॥

ನ ಯಷ್ಟವ್ಯಂ ನ ದಾತವ್ಯಂ ನ ಹೋತವ್ಯಂ ಕಥಂಚನ ।
ಭೋಕ್ತಾ ಯಜ್ಞಸ್ಯ ಕಸ್ತ್ವನ್ಯೋ ಹ್ಯಹಂ ಯಜ್ಞಪತಿಃ ಪ್ರಭುಃ ॥ ೧೪ ॥

---

೧೦ ಮೈತ್ರೇಯನು, ಪರಾಶರರೇ! ಋಷಿಗಳು ವೇನನಕೈಯನ್ನು ಮಥನ ಮಾಡಲು ಕಾರಣವೇನು? ಅಲ್ಲಿ ಮಹಾ ಪರಾಕ್ರಮಶಾಲಿಯಾದ ಪೃಥುವು ಹೇಗೆ ಹುಟ್ಟಿದನು. ಎಂದು ಪ್ರಶ್ನೆ ಮಾಡಿದನು.

೧೧-೧೪ ಪರಾಶರರು ಆ ಕಥೆಯನ್ನು ಹೇಳುವರು:—ಮೃತ್ಯುವು ತನ್ನ ಹಿರಿಯ ಮಗಳಾದ ಸುನೀಥೆಯನ್ನು ಅಂಗನಿಗೆ ಕೊಟ್ಟು ವಿವಾಹ ಮಾಡಿದನು. ಅವಳಲ್ಲಿ ವೇನನು ಹುಟ್ಟಿದನು. ಮಾತಾಮಹನಾದ ಮೃತ್ಯುವಿನ ದೋಷದಿಂದ ವೇನನು ಸ್ವಾಭಾವಿಕವಾಗಿ ದುಷ್ಟನಾಗಿದ್ದನು. ಋಷಿಶ್ರೇಷ್ಟರು ವೇನನಿಗೆ ಪಟ್ಟ ಗಟ್ಟಿದರು. ಆಗ ರಾಜನು ತನ್ನ ರಾಜ್ಯದಲ್ಲೆಲ್ಲ 'ಯಜ್ಞ ಮಾಡಬಾರದು ದಾನ ಕೊಡಬಾರದು. ಹೋಮ ಮಾಡಲಾಗದು. ರಾಜನಾದ ನಾನೇ ಯಜ್ಞಕ್ಕೆ ಅಧಿಪತಿಯು' ಎಂದು ಪ್ರಸಿದ್ಧಪಡಿಸಿದನು.

ತತಸ್ತಮೃಷಯಃ ಪೂರ್ವಂ ಸಂಪೂಜ್ಯ ಪೃಥಿವೀಪತಿಂ ।
ಊಚುಸ್ಸಾಮಕಳಂ ವಾಕ್ಯಂ ಮೈತ್ರೇಯ ಸಮುಪಸ್ಥಿತಾಃ ॥ ೧೫ ॥

॥ ಋಷಯ ಊಚುಃ ॥

ಭೋ ಭೋ ರಾಜನ್ ಶೃಣುಷ್ವ ತ್ವಂ ಯದ್ವದಾಮಸ್ತವಾಂತಿಕೇ ।
ರಾಜ್ಯದೇಹೋಪಭೋಗಾಯ ಪ್ರಜಾನಾಂ ಚ ಹಿತಂ ಪರಂ ॥ ೧೬ ॥

ದೀರ್ಘಸತ್ರೇಣ ದೇವೇಶಂ ಸರ್ವಯಜ್ಞೇಶ್ವರಂ ಹರಿಂ ।
ಪೂಜಯಿಷ್ಯಾಮ ಭದ್ರಂ ತೇ ತತ್ರಾಂಶಸ್ತೇ ಭವಿಷ್ಯತಿ ॥ ೧೭ ॥

ಯಜ್ಞೇನ ಯಜ್ಞಪುರುಷೋ ವಿಷ್ಣುಸ್ಸಂಪ್ರೀಣಿತೋ ನೃಪ ।
ಅಸ್ಮಾಭಿರ್ಭವತಃ ಕಾಮಾನ್ಸರ್ವಾನೇವ ಪ್ರದಾಸ್ಯತಿ ॥ ೧೮ ॥

ಯಜ್ಞೈರ್ಯಜ್ಞೇಶ್ವರೋ ಯೇಷಾಂ ರಾಷ್ಟ್ರೇ ಸಂಪೂಜ್ಯತೇ ಹರಿಃ ।
ತೇಷಾಂ ಸರ್ವೇಪ್ಸಿತಾವಾಪ್ತಿಂ ದದಾತಿ ನೃಪ ಭೂಭೃತಾಂ ॥ ೧೯ ॥

---

೧೫. ಆಗ ಋಷಿಗಳು ವೇನನನ್ನು ಪೂಜಿಸಿ ಅವನ ಸಮೀಪಕ್ಕೆ ಬಂದು ಹಿತವಾಗಿಯೂ, ಮೃದುವಾಗಿಯೂ ಇರುವ ಮಾತುಗಳನ್ನಾಡಿದರು. ಅವರು ಹೇಳಿದುದೇನೆಂದರೆ,

೧೬–೧೯. "ಓ ರಾಜನೆ, ನಿನ್ನ ಸಮೀಪದಲ್ಲಿ ನಾವು ಹೇಳುವ ಮಾತನ್ನು ಕೇಳು. ನಿನ್ನ ಶರೀರದ ಮತ್ತು ರಾಜ್ಯದ ಕ್ಷೇಮಕ್ಕಾಗಿ ಪ್ರಜಾಹಿತ ಕಾರ್ಯವೇ ಶ್ರೇಷ್ಠವಾದುದು. ನಾವು ಒಂದು ಸಹಸ್ರ ವರ್ಷಗಳವರೆಗೆ ಮಾಡಬೇಕಾದ ದೀರ್ಘಸತ್ರವೆಂಬ ಯಾಗದಿಂದ ಸಮಸ್ತ ಯಜ್ಞಗಳಿಗೂ ಅಧಿಪತಿಯಾದ ಹರಿಯನ್ನು ಪೂಜಿಸುವೆವು. ಅದರಿಂದ ನಿನಗೆ ಆರನೆಯ ಒಂದು ಭಾಗ ಫಲವು ಪ್ರಾಪ್ತಿಯಾಗಿ ಶುಭವುಂಟಾಗುವುದು. ನಾವು ಮಾಡಿದ ಯಜ್ಞದಿಂದ ಯಜ್ಞಪುರುಷನಾದ ವಿಷ್ಣುವು ಸಂತುಷ್ಟನಾಗಿ ನಿನ್ನ ಸಮಸ್ತ ಇಷ್ಟಾರ್ಥಗಳನ್ನೂ ಕೊಡುವನು. ರಾಜನೇ ಯಾರ ರಾಜ್ಯದಲ್ಲಿ ಯಜ್ಞಗಳಿಂದ ಯಜ್ಞೇಶ್ವರನಾದ ಹರಿಯನ್ನು ಪೂಜಿಸುವರೋ ಅಂತಹ ರಾಜರಿಗೆ ಆ ದೇವನು ಸಮಸ್ತ ಇಷ್ಟಾರ್ಥಗಳನ್ನೂ ಕೊಡುವನು" ಎಂದುಹೇಳಿದರು.

॥ ವೇನಃ ॥

ಮತ್ತಃ ಕೋಽಭ್ಯಧಿಕೋಽನ್ಯೋಽಸ್ತಿ ಕಶ್ಚಾರಾಧ್ಯೋ ಮಮಾಪರಃ ।
ಕೋಽಯಂ ಹರಿರಿತಿ ಖ್ಯಾತೋ ಯೋ ವೋ ಯಜ್ಞೇಶ್ವರೋ ಮತಃ

ಬ್ರಹ್ಮಾ ಜನಾರ್ದನಶ್ಶಂಭುರಿಂದ್ರೋ ವಾಯುರ್ಯಮೋ ರವಿಃ । ॥ ೨೦ ॥
ಹುತಭುಗ್ವರುಣೋ ಧಾತಾ ಪೂಷಾ ಭೂರ್ನಿಶಾಕರಃ ॥ ೨೧ ॥

ಏತೇ ಚಾನ್ಯೇ ಚ ಯೇ ದೇವಾಶ್ಶಾಪಾನುಗ್ರಹಕಾರಿಣಃ ।
ನೃಪಸ್ಯ ತೇ ಶರೀರಸ್ಥಾಸ್ಸರ್ವದೇವಮಯೋ ನೃಪಃ ॥ ೨೨ ॥

ಏತದ್ಜ್ಞಾತ್ವಾ ಮಯಾಜ್ಞಪ್ತಂ ಯದ್ಯಥಾ ಕ್ರಿಯತಾಂ ತಥಾ ।
ನ ದಾತವ್ಯಂ ನ ಹೋತವ್ಯಂ ನ ಯಷ್ಟವ್ಯಂ ಚ ಭೋ ದ್ವಿಜಾಃ ॥ ೨೩ ॥

ಭರ್ತೃಶುಶ್ರೂಷಣಂ ಧರ್ಮೋ ಯಥಾ ಸ್ತ್ರೀಣಾಂ ಪರೋ ಮತಃ ।
ಮಮಾಜ್ಞಾಪಾಲನಂ ಧರ್ಮೋ ಭವತಾಂ ಚ ತಥಾ ದ್ವಿಜಾಃ ॥ ೨೪ ॥

॥ ಋಷಯ ಊಚುಃ ॥

ದೇಹ್ಯನುಜ್ಞಾಂ ಮಹಾಭಾಗ ಮಾ ಧರ್ಮೋ ಯಾತು ಸಂಕ್ಷಯಂ ।
ಹವಿಷಾಂ ಪರಿಣಾಮೋಽಯಂ ಯದೇತದಖಿಲಂ ಜಗತ್ ॥ ೨೫ ॥

೨೦–೨೪. ವೇನನು ಎಲೈ ಋಷಿಗಳೇ, ನನಗಿಂತ ಹೆಚ್ಚಿನವರಾರಿರುವರು ನನ್ನನು ಬಿಟ್ಟು ಮತ್ತಾವನನ್ನು ಪೂಜಿಸಬೇಕು? ಯಜ್ಞೇಶ್ವರನಾದ ಹರಿಯೆಂಬುವನಾರು? ಬ್ರಹ್ಮ, ವಿಷ್ಣು, ಮಹೇಶ್ವರ, ದೇವೇಂದ್ರ, ವಾಯು, ಯಮ, ಸೂರ್ಯ, ಅಗ್ನಿ, ವರುಣ, ಧಾತೃ, ಪೂಷ, ಭೂಮಿ, ಚಂದ್ರ ಇವರೇ ಮುಂತಾದ ಶಾಪಾನುಗ್ರಹಸಮರ್ಥರಾದ ದೇವತೆಗಳೆಲ್ಲರೂ ರಾಜನಶರೀರದಲ್ಲಿರುವರು. ಆದುದರಿಂದ ರಾಜನು ಸರ್ವದೇವಸ್ವರೂಪನು. ಇದನ್ನು ತಿಳಿದೇ ನಾನು ಜನರು ಮಾಡುವ ಕಾರ್ಯವನ್ನು ಅಪ್ಪಣೆ ಮಾಡಿರುವೆನು. ಎಲೈ ಬ್ರಾಹ್ಮಣರೇ, ದಾನ ಮಾಡಬಾರದು. ಯಜ್ಞವನ್ನೂ, ಹೋಮವನ್ನೂ ಮಾಡಬಾರದು. ಸ್ತ್ರೀಯರಿಗೆ ಗಂಡನ ಸೇವೆಯನ್ನು ಮಾಡುವುದು ಶ್ರೇಷ್ಠ ಧರ್ಮವಾದಂತೆ ನನ್ನ ಅಪ್ಪಣೆಯಂತೆ ನಡೆವುದೇ ನಿಮಗೆ ಧರ್ಮವು' ಎಂದು ಹೇಳಿದನು.

೨೫–೨೮. ಮಹಾರಾಜನೇ ಧರ್ಮನಾಶವಾಗದಂತೆ ಅಪ್ಪಣೆಯನ್ನು ಕೊಡು. ಯಜ್ಞದಲ್ಲಿ ಹವಿಸ್ಸನ್ನು ಸಮರ್ಪಣೆ ಮಾಡುವುದರಿಂದ ಮಳೆಯುಂಟಾಗಿ

॥ ಶ್ರೀ ಪರಾಶರ ಉವಾಚ ॥

ಇತಿ ವಿಜ್ಞಾಪ್ಯಮಾನೋಽಪಿ ಸ ವೇನಃ ಪರಮರ್ಷಿಭಿಃ
ಯದಾ ದದಾತಿ ನಾನುಜ್ಞಾಂ ಪ್ರೋಕ್ತಃ ಪ್ರೋಕ್ತಃ ಪುನಃ ಪುನಃ ॥ ೨೬ ॥

ತತಸ್ತು ಋಷಯಸ್ಸರ್ವೇ ಕೋಪಾಮರ್ಷಸಮನ್ವಿತಾಃ ।
ಹನ್ಯತಾಂ ಹನ್ಯತಾಮೇಷ ಇತ್ಯೂಚುಸ್ತೇ ಪರಸ್ಪರಂ ॥ ೨೭ ॥

ಯೋ ಯಜ್ಞಪುರುಷಂ ವಿಷ್ಣುಮನಾದಿನಿಧನಂ ಪ್ರಭುಂ ।
ವಿನಿಂದತ್ಯ ಸಮಾಚಾರೋ ನ ಸಯೋಗ್ಯೋ ಭುವಃ ಪತಿಃ ॥ ೨೮ ॥

ಇತ್ಯುಕ್ತ್ವಾ ಮಂತ್ರಪೂತೈಸ್ತೈಃ ಕುಶೈರ್ಮುನಿಗಣಾ ಭೃಶಂ ।
ನಿಜಘ್ನುರ್ನಿಹತಂ ಪೂರ್ವಂ ಭಗವನ್ನಿಂದನಾದಿನಾ ॥ ೨೯ ॥

ತತಶ್ಚ ಮುನಯೋ ರೇಣುಂ ದದೃಶುಸ್ಸರ್ವತೋ ದ್ವಿಜ ।
ಕಿಮೇತದಿತಿ ಚಾಸನ್ನಾನ್ ಪಪ್ರಚ್ಛುಸ್ತೇ ಜನಾಂಸ್ತದಾ ॥ ೩೦ ॥

ಲೋಕಕ್ಕೆಲ್ಲಾ ಕ್ಷೇಮವಾಗುವುದು" ಎಂದು ಋಷಿಗಳು ಮತ್ತೆ ಮತ್ತೆ ಹೇಳಿದರೂ ವೇನನು ಅಪ್ಪಣೆಯನ್ನು ಕೊಡಲಿಲ್ಲ. ಆಗ ಋಷಿಗಳೆಲ್ಲರೂ ದೇವನಿಂದೆಯನ್ನು ಮಾಡಿದ್ದುದರಿಂದುಟಾದ ಕೋಪದಿಂದ ಈ ರಾಜನನ್ನು ಕೊಲ್ಲಿರಿ! ಕೊಲ್ಲಿರಿ! ಎಂದು ತಂತಮ್ಮಲ್ಲಿ ಮಾತನಾಡಿಕೊಂಡರು. ಯಾವ ರಾಜನು ಆದ್ಯಂತಗಳಿಲ್ಲದ ಯಜ್ಞಪುರುಷನಾದ ವಿಷ್ಣುವನ್ನು ನಿಂದಿಸುವನೋ ಅವನು ಸದಾಚಾರವಂತನಲ್ಲ. ಅವನು ರಾಜನಾಗಲು ಯೋಗ್ಯನಲ್ಲ.

೨೯ ಹೀಗೆಂದು ಹೇಳಿ ಆ ಋಷಿಗಳು ಭಗವಂತನನ್ನು ನಿಂದಿಸಿದುದರಿಂದ ಮೊದಲೇ ಸತ್ತುಹೋಗಿದ್ದ ಆ ರಾಜನನ್ನು ದರ್ಭೆಯನ್ನಭಿಮಂತ್ರಿಸಿ ಅವನ ಮೇಲೆ ಪ್ರಯೋಗಿಸಿ ಅವನನ್ನು ಕೊಂದರು.

೩೦-೩೨ ಆ ಮೇಲೆ ಆ ಮುನಿಗಳು ಎಲ್ಲ ದಿಕ್ಕುಗಳಲ್ಲಿಯೂ ಧೂಳಿಯನ್ನು ಕಂಡು ಇದೇನೆಂದು ಸಮೀಪದಲ್ಲಿದ್ದ ಜನರನ್ನು ಕೇಳಿದರು. ಆ ಜನರು ಈ ರಾಜ್ಯಕ್ಕೆ ರಾಜನಿಲ್ಲದುದನ್ನು ತಿಳಿದು ಬಡಜನರು ಕಳ್ಳರಾಗಿ ಪರರ ಧನವನ್ನಪಹರಿಸುತ್ತಿರುವರು. ಆ ಕಳ್ಳರ ಗುಂಪು ಓಡಾಡುತ್ತಿರುವುದರಿಂದ ವಿಶೇಷವಾಗಿ ದೂಳು ಎದ್ದಿರುವುದು. ಎಂದು ಹೇಳಿದರು.

ಅಸ್ಮಾಕಂ ಚ ಜನೈಸ್ತೇಷಾಂ ಚೋರೀಭೂತೈರರಾಜಕೇ ।
ರಾಷ್ಟ್ರೇ ತು ಲೋಕೈರಾರಬ್ಧಂ ಪರಸ್ವಾದಾನಮಾತುರೈಃ ॥ ೩೧ ॥

ತೇಷಾಮುದೀರ್ಣವೇಗಾನಾಂ ಚೋರಾಣಾಂ ಮುನಿಸತ್ತಮಾಃ ।
ಸುಮಹಾನ್ ದೃಶ್ಯತೇ ರೇಣುಃ ಪರವಿತ್ತಾಪಹಾರಿಣಾಂ ॥ ೩೨ ॥

ತತಸ್ಸಂಮಂತ್ರ್ಯ ತೇ ಸರ್ವೇ ಮುನಯಸ್ತಸ್ಯ ಮಂತ್ರತಃ ।
ಮಮಂಥುರೂರುಂ ಪುತ್ರಾರ್ಥಮನಪತ್ಯಸ್ಯ ಯತ್ನತಃ ॥ ೩೩ ॥

ಮಥ್ಯಮಾನಾತ್ಸಮುತ್ತಸ್ಥೌ ತಸ್ಯೋರೋಃ ಪುರುಷಃ ಕಿಲ ।
ದಗ್ಧಸ್ಥೂಣಾಪ್ರತೀಕಾಶಃ ಖರ್ವಟಾಸ್ಯೋಽತಿಹ್ರಸ್ವಕಃ ॥ ೩೪ ॥

ಕಿಂ ಕರೋಮೀತಿ ತಾನ್ ಸರ್ವಾನ್ ವಿಪ್ರಾನಾಹ ತ್ವರಾನ್ವಿತಃ ।
ನಿಷೀದೇತಿ ತಮೂಚುಸ್ತೇ ನಿಷಾದಸ್ತೇನ ಸೋಽಭವತ್ ॥ ೩೫ ॥

ತತಸ್ತತ್ಸಂಭವಾ ಜಾತಾ ವಿಂಧ್ಯಶೈಲನಿವಾಸಿನಃ ।
ನಿಷಾದಾ ಮುನಿಶಾರ್ದೂಲ ಪಾಪಕರ್ಮೋಪಲಕ್ಷಣಾಃ ॥ ೩೬ ॥

ತೇನ ದ್ವಾರೇಣ ತತ್ಪಾಪಂ ನಿಷ್ಕ್ರಾಂತಂ ತಸ್ಯ ಭೂಪತೇಃ ।
ನಿಷಾದಾಸ್ತೇ ತತೋ ಜಾತಾ ವೇನಕಲ್ಮಷನಾಶನಾಃ ॥ ೩೭ ॥

೩೩–೩೭ ಬಳಿಕ ಋಷಿಗಳೆಲ್ಲ ಮಂತ್ರಾಲೋಚನೆಯನ್ನು ಮಾಡಿ ಮತ್ತೊಬ್ಬ ರಾಜನನ್ನು ಮಾಡಲು ವೇನನಿಗೆ ಮಕ್ಕಳಿಲ್ಲದುದರಿಂದ ಪುತ್ರಾರ್ಥವಾಗಿ ಅವನ ತೊಡೆಯನ್ನು ಮಥನ ಮಾಡಿದರು. ಕಡೆಯುತ್ತಿದ್ದ ಆ ತೊಡೆಯಿಂದ ಕುಳ್ಳಾಗಿಯೂ, ಕರಿಯ ಬಣ್ಣದ ಮೈಯೂ, ದಪ್ಪ ಮೂಗೂ, ಸಣ್ಣ ಬಾಯೂ ಉಳ್ಳ ವಿಕಾರವಾದ ಪುರುಷನು ಹುಟ್ಟಿದನು. ಆ ಪುರುಷನು ನಾನೇನು ಮಾಡಬೇಕೆಂದು ಆ ಋಷಿಗಳನ್ನು ಕೇಳಿದನು. ಅವರು 'ನಿಷೀದ' ಎಂದರೆ ಕುಳಿತುಕೋ ಎಂದು ಹೇಳಿದುದರಿಂದ ಅವನಿಗೆ ನಿಷಾದನೆಂಬ ಹೆಸರಾಯಿತು. ಮೈತ್ರೇಯನೆ, ಅವನ ವಂಶದಲ್ಲಿ ಹುಟ್ಟಿದವರೇ ವಿಂಧ್ಯಪರ್ವತದಲ್ಲಿ ವಾಸಿಸುವ ಪಾಪಕಾರ್ಯಗಳನ್ನು ಮಾಡುವ ನಿಷಾದರೆಂಬ ಜನರಾದರು. ಈ ರೀತಿಯಲ್ಲಿ ಆ ವೇನನ ಪಾಪವು ಅವನ ಶರೀರದಿಂದ ಹೊರಟು ಹೋಯಿತು. ಆದುದರಿಂದಲೇ ನಿಷಾದರು ವೇನನ ಪಾಪನಾಶಕರು, ಎನಿಸಿಕೊಂಡರು.

ತತೋಽಸ್ಯ ದಕ್ಷಿಣಂ ಹಸ್ತಂ ಮಮಂಥುಸ್ತೇ ತದಾ ದ್ವಿಜಾಃ ॥ ೩೮ ॥

ಮಥ್ಯಮಾನೇ ಚ ತತ್ರಾಭೂತ್ಪೃಥುರ್ವೈನ್ಯಃ ಪ್ರತಾಪವಾನ್ ।
ದೀಪ್ಯಮಾನಸ್ಸ್ವವಪುಷಾ ಸಾಕ್ಷಾದಗ್ನಿರಿವೋಜ್ಜ್ವಲನ್ ॥ ೩೯ ॥

ಆದ್ಯಮಾಜಗವಂ ನಾಮ ಖಾತ್ಪಪಾತ ತತೋ ಧನುಃ ।
ಶರಾಶ್ಚ ದಿವ್ಯಾ ನಭಸಃ ಕವಚಂ ಚ ಪಪಾತ ಹ ॥ ೪೦ ॥

ತಸ್ಮಿನ್ ಜಾತೇ ತು ಭೂತಾನಿ ಸಂಪ್ರಹೃಷ್ಟಾನಿ ಸರ್ವಶಃ ॥ ೪೧ ॥

ಸತ್ಪುತ್ರೇಣ ಚ ಜಾತೇನ ವೇನೋಽಪಿ ತ್ರಿದಿವಂ ಯಯೌ ।
ಪುನ್ನಾಮ್ನೋ ನರಕಾತ್ತ್ರಾತಸ್ಸ ತೇನ ಸುಮಹಾತ್ಮನಾ ॥ ೪೨ ॥

ತಂ ಸಮುದ್ರಾಶ್ಚ ನದ್ಯಶ್ಚ ರತ್ನಾನ್ಯಾದಾಯ ಸರ್ವಶಃ ।
ತೋಯಾನಿ ಚಾಭಿಷೇಕಾರ್ಥಂ ಸರ್ವಾಣ್ಯೇವೋಪತಸ್ಥಿರೇ ॥ ೪೩ ॥

೩೮–೩೯. ತರುವಾಯ ಆ ಋಷಿಗಳು ವೇನನ ಬಲದತೋಳನ್ನು ಕಡೆದರು. ಕಟ್ಟಿಗೆಯನ್ನು ಒಂದರ ಮೇಲೊಂದನ್ನು ಉಜ್ಜಿದರೆ ಹೊಗೆಯ ರೂಪದಲ್ಲಿ ಅದರ ಕೊಳೆಯೆಲ್ಲ ಹೋಗಿ ಪ್ರಕಾಶವಾದ ಅಗ್ನಿಯು ಉತ್ಪತ್ತಿಯಾಗುವಂತೆ ನಿಷಾದ ರೂಪ ದಿಂದ ವೇನನ ಪಾಪವೆಲ್ಲ ಹೊರಟುಹೋದ ಮೇಲೆ ಅಗ್ನಿಯಂತೆ ಪ್ರಕಾಶಿಸುತ್ತಿರುವ ಶೂರನಾದ ಪೃಥುರಾಜನು ಹುಟ್ಟಿದನು.

೪೦–೪೩. ಆ ಪೃಥುರಾಜನು ಹುಟ್ಟಿದಾಗ ಅಜಗವವೆಂಬ ಈಶ್ವರನ ಧನುಸ್ಸು ಅಂತರಿಕ್ಷದಿಂದ ಬಿದ್ದಿತು. ದಿವ್ಯವಾದ ಬಾಣಗಳೂ ಕವಚವೂ ಬಿದ್ದುವು. ಸಮಸ್ತ ಭೂತಗಳೂ ಸಂತೋಷ ಹೊಂದಿದುವು. ತನ್ನ ಶರೀರದಿಂದ ಸತ್ಪುತ್ರನು ಹುಟ್ಟಿದುದ ರಿಂದ ವೇನನು ಸ್ವರ್ಗಕ್ಕೆ ಹೋದನು. ಆ ಪೃಥುರಾಜನಿಗೆ ಪಟ್ಟಾಭಿಷೇಕ ಮಾಡುವುದಕ್ಕಾಗಿ ನದಿಗಳೂ, ಸಮುದ್ರಗಳೂ (ಅಂದರೆ ಅಭಿಮಾನಿ ದೇವತೆಗಳು) ರತ್ನಗಳನ್ನೂ ತಂತಮ್ಮ ನೀರುಗಳನ್ನೂ ತೆಗೆದುಕೊಂಡು ತಾವೇ ಬಂದರು.

ಪಿತಾಮಹಾಶ್ಚ ಭಗವಾನ್ ದೇವೈರಾಂಗಿರಸೈಸ್ಸಹ ।
ಸ್ಥಾವರಾಣಿ ಚ ಭೂತಾನಿ ಜಂಗಮಾನಿ ಚ ಸರ್ವಶಃ ॥

ಸಮಾಗಮ್ಯ ತದಾ ವೈನ್ಯಮಭ್ಯಷಿಂಚನ್ನರಾಧಿಪಂ ॥ ೪೪ ॥

ಹಸ್ತೇ ತು ದಕ್ಷಿಣೇ ಚಕ್ರಂ ದೃಷ್ಟ್ವಾ ತಸ್ಯ ಪಿತಾಮಹಃ ।
ವಿಷ್ಣೋರಂಶಂ ಪೃಥುಂ ಮತ್ವಾ ಪರಿತೋಷಂ ಪರಂ ಯಯೌ ॥ ೪೫ ॥

ವಿಷ್ಣುಚಿಹ್ನಂ ಕರೇ ಚಕ್ರಂ ಸರ್ವೇಷಾಂ ಚಕ್ರವರ್ತಿನಾಂ ।
ಭವತ್ಯವ್ಯಾಹತೋ ಯಸ್ಯ ಪ್ರಭಾವಸ್ತ್ರಿದಶೈರಪಿ ॥ ೪೬ ॥

ಮಹತಾ ರಾಜರಾಜ್ಯೇನ ಪೃಥುರ್ವೈನ್ಯಃ ಪ್ರತಾಪವಾನ್ ।
ಸೋಭಿಷಿಕ್ತೋ ಮಹಾತೇಜಾ ವಿಧಿವದ್ಧರ್ಮಕೋವಿದೈಃ ॥ ೪೭ ॥

ಪಿತ್ರಾ ಪರಾಜಿತಾಸ್ತಸ್ಯ ಪ್ರಜಾಸ್ತಾ ನಾನುರಂಜಿತಾಃ ।
ಅನುರಾಗಾತ್ತತಸ್ತಸ್ಯ ನಾಮ ರಾಜೇತ್ಯಜಾಯತ ॥ ೪೮ ॥

ಆಪಸ್ತಸ್ತಂಭಿರೇ ಚಾಸ್ಯ ಸಮುದ್ರಮಭಿಯಾಸ್ಯತಃ ।
ಪರ್ವತಾಶ್ಚ ದದುರ್ಮಾರ್ಗಂ ಧ್ವಜಭಂಗಶ್ಚ ನಾಭವತ್ ॥ ೪೯ ॥

೪೪-೪೭ ಬ್ರಹ್ಮನು ದೇವತೆಗಳೊಡನೆಯೂ, ಬೃಹಸ್ಪತಿಯೊಡನೆಯೂ ಸಮಸ್ತ ಚರಾಚರ ಪ್ರಾಣಿಗಳೊಡನೆಯೂ ಬಂದು ವೇನಪುತ್ರನಾದ ಪೃಥುವಿಗೆ ಪಟ್ಟಾಭಿಷೇಕವನ್ನು ಮಾಡಿದನು. ಪೃಥುವಿನ ಬಲಗೈಯಲ್ಲಿ ಸ್ಪಷ್ಟವಾದ ಚಕ್ರರೇಖೆಯಿರುವುದನ್ನು ನೋಡಿ ಬ್ರಹ್ಮನು ಪೃಥುವು ವಿಷ್ಣುವಿನ ಅಂಶವೆಂದು ತಿಳಿದು, ಸಂತೋಷದಿಂದ ಇದ್ದನು. ಸಮಸ್ತ ಚಕ್ರವರ್ತಿಗಳಿಗೂ ಕೈಯಲ್ಲಿ ವಿಷ್ಣುವಿನ ಚಿಹ್ನೆಯಾದ ಚಕ್ರರೇಖೆಯು ಇರುವುದು. ಅಂತಹ ಚಕ್ರವರ್ತಿಯ ಆಜ್ಞೆಯನ್ನು ದೇವತೆಗಳೂ, ತಡೆಯಿಲ್ಲದೆ ನಡೆಸುವರು. ಧರ್ಮವನ್ನು ಚೆನ್ನಾಗಿ ತಿಳಿದವರು ವೇನನ ಮಗನಾದ ಪೃಥುವನ್ನು ಚಕ್ರವರ್ತಿಯನ್ನಾಗಿ ಮಾಡಿ ವಿಧಿಗನುಸಾರವಾಗಿ ಪಟ್ಟಾಭಿಷೇಕವನ್ನು ಮಾಡಿದರು.

೪೮-೪೯. ವೇನನು ರಾಜನಾಗಿದ್ದಾಗ ಪ್ರಜೆಗಳನ್ನು ಸಂತೋಷಪಡಿಸಲಿಲ್ಲ. ಪೃಥುವು ಪ್ರಜೆಗಳಲ್ಲಿ ಅನುರಾಗವುಳ್ಳವನಾದುದರಿಂದ ಅವನಿಗೆ ರಾಜನೆಂಬ ಹೆಸರು

ಆಕೃಷ್ಟಪಚ್ಯಾ ಪೃಥಿವೀ ಸಿದ್ಧ್ಯಂತ್ಯರ್ಥಾನಿ ಚಿಂತಯಾ ।
ಸರ್ವಕಾಮದುಘಾ ಗಾವಃ ಪುಟಕೇ ಪುಟಕೇ ಮಧು ॥ ೫೦ ॥

ತಸ್ಯ ವೈ ಜಾತಮಾತ್ರಸ್ಯ ಯಜ್ಞೇ ಪೈತಾಮಹೇ ಶುಭೇ ।
ಸೂತಸ್ಸೂತ್ಯಾಂ ಸಮುತ್ಪನ್ನಸ್ಸೌತ್ಯೇಽಹನಿ ಮಹಾಮತಿಃ ॥ ೫೧ ॥

ತಸ್ಮಿನ್ನೇವ ಮಹಾಯಜ್ಞೇ ಜಜ್ಞೇ ಪ್ರಾಜ್ಞೋಽಥ ಮಾಗಧಃ ।
ಪ್ರೋಕ್ತೌ ತದಾ ಮುನಿವರೈಸ್ತಾವುಭೌ ಸೂತಮಾಗಧೌ ॥ ೫೨ ॥

ಸ್ತೂಯತಾಮೇಷ ನೃಪತಿಃ ಪೃಥುರ್ವೈನ್ಯಃ ಪ್ರತಾಪವಾನ್ ।
ಕರ್ಮೈತದನುರೂಪಂ ಚ ಪಾತ್ರಂ ಸ್ತೋತ್ರಸ್ಯ ಚಾಪರಂ ॥ ೫೩ ॥

ಬಂದಿತು. ಅವನು ಸಮುದ್ರದ ಸಮೀಪಕ್ಕೆ ಹೋದರೆ ಸಮುದ್ರವು ಇವನ ಗೌರವಕ್ಕಾಗಿ ಶಾಂತವಾಗುತ್ತಿದ್ದಿತು. ಪರ್ವತಗಳು ಇವನಿಗೆ ದಾರಿಯನ್ನು ಮಾಡಿಕೊಟ್ಟುವು. ಕಾಡಿನಲ್ಲಿ ಪ್ರಯಾಣ ಮಾಡುತ್ತಿದ್ದ ಈ ರಾಜನ ಬಾವುಟವು ಮುಂದು ಬೀಳಲಿಲ್ಲ. ಇವನಿಗೆ ಎಲ್ಲೆಡೆಯಲ್ಲಿಯೂ ಗೌರವವೂ ಜಯವೂ ಉಂಟಾಗುತ್ತಿದ್ದಿತೆಂದು ಭಾವವು.

೫೦. ಪೃಥುವು ರಾಜನಾಗಿದ್ದಾಗ ಭೂಮಿಯನ್ನು ಉಳದಿದ್ದರೂ ಸಸ್ಯಗಳು ಚೆನ್ನಾಗಿ ಬೆಳೆದು ಫಲಕೊಡುತ್ತಿದ್ದುವು. ಇವನ ಮನಸ್ಸಿಗೆ ಬಂದೊಡನೆ ಬೇಕಾದ ಅರ್ಥಸಿದ್ಧಿಯಾಗುತ್ತಿದ್ದಿತು. ಗೋವುಗಳು ಸಮಸ್ತ ಇಷ್ಟಾರ್ಥಗಳನ್ನೂ ಕೊಡುತ್ತಿದ್ದುವು. ಎಲೆಯಿಂದ ಮಾಡಿದ ಪ್ರತಿಯೊಂದು ದೊನ್ನೆಯಲ್ಲಿಯೂ ಜೇನು ತುಂಬಿರುತ್ತಿದ್ದಿತು.

೫೧-೫೨. ಆ ಪೃಥುವು ಹುಟ್ಟಿದ್ದಾಗ ಬ್ರಹ್ಮನು ಸೋಮಯಾಗವನ್ನು ಮಾಡುತ್ತಿದ್ದನು. ಆ ಸೋಮಯಾಗದಲ್ಲಿ ಸೋಮರಸವನ್ನು ತೆಗೆಯುತ್ತಿದ್ದ ಭೂಮಿಯಲ್ಲಿ ರಸವನ್ನು ತೆಗೆಯುತ್ತಿದ್ದ ದಿನದಲ್ಲಿ ಮಹಾ ಬುದ್ಧಿವಂತನಾದ ಸೂತನೆಂಬುವನು ಹುಟ್ಟಿದನು. ಅದೇ ಯಜ್ಞದಲ್ಲಿಯೇ ಅದೇ ದಿನ ಪ್ರಾಜ್ಞನಾದ ಮಾಗಧನೆಂಬುವನೂ ಹುಟ್ಟಿದನು. ಋಷಿಗಳು ಅವರಿಬ್ಬರನ್ನೂ ಕುರಿತು ಹೇಳಿದರು :—

೫೩-೫೪. ನೀವಿಬ್ಬರೂ ವೇನಪುತ್ರನಾದ ಪರಾಕ್ರಮಶಾಲಿಯಾದ ಪೃಥು ಚಕ್ರವರ್ತಿಯನ್ನು ಸ್ತೋತ್ರಮಾಡಿರಿ. ಈ ಕೆಲಸವು ನಿಮಗೆ ತಕ್ಕುದಾಗಿಯೂ ಶ್ರೇಷ್ಠವಾದುದಾಗಿಯೂ ಇರುವುದು ಎಂದರು. ಆಗ ಅವರಿಬ್ಬರೂ ಋಷಿಗಳನ್ನು

ತತಸ್ತಾವೂಚತುರ್ವಿಪ್ರಾಸ್ಸರ್ವಾನೇವ ಕೃತಾಂಜಲೀ ।
ಅದ್ಯ ಜಾತಸ್ಯ ನೋ ಕರ್ಮ ಜ್ಞಾಯತೇಽಸ್ಯ ಮಹೀಪತೇಃ ॥ ೫೪ ॥

ಗುಣಾ ನಚಾಸ್ಯ ಜ್ಞಾಯಂತೇ ನ ಚಾಸ್ಯ ಪ್ರಥಿತಂ ಯಶಃ ।
ಸ್ತೋತ್ರಂ ಕಿಮಾಶ್ರಯಂ ತ್ವಸ್ಯ ಕಾರ್ಯಮಸ್ಮಾಭಿರುಚ್ಯತಾಂ ॥ ೫೫ ॥

॥ ಋಷಯ ಊಚುಃ ॥

ಕರಿಷ್ಯತ್ಯೇಷ ಯತ್ಕರ್ಮ ಚಕ್ರವರ್ತೀ ಮಹಾಬಲಃ ।
ಗುಣಾ ಭವಿಷ್ಯಾ ಯೇಚಾಸ್ಯ ತೈರಯಂ ಸ್ತೂಯತಾಂ ನೃಪಃ ॥ ೫೬ ॥

॥ ಶ್ರೀ ಪರಾಶರ ಉವಾಚ ॥

ತತಸ್ಸ ನೃಪತಿಸ್ತೋಷಂ ತಚ್ಛ್ರುತ್ವಾ ಪರಮಂ ಯಯೌ ।
ಸದ್ಗುಣೈಶ್ಶ್ಲಾಘ್ಯತಾಮೇತಿ ತಸ್ಮಾಚ್ಛ್ಲಾಘ್ಯಾ ಗುಣಾ ಮಮ ॥ ೫೭ ॥

ಕುರಿತು ಕೈಮುಗಿದುಕೊಂಡು ಈ ದಿನ ಹುಟ್ಟಿದ ಈ ರಾಜನ ಕೆಲಸವನ್ನೂ, ಗುಣವನ್ನೂ ನಾವು ಕಂಡಿಲ್ಲ. ಇವನ ಕೀರ್ತಿಯೂ ಪ್ರಸಿದ್ಧವಾದುದಾಗಿಲ್ಲ. ಹೀಗಿರುವಲ್ಲಿ ನಾವು ಇವನ ಸ್ತೋತ್ರವನ್ನು ಯಾವ ಆಧಾರದಮೇಲೆ ಮಾಡಬೇಕು. ಅದನ್ನು ದಯೆಯಿಟ್ಟು ಹೇಳಬೇಕು ಎಂದು ಕೇಳಿದರು.

೫೬. ಋಷಿಗಳು 'ಈ ಮಹಾ ಬಲಶಾಲಿಯಾದ ಚಕ್ರವರ್ತಿಯು ಯಾವ ಒಳ್ಳೆಯ ಕೆಲಸಗಳನ್ನು ಮಾಡಬೇಕೋ ಅವುಗಳನ್ನೇ ಆಧಾರ ಮಾಡಿಕೊಂಡು ಸ್ತೋತ್ರಮಾಡಿರಿ ಎಂದರು. (ರಾಜನ ಬಲಗೈಯಲ್ಲಿ ಚಕ್ರಚಿಹ್ನೆಯು ಇರುವುದರಿಂದ ಇವನು ಮಹಾ ಬಲಶಾಲಿಯೂ, ವಿಷ್ಣುವಿನ ಅಂಶಸಂಭೂತನೂ ಆಗಿರುವುದರಿಂದ ಇವನು ಗುಣವಂತನೂ, ಒಳ್ಳೆಯ ಕೆಲಸಗಳನ್ನು ಮಾಡುವವನೂ ಆಗುವನು. ಉತ್ತಮನಾದುದರಿಂದ ಗುಣಕರ್ಮಗಳ ಸ್ತೋತ್ರಗಳಿಂದಲೇ ಇವನು ಮಾಡಬೇಕಾದುದನ್ನು ತಿಳಿಸಿ ಕೊಡಬೇಕೆಂದು ಭಾವವು.)

೫೭-೬೦ ಈ ಮಾತನ್ನು ಕೇಳಿ ರಾಜನು ಪರಮ ಸಂತೋಷವನ್ನು ಹೊಂದಿದನು. ಮತ್ತು ಮನುಷ್ಯನು ಒಳ್ಳೆಯ ಗುಣಗಳಿಂದ ಶ್ಲಾಘ್ಯನಾಗುವನು. ಆದುದರಿಂದ ನಾನು ಗುಣವಂತನಾಗಬೇಕು. ಆ ಕಾರಣದಿಂದ ಇವರುಗಳೂ ಯಾವ ಗುಣವನ್ನು ವರ್ಣನೆ ಮಾಡುವರೋ ಅಂತಹ ಗುಣವುಳ್ಳ ಕೆಲಸಗಳನ್ನೇ ಮಾಡುವೆನು.

ತಸ್ಮಾನ್ಯದತ್ರ ಸ್ತೋತ್ರೇ ಮೇ ಗುಣನಿರ್ವರ್ಣನಂ ತ್ವಿಮೌ ।
ಕರಿಷ್ಯೇತೇ ಕರಿಷ್ಯಾಮಿ ತದೇವಾಹಂ ಸಮಾಹಿತಃ ॥ ೫೮ ॥

ಯದೀಮೌ ವರ್ಜನೀಯಂ ಚ ಕಿಂಚಿದತ್ರ ವದಿಷ್ಯತಃ ।
ತದಹಂ ವರ್ಜಯಿಷ್ಯಾಮೀತ್ಯೇವಂ ಚಕ್ರೇ ಮತಿಂ ನೃಪಃ ॥ ೫೯ ॥

ಅಥ ತೌ ಚಕ್ರತುಸ್ತೋತ್ರಂ ಪೃಥೋರ್ವೈನ್ಯಸ್ಯ ಧೀಮತಃ ।
ಭವಿಷ್ಯೈಃ ಕರ್ಮಭಿಸ್ಸಮ್ಯಕ್ಸುಸ್ವರೌ ಸೂತಮಾಗಧೌ ॥ ೬೦ ॥

ಸತ್ಯವಾಗ್ದಾನಶೀಲೋಽಯಂ ಸತ್ಯಸಂಧೋ ನರೇಶ್ವರಃ ।
ಹ್ರೀಮಾನ್ಮೈತ್ರಃ ಕ್ಷಮಾಶೀಲೋ ವಿಕ್ರಾಂತೋ ದುಷ್ಟಶಾಸನಃ ॥ ೬೧ ॥

ಧರ್ಮಜ್ಞಶ್ಚ ಕೃತಜ್ಞಶ್ಚ ದಯಾವಾನ್ಪ್ರಿಯಭಾಷಿತಾ ।
ಮಾನ್ಯಾನ್ಮಾನಯಿತಾ ಯಜ್ವಾ ಬ್ರಹ್ಮಣ್ಯಸ್ಸಾಧುವತ್ಸಲಃ ॥ ೬೨ ॥

ಸಮಶ್ಶತ್ರೌ ಚ ಮಿತ್ರೇ ಚ ವ್ಯವಹಾರಸ್ಥಿತೌ ನೃಪಃ ॥ ೬೩ ॥

ಸೂತೇನೋಕ್ತಾನ್ಗುಣಾನಿತ್ಥಂ ಸ ತಥಾ ಮಾಗಧೇನ ಚ ।
ಚಕಾರ ಹೃದಿ ತಾದೃಕ್ಚ ಕರ್ಮಣಾ ಕೃತವಾನಸೌ ॥ ೬೪ ॥

ಯಾವ ಗುಣಗಳನ್ನು ಬಿಡಬೇಕೆಂದು ಹೇಳುವರೋ ಅವುಗಳನ್ನು ಬಿಡುತ್ತೇನೆ. ಎಂದ ಮನಸ್ಸು ಮಾಡಿದನು. ಆ ಬಳಿಕ ಸೂತಮಾಗಧರು ರಾಜನು ಮಾಡಬೇಕಾದ ಒಳ್ಳೆಯ ಕೆಲಸಗಳನ್ನು ಕುರಿತು ಮಧುರ ಧ್ವನಿಯಿಂದ ಬುದ್ಧಿವಂತನಾದ ಪೃಥುರಾಜನ ಸ್ತೋತ್ರವನ್ನು ಮಾಡಿದರು.

೬೧-೬೪. "ಈ ರಾಜನು ಸತ್ಯಭಾಷಿಯು, ದಾನ ಮಾಡುವವನು. ಸತ್ಯ ಪ್ರತಿಜ್ಞೆಯುಳ್ಳವನು. ದುಷ್ಟರನ್ನು ಶಿಕ್ಷಿಸುವ ವಿಷಯದಲ್ಲಿ ಪರಾಕ್ರಮವುಳ್ಳವನು. ಧರ್ಮವನ್ನು ತಿಳಿದವನು. ಉಪಕಾರ ಸ್ಮರಣೆಯುಳ್ಳವನು. ದಯಾವಂತನು. ಹಿತವಾದ ಮಾತನಾಡುವನು. ಗೌರವವುಳ್ಳವರನ್ನು ಗೌರವಿಸುವನು, ಯಾಗಮಾಡುತಕ್ಕವನು, ಬ್ರಹ್ಮಜ್ಞಾನವುಳ್ಳವನು, ಸಜ್ಜನರಲ್ಲಿ ಪ್ರೀತಿಯುಳ್ಳವನು, ಶತ್ರು ಮಿತ್ರರು ವಿಷಯದಲ್ಲಿ ಸಮಾನಭಾವವುಳ್ಳವನು ಎಂದು ಸೂತಮಾಗಧರು ಹೇಳಿದಂತೆ ರಾಜನು ಇವುಗಳನ್ನು ಮನಸ್ಸಿನಲ್ಲಿಟ್ಟು ಅದರಂತೆ ಕಾರ್ಯಗಳನ್ನು ಮಾಡುತ್ತಿದ್ದನು.

ತತಸ್ಸ ಪೃಥಿವೀಪಾಲಃ ಪಾಲಯನ್ಪೃಥಿವೀಮಿಮಾಂ ।
ಇಯಾಜ ವಿವಿಧೈರ್ಯಜ್ಞೈರ್ಮಹದ್ಭಿರ್ಭೂರಿದಕ್ಷಿಣೈಃ ॥ ೬೫ ॥

ತಂ ಪ್ರಜಾಃ ಪೃಥಿವೀನಾಥಮುಪತಸ್ಥುಃ ಕ್ಷುಧಾರ್ದಿತಾಃ ।
ಓಷಧೀಷು ಪ್ರಣಷ್ಟಾಸು ತಸ್ಮಿನ್ಕಾಲೇ ಹ್ಯರಾಜಕೇ ॥
ತಮೂಚುಸ್ತೇ ನರಾಃ ಪೃಷ್ಟಾಃ ತತ್ರಾಗಮನಕಾರಣಂ ॥ ೬೬ ॥

॥ ಪ್ರಜಾ ಊಚುಃ ॥

ಅರಾಜಕೇ ನೃಪಶ್ರೇಷ್ಠ ಧರಿತ್ರ್ಯಾ ಸಕಲೌಷಧೀಃ ।
ಗ್ರಸ್ತಾಸ್ತತಃ ಕ್ಷಯಂ ಯಾಂತಿ ಪ್ರಜಾಸ್ಸರ್ವಾಃ ಪ್ರಜೇಶ್ವರ ॥ ೬೭ ॥

ತ್ವಂ ನೋ ವೃತ್ತಿ ಪ್ರದೋ ಧಾತ್ರಾ ಪ್ರಜಾಪಾಲೋ ನಿರೂಪಿತಃ ।
ದೇಹಿ ನಃ ಕ್ಷುತ್ಪರೀತಾನಾಂ ಪ್ರಜಾನಾಂ ಜೀವನೌಷಧೀಃ ॥ ೬೮ ॥

---

೬೫. ಆ ಮೇಲೆ ಪೃಥುರಾಜನು ಭೂಮಿಯನ್ನು ಪಾಲಿಸುತ್ತ ವಿಶೇಷವಾದ ದಕ್ಷಿಣೆಯಿಂದ ಕೂಡಿದ ಬಗೆಬಗೆಯ ಮಹಾಯಜ್ಞಗಳನ್ನು ಮಾಡಿದನು.

೬೬-೬೮. ವೇನರಾಜನಿಗೂ ಪೃಥುವಿಗೂ ಮಧ್ಯ ಕಾಲದಲ್ಲಿ ರಾಜರಿಲ್ಲದಿದ್ದಾಗ ಭೂಮಿಯಲ್ಲಿ ಸಸ್ಯಗಳೆಲ್ಲ ನಾಶವಾಗುತ್ತಲು ಜನರು ಹಸಿವಿನಿಂದ ಪೀಡಿತರಾಗಿ ರಾಜನ ಸಮೀಪಕ್ಕೆ ಬಂದು "ರಾಜಶ್ರೇಷ್ಠನೇ ರಾಜನಿಲ್ಲದ ಕಾಲದಲ್ಲಿ ಭೂಮಿಯಲ್ಲಿ ಸಕಲ ಸಸ್ಯಗಳೂ ನಾಶವಾದುವು. ಈ ಕಾರಣದಿಂದ ಪ್ರಜೆಗಳೆಲ್ಲರೂ ನಾಶವಾಗುತ್ತಿರುವರು. ನಮಗೆ ಜೀವನವನ್ನು ಕಲ್ಪಿಸುವುದಕ್ಕಾಗಿ ಬ್ರಹ್ಮನು ನಿನ್ನನ್ನು ರಾಜನನ್ನಾಗಿ ಮಾಡಿರುವನು. ಆದುದರಿಂದ ಹಸಿವಿನಿಂದ ಕೂಡಿದ ಈ ಪ್ರಜೆಗಳಿಗೆ ಜೀವನೌಷಧಿಯನ್ನು ನೀನು ಕಲ್ಪಿಸಿ ಕೊಡಬೇಕು" ಎಂದು ಹೇಳಿದರು.

॥ ಶ್ರೀ ಪರಾಶರ ಉವಾಚ ॥

ತತೋಽಥ ನೃಪತಿರ್ದಿವ್ಯಮಾದಾಯಾಜಗವಂ ಧನುಃ ।
ಶರಾಂಶ್ಚ ದಿವ್ಯಾನ್ ಕುಪಿತಸ್ಸೋಽನ್ವಧಾವದ್ವಸುಂಧರಾಂ ॥ ೬೯ ॥

ತತೋ ನನಾಶ ತ್ವರಿತಾ ಗೌರ್ಭೂತ್ವಾ ತು ವಸುಂಧರಾ ।
ಸಾ ಲೋಕಾನ್ ಬ್ರಹ್ಮಲೋಕಾದೀನ್ ಸಂತ್ರಾಸಾದಗಮನ್ಮಹೀ ॥ ೭೦ ॥

ಯತ್ರ ತತ್ರ ಯಯೌ ದೇವೀ ಸಾ ತದಾ ಭೂತಧಾರಿಣೀ ।
ತತ್ರ ತತ್ರ ಚ ಸಾ ವೈನ್ಯಂ ದದರ್ಶಾಭ್ಯುದ್ಯತಾಯುಧಂ ॥ ೭೦ ॥

ತತಸ್ತಂ ಪ್ರಾಹ ವಸುಧಾ ಪೃಥುಂ ಪೃಥುಪರಾಕ್ರಮಂ ।
ಪ್ರವೇಪಮಾನಾ ತದ್ಬಾಣಪರಿತ್ರಾಣಪರಾಯಣಾ ॥ ೭೨ ॥

॥ ಪೃಥಿವ್ಯುವಾಚ ॥

ಸ್ತ್ರೀವಧೇ ತ್ವಂ ಮಹತ್ಪಾಪಂ ಕಿಂ ನರೇಂದ್ರ ನ ಪಶ್ಯಸಿ ।
ಯೇನ ಮಾಂ ಹಂತುಮತ್ಯರ್ಥಂ ಪ್ರಕರೋಷಿ ನೃಪೋಽದ್ಯಮಂ ॥ ೭೩ ॥

೬೯–೭೨. ಆಗ ರಾಜನು ಕೋಪದಿಂದ ದಿವ್ಯವಾದ ಬಾಣಗಳನ್ನೂ ಅಜಗವವೆಂಬ ಧನುಸ್ಸನ್ನೂ ತೆಗೆದುಕೊಂಡು ಅಭಿಮಾನಿ ದೇವತೆಯಾದ ಭೂಮಿಯನ್ನು ಓಡಿಸಿಕೊಂಡು ಹೋದನು. ಭೂಮಿಯು ಭಯಪಟ್ಟು ಹಸುವಿನ ರೂಪಿನಿಂದ ಓಡುತ್ತ ಬ್ರಹ್ಮಲೋಕಾದಿಗಳನ್ನೆಲ್ಲಾ ತಿರುಗಿತು. ಎಲ್ಲೆಲ್ಲಿ ಹೋದರೂ ಪೃಥುವು ಆಯುಧ ಧಾರಿಯಾಗಿ ಅದರ ಹಿಂದೆಯೇ ಹೋದನು. ಬಳಿಕ ಭೂಮಿಯು ಅವನ ಆಯುಧಕ್ಕೆ ಹೆದರಿ ನಡುಗುತ್ತ ಅವನನ್ನು ಕುರಿತು—

೭೩–೭೫. ಓ ರಾಜನೇ ಸ್ತ್ರೀ ವಧೆಯು ಮಹಾ ಪಾಪವೆಂಬುದನ್ನು ನೀನರಿಯೆಯಾ? ನನ್ನನ್ನು ಕೊಲ್ಲುವ ಪ್ರಯತ್ನವನ್ನೇಕೆ ಮಾಡುವೆ ಎಂದು ಹೇಳಿದಳು. ರಾಜನು 'ಎಲ್ಲೈ ದುಷ್ಟೆಯೇ ಒಬ್ಬನನ್ನು ಕೊಂದರೆ ಅನೇಕರಿಗೆ ಪ್ರಯೋಜನವಾಗುವದಾಗಿದ್ದರೆ ಆ ಕೊಲೆಯು ಪುಣ್ಯಕರವಾದುದಾಗುವುದು

॥ ಪೃಥುರುವಾಚ ॥

ಏಕಸ್ಮಿನ್ ಯತ್ರ ನಿಧನಂ ಪ್ರಾಪಿತೇ ದುಷ್ಟಕಾರಿಣಿ ।
ಬಹೂನಾಂ ಭವತಿ ಕ್ಷೇಮಂ ತಸ್ಯ ಪುಣ್ಯಪ್ರದೋ ವಧಃ ॥ ೭೪ ॥

॥ ಪೃಥಿವ್ಯುವಾಚ ॥

ಪ್ರಜಾನಾಮುಪಕಾರಾಯ ಯದಿ ಮಾಂ ತ್ವಂ ಹನಿಷ್ಯಸಿ ।
ಆಧಾರಃ ಕಃ ಪ್ರಜಾನಾಂ ತೇ ನೃಪಶ್ರೇಷ್ಠ ಭವಿಷ್ಯತಿ ॥ ॥ ೭೫ ॥

॥ ಪೃಥುರುವಾಚ ॥

ತ್ವಾಂ ಹತ್ವಾ ವಸುಧೇ ಬಾಣೈರ್ಮಚ್ಛಾಸನಪರಾಂಙ್ಮುಖೀಂ ।
ಆತ್ಮಯೋಗಬಲೇನೈವ ಧಾರಯಿಷ್ಯಾಮ್ಯಹಂ ಪ್ರಜಾಃ ॥ ೭೬ ॥

ತತಃ ಪ್ರಣಮ್ಯ ವಸುಧಾ ತಂ ಭೂಯಃ ಪ್ರಾಹ ಪಾರ್ಥಿವಂ ।
ಪ್ರವೇಪಿತಾಂಗೀ ಪರಮಂ ಸಾಧ್ವಸಂ ಸಮುಪಾಗತಾ ॥ ೭೭ ॥

ಉಪಾಯತಸ್ಸಮಾರಬ್ಧಾಸ್ಸರ್ವೇ ಸಿದ್ಧ್ಯಂತ್ಯುಪಕ್ರಮಾಃ ।
ತಸ್ಮಾದ್ವದಾಮ್ಯುಪಾಯಂ ತೇ ತಂ ಕುರುಷ್ವ ಯದೀಚ್ಛಸಿ ॥ ೭೮ ॥

ಎಂದನು. ಆಗ ಭೂಮಿಯು ‘ ಎಲೈ ರಾಜನೇ ನಿನ್ನ ಪ್ರಜೆಗಳಿಗೆ ಉಪಕಾರ ಮಾಡ ಬೇಕೆಂದು ನೀನು ನನ್ನನ್ನು ಕೊಂದರೆ ನಿನ್ನ ಪ್ರಜೆಗಳಿಗೆ ಆಶ್ರಯವೆಲ್ಲಿ ಸಿಕ್ಕುವುದು ? ' ಎಂದಳು.

೭೬–೭೮ ರಾಜನು, “ಎಲೈ ಭೂಮಿಯೇ ನನ್ನ ಸ್ಪಣೆಯನ್ನು ನಡೆಸದ ನಿನ್ನನ್ನು ಕೊಂದು ನನ್ನ ಯೋಗಬಲದಿಂದ ಪ್ರಜೆಗಳಿಗೆ ನಾನೇ ಆಶ್ರಯನಾಗುವೆನು” ಎಂದ ಮಾತನ್ನು ಕೇಳಿ ಭೂಮಿಯು ರಾಜನಿಗೆ ನಮಸ್ಕರಿಸಿ ಭಯದಿಂದ ನಡುಗುತ್ತ ‘ಎಲೈ ರಾಜನೇ ಯುಕ್ತಿಯಿಂದ (ಉಪಾಯದಿಂದ) ಮಾಡಿದ ಕಾರ್ಯವೆಲ್ಲವೂ ಸಿದ್ಧಿಸುವುವು. ನಾನು ಉಪಾಯವನ್ನು ಹೇಳುವೆನು ನಿನ್ನಿಷ್ಟವಿದ್ದರೆ ಅದನ್ನು ಮಾಡು ’

ಸಮಸ್ತಾ ಯಾ ಮಯಾ ಜೀರ್ಣಾ ನರನಾಥ ಮಹೌಷಧೀಃ
ಯದೀಚ್ಛಸಿ ಪ್ರದಾಸ್ಯಾಮಿ ತಾಃ ಕ್ಷೀರಪರಿಣಾಮಿನೀಃ ॥ ೭೯ ॥

ತಸ್ಮಾತ್ಪ್ರಜಾ ಹಿತಾರ್ಥಾಯ ಮಮ ಧರ್ಮಭೃತಾಂ ವರ ।
ತಂ ತು ವತ್ಸಂ ಪ್ರಯಚ್ಛ ತ್ವಂ ಕ್ಷರೇಯಂ ಯತ್ರ ವತ್ಸಲಾ ॥ ೮೦ ॥

ಸಮಾಂ ಚ ಕುರು ಸರ್ವತ್ರ ಯೇನ ಕ್ಷೀರಂ ಸಮಂತತಃ ।
ವರೌಷಧೀಬೀಜಭೂತಂ ವೀರ ಸರ್ವತ್ರ ಭಾವಯೇ ॥ ೮೧ ॥

॥ ಶ್ರೀ ಪರಾಶರ ಉವಾಚ ॥

ತತ ಉತ್ಸಾರಯಾಮಾಸ ಶೈಲಾನ್ ಶತಸಹಸ್ರಶಃ ।
ಧನುಃ ಕೋಟ್ಯಾ ತಥಾ ವೈನ್ಯಸ್ತೇನ ಶೈಲಾ ವಿವರ್ಧಿತಾಃ ॥ ೮೨ ॥

ನ ಹಿ ಪೂರ್ವವಿಸರ್ಗೇ ವೈ ವಿಷಮೇ ಪೃಥಿವೀತಲೇ ।
ಪ್ರವಿಭಾಗಃ ಪುರಾಣಾಂ ವಾ ಗ್ರಾಮಾಣಾಂ ವಾ ಪುರಾಭವತ್ ॥ ೮೩ ॥

೭೯–೮೧. ರಾಜನೇ ನನ್ನ ಶರೀರದಲ್ಲಿ ಮಹೌಷಧಿಗಳೆಲ್ಲ ಜೀರ್ಣವಾಗಿ ಹೋಗಿವೆ. ನಿನಗೆ ಇಷ್ಟವಿದ್ದರೆ ಹಾಲಿನ ರೂಪವನ್ನು ಧರಿಸಿದ ಅವುಗಳನ್ನು ಕೊಡುವೆನು. ಪ್ರಜೆಗಳ ಹಿತಕ್ಕಾಗಿ ಧರ್ಮವನ್ನು ತಿಳಿದ ನೀನು ನನಗೊಂದು ಕರುವನ್ನು ಕಲ್ಪಿಸು. ಅದರಲ್ಲಿ ಪ್ರೀತಿಯಿಂದ ನಾನು ಹಾಲನ್ನು ಸುರಿಸುವೆನು ನಾನು ಕೊಡುವ ಹಾಲು ಉತ್ತಮವಾದ ಓಷಧಿಗಳ ಬೀಜರೂಪವಾಗಿ ನೆಲದಲ್ಲಿ ಹರಡುವುದಕ್ಕಾಗಿ ಭೂಮಿಯನ್ನು ಎಲ್ಲೆಡೆಯಲ್ಲಿಯೂ ಸಮತಲವಾಗುವಂತೆ ಮಾಡು ಎಂದು ಹೇಳಿದಳು.

೮೨–೮೩. ಆ ಮೇಲೆ ವೇನಪುತ್ರನು ತನ್ನ ಬಿಲ್ಲಿನ ತುದಿಯಿಂದ ಅನೇಕ ಪರ್ವತಗಳನ್ನು ಒಂದೆಡೆಗೆ ತಳ್ಳಿದನು. ಅವೆಲ್ಲ ಒಂದೆಡೆಗೆ ಸೇರಿದುವು. ಹಿಂದಿನ ಸೃಷ್ಟಿಯಲ್ಲಿ ಹಳ್ಳ ತಿಟ್ಟಾದ ಭೂ ಭಾಗದಲ್ಲಿ ಪಟ್ಟಣ, ಗ್ರಾಮ ಮುಂತಾದ ವಿಭಾಗಗ ಳಿರಲಿಲ್ಲ. ಸಸ್ಯಗಳೂ, ಗೋರಕ್ಷಣೆಯೂ, ವ್ಯವಸಾಯವೂ, ವ್ಯಾಪಾರವೂ ಇರಲಿಲ್ಲ.

ನ ಸಸ್ಯಾನಿ ನ ಗೋರಕ್ಷ್ಯಂ ನ ಕೃಷಿರ್ನ ವಣಿಕ್ಪಥಃ ।
ವೈನ್ಯಾತ್ಪ್ರಭೃತಿ ಮೈತ್ರೇಯ ಸರ್ವಸ್ಯೈತಸ್ಯ ಸಂಭವಃ ॥ ೮೪ ॥

ಯತ್ರ ಯತ್ರ ಸಮಂತ್ವಸ್ಯಾ ಭೂಮೇರಾಸೀನ್ನರಾಧಿಪ ।
ತತ್ರ ತತ್ರ ಪ್ರಜಾನಾಂ ಹಿ ನಿವಾಸಂ ಸಮರೋಚಯತ್ ॥ ೮೫ ॥

ಆಹಾರಃ ಫಲಮೂಲಾನಾಂ ಪ್ರಜಾನಾಮಭವತ್ತದಾ ।
ಕೃಚ್ಛ್ರೇಣ ಮಹತಾ ಸೋಽಪಿ ಪ್ರಣಷ್ಟಾಸ್ವೋಷಧೀಷು ವೈ ॥ ೮೬ ॥

ಸ ಕಲ್ಪಯಿತ್ವಾ ವತ್ಸಂ ತು ಮನುಂ ಸ್ವಾಯಂಭುವಂ ಪ್ರಭುಂ ।
ಸ್ವಪಾಣೌ ಪೃಥಿವೀನಾಥೋ ದುದೋಹ ಪೃಥಿವೀಂ ಪೃಥು ॥
ಸಸ್ಯಬೀಜಾನಿ ಸರ್ವಾಣಿ ಪ್ರಜಾನಾಂ ಹಿತಕಾಮ್ಯಯಾ ॥ ೮೭ ॥

ತೇನಾನ್ನೇನ ಪ್ರಜಾಸ್ತಾತ ವರ್ತಂತೇಽದ್ಯಾಪಿ ನಿತ್ಯಶಃ ॥ ೮೮ ॥

ಪ್ರಾಣಪ್ರದಾತಾ ಸ ಪೃಥುರ್ಯಸ್ಮಾದ್ಭೂಮೇರಭೂತ್ಪಿತಾ ।
ತತಸ್ತು ಪೃಥಿವೀಸಂಜ್ಞಾಮವಾಪಾಖಿಲಧಾರಿಣೀ ॥ ೮೯ ॥

ಪೃಥುವು ರಾಜನಾದಮೇಲೆ ಇವೆಲ್ಲ ಉಂಟಾದುವು. ಎಲ್ಲೆಲ್ಲಿ ಸಮಭೂಮಿಯಾಯಿತೋ ಅಲ್ಲೆಲ್ಲಾ ಪ್ರಜೆಗಳು ವಾಸಮಾಡಬೇಕೆಂದು ರಾಜನು ಅಪೇಕ್ಷಿಸಿದನು ಆಗ ಸಸ್ಯಗಳೆಲ್ಲ ನಷ್ಟವಾಗಿದ್ದರೂ ಗೆಡ್ಡೆ ಗೆಣಸುಗಳೂ, ಹಣ್ಣುಗಳೂ ಜನರಿಗೆ ಆಹಾರವಾಗಿ ದೊರೆತುವು.

೮೭-೮೯. ಆ ರಾಜನು ಸ್ವಾಯಂಭುವ ಮನುವನ್ನು ಕರುವನ್ನಾಗಿ ಕಲ್ಪಿಸಿ ಪ್ರಜೆಗಳ ಹಿತಕ್ಕಾಗಿ ತನ್ನ ಕೈಯಿಂದಲೇ ಗೋರೂಪವಾದ ಭೂಮಿಯ ಸಮಸ್ತ ಸಸ್ಯಬೀಜರೂಪವಾದ ಹಾಲನ್ನು ಕರೆದನು. ಮೈತ್ರೇಯನೇ, ಆ ಅನ್ನದಿಂದಲೇ ಈಗಲೂ ಪ್ರಜೆಗಳು ಜೀವಿಸಿರುವರು. ಪೃಥುವು ಭೂಮಿಗೆ ಪ್ರಾಣದಾನ ಮಾಡಿದುದರಿಂದ ಅವನು ಭೂಮಿಗೆ ತಂದೆಯಾದನು. ಇದರಿಂದ ಭೂಮಿಗೆ ಪೃಥಿವೀ ಎಂಬ ಹೆಸರು ಬಂದಿತು.

ತತಶ್ಚ ದೇವೈರ್ಮುನಿಭಿರ್ದೈತ್ಯೈ ರಕ್ಷೋಭಿರದ್ರಿಭಿಃ ।
ಗಂಧರ್ವೈರುರಗೈರ್ಯಕ್ಷೈಃ ಪಿತೃಭಿಸ್ತರುಭಿಸ್ತಥಾ ॥ ೯೦ ॥

ತತ್ತತ್ಪಾತ್ರಮುಪಾದಾಯ ತತ್ತದ್ದುಗ್ಧಂ ಮುನೇ ಪಯಃ ।
ವತ್ಸ ದೋಗ್ಧೃವಿಶೇಷಾಶ್ಚ ತೇಷಾಂ ತದ್ಯೋನಯೋ ಭವನ್ ॥ ೯೧ ॥

೯೦–೯೧. ಆಮೇಲೆ ದೇವತೆಗಳು, ಮುನಿಗಳು, ದೈತ್ಯರು, ರಾಕ್ಷಸರು, ಪರ್ವತಗಳು, ಗಂಧರ್ವರು, ಉರಗರು, ಯಕ್ಷರು, ಪಿತೃಗಳು, ಮರಗಳು ಅವರವರಿಗೆ ತಕ್ಕ ಪಾತ್ರೆಗಳನ್ನು ತೆಗೆದುಕೊಂಡು ಗೋರೂಪವಾದ ಭೂಮಿಯಲ್ಲಿ ಹಾಲನ್ನು ಕರೆದರು. ಕರೆಯುವವರ ಯೋಗ್ಯತೆಯಂತೆ ಅವರವರ ವಂಶವು ಬೆಳೆಯಿತು. ಇಲ್ಲಿ ದೇವಾದಿ ಹತ್ತುವರ್ಗಗಳಿರುವುವು. ಪ್ರತಿಯೊಂದು ವರ್ಗಕ್ಕೂ ಹಾಲು ಕರೆಯುವವರು ಕರು, ಪಾತ್ರೆ ಇವುಗಳನ್ನು ಹರಿವಂಶದಲ್ಲಿಯೂ ಮತ್ಸ್ಯಪುರಾಣಾದಿಗಳಲ್ಲಿಯೂ ಹೇಳಿರುವುದು. ಅದನ್ನೇ ಸಂಕ್ಷೇಪವಾಗಿ ಇಲ್ಲಿ ಹೇಳುವೆವು. ದೇವತೆಗಳಲ್ಲಿ ದೇವೇಂದ್ರನೇ ಕರುವು, ಮಿತ್ರನು ಹಾಲು ಕರೆಯುವವನು, ಚಿನ್ನದ ಪಾತ್ರೆ ಬಲವೇ ಹಾಲು.

ವರ್ಗ	ಕರು	ಹಾಲು ಕರೆದವರು	ಪಾತ್ರೆ	ಹಾಲು
ಮುನಿಗಳು	ಸೋಮ	ಬೃಹಸ್ಪತಿ	ವೇದಗಳು	ತಪಸ್ಸು ಬ್ರಹ್ಮಸ್ವರೂಪ
ದೈತ್ಯರು	ತ್ರಿಪುರ	ವಿರೋಚನ	ಕಬ್ಬಿಣ	ಮಾಯೆ
ರಾಕ್ಷಸರು	ಸುಮಾಲಿ	ಜಂತು	ತಲೆಬುರುಡೆ	ರಕ್ತ
ಪರ್ವತಗಳು	ಹಿಮವಂತ	ಮೇರು	ಶಿಲಾಮಯ	ಮಹೌಷಧಿಗಳು
ಗಂಧರ್ವರು	ಚಿತ್ರರಥ	ವಿಶ್ವಾವಸು	ಕಮಲ	ಗಂಧ
ಉರಗರು	ತಕ್ಷಕ	ದೃತರಾಷ್ಟ್ರ	ಸೋರೆಬುರುಡೆ	ವಿಷ
ಯಕ್ಷರು	ಕುಬೇರ	ಸುಪರ್ಣ	ಮಣ್ಣಿನಪಾತ್ರೆ	ಅಂತರ್ಧಾನ
ಪಿತೃಗಳು	ಯಮ	ಅಂತಕ	ಬೆಳ್ಳಿ	ಸ್ವಧಾ
ಮರಗಳು	ಅಶ್ವತ್ಥ	ಮತ್ತಿಮರ	ಮುತ್ತುಗ	ಕತ್ತರಿಸಿದ ಕೊಂಬೆ ಚಿಗುರುವುದು.

ಸೈಷಾ ಧಾತ್ರೀ ವಿಧಾತ್ರೀ ಚ ಧಾರಣೀ ಪೋಷಣೀ ತಥಾ ।
ಸರ್ವಸ್ಯ ಜಗತಃ ಪೃಥ್ವೀ ವಿಷ್ಣುಪಾದತಲೋದ್ಭವಾ ॥ ೯೨ ॥

ಏವಂ ಪ್ರಭಾವಸ್ಸಪೃಥುಃ ಪುತ್ರೋ ವೇನಸ್ಯ ವೀರ್ಯವಾನ್ ।
ಜಜ್ಞೇ ಮಹೀಪತಿಃ ಪೂರ್ವೋ ರಾಜಾಭೂಜ್ಜನರಂಜನಾತ್ ॥ ೯೩ ॥

ಯ ಇದಂ ಜನ್ಮ ವೈನ್ಯಸ್ಯ ಪೃಥೋಃ ಕೀರ್ತಯತೇ ನರಃ ।
ನ ತಸ್ಯ ದುಷ್ಕೃತಂ ಕಿಂಚಿತ್ಫಲದಾಯಿ ಪ್ರಜಾಯತೇ ॥ ೯೪ ॥

ದುಸ್ಸ್ವಪ್ನೋಪಶಮಂ ನೄಣಾಂ ಶೃಣ್ವತಾಂ ಚೈತದುತ್ತಮಂ ।
ಪೃಥೋರ್ಜನ್ಮ ಪ್ರಭಾವಶ್ಚ ಕರೋತಿ ಸತತಂ ಶುಭಂ ॥ ೯೫ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ತ್ರಯೋದಶೋಽಧ್ಯಾಯಃ

---

೯೨. ವಿಷ್ಣುವಿನ ಪಾದತಳದಲ್ಲಿ ಹುಟ್ಟಿದ ಭೂಮಿಯು ಸಮಸ್ತ ಜಗತ್ತಿಗೂ ತಾಯಿಯೂ, ಕರ್ತೃವೂ, ಆಶ್ರಯವೂ ಪೋಷಿಸತಕ್ಕವಳೂ ಆಗಿರುವಳು.

೯೩. ವೇನನ ಮಗನಾದ ಪೃಥುವು ಈ ರೀತಿಯಾದ ಮಹಿಮೆಯುಳ್ಳವನಾಗಿಯೂ? ಪರಾಕ್ರಮಿಯಾಗಿ, ಭೂಮಿಗೆ ಪತಿಯಾಗಿ ಜನರನ್ನು ಸಂತೋಷಪಡಿಸುವುದರಿಂದ ರಾಜನೆಂಬ ಹೆಸರನ್ನು ಪಡೆದನು.

೯೪. ವೇನಪುತ್ರನ (ಪೃಥುವಿನ) ಉತ್ಪತ್ತಿರೂಪವಾದ ಕಥೆಯನ್ನು ಯಾವ ಮನುಷ್ಯನು ಹೇಳುವನೋ ಅವನಿಗೆ ಯಾವ ಪಾಪಕರ್ಮಗಳೂ ಫಲವನ್ನು ಕೊಡುವ ಸ್ಥಿತಿಗೆ ಬರುವುದಿಲ್ಲ. ಅಂದರೆ ಈ ಕಥೆಯು ಪಾಪನಾಶಕರವಾದುದೆಂದು ಅಭಿಪ್ರಾಯವು.

೯೫. ಈ ಕಥೆಯನ್ನು ಕೇಳುವ ಜನರಿಗೆ ಕೆಟ್ಟ ಕನಸುಗಳಾಗುವುದಿಲ್ಲ ಪೃಥುವಿನ ಜನ್ಮಕಥೆಯ ಮಹಿಮೆಯು ಯಾವಾಗಲೂ ಶುಭವನ್ನುಂಟುಮಾಡುವುದಾಗಿರುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಹದಿಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಚತುರ್ದಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಪೃಥೋಃ ಪುತ್ರೌ ತು ಧರ್ಮಜ್ಞೌ ಜಜ್ಞಾತೇಽಂತರ್ಧಿವಾಧಿನೌ ।
ಶಿಖಂಡಿನೀ ಹವಿರ್ಧಾನಮಂತರ್ಧಾನಾ ದ್ವ್ಯಜಾಯತ ॥ ೧ ॥

ಹವಿರ್ಧಾನಾತ್ ಷಡಾಗ್ನೇಯೀ ಧಿಷಣಾಜನಯತ್ಸುತಾನ್ ।
ಪ್ರಾಚೀನಬರ್ಹಿಷಂ ಶುಕ್ರಂ ಗಯಂ ಕೃಷ್ಣಂ ವ್ರಜಾಜಿನೌ ॥ ೨ ॥

ಹದಿನಾಲ್ಕನೆಯ ಅಧ್ಯಾಯವು.

೧-೨. ಪೃಥುವಿಗೆ ಧರ್ಮವನ್ನು ಬಲ್ಲ ಅಂತರ್ಧಿ, ವಾದಿ ಎಂಬ ಇಬ್ಬರು ಮಕ್ಕಳಾದರು. ಅಂತರ್ಧಾನನ ಹೆಂಡತಿಯಾದ ಶಿಖಂಡಿನಿಯು ಹವಿರ್ಧಾನನೆಂಬ ಮಗನನ್ನು ಪಡೆದಳು. ಅಗ್ನಿವಂಶದಲ್ಲಿ ಹುಟ್ಟಿದ ಧಿಷಣಾ ಎಂಬವಳು ಹವಿರ್ಧಾನನಿಂದ ಪ್ರಾಚೀನ ಬರ್ಹಿಷ, ಶುಕ್ರ, ಗಯ, ಕೃಷ್ಣ, ವ್ರಜ, ಅಜಿನ ಎಂಬ ಆರು ಜನ ಮಕ್ಕಳನ್ನು ಪಡೆದಳು.

ಪ್ರಾಚೀನಬರ್ಹಿರ್ಭಗವಾನ್ಮಹಾನಾಸೀತ್ಪ್ರಜಾಪತಿಃ ।
ಹವಿರ್ಧಾನಿರ್ಮಹಾರಾಜೋ ಯೇನ ಸಂವರ್ಧಿತಾಃ ಪ್ರಜಾಃ ॥ ೩ ॥

ಪ್ರಾಚೀನಾಗ್ರಾಃ ಕುಶಾಸ್ತಸ್ಯ ಪೃಥಿವ್ಯಾಂ ವಿಸ್ತೃತಾ ಮುನೇ ।
ಪ್ರಾಚೀನಬರ್ಹಿರಭವತ್ಖ್ಯಾತೋ ಭುವಿ ಮಹಾಬಲಃ ॥ ೪ ॥

ಸಮುದ್ರತನಯಾಯಾಂ ತು ಕೃತದಾರೋ ಮಹೀಪತಿಃ ।
ಮಹತಸ್ತಮಸಃ ಪಾರೇ ಸವರ್ಣಾಯಾಂ ಮಹಾಮತೇ ॥ ೫ ॥

ಸವರ್ಣಾದತ್ತ ಸಾಮುದ್ರೀ ದಶ ಪ್ರಾಚೀನ ಬರ್ಹಿಷಃ ।
ಸರ್ವೇ ಪ್ರಚೇತಸೋ ನಾಮ ಧನುರ್ವೇದಸ್ಯ ಪಾರಗಾಃ ॥ ೬ ॥

ಅಪೃಥಗ್ಧರ್ಮಚರಣಾಸ್ತೇ ತಪ್ಯಂತ ಮಹತ್ತಪಃ ।
ದಶವರ್ಷಸಹಸ್ರಾಣಿ ಸಮುದ್ರಸಲಿಲೇಶಯಾಃ ॥ ೭ ॥

೩–೭. ಹವಿರ್ಧಾನನ ಮಗನಾದ ಮಹಾಮಹಿಮನಾದ ಪ್ರಾಚೀನ ಬರ್ಹಿ ರಾಜನು ಪ್ರಜೆಗಳನ್ನು ಪಾಲಿಸುತ್ತ ಅನೇಕ ಯಜ್ಞಗಳನ್ನು ಮಾಡಿದುದರಿಂದ ಭೂಮಿಯಲ್ಲೆಲ್ಲ ಪೂರ್ವಾಗ್ರವಾಗಿ ದರ್ಭೆಗಳನ್ನು ಹಾಸಿದ್ದನು. ಇದರಿಂದ ಅವನಿಗೆ ಭೂಮಿಯಲ್ಲಿ ಪ್ರಾಚೀನ ಬರ್ಹಿರಾಜನೆಂದು ಪ್ರಸಿದ್ಧಿಯುಂಟಾಯಿತು. ಆ ರಾಜನು ಬಹುಕಾಲ ತಪಸ್ಸು ಮಾಡಿದಮೇಲೆ ಸಮುದ್ರನೆಂಬುವನ ಮಗಳಾದ ಸವರ್ಣ ಎಂಬುವಳನ್ನು ಮದುವೆಯಾದನು. ಸಮುದ್ರ ಪುತ್ರಿಯಾದ ಸವರ್ಣೆಯು ಹತ್ತು ಜನ ಮಕ್ಕಳನ್ನು ಪಡೆದಳು. ಅವರಿಗೆ ಪ್ರಚೇತಸ್ಸುಗಳೆಂದು ಹೆಸರು. ಅವರೆಲ್ಲರೂ ಧನುರ್ವೇದವನ್ನು ಸಂಪೂರ್ಣವಾಗಿ ತಿಳಿದವರು, ಅವರು ಧರ್ಮಾಚರಣೆಯನ್ನು ಮಾಡುತ್ತ ಹತ್ತುಸಾವಿರ ವರ್ಷಗಳವರೆಗೆ ಸಮುದ್ರದ ನೀರಿನಲ್ಲಿ ಮುಳುಗಿ ಮಹಾ ತಪಸ್ಸನ್ನು ಮಾಡಿದರು ಎಂದು ಪರಾಶರನು ಹೇಳಿದನು.

॥ ಮೈತ್ರೇಯ ಉವಾಚ ॥

ಯದರ್ಥಂ ತೇ ಮಹಾತ್ಮಾನಸ್ತಪಸ್ತೇಪುಃ ಮಹಾಮುನೇ ।
ಪ್ರಚೇತಸಸ್ಸಮುದ್ರಾಂಭಸ್ಯೇತದಾಖ್ಯಾತುಮರ್ಹಸಿ ॥ ೮ ॥

॥ ಶ್ರೀ ಪರಾಶರ ಉವಾಚ ॥

ಪಿತ್ರಾ ಪ್ರಚೇತಸಃ ಪ್ರೋಕ್ತಾಃ ಪ್ರಜಾರ್ಥಮಮಿತಾತ್ಮನಾ ।
ಪ್ರಜಾಪತಿನಿಯುಕ್ತೇನ ಬಹುಮಾನಪುರಸ್ಸರಂ ॥ ೯ ॥

॥ ಪ್ರಾಚೀನಬರ್ಹಿರುವಾಚ ॥

ಬ್ರಹ್ಮಣಾ ದೇವದೇವೇನ ಸಮಾದಿಷ್ಟೋಽಹಂ ಸುತಾಃ ।
ಪ್ರಜಾಸ್ಸಂವರ್ಧನೀಯಾಸ್ತೇ ಮಯಾ ಚೋಕ್ತಂ ತಥೇತಿ ತತ್ ॥ ೧೦ ॥

ತನ್ಮಮ ಪ್ರೀತಯೇ ಪುತ್ರಾಃ ಪ್ರಜಾವೃದ್ಧಿಮತಂದ್ರಿತಾಃ ।
ಕುರುಧ್ವಂ ಮಾನನೀಯಾವಸ್ಸಮ್ಯಗಾಜ್ಞಾ ಪ್ರಜಾಪತೇಃ ॥ ೧೧ ॥

॥ ಶ್ರೀ ಪರಾಶರ ಉವಾಚ ॥

ತತಸ್ತೇ ತತ್ಪಿತುಶ್ಶ್ರುತ್ವಾ ವಚನಂ ನೃಪನಂದನಾಃ ।
ತಥೇತ್ಯುಕ್ತ್ವಾ ಚ ತಂ ಭೂಯಃ ಪಪ್ರಚ್ಛುಃ ಪಿತರಂ ಮುನೇ ॥ ೧೨ ॥

---

೮. ಮೈತ್ರೇಯನು 'ಮಹಾಮುನಿಯೇ! ಮಹಾಮಹಿಮರಾದ ಪ್ರಚೇತಸ್ಸುಗಳು ಸಮುದ್ರದ ನೀರಿನಲ್ಲಿ ಮುಳುಗಿ ತಪಸ್ಸು ಮಾಡುವುದರ ಉದ್ದೇಶವೇನು? ಅದನ್ನು ಹೇಳಬೇಕು' ಎಂದನು.

೯-೧೨. ಪರಾಶರನು ಹೇಳುವನು :— ಪ್ರಾಚೀನಬರ್ಹಿರಾಜನು ತನ್ನ ಮಕ್ಕಳಾದ ಪ್ರಚೇತಸ್ಸುಗಳನ್ನು ಕುರಿತು 'ಪುತ್ರರೇ ದೇವದೇವನಾದ ಬ್ರಹ್ಮನು ಪ್ರಜಾವೃದ್ಧಿಯನ್ನು ಮಾಡಬೇಕೆಂದು ನನಗೆ ಅಪ್ಪಣೆ ಮಾಡಿದನು. ನಾನು ಆಗಲೆಂದು ಒಪ್ಪಿಕೊಂಡೆನು. ಆದುದರಿಂದ ನನ್ನನ್ನು ಸಂತೋಷಪಡಿಸುವುದಕ್ಕಾಗಿ. ನೀವು

॥ ಪ್ರಚೇತಸ ಊಚುಃ ॥

ಯೇನ ತಾತ ಪ್ರಜಾವೃದ್ಧೌ ಸಮರ್ಥಾಃ ಕರ್ಮಣಾ ವಯಂ ।
ಭವೇಮ ತತ್ಸಮಸ್ತಂ ನಃ ಕರ್ಮ ವ್ಯಾಖ್ಯಾತುಮರ್ಹಸಿ ॥ ೧೩ ॥

॥ ಪ್ರಾಚೀನಬರ್ಹಿರುವಾಚ ॥

ಆರಾಧ್ಯ ವರದಂ ವಿಷ್ಣುಮಿಷ್ಟಪ್ರಾಪ್ತಿಮಸಂಶಯಂ ।
ಸಮೇತಿ ನಾನ್ಯಥಾ ಮರ್ತ್ಯಃ ಕಿಮನ್ಯತ್ಕಥಯಾಮಿ ವಃ ॥ ೧೪ ॥

ತಸ್ಮಾತ್ಪ್ರಜಾವಿವೃದ್ಧ್ಯರ್ಥಂ ಸರ್ವಭೂತೇಶ್ವರಂ ಹರಿಂ ।
ಆರಾಧಯತ ಗೋವಿಂದಂ ಯದಿ ಸಿದ್ಧಿಮಭೀಪ್ಸ್ಯಥ ॥ ೧೫ ॥

ಧರ್ಮಮರ್ಥಂ ಚ ಕಾಮಂ ಚ ಮೋಕ್ಷಂ ಚಾನ್ವಿಚ್ಛತಾಂ ತಥಾ ।
ಆರಾಧನೀಯೋ ಭಗವಾನನಾದಿಃ ಪುರುಷೋತ್ತಮಃ ॥ ೧೬ ॥

ಯಸ್ಮಿನ್ನಾರಾಧಿತೇ ಸರ್ಗಂ ಚಕಾರಾದೌ ಪ್ರಜಾಪತಿಃ ।
ತಮಾರಾಧ್ಯಾಚ್ಯುತಂ ವೃದ್ಧಿಃ ಪ್ರಜಾನಾಂ ವೋ ಭವಿಷ್ಯತಿ ॥ ೧೭ ॥

ಪ್ರಜಾವದ್ಧಿಯನ್ನು ಮಾಡಬೇಕು. ಬ್ರಹ್ಮನ ಆಜ್ಞೆಗೆ ನೀವು ಗೌರವವನ್ನುಂಟು ಮಾಡಬೇಕು' ಎಂದು ಹೇಳಿದನು. ಬಳಿಕ ತಂದೆಯ ಮಾತನ್ನು ಕೇಳಿ ರಾಜಪುತ್ರರು ಹಾಗೆಯೇ ಆಗಲೆಂದು ಒಪ್ಪಿಕೊಂಡು ಮತ್ತೆ ತಂದೆಯನ್ನು ಪ್ರಶ್ನೆ ಮಾಡಿದರು.

೧೩-೧೭. ಪ್ರಚೇತಸ್ಸುಗಳು 'ತಂದೆಯೇ ಯಾವ ಕರ್ಮವನ್ನು ಮಾಡಿದರೆ ನಾವು ಪ್ರಜಾವೃದ್ಧಿಯನ್ನು ಮಾಡಲು ಶಕ್ತರಾಗುವೆವು. ಆ ಎಲ್ಲಾ ಕರ್ಮವನ್ನೂ ನಮಗೆ ಹೇಳಬೇಕು' ಎಂದರು. ಪ್ರಾಚೀನ ಬರ್ಹಿಯು 'ಪುತ್ರರೇ ವರವನ್ನು ಕೊಡತಕ್ಕ ವಿಷ್ಣುವಿನ ಪೂಜೆಯನ್ನು ಮಾಡಿದರೆ ಇಷ್ಟಪ್ರಾಪ್ತಿಯಾಗುವುದು. ಆದುದರಿಂದ ಪ್ರಜಾವೃದ್ಧಿಗಾಗಿ ನಿಮಗೆ ಶಕ್ತಿಯು ಬರಬೇಕಾದರೆ ಸಮಸ್ತ ಭೂತಗಳಿಗೂ ಸ್ವಾಮಿಯಾದ ವಿಷ್ಣುವನ್ನು ಪೂಜಿಸಿ. ಧರ್ಮಾರ್ಥಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಅಪೇಕ್ಷಿಸುವವರು ಅನಾದಿಯೂ, ಮಹಾಮಹಿಮನೂ,

ಶ್ರೀ ಪರಾಶರ ಉವಾಚ

ಇತ್ಯೇವಮುಕ್ತಾಸ್ತೇ ಪುತ್ರಾಃ ಪಿತ್ರಾ ಪ್ರಾಚೇತಸಾ ದಶ ।
ಮಗ್ನಾಃ ಪಯೋಧಿಸಲಿಲೇ ತಪಶ್ಚೇರುಸ್ಸಮಾಹಿತಾಃ ॥ ೧೮ ॥

ದಶವರ್ಷಸಹಸ್ರಾಣಿ ನ್ಯಸ್ತಚಿತ್ತಾ ಜಗತ್ಪತೌ ।
ನಾರಾಯಣೇ ಮುನಿಶ್ರೇಷ್ಠ ಸರ್ವಲೋಕಪರಾಯಣೇ ॥ ೧೯ ॥

ತತ್ರೈವ ತೇ ಸ್ಥಿತಾ ದೇವಮೇಕಾಗ್ರಮನಸೋ ಹರಿಂ ।
ತುಷ್ಟುವುರ್ಯಸ್ತುತಃ ಕಾಮಾಂಸ್ತೋತುರಿಷ್ಟಾನ್ ಪ್ರಯಚ್ಛತಿ ॥ ೨೦ ॥

॥ ಮೈತ್ರೇಯ ಉವಾಚ ॥

ಸ್ತವಂ ಪ್ರಚೇತಸೋ ವಿಷ್ಣೋಸ್ಸಮುದ್ರಾಂಭಸಿ ಯಂ ಸ್ಥಿತಾಃ ।
ಚಕ್ರುಸ್ತಂ ಮೇ ಮುಶ್ರೇಷ್ಠ ಸುಪುಣ್ಯಂ ವಕ್ತುಮರ್ಹಸಿ ॥ ೨೧ ॥

ಪುರುಷಶ್ರೇಷ್ಠನೂ ಆದ ವಿಷ್ಣುವನ್ನು ಪೂಜಿಸಬೇಕು. ಬ್ರಹ್ಮನು ಆದಿಯಲ್ಲಿ ಅವನನ್ನು ಪೂಜಿಸಿಯೇ ತನ್ನ ಸೃಷ್ಟಿಕಾರ್ಯವನ್ನು ಪ್ರಾರಂಭಿಸಿದನು. ನಾಶರಹಿತನಾದ ಆ ದೇವನನ್ನು ಪೂಜಿಸಿದರೆ ನಿಮಗೂ ಪ್ರಜಾವೃದ್ಧಿಯಾಗುವುದು, ಎಂದು ಹೇಳಿದನು.

೧೮-೨೦. ಮೈತ್ರೇಯನೇ ತಂದೆಯು ಹೇಳಿದ ಮಾತನ್ನು ಪ್ರಚೇತಸ್ಸುಗಳೆಂಬ ಹತ್ತು ಜನ ಮಕ್ಕಳೂ ಕೇಳಿ ಸಮುದ್ರದ ನೀರಿನಲ್ಲಿ ಮುಳುಗಿ ಏಕಾಗ್ರಚಿತ್ತದಿಂದ ತಪಸ್ಸು ಮಾಡಿದರು. ಅವರು ಹತ್ತು ಸಾವಿರ ವರ್ಷಗಳವರೆಗೆ ವಿಷ್ಣುವಿನಲ್ಲಿಯೇ ತಮ್ಮ ಮನಸ್ಸನ್ನಿಟ್ಟು ಇಷ್ಟಾರ್ಥವನ್ನು ಕೊಡುವ ನಾರಾಯಣನನ್ನು ಸ್ತೋತ್ರಮಾಡಿದರು.

೨೧. ಮೈತ್ರೇಯನು 'ಮುನಿಶ್ರೇಷ್ಠನೇ ಸಮುದ್ರದ ನೀರಿನಲ್ಲಿ ಮುಳುಗಿ ಪ್ರಚೇತಸ್ಸುಗಳು ಮಾಡಿದ ಪುಣ್ಯಕರವಾದ ಸ್ತೋತ್ರವನ್ನು ಹೇಳಬೇಕು' ಎಂದನು.

॥ ಶ್ರೀ ಪರಾಶರ ಉವಾಚ ॥

ಶೃಣು ಮೈತ್ರೇಯ ಗೋವಿಂದಂ ಯಥಾಪೂರ್ವಂ ಪ್ರಚೇತಸಃ ।
ತುಷ್ಟುವುಸ್ತನ್ಮಯಾ ಭೂತಾಸ್ಸಮುದ್ರಸಲಿಲೇಶಯಾಃ ॥ ೨೨ ॥

॥ ಪ್ರಚೇತಸ ಊಚುಃ ॥

ನತಾಸ್ಮ ಸರ್ವವಚಸಾಂ ಪ್ರತಿಷ್ಠಾ ಯತ್ರ ಶಾಶ್ವತೀ ।
ತಮಾದ್ಯಂತಮಶೇಷಸ್ಯ ಜಗತಃ ಪರಮಂ ಪ್ರಭುಂ ॥ ೨೩ ॥

ಜ್ಯೋತಿರಾದ್ಯಮನೌಪಮ್ಯಮಣ್ವನಂತಮಪಾರವತ್ ।
ಬೀಜಭೂತಮಶೇಷಸ್ಯ ಸ್ಥಾವರಸ್ಯ ಚರಸ್ಯ ಚ ॥ ೨೪ ॥

---

೨೨. ಪರಾಶರನು 'ಮೈತ್ರೇಯನೇ ಪ್ರಚೇತಸ್ಸುಗಳು ಸಮುದ್ರದ ನೀರಿನೊಳಗೆ ಏಕಾಗ್ರಚಿತ್ತದಿಂದ ವಿಷ್ಣುಸ್ವರೂಪರಾಗಿಯೇ ಇದ್ದು ಹೇಗೆ ಸ್ತೋತ್ರ ಮಾಡಿದರೆಂಬುದನ್ನು ಹೇಳುವೆನು ಕೇಳು' ಎಂದು ಹೇಳಲು ಪ್ರಾರಂಭಿಸಿದನು.

ಪ್ರಚೇತಸ್ಸುಗಳು ಮಾಡಿದ ವಿಷ್ಣುಸ್ತೋತ್ರ

೨೩–೨೪. ಪ್ರಚೇತಸ್ಸುಗಳು ವಿಷ್ಣುವನ್ನು ಜಗತ್ತಿಗೆ ಕಾರಣರೂಪವಾಗಿಯೂ, ವಿಚಿತ್ರರೂಪವಾಗಿಯೂ, ಶುದ್ಧರೂಪವಾಗಿಯೂ ಸ್ತೋತ್ರಮಾಡಿದರು. ಮೊದಲನೆಯ ಎರಡು ಶ್ಲೋಕಗಳು ಕಾರಣರೂಪವಾದುವುಗಳು. ಸಮಸ್ತ ಮಾತುಗಳಿಗೂ ತಾತ್ಪರ್ಯರೂಪನಾದ ವಸ್ತುವಾವುದೋ ಸೃಷ್ಟಿ ಪ್ರಳಯಗಳನ್ನು ಮಾಡುವುದರಿಂದ ಯಾವ ತತ್ವವು ಶ್ರೇಷ್ಠವಾದುದಾಗಿಯೂ ಸರ್ವಶಕ್ತಿಯುಳ್ಳದಾಗಿಯೂ ಇರುವುದೋ ಅಂತಹ ಅನಾದಿಯೂ, ಪ್ರಕಾಶರೂಪವೂ, ಅಸಮಾನವೂ ಸೂಕ್ಷ್ಮವಾದುದರಿಂದ ನಾಡೀ ಪ್ರಚಾರ ಚಾತುರ್ಯವುಳ್ಳದೂ ದೇಶ, ಕಾಲ ಮುಂತಾದುವುಗಳ ಅಳತೆಗೆ ಸಿಕ್ಕದುದೂ ಸಮಸ್ತ ಚರಾಚರಗಳಿಗೂ ಕಾರಣವಾದುದೂ ಆದ ತತ್ವಕ್ಕೆ ನಮಸ್ಕಾರ ಮಾಡುವೆವು.

ಯಸ್ಯಾಹಃ ಪ್ರಥಮಂ ರೂಪಂ ರೂಪಮಸ್ಯ ತತೋ ನಿಶಾ ।
ಸಂಧ್ಯಾ ಚ ಪರಮೇಶಸ್ಯ ತಸ್ಮೈ ಕಾಲಾತ್ಮನೇ ನಮಃ ॥ ೨೫ ॥

ಭುಜ್ಯತೇಽನುದಿನಂ ದೇವೈಃ ಪಿತೃಭಿಶ್ಚ ಸುಧಾತ್ಮಕಃ ।
ಜೀವಭೂತಸ್ಸಮಸ್ತಸ್ಯ ತಸ್ಮೈ ಸೋಮಾತ್ಮನೇ ನಮಃ ॥ ೨೬ ॥

ಯಸ್ತಮೋ ಹಂತಿ ತೀವ್ರಾತ್ಮಾ ಪ್ರಭಾಭಿರ್ಭಾಸಯನ್ನಭಃ ।
ಘರ್ಮಶೀತಾಂಭಸಾಂ ಯೋನಿಸ್ತಸ್ಮೈ ಸೂರ್ಯಾತ್ಮನೇ ನಮಃ ॥ ೨೭ ॥

ಕಾಠಿನ್ಯವಾನ್ಯೋ ಬಿಭರ್ತಿ ಜಗದೇತದಶೇಷತಃ ।
ಶಬ್ದಾದಿಸಂಶ್ರಯೋ ವ್ಯಾಪೀ ತಸ್ಮೈ ಭೂಮ್ಯಾತ್ಮನೇ ನಮಃ ॥ ೨೮ ॥

---

೨೫. ರೂಪವಿಲ್ಲದ ಯಾವ ಪರಮೇಶ್ವರನಿಗೆ ಹಗಲು ಮೊದಲನೆಯ ರೂಪವಾಗಿಯೂ, ಬಳಿಕ ರಾತ್ರಿಯೂ, ಸಂಧ್ಯೆಯೂ ರೂಪವಾಗಿಯೂ ಇರುವುದೋ ಅಂತಹ ಕಾಲಸ್ವರೂಪನಾದ ಪರಮೇಶ್ವರನಿಗೆ ನಮಸ್ಕಾರವು.

೨೬. ದೇವತೆಗಳೂ ಪಿತೃಗಳೂ ಪ್ರತಿದಿನವೂ ಅಮೃತ ಸ್ವರೂಪವಾಗಿ ಯಾವ ತತ್ವವನ್ನು ಆಹಾರ ಮಾಡಿಕೊಳ್ಳುವರೋ ಸಮಸ್ತ ಪ್ರಾಣಿಗಳಿಗೂ ಜೀವಸ್ವರೂಪನಾದ ಆ ದೇವನಿಗೆ ನಮಸ್ಕಾರವು.

೨೭. ಕ್ರೂರವಾದ ಕಿರಣರೂಪನಾಗಿ ತನ್ನ ಕಾಂತಿಯಿಂದ ಆಕಾಶವನ್ನೆಲ್ಲ ಪ್ರಕಾಶಪಡಿಸುತ್ತ ಕತ್ತಲೆಯನ್ನು ಯಾರು ನಾಶಮಾಡುವರೋ ಅಂತಹ ತಾಪ, ಶೀತ ನೀರು ಇವುಗಳಿಗೆ ಕಾರಣನಾದ ಸೂರ್ಯರೂಪನಾದ ದೇವನಿಗೆ ನಮಸ್ಕಾರವು.

೨೮. ಕಠಿನಶರೀರ ಧಾರಿಯಾಗಿ ಈ ಸಮಸ್ತ ಜಗತ್ತನ್ನೂ ಧರಿಸಿರುವ ಶಬ್ದಾದಿ ಪಂಚತನ್ಮಾತ್ರರೂಪವಾದ ಗುಣಗಳಿಗೆ ಆಶ್ರಯನಾದ ಭೂಮಿರೂಪನಾದ ದೇವನಿಗೆ ನಮಸ್ಕಾರವು.

ಯದ್ಯೋನಿರೂಪಂ ಜಗತಾಂ ಬೀಜರೂಪಂ ಚ ದೇಹಿನಾಂ ।
ತತ್ತೋಯರೂಪವಿನಾಶಸ್ಯ ನಮಾಮೋ ಹರಿಮೇಧಸಃ ॥ ೨೯ ॥

ಯೋ ಮುಖಂ ಸರ್ವದೇವಾನಾಂ ಹವ್ಯಭುಕ್ಕವ್ಯಭುಕ್ತಥಾ ।
ಪಿತೄಣಾಂ ಚ ನಮಸ್ತಸ್ಮೈ ವಿಷ್ಣವೇ ಪಾವಕಾತ್ಮನೇ ॥ ೩೦ ॥

ಪಂಚಧಾವಸ್ಥಿತೋ ದೇಹೋ ಯಶ್ಚೇಷ್ಟಾಂ ಕುರುತೇನಿಶಂ ।
ಆಕಾಶಯೋನಿರ್ಭಗವಾಂಸ್ತಸ್ಮೈ ವಾಯ್ವಾತ್ಮನೇ ನಮಃ ॥ ೩೧ ॥

ಅವಕಾಶಮಶೇಷಾಣಾಂ ಭೂತಾನಾಂ ಯಃ ಪ್ರಯಚ್ಛತಿ ।
ಅನಂತಮೂರ್ತಿಮಾನ್ ಶುದ್ಧಸ್ತಸ್ಮೈ ವ್ಯೋಮಾತ್ಮನೇ ನಮಃ ॥ ೩೨ ॥

ಸಮಸ್ತೇಂದ್ರಿಯವರ್ಗಸ್ಯ ಯಸ್ತಥಾ ಸ್ಥಾನಮುತ್ತಮಂ ।
ತಸ್ಮೈ ಶಬ್ದಾದಿರೂಪಾಯ ನಮಃ ಕೃಷ್ಣಾಯ ವೇಧಸೇ ॥ ೩೩ ॥

---

೨೯. ಜಗತ್ತಿನ ಅಭಿವೃದ್ಧಿಗಾಗಿ ಪ್ರಾಣಿಗಳ ಶುಕ್ಲಶೋಣಿತಗಳಿಗೆ ಕಾರಣವಾದ ನೀರಿನ ರೂಪದಿಂದಿರುವ ದೇವನಿಗೆ ನಮಸ್ಕಾರವು.

೩೦. ಸಮಸ್ತ ದೇವತೆಗಳಿಗೂ ಪಿತೃಗಳಿಗೂ ಮುಖಸ್ವರೂಪನಾಗಿ ಹವ್ಯಕವ್ಯರೂಪವಾದ ಅನ್ನವನ್ನು ಭೋಜನಮಾಡುವ ಅಗ್ನಿಸ್ವರೂಪನಾದ ವಿಷ್ಣುವಿಗೆ ನಮಸ್ಕಾರವು.

೩೧. ಸಮಸ್ತ ಪ್ರಾಣಿಗಳ ಶರೀರದಲ್ಲಿಯೂ ಪಂಚಪ್ರಾಣರೂಪನಾಗಿದ್ದು ಪ್ರಾಣನಾದಿ ಕಾರ್ಯಗಳನ್ನು ಯಾವಾಗಲೂ ಮಾಡುತ್ತ ಆಕಾಶವೇ ಆಶ್ರಯವಾಗಿ ಉಳ್ಳ ಮಹಾ ಮಹಿಮನಾದ ವಾಯುಸ್ವರೂಪನಾದ ವಿಷ್ಣುವಿಗೆ ನಮಸ್ಕಾರವು.

೩೨. ಸಮಸ್ತ ಭೂತಗಳಿಗೂ ಅವಕಾಶವನ್ನು ಕೊಟ್ಟು ಅನಂತಸ್ವರೂಪನಾದ ವಿಕಾರವಿಲ್ಲದೆ ಶುದ್ಧವಾದ ಆಕಾಶ ಸ್ವರೂಪನಾದ ವಿಷ್ಣುವಿಗೆ ನಮಸ್ಕಾರವು.

೩೩. ಸಮಸ್ತ ಇಂದ್ರಿಯ ವರ್ಗಗಳಿಗೆ ಆಲಂಬನವಾದ ಶಬ್ದಾದಿ ವಿಷಯಗಳ ಸ್ವರೂಪನಾಗಿ ಶ್ರೇಷ್ಠನಾಗಿರುವ ಬ್ರಹ್ಮಸ್ವರೂಪನಾದ ಕೃಷ್ಣನಿಗೆ ನಮಸ್ಕಾರವು.

ಗೃಹ್ಣಾತಿ ವಿಷಯಾನ್ನಿತ್ಯಮಿಂದ್ರಿಯಾತ್ಮಾ ಕ್ಷರಾಕ್ಷರಃ ।
ಯಸ್ತಸ್ಮೈ ಜ್ಞಾನಮೂಲಾಯ ನತಾಸ್ಮಿ ಹರಿಮೇಧಸೇ । ॥ ೩೪ ॥

ಗೃಹೀತಾನಿಂದ್ರಿಯೈರರ್ಥಾನಾತ್ಮನೇ ಯಃ ಪ್ರಯಚ್ಛತಿ ।
ಅಂತಃಕರಣಭೂತಾಯ ತಸ್ಮೈ ವಿಶ್ವಾತ್ಮನೇ ನಮಃ ॥ ೩೫ ॥

ಯಸ್ಮಿನ್ನನಂತೇ ಸಕಲಂ ವಿಶ್ವಂ ಯಸ್ಮಾತ್ತಥೋದ್ಗತಂ ।
ಲಯಸ್ಥಾನಂ ಚ ಯಸ್ತಸ್ಮೈ ನಮಃ ಪ್ರಕೃತಿಧರ್ಮಿಣೇ ॥ ೩೬ ॥

ಶುದ್ಧಸ್ಸಂಲಕ್ಷ್ಯತೇ ಭ್ರಾಂತ್ಯಾ ಗುಣವಾನಿವ ಯೋಽಗುಣಃ ।
ತಮಾತ್ಮರೂಪಿಣಂ ದೇವಂ ನತಾಸ್ಸ್ಮ ಪುರುಷೋತ್ತಮಂ ॥ ೩೭ ॥

ಅವಿಕಾರಮಜಂ ಶುದ್ಧಂ ನಿರ್ಗುಣಂ ಯನ್ನಿರಂಜನಂ ।
ನತಾಸ್ಸ್ಮ ತತ್ಪರಂಬ್ರಹ್ಮ ವಿಷ್ಣೋರ್ಯತ್ಪರಮಂ ಪದಂ ॥ ೩೮ ॥

---

೩೪. ಇಂದ್ರಿಯ ಸ್ವರೂಪನಾಗಿ ಯಾವಾಗಲೂ ವಿಷಯಗಳನ್ನೂ ಗ್ರಹಿಸುವ ಜ್ಞಾನಕಾರಣನಾಗಿ ಕ್ಷರಾಕ್ಷರ ಸ್ವರೂಪನಾಗಿರುವ ಹರಿಗೆ ನಮಸ್ಕಾರ ಮಾಡುವೆನು.

೩೫. ಇಂದ್ರಿಯಗಳಿಂದ ಗ್ರಹಿಸಿದ ವಿಷಯಗಳನ್ನು ಆತ್ಮಜ್ಞಾನ ವಿಷಯವಾಗಿ ಮಾಡುವ ಅಂತಃಕರಣ ರೂಪವಾದ ವಿಶ್ವಾತ್ಮನಾದ ಹರಿಗೆ ನಮಸ್ಕಾರವು.

೩೬. ಯಾವ ಅನಂತರೂಪನಾದ ದೇವನಲ್ಲಿ ಸಮಸ್ತ ಜಗತ್ತೂ ಇದ್ದು ಅವನಿಂದಲೇ ಹುಟ್ಟಿ ಅವನಲ್ಲಿಯೇ ಲಯವಾಗುವುದೋ ಪ್ರಕೃತಿ ಧರ್ಮವಾದ ಸತ್ವಾದಿ ಗುಣಗಳಿಂದ ಕೂಡಿದ ಪ್ರಕೃತಿ ಸ್ವರೂಪನಾದ ದೇವನಿಗೆ ನಮಸ್ಕಾರವು.

೩೭. ಶುದ್ಧನಾಗಿ ಯಾವ ಗುಣವೂ ಇಲ್ಲದ ಆತ್ಮನು ಭ್ರಾಂತಿಯಿಂದ ಗುಣವುಳ್ಳವನಂತೆ ಕಾಣುವನು. ಅಂತಹ ಆತ್ಮಸ್ವರೂಪನಾದ ಪುರುಷ ಶ್ರೇಷ್ಠನಿಗೆ ನಮಸ್ಕಾರವು.

೩೮. ಅಸ್ತಿ ಜಾಯತೇ ಇತ್ಯಾದಿ ಷಡ್ಭಾವ ವಿಕಾರವಿಲ್ಲದ, ಉತ್ಪತ್ತಿಯಿಲ್ಲದ, ಸ್ವಾಭಾವಿಕವಾಗಿ ನಿರ್ಮಲವಾದ, ಸತ್ವಾದಿಗುಣಗಳಿಲ್ಲದೆ ದೋಷರಹಿತನಾದ, ಸರ್ವವ್ಯಾಪಿಯಾದ ಪರಬ್ರಹ್ಮ ಸ್ವರೂಪನಾದ ವಿಷ್ಣುವಿಗೆ ನಮಸ್ಕಾರ ಮಾಡುವೆವು.

ಅದೀರ್ಘಹ್ರಸ್ವಮಸ್ಥೂಲಮನಣ್ವಶ್ಯಾಮಲೋಹಿತಂ ।
ಅಸ್ನೇಹಚ್ಛಾಯಮತನುಮಸಕ್ತಮಶರೀರಿಣಂ ॥ ೩೯ ॥

ಅನಾಕಾಶಮಸಂಸ್ಪರ್ಶಮಗಂಧಮರಸಂ ಚ ಯತ್ ।
ಅಚಕ್ಷುಶ್ಶ್ರೋತ್ರಮಚಲಮವಾಕ್ಪಾಣಿಮಮಾನಸಂ ॥ ೪೦ ॥

ಅನಾಮಗೋತ್ರಮಸುಖಮತೇಜಸ್ಕಮಹೇತುಕಂ ।
ಅಭಯಂ ಭ್ರಾಂತಿರಹಿತಮನಿದ್ರಮಜರಾಮರಂ ॥ ೪೧॥

ಅರಜೋಽಶಬ್ದಮಮೃತಮಪ್ಲವಂ ಯದಸಂವೃತಂ ।
ಪೂರ್ವಾಪರೇ ನ ವೈ ಯಸ್ಮಿನ್ ತದ್ವಿಷ್ಣೋಃ ಪರಮಂ ಪದಂ ॥ ೪೨ ॥

ಪರಮೀಶಿತ್ವಗುಣವತ್ಸರ್ವಭೂತಮಸಂಶ್ರಯಂ ।
ನತಾಸ್ಮ ತತ್ಪರಂ ವಿಷ್ಣೋರ್ಜಿಹ್ವಾದೃಗ್ಗೋಚರಂ ನ ಯತ್ ॥ ೪೩ ॥

೩೯–೪೩. ದೀರ್ಘ, ಹ್ರಸ್ವ, ಸ್ಥೂಲ, ಅಣು ಎಂಬ ಆಕಾರ ಭೇದಗಳಿಲ್ಲದ ಕಪ್ಪು ಕೆಂಪು ಮುಂತಾದ ರೂಪಭೇದಗಳಿಲ್ಲದ ಸ್ನೇಹವೂ, ಕಾಂತಿಯೂ, ಶರೀರವೂ ಇಲ್ಲದ ಆಕಾಶಾದಿ ಪಂಚತನ್ಮಾತ್ರಗಳ ಗುಣವಿಲ್ಲದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಲ್ಲದೆ, ನಾಮ ಗೋತ್ರಗಳಿಲ್ಲದ, ಅನ್ನ ಪಾನಾದಿಗಳಿಂದುಂಟಾದ ಸುಖವೂ ತೇಜಸ್ಸೂ ಇಲ್ಲದ ಭಯವೂ ನಿದ್ರೆಯೂ ಜರಾ ಮರಣಗಳೂ ಇಲ್ಲದ, ಭ್ರಾಂತಿ ಜ್ಞಾನವಿಲ್ಲದ ರಜೋಗುಣರಹಿತವಾಗಿರುವ ಅಮೃತಸ್ವರೂಪವಾಗಿ ಚಲನೆಯಿಲ್ಲದ ವ್ಯಕ್ತವಾಗಿ ಪೂರ್ವಾಪರಾದಿ ಕಾಲ ದೇಶ, ವ್ಯವಸ್ಥೆಯಿಲ್ಲದ ಶ್ರೇಷ್ಠವಾದ ಯಾವ ಉಪಾಧಿಯಿಲ್ಲದಿದ್ದರೂ ಈಶಿತ್ವಾದಿ ಷಡ್ಗುಣೈಶ್ವರ್ಯಗಳಿಂದ ಕೂಡಿದ ಮಾಯೆಯಿಂದ ಸಮಸ್ತ ಭೂತಸ್ವರೂಪವಾಗಿದ್ದರೂ ನಿರಾಧಾರವಾದ ಮಾತಿಗೂ ಕಣ್ಣಿಗೂ ಗೋಚರವಿಲ್ಲದ ಆ ವಿಷ್ಣುವಿನ ಪರಸ್ವರೂಪಕ್ಕೆ ನಮಸ್ಕಾರ ಮಾಡುವೆವು.

॥ ಶ್ರೀ ಪರಾಶರ ಉವಾಚ ॥

ಏವಂ ಪ್ರಚೇತಸೋ ವಿಷ್ಣುಂ ಸ್ತುವಂತಸ್ತತ್ಸಮಾಧಯಃ ।
ದಶವರ್ಷಸಹಸ್ರಾಣಿ ತಪಶ್ಚೇರುರ್ಮಹಾರ್ಣವೇ ॥ ೪೪ ॥

ತತಃ ಪ್ರಸನ್ನೋ ಭಗವಾಂಸ್ತೇಷಾಮಂತರ್ಜಲೇ ಹರಿಃ ।
ದದೌ ದರ್ಶನಮುನ್ನಿದ್ರ ನೀಲೋತ್ಪಲದಳಚ್ಛವಿಃ ॥ ೪೫ ॥

ಪತತ್ರಿರಾಜಮಾರೂಢಮವಲೋಕ್ಯ ಪ್ರಚೇತಸಃ ।
ಪ್ರಣಿಪೇತುಶ್ಶಿರೋಭಿಸ್ತಂ ಭಕ್ತಿಭಾರಾವನಾಮಿತೈಃ ॥ ೪೬ ॥

ತತಸ್ತಾನಾಹ ಭಗವಾನ್ ವ್ರಿಯತಾಮೀಪ್ಸಿತೋ ವರಃ ।
ಪ್ರಸಾದಸುಮುಖೋಽಹಂ ವೋ ವರದಸ್ಸಮುಪಸ್ಥಿತಃ ॥ ೪೭ ॥

ತತಸ್ತಮೂಚುರ್ವರದಂ ಪ್ರಣಿಪತ್ಯ ಪ್ರಚೇತಸಃ ।
ಯಥಾ ಪಿತ್ರಾ ಸಮಾದಿಷ್ಟಂ ಪ್ರಜಾನಾಂ ವೃದ್ಧಿಕಾರಣಂ ॥ ೪೮ ॥

೪೪–೪೬. ಹೀಗೆಂದು ಪ್ರಚೇತಸ್ಸುಗಳು ವಿಷ್ಣುವನ್ನು ಸ್ತೋತ್ರಮಾಡುತ್ತ ಅವನಲ್ಲಿಯೇ ಮನಸ್ಸನ್ನು ಏಕಾಗ್ರವಾಗಿಟ್ಟು ಸಮುದ್ರದೊಳಗೆ ಹತ್ತುಸಾವಿರ ವರುಷಗಳವರೆಗೆ ತಪಸ್ಸು ಮಾಡಿದರು. ಆ ನೀರಿನಲ್ಲಿಯೇ ಹರಿಯು ಪ್ರಸನ್ನನಾಗಿ ಅವರಿಗೆ ದರ್ಶನವನ್ನು ಕೊಟ್ಟನು. ನೀಲವಾದ ಕಮಲದ ಕಾಂತಿಯಿಂದ ಕೂಡಿ ಗರುಡಾರೂಢನಾಗಿ ಬಂದ ವಿಷ್ಣುವನ್ನು ಕಂಡು ಪ್ರಚೇತಸ್ಸುಗಳು ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು.

೪೭–೪೮. ಆಮೇಲೆ ಭಗವಂತನು ಅವರನ್ನು ಕುರಿತು ನಾನು ನಿಮ್ಮ ತಪಸ್ಸಿಗೆ ಪ್ರಸನ್ನನಾಗಿರುವೆನು. ವರವನ್ನು ಕೇಳಿರಿ ಎಂದನು ಪ್ರಚೇತಸ್ಸುಗಳು ವರ ವನ್ನುಕೊಡುವುದಕ್ಕೆ ಬಂದ ವಿಷ್ಣುವಿಗೆ ನಮಸ್ಕಾರ ಮಾಡಿ ತಮ್ಮ ತಂದೆಯು ಪ್ರಜಾ

ಸ ಚಾಪಿ ದೇವಸ್ತಂ ದತ್ವಾ ಯಥಾಭಿಲಷಿತಂ ವರಂ ।
ಅಂತರ್ಧಾನಂ ಜಗಾಮಾಶು ತೇ ಚ ನಿಶ್ಚಕ್ರಮುರ್ಜಲಾತ್ ॥ ೪೯ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಚತುರ್ದಶೋಽಧ್ಯಾಯಃ

ವೃದ್ಧಿ ಮಾಡಬೇಕೆಂದು ಅಪ್ಪಣೆ ಮಾಡಿದ ಅಂಶವನ್ನು ಹೇಳಿದರು. ಆ ದೇವನು. ಅವರಿಗೆ ಇಷ್ಟವಾದ ಪ್ರಜಾವೃದ್ಧಿ ರೂಪವಾದ ಶಕ್ತಿಯನ್ನು ವರವಾಗಿ ಕೊಟ್ಟು ಅಂತರ್ಧಾನ ಹೊಂದಿದನು. ಆ ಪ್ರಚೇತಸ್ಸುಗಳೂ ನೀರಿನಿಂದ ಹೊರಕ್ಕೆ ಬಂದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ ಹದಿನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

॥ಪಂಚದಶೋಽಧ್ಯಾಯಃ॥

॥ ಶ್ರೀ ಪರಾಶರ ಉವಾಚ ॥

ತಪಶ್ಚರತ್ಸು ಪೃಥಿವೀಂ ಪ್ರಚೇತಸ್ಸು ಮಹೀರುಹಾಃ ।
ಅರಕ್ಷ್ಯಮಾಣಾಮಾವವ್ರುರ್ಬಭೂವಾಥ ಪ್ರಜಾಕ್ಷಯಃ ॥ ೧ ॥

ನಾಶಕನ್ಮರುತೋ ವಾತುಂ ವೃತಂ ಖಮಭವದ್ದ್ರುಮೈಃ ।
ದಶವರ್ಷಸಹಸ್ರಾಣಿ ನ ಶೇಕುಶ್ಚೇಷ್ಟಿತುಂ ಪ್ರಜಾಃ ॥ ೨ ॥

ಹದಿನೈದನೆಯ ಅಧ್ಯಾಯವು

೧–೨. ಪ್ರಚೇತಸ್ಸುಗಳು ತಪಸ್ಸು ಮಾಡುತ್ತಿದ್ದಾಗ ಕರ್ಮಾಸಕ್ತನಾಗಿದ್ದ ಪ್ರಾಚೀನಬರ್ಹಿರಾಜನಿಗೆ ನಾರದರು ಆತ್ಮಜ್ಞಾನವನ್ನುಪದೇಶಮಾಡಿದುದರಿಂದ ಆ ರಾಜನೂ ತಪಸ್ಸಿಗಾಗಿ ಕಾಡಿಗೆ ಹೊರಟುಹೋಗುತ್ತಲು ಭೂಮಿಯಲ್ಲಿ ರಕ್ಷಕರಿಲ್ಲದೆ ಜನರು ವ್ಯವಸಾಯಕ್ಕಾಗಿ ಭೂಮಿಯನ್ನುಳುವುದೇ ಮುಂತಾದ ಕಾರ್ಯಗಳನ್ನು ಮಾಡದಿದ್ದುದರಿಂದ ಮರಗಳು ಭೂಮಿಯಲ್ಲೆಲ್ಲ ಆವರಿಸಿದುವು. ಆದರಿಂದ ಪ್ರಜಾನಾಶವು ಆರಂಭವಾಯಿತು. ಆಕಾಶವೆಲ್ಲ ಮರಗಳಿಂದ ತುಂಬಿಹೋಯಿತು. ಗಾಳಿ ಬೀಸುವುದಕ್ಕೂ ಅವಕಾಶವಿಲ್ಲದೆ ಹೋಯಿತು. ಹತ್ತು ಸಾವಿರ ವರ್ಷಗಳವರೆಗೆ ಪ್ರಜೆಗಳು ಚಲಿಸುವುದಕ್ಕೂ ಆಗಲಿಲ್ಲ

ತಾನ್ದೃಷ್ಟ್ವಾ ಜಲನಿಷ್ಕ್ರಾಂತಾಃ ಸರ್ವೇ ಕ್ರುದ್ಧಾಃ ಪಚೇತಸಃ ।
ಮುಖೇಭ್ಯೋ ವಾಯುಮಗ್ನಿಂ ಚ ತೇಽಸೃಜನ್ಜಾತಮನ್ಯವಃ ॥ ೩ ॥

ಉನ್ಮೂಲಾನಥ ತಾನ್ವೃಕ್ಷಾನ್ಕೃತ್ವಾ ವಾಯುರಶೋಷಯತ್ ।
ತಾನಗ್ನಿರದಹದ್ಘೋರಸ್ತತ್ರಾಭೂದ್ದ್ರುಮಸಂಕ್ಷಯಃ ॥ ೪ ॥

ದ್ರುಮಕ್ಷಯಮಥೋ ದೃಷ್ಟ್ವಾ ಕಿಂಚಿಚ್ಛಿಷ್ಟೇಷು ಶಾಖಿಷು ।
ಉಪಗಮ್ಯಾಬ್ರವೀದೇತಾನ್ರಾಜಾ ಸೋಮಃ ಪ್ರಜಾಪತೀನ್ ॥ ೫ ॥

ಕೋಪಂ ಯಚ್ಛತ ರಾಜಾನಃ ಶೃಣುಧ್ವಂ ಚ ವಚೋ ಮಮ ।
ಸಂಧಾನಂ ವಃ ಕರಿಷ್ಯಾಮಿ ಸಹ ಕ್ಷಿತಿರುಹೈರಹಂ ॥ ೬ ॥

ರತ್ನಭೂತಾ ಚ ಕನ್ಯೇಯಂ ವಾರ್ಕ್ಷೇಯೀ ವರವರ್ಣಿನೀ ।
ಭವಿಷ್ಯಜ್ಜ್ಞಾನತಾ ಪೂರ್ವಂ ಮಯಾ ಗೋಭಿರ್ವಿವರ್ಧಿತಾ ॥ ೭ ॥

ಮಾರಿಷಾ ನಾಮ ನಾಮ್ನೈಷಾ ವೃಕ್ಷಾಣಾಮಿತಿ ನಿರ್ಮಿತಾ ।
ಭಾರ್ಯಾ ವೋಽಸ್ತು ಮಹಾಭಾಗಾ ಧ್ರುವಂ ವಂಶವಿವರ್ಧಿನೀ ॥ ೮ ॥

೩-೬. ಈ ಸ್ಥಿತಿಯನ್ನು ನೋಡಿ ನೀರಿನಿಂದ ಎದ್ದು ಬಂದ ಪ್ರಚೇತಸ್ಸುಗಳು ಕೋಪವನ್ನು ಹೊಂದಿ ತಮ್ಮ ಮುಖದಿಂದಲೇ ಅಗ್ನಿಯನ್ನೂ ವಾಯುವನ್ನೂ ಸೃಷ್ಟಿಮಾಡಿದರು. ವಾಯುವು ಮರಗಳನ್ನು ಬೇರು ಸಹಿತ ಕಿತ್ತು ಒಣಗಿಸಿತು. ಬೆಂಕಿಯು ಅವುಗಳನ್ನೆಲ್ಲ ಸುಟ್ಟಿತು. ಇದರಿಂದ ಮರಗಳೆಲ್ಲ ನಾಶವಾಗಿ ಕೆಲವು ಮರಗಳು ಮಾತ್ರ ಉಳಿದಿರುವಾಗ ಸೋಮನೆಂಬ ದೇವನು (ಚಂದ್ರ) ಪ್ರಚೇತಸ್ಸುಗಳ ಬಳಿಗೆ ಬಂದು ಅವರನ್ನು ಕುರಿತು 'ರಾಜರೇ ನಿಮ್ಮ ಕೋಪವನ್ನು ಬಿಡಿ, ನನ್ನ ಮಾತನ್ನು ಕೇಳಿರಿ. ನಾನು ನಿಮಗೂ ವೃಕ್ಷಗಳಿಗೂ ಸ್ನೇಹವನ್ನು ಮಾಡಿಸುವೆನು.

೭-೧೦. ನನ್ನೊಡನೆ ಇರುವ ಈ ಕನ್ನೆಯು ವೃಕ್ಷಗಳ ಪುತ್ರಿಯು. ಹಿಂದೆ ವೃಕ್ಷಗಳಿಂದ ರತ್ನ ಸ್ವರೂಪವಾಗಿ ಹುಟ್ಟಿದಳು. ಮುಂದಾಗುವುದನ್ನು ತಿಳಿದ ನಾನು ಕಿರಣಗಳಿಂದ ಇವಳನ್ನು ಬೆಳೆಸಿದನು. ಮಾರಿಷಾ ಎಂದು ಇವಳ ಹೆಸರು. ಇವಳು

ಯುಷ್ಮಾಕಂ ತೇಜಸೋಽರ್ಧೇನ ಮಮ ಚಾರ್ಧೇನ ತೇಜಸಃ ।
ಅಸ್ಯಾಮುತ್ಪತ್ಸ್ಯತೇ ವಿದ್ವಾನ್ದಕ್ಷೋ ನಾಮ ಪ್ರಜಾಪತಿಃ ॥ ೯ ॥

ಮಮ ಚಾಂಶೇನ ಸಂಯುಕ್ತೋ ಯುಷ್ಮತ್ತೇಜೋಮಯೇನ ವೈ ।
ತೇಜಸಾಗ್ನಿಸಮೋ ಭೂಯಃ ಪ್ರಜಾಃ ಸಂವರ್ಧಯಿಷ್ಯತಿ ॥ ೧೦ ॥

ಕಂಡುರ್ನಾಮ ಮುನಿಃ ಪೂರ್ವಮಾಸೀದ್ವೇದವಿದಾಂ ವರಃ ।
ಸುರಮ್ಯೇ ಗೋಮತೀತೀರೇ ಸ ತೇಪೇ ಪರಮಂ ತಪಃ ॥ ೧೧ ॥

ತತ್ಕ್ಷೋಭಾಯ ಸುರೇಂದ್ರೇಣ ಪ್ರಮ್ಲೋಚಾಖ್ಯಾ ವರಾಪ್ಸರಾಃ ।
ಪ್ರಯುಕ್ತಾ ಕ್ಷೋಭಯಾಮಾಸ ತಮೃಷಿಂ ಸಾ ಶುಚಿಸ್ಮಿತಾ ॥ ೧೨ ॥

ಕ್ಷೋಭಿತಃ ಸ ತಯಾ ಸಾರ್ಧಂ ವರ್ಷಾಣಾಮಧಿಕಂ ಶತಂ ।
ಅತಿಷ್ಠನ್ಮಂದರದ್ರೋಣ್ಯಾಂ ವಿಷಯಾಸಕ್ತಮಾನಸಃ ॥ ೧೩ ॥

ಮ್ಮ ಪತ್ನಿಯಾಗಿ ವಂಶಾಭಿವೃದ್ಧಿಗೆ ಕಾರಣಳಾಗುವಳು. ನಿಮ್ಮ ತೀವ್ರವಾದ ಅರ್ಧನಿ ತೇಜಸ್ಸಿನಿಂದಲೂ, ನನ್ನ ಶಾಂತವಾದ ಅರ್ಧ ತೇಜಸ್ಸಿನಿಂದಲೂ ಕೂಡಿ ಇವಳಲ್ಲಿ ದಕ್ಷನೆಂಬ ಪ್ರಜಾಪತಿಯು ಹುಟ್ಟುವನು. ಅವನು ನನ್ನ ಮತ್ತು ನಿಮ್ಮ ತೇಜಸ್ಸಿನಿಂದ ಅಗ್ನಿಗೆ ಸಮಾನವಾದ ತೇಜಸ್ಸುಳ್ಳವನಾಗಿ ವಿಶೇಷವಾಗಿ ಪ್ರಜಾವೃದ್ಧಿಯನ್ನು ಮಾಡುವನು ಎಂದು ಹೇಳಿ ಹತ್ತು ಜನರಿಗೆ ಒಬ್ಬಳೇ ಪತ್ನಿಯಾಗುವುದು ಧರ್ಮವಲ್ಲ ವೆಂದು ಯೋಚಿಸುತ್ತಿದ್ದ ಅವರಿಗೆ ಅವಳ ಉತ್ಪತ್ತಿಯ ಕ್ರಮವನ್ನು ಹೇಳಲು ಪ್ರಾರಂಭಿಸಿದನು.

೧೧-೧೩. ಹಿಂದೆ ವೇದವನ್ನು ತಿಳಿದವರಲ್ಲಿ ಶ್ರೇಷ್ಠನಾದ ಕಂಡುವೆಂಬ ಋಷಿಯಿದ್ದನು. ಅವನು ಮನೋಹರವಾದ ಗೋಮತೀನದಿಯ ತೀರದಲ್ಲಿ ತಪಸ್ಸು ಮಾಡುತ್ತಿದ್ದನು. ಅವನ ತಪೋನಾಶಕ್ಕಾಗಿ ದೇವೇಂದ್ರನು ಪ್ರಮ್ಲೋಚೆಯೆಂಬ ಅಪ್ಸರಸ್ತ್ರೀಯನ್ನು ಕಳುಹಿಸಿದನು. ಮಂದಹಾಸದಿಂದ ಕೂಡಿದ್ದ ಅವಳು ಋಷಿಯನ್ನು ಮೋಹಗೊಳಿಸಿ ಅವನಿಗೆ ಚಿತ್ತವಿಕಾರವನ್ನುಂಟುಮಾಡಿದಳು. ವಿಷಯಾಭಿಲಾಷೆ ಯಿಂದ ಕೂಡಿದ ಆ ಮುನಿಯು ನೂರು ವರ್ಷಗಳ ಮೇಲೆ ಅವಳೊಡನೆ ಮಂದರ

ತಂ ಸಾ ಪ್ರಾಹ ಮಹಾಭಾಗ ಗಂತುಮಿಚ್ಛಾಮ್ಯಹಂ ದಿವಂ ।
ಪ್ರಸಾದಸುಮುಖೋ ಬ್ರಹನ್ನನುಜ್ಞಾಂ ದಾತುಮರ್ಹಸಿ ॥ ೧೪ ॥

ತಯೈವಮುಕ್ತಃ ಸ ಮುನಿಸ್ತಸ್ಯಾಮಾಸಕ್ತಮಾನಸಃ ।
ದಿನಾನಿ ಕತಿಚಿದ್ಭದ್ರೇ ಸ್ಥೀಯತಾಮಿತ್ಯಭಾಷತ ॥ ೧೫ ॥

ಏವಮುಕ್ತಾ ತತಸ್ತೇನ ಸಾಗ್ರಂ ವರ್ಷಶತಂ ಪುನಃ ।
ಬುಭುಜೇ ವಿಷಯಾಂಸ್ತನ್ವೀ ತೇನ ಸಾಕಂ ಮಹಾತ್ಮನಾ ॥ ೧೬ ॥

ಅನುಜ್ಞಾಂ ದೇಹಿ ಭಗವನ್ವ್ರಜಾಮಿ ತ್ರಿದಶಾಲಯಂ ।
ಉಕ್ತಸ್ತಥೇತಿ ಸ ಪುನಃ ಸ್ಥೀಯತಾಮಿತ್ಯಭಾಷತ ॥ ೧೭ ॥

ಪುನರ್ಗತೇ ವರ್ಷಶತೇ ಸಾಧಿಕೇ ಸಾ ಶುಭಾನನಾ ।
ಯಾಮೀತ್ಯಾಹ ದಿವಂ ಬ್ರಹ್ಮನ್ಪ್ರಣಯಸ್ಮಿತಶೋಭನಂ ॥ ೧೮ ॥

ದ್ರೋಣವೆಂಬ ಸ್ಥಳದಲ್ಲಿ ವಾಸವಾಗಿದ್ದನು. ಒಂದು ದಿನ ಅವಳು ಆ ಮುನಿಯನ್ನು ಕುರಿತು ತಾನು ಸ್ವರ್ಗಕ್ಕೆ ಹೋಗಬೇಕು. ದಯೆಯಿಂದ ನನಗೆ ಅಪ್ಪಣೆಯನ್ನು ಕೊಡಬೇಕು ಎಂದಳು. ಅವಳ ಮಾತಿಗೆ ಆ ಮುನಿಯು ಅವಳಲ್ಲಿಯೇ ಆಸಕ್ತವಾದ ಮನಸ್ಸಿನಿಂದ "ಎಲೌ ಮಂಗಳೆಯೇ, ಇನ್ನು ಕೆಲವುದಿನ ಇಲ್ಲಿಯೇ ಇರು" ಎಂದನು.

೧೬–೨೩. ಹೀಗೆ ಹೇಳಿದ ಮೇಲೆ ಆ ಸ್ತ್ರೀಯು ಇನ್ನೂ ನೂರು ವರ್ಷಗಳ ವರೆಗೆ ಅವನೊಡನೆ ವಿಷಯ ಸುಖಗಳನ್ನನುಭವಿಸಿದಳು. ಮತ್ತೆ ಅವಳು ಸ್ವರ್ಗಕ್ಕೆ ಹೋಗಲು ಅಪ್ಪಣೆಯನ್ನು ಕೇಳಿದಾಗ ಮುನಿಯು "ಇಲ್ಲಿಯೇ ಇರು" ಎಂದನು. ಪುನಃ ನೂರು ವರ್ಷಗಳು ಕಳೆದುವು. ಮತ್ತೆ ಅಪ್ಪಣೆಯನ್ನು ಕೇಳಲು ಆ ಮುನಿಯು ಅವಳನ್ನು ಆಲಿಂಗಿಸಿಕೊಂಡು "ನೀನು ಹೋದರೆ ಬಹುಕಾಲ ಬರುವುದಿಲ್ಲ. ಇನ್ನೊಂದು ಕ್ಷಣ ಇರು ಹೋಗುವಿಯಂತೆ" ಎಂದನು. ಅವನ ಶಾಪಕ್ಕೆ ಭಯಪಟ್ಟು ಆ ಸ್ತ್ರೀಯು ಸ್ವಲ್ಪ ಕಡಿಮೆ ಇನ್ನೂರು ವರ್ಷಗಳವರೆಗೆ ಅವನೊಡನೆ ಇದ್ದಳು. ಪುನಃ ಅವಳ

ಉಕ್ತಸ್ತಯ್ಯೈವಂ ಸ ಮುನಿರುಪಗೃಹ್ಯಾಯತೇಕ್ಷಣಾಂ ।
ಇಹಾಸ್ಯತಾಂ ಕ್ಷಣಂ ಸುಭ್ರು ಚಿರಕಾಲಂ ಗಮಿಷ್ಯಸಿ ॥ ೧೯ ॥

ಸಾ ಕ್ರೀಡಮಾನಾ ಸುಶ್ರೋಣೀ ಸಹ ತೇನರ್ಷಿಣಾ ಪುನಃ ।
ಶತದ್ವಯಂ ಕಿಂಚಿದೂನಂ ವರ್ಷಾಣಾಮನ್ವತಿಷ್ಠತ ॥ ೨೦ ॥

ಗಮನಾಯ ಮಹಾಭಾಗ ದೇವರಾಜನಿವೇಶನಂ ।
ಪ್ರೋಕ್ತಃ ಪ್ರೋಕ್ತಸ್ತಯಾ ತನ್ವ್ಯಾ ಸ್ಥೀಯತಾಮಿತ್ಯಭಾಷತ ॥ ೨೦ ॥

ತಸ್ಯ ಶಾಪಭಯಾದ್ಭೀತಾ ದಾಕ್ಷಿಣ್ಯೇನ ಚ ದಕ್ಷಿಣಾ ।
ಪ್ರೋಕ್ತಾ ಪ್ರಣಯಭಂಗಾರ್ತಿವೇದಿನೀ ನ ಜಹೌ ಮುನಿಂ ॥ ೨೨ ॥

ತಯಾ ಚ ರಮತಸ್ತಸ್ಯ ಪರಮರ್ಷೇರಹರ್ನಿಶಂ ।
ನವಂ ನವಮಭೂತ್ಪ್ರೇಮ ಮನ್ಮಥಾವಿಷ್ಟಚೇತಸಃ ॥ ೨೩ ॥

ಏಕದಾ ತು ತ್ವರಾಯುಕ್ತೋ ನಿಶ್ಚಕ್ರಾಮೋಟಜಾನ್ಮುನಿಃ ।
ನಿಷ್ಕ್ರಾಮಂತಂ ಚ ಕುತ್ರೇತಿ ಗಮ್ಯತೇ ಪ್ರಾಹ ಸಾ ಶುಭಾ ॥ ೨೪ ॥

ಇತ್ಯುಕ್ತಃ ಸ ತಯಾ ಪ್ರಾಹ ಪರಿವೃತ್ತಮಹಃ ಶುಭೇ
ಸಂಧ್ಯೋಪಾಸ್ತಿಂ ಕರಿಷ್ಯಾಮಿ ಕ್ರಿಯಾಲೋಪೋಽನ್ಯಥಾ ಭವೇತ್ ॥ ೨೫ ॥

ದೇವೇಂದ್ರನ ಮನೆಗೆ ಹೋಗಬೇಕೆಂದು ಹೇಳಿದಾಗಲೆಲ್ಲ ಮುನಿಯು ಇಲ್ಲಿಯೇ ಇರು ಎಂದು ಹೇಳುತ್ತಿದ್ದನು. ಅವಳು ಮುನಿಯ ಶಾಪಕ್ಕೆ ಹೆದರಿ ದಾಕ್ಷಿಣ್ಯದಿಂದ ಪ್ರೀತಿ ಭಂಗವಾಗುವುದೆಂದು ಅವನನ್ನು ಬಿಡದಿದ್ದಳು. ಅವಳೊಡನೆ ಹಗಲೂ ರಾತ್ರಿಯೂ ಕ್ರೀಡಿಸುತ್ತಿದ್ದ ಕಾಮುಕನಾದ ಮುನಿಗೆ ಪ್ರೇಮವು ಹೊಸ ಹೊಸದಾಗುತ್ತಿತ್ತು.

೨೪–೨೫. ಒಂದು ದಿನ ಮುನಿಯು ಆತುರವಾಗಿ ಪರ್ಣಶಾಲೆಯಿಂದ ಹೊರಟನು. ಹಾಗೆ ಹೋಗುತ್ತಿರುವ ಅವನನ್ನು ಆ ಅಪ್ಸರೆಯು ' ಎಲ್ಲಿಗೆ ಹೋಗುವೆ ಎಂದು ಕೇಳಿದಳು. ಆಗ ಮುನಿಯು " ಎಲೌ ಮಂಗಳೆಯೇ ಹಗಲು ಕಳೆಯುತ್ತ ಬಂದಿತು, ಸಂಧ್ಯಾವಂದನೆಯನ್ನು ಮಾಡಬೇಕು. ಇಲ್ಲದಿದ್ದರೆ ಕರ್ಮ ಲೋಪ

ತತಃ ಪ್ರಹಸ್ಯ ಸುದತೀ ತಂ ಸಾ ಪ್ರಾಹ ಮಹಾಮುನಿಂ ।
ಕಿಮದ್ಯ ಸರ್ವಧರ್ಮಜ್ಞ ಪರಿವೃತ್ತಮಹಸ್ತವ ॥ ೨೬ ॥

ಬಹೂನಾಂ ವಿಪ್ರ ವರ್ಷಾಣಾಂ ಪರಿವೃತ್ತಮಹಸ್ತವ ।
ಗತಮೇತನ್ನ ಕುರುತೇ ವಿಸ್ಮಯಂ ಕಸ್ಯ ಕಥ್ಯತಾಂ ॥ ೨೭ ॥

॥ ಕಂಡುರುವಾಚ ॥

ಪ್ರಾತಸ್ತ್ವಮಾಗತಾ ಭದ್ರೇ ನದೀತೀರಮಿದಂ ಶುಭಂ ।
ಮಯಾ ದೃಷ್ಟಾಽಸಿ ತನ್ವಂಗಿ ಪ್ರವಿಷ್ಟಾಽಸಿ ಮಮಾಶ್ರಮಂ ॥ ೨೮ ॥

ಇಯಂ ಚ ವರ್ತತೇ ಸಂಧ್ಯಾ ಪರಿಣಾಮಮಹರ್ಗತಂ ।
ಉಪಹಾಸಃ ಕಿಮರ್ಥೋಽಯಂ ಸದ್ಭಾವಃ ಕಥ್ಯತಾಂ ಮಮ ॥ ೨೯ ॥

॥ ಪ್ರಮ್ಲೋಚೋವಾಚ ॥

ಪ್ರತ್ಯೂಷಸ್ಯಾಗತಾ ಬ್ರಹ್ಮನ್ಸತ್ಯಮೇತನ್ನ ತನ್ಮೃಷಾ ।
ನನ್ವಸ್ಯ ತಸ್ಯ ಕಾಲಸ್ಯ ಗತಾನ್ಯಬ್ದಶತಾನಿ ತೇ ॥ ೩೦ ॥

ವಾಗುವುದು" ಎಂದನು. ಆ ಸ್ತ್ರೀಯು ನಗುತ್ತ "ಸಮಸ್ತ ಧರ್ಮವನ್ನೂ ತಿಳಿದ ಮುನಿಯೇ, ಈ ದಿವಸ ನಿನಗೆ ಹಗಲು ಮುಗಿಯಿತೇ? ಬ್ರಾಹ್ಮಣನೇ ನಿನ್ನ ಹಗಲು ಅನೇಕ ವರ್ಷಗಳ ಅಳತೆಯುದು. ಇದು ಯಾರಿಗೆ ತಾನೆ ಆಶ್ಚರ್ಯವನ್ನುಂಟು ಮಾಡುವುದಿಲ್ಲ?" ಎಂದಳು.

೨೮-೨೯. ಕಂಡುವು "ಎಲೌ ಮಂಗಳೆಯೇ ಪ್ರಾತಃಕಾಲದಲ್ಲಿ ನೀನಿಲ್ಲಿಗೆ ಬಂದೆ. ಮನೋಹರವಾದ ನದೀ ತೀರದಲ್ಲಿ ನಾನು ನಿನ್ನನ್ನು ನೋಡಿದೆನು. ನೀನು ನನ್ನಾಶ್ರಮಕ್ಕೆ ಬಂದೆ. ಈಗ ಸಂಧ್ಯೆಯಾಗಿದೆ, ಹಾಸ್ಯವನ್ನೇಕೆ ಮಾಡುವೆ? ನಿಜವನ್ನು ಹೇಳು" ಎಂದನು.

೩೦. ಪ್ರಮ್ಲೋಚೆಯು "ಬ್ರಹ್ಮಜ್ಞಾನಿಯಾದ ಮುನಿಯೇ ನಾನು ಪ್ರಾತಃಕಾಲದಲ್ಲಿ ಇಲ್ಲಿಗೆ ಬಂದೆನು. ಅದು ಸುಳ್ಳಲ್ಲ. ಆದರೆ ನೀನು ನನ್ನೊಡನೆ ನೂರಾರು ವರ್ಷಗಳನ್ನು ಒಂದು ದಿನದಂತೆ ಕಳೆದಿರುವೆ" ಎಂದಳು.

॥ ಸೋಮ ಉವಾಚ ॥

ತತಸ್ಸಸಾಧ್ವಸೋ ವಿಪ್ರಸ್ತಾಂ ಪಪ್ರಚ್ಛಾಯತೇಕ್ಷಣಾಂ ।
ಕಥ್ಯತಾಂ ಭೀರು ಕಃ ಕಾಲಸ್ತ್ವಯಾ ಮೇ ರಮತಃ ಸಹ ॥ ೩೧ ॥

॥ ಪ್ರಮ್ಲೋಚೋವಾಚ ॥

ಸಪ್ತೋತ್ತರಾಣ್ಯತೀತಾನಿ ನವವರ್ಷ ಶತಾನಿ ತೇ ।
ಮಾಸಾಶ್ಚ ಷಟ್ತಥೈವಾನ್ಯತ್ಸಮತೀತಂ ದಿನತ್ರಯಂ ॥ ೩೨ ॥

॥ ಋಷಿರುವಾಚ ॥

ಸತ್ಯಂ ಭೀರು ವದಸ್ಯೇತತ್ಪರಿಹಾಸೋಽಥ ವಾ ಶುಭೇ ।
ದಿನಮೇಕಮಹಂ ಮನ್ಯೇ ತ್ವಯಾ ಸಾರ್ಧಮಿಹಾಸಿತಂ ॥ ೩೩ ॥

॥ ಪ್ರಮ್ಲೋಚೋವಾಚ ॥

ವದಿಷ್ಯಾಮ್ಯನೃತಂ ಬ್ರಹ್ಮನ್ಕಥಮತ್ರ ತವಾಂತಿಕೇ ।
ವಿಶೇಷೇಣಾದ್ಯ ಭವತಾ ಪೃಷ್ಟಾ ಮಾರ್ಗಾನುವರ್ತಿನಾ ॥ ೩೪ ॥

೩೧–೩೪. ಆಮೇಲೆ ಆ ಬ್ರಾಹ್ಮಣನು ಭಯದಿಂದ ಕೂಡಿ ಅವಳನ್ನು ಕುರಿತು, "ಭಯಶಾಲಿನಿಯಾದ ಸ್ತ್ರೀಯೇ ನಿನ್ನೊಡನೆ ಕ್ರೀಡಿಸುತ್ತಿದ್ದ ನನಗೆ ಎಷ್ಟು ಕಾಲ ಕಳೆಯಿತು ಅದನ್ನು ಹೇಳು" ಎಂದನು. ಪ್ರಮ್ಲೋಚೆಯು "ಒಂಬೈನೂರ ಏಳು ವರ್ಷಗಳು ಆರು ತಿಂಗಳು ಮೂರು ದಿವಸಗಳು ಕಳೆದುಹೋದುವು; ಎಂದಳು. ಕಂಡುವು "ಶುಭಕರಳೇ 'ಇದು ನಿಜವೇ' ಹಾಸ್ಯಕ್ಕಾಗಿ ಹೇಳುವೆಯೋ, ನಿನ್ನೊಡನೆ ಕ್ರೀಡಿಸುತ್ತಿದ್ದ ನನಗೆ ಒಂದೇ ದಿನವೆಂದು ಕಾಣುವುದು" ಎಂದನು. ಪ್ರಮ್ಲೋಚೆಯು "ಬ್ರಾಹ್ಮಣನೇ ನಿನ್ನೊಡನೆ ನಾನು ಹೇಗೆ ಸುಳ್ಳು ಹೇಳುವೆನು ? ಈ ದಿನ ನೀನು ನನ್ನನ್ನು ಬಿಟ್ಟು ನಿನ್ನ ಧರ್ಮಮಾರ್ಗಕ್ಕೆ ಹೋಗುತ್ತಿದ್ದುದರಿಂದ ನಾನು ಪ್ರಶ್ನೆ ಮಾಡಿದೆನು" ಎಂದಳು.

॥ ಸೋಮ ಉವಾಚ ॥

ನಿಶಮ್ಯ ತದ್ವಚಃ ಸ್ತಥ್ಯಂ ಸ ಮುನಿರ್ನೃಪನಂದನಾಃ ।
ಧಿಗ್ಧಿಙ್ಮಾಮಿತ್ಯತೀವೇತ್ಥಂ ನಿನಿಂದಾತ್ಮಾನಮಾತ್ಮನಾ ॥ ೩೫ ॥

॥ ಮುನಿರುವಾಚ ॥

ತಪಾಂಸಿ ಮಮ ನಷ್ಟಾನಿ ಹತಂ ಬ್ರಹ್ಮವಿದಾಂ ಧನಂ ।
ಹತೋ ವಿವೇಕಃ ಕೇನಾಪಿ ಯೋಷಿನ್ಮೋಹಾಯ ನಿರ್ಮಿತಾ ॥ ೩೬ ॥

ಊರ್ಮಿಷಟ್ಕಾತಿಗಂ ಬ್ರಹ್ಮ ಜ್ಞೇಯಮಾತ್ಮಜಯೇನ ಮೇ ।
ಮತಿರೇಷಾ ಹೃತಾ ಯೇನ ಧಿಕ್ತಂ ಕಾಮಂ ಮಹಾಗ್ರಹಂ ॥ ೩೭ ॥

ವ್ರತಾನಿ ವೇದವೇದ್ಯಾಪ್ತಿಕಾರಣಾನ್ಯಖಿಲಾನಿ ಚ ।
ನರಕಗ್ರಾಮಮಾರ್ಗೇಣ ಸಂಗೇನಾಪಹೃತಾನಿ ಮೇ ॥ ೩೮ ॥

ವಿನಿಂದ್ಯೇತ್ಥಂ ಸ ಧರ್ಮಜ್ಞಃ ಸ್ವಯಮಾತ್ಮಾನಮಾತ್ಮನಾ ।
ತಾಮಪ್ಸರಸಮಾಸೀನಾಮಿದಂ ವಚನಮಬ್ರವೀತ್ ॥ ೩೯ ॥

---

೩೫. ಸೋಮನು ಹೇಳುವನು: ರಾಜಪುತ್ರರೇ ಕೇಳಿರಿ. ಪ್ರಮ್ಲೋಚೆಯು ಹೇಳಿದ ನಿಜವಾದ ಮಾತನ್ನು ಕೇಳಿ ಕಂಡುವು ತನ್ನನ್ನು ವಿಶೇಷವಾಗಿ ನಿಂದಿಸಿ ಕೊಂಡನು.

೩೬–೪೦. ಕಂಡುವು 'ವೇದವನ್ನು ತಿಳಿದವರ ತಪೋರೂಪವಾದ ಧನವು ನಾಶವಾಯಿತು. ವಿವೇಕವು ಹೋಯಿತು. ಸ್ತ್ರೀಯನ್ನು ಯಾವನೋ ಅಜ್ಞಾನವನ್ನು ಉಂಟುಮಾಡುವುದಕ್ಕಾಗಿ ಸೃಷ್ಟಿಸಿರುವನು. ನಾವು ಮನಸ್ಸನ್ನು ಜಯಿಸಿ ಹಸಿವು ಬಾಯಾರಿಕೆ, ಲೋಭ, ಮೋಹ, ಜರಾ, ಮೃತ್ಯು ಎಂಬ ಷಡೂರ್ಮಿಗಳನ್ನು ಮೀರಿ ಬ್ರಹ್ಮಸ್ವರೂಪವನ್ನು ತಿಳಿಯಬೇಕು. ನನ್ನ ಬುದ್ಧಿಯನ್ನು ಅಪಹರಿಸಿದ ಕಾಮನೆಂಬ ದುಷ್ಟ ಗ್ರಹವನ್ನು ನಿಂದಿಸಬೇಕು. ವೇದಗಳಿಂದ ತಿಳಿಯಬೇಕಾದ ಬ್ರಹ್ಮಪ್ರಾಪ್ತಿಗೆ ಕಾರಣವಾದ ಸಮಸ್ತ ವ್ರತಗಳೂ ನರಕವೆಂಬ ಗ್ರಾಮಕ್ಕೆ ದಾರಿಯಾದ ಸ್ತ್ರೀ ಸಂಗ

ಗಚ್ಛ ಪಾಪೇ ಯಥಾಕಾಮಂ ಯತ್ಕಾರ್ಯಂ ತತ್ಕೃತಂ ತ್ವಯಾ ।
ದೇವರಾಜಸ್ಯ ಮತ್‌ಕ್ಷೋಭಂ ಕುರ್ವಂತ್ಯಾ ಭಾವಚೇಷ್ಟಿತೈಃ ॥ ೪೦ ॥

ನ ತ್ವಾಂ ಕರೋಮ್ಯಹಂ ಭಸ್ಮ ಕ್ರೋಧತೀವ್ರೇಣ ವಹ್ನಿನಾ ।
ಸತಾಂ ಸಪ್ತಪದಂ ಮೈತ್ರಮುಷಿತೋಽಹಂ ತ್ವಯಾ ಸಹ ॥ ೪೧ ॥

ಅಥ ವಾ ತವ ಕೋ ದೋಷಃ ಕಿಂ ವಾ ಕುಪ್ಯಾಮ್ಯಹಂ ತವ ।
ಮಮೈವ ದೋಷೋ ನಿತರಾಂ ಯೇನಾಹಮಜಿತೇಂದ್ರಿಯಃ ॥ ೪೨ ॥

ಯಯಾ ಶಕ್ರಪ್ರಿಯಾರ್ಥಿನ್ಯಾ ಕೃತೋ ಮೇ ತಪಸೋ ವ್ಯಯಃ ।
ತ್ವಯಾ ಧಿಕ್ತ್ವಾಂ ಮಹಾಮೋಹಮಂಜೂಷಾಂ ಸುಜುಗುಪ್ಸಿತಾಂ ॥ ೪೩ ॥

॥ ಸೋಮ ಉವಾಚ ॥

ಯಾವದಿತ್ಥಂ ಸ ವಿಪ್ರರ್ಷಿಸ್ತಾಂ ಬ್ರವೀತಿ ಸುಮಧ್ಯಮಾಂ ।
ತಾವದ್ಗಲತ್ಸ್ವೇದಜಲಾ ಸಾ ಬಭೂವಾತಿ ವೇಪಥುಃ ॥ ೪೪ ॥

ದಿಂದ ನಾಶವಾದುವು. ಹೀಗೆಂದು ತನ್ನ ಮನಸ್ಸಿನಲ್ಲಿ ತನ್ನನ್ನು ನಿಂದಿಸಿಕೊಂಡು ಅಲ್ಲಿ ಕುಳಿತಿದ್ದ ಅಪ್ಸರ ಸ್ತ್ರೀಯನ್ನು ಕುರಿತು 'ಎಲೌ ಪಾಪಿಯೇ ನಿನ್ನ ಶೃಂಗಾರ ಚೇಷ್ಟೆಯಿಂದ ನನ್ನ ಮನಸ್ಸಿಗೆ ಚಾಂಚಲ್ಯವನ್ನುಂಟುಮಾಡಿ ದೇವೇಂದ್ರನಿಗೆ ಇಷ್ಟವಾದ ಕೆಲಸವನ್ನು ಮಾಡಿದೆ. ನಿನ್ನ ಇಷ್ಟ ಬಂದೆಡೆಗೆ ಹೋಗು.

೪೧–೪೩. ನಾನು ನಿನ್ನೊಡನೆ ಸಪ್ತಪದೀರೂಪವಾದ ಸ್ನೇಹದಿಂದಿದ್ದುದರಿಂದ ನಿನ್ನನ್ನು ಕೋಪದಿಂದ ನಾಶಮಾಡುವುದಿಲ್ಲ. ನಿನ್ನ ತಪ್ಪೇನು? ನಿನ್ನ ಮೇಲೆ ನಾನೇಕೆ ಕೋಪಮಾಡಬೇಕು? ನಾನು ಜಿತೇಂದ್ರಿಯನಲ್ಲದುದರಿಂದ ಈ ತಪ್ಪು ನನ್ನದೇ ಆಗಿರುವುದು. ದೇವೇಂದ್ರನಿಗೆ ಹಿತವನ್ನು ಮಾಡಬೇಕೆಂದು ನೀನು ನನ್ನ ತಪಸ್ಸನ್ನು ನಾಶಮಾಡಿದೆ. ಮಹಾ ಅಜ್ಞಾನದ ಪೆಟ್ಟಿಗೆಯಂತಿರುವ ಅಸಹ್ಯಳಾದ ನಿನ್ನನ್ನು ನಿಂದಿಸಬೇಕು.

೪೪–೪೭. ಹೀಗೆಂದು ಕಂಡುಮುನಿಯು ಹೇಳುತ್ತಿರುವಾಗ ಆ ಅಪ್ಸರ ಸ್ತ್ರೀಯು ಭಯದಿಂದ ನಡುಗುತ್ತ ಮೈಯಲ್ಲಿ ಬೆವರನ್ನು ಸುರಿಸುತ್ತಿದ್ದಳು. ಹೀಗಿರುವ

ಪ್ರವೇಪಮಾನಾಂ ಸತತಂ ಸ್ವಿನ್ನಗಾತ್ರಲತಾಂ ಸತೀಂ ।
ಗಚ್ಛ ಗಚ್ಛೇತಿ ಸಕ್ರೋಧಮುವಾಚ ಮುನಿಸತ್ತಮಃ ॥ ೪೫ ॥

ಸಾ ತು ನಿರ್ಭರ್ತ್ಸಿತಾ ತೇನ ವಿನಿಷ್ಕ್ರಮ್ಯ ತದಾಶ್ರಮಾತ್ ।
ಆಕಾಶಗಾಮಿನೀ ಸ್ವೇದಂ ಮಮಾರ್ಜ ತರುಪಲ್ಲವೈಃ ॥ ೪೬ ॥

ವೃಕ್ಷಾದ್ವೃಕ್ಷಂ ಯಯೌ ಬಾಲಾ ತದಗ್ರಾರುಣಪಲ್ಲವೈಃ ।
ನಿರ್ಮಾರ್ಜಮಾನಾ ಗಾತ್ರಾಣಿ ಗಳತ್ಸ್ವೇದಜಲಾನಿ ವೈ ॥ ೪೭ ॥

ಋಷಿಣಾ ಯಸ್ತದಾ ಗರ್ಭಸ್ತಸ್ಯಾ ದೇಹೇ ಸಮಾಹಿತಃ ।
ನಿರ್ಜಗಾಮ ಸರೋಮಾಂಚಸ್ವೇದರೂಪೀ ತದಂಗತಃ ॥ ೪೮ ॥

ತಂ ವೃಕ್ಷಾ ಜಗೃಹುರ್ಗರ್ಭಮೇಕಂ ಚಕ್ರೇ ಚ ಮಾರುತಃ ।
ಮಯಾ ಚಾಪ್ಯಾಯಿತೋ ಗೋಭಿಸ್ಸ ತದಾ ವವೃಧೇ ಶನೈಃ ॥ ೪೯ ॥

ವೃಕ್ಷಾಗ್ರಗರ್ಭಸಂಭೂತಾ ಮಾರಿಷಾಖ್ಯಾ ವರಾನನಾ ।
ತಾಂ ಪ್ರದಾಸ್ಯಂತಿ ವೋ ವೃಕ್ಷಾಃ ಕೋಪ ಏಷ ಪ್ರಶಾಮ್ಯತಾಂ ॥ ೫೦ ॥

ಅವಳನ್ನು ಆಮುನಿಯು ಕೋಪದಿಂದ "ಹೋಗು! ಹೋಗು!" ಎಂದು ಹೇಳಿದನು ಅವಳು ಭಯಂಕರವಾದ ಋಷಿಯ ಮಾತನ್ನು ಕೇಳಿ ಆಶ್ರಮದಿಂದ ಹೊರಟು ಆಕಾಶಮಾರ್ಗದಲ್ಲಿ ಹೋಗುತ್ತ ತನ್ನ ಮೈ ಬೆವರನ್ನು ಮರಗಳ ಚಿಗುರುಗಳಿಂದ ಒರಸಿಕೊಳ್ಳುತ್ತ ಮರದಿಂದ ಮರಕ್ಕೆ ಹೋಗಿ ಅದರ ಕೆಂಪಾದ ಚಿಗುರುಗಳನ್ನು ತೆಗೆದುಕೊಂಡು ತನ್ನ ಶರೀರದಲ್ಲಿ ಸುರಿಯುವ ಬೆವರನ್ನು ಒರಸಿಕೊಂಡಳು.

೪೮–೫೦. ಕಂಡುಋಷಿಯಿಂದ ಅವಳ ಶರೀರದಲ್ಲಿ ಉಂಟಾಗಿದ್ದ ಗರ್ಭವು ಬೆವರಿನ ಮೂಲಕವಾಗಿ ಹೊರಕ್ಕೆ ಹೊರಟಿತು ಅದನ್ನು ವೃಕ್ಷಗಳು ತೆಗೆದುಕೊಂಡುವು. ವಾಯುವು ಅದನ್ನೆಲ್ಲ ಒಟ್ಟುಗೂಡಿಸಿದನು. ನಾನು ಕಿರಣಗಳಿಂದ ಶಾಂತಗೊಳಿಸಿದೆನು. ಈ ಕಾರಣದಿಂದ ಆ ಗರ್ಭವು ನಿದಾನವಾಗಿ ಬೆಳೆಯಿತು. ಮರಗಳ ಚಿಗುರುಗಳ ಗರ್ಭದಲ್ಲಿ ಹುಟ್ಟಿದ ಮಾರಿಷಾ ಎಂಬ ಕನ್ಯೆಯನ್ನು ವೃಕ್ಷಗಳು ನಿಮಗೆ ಕೊಡುವುವು. ನೀವು ಕೋಪವನ್ನು ಶಾಂತಗೊಳಿಸಿ.

ಕಂಡೋರಪತ್ಯಮೇವಂ ಸಾ ವೃಕ್ಷೇಭ್ಯಶ್ಚ ಸಮುದ್ಗತಾ ।
ಮಮಾಪತ್ಯಂ ತಥಾ ವಾಯೋಃ ಪ್ರಮ್ಲೋಚಾ ತನಯಾ ಚ ಸಾ ॥ ೪೧ ॥

ಸ ಚಾಹ ಭಗವಾನ್ಕಂಡುಃ ಕ್ಷೀಣೇ ತಪಸಿ ಸತ್ತಮಃ ।
ಪುರುಷೋತ್ತಮಾಖ್ಯಮದ್ರೀಶಂ ವಿಷ್ಣೋರಾಯತನಂ ಯಯೌ ॥ ೪೨ ॥

ತತ್ರೈಕಾಗ್ರಮತಿರ್ಭೂತ್ವಾ ಚಕಾರಾರಾಧನಂ ಹರೇಃ ।
ಬ್ರಹ್ಮಪಾರಮಯಂ ಕುರ್ವನ್ ಜಪಮೇಕಾಗ್ರಮಾನಸಃ ॥
ಊರ್ಧ್ವಬಾಹುರ್ಮಹಾಯೋಗೀ ಸ್ಥಿತ್ವಾಸೌ ಭೂಪನಂದನಾಃ ॥ ೪೩ ॥

॥ ಪ್ರಚೇತಸ ಊಚುಃ ॥

ಬ್ರಹ್ಮಪಾರಂ ಮುನೇಃ ಶ್ರೋತುಮಿಚ್ಛಾಮಃ ಪರಮಂ ಸ್ತವಂ ।
ಜಪತಾ ಕಂಡುನಾ ದೇವೋ ಯೇನಾರಾಧ್ಯತ ಕೇಶವಃ ॥ ೪೪ ॥

---

೪೧. ಹೀಗೆ ಮಾರಿಷಾ ಎಂಬ ಕನ್ಯೆಯು ಕಂಡುವಿನ ಮಗಳು. ವೃಕ್ಷಗಳಿಂದ ಹುಟ್ಟಿದವಳು, ನಾನು ವಾಯು ಪ್ರಮ್ಲೋಚೆ ಈ ಮೂವರಿಗೂ ಅವಳು ಪುತ್ರಿಯು.

೪೨-೪೩. ಆ ಮಹಾ ಮಹಿಮನಾದ ಕಂಡುವು ತನ್ನ ತಪಸ್ಸು ನಾಶವಾಗುತ್ತಲು ಪುರುಷೋತ್ತಮವೆಂಬ ಪರ್ವತದಲ್ಲಿರುವ ವಿಷ್ಣುದೇವಾಲಯಕ್ಕೆ ಹೋದನು. ಅಲ್ಲಿ ಏಕಾಗ್ರಚಿತ್ತದಿಂದ ಆ ವಿಷ್ಣುವಿನ ಪೂಜೆಯನ್ನು ಮಾಡಿದನು. ಬ್ರಹ್ಮಸಾರವೆಂಬ ವೇದಾಂತ ಪರಿಣಾಮ ರೂಪವಾದ ಜಪವನ್ನು ಮಾಡುತ್ತ ಏಕಾಗ್ರಚಿತ್ತನಾಗಿ ತೋಳುಗಳನ್ನು ಮೇಲಕ್ಕೆತ್ತಿಕೊಂಡು ನಿಂತು ಮಹಾಯೋಗಿಯಾಗಿ ಹರಿಯನ್ನು ಧ್ಯಾನಮಾಡುತ್ತ ತಪಸ್ಸು ಮಾಡುತ್ತಿದ್ದನು.

೪೪. ಪ್ರಚೇತಸ್ಸುಗಳು "ಸೋಮಮುನಿಯೇ ಕಂಡುವು ಜಪಮಾಡುತ್ತ ವಿಷ್ಣುವನ್ನು ಪೂಜಿಸಿದ ಬ್ರಹ್ಮಪಾರವೆಂಬ ಶ್ರೇಷ್ಠವಾದ ತಪಸ್ಸು ಯಾವುದು? ಅದನ್ನು ನಮಗೆ ಹೇಳಬೇಕು" ಎಂದನು.

॥ ಸೋಮೋವಾಚ ॥

ಪಾರಂಪರಂ ವಿಷ್ಣುರಪಾರಪಾರಃ
ಪರಃ ಪರೇಭ್ಯಃ ಪರಮಾರ್ಥರೂಪೀ ।
ಸ ಬ್ರಹ್ಮಪಾರಃ ಪರಪಾರಭೂತಃ
ಪರಃ ಪರಾಣಾಮಪಿ ಪಾರಪಾರಃ ॥ ೨೫ ॥

ಸ ಕಾರಣಂ ಕಾರಣತಸ್ತತೋಽಪಿ
ತಸ್ಯಾಪಿ ಹೇತುಃ ಪರಹೇತುಃ ಹೇತುಃ ।
ಕಾರ್ಯೇಷು ಚೈವಂ ಸಹ ಕರ್ಮಕರ್ತೃ
ರೂಪೈರಶೇಷೈರವತೀಹ ಸರ್ವಂ ॥ ೫೬ ॥

---

೫೫. ಸೋಮನು ಹೇಳುವನು :—ಕಂಡುಮುನಿಯು ಮೂರು ಶ್ಲೋಕಗಳಿಂದ ವಿಷ್ಣುಸ್ತೋತ್ರವನ್ನು ಪ್ರತಿಪಾದನ ಮಾಡಿ ನಾಲ್ಕನೆಯ ಶ್ಲೋಕದಿಂದ ದೋಷಶಾಂತಿಯನ್ನು ಪ್ರಾರ್ಥನೆ ಮಾಡಿಕೊಂಡಿರುವನು. 'ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಂ' ಎಂಬ ಶ್ರುತಿಯಂತೆ ವಿಷ್ಣುವು ಸಂಸಾರವೆಂಬ ಮಾರ್ಗಕ್ಕೆ ಎಲ್ಲೆಯಾದವನು ಅಂದರೆ ಪುನರ್ಜನ್ಮರಹಿತನು. ಇವನ ಅಂತವನ್ನು ಯಾರೂ ತಿಳಿಯಲಾರರು, 'ಮಹತೋ ಮಹೀಯಾನ್' ಎಂಬ ಶ್ರುತಿಯಂತೆ ಆಕಾಶಾದಿ ಭೂತಗಳಿಗಿಂತ ದೊಡ್ಡವನು ಎಂದರೆ ಅನಂತನು. ಆದುದರಿಂದಲೇ ಸತ್ಯಸ್ವರೂಪನು. ಅಥವಾ ಪರಮಾನಂದ ಸ್ವರೂಪನು. ಅನಾತ್ಮ ಪ್ರಪಂಚಕ್ಕೆ ಅವಧಿ ಭೂತನಾದುದರಿಂದ ವೇದಾಂತಜ್ಞಾನದಿಂದಲಾಗಲಿ, ತಪಸ್ಸಿನಿಂದಲಾಗಲಿ ಅವನನ್ನು ಹೊಂದಬಹುದು. ಇಂದ್ರಿಯಾದಿಗಳಿಗಿಂತ ಬೇರೆಯಾಗಿ ನಿರಾಕಾರನಾದವನು ಭಕ್ತರನ್ನು ರಕ್ಷಿಸಿ, ಅವರ ಇಷ್ಟಾರ್ಥಗಳನ್ನು ಕೊಡತಕ್ಕವನು. ಇದು ಶುದ್ಧಸ್ವರೂಪದಿಂದ ಸ್ತೋತ್ರಮಾಡಿದುದು.

೫೬. ಆ ವಿಷ್ಣುವು ಚರಾಚರ ಪ್ರಪಂಚ, ಬ್ರಹ್ಮಾಂಡ, ಪಂಚಭೂತ, ಪಂಚತನ್ಮಾತ್ರ, ಮಹತ್ತತ್ತ್ವ, ಪ್ರಕೃತಿ, ಈ ರೀತಿಯಲ್ಲಿ ಒಂದಕ್ಕೊಂದು ಕಾರಣವಾಗಿ ತಾನು ಮೂಲಕಾರಣನಾಗಿರುವನು. ಕಾರ್ಯದಲ್ಲಿಯೂ, ಹೀಗೆಯೇ ಪ್ರಕೃತಿಯಿಂದ ಚರಾಚರ ಪ್ರಪಂಚದವರೆಗೂ ತಾನೇ ಕಾರ್ಯರೂಪನಾಗಿಯೂ ಇರುವನು ದೇವನು ಕರ್ತೃರೂಪನಾಗಿಯೂ. ಕರ್ಮರೂಪನಾಗಿಯೂ ಈ ಸಮಸ್ತ ಜಗತ್ತನ್ನು ಸರ್ವಾತ್ಮ ಸ್ವರೂಪನಾಗಿರುವ ಉಪಾಯದಿಂದ ರಕ್ಷಿಸುತ್ತಿರುವನು ಇದು ಸರ್ವಾತ್ಮ ರೂಪದಿಂದ ಸ್ತೋತ್ರಮಾಡಿದುದು.

ಬ್ರಹ್ಮಪ್ರಭುರ್ಬ್ರಹ್ಮ ಸ ಸರ್ವಭೂತೋ
ಬ್ರಹ್ಮಪ್ರಜಾನಾಂ ಪತಿರಚ್ಯುತೋಽಸೌ ।
ಬ್ರಹ್ಮಾಕ್ಷರಂ ನಿತ್ಯಮಜಂ ಸ ವಿಷ್ಣು-
ರಪಕ್ಷಯಾದ್ಯೈರಖಿಲೈರಸಂಗಿ ॥ ೫೭ ॥

ಬ್ರಹ್ಮಾಕ್ಷರಮಜಂ ನಿತ್ಯಂ ಯದಾಸೌ ಪುರುಷೋತ್ತಮಃ ।
ತದಾ ರಾಗಾದಯೋ ದೋಷಾಃ ಪ್ರಯಾಂತು ಪ್ರಶಮಂ ಮಮ ॥ ೫೮ ॥

॥ ಸೋಮೋವಾಚ ॥

ಏತದ್ಬ್ರಹ್ಮಪರಾಖ್ಯಂ ವೈ ಸಂಸ್ತವಂ ಪರಮಂ ಜಪನ್ ।
ಅವಾಪ ಪರಮಾಂ ಸಿದ್ಧಿಂ ಸ ಸಮಾರಾಧ್ಯ ಕೇಶವಂ ॥ ೫೯ ॥

---

೫೭. ಪರಬ್ರಹ್ಮಸ್ವರೂಪನಾದ ವಿಷ್ಣುವು ತನ್ನ ಸ್ವಸ್ವರೂಪವನ್ನು ಬಿಡದೆ ಸರ್ವವ್ಯಾಪಿಯಾಗಿ ಸರ್ವಾತ್ಮಸ್ವರೂಪವಾಗಿರುವನು. ಆದುದರಿಂದಲೇ ಅಚ್ಯುತನೆಂಬ ಹೆಸರನ್ನು ಪಡೆದಿರುವನು. ನಾಶರಹಿತನೂ ನಿತ್ಯನೂ ಆದ ಅವನು ಅಪಕ್ಷಯವೃದ್ಧಿ ಮುಂತಾದ ಪರಿಣಾಮವನ್ನು ಹೊಂದದೆ ಅಸಂಗನಾಗಿ ಸರ್ವಾತ್ಮರೂಪವಾಗಿ ವಿವರ್ತಿಸಿರುವನು.

ಇದು ವಿವರ್ತವಾದವನ್ನನುಸರಿಸಿ ಸಂದೇಹ ಪರಿಹಾರಕವಾದ ಸ್ತೋತ್ರವು.

೫೮. ಪುರುಷೋತ್ತಮನಾದ ವಿಷ್ಣುವು ಪರಬ್ರಹ್ಮಸ್ವರೂಪನೂ ನಿತ್ಯನೂ ಉತ್ಪತ್ತಿ ರಹಿತನೂ ಆದುದರಿಂದ ಅವನ ಸ್ಮರಣೆಯಿಂದುಂಟಾದ ನನ್ನಲ್ಲಿ ಉಂಟಾದ ಕ್ರಿಯಾಲೋಪ ಯೋಗಭಂಗಾದಿ ದೋಷಗಳು ಶಾಂತವಾಗಲಿ.

೫೯. ಸೋಮನು ಪ್ರಚೇತಸ್ಸುಗಳೇ ಕೇಳಿರಿ 'ಕಂಡುವು ಈ ಬ್ರಹ್ಮಪರವೆಂಬ ಸ್ತೋತ್ರವನ್ನು ಮಾಡುತ್ತ ವಿಷ್ಣುವನ್ನು ಪೂಜಿಸಿ ಮೋಕ್ಷರೂಪವಾದ ಸಿದ್ಧಿಯನ್ನು ಹೊಂದಿದನು. ಈ ಸ್ತೋತ್ರವನ್ನು ಪ್ರತಿದಿನವೂ ಯಾರು ಹೇಳುವರೋ ಅಥವಾ ಕೇಳುವರೋ ಅವರು ಸಮಸ್ತ ಕಾಮನಾದೋಷಗಳನ್ನೂ ಕಳೆದುಕೊಂಡು ಇಷ್ಟಾರ್ಥಗಳನ್ನು ಪಡೆವರು' ಎಂದು ಹೇಳಿದನು.

ಇಮಂ ಸ್ತವಂ ಯಃ ಪಠತಿ ಶೃಣುಯಾದ್ವಾಪಿ ನಿತ್ಯಶಃ ।
ಸಕಾಮದೋಷೈರಖಿಲೈರ್ವಿಮುಕ್ತಃ ಪ್ರಾಪ್ನೋತಿ ವಾಂಛಿತಂ ॥

(ಇದು ಅಧಿಕ ಪಾಠ)

ಇಯಂ ಚ ಮಾರಿಷಾ ಪೂರ್ವಮಾಸೀದ್ಯಾ ತಾಂ ಬ್ರವೀಮಿ ವಃ ।
ಕಾರ್ಯಗೌರವಮೇತಸ್ಯಾಃ ಕಥನೇ ಫಲದಾಯಿ ವಃ ॥ ೬೦ ॥

ಅಪುತ್ರಾ ಪ್ರಾಗಿಯಂ ವಿಷ್ಣುಂ ಮೃತೇ ಭರ್ತರಿ ಸತ್ತಮಾಃ ।
ಭೂಪಪತ್ನೀ ಮಹಾಭಾಗಾ ತೋಷಯಾಮಾಸ ಭಕ್ತಿತಃ ॥ ೬೧ ॥

ತಯಾ ಚಾರಾಧಿತೋ ವಿಷ್ಣುಃ ಪ್ರಾಹ ಪ್ರತ್ಯಕ್ಷತಾಂ ಗತಃ ।
ವರಂ ವೃಣೀಷ್ವೇತಿ ಶುಭಾಂ ಸಾ ಚಪ್ರಾಹಾತ್ಮವಾಂಛಿತಂ ॥ ೬೨ ॥

ಭಗವನ್ ಬಾಲವೈಧವ್ಯಾದ್ವೃಥಾ ಜನ್ಮಾಹಮೀದೃಶೀ ।
ಮಂದಭಾಗ್ಯಾ ಸಮುದ್ಭೂತಾ ವಿಫಲಾ ಚ ಜಗತ್ಪತೇ ॥ ೬೩ ॥

ಭವಂತು ಪತಯಃ ಶ್ಲಾಘ್ಯಾ ಮಮ ಜನ್ಮನಿ ಜನ್ಮನಿ ।
ತ್ವತ್ಪ್ರಸಾದಾತ್ತಥಾ ಪುತ್ರಃ ಪ್ರಜಾಪತಿ ಸಮೋಽಸ್ತು ಮೇ ॥ ೬೪ ॥

---

೬೦. ಈ ಮಾರಿಷಾ ಎಂಬ ಸ್ತ್ರೀಯು ಹಿಂದಿನ ಜನ್ಮದಲ್ಲಿ ಯಾರಾಗಿದ್ದಳೆಂಬುದನ್ನು ಹೇಳುವೆನು. ಇದನ್ನು ಹೇಳಿದರೆ ಸತ್ಪುತ್ರಲಾಭರೂಪವಾದ ಕಾರ್ಯವು ನಿಮಗೆ ವಂಶ ವಿಸ್ತಾರರೂಪವಾದ ಫಲವನ್ನು ಕೊಡುವುದು.

೬೧-೬೬. ಹಿಂದಿನ ಜನ್ಮದಲ್ಲಿ ರಾಜನ ಪತ್ನಿಯಾದ ಇವಳು ಯೌವನದಲ್ಲಿಯೇ ತನ್ನ ಗಂಡನು ಮರಣ ಹೊಂದಿದ ಮೇಲೆ ಮಕ್ಕಳಿಲ್ಲದಿದ್ದುದರಿಂದ ಭಕ್ತಿಯಿಂದ ವಿಷ್ಣುವನ್ನು ಪೂಜಿಸಿ ಸಂತೋಷಪಡಿಸಿದಳು. ವಿಷ್ಣುವು ಅವಳಿಗೆ ಪ್ರತ್ಯಕ್ಷನಾಗಿ ವರವನ್ನು ಕೇಳು ಎಂದನು. ಅವಳು ವಿಷ್ಣುವನ್ನು ಕುರಿತು, "ಮಹಾಮಹಿಮನೇ ಬಾಲ್ಯದಲ್ಲಿಯೇ ನಾನು ವಿಧವೆಯಾದುದರಿಂದ ಮಕ್ಕಳಿಲ್ಲದೆ ಭಾಗ್ಯಹೀನಳಾದೆನು. ನನ್ನ ಜನ್ಮವು ವ್ಯರ್ಥವಾಯಿತು. ನಿನ್ನ ಅನುಗ್ರಹದಿಂದ ಮುಂದಿನ

ರೂಪಸಂಪತ್ಸಮಾಯುಕ್ತಾ ಸರ್ವಸ್ಯ ಪ್ರಿಯದರ್ಶನಾ ।
ಅಯೋನಿಜಾ ಚ ಜಾಯೇಯಂ ತ್ವತ್ಪ್ರಸಾದಾದಧೋಕ್ಷಜ ॥ ೬೫ ॥

॥ ಸೋವೋವಾಚ ॥

ತಯೈವಮುಕ್ತೋ ದೇವೇಶೋ ಹೃಷೀಕೇಶ ಉವಾಚ ತಾಂ ।
ಪ್ರಣಾಮನಮ್ರಾಮುತ್ಥಾಪ್ಯ ವರದಸ್ಸಮುಪಸ್ಥಿತಃ ॥ ೬೬ ॥

॥ ದೇವೋವಾಚ ॥

ಭವಿಷ್ಯಂತಿ ಮಹಾವೀರ್ಯಾ ಅನ್ಯಸ್ಮಿನ್ನೇವ ಜನ್ಮನಿ ।
ಪ್ರಖ್ಯಾತೋದಾರಕರ್ಮಾಣೋ ಭವತ್ಯಾಃ ಪತಯೋ ದಶ ॥ ೬೭ ॥

ಪುತ್ರಂ ಚ ಸುಮಹಾತ್ಮಾನಮತಿವೀರ್ಯಪರಾಕ್ರಮಂ ।
ಪ್ರಜಾಪತಿಗುಣೈರ್ಯುಕ್ತಂ ತ್ವಮೇವಾಪ್ಸ್ಯಸಿ ಶೋಭನೇ ॥ ೬೮ ॥

ವಂಶಾನಾಂ ತಸ್ಯ ಕರ್ತೃತ್ವಂ ಜಗತ್ಯಸ್ಮಿನ್ ಭವಿಷ್ಯತಿ ।
ತ್ರೈಲೋಕ್ಯಮಖಿಲಾಸೂತಿಸ್ತಸ್ಯ ಚಾಪೂರಯಿಷ್ಯತಿ ॥ ೬೯ ॥

ಪ್ರತಿಯೊಂದು ಜನ್ಮದಲ್ಲಿಯೂ ನನಗೆ ಶ್ಲಾಘ್ಯರಾದ ಪತಿಗಳಾಗಲಿ. ಪ್ರಜಾಪತಿಯಾದ ಬ್ರಹ್ಮನಿಗೆ ಸಮಾನವಾದ ಮಗನಾಗಲಿ. ಎಲ್ಲರೂ ನೋಡಿ ಸಂತೋಷಪಡುವ ರೂಪ ಸಂಪತ್ತಿನಿಂದ ಕೂಡಿದವಳಾಗಿ ನಾನು ಅಯೋನಿಜಳಾಗಿ ಹುಟ್ಟಬೇಕು" ಎಂದು ಹೇಳಿ ನಮಸ್ಕಾರ ಮಾಡಿದಳು ಈ ಮಾತನ್ನು ಕೇಳಿದ ವಿಷ್ಣುವು ವರವನ್ನು ಕೊಡುವುದಕ್ಕಾಗಿ ಬಂದವನಾದುದರಿಂದ ಆಕೆಯನ್ನು ಎಬ್ಬಿಸಿ ಹೇಳಿದನು.

೬೭-೬೯ " ಎಲೈ ಸ್ತ್ರೀಯೇ ! ಮುಂದಿನ ಜನ್ಮದಲ್ಲಿಯೇ ನಿನಗೆ ಮಹಾ ಪರಾಕ್ರಮಿಗಳೂ ಪ್ರಸಿದ್ಧವಾದ ಕೆಲಸಗಳನ್ನು ಮಾಡತಕ್ಕವರೂ ಆದ ಹತ್ತು ಜನ ಪತಿಗಳಾಗುವರು. ನೀನೇ ಮಹಾ ಪರಾಕ್ರಮಿಯೂ ಮಹಾಮಹಿಮನೂ ಬ್ರಹ್ಮನ ಗುಣಗಳಿಂದ ಕೂಡಿದವನೂ ಆದ ಪುತ್ರನನ್ನು ಪಡೆಯುವೆ ನಿನ್ನ ಮಗನು ಈ ಜಗತ್ತಿನಲ್ಲಿ ವಂಶಕರ್ತೃವಾಗಿ ಮೂರು ಲೋಕವೂ ಅವನ ಮಕ್ಕಳಿಂದಲೇ ತುಂಬಿ

ತ್ವಂ ಚಾಪ್ಯಯೋನಿಜಾ ಸಾಧ್ವೀ ರೂಪೌದಾರ್ಯಗುಣಾನ್ವಿತಾ ।
ಮನಃಪ್ರೀತಿಕರೀ ನೃಣಾಂ ಮತ್ಪ್ರಸಾದಾದ್ಭವಿಷ್ಯಸಿ ॥ ೭೦ ॥

ಇತ್ಯುಕ್ತ್ವಾಂತರ್ದಧೇ ದೇವಸ್ತಾಂ ವಿಲೋಲವಿಲೋಚನಾಂ ।
ಸಾ ಚೇಯಂ ಮಾರಿಷಾ ಜಾತಾ ಯುಷ್ಮತ್ಪತ್ನೀ ನೃಪಾತ್ಮಜಾಃ ॥ ೭೧ ॥

॥ ಶ್ರೀ ಪರಾಶರ ಉವಾಚ ॥

ತತಸ್ಸೋಮಸ್ಯ ವಚನಾಜ್ಜಗೃಹುಸ್ತೇ ಪ್ರಚೇತಸಃ ।
ಸಂಹೃತ್ಯ ಕೋಪಂ ವೃಕ್ಷೇಭ್ಯಃ ಪತ್ನೀಂ ಧರ್ಮೇಣ ಮಾರಿಷಾಂ ॥ ೭೨ ॥

ದಶಭ್ಯಸ್ತು ಪ್ರಚೇತೇಭ್ಯೋ ಮಾರಿಷಾಯಾಂ ಪ್ರಜಾಪತಿಃ ।
ದಕ್ಷೋ ಜಜ್ಞೇ ಮಹಾಭಾಗೋಯಃಪೂರ್ವಕೆ
ಬ್ರಹ್ಮಣೋಭವತ್ ॥ ೭೩ ॥

ಹೋಗುವುದು. ನೀನೂ ನನ್ನ ಅನುಗ್ರಹದಿಂದ ಅಯೋನಿಜಳಾಗಿಯೂ ರೂಪ ಸಂಪತ್ತಿನಿಂದ ನೋಡಿದ ಸಮಸ್ತ ಜನರಿಗೂ ಸಂತೋಷವನ್ನು ಉಂಟುಮಾಡುವವಳಾಗಿಯೂ ಆಗುವೆ" ಹೀಗೆಂದು ಹೇಳಿ ವಿಷ್ಣುವು ಮರೆಯಾದನು. ಅವಳೇ ಮಾರಿಷಾ ಎಂಬ ಹೆಸರಿನಿಂದ ಹುಟ್ಟಿರುವಳು. ನಿಮ್ಮ ಪತ್ನಿಯಾಗಿರುವಳು. ಎಂದು ಸೋಮನು ಹೇಳಿದನು.

೭೨-೭೩. ಸೋಮನ ಮಾತನ್ನು ಕೇಳಿ ಪ್ರಚೇತಸ್ಸುಗಳು ಮರಗಳ ಮೇಲಿನ ಕೋಪವನ್ನು ಬಿಟ್ಟು ವಿವಾಹವಿಧಿಯಿಂದ ಮಾರಿಷಾ ಎಂಬುವಳನ್ನು ಪರಿಗ್ರಹಿಸಿದರು. ಹತ್ತು ಜನ ಪ್ರಚೇತಸ್ಸುಗಳಿಂದ ಮಾರಿಷಾ ಎಂಬವಳಲ್ಲಿ ಹಿಂದೆ ಬ್ರಹ್ಮ ಮಾನಸ ಪುತ್ರನಾಗಿದ್ದ ಮಹಾತ್ಮನಾದ ದಕ್ಷನು ಪ್ರಜಾಪತಿಯಾಗಿ ಹುಟ್ಟಿದನು.

ಸತು ದಕ್ಷೋ ಮಹಾಭಾಗಸ್ಸೃಷ್ಟ್ಯರ್ಥಂ ಸುಮಹಾಮತೇ ।
ಪುತ್ರಾನುತ್ಪಾದಯಾಮಾಸ ಪ್ರಜಾ ಸೃಷ್ಟ್ಯರ್ಥಮಾತ್ಮನಃ ॥ ೨೪ ॥

ಅವರಾಂಶ್ಚ ವರಾಂಶ್ಚೈವ ದ್ವಿಪದೋಽಥ ಚತುಷ್ಪದಃ ।
ಆದೇಶಂ ಬ್ರಹ್ಮಣಃ ಕುರ್ವನ್ಸೃಷ್ಟ್ಯರ್ಥೇ ಸಮುಪಸ್ಥಿತಃ ॥ ೨೫ ॥

ಸ ಸೃಷ್ಟ್ವಾ ಮನಸಾ ದಕ್ಷಃ ಪಂಚಾಶದಸೃಜತ್ ಸ್ತ್ರಿಯಃ ॥ ೨೬ ॥

ದದೌ ಸ ದಶ ಧರ್ಮಾಯ ಕಾಶ್ಯಪಾಯ ತ್ರಯೋದಶ ।
ಕಾಲಸ್ಯ ನಯನೇ ಯುಕ್ತಾಸ್ಸಪ್ತವಿಂಶತಿಮಿಂದವೇ ॥ ೨೭

ತಾಸು ದೇವಾಸ್ತಥಾ ದೈತ್ಯಾ ನಾಗಾ ಗಾವಸ್ತಥಾ ಖಗಾಃ ।
ಗಂಧರ್ವಾಪ್ಸರಸಶ್ಚೈವ ದಾನವಾದ್ಯಾಶ್ಚ ಜಜ್ಞಿರೇ ॥ ೨೮ ॥

ತತಃ ಪ್ರಭೃತಿ ಮೈತ್ರೇಯ ಪ್ರಜಾ ಮೈಥುನಸಂಭವಾಃ ।
ಸಂಕಲ್ಪಾದ್ದರ್ಶನಾತ್ಸ್ಪರ್ಶಾತ್ಪೂರ್ವಮಭವನ್ ಪ್ರಜಾಃ ॥
ತಪೋವಿಶೇಷೈಸ್ಸಿದ್ಧಾನಾಂ ತದಾತ್ಯಂತ ತಪಸ್ವಿನಾಂ ॥ ೨೯ ॥

೨೪–೨೬. ಮಹಾಮಹಿಮನಾದ ದಕ್ಷನು ಬ್ರಹ್ಮನ ಅಪ್ಪಣೆಯನ್ನು ನಡೆಸುವುದಕ್ಕಾಗಿ ಸೃಷ್ಟಿಕಾರ್ಯವನ್ನು ಪ್ರಾರಂಭಿಸಿ ಸಂಕಲ್ಪದಿಂದಲೇ ಪ್ರಜಾಸೃಷ್ಟಿಗಾಗಿ ಕೆಲವು ಮಕ್ಕಳನ್ನು ಹುಟ್ಟಿಸಿದನು ಹಾಗೆಯೇ ನೀಚವಾದ ಮತ್ತು ಶ್ರೇಷ್ಠವಾದ ದ್ವಿಪಾದ ಮತ್ತು ಚತುಷ್ಪಾದ ಪ್ರಾಣಿಗಳನ್ನೂ ಸೃಷ್ಟಿಸಿದನು. ಆ ಮೇಲೆ ತನ್ನ ಮನಸ್ಸಿನ ಸಂಕಲ್ಪದಿಂದಲೇ ಐವತ್ತು ಜನ ಸ್ತ್ರೀಯರನ್ನು ಸೃಷ್ಟಿಸಿದನು.

೨೭–೨೯ ದಕ್ಷನು ತಾನು ಸೃಷ್ಟಿಸಿದ ಸ್ತ್ರೀಯರಲ್ಲಿ ಹತ್ತು ಜನರನ್ನು ಧರ್ಮನಿಗೂ, ಹದಿಮೂರು ಜನರನ್ನು ಕಶ್ಯಪನಿಗೂ ಇಪ್ಪತ್ತೇಳು ಜನರನ್ನು ಚಂದ್ರನಿಗೂ, ಕೊಟ್ಟನು. ಆ ಸ್ತ್ರೀಯರಲ್ಲಿಯೇ ದೇವತೆಗಳೂ, ದೈತ್ಯರೂ, ನಾಗರೂ, ಗೋವುಗಳೂ ಪಕ್ಷಿಗಳೂ, ಗಂಧರ್ವರೂ, ಅಪ್ಸರಸರೂ, ದಾನವರೂ, ಹುಟ್ಟಿದರು. ಅಲ್ಲಿಂದ ಮುಂದೆ ಪ್ರಜೆಗಳು ಸ್ತ್ರೀ ಪುರುಷರ ಮೈಥುನದಿಂದ ಉತ್ಪನ್ನರಾಗುತ್ತಿದ್ದರು ದಕ್ಷನಿಂದ ಹಿಂದಿನವರಿಗೆ ತಪೋವಿಶೇಷದಿಂದ ಸಿದ್ಧಿಯನ್ನು ಪಡೆದವರಿಗೆ ಸಂಕಲ್ಪದಿಂದಲೂ, ನೋಟದಿಂದಲೂ ಸ್ಪರ್ಶದಿಂದಲೂ, ಪುತ್ರೋತ್ಪತ್ತಿಯಾಗುತ್ತಿದ್ದಿತು.

॥ ಮೈತ್ರೇಯ ಉವಾಚ ॥

ಅಂಗುಷ್ಠಾದ್ದಕ್ಷಿಣಾದ್ದಕ್ಷಃ ಪೂರ್ವಂ ಜಾತಶ್ಶ್ರುತೋ ಮಯಾ ।
ಕಥಂ ಪ್ರಾಚೇತಸೋ ಭೂಯಸ್ಸಂಭೂತೋ ಮಹಾಮುನೇ ॥ ೮೦ ॥

ಏಷ ಮೇ ಸಂಶಯೋ ಬ್ರಹ್ಮನ್ಸುಮಹಾನ್ ಹೃದಿ ವರ್ತತೇ ।
ಯದ್ದೌಹಿತ್ರಶ್ಚ (ಶ್ಯ) ಸೋಮಸ್ಯ ಪುನಶ್ಶ್ವಶುರತಾಂ ಗತಃ ॥ ೮೧ ॥

॥ ಶ್ರೀ ಪರಾಶರ ಉವಾಚ ॥

ಉತ್ಪತ್ತಿಶ್ಚ ನಿರೋಧಶ್ಚ ನಿತ್ಯೋ ಭೂತೇಷು ಸತ್ತಮ ।
ಋಷಯೋ ऽತ್ರ ನ ಮುಹ್ಯಂತಿ ಯೇ ಚಾನ್ಯೇ ದಿವ್ಯಚಕ್ಷುಷಃ ॥ ೮೨ ॥

ಯುಗೇಯುಗೇ ಭವಂತ್ಯೇತೇ ದಕ್ಷಾದ್ಯಾ ಮುನಿಸತ್ತಮ ।
ಪುನಶ್ಚೈವಂ ನಿರುದ್ಧ್ಯಂತೇ ವಿದ್ವಾಂಸ್ತತ್ರ ನ ಮುಹ್ಯತಿ ॥ ೮೩ ॥

ಕಾನಿಷ್ಠ್ಯಂ ಜ್ಯೈಷ್ಠ್ಯಮಪ್ಯೇಷಾಂ ಪೂರ್ವಂ ನಾಭೂದ್ದ್ವಿಜೋತ್ತಮ ।
ತಪ ಏವ ಗರೀಯೋ ऽಭೂತ್ಪ್ರಭಾವಶ್ಚೈವ ಕಾರಣಂ ॥ ೮೪ ॥

೮೦–೮೧. ಮೈತ್ರೇಯನು 'ಬ್ರಹ್ಮಜ್ಞಾನಿಗಳಾದ ಪರಾಶರರೇ ಹಿಂದೆ ದಕ್ಷನು ಬ್ರಹ್ಮನ ಬಲದ ಹೆಬ್ಬೆರಳಿನಿಂದ ಹುಟ್ಟಿದನೆಂದು ಕೇಳಿದ್ದೆನು. ಪುನಃ ಅವನು ಪ್ರಚೇತಸ್ಸುಗಳಿಂದ ಹೇಗೆ ಹುಟ್ಟಿದನು? ಚಂದ್ರನ (ಅಥವಾ ಚಂದ್ರನು ದಕ್ಷನ ಮೊಮ್ಮಗನು. ಅತ್ರಿ ಪತ್ನಿಯಾದ ಅನುಸೂಯಾ ಪುತ್ರ) ಮಗಳಾದ ಮಾರಿಷಾ ಎಂಬುವಳ ಮಗನಾದ ದಕ್ಷನು ಚಂದ್ರನಿಗೆ ಹೇಗೆ ಮಾವನಾದನು? ಈ ನನ್ನ ದೊಡ್ಡ ಸಂದೇಹವನ್ನು ಪರಿಹರಿಸಬೇಕು! ಎಂದು ಕೇಳಿದನು.

೮೨–೮೪. ಪರಾಶರರು ಹೇಳುವರು:— ಮೈತ್ರೇಯನೇ ಪ್ರಾಣಿಗಳ ಉತ್ಪತ್ತಿ ನಾಶಗಳು ಪ್ರವಾಹ ರೂಪವಾಗಿ ಅವಿಚ್ಛಿನ್ನವಾಗಿ ನಡೆಯುತ್ತಿರುವುವು. ದಿವ್ಯಜ್ಞಾನಿಗಳಾದ ಋಷಿಗಳು ಈ ವಿಷಯದಲ್ಲಿ ಭ್ರಾಂತರಾಗುವುದಿಲ್ಲ. ದಕ್ಷಾದಿಗಳು ಪ್ರತಿಯೊಂದು ಯುಗದಲ್ಲಿಯೂ ಹುಟ್ಟುವರು. ಮತ್ತು ನಾಶವಾಗುವರು. ತಿಳಿದವನು ಈ ವಿಷಯದಲ್ಲಿ ಸಂದೇಹಪಡುವುದಿಲ್ಲ. ಇವರಲ್ಲಿ ಕಿರಿಯನು ಹಿರಿಯನು ಎಂಬ ಭೇದವು ಹಿಂದೆ ಇರಲಿಲ್ಲ. ತಪಸ್ಸಿನ ಮಹಿಮೆಯೇ ದೊಡ್ಡದಾಗಿದ್ದಿತು.

॥ ಮೈತ್ರೇಯ ಉವಾಚ ॥

ದೇವಾನಾಂ ದಾನವಾನಾಂ ಚ ಗಂಧರ್ವೋರಗರಕ್ಷಸಾಂ ।
ಉತ್ಪತ್ತಿಂ ವಿಸ್ತರೇಣೇಹ ಮಮ ಬ್ರಹ್ಮನ್ಪ್ರಕೀರ್ತಯ ॥ ೮೫ ॥

॥ ಪರಾಶರ ಉವಾಚ ॥

ಪ್ರಜಾಃ ಸೃಜೇತಿ ವ್ಯಾದಿಷ್ಟಃ ಪೂರ್ವಂ ದಕ್ಷಃ ಸ್ವಯಂಭುವಾ ।
ಯಥಾ ಸಸರ್ಜ ಭೂತಾನಿ ತಥಾ ಶೃಣು ಮಹಾಮುನೇ ॥ ೮೬ ॥

ಮಾನಸಾನ್ಯೇವ ಭೂತಾನಿ ಪೂರ್ವಂ ದಕ್ಷೋಽಸೃಜತ್ತದಾ ।
ದೇವಾನೃಷೀನ್ಸಗಂಧರ್ವಾನಸುರಾನ್ಪನ್ನಗಾಂಸ್ತಥಾ ॥ ೮೭ ॥

ಯದಾಽಸ್ಯ ಸೃಜ್ಯಮಾನಸ್ಯ ನ ವ್ಯವರ್ಧಂತ ತಾಃ ಪ್ರಜಾಃ ।
ತತಃ ಸಂಚಿಂತ್ಯ ಸ ಪುನಃ ಸೃಷ್ಟಿಹೇತೋಃ ಪ್ರಜಾಪತಿಃ ॥ ೮೮ ॥

ಮೈಥುನೇನೈವ ಧರ್ಮೇಣ ಸಿಸೃಕ್ಷುರ್ವಿವಿಧಾಃ ಪ್ರಜಾಃ ।
ಸುತಾಂ ಸುತಪಸಾ ಯುಕ್ತಾಂ ಮಹತೀಂ ಲೋಕಧಾರಿಣೀಂ ॥ ೮೯ ॥

---

೮೫. ಮೈತ್ರೇಯನು 'ಪರಾಶರರೇ ಈ ಪ್ರಾಚೇತಸ ದಕ್ಷನಿಂದ ಹುಟ್ಟಿದ ದೇವದಾನವರು, ಗಂಧರ್ವರು, ಉರಗರು, ರಾಕ್ಷಸರು ಮುಂತಾದವರ ಉತ್ಪತ್ತಿ ಕ್ರಮವನ್ನು ವಿಸ್ತಾರವಾಗಿ ನನಗೆ ಹೇಳಬೇಕು' ಎಂದನು.

೮೬-೮೯. ಹಿಂದೆ ದಕ್ಷನು ಬ್ರಹ್ಮನ ಅಪ್ಪಣೆಯಿಂದ ಪ್ರಜೆಗಳನ್ನು ಸೃಷ್ಟಿಸಿದ ಕ್ರಮವನ್ನು ಹೇಳುವೆನು. ಮೈತ್ರೇಯನೇ ಕೇಳು:—ಮೊದಲು ದಕ್ಷನು ಮನಸ್ಸಿನಿಂದಲೇ ದೇವತೆಗಳು, ಋಷಿಗಳು, ಗಂಧರ್ವರು, ಅಸುರರು, ಪನ್ನಗರು ಮುಂತಾದ ಪ್ರಾಣಿಗಳನ್ನು ಸೃಷ್ಟಿಸಿದನು. ಅವನು ಸೃಷ್ಟಿಮಾಡಿದ ಪ್ರಜೆಗಳು ವೃದ್ಧಿಹೊಂದಲಿಲ್ಲ ಆಮೇಲೆ ದಕ್ಷಪ್ರಜಾಪತಿಯು ಆಲೋಚನೆಯನ್ನು ಮಾಡಿ ಬಗೆಬಗೆಯ ಪ್ರಜೆಗಳು ವೃದ್ಧಿಹೊಂದಬೇಕಾದರೆ ಮೈಥುನ ಧರ್ಮದಿಂದಲೇ ಸೃಷ್ಟಿಮಾಡಬೇಕೆಂದು ನಿಶ್ಚಯಿಸಿ ವೀರಣ ಪ್ರಜಾಪತಿಯ ಮಗಳೂ, ಒಳ್ಳೆಯ ತಪಸ್ಸನ್ನು ಮಾಡಿದವಳೂ, ಮಹಾ ಮಹಿಮಳೂ, ಲೋಕವನ್ನು ಉದ್ಧರಿಸುವ ಶಕ್ತಳೂ ಆದ ಅಸಿಕ್ನಿಯನ್ನು ವಿವಾಹ ಮಾಡಿಕೊಂಡನು.

ಅಥ ಪುತ್ರಸಹಸ್ರಾಣಿ ವೈರಿಣ್ಯಾಂ ಪಂಚ ವೀರ್ಯವಾನ್ ।
ಅಸಿಕ್ನ್ಯಾಂ ಜನಯಾಮಾಸ ಸರ್ಗಹೇತೋಃ ಪ್ರಜಾಪತಿಃ ॥ ೯೦ ॥

ತಾನ್ದೃಷ್ಟ್ವಾ ನಾರದೋ ವಿಪ್ರ ಸಂವಿವರ್ಧಯಿಷೂನ್ಪ್ರಜಾಃ ।
ಸಂಗಮ್ಯ ಪ್ರಿಯಸಂವಾದೋ ದೇವರ್ಷಿರಿದಮಬ್ರವೀತ್ ॥ ॥ ೯೧ ॥

ಹೇ ಹರ್ಯಶ್ವಾ ಮಹಾವೀರ್ಯಾಃ ಪ್ರಜಾ ಯೂಯಂ ಕರಿಷ್ಯಥ ।
ಈದೃಶೋ ದೃಶ್ಯತೇ ಯತ್ನೋ ಭವತಾಂ ಶ್ರೂಯತಾಮಿದಂ ॥ ೯೨ ॥

ಬಾಲಿಶಾ ಬತ ಯೂಯಂ ವೈ ನಾಸ್ಯಾ ಜಾನೀತ ವೈ ಭುವಃ ।
ಅಂತರೂರ್ಧ್ವಮಧಶ್ಚೈವ ಕಥಂ ಸ್ರಕ್ಷ್ಯಥ ವೈ ಪ್ರಜಾಃ ॥ ೯೩ ॥

ಊರ್ಧ್ವಂ ತಿರ್ಯಗಧಶ್ಚೈವ ಯದಾಽಪ್ರತಿಹತಾ ಗತಿಃ ।
ತಥಾ ಕಸ್ಮಾದ್ಭುವೋ ನಾಂತಂ ಸರ್ವೇ ದ್ರಕ್ಷ್ಯಥ ಬಾಲಿಶಾಃ ॥ ೯೪ ॥

ತೇ ತು ತದ್ವಚನಂ ಶ್ರುತ್ವಾ ಪ್ರಯಾತಾ ಸರ್ವತೋ ದಿಶಂ ।
ಅದ್ಯಾಪಿ ನ ನಿವರ್ತಂತೇ ಸಮುದ್ರೇಭ್ಯ ಇವಾಪಗಾಃ ॥ ೯೫ ॥

೯೦-೯೪. ಅನಂತರ ವೀರ್ಯವಂತನಾದ ದಕ್ಷಪ್ರಜಾಪತಿಯು ಸೃಷ್ಟಿಕಾರ್ಯಕ್ಕಾಗಿ ಅಸಿಕ್ನಿಯಲ್ಲಿ ಹರ್ಯಶ್ವರೆಂಬ ಐದು ಸಾವಿರ ಪುತ್ರರನ್ನು ಹುಟ್ಟಿಸಿದನು. ಪ್ರಜಾವೃದ್ಧಿಯನ್ನು ಮಾಡಬೇಕೆಂದಿದ್ದ ಅವರನ್ನು ನೋಡಿ ನಾರದನು ಅವರ ಸಮೀಪಕ್ಕೆ ಬಂದು ಹಿತವಾದ ಮಾತನಾಡುತ್ತ 'ಮಹಾ ವೀರ್ಯವಂತರಾದ ಹರ್ಯಶ್ವರೇ ನೀವು ಪ್ರಜಾವೃದ್ಧಿಯನ್ನು ಮಾಡುವ ಪ್ರಯತ್ನದಲ್ಲಿರುವಂತೆ ಕಾಣುತ್ತದೆ. ನಾನು ಹೇಳುವ ಮಾತನ್ನು ಕೇಳಿರಿ. ನೀವು ಭೂಮಿಯ ಆದಿ ಮಧ್ಯಾಂತಗಳನ್ನು ತಿಳಿದಿಲ್ಲ. ಇದರ ತಿಳುವಳಿಕೆಯಿಲ್ಲದ ಅಜ್ಞರಾದ ನೀವು ಪ್ರಜೆಗಳನ್ನು ಹೇಗೆ ಸೃಷ್ಟಿಸುವಿರಿ? ನಿಮ್ಮ ಬುದ್ಧಿಯು ಸರ್ವತ್ರ ಅಪ್ರತಿ-ಹತವಾದುದಾಗಿರುವಲ್ಲಿ ಈ ಭೂಮಿಯು ಎಂದರೆ ನೀವು ಸೃಷ್ಟಿಸುವ ಪ್ರಜೆಗಳು ಶಾಶ್ವತವಲ್ಲವೆಂಬುದನ್ನು ಏಕೆ ತಿಳಿಯಲಿಲ್ಲ ಎಂದನು. ತತ್ವಜ್ಞಾನಾಧಿಕಾರಿಗಳಾದ ನೀವು ಮೋಕ್ಷ ಮಾರ್ಗವನ್ನು ತಿಳಿಯದೆ ವ್ಯರ್ಥವಾದ ಅಪಾರ ಸಂಸಾರದಿಂದ ಕೂಡಿದ ಪ್ರಜಾಸೃಷ್ಟಿಯನ್ನೇಕೆ ಮಾಡುವಿರಿ, ಎಂದು ಭಾವವು.

ಹರ್ಯಶ್ವೇಷ್ವಥ ನಷ್ಟೇಷು ದಕ್ಷಃ ಪ್ರಾಚೇತಸಃ ಪುನಃ ।
ವೈರಿಣ್ಯಾಮಥ ಪುತ್ರಾಣಾಂ ಸಹಸ್ರಮಸೃಜತ್ಪ್ರಭುಃ ॥ ೯೬ ॥

ವಿವರ್ಧಯಿಷವಸ್ತೇ ತು ಶಬಲಾಶ್ವಾಃ ಪ್ರಜಾಃ ಪುನಃ ।
ಪೂರ್ವೋಕ್ತಂ ವಚನಂ ಬ್ರಹ್ಮನ್ನಾರದೇನೈವ ಚೋದಿತಾಃ ॥ ೯೭ ॥

ಅನ್ಯೋನ್ಯಮೂಚುಸ್ತೇ ಸರ್ವೇ ಸತ್ಯಮಾಹ ಮಹಾಮುನಿಃ ।
ಭ್ರಾತೄಣಾಂ ಪದವೀ ಚೈವ ಗಂತವ್ಯಾ ನಾತ್ರ ಸಂಶಯಃ ॥ ೯೮ ॥

ಜ್ಞಾತ್ವಾ ಪ್ರಮಾಣಂ ಪೃಥ್ವ್ಯಾಶ್ಚ ಪ್ರಜಾಸ್ಸ್ರಕ್ಷ್ಯಾಮಹೇ ತತಃ ।

ತೇಽಪಿ ತೇನೈವ ಮಾರ್ಗೇಣ ಪ್ರಯಾತಾಃ ಸರ್ವತೋದಿಶಂ ।
ಅದ್ಯಾಪಿ ನ ನಿವರ್ತಂತೇ ಸಮುದ್ರೇಭ್ಯ ಇವಾಪಗಾಃ ॥ ೯೯ ॥

ತತಃ ಪ್ರಭೃತಿ ವೈ ಭ್ರಾತಾ ಭ್ರಾತುರನ್ವೇಷಣೇ ದ್ವಿಜ ।
ಪ್ರಯಾತೋ ನಶ್ಯತಿ ತಥಾ ತನ್ನ ಕಾರ್ಯಂ ವಿಜಾನತಾ ॥ ೧೦೦ ॥

೯೬-೯೭. ಆ ಹರ್ಯಶ್ವರು ನಾರದನ ಮಾತನ್ನು ಕೇಳಿ ತತ್ತ್ವಜ್ಞರಾದುದರಿಂದ ದಿಕ್ಕು ದಿಕ್ಕಿಗೆ ಹೊರಟುಹೋದರು. ಸಮುದ್ರವನ್ನು ಸೇರಿದ ನದಿಗಳಂತೆ ಅವರು ಹಿಂದಿರುಗಲಿಲ್ಲ. ಹರ್ಯಶ್ವರು ಹೊರಟುಹೋದಮೇಲೆ ಪ್ರಾಚೇತಸರ ದಕ್ಷನು ಅಸಿಕ್ನಿಯಲ್ಲಿ ಶಬಲಾಶ್ವರೆಂಬ ಸಾವಿರ ಮಕ್ಕಳನ್ನು ಹುಟ್ಟಿಸಿದನು. ಅವರೂ ಪ್ರಜಾವೃದ್ಧಿಯನ್ನು ಮಾಡಬೇಕೆಂದಿರಲು ನಾರದನು ಬಂದು ಹಿಂದಿನಂತೆಯೇ ಮಾತನಾಡಿ ಅವರನ್ನು ಮೋಕ್ಷಮಾರ್ಗಕ್ಕೆ ತಿರುಗಿಸಿದನು.

೯೮-೧೦೦. ಶಬಲಾಶ್ವರು ತಮ್ಮತಮ್ಮಲ್ಲಿಯೇ ಮಹಾಮುನಿಯಾದ ನಾರದನು ನಿಜವನ್ನೇ ಹೇಳಿದನು. ನಮ್ಮ ಅಣ್ಣಂದಿರ ಮಾರ್ಗವನ್ನೇ ನಾವೂ ಅನುಸರಿಸಬೇಕು. ಭೂಮಿಯ ಲಿಂಗಶರೀರದ ಕೊನೆಯನ್ನು ತಿಳಿದು ಆಮೇಲೆ ತಂದೆಯ ಆಜ್ಞೆಯಂತೆ ಪ್ರಜಾಸೃಷ್ಟಿಯನ್ನು ಮಾಡೋಣ. ಎಂದು ಅವರೂ ಅಣ್ಣಂದಿರಂತೆ ಹೊರಟುಹೋದರು. ಸಮುದ್ರವನ್ನು ಸೇರಿದ ನದಿಗಳು ಹಿಂದಿರುಗಿ ಬರದಂತೆ ಇದುವರೆಗೂ ಅವರು ಬರಲಿಲ್ಲ. ಮೈತ್ರೇಯನೇ ಅಂದಿನಿಂದ ಅಣ್ಣನನ್ನು ಹುಡುಕುವುದಕ್ಕೆ ಹೋದ ತಮ್ಮನು ಬರುವುದೇಯಿಲ್ಲ. ಆದುದರಿಂದ ತಿಳಿದವರು ಹೀಗೆ ಮಾಡಬಾರದು. ಎಂಬ ಲೋಕ ರೂಢಿಯು ಬಂದಿರುವುದು.

ತಾಂಶ್ಚಾಪಿ ನಷ್ಟಾನ್ವಿಜ್ಞಾಯ ಪುತ್ರಾನ್ದಕ್ಷಃ ಪ್ರಜಾಪತಿಃ ।
ಕ್ರೋಧಂ ಚಕ್ರೇ ಮಹಾಭಾಗೋ ನಾರದಂ ತಂ ಶಶಾಪ ಚ ॥ ೧೦೧ ॥

ಸರ್ಗಕಾಮಸ್ತತೋ ವಿದ್ವಾನ್ಸ ಮೈತ್ರೇಯ ಪ್ರಜಾಪತಿಃ ।
ಷಷ್ಟಿಂ ದಕ್ಷೋಽಸೃಜತ್ಕನ್ಯಾ ವೈರಿಣ್ಯಾಮಿತಿ ನಃ ಶ್ರುತಂ ॥ ೧೦೨ ॥

ದದೌ ಸ ದಶ ಧರ್ಮಾಯ ಕಶ್ಯಪಾಯ ತ್ರಯೋದಶ ।
ಸಪ್ತವಿಂಶತಿ ಸೋಮಾಯ ಚತಸ್ರೋಽರಿಷ್ಟನೇಮಿನೇ ॥ ೧೦೩ ॥

ದ್ವೇ ಚೈವ ಬಹುಪುತ್ರಾಯ ದ್ವೇ ಚೈವಾಂಗಿರಸೇ ತಥಾ ।
ದ್ವೇ ಭೃಶಾಶ್ವಾಯ ವಿದುಷೇ ತಾಸಾಂ ನಾಮಾನಿ ಮೇ ಶೃಣು ॥ ೧೦೪ ॥

ಅರುಂಧತೀ ವಸುರ್ಜಾಮಿರ್ಲಂಘಾ ಭಾನುರ್ಮರುದ್ವತೀ ।
ಸಂಕಲ್ಪಾ ಚ ಮುಹೂರ್ತಾ ಚ ಸಾಧ್ಯಾ ವಿಶ್ವಾ ಚ ತಾದೃಶೀ ॥ ೧೦೫ ॥

ಧರ್ಮಪತ್ನ್ಯೋ ದಶ ತ್ವೇತಾಸ್ತಾಸ್ವಪತ್ಯಾನಿ ಮೇ ಶೃಣು ॥
ವಿಶ್ವೇದೇವಾಸ್ತು ವಿಶ್ವಾಯಾಃ ಸಾಧ್ಯಾ ಸಾಧ್ಯಾನ್ವ್ಯಜಾಯತ । ॥ ೧೦೬ ॥

---

೧೦೧. ದಕ್ಷಪ್ರಜಾಪತಿಯು ಶಬಲಾಶ್ವರೂ ನಷ್ಟರಾದರೆಂದು ತಿಳಿದು ಕೋಪವನ್ನು ಹೊಂದಿ ನಾರದನಿಗೆ ನಿಂದಿತೆ ನಿಲ್ಲದೆ ಲೋಕದಲ್ಲಿ ತಿರುಗುತ್ತಿರು ಎಂದು ಶಾಪವನ್ನು ಕೊಟ್ಟನು.

೧೦೨–೧೦೪. ಬಳಿಕ ಸೃಷ್ಟಿಮಾಡಬೇಕೆಂಬ ಅಪೇಕ್ಷೆಯುಳ್ಳ ದಕ್ಷನು ವೀರಣ ಪ್ರಜಾಪತಿಯ ಮಗಳೂ ತನ್ನ ಪತ್ನಿಯೂ ಆದ ಅಸಿಕ್ನಿಯಲ್ಲಿ ಅರವತ್ತು ಕನ್ಯೆಯರನ್ನು ಪಡೆದನು. ಅವನು ತನ್ನ ಹೆಣ್ಣು ಮಕ್ಕಳಲ್ಲಿ ಹತ್ತು ಜನರನ್ನು ಧರ್ಮನಿಗೂ ಹದಿಮೂರು ಜನರನ್ನು ಕಾಶ್ಯಪನಿಗೂ, ಇಪ್ಪತ್ತೇಳು ಜನರನ್ನು ಚಂದ್ರನಿಗೂ, ನಾಲ್ವರನ್ನು ಅರಿಷ್ಟನೇಮಿಗೂ, ಇಬ್ಬರನ್ನು ಬಹುಪುತ್ರನಿಗೂ, ಇಬ್ಬರನ್ನು ಬೃಶಾಶ್ವನೆಂಬ ವಿದ್ವಾಂಸನಿಗೂ, ಕೊಟ್ಟನು. ಅವರ ಹೆಸರುಗಳನ್ನು ಹೇಳುವೆನು ಕೇಳು.

೧೦೫–೧೦೬. ಅರುಂಧತೀ, ವಸು, ಜಾಮೀ, ಲಂಘಾ, ಭಾನು, ಮರುದ್ವತೀ ಸಂಕಲ್ಪಾ, ಮುಹೂರ್ತಾ, ಸಾಧ್ಯಾ, ವಿಶ್ವಾ ಇವರು ಹತ್ತು ಜನರು ಧರ್ಮನ

ಮರುತ್ವತ್ಯಾಂ ಮರುದ್ವಂತೋ ವಸೋಃಸ್ತು ವಸವಃ ಸ್ಮೃತಾಃ।
ಮುಹೂರ್ತಾಸ್ತು ಮುಹೂರ್ತಾಯಾಂ ಜಾತಾ ಭಾನೋಃಸ್ತು ಭಾನವಃ॥೧೦೭॥

ಲಂಘಾಯಾಸ್ತು ಸುತೋ ಘೋಷೋ ನಾಗವೀಥಿ ಸ್ತು ಜಾಮಿಜಃ

ಪೃಥಿವೀವಿಷಯಂ ಸರ್ವಮರುಂಧತ್ಯಾಮಜಾಯತ।
ಸಂಕಲ್ಪಾಯಾಂತು ಸರ್ವಾತ್ಮಾ ಜಜ್ಞೇ ಸಂಕಲ್ಪ ಏವ ಚ ॥ ೧೦೮ ॥

ಯೇ ತ್ವನೇಕವಸುಪ್ರಾಣಾಃ ದೇವಾ ಜ್ಯೋತಿಃಪುರೋಗಮಾಃ।
ವಸವೋಽಷ್ಟೌ ಸಮಾಖ್ಯಾತಾಸ್ತೇಷಾಂ ವಕ್ಷ್ಯಾಮಿ ವಿಸ್ತರಂ ॥೧೦೯ ॥

ಆಪೋ ಧ್ರುವಶ್ಚ ಸೋಮಶ್ಚ ಧರ್ಮಶ್ಚೈವಾನಿಲೋಽನಲಃ।
ಪ್ರತ್ಯೂಷಶ್ಚ ಪ್ರಭಾಸಶ್ಚ ವಸವೋ ನಾಮಭಿಃ ಸ್ಮೃತಾಃ ॥ ೧೧೦ ॥

ಆಪಸ್ಯ ಪುತ್ರೋ ವೈತಸ್ತಬ್ಧಃ ಶ್ರಮಃ ಶ್ರಾಂತೋಧ್ವನಿಸ್ತಥಾ।
ಧ್ರುವಸ್ಯ ಪುತ್ರೋ ಭಗವಾನ್ಕಾಲೋ ಲೋಕಪ್ರಕಾಲನಃ ॥ ೧೧೧ ॥

ಪತ್ನಿಯರು. ಇವರ ಮಕ್ಕಳನ್ನು ಹೇಳುವೆನು ಕೇಳು. ವಿಶ್ವಾ ಎಂಬುವಳಿಗೆ ವಿಶ್ವೇದೇವತೆಗಳೂ, ಸಾಧ್ಯಾ ಎಂಬುವಳಿಗೆ ಸಾಧ್ಯರೂ, ಮರುದ್ವತಿಯಲ್ಲಿ ಮರುದ್ವಂತನೂ, ವಸುವಿನಲ್ಲಿ ವಸುಗಳೂ, ಮುಹೂರ್ತಾ ಎಂಬವಳಲ್ಲಿ ಮುಹೂರ್ತನೂ, ಭಾನುವಿನಲ್ಲಿ ದ್ವಾದಶಾದಿತ್ಯರೂ, ಲಂಘಾ ಎಂಬವಳಲ್ಲಿ ಘೋಷನೂ, ಜಾಮಿಯಲ್ಲಿ ನಾಗವೀಧಿಯೂ, ಅರುಂಧತಿಯಲ್ಲಿ ಭೂಮಿಯ ಚರಾಚರ ಪ್ರಾಣಿಗಳೂ, ಸಂಕಲ್ಪಾ ಎಂಬವಳಲ್ಲಿ ಸರ್ವಾತ್ಮ ಸ್ವರೂಪನಾದ ಸಂಕಲ್ಪನೂ ಹುಟ್ಟಿದರು.

೧೦೯-೧೧೦. ಅನೇಕ ವಿಧದ ತೇಜಸ್ಸೇ ಬಲವಾಗಿ ಉಳ್ಳ ಅಗ್ನಿಯೇ ಮುಂತಾದ ಅಷ್ಟವಸುಗಳಲ್ಲಿ ಆಪ, ಧ್ರುವ, ಸೋಮ, ಧರ್ಮ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ, ಎಂಬಿವೇ ಅವರ ಹೆಸರುಗಳು.

೧೧೧-೧೧೩. ಆಪನಿಗೆ ಸ್ತಬ್ಧ, ಶ್ರಮ, ಶ್ರಾಂತ, ಧ್ವನಿ ಎಂಬುವರೂ ಧ್ರುವನಿಗೆ ಕಾಲ, ಲೋಕ, ಪ್ರಕಾಲನ ಎಂಬವರೂ, ಸೋಮನಿಗೆ ವರ್ಚನೂ

ಸೋಮಸ್ಯ ಭಗವಾನ್ವರ್ಚಾ ವರ್ಚಸ್ವೀ ಯೇನ ಜಾಯತೇ ॥ ೧೧೨ ॥

ಧರ್ಮಸ್ಯ ಪುತ್ರೋ ದ್ರವಿಣೋ ಹುತಹವ್ಯವಹಸ್ತಥಾ ।
ಮನೋಹರಾಯಾಃ ಶಿಶಿರಃ ಪ್ರಾಣೋಽಥ ರಮಣಸ್ತಥಾ ॥ ೧೧೩ ॥

ಅನಿಲಸ್ಯ ಶಿವಾ ಭಾರ್ಯಾ ತಸ್ಯಾಃ ಪುತ್ರಃ ಪುರೋಜವಃ ।
ಅವಿಜ್ಞಾತಗತಿಶ್ಚೈವ ದ್ವೌ ಪುತ್ರಾವನಿಲಸ್ಯ ತು ॥ ೧೧೪ ॥

ಅಗ್ನಿಪುತ್ರಃ ಕುಮಾರಸ್ತು ಶರಸ್ತಂಬೇ ವ್ಯಜಾಯತ ।
ತಸ್ಯ ಶಾಖೋ ವಿಶಾಖಶ್ಚ ನೈಗಮೇಷಶ್ಚ ಪೃಷ್ಠಜಾಃ ॥ ೧೧೫ ॥

ಅಪತ್ಯಂ ಕೃತ್ತಿಕಾನಾಂ ತು ಕಾರ್ತಿಕೇಯ ಇತಿ ಸ್ಮೃತಃ ॥ ೧೧೬ ॥

ಪ್ರತ್ಯೂಷಸ್ಯ ವಿದುಃ ಪುತ್ರಂ ಋಷಿಂ ನಾಮ್ನಾತುದೇವಲಂ ।
ದ್ವೌ ಪುತ್ರೌ ದೇವಲಸ್ಯಾಪಿ ಕ್ಷಮಾವಂತೌ ಮನೀಷಿಣೌ ॥ ೧೧೭ ॥

ಬೃಹಸ್ಪತೇಸ್ತು ಭಗಿನೀ ವರಸ್ತ್ರೀ ಬ್ರಹ್ಮಚಾರಿಣೀ ।
ಯೋಗಸಿದ್ಧಾ ಜಗತ್ಕೃತ್ಸ್ನಮಸಕ್ತಾ ವಿಚರತ್ಯುತ ॥
ಪ್ರಭಾಸಸ್ಯ ತು ಭಾರ್ಯಾ ಸಾ ವಸೂನಾಮಷ್ಟಮಸ್ಯ ತು ॥ ೧೧೮ ॥

ಧರ್ಮನಿಗೆ ಮನೋಹರೆಯಲ್ಲಿ ದ್ರವಿಣನೂ, ಹುತನೂ, ಹವ್ಯವಹನೂ, ಶಿಶಿರನೂ, ಪ್ರಾಣನೂ, ರಮಣನೂ ಮಕ್ಕಳು.

೧೧೪–೧೧೭. ಅನಿಲನಿಗೆ ಶಿವಾ ಎಂಬ ಪತ್ನಿಯಲ್ಲಿ ಪುರೋಜವ, ಅವಿಜ್ಞಾತಗತಿ ಎಂಬಿಬ್ಬರೂ, ಅಗ್ನಿಗೆ ಜೊಂಡಿನಲ್ಲಿ ಕುಮಾರಸ್ವಾಮಿ, ಶಾಖ, ವಿಶಾಖ, ನೈಗಮೇಷ ಎಂಬ ನಾಲ್ವರೂ ಮಕ್ಕಳು. ಇವರಲ್ಲಿ ಕುಮಾರಸ್ವಾಮಿಯೇ ಕೃತ್ತಿಕಾಪುತ್ರನಾಗಿ ಕಾರ್ತಿಕೇಯನೆಂಬ ಹೆಸರನ್ನು ಪಡೆದನು. ಪ್ರತ್ಯೂಷನಿಗೆ ದೇವಲನೆಂಬ ಋಷಿಯು ಪುತ್ರನು. ದೇವಲನಿಗೆ ಸಹನೆಯುಳ್ಳವರೂ, ಬುದ್ಧಿವಂತರೂ ಆದ ಇಬ್ಬರು ಮಕ್ಕಳಿದ್ದರು.

೧೧೮–೧೨೦. ಬೃಹಸ್ಪತಿಯ ಸಹೋದರಿಯಾದ ಸುಂದರಸ್ತ್ರೀಯು ಬ್ರಹ್ಮಚಾರಿಣಿಯಾಗಿಯೂ, ಯೋಗಸಿದ್ಧಳಾಗಿಯೂ, ವೈರಾಗ್ಯದಿಂದ ಲೋಕವನ್ನೆಲ್ಲ

ವಿಶ್ವಕರ್ಮಾ ಮಹಾಭಾಗಸ್ತಸ್ಯಾಂ ಜಜ್ಞೇ ಪ್ರಜಾಪತಿಃ ।
ಕರ್ತಾ ಶಿಲ್ಪಸಹಸ್ರಾಣಾಂ ತ್ರಿದಶಾನಾಂ ಚ ವರ್ಧಕಿಃ ॥ ೧೧೯ ॥

ಭೂಷಣಾನಾಂ ಚ ಸರ್ವೇಷಾಂ ಕರ್ತಾ ಶಿಲ್ಪವತಾಂ ವರಃ ।
ಯಃ ಸರ್ವೇಷಾಂ ವಿಮಾನಾನಿ ದೇವತಾನಾಂ ಚಕಾರ ಹ ।
ಮನುಷ್ಯಾಶ್ಚೋಪಜೀವಂತಿ ಯಸ್ಯ ಶಿಲ್ಪಂ ಮಹಾತ್ಮನಃ ॥ ೧೨೦ ॥

ತಸ್ಯ ಪುತ್ರಾಸ್ತು ಚತ್ವಾರಸ್ತೇಷಾಂ ನಾಮಾನಿ ಮೇ ಶೃಣು ।
ಅಜೈಕಪಾದಹಿರ್ಬುಧ್ನ್ಯಸ್ತ್ವಷ್ಟಾ ರುದ್ರಶ್ಚ ವೀರ್ಯವಾನ್ ।
ತ್ವಷ್ಟುಶ್ಚಾಪ್ಯಾತ್ಮಜಃ ಪುತ್ರೋ ವಿಶ್ವರೂಪೋ ಮಹಾತಪಾಃ ॥ ೧೨೧ ॥

ಹರಶ್ಚ ಬಹುರೂಪಶ್ಚ ತ್ರ್ಯಂಬಕಶ್ಚಾಪರಾಜಿತಃ ।
ವೃಷಾಕಪಿಶ್ಚ ಶಂಭುಶ್ಚ ಕಪರ್ದೀ ರೈವತಸ್ತಥಾ ॥ ೧೨೨ ॥

ಮೃಗವ್ಯಾಧಶ್ಚ ಶರ್ವಶ್ಚ ಕಪಾಲೀ ಚ ಮಹಾಮುನೇ ।
ಏಕಾದಶೈತೇ ಕಥಿತಾ ರುದ್ರಾಸ್ತ್ರಿಭುವನೇಶ್ವರಾಃ ॥ ೧೨೩ ॥

ಸಂಚರಿಸುತ್ತಲೂ ಇರುವಳು. ಇವಳು ಎಂಟನೆಯ ವಸುವಾದ ಪ್ರಭಾಸನ ಹೆಂಡತಿಯು. ಇವಳಲ್ಲಿ ಅನೇಕ ಶಿಲ್ಪಕಾರ್ಯಗಳನ್ನು ಮಾಡುವ ಮಹಾಮಹಿಮನಾದ ದೇವಶಿಲ್ಪಿಯಾದ ವಿಶ್ವಕರ್ಮನೆಂಬ ಪ್ರಜಾಪತಿಯು ಹುಟ್ಟಿದನು. ಇವನು ಅನೇಕ ಆಭರಣಗಳನ್ನೂ, ದೇವತೆಗಳಿಗೆಲ್ಲ ವಿಮಾನಗಳನ್ನೂ ಮಾಡಿಕೊಟ್ಟನು. ಮಹಾತ್ಮನಾದ ಇವನ ಶಿಲ್ಪಕಾರ್ಯವನ್ನು ಕಲಿತು ಮನುಜರೂ ಜೀವಿಸುತ್ತಿರುವರು.

೧೨೧-೧೨೪. ಆ ಬೃಹಸ್ಪತಿಯ ಸಹೋದರಿಯಲಿ ಅಜೈಕಪಾತ್, ಅಹಿರ್ಬುಧ್ನ್ಯ, ತ್ವಷ್ಟ್ರ, ರುದ್ರ, ಎಂಬ ನಾಲ್ವರು ಹುಟ್ಟಿದರು. ತ್ವಷ್ಟ್ರುವಿಗೆ ವಿಶ್ವರೂಪನೆಂಬುವನು ಮಗನು. ರುದ್ರನು ಹರ, ಬಹುರೂಪ, ತ್ರ್ಯಂಬಕ, ಅಪರಾಜಿತ, ವೃಷಾಕಪಿ, ಶಂಭು, ಕಪರ್ದಿ, ರೈವತ, ಮೃಗವ್ಯಾಧ, ಶರ್ವ, ಕಪಾಲಿ, ಎಂಬ ಹನ್ನೊಂದು ರೂಪವಾಗಿ ಏಕಾದಶ ರುದ್ರರೆನಿಸಿಕೊಂಡು ಮೂರು ಲೋಕಕ್ಕೂ ಒಡೆಯರಾಗಿರುವರು.

ಶತಂ ತ್ವೇಕಂ ಸಮಾಖ್ಯಾತಂ ರುದ್ರಾಣಾಮಮಿತೌಜಸಾಂ ।
ಕಾಶ್ಯಪಸ್ಯ ತು ಭಾರ್ಯಾ ಯಾಸ್ತಾಸಾಂ ನಾಮಾನಿ ಮೇ ಶೃಣು ॥ ೧೨೪ ॥

ಅದಿತಿರ್ದಿತಿರ್ದನುಶ್ಚೈವಹ್ಯರಿಷ್ಟಾ ಸುರಸಾ ಕಷಾ ।
ಸುರಭಿರ್ವಿನತಾ ಚೈವ ತಾಮ್ರಾ ಕ್ರೋಧವಶಾ ಇರಾ ।
ಕದ್ರೂರ್ಮುನಿಶ್ಚ ಧರ್ಮಜ್ಞ ತದಪತ್ಯಾನಿ ಮೇ ಶೃಣು ॥ ೧೨೫ ॥

ಪೂರ್ವಮನ್ವಂತರೇ ಶ್ರೇಷ್ಠಾ ದ್ವಾದಶಾಸನ್ಸುರೋತ್ತಮಾಃ ।
ತುಷಿತಾ ನಾಮ ತೇಽನ್ಯೋನ್ಯಮೂಚುರ್ವೈವಸ್ವತೇಽನ್ತರೇ ॥ ೧೨೬ ॥

ಉಪಸ್ಥಿತೇಽತಿ ಯಶಸಶ್ಚಾಕ್ಷುಷಸ್ಯಾಂತರೇ ಮನೋಃ ।
ಸಮವಾಯೀಕೃತಾಃ ಸರ್ವೇ ಸಮಾಗಮ್ಯ ಪರಸ್ಪರಂ ॥ ೧೨೭ ॥

ಆಗಚ್ಛತ ದ್ರುತಂ ದೇವಾ ಅದಿತಿಂ ಸಂಪ್ರವಿಶ್ಯ ವೈ ।
ಮನ್ವಂತರೇ ಪ್ರಸೂಯಾಮಸ್ತನ್ನಃ ಶ್ರೇಯೋ ಭವೇದಿತಿ ॥ ೧೨೮ ॥

ಈ ಏಕಾದಶ ರುದ್ರರೇ ತಮ್ಮ ತೇಜಸ್ಸಿನಿಂದ ಬೇರೆ ಬೇರೆಯಾಗಿ ನೂರೊಂದು ಜನ ರುದ್ರರಾಗಿ, 'ಸಹಸ್ರಾಣಿ ಸಹಸ್ರಶೋಯೇ ರುದ್ರಾ ಅಧಿಭೂಮ್ಯಾಂ' ಎಂಬ ವೇದ ವಾಕ್ಯದಂತೆ ಅನೇಕ ರುದ್ರರಾಗಿರುವರು. ಇನ್ನು ಕಾಶ್ಯಪನ ಪತ್ನಿಯರ ಹೆಸರನ್ನು ಹೇಳುವೆನು ಕೇಳು :—

೧೨೫-೧೨೯. ಅದಿತಿ, ದಿತಿ, ದನು, ಅರಿಷ್ಟಾ, ಸುರಸಾ, ಕಷಾ, ಸುರಭಿ ವಿನತಾ, ತಾಮ್ರಾ, ಕ್ರೋಧಾ, ವಶಾ, ಇಳಾ, ಕದ್ರೂ ಎಂಬಿವರೇ ಹದಿಮೂರು ಜನ ಕಶ್ಯಪನಪತ್ನಿಯರು. ಇವರ ಮಕ್ಕಳನ್ನು ಹೇಳುವೆನು. ಹಿಂದಿನ ಆರನೆಯದಾದ ಚಾಕ್ಷುಷ ಮನ್ವಂತರದಲ್ಲಿ ಹನ್ನೆರಡು ಜನ ತುಷಿತರೆಂಬ ದೇವತೆಗಳು ಅದಿತಿಯ ಪುತ್ರರಾಗಿದ್ದರು. ಏಳನೆಯ ವೈವಸ್ವತ ಮನ್ವಂತರವು ಪ್ರಾಪ್ತವಾಗಲು ಮಹಾ ಯಶಸ್ವಿಗಳಾದ ಆ ದೇವತೆಗಳೆಲ್ಲರೂ ಕೂಡಿ ತಮ್ಮ ತಮ್ಮಲ್ಲಿ ಮಾತನಾಡಿಕೊಂಡರು. ಏನೆಂದರೆ:—ದೇವತೆಗಳೇ ಬೇಗ ಬನ್ನಿರಿ. ನಾವು ಅದಿತಿಯ ಗರ್ಭವನ್ನು ಪ್ರವೇಶಿಸಿ

ಏವಮುಕ್ತ್ವಾ ತು ತೇ ಸರ್ವೇ ಚಾಕ್ಷುಷಸ್ಯಾಂತರೇ ಮನೋಃ ।
ಮಾರೀಚಾತ್ಕಶ್ಯಪಾಜ್ಜಾತಾ ಸ್ತೇಽದಿತ್ಯಾ ದಕ್ಷಕನ್ಯಯಾ ॥ ೧೨೯ ॥

ತತ್ರ ವಿಷ್ಣುಶ್ಚ ಶಕ್ರಶ್ಚ ಜಜ್ಞಾತೇ ಪುನರೇವ ಹಿ ।
ಅರ್ಯಮಾ ಚೈವ ಧಾತಾ ಚ ತ್ವಷ್ಟಾ ಪೂಷಾ ತಥೈವ ಚ ॥ ೧೩೦ ॥

ವಿವಸ್ವಾನ್ಸವಿತಾ ಚೈವ ಮಿತ್ರೋ ವರುಣ ಏವ ಚ ।
ಅಂಶುರ್ಭಗಶ್ಚಾತಿತೇಜಾ ಆದಿತ್ಯಾ ದ್ವಾದಶ ಸ್ಮೃತಾಃ ॥ ೧೩೧ ॥

ಚಾಕ್ಷುಷಸ್ಯಾಂತರೇ ಪೂರ್ವಮಾಸನ್ಯೇ ತುಷಿತಾಃ ಸುರಾಃ ।
ವೈವಸ್ವತೇಽಂತರೇ ತೇ ವೈ ಆದಿತ್ಯಾ ದ್ವಾದಶ ಸ್ಮೃತಾಃ ॥ ೧೩೨ ॥

ಮುಂದಿನ ವೈವಸ್ವತ ಮನ್ವಂತರದಲ್ಲಿ ಹುಟ್ಟೋಣ. ಅದರಿಂದ ನಮಗೆ ಶ್ರೇಯಸ್ಸು ಉಂಟಾಗುವುದು. ಹೀಗೆಂದು ಚಾಕ್ಷುಷ ಮನ್ವಂತರದಲ್ಲಿ ಆ ದೇವತೆಗಳು ಮಾತನಾಡಿಕೊಂಡು ವೈವಸ್ವತಮನ್ವಂತರದಲ್ಲಿ ಮರೀಚಿ ಪುತ್ರನಾದ ಕಶ್ಯಪನಿಂದ ದಕ್ಷಪುತ್ರಿಯಾದ ಅದಿತಿಯ ಗರ್ಭದಲ್ಲಿ ಹುಟ್ಟಿದರು.

೧೩೦–೧೩೨. ಆ ಸಂದರ್ಭದಲ್ಲಿ ವಿಷ್ಣು, ದೇವೇಂದ್ರ, ಅರ್ಯಮ, ಧಾತೃ, ತ್ವಷ್ಟೃ, ಪೂಷ, ವಿವಸ್ವಾನ್, ಸವಿತೃ, ಮಿತ್ರ, ವರುಣ, ಅಂಶು ಭಗ ಎಂಬೀ ದೇವತೆಗಳು ಮತ್ತೆ ಹುಟ್ಟಿ ದ್ವಾದಶಾದಿತ್ಯರೆನಿಸಿಕೊಂಡರು. ಚಾಕ್ಷುಷಮನ್ವಂತರದಲ್ಲಿದ್ದ ತುಷಿತಾ ಎಂಬ ಹನ್ನೆರಡು ಜನ ದೇವತೆಗಳೇ ವೈವಸ್ವತ ಮನ್ವಂತರದಲ್ಲಿ ದ್ವಾದಶಾದಿತ್ಯರಾದರು. (ಅಷ್ಟವಸುಗಳು ಏಕಾದಶರುದ್ರರು ಎಂಬ ಕ್ರಮದಿಂದ ರುದ್ರರಾದ ಮೇಲೆ ದ್ವಾದಶಾದಿತ್ಯರನ್ನು ಹೇಳಿಯಾಯಿತು. ಈಗ ಕಾಶ್ಯಪನ ಪತ್ನಿಯಾದ ಅದಿತಿಯ ವಂಶವನ್ನು ಹೇಳಿದಮೇಲೆ ದಿತಿಯ ವಂಶವನ್ನು ಹೇಳಬೇಕು. ಅದು ವಿಸ್ತಾರವಾದುದರಿಂದ ಮುಂದೆ ಪ್ರಹ್ಲಾದ ಚರಿತ್ರೆಯಲ್ಲಿ ಹೇಳಬೇಕೆಂದು ಅದನ್ನು ಬಿಟ್ಟು ಸ್ವಲ್ಪವಾದ ಮಿಕ್ಕ ದಕ್ಷ ಕನ್ಯೆಯರ ವಂಶವನ್ನು ಹೇಳಲಾಗುವುದು.)

ಸಪ್ತವಿಂಶತಿ ಯಾಃ ಪ್ರೋಕ್ತಾಃ ಸೋಮಪತ್ನ್ಯೋಽಥ ಸುವ್ರತಾಃ ।
ತಾಸಾಮಪತ್ಯಾನ್ಯಭವನ್ದೀಪ್ತಿಮಂತ್ಯತಿ ತೇಜಸಾಂ ॥ ೧೩೩ ॥

ಅರಿಷ್ಟನೇಮಿಪತ್ನೀನಾಮಪತ್ಯಾನೀಹ ಷೋಡಶ ॥ ೧೩೪ ॥

ಬಹುಪುತ್ರಸ್ಯ ವಿದುಷಶ್ಚತಸ್ರೋ ವಿದ್ಯುತಃ ಸ್ಮೃತಾಃ ॥ ೧೩೫ ॥

ಪ್ರತ್ಯಂಗಿರಸಜಾಃ ಶ್ರೇಷ್ಠಾ ಋಚೋ ಬ್ರಹ್ಮರ್ಷಿಸತ್ಕೃತಾಃ ॥ ೧೩೬ ॥

ಕೃಶಾಶ್ವಸ್ಯ ತು ದೇವರ್ಷೇರ್ದೇವಪ್ರಹರಣಾ ಸ್ಮೃತಾಃ ॥ ೧೩೭ ॥

ಏತೇ ಯುಗಸಹಸ್ರಾಂತೇ ಜಾಯಂತೇ ಪುನರೇವ ಹಿ ।
ಸರ್ವೇ ದೇವಗಣಾಸ್ತಾತ ತ್ರಯಸ್ತ್ರಿಂಶತ್ತು ಛಂದಜಾಃ ॥
ತೇಷಾಮಪೀಹ ಸತತಂ ನಿರೋಧೋತ್ಪತ್ತಿರುಚ್ಯತೇ ॥ ೧೩೮ ॥

೧೩೩–೧೩೫. ಚಂದ್ರನ ಪತ್ನಿಯರಾದ ಇಪ್ಪತ್ತೇಳು ಜನ ದಕ್ಷಪುತ್ರಿಯರಿ ಸುಂದರರೂ ಅತ್ಯಂತ ತೇಜಸ್ವಿಗಳೂ ಆದ ಅನೇಕ ಮಕ್ಕಳಾದರು. ಅರಿಷ್ಟನೇಮಿಯ ನಾಲ್ವರು ಪತ್ನಿಯರಿಗೆ ಹದಿನಾರು ಜನ ಮಕ್ಕಳಾದರು. ಬಹುಪುತ್ರನ ಇಬ್ಬರು ಪತ್ನಿಯರಿಗೆ ನಾಲ್ಕು ಬಗೆಯ ವಿದ್ಯುತ್ತುಗಳು ಮಕ್ಕಳಾದರು. (ನಾಲ್ಕು ಬಗೆಯ ಮಿಂಚುಗಳು :—ಕಪಿಲವರ್ಣದ ಮಿಂಚಿಗೆ ವಿಶೇಷ ಗಾಳಿಯೂ, ಕೆಂಪು ಬಣ್ಣದ ಮಿಂಚಿಗೆ ವಿಶೇಷವಾದ ಬಿಸಿಲೂ, ಹಳದಿಯ ಬಣ್ಣದ ಮಿಂಚಿಗೆ ಮಳೆಯೂ, ಬಿಳಿಯ ಮಿಂಚಿಗೆ ದುರ್ಭಿಕ್ಷವೂ ಫಲವಾಗಿರುವುದೆಂದು ಜ್ಯೋತಿಶಾಸ್ತ್ರದಲ್ಲಿ ಹೇಳಿದೆ.)

೧೩೬–೧೩೭. ಅಂಗಿರಸ್ಸಿನ ಇಬ್ಬರು ಪತ್ನಿಯರಿಗೆ ಋಗ್ವೇದದ 'ಯಾಂಕಲ್ಪಯತಿ' ಇತ್ಯಾದಿ ಮೂವತ್ತು ಮಂತ್ರಗಳಿಗೆ ಅಭಿಮಾನಿ ದೇವತೆಗಳಾದವರು ಮಕ್ಕಳಾದರು. ಕೃಶಾಶ್ವನ ಇಬ್ಬರು ಪತ್ನಿಯರಿಗೆ ದೇವತೆಗಳ ಶಸ್ತ್ರಾಭಿಮಾನಿ ದೇವತೆಗಳೇ ಮಕ್ಕಳಾದರು.

೧೩೮–೧೩೯. ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಪ್ರಜಾಪತಿ, ವಷಟ್ಕಾರ ಎಂದು ಶ್ರುತಿಯಲ್ಲಿ ಹೇಳಿರುವ ಮೂವತ್ತು ಮೂರು ದೇವತೆಗಳು

ಯಥಾ ಸೂರ್ಯಸ್ಯ ಮೈತ್ರೇಯ ಉದಯಾಸ್ತಮಯಾವಿಹ ।
ಏವಂ ದೇವನಿಕಾಯಾಸ್ತೇ ಸಂಭವಂತಿ ಯುಗೇಯುಗೇ ॥ ೧೩೯ ॥

ದಿತ್ಯಾಃ ಪುತ್ರದ್ವಯಂ ಜಜ್ಞೇ ಕಾಶ್ಯಪಾದಿತಿ ನಃ ಶ್ರುತಂ ।
ಹಿರಣ್ಯಕಶಿಪುಶ್ಚೈವ ಹಿರಣ್ಯಾಕ್ಷಶ್ಚ ದುರ್ಜಯಃ ॥ ೧೪೦ ॥

ಸಿಂಹಿಕಾ ಚಾಭವತ್ಕನ್ಯಾ ವಿಪ್ರಚಿತ್ತೇಃ ಪರಿಗ್ರಹಃ ॥ ೧೪೧ ॥

ಹಿರಣ್ಯಕಶಿಪೋಃ ಪುತ್ರಾಶ್ಚತ್ವಾರಃ ಪ್ರಥಿತೌಜಸಃ ।
ಅನುಹ್ಲಾದಶ್ಚ ಹ್ಲಾದಶ್ಚ ಪ್ರಹ್ಲಾದಶ್ಚೈವ ಬುದ್ಧಿಮಾನ್ ।
ಸಂಹ್ಲಾದಶ್ಚ ಮಹಾವೀರ್ಯಾ ದೈತ್ಯವಂಶವಿವರ್ಧನಾಃ ॥ ೧೪೨ ॥

ತೇಷಾಂ ಮಧ್ಯೇ ಮಹಾಭಾಗಃ ಸರ್ವತ್ರ ಸಮದೃಗ್ವಶೀ ।
ಪ್ರಹ್ಲಾದಃ ಪರಮಾಂ ಭಕ್ತಿಂ ಯ ಉವಾಹ ಜನಾರ್ದನೇ ॥ ೧೪೩ ॥

ಸಾವಿರ ಚತುರ್ಯುಗಗಳು ಕಳೆದಮೇಲೆ ಪುನಃ ತಮ್ಮ ತಮ್ಮ ಇಚ್ಛಾನುಸಾರವಾಗಿ ಹುಟ್ಟುವರು. ಮೈತ್ರೇಯನೇ ಸೂರ್ಯನಿಗೆ ಉದಯಾಸ್ತಮಯಗಳು ಹೇಗೆ ನಿತ್ಯವಾದುದೋ ಹಾಗೆ ದೇವತೆಗಳಿಗೂ ಪ್ರತಿ ಯುಗದಲ್ಲಿಯೂ ಉತ್ಪತ್ತಿ ನಾಶಗಳು ನಿತ್ಯವಾದುದು.

೧೪೦–೧೪೨ ಕಾಶ್ಯಪನ ಪತ್ನಿಯಾದ ದಿತಿಯಲ್ಲಿ ಹಿರಣ್ಯಾಕ್ಷ, ಹಿರಣ್ಯಕಶಿಪು ಎಂಬ ಶೂರರಾದ ಇಬ್ಬರು ಗಂಡುಮಕ್ಕಳೂ, ಸಿಂಹಿಕಾ ಎಂಬ ಪುತ್ರಿಯೂ ಹುಟ್ಟಿದರು. ಆ ಸಿಂಹಿಕೆಯು ವಿಪ್ರಚಿತ್ತಿ ಎಂಬವನ ಪತ್ನಿಯಾದಳು. ಹಿರಣ್ಯಕಶಿಪುವಿಗೆ ಅನುಹ್ಲಾದ, ಹ್ಲಾದ, ಪ್ರಹ್ಲಾ, ಸಂಹ್ಲಾದ ಎಂಬ ಮಹಾ ಪರಾಕ್ರಮಶಾಲಿಗಳಾದ ದೈತ್ಯ ವಂಶವನ್ನು ಅಭಿವೃದ್ಧಿಪಡಿಸುವ ಮಕ್ಕಳು ಹುಟ್ಟಿದರು.

೧೪೩–೧೪೪. ಇವರ ನಡುವೆ ಮಹಾ ಪುಣ್ಯವಂತನೂ, ಸರ್ವತ್ರಸಮದರ್ಶಿಯೂ ಆದ ಪ್ರಹ್ಲಾದನು ವಿಷ್ಣುವಿನಲ್ಲಿ ವಿಶೇಷವಾಗಿ ಭಕ್ತಿಯುಳ್ಳವನಾಗಿದ್ದನು. ಪ್ರಹ್ಲಾದನು ಏಕಾಗ್ರಚಿತ್ತದಿಂದ ಹರಿಯನ್ನು ಧ್ಯಾನಿಸುತ್ತಿರಲು ಹಿರಣ್ಯಕಶಿಪುವು

ದೈತ್ಯೇಂದ್ರದೀಪಿತೋ ವಹ್ನಿಃ ಸರ್ವಾಂಗೋಪಚಿತೋ ದ್ವಿಜ ।
ನ ದದಾಹ ಚ ಯಂ ವಿಪ್ರ ವಾಸುದೇವೇ ಹೃದಿ ಸ್ಥಿತೇ ॥ ೧೪೪ ॥

ಮಹಾರ್ಣವಾಂತಃಸಲಿಲೇ ಸ್ಥಿತಸ್ಯ ಚಲತೋ ಮಹೀ ।
ಚಚಾಲ ಚಲತಾ ಯಸ್ಯ ಪಾಶಬದ್ಧಸ್ಯ ಧೀಮತಃ ॥ ೧೪೫ ॥

ನ ಭಿನ್ನಂ ವಿವಿಧೈಃ ಶಸ್ತ್ರೈರ್ಯಸ್ಯ ದೈತ್ಯೇಂದ್ರಪಾತಿತೈಃ ।
ಶರೀರಮದ್ರಿಕಠಿನಂ ಸರ್ವತ್ರಾಚ್ಯುತಚೇತಸಃ ॥ ೧೪೬ ॥

ವಿಷಾನಲೋಜ್ಜ್ವಲಮುಖಾ ಯಸ್ಯ ದೈತ್ಯಪ್ರಚೋದಿತಾಃ ।
ನಾಂತಾಯ ಸರ್ಪಪತಯೋ ಬಭೂವುರುರುತೇಜಸಃ ॥ ೧೪೭ ॥

ಶೈಲೈರಾಕ್ರಾಂತದೇಹೋಽಪಿ ಯಃ ಸ್ಮರನ್ಪುರುಷೋತ್ತಮಂ ।
ತತ್ಯಾಜ ನಾತ್ಮನಃ ಪ್ರಾಣಾನ್ ವಿಷ್ಣುಸ್ಮರಣದಂಶಿತಃ ॥ ೧೪೮ ॥

ಪತಂತಮುಚ್ಚಾದವನಿರ್ಯಮುಪೇತ್ಯ ಮಹಾಮತಿಂ ।
ದಧಾರ ದೈತ್ಯಪತಿನಾ ಕ್ಷಿಪ್ತಂ ಸ್ವರ್ಗನಿವಾಸಿನಾ ॥ ೧೪೯ ॥

ಅವನನ್ನು ಉರಿಯುತ್ತಿರುವ ಬೆಂಕಿಯಲ್ಲಿ ಹಾಕಿಸಿದರೂ ಆ ಉರಿಯು ಅವನನ್ನು ಸುಡಲಿಲ್ಲ. ಅವನ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿ ಸಮುದ್ರದೊಳಗೆ ಹಾಕಿದರೆ ಅಲ್ಲಿ ಅವನು ಅವಯುವಗಳನ್ನು ಚಲಿಸಿದರೆ ಭೂಮಿಯೇ ಚಲಿಸುತ್ತಿತ್ತು. ದೈತ್ಯರಾಜನು ಬಗೆಬಗೆಯ ಆಯುಧಗಳಿಂದ ಹೊಡೆದರೂ ಪರ್ವತದಂತೆ ಕಠಿನವಾದ ಅವನ ಶರೀರವು ಗಾಯುವಾಗಲಿಲ್ಲ. ವಿಷರೂಪವಾದ ಬೆಂಕಿಯನ್ನು ಕಾರುತ್ತಿರುವ ಸರ್ಪಗಳೂ ಅವನನ್ನು ಕೊಲ್ಲಲಾರದೆ ಹೋದುವು. ಪರ್ವತಗಳನ್ನು ಇವನ ಮೇಲೆ ತಂದು ಹಾಕಿದರೂ ವಿಷ್ಣುವನ್ನು ಸ್ಮರಿಸುತ್ತಿದ್ದ ಇವನು ಪ್ರಾಣ ಬಿಡಲಿಲ್ಲ.

೧೪೯–೧೫೦. ಸ್ವರ್ಗವಾಸಿಯಾದ ದೈತ್ಯರಾಜನು ಎತ್ತರವಾದ ಪರ್ವತದಿಂದ ಪ್ರಹ್ಲಾದನನ್ನು ಭೂಮಿಗೆ ಹಾಕಿದಾಗ ತಪೋನಿಷ್ಠನಾದ ಅವನನ್ನು ಭೂದೇವಿಯೇ

ಯಸ್ಯ ಸಂಶೋಷಕೋ ವಾಯುರ್ದೇಹೇ ದೈತ್ಯೇಂದ್ರಯೋಜಿತಃ ।
ಅವಾಪ ಸಂಕ್ಷಯಂ ಸದ್ಯಶ್ಚಿತ್ತಸ್ಥೇ ಮಧುಸೂದನೇ ॥ ೧೫೦ ॥

ವಿಷಾಣಭಂಗಮುನ್ಮತ್ತಾ ಮದಹಾನಿಂ ಚ ದಿಗ್ಗಜಾಃ ।
ಯಸ್ಯ ವಕ್ಷಃಸ್ಥಲೇ ಪ್ರಾಪ್ತಾ ದೈತ್ಯೇಂದ್ರಪರಿಣಾಮಿತಾಃ ॥ ೧೫೧ ॥

ಯಸ್ಯ ಚೋತ್ಪಾದಿತಾ ಕೃತ್ಯಾ ದೈತ್ಯರಾಜಪುರೋಹಿತೈಃ ।
ಬಭೂವ ನಾಂತಾಯ ಪುರಾ ಗೋವಿಂದಾಸಕ್ತಚೇತಸಃ ॥ ೧೫೨ ॥

ಶಂಬರಸ್ಯ ಚ ಮಾಯಾನಾಂ ಸಹಸ್ರಮತಿಮಾಯಿನಃ ।
ಯಸ್ಮಿನ್ಪ್ರಯುಕ್ತಂ ಚಕ್ರೇಣ ಕೃಷ್ಣಸ್ಯ ವಿತಥೀಕೃತಂ ॥ ೧೫೩ ॥

ದೈತ್ಯೇಂದ್ರಸೂದೋಪಹೃತಂ ಯಸ್ಯ ಹಾಲಾಹಲಂ ವಿಷಂ ।
ಜರಯಾಮಾಸ ಮತಿಮಾನವಿಕಾರಮಮತ್ಸರೀ ॥ ೧೫೪ ॥

ಬಂದು ಹಿಡಿದುಕೊಂಡಳು. ವಿಷ್ಣುವನ್ನು ಧ್ಯಾನಿಸುತ್ತಿದ್ದ ಪ್ರಹ್ಲಾದನ ಶರೀರವನ್ನು ಶೋಷಿಸುವುದಕ್ಕಾಗಿ ದೈತ್ಯರಾಜನು ವಾಯುವನ್ನು ಅವನ ಶರೀರದೊಳಕ್ಕೆ ಪ್ರಯೋಗಿಸಿದನು. ಆ ಕ್ಷಣವೇ ವಾಯುವು ನಾಶಹೊಂದಿತು.

೧೫೧-೧೫೪. ದೈತ್ಯರಾಜನು ಪ್ರಹ್ಲಾದನನ್ನು ಕೊಲ್ಲುವುದಕ್ಕಾಗಿ ಮದಿಸಿದ ದಿಗ್ಗಜಗಳನ್ನು ಪ್ರೇರಿಸಲು ಅವು ಕೊಂಬನ್ನು ಮುರಿದ ಕೊಂಡು ಮದವಿಲ್ಲದುವಾದವು. ದೈತ್ಯರಾಜನ ಪುರೋಹಿತರು ಗೋವಿಂದನಲ್ಲಿ ಮನಸ್ಸನ್ನಿಟ್ಟಿದ್ದ ಅವನನ್ನು ಕೊಲ್ಲುವುದಕ್ಕಾಗಿ ಅಭಿಚಾರಕ ಕೃತ್ಯಗಳನ್ನು ಮಾಡಿದರು. ಅದರಿಂದಲೂ ಅವನಿಗೆ ಮರಣವಾಗಲಿಲ್ಲ. ಮಹಾ ಮಾಯಾವಿಯಾದ ಶಂಬರಾಸುರನ ಸಾವಿರಾರು ಮಾಯೆಗಳನ್ನು ಪ್ರಯೋಗಿಸಿದರೂ ಅವೆಲ್ಲವೂ ಕೃಷ್ಣನ ಚಕ್ರದಿಂದ ಫಲವಿಲ್ಲದುವಾದುವು. ದೈತ್ಯರಾಜನ ಅಡಿಗೆಯವರು ಹಾಲಾಹಲವೆಂಬ ವಿಷವನ್ನು ಅವನಿಗೆ ಕುಡಿಸಿದರು. ಬುದ್ಧಿವಂತನೂ ಮಾತ್ಸರ್ಯವಿಲ್ಲದವನೂ ಆದ ಪ್ರಹ್ಲಾದನು ಅವಯವಗಳಲ್ಲಿ ಯಾವ ವಿಕಾರವನ್ನೂ ಹೊಂದದೆ ಅದನ್ನು ಜೀರ್ಣಿಸಿಕೊಂಡನು.

ಸಮಚೇತಾ ಜಗತ್ಯಸ್ಮಿನ್ಯಃ ಸರ್ವೇಷ್ವೇವ ಜಂತುಷು ।
ಯಥಾಽಽತ್ಮನಿ ತಥಾಽನ್ಯೇಷಾಂ ಪರಂ ಮೈತ್ರಗುಣಾನ್ವಿತಃ ॥ ೧೫೫ ।
ಧರ್ಮಾತ್ಮಾ ಸತ್ಯಶೌರ್ಯಾದಿಗುಣಾನಾಮಾಕರಃ ಪರಃ ।
ಉಪಮಾನಮಶೇಷಾಣಾಂ ಸಾಧೂನಾಃ ಯಃ ಸದಾಽಭವತ್ ॥ ೧೫೬ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಪಂಚದಶೋಽಧ್ಯಾಯಃ

೧೫೫–೧೫೬. ಪಹ್ಲಾದನು ಸಮಸ್ತ ಪ್ರಾಣಿಗಳಲ್ಲಿಯೂ ಸಮಾನಭಾವದಿಂದ ಇದ್ದು ಲೋಕದಲ್ಲಿ ಜನರು ತನ್ನಲ್ಲಿಯೂ, ಮಕ್ಕಳಲ್ಲಿಯೂ ಯಾವ ಪ್ರೀತಿಯನ್ನಿಟ್ಟು ಕೊಂಡಿರುವರೋ ಅಂತಹ ಸ್ನೇಹಗುಣದಿಂದಿರುತ್ತಿದ್ದನು. ಆ ಪ್ರಹ್ಲಾದನು ಧರ್ಮಾತ್ಮನಾಗಿಯೂ ಸತ್ಯ ಶೌಚಾದಿ ಗುಣಗಳಿಗೆ ನೆಲೆಯಾಗಿಯೂ ಯಾವಾಗಲೂ ಸಮಸ್ತ ಸಜ್ಜನರಿಗೂ ಉಪಮಾನ ರೂಪನಾಗಿಯೂ ಇದ್ದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದಲ್ಲಿ ಪ್ರಥಮಾಂಶದಲ್ಲಿ

ಹದಿನೈದನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪ್ರಥಮಾಂಶೇ

ಷೋಡಶೋಽಧ್ಯಾಯಃ

॥ ಮೈತ್ರೇಯ ಉವಾಚ ॥

ಕಥಿತೋ ಭವತಾ ವಂಶೋ ಮಾನವಾನಾಂ ಮಹಾತ್ಮನಾಂ ।
ಕಾರಣಂ ಚಾಸ್ಯ ಜಗತೋ ವಿಷ್ಣುರೇವ ಸನಾತನಃ ॥ ೧ ॥

ಯತ್ತ್ವೇತದ್ಭಗವಾನಾಹ ಪ್ರಹ್ಲಾದಂ ದೈತ್ಯಸತ್ತಮಂ ।
ದದಾಹ ನಾಗ್ನಿರ್ನಾಸ್ತ್ರೈಶ್ಚ ಕ್ಷುಣ್ಣಸ್ತತ್ಯಾಜ ಜೀವಿತಂ ॥ ೨ ॥

ಜಗಾಮ ವಸುಧಾ ಕ್ಷೋಭಂ ಯತ್ರಾಬ್ಧಿಸಲಿಲೇ ಸ್ಥಿತೇ ।
ಪಾಶೈರ್ಬದ್ಧೇ ವಿಚಲತಿ ವಿಕ್ಷಿಪ್ತಾಂಗೈಃ ಸಮಾಹತಾ ॥ ೩ ॥

ಶೈಲೈರಾಕ್ರಾಂತದೇಹೋಽಪಿ ನ ಮಮಾರ ಚ ಯಃ ಪುರಾ ।
ತ್ವಯಾ ಚಾತೀವ ಮಾಹಾತ್ಮ್ಯಂ ಕಥಿತಂ ಯಸ್ಯ ಧೀಮತಃ ॥ ೪ ॥

ಹದಿನಾರನೆಯ ಅಧ್ಯಾಯವು

೧-೪ ಮೈತ್ರೇಯನು ಪರಾಶರ ಮಹರ್ಷಿಗಳಿಗೆ ' ಉತ್ತಾನಪಾದ, ಧ್ರುವ ಮುಂತಾದ ಸ್ವಾಯಂಭುವ ಮನುವಿನ ವಂಶವನ್ನೂ, ಈ ಜಗತ್ತಿಗೆ ಅನಾದಿಯಾದ ವಿಷ್ಣುವೇ ಕಾರಣನೆಂಬುದನ್ನೂ ಹೇಳಿದಿರಿ. ದೈತ್ಯಶ್ರೇಷ್ಠನಾದ ಪ್ರಹ್ಲಾದನನ್ನು ಅಗ್ನಿಯು ಸುಡಲಿಲ್ಲ. ಆಯುಧಗಳಿಂದ ಹೊಡೆದರೂ ಅವನು ಪ್ರಾಣ ಬಿಡಲಿಲ್ಲ. ಕೈಕಾಲುಗಳನ್ನು ಕಟ್ಟಿದ ಅವನು ಸಮುದ್ರದ ನೀರಿನಲ್ಲಿ ಚಲಿಸುತ್ತಿದ್ದರೆ ಭೂಮಿಯು ಚಲಿಸಿತು. ಬೆಟ್ಟಗಳನ್ನು ತಂದು ಅವನ ಮೇಲೆ ಹಾಕಿದರೂ ಅವನು ಸಾಯಲಿಲ್ಲ" ಎಂದು ಆ ಬುದ್ಧಿಶಾಲಿಯಾದ ಪ್ರಹ್ಲಾದನ ಮಹಿಮೆಯನ್ನು ನೀವೇ ಹೇಳಿದಿರಿ.

ತಸ್ಯ ಪ್ರಭಾವಮತುಲಂ ವಿಷ್ಣೋರ್ಭಕ್ತಿಮತೋ ಮುನೇ ।
ಶ್ರೋತುಮಿಚ್ಛಾಮಿ ಯಸ್ಯೈತಚ್ಚರಿತಂ ದೀಪ್ತತೇಜಸಃ ॥ ೫ ॥

ಕಿಂ ನಿಮಿತ್ತಮಸೌ ಶಸ್ತ್ರೈರ್ವಿಕ್ಷಿಪ್ತೋ ದಿತಿಜೈರ್ಮುನೇ ।
ಕಿಮರ್ಥಂ ಚಾಬ್ಧಿಸಲಿಲೇ ವಿಕ್ಷಿಪ್ತೋ ಧರ್ಮತತ್ಪರಃ ॥ ೬ ॥

ಆಕ್ರಾಂತಃ ಪರ್ವತೈಃ ಕಸ್ಮಾದ್ದಷ್ಟಶ್ಚೈವ ಮಹೋರಗೈಃ ।
ಕ್ಷಿಪ್ತಃ ಕಿಮದ್ರಿಶಿಖರಾತ್ಕಿಂ ವಾ ಪಾವಕಸಂಚಯೇ ॥ ೭ ॥

ದಿಗ್ದಂತಿನಾಂ ದಂತಭಾಗೈಃ ಸ ಚ ಕಸ್ಮಾನ್ನಿಪೀಡಿತಃ ।
ಸಂಶೋಷಕೋಽನಿಲಶ್ಚಾಸ್ಯ ಪ್ರಯುಕ್ತಃ ಕಿಂ ಮಹಾಸುರೈಃ ॥ ೮ ॥

ಕೃತ್ಯಾಂ ಚ ದೈತ್ಯಗುರವೋ ಯುಯುಜುಸ್ತತ್ರ ಕಿಂ ಮುನೇ ।
ಶಂಬರಶ್ಚಾಪಿ ಮಾಯಾನಾಂ ಸಹಸ್ರಂ ಕಿಂ ಪ್ರಯುಕ್ತವಾನ್ ॥ ೯ ॥

ಹಾಲಾಹಲಂ ವಿಷಮಹೋ ದೈತ್ಯಸೂದೈರ್ಮಹಾತ್ಮನಃ ।
ಕಸ್ಮಾದ್ದತ್ತಂ ವಿನಾಶಾಯ ಯಜ್ಜೀರ್ಣಂ ತೇನ ಧೀಮತಾ ॥ ೧೦ ॥

೫-೮. ಅವನಿಗೆ ಆ ಮಹಿಮೆಯು ಅಸಮಾನವಾದ ವಿಷ್ಣು ಭಕ್ತಿಯಿಂದ ಉಂಟಾಯಿತು. ವಿಶೇಷವಾದ ತೇಜಸ್ಸುಳ್ಳ ಅವನ ಚರಿತೆಯನ್ನು ಕೇಳಬೇಕೆಂದು ಬಯಸುವೆನು. ರಾಕ್ಷಸರು ಯಾವ ಕಾರಣದಿಂದ ಅವನನ್ನು ಹೊಡೆದರು? ಧಾರ್ಮಿಕನಾದ ಅವನನ್ನು ಸಮುದ್ರಕ್ಕೇಕೆ ಹಾಕಿದರು? ಪರ್ವತಗಳನ್ನೇಕೆ ಅವನ ಮೇಲೆ ಹಾಕಿದರು? ಹಾವುಗಳಿಂದೇಕೆ ಕಚ್ಚಿಸಿದರು? ಬೆಂಕಿಗೆ ಏಕೆ ಹಾಕಿದರು? ಪರ್ವತದ ಮೇಲಿನಿಂದ ಏಕೆ ತಳ್ಳಿದರು? ದಿಗ್ಗಜಗಳನ್ನು ಅವನ ಮೇಲೆ ಬಿಟ್ಟು, ಏಕೆ ಬಾಧೆ ಪಡಿಸಿದರು? ನಾಶಕರವಾದ ವಾಯುವನ್ನೇಕೆ ಪ್ರಯೋಗಿಸಿದರು?

೯-೧೧. ದೈತ್ಯರ ಗುರುಗಳು ಅಭಿಚಾರಿಕ ಕೃತ್ಯಗಳನ್ನು, ಶಂಬರಾಸುರನು ಸಾವಿರಾರು ಮಾಯೆಗಳನ್ನೂ ಏಕೆ ಪ್ರಯೋಗಿಸಿದರು? ದೈತ್ಯರ ಅಡಿಗೆಯವರು

ಏತತ್ಸರ್ವಂ ಮಹಾಭಾಗ ಪ್ರಹ್ಲಾದಸ್ಯ ಮಹಾತ್ಮನಃ ।
ಚರಿತಂ ಶ್ರೋತುಮಿಚ್ಛಾಮಿ ಮಹಾಮಾಹಾತ್ಮ್ಯಸೂಚಕಂ ॥ ೧೧ ॥

ನ ಹಿ ಕೌತೂಹಲಂ ತತ್ರ ಯದ್ದೈತ್ಯೈರ್ನಹತೋ ಹಿ ಸಃ ।
ಅನನ್ಯಮನಸೋ ವಿಷ್ಣೌ ಕಃ ಸಮರ್ಥೋ ನಿಪಾತನೇ ॥ ೧೨ ॥

ತಸ್ಮಿನ್ ಧರ್ಮಪರೇ ನಿತ್ಯಂ ಕೇಶವಾರಾಧನೋದ್ಯತೇ ।
ಸ್ವವಂಶಪ್ರಭವೈರ್ದೈತ್ಯೈಃ ಕರ್ತುಂ ದ್ವೇಷೋಽತಿದುಷ್ಕರಃ ॥ ೧೩ ॥

ಧರ್ಮಾತ್ಮನಿ ಮಹಾಭಾಗೇ ವಿಷ್ಣುಭಕ್ತೇ ವಿಮತ್ಸರೇ ।
ದೈತೇಯೈಃ ಪ್ರಹತಂ ಕಸ್ಮಾತ್ತನ್ಮಮಾಖ್ಯಾತುಮರ್ಹಸಿ ॥ ೧೪ ॥

ಹಾಲಾಹಲವೆಂಬ ಕ್ರೂರ ವಿಷವನ್ನು ಅವನಿಗೇಕೆ ಕುಡಿಸಿದರು ? ವಿಶೇಷಾರ್ಥವನ್ನು ಸೂಚಿಸುವ ಮಹಾಮಹಿಮನಾದ ಪ್ರಹ್ಲಾದನ ಈ ಸಮಸ್ತ ಚರಿತ್ರೆಯನ್ನೂ ಕೇಳಬೇಕೆಂದು ಬಯಸುವೆನು.

೧೨–೧೪. ದೈತ್ಯರು ಅವನನ್ನು ಕೊಲ್ಲಲಾಗಲಿಲ್ಲವೆಂಬುದು ಆಶ್ಚರ್ಯವಾದ ವಿಷಯವಲ್ಲ. ವಿಷ್ಣುವಿನಲ್ಲಿ ಏಕಾಗ್ರಚಿತ್ತವುಳ್ಳವನನ್ನು ಕೊಲ್ಲಲು ಯಾರಿಗೆ ಸಾಮರ್ಥ್ಯವಿರುವುದು ? ಪ್ರಹ್ಲಾದನು ಧರ್ಮಾಸಕ್ತನಾಗಿ ಪ್ರತಿದಿನವೂ ವಿಷ್ಣುವನ್ನು ಪೂಜಿಸುತ್ತಿರಲು ಅದೇ ವಂಶದಲ್ಲಿ ಹುಟ್ಟಿದ ದೈತ್ಯರು ದ್ವೇಷಮಾಡಬಾರದ ಹೀಗಿರುವಲ್ಲಿ ಧರ್ಮಾತ್ಮನೂ, ಮಹಾಮಹಿಮನೂ, ವಿಷ್ಣುಭಕ್ತನೂ, ಮಾತ್ಸರ್ಯವಿಲ್ಲದವನೂ ಆದ ಪ್ರಹ್ಲಾದನನ್ನು ದೈತ್ಯರು ಏಕೆ ಹೊಡೆದರು ? ಅದನ್ನು ನನಗೆ ಹೇಳಬೇಕು.

ಪ್ರಹರಂತಿ ಮಹಾತ್ಮಾನೋ ವಿಪಕ್ಷಾ ಅಪಿ ನೇದೃಶೇ ।
ಗುಣೈಸ್ಸಮನ್ವಿತೇ ಸಾಧೌ ಕಿಂ ಪುನರ್ಯಃ ಸ್ವಪಕ್ಷಜಃ ॥ ೧೫ ॥

ತದೇತತ್ಕಥ್ಯತಾಂ ಸರ್ವಂ ವಿಸ್ತರಾನ್ಮುನಿಪುಂಗವ ।
ದೈತ್ಯೇಶ್ವರಸ್ಯ ಚರಿತಂ ಶ್ರೋತುಮಿಚ್ಛಾಮ್ಯಶೇಷತಃ ॥ ೧೬ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ಷೋಡಶೋಽಧ್ಯಾಯಃ

೧೫-೧೬. ಮಹಾತ್ಮರಾದವರು ಇಂತಹ ಸದ್ಗುಣಗಳಿಂದ ಕೂಡಿದ ಸಾಧುವಾದ ಮನುಷ್ಯನು ಶತ್ರುಪಕ್ಷದಲ್ಲಿದ್ದರೂ ಅವನನ್ನು ಹೊಡೆಯುವುದಿಲ್ಲ ಎಂದ ಮೇಲೆ ಮುನಿಶ್ರೇಷ್ಠನೇ ದೈತ್ಯೇಶ್ವರನಾದ ಪ್ರಹ್ಲಾದನ ಚರಿತ್ರೆಯೆಲ್ಲವನ್ನೂ ವಿಸ್ತಾರವಾಗಿ ಹೇಳಬೇಕು ಎಂದು ಪ್ರಶ್ನೆ ಮಾಡಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಹದಿನಾರನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

॥ ಸಪ್ತದಶೋಽಧ್ಯಾಯಃ ॥

॥ ಶ್ರೀ ಪರಾಶರ ಉವಾಚ ॥

ಮೈತ್ರೇಯ ಶ್ರೂಯತಾಂ ಸಮ್ಯಕ್ಚರಿತಂ ತಸ್ಯ ಧೀಮತಃ ।
ಪ್ರಹ್ಲಾದಸ್ಯ ಸದೋದಾರಚರಿತಸ್ಯ ಮಹಾತ್ಮನಃ ॥ ೧ ॥

ದಿತೇಃ ಪುತ್ರೋ ಮಹಾವೀರ್ಯೋ ಹಿರಣ್ಯಕಶಿಪುಃ ಪುರಾ ।
ತ್ರೈಲೋಕ್ಯಂ ವಶಮಾನಿನ್ಯೇ ಬ್ರಹ್ಮಣೋ ವರದರ್ಪಿತಃ ॥ ೨ ॥

ಇಂದ್ರತ್ವಮಕರೋದ್ದೈತ್ಯಸ್ಸ ಚಾಸೀತ್ಸವಿತಾ ಸ್ವಯಂ ।
ವಾಯುರಗ್ನಿರಪಾಂ ನಾಥಃ ಸೋಮಶ್ಚಾಸೀನ್ಮಹಾಸುರಃ ॥ ೩ ॥

ಹದಿನೇಳನೆಯ ಅಧ್ಯಾಯವು

೧-೨. ಮೈತ್ರೇಯನೇ ! ಉದಾರ ಚರಿತ್ರನೂ, ಬುದ್ಧಿವಂತನೂ, ಮಹಾ ಮಹಿಮನೂ ಆದ ಪ್ರಹ್ಲಾದನ ಚರಿತ್ರೆಯನ್ನು ಹೇಳುವೆನು ಕೇಳು. ಹಿಂದೆ ದಿತಿಯ ಮಗನಾದ ಹಿರಣ್ಯಕಶಿಪುವು ಬ್ರಹ್ಮನ ವರದಿಂದ ಕೊಬ್ಬಿದವನಾಗಿ ಮಹಾಪರಾಕ್ರಮ ದಿಂದ ಮೂರು ಲೋಕವನ್ನೂ ತನ್ನಧೀನ ಮಾಡಿಕೊಂಡನು.

೩-೫ ಆ ದೈತ್ಯನೇ ದೇವೇಂದ್ರನಾಗಿ ಸೂರ್ಯನೂ ವಾಯು ಅಗ್ನಿ ವರುಣ ಕುಬೇರ ಯಮ ಮುಂತಾದ ದಿಕ್ಪಾಲಕನೂ ತಾನೇ ಆಗಿ ಸಮಸ್ತ ಯಜ್ಞಭಾಗ

ಧನಾನಾಮಧಿಪಸ್ಸೋಽಭೂತ್ಸ ಏವಾಸೀತ್ಸ್ವಯಂ ಯಮಃ ।
ಯಜ್ಞಭಾಗಾನಶೇಷಾಂಸ್ತು ಸ ಸ್ವಯಂ ಬುಭುಜೇಽಸುರಃ ॥ ೪ ॥

ದೇವಾಸ್ಸ್ವರ್ಗಂ ಪರಿತ್ಯಜ್ಯ ತತ್ರಾಸಾನ್ಮುನಿಸತ್ತಮ ।
ವಿಚೇರುರವನೌ ಸರ್ವೇ ಬಿಭ್ರಾಣಾ ಮಾನುಷೀಂ ತನುಂ ॥ ೫ ॥

ಜಿತ್ವಾ ತ್ರಿಭುವನಂ ಸರ್ವಂ ತ್ರೈಲೋಕ್ಯೈಶ್ವರ್ಯದರ್ಪಿತಃ ।
ಉದ್ಗೀಯಮಾನೋ ಗಂಧರ್ವೈರ್ಬುಭುಜೇ ವಿಷಯಾನ್ಪ್ರಿಯಾನ್ ॥ ೬ ॥

ಪಾನಾಸಕ್ತಂ ಮಹಾತ್ಮಾನಂ ಹಿರಣ್ಯಕಶಿಪುಂ ತದಾ ।
ಉಪಾಸಾಂಚಕ್ರಿರೇ ಸರ್ವೇ ಸಿದ್ಧಗಂಧರ್ವಪನ್ನಗಾಃ ॥ ೭ ॥

ಅವಾದಯನ್ಜಗುಶ್ಚಾನ್ಯೇ ಜಯಶಬ್ದಾಂಸ್ತಥಾ ಪರೇ ।
ದೈತ್ಯೇಶ್ವರಸ್ಯ ಪುರತಶ್ಚಕ್ರುಸ್ಸಿದ್ಧಾ ಮುದಾನ್ವಿತಾಃ ॥ ೮ ॥

ತತ್ರ ಪ್ರನೃತ್ತಾಪ್ಸರಸಿ ಸ್ಫಟಿಕಾಭ್ರಮಯೇಽಸುರಃ ।
ಪಪೌ ಪಾನಂ ಮುದಾಯುಕ್ತಃ ಪ್ರಾಸಾದೇಸು ಮನೋಹರೇ ॥ ೯ ॥

ಗಳನ್ನೂ ತಾನೇ ಅನುಭವಿಸುತ್ತಿದ್ದನು. ಅವನ ಭಯದಿಂದ ದೇವತೆಗಳು ಸ್ವರ್ಗವನ್ನು ಬಿಟ್ಟು ಮನುಷ್ಯ ಶರೀರವನ್ನು ಧರಿಸಿ ಭೂಮಿಯಲ್ಲಿ ತಿರುಗುತ್ತಿದ್ದರು.

೬–೯. ಹಿರಣ್ಯಕಶಿಪುವು ಮೂರು ಲೋಕವನ್ನೂ ಜಯಿಸಿ ಐಶ್ವರ್ಯ ದರ್ಪದಿಂದ ಗಂಧರ್ವರ ಗಾನವನ್ನು ಕೇಳುತ್ತ ತನಗೆ ಬೇಕಾದ ವಿಷಯಗಳನ್ನು ಅನುಭವಿಸುತ್ತಿದ್ದನು. ಸಮಸ್ತ ಸಿದ್ಧರೂ ಗಂಧರ್ವರೂ ಪನ್ನಗರೂ ಪಾನಾಸಕ್ತನಾದ ಅವನನ್ನು ಸೇವಿಸುತ್ತಿದ್ದರು. ಆ ದೈತ್ಯರಾಜನ ಮುಂದೆ ಸಿದ್ಧರು ಸಂತೋಷದಿಂದ ವಾದ್ಯಗಳ ಧ್ವನಿಯನ್ನು ಮಾಡುತ್ತ ಗಾನ ಮಾಡಿದರು. ಮತ್ತೆ ಕೆಲವರು ಜಯ ಧ್ವನಿಯನ್ನು ಮಾಡುತ್ತಿದ್ದರು. ಆ ಅಸುರರು ಸ್ಫಟಿಕ ಶಿಲೆಯಿಂದಲೂ ಅಭ್ರಕಶಿಲೆಯಿಂದಲೂ ಕಟ್ಟಿದ ಸುಂದರವಾದ ಉಪ್ಪರಿಗೆಯಲ್ಲಿ ಅಪ್ಸರ ಸ್ತ್ರೀಯರು ನರ್ತನ ಮಾಡುತ್ತಿರಲು ರಕ್ತಪಾನವೇ ಮುಂತಾದ ಪಾನಗಳನ್ನು ಮಾಡುತ್ತಿದ್ದನು.

ತಸ್ಯ ಪುತ್ರೋ ಮಹಾಭಾಗಃ ಪ್ರಹ್ಲಾದೋ ನಾಮ ನಾಮತಃ ।
ಪಪಾಠ ಬಾಲಪಾಠ್ಯಾನಿ ಗುರುಗೇಹಂ ಗತೋಽರ್ಭಕಃ ॥ ೧೦ ॥

ಏಕದಾ ತು ಸ ಧರ್ಮಾತ್ಮಾ ಜಗಾಮ ಗುರುಣಾ ಸಹ ।
ಪಾನಾಸಕ್ತಸ್ಯ ಪುರತಃ ಪಿತುರ್ದೈತ್ಯಸ್ಯ ತಸ್ಯ ತದಾ ॥ ೧೧ ॥

ಪಾದಪ್ರಣಾಮಾವನತಂ ತಮುತ್ಥಾಪ್ಯ ಪಿತಾ ಸುತಂ ।
ಹಿರಣ್ಯಕಶಿಪುಃ ಪ್ರಾಹ ಪ್ರಹ್ಲಾದಮಮಿತೌಜಸಂ ॥ ೧೨ ॥

ಪಠ್ಯತಾಂ ಭವತಾ ವತ್ಸ ಸಾರಭೂತಂ ಸುಭಾಷಿತಂ ।
ಕಾಲೇನೈತಾವತಾ ಯತ್ತೇ ಸದೋದ್ಯುಕ್ತೇನ ಶಿಕ್ಷಿತಂ ॥ ೧೩ ॥

॥ ಪ್ರಹ್ಲಾದ ಉವಾಚ ॥

ಶ್ರೂಯತಾಂ ತಾತ ವಕ್ಷ್ಯಾಮಿ ಸಾರಭೂತಂ ತವಾಜ್ಞಯಾ ।
ಸಮಾಹಿತಮನಾ ಭೂತ್ವಾ ಯನ್ಮೇ ಚೇತಸ್ಯವಸ್ಥಿತಂ ॥ ೧೪ ॥

೧೦-೧೩. ಆ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನು ಗುರುವಿನ ಮನೆಯಲ್ಲಿ ಬಾಲ್ಯಪಾಠಗಳನ್ನು ಕಲಿಯುತ್ತಿದ್ದನು. ಒಂದಾನೊಂದು ದಿನ ಧರ್ಮಾತ್ಮನಾದ ಆ ಬಾಲಕನು ಗುರುವಿನೊಡನೆ ಪಾನಾಸಕ್ತನೂ, ದೈತ್ಯರಾಜನೂ ಆದ ತನ್ನ ತಂದೆಯ ಸಮೀಪಕ್ಕೆ ಹೋದನು. ತಂದೆಯು ತನ್ನ ಕಾಲಿಗೆ ನಮಸ್ಕಾರ ಮಾಡಿದ ಮಗನನ್ನು ಎತ್ತಿ ಮಹಾ ತೇಜಸ್ವಿಯಾದ ಅವನನ್ನು ಕುರಿತು ಮಗನೇ ನೀನು ಸಾರವಾದ ನೀತಿಶಾಸ್ತ್ರವನ್ನು ಕಲಿ. ಇಷ್ಟು ಕಾಲದವರೆಗೆ ನೀನು ಕಲಿತಿರುವುದೇನು ? ಎಂದು ಪ್ರಶ್ನೆ ಮಾಡಿದನು.

೧೪-೧೫ ಪ್ರಹ್ಲಾದನು ' ತಂದೆಯೇ ನಿನ್ನಪ್ಪಣೆಯಿಂದ ಸಾರವಾದ ಮಾತನ್ನು ಹೇಳುವೆನು. ನನ್ನ ಮನದ ಅಭಿಪ್ರಾಯವನ್ನು ಏಕಾಗ್ರಚಿತ್ತದಿಂದ ಕೇಳು. ಆದಿ

ಅನಾದಿಮಧ್ಯಾಂತಮಜಮವೃದ್ಧಿಕ್ಷಯಮಚ್ಯುತಂ ।
ಪ್ರಣತೋಽಸ್ಮಿ ಸದಾನಂದಂ ಸರ್ವಕಾರಣಕಾರಣಂ ॥ ೧೫ ॥

॥ ಶ್ರೀ ಪರಾಶರ ಉವಾಚ ॥

ಏತನ್ನಿಶಮ್ಯ ದೈತ್ಯೇಂದ್ರಃ ಕೋಪಸಂರಕ್ತಲೋಚನಃ ।
ವಿಲೋಕ್ಯ ತದ್ಗುರುಂ ಪ್ರಾಹ ಸ್ಫುರಿತಾಧರಪಲ್ಲವಃ ॥ ೧೬ ॥

॥ ಹಿರಣ್ಯಕಶಿಪುರುವಾಚ ॥

ಬ್ರಹ್ಮಬಂಧೋ ಕಿಮೇತತ್ತೇ ವಿಪಕ್ಷಸ್ತುತಿಸಂಹಿತಂ ।
ಅಸಾರಂ ಗ್ರಾಹಿತೋ ಬಾಲೋ ಮಾಮವಜ್ಞಾಯ ದುರ್ಮತೇ ॥ ೧೭ ॥

॥ ಗುರುರುವಾಚ ॥

ದೈತ್ಯೇಶ್ವರ ನ ಕೋಪಸ್ಯ ವಶಮಾಗಂತುಮರ್ಹಸಿ ।
ಮಮೋಪದೇಶಜನಿತಂ ನಾಯಂ ವದತಿ ತೇ ಸುತಃ ॥ ೧೮ ॥

ಮಧ್ಯಾಂತಗಳೂ, ವೃದ್ಧಿ, ಕ್ಷಯಗಳೂ ಇಲ್ಲದ ನಾಶರಹಿತನೂ ಆನಂದಸ್ವರೂಪನೂ ಸರ್ವಕಾರಣನೂ ಆದ ವಿಷ್ಣುವಿಗೆ ನಮಸ್ಕಾರವನ್ನು ಮಾಡುವೆನು.' ಎಂದನು.

೧೬-೧೭. ಈ ಮಾತನ್ನು ಕೇಳಿ ಹಿರಣ್ಯಕಶಿಪುವು ಕೋಪದಿಂದ ಕಣ್ಣನ್ನು ಕೆಂಪಗೆ ಮಾಡಿಕೊಂಡು ತುಟಿಗಳನ್ನು ನಡುಗಿಸುತ್ತ ಅವನ ಗುರುವನ್ನು ಕುರಿತು "ದುರ್ಬುದ್ಧಿಯಾದ ನೀಚ ಬ್ರಾಹ್ಮಣನೇ ನನ್ನನ್ನು ಅಲಕ್ಷ್ಯಮಾಡಿ ಶತ್ರುವನ್ನು ಸ್ತೋತ್ರಮಾಡುವಂತೆ ಅಸಾರವಾದ ತಿಳಿವಳಿಕೆಯನ್ನುಂಟುಮಾಡಿರುವೆ." ಎಂದನು.

೧೮. ಗುರುವು 'ದೈತ್ಯರಾಜನೇ ಕೋಪಮಾಡಬೇಡ. ನಿನ್ನ ಮಗನು ನಾನು ಉಪದೇಶಮಾಡಿದುದನ್ನು ಹೇಳುವುದಿಲ್ಲ.' ಎಂದನು.

॥ ಹಿರಣ್ಯಕಶಿಪುರುವಾಚ ॥

ಅನುಶಿಷ್ಟೋಽಸಿ ಕೇನೇದೃಗ್ವತ್ಸ ಪ್ರಹ್ಲಾದ ಕಥ್ಯತಾಂ ।
ಮಯೋಪದಿಷ್ಟಂ ನೇತ್ಯೇಷ ಪ್ರಬ್ರವೀತಿ ಗುರುಸ್ತವ ॥ ೧೯ ॥

॥ ಪ್ರಹ್ಲಾದ ಉವಾಚ ॥

ಶಾಸ್ತಾ ವಿಷ್ಣುರಶೇಷಸ್ಯ ಜಗತೋ ಯೋ ಹೃದಿ ಸ್ಥಿತಃ ।
ತಮೃತೇ ಪರಮಾತ್ಮಾನಂ ತಾತ ಕಃ ಕೇನ ಶಾಸ್ಯತೇ ॥ ೨೦ ॥

॥ ಹಿರಣ್ಯಕಶಿಪುರುವಾಚ ॥

ಕೋಽಯಂ ವಿಷ್ಣುಸ್ಸುದುರ್ಬುದ್ಧೇ ಯಂ ಬ್ರವೀಷಿ ಪುನಃ ಪುನಃ ।
ಜಗತಾಮೀಶ್ವರಸ್ಯೇಹ ಪುರತಃ ಪ್ರಸಭಂ ಮಮ ॥ ೨೧ ॥

---

೧೯. ಹಿರಣ್ಯಕಶಿಪುವು "ವತ್ಸ ಪ್ರಹ್ಲಾದನೇ ನಿನಗೆ ಇದನ್ನು ಯಾರು ಹೇಳಿಕೊಟ್ಟರು? ಹೇಳು ನಿನ್ನ ಗುರುವು ನಾನು ಉಪದೇಶಮಾಡಿದುದಲ್ಲವೆಂದು ಹೇಳುತ್ತಾನೆ"

೨೦. ಪ್ರಹ್ಲಾದನು ತಂದೆಯೇ ಸಮಸ್ತ ಜಗತ್ತನ್ನೂ ಪಾಲಿಸುವ ವಿಷ್ಣುವು ಎಲ್ಲರ ಮನಸ್ಸಿನಲ್ಲಿಯೂ ಇರುವನು. ಪರಮಾತ್ಮನಾದ ಅವನನ್ನು ಬಿಟ್ಟು ಮತ್ತಾವನು ಯಾವನಿಗೆ ಆಜ್ಞೆ ಮಾಡುವನು" ಎಂದನು.

೨೧. ಹಿರಣ್ಯಕಶಿಪುವು ದುರ್ಬುದ್ಧಿಯೇ ಲೋಕಕ್ಕೆಲ್ಲ ಸ್ವಾಮಿಯಾದ ನನ್ನೆದುರಿಗೆ ಸಂದೇಹವಿಲ್ಲದೆ ವಿಷ್ಣುವನ್ನು ಪುನಃ ಪುನಃ ಹೊಗಳುವ ಅವನಾರು" ಎಂದು ಕೇಳಿದನು.

॥ ಪ್ರಹ್ಲಾದೋವಾಚ ॥

ನ ಶಬ್ದಗೋಚರಂ ಯಸ್ಯ ಯೋಗಿಧ್ಯೇಯಂ ಪರಂ ಪದಂ ।
ಯತೋ ಯಶ್ಚ ಸ್ವಯಂ ವಿಶ್ವಂ ಸ ವಿಷ್ಣುಃ ಪರಮೇಶ್ವರಃ ॥ ೨೨ ॥

॥ ಹಿರಣ್ಯಕಶಿಪುರುವಾಚ ॥

ಪರಮೇಶ್ವರ ಸಂಜ್ಞೋಽಜ್ಞ ಕಿಮನ್ಯೋ ಮಯ್ಯವಸ್ಥಿತೇ ।
ತಥಾಪ್ಯ ಮರ್ತುಕಾಮಸ್ತ್ವಂ ಪ್ರಬ್ರವೀಷಿ ಪುನಃ ಪುನಃ ॥ ೨೩ ॥

॥ ಪ್ರಹ್ಲಾದೋವಾಚ ॥

ನ ಕೇವಲಂ ತಾತ ಮಮ ಪ್ರಜಾನಾಂ
ಸ ಬ್ರಹ್ಮಭೂತೋ ಭವತಶ್ಚ ವಿಷ್ಣುಃ ।
ಧಾತಾ ವಿಧಾತಾ ಪರಮೇಶ್ವರಶ್ಚ
ಪ್ರಸೀದ ಕೋಪಂ ಕುರುಷೇ ಕಿಮರ್ಥಂ ॥ ೨೪ ॥

---

೨೨. ಪ್ರಹ್ಲಾದನು "ವಿಷ್ಣುವಿನ ಸ್ಥಿತಿಯು ಶಬ್ದಗಳಿಂದ ತಿಳಿಯತಕ್ಕುದಲ್ಲ. ಯೋಗಿಗಳು ಆ ಪರಮಪದವನ್ನು ಧ್ಯಾನಿಸುತ್ತಿರುವರು. ಈ ಜಗತ್ತು ಅವನಿಂದಲೇ ಹುಟ್ಟಿರುವುದು. ತಾನೇ ಜಗದ್ರೂಪನಾಗಿಯೂ ಪರಮೇಶ್ವರನಾಗಿಯೂ ಇರುವನು" ಎಂದನು.

೨೩. ಹಿರಣ್ಯಕಶಿಪುವು "ಮೂಢನೇ ಪರಮೇಶ್ವರನಾದ ನಾನಿರುವಲ್ಲಿ ಮತ್ತೊಬ್ಬ ಪರಮೇಶ್ವರನಾರು? ನೀನು ಸಾಯಬೇಕೆಂಬ ಆಸೆಯಿಂದ ಪುನಃ ಪುನಃ ಈ ಮಾತನ್ನು ಹೇಳುತ್ತಿರುವೆ" ಎಂದನು.

೨೪. ಪ್ರಹ್ಲಾದನು "ತಂದೆಯೇ ಕೋಪವನ್ನು ಮಾಡಬೇಡ ಶಾಂತನಾಗು. ಪ್ರತಬ್ರಹ್ಮ ಸ್ವರೂಪನಾದ ವಿಷ್ಣುವು ನನಗೊಬ್ಬನಿಗೇ ಅಲ್ಲ. ಸಮಸ್ತ ಪ್ರಜೆಗಳಿಗೂ ನಿನಗೂ ಆತ್ಮಸ್ವರೂಪನಾಗಿರುವನು. ಅವನೇ ಸಮಸ್ತವನ್ನೂ ಧರಿಸಿ ಅವುಗಳೆಲ್ಲವನ್ನೂ ಸೃಷ್ಟಿಸಿ ಪರಮೇಶ್ವರನಾಗಿರುವನು.

॥ ಹಿರಣ್ಯಕಶಿಪುರುವಾಚ ॥

ಪ್ರವಿಷ್ಟಃ ಕೋಽಸ್ಯ ಹೃದಯೇ ದುರ್ಬುದ್ಧೇರತಿಪಾಪಕೃತ್ ।
ಯೇನೇದೃಶಾನ್ಯಸಾಧೂನಿ ವದತ್ಯಾವಿಷ್ಟಮಾನಸಃ ॥ ೨೫ ॥

॥ ಪ್ರಹ್ಲಾದ ಉವಾಚ ॥

ನ ಕೇವಲಂ ಮದ್ಧೃದಯಂ ಸ ವಿಷ್ಣು-
ರಾಕ್ರಮ್ಯ ಲೋಕಾನಖಿಲಾನವಸ್ಥಿತಃ ।
ಸ ಮಾಂ ತ್ವದಾದೀಂಶ್ಚ ಪಿತಃ ಸಮಸ್ತಾ-
ನ್ಸಮಸ್ತಚೇಷ್ಟಾಸು ಯುನಕ್ತಿ ಸರ್ವಗಃ ॥ ೨೬ ॥

॥ ಹಿರಣ್ಯಕಶಿಪುರುವಾಚ ॥

ನಿಷ್ಕ್ರಾಮ್ಯತಾಮಯಂ ಪಾಪಃ ಶಾಸ್ಯತಾಂ ಚ ಗುರೋರ್ಗೃಹೇ ।
ಯೋಜಿತೋ ದುರ್ಮತಿಃ ಕೇನ ವಿಪಕ್ಷವಿಷಯಸ್ತುತೌ ॥ ೨೭ ॥

---

೨೫. ಹಿರಣ್ಯಕಶಿಪುವು "ದುರ್ಬುದ್ಧಿಯಾದ ಇವನ ಮನಸ್ಸಿನಲ್ಲಿ ಯಾವನೋ ಪ್ರವೇಶಮಾಡಿರುವನು. ಆದುದರಿಂದಲೇ ಆವೇಶ ಬಂದವನಾಗಿ ಅಯೋಗ್ಯವಾದ ಮಾತುಗಳನ್ನಾಡುತ್ತಿರುವನು" ಎಂದನು.

೨೬. ಪ್ರಹ್ಲಾದನು "ವಿಷ್ಣುವು ನನ್ನೊಬ್ಬನ ಮನಸ್ಸಿನಲ್ಲಿ ಮಾತ್ರವಲ್ಲ. ಸಮಸ್ತ ಲೋಕವನ್ನೂ ಆವರಿಸಿರುವನು. ತಂದೆಯೇ ಅವನು ನನ್ನಲ್ಲಿಯೂ ನೀನೇ ಮೊದಲಾದ ಸಮಸ್ತ ಪ್ರಾಣಿಗಳಲ್ಲಿಯೂ ಇದ್ದುಕೊಂಡು ಎಲ್ಲರೂ ಕಾರ್ಯಗಳನ್ನು ಮಾಡುವಂತೆ ಪ್ರೇರಿಸುತ್ತಿರುವನು' ಎಂದನು.

೨೭. ಹಿರಣ್ಯಕಶಿಪುವು 'ಈ ದುಷ್ಟನನ್ನು ಹೊರಕ್ಕೆ ಕಳುಹಿಸಿ ಗುರುವಿನ ಮನೆಯಲ್ಲಿ ದಂಡನೆಯನ್ನು ಮಾಡಿ ಈ ದುರ್ಬುದ್ಧಿಯು ನನ್ನ ಶತ್ರುವಾದ ದೇವತೆಗಳ ಅಧಿಪತಿಯಾದ ವಿಷ್ಣುವನ್ನು ಸ್ತೋತ್ರ ಮಾಡುವಂತೆ ಯಾವನು ಮಾಡಿರುವನು?' ಎಂದನು.

॥ ಶ್ರೀ ಪರಾಶರಃ ॥

ಇತ್ಯುಕ್ತಸ್ಸ ತದಾ ದೈತ್ಯೈರ್ನೀತೋ ಗುರುಗೃಹಂ ಪುನಃ ।
ಜಗ್ರಾಹ ವಿದ್ಯಾಮನಿಶಂ ಗುರುಶುಶ್ರೂಷಣೇ ರತಃ ॥ ೨೮ ॥

ಕಾಲೇಽತೀತೇಽತಿಮಹತಿ ಪ್ರಹ್ಲಾದಮಸುರೇಶ್ವರಃ ।
ಸಮಾಹೂಯಾಬ್ರವೀದ್ಗಾಥಾ ಕಾಚಿತ್ಪುತ್ರಕ ಗೀಯತಾಂ ॥ ೨೯ ॥

॥ ಪ್ರಹ್ಲಾದೋವಾಚ ॥

ಯತಃ ಪ್ರಧಾನಪುರುಷೌ ಯತಶ್ಚೈತಚ್ಚರಾಚರಂ ।
ಕಾರಣಂ ಸಕಲಸ್ಯಾಸ್ಯ ಸ ನೋ ವಿಷ್ಣುಃ ಪ್ರಸೀದತು ॥ ೩೦ ॥

॥ ಹಿರಣ್ಯಕಶಿಪುರುವಾಚ ॥

ದುರಾತ್ಮಾ ವಧ್ಯತಾಮೇಷ ನಾನೇನಾರ್ಥೋಽಸ್ತಿ ಜೀವತಾ ।
ಸ್ವಪಕ್ಷಹಾನಿಕರ್ತೃತ್ವಾದ್ಯಃ ಕುಲಾಂಗಾರತಾಂ ಗತಃ ॥ ೩೧ ॥

೨೮-೨೯. ಹೀಗೆ ಹೇಳಿದ ಮೇಲೆ ದೈತ್ಯರು ಪ್ರಹ್ಲಾದನನ್ನು ಗುರುವಿನ ಮನೆಗೆ ಕರೆದುಕೊಂಡು ಹೋದರು. ಪ್ರಹ್ಲಾದನು ಗುರುಸೇವೆಯನ್ನು ಮಾಡುತ್ತ ವಿದ್ಯಾಭ್ಯಾಸವನ್ನು ಮಾಡುತ್ತಿದ್ದನು. ಬಹಳ ಕಾಲವು ಕಳೆದಮೇಲೆ ರಾಕ್ಷಸೇಶ್ವರನು ಪ್ರಹ್ಲಾದನನ್ನು ಕರೆಸಿ ಮಗನೇ ಯಾವುದಾದರೂ ಗದ್ಯ ಪದ್ಯಾದಿಗಳನ್ನು ಗಾನವಾಗಿ ಹೇಳು ?' ಎಂದನು.

೩೦. ಪ್ರಹ್ಲಾದನು ಯಾವ ತತ್ತ್ವದಿಂದ ಪ್ರಕೃತಿ ಪುರುಷರೂ ಈ ಚರಾಚರ ಪ್ರಪಂಚವೂ ಹುಟ್ಟಿರುವುದೋ ಇವುಗಳಿಗೆಲ್ಲ ಕಾರಣರೂಪನಾದ ಆ ವಿಷ್ಣುವು ನಮಗೆ ಪ್ರಸನ್ನನಾಗಲಿ ' ಎಂದನು.

೩೧. ಹಿರಣ್ಯಕಶಿಪುವು ' ಈ ದುರಾತ್ಮನನ್ನು ಕೊಲ್ಲಿರಿ, ಇವನು ಬದುಕಿದುದರಿಂದ ಪ್ರಯೋಜನವಿಲ್ಲ. ನಮ್ಮ ದೈತ್ಯಪಕ್ಷದವರಿಗೆ ನಾಶವನ್ನುಂಟುಮಾಡುವವನಾದುದರಿಂದ ಇವನು ವಂಶಕ್ಕೆ ಅಗ್ನಿಸ್ವರೂಪನಾಗಿರುವನು ' ಎಂದನು.

॥ ಶ್ರೀ ಪರಾಶರ ಉವಾಚ ॥

ಇತ್ಯಾಜ್ಞಪ್ತಾಸ್ತತಸ್ತೇನ ಪ್ರಗೃಹೀತಮಹಾಯುಧಾಃ ।
ಉದ್ಯತಾಸ್ತಸ್ಯ ನಾಶಾಯ ದೈತ್ಯಾಶ್ಶತಸಹಸ್ರಶಃ ॥ ೩೨ ॥

॥ ಪ್ರಹ್ಲಾದೋವಾಚ ॥

ವಿಷ್ಣುಶ್ಶಸ್ತ್ರೇಷು ಯುಷ್ಮಾಸು ಮಯಿ ಚಾಸೌ ಯಥಾಸ್ಥಿತಃ ।
ದೈತೇಯಾಸ್ತೇನ ಸತ್ಯೇನ ಮಾಕ್ರಾಮಂತ್ವಾಯುಧಾನಿ ವಃ ॥ ೩೩ ॥

॥ ಶ್ರೀ ಪರಾಶರ ಉವಾಚ ॥

ತತಸ್ತೈಶ್ಶತಶೋ ದೈತ್ಯೈಶ್ಶಸ್ತ್ರೌಘೈರಾಹತೋಽಪಿ ಸಃ ।
ನಾವಾಪ ವೇದನಾಮಲ್ಪಾಮಭೂಚ್ಚೈವ ಪುನರ್ನವಃ ॥ ೩೪ ॥

॥ ಹಿರಣ್ಯಕಶಿಪುರುವಾಚ ॥

ದುರ್ಬುದ್ಧೇ ವಿನಿವರ್ತಸ್ವ ವೈರಿಪಕ್ಷಸ್ತವಾದತಃ ।
ಅಭಯಂ ತೇ ಪ್ರಯಚ್ಛಾಮಿ ಮಾತಿಮೂಢಮತಿರ್ಭವ ॥ ೩೫ ॥

---

೩೨. ದೈತ್ಯರಾಜನ ಈ ಆಜ್ಞೆಯನ್ನು ಪಡೆದ ಸಾವಿರಾರು ದೈತ್ಯರು ಕ್ರೂರವಾದ ಆಯುಧಗಳನ್ನು ಹಿಡಿದು ಅವನನ್ನು ಕೊಲ್ಲುವುದಕ್ಕೆ ಪ್ರಯತ್ನಪಟ್ಟರು.

೩೩. ಪ್ರಹ್ಲಾದನು 'ದೈತ್ಯರೇ ವಿಷ್ಣುವು ನಿಮ್ಮಲ್ಲಿಯೂ ನಿಮ್ಮ ಶಸ್ತ್ರಗಳಲ್ಲಿಯೂ ನನ್ನಲ್ಲಿಯೂ ಇರುವನು. ಈ ಸತ್ಯಸ್ವರೂಪವಾದ ಜ್ಞಾನದಿಂದ ನಿಮ್ಮ ಆಯುಧಗಳು ನನ್ನನ್ನೇನೂ ಮಾಡುವುದಿಲ್ಲ' ಎಂದನು.

೩೪. ಬಳಿಕ ಸಾವಿರಾರು ದೈತ್ಯರು ಆಯುಧಗಳಿಂದ ಹೊಡೆದರೂ ಪ್ರಹ್ಲಾದನು ಸ್ವಲ್ಪವೂ ಬಾಧೆಯನ್ನು ಹೊಂದಲಿಲ್ಲ ಮತ್ತೆ ಹೊಸದಾದ ಶರೀರವುಳ್ಳವನಾಗುತ್ತಿದ್ದನು (ಅಥವಾ ದೃಢವಾದ ಜ್ಞಾನವುಳ್ಳವನಾಗುತ್ತಿದ್ದನೆಂದು ಅಭಿಪ್ರಾಯವು)

೩೫. ಹಿರಣ್ಯಕಶಿಪುವು "ದುರ್ಬುದ್ಧಿಯಾದವನೇ ಈ ಶತ್ರುಪಕ್ಷದವನ ಸ್ತೋತ್ರವನ್ನು ಬಿಡು. ನಿನಗೆ ಅಭಯವನ್ನು ಕೊಟ್ಟಿರುವೆನು. ವಿಶೇಷ ದಡ್ಡನಾಗಬೇಡ' ಎಂದನು.

॥ ಪ್ರಹ್ಲಾದೋವಾಚ ॥

ಭಯಂ ಭಯಾನಾಮಪಹಾರಿಣಿ ಸ್ಥಿತೇ
ಮನಸ್ಯನಂತೇ ಮಮ ಕುತ್ರ ತಿಷ್ಠತಿ ।
ಯಸ್ಮಿನ್ಸ್ಮೃತೇ ಜನ್ಮಜರಾಂತಕಾದಿ
ಭಯಾನಿ ಸರ್ವಾಣ್ಯಪಯಾಂತಿ ತಾತ ॥ ೩೬ ॥

॥ ಹಿರಣ್ಯಕಶಿಪುರುವಾಚ ॥

ಭೋ ಭೋ ಸರ್ಪಾ ದುರಾಚಾರಮೇನಮತ್ಯಂತ ದುರ್ಮತಿಂ ।
ವಿಷಜ್ವಾಲಾಕುಲೈರ್ವಕ್ತ್ರೈಸ್ಸದ್ಯೋ ನಯತ ಸಂಕ್ಷಯಂ ॥ ೩೭ ॥

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತಾಸ್ತೇನ ತೇ ಸರ್ಪಾಃ ಕುಹಕಾಸ್ತಕ್ಷಕಾದಯಃ ।
ಅದಶಂತ ಸಮಸ್ತೇಷು ಗಾತ್ರೇಷ್ವತಿವಿಷೋಲ್ಬಣಾಃ ॥ ೩೮ ॥

---

೩೬. ಪ್ರಹ್ಲಾದನು " ತಂದೆಯೇ ಯಾವ ದೇವನನ್ನು ಸ್ಮರಣೆ ಮಾಡಿದರೆ ಹುಟ್ಟು, ಮುಪ್ಪು, ಮರಣಾದಿ ಸಮಸ್ತ ಭಯಗಳೂ ನಾಶವಾಗುವುವೋ ಅಂತಹ ಸಮಸ್ತ ಭಯಗಳನ್ನೂ ನಾಶಮಾಡುವ ಅನಂತನು ನನ್ನ ಮನಸ್ಸಿನಲ್ಲಿ ಇರುತ್ತಿರಲಾಗಿ ಭಯವೆಲ್ಲಿ ಬರುವುದು" ಎಂದನು.

೩೭-೪೦. ಆಗ ಹಿರಣ್ಯಕಶಿಪುವು ' ಎಲೈ ಸರ್ಪಗಳೇ ದುರಾಚಾರಿಯೂ ದುಷ್ಟಬುದ್ಧಿಯುಳ್ಳವನೂ ಆದ ಈ ಪ್ರಹ್ಲಾದನನ್ನು ನಿಮ್ಮ ವಿಷಜ್ವಾಲೆಯಿಂದ ಕೂಡಿದ ಬಾಯಿಗಳಿಂದ ನಾಶಮಾಡಿರಿ" ಎಂದು ಹೇಳುತ್ತಲು ಕುಹಕ ತಕ್ಷಕನೇ ಮೊದಲಾದ ಹೆಚ್ಚಾದ ವಿಷವುಳ್ಳ ಆ ಸರ್ಪಗಳು ಅವನ ಶರೀರದಲ್ಲೆಲ್ಲ ಕಚ್ಚಿದುವು. ಆಗ ಪ್ರಹ್ಲಾದನು ಸತ್ವಗುಣದಿಂದ ಕೂಡಿದ ಬುದ್ಧಿಯುಳ್ಳವನಾಗಿ ಏಕಾಗ್ರಚಿತ್ತದಿಂದ ಕೃಷ್ಣನನ್ನು ಧ್ಯಾನಮಾಡುತ್ತಿರಲು ಆ ಸಂತೋಷದಲ್ಲಿ ತನ್ನ ಶರೀರಕ್ಕೆ ಬಾಧೆಯಾದುದನ್ನು ತಿಳಿಯಲೇ ಇಲ್ಲ. ಆ ಸಮಯದಲ್ಲಿ ಸರ್ಪಗಳು ದೈತ್ಯರಾಜನೇ ನಮ್ಮ

ಸಶ್ವಾಸಶಕ್ತೈಮುಖೈಃ ಕೃಷ್ಣೋ ದಶ್ಯಮಾನೋ ಮಹೋರಗೈಃ ।
ನ ವಿವೇದಾತ್ಮನೋ ಗಾತ್ರಂ ತತ್ಸ್ಮೃತ್ಯಾಹ್ಲಾದಸಂಸ್ಥಿತಃ ॥ ೩೯ ॥

॥ ಸರ್ಪಾ ಊಚುಃ ॥

ದಂಷ್ಟ್ರಾ ವಿಶೀರ್ಣಾ ಮಣಯಸ್ಸ್ಫುಟಂತಿ
ಫಣೇಷು ತಾಪೋ ಹೃದಯೇಷು ಕಂಪಃ ।
ನಾಸ್ಯ ತ್ವಚಿ ಸ್ವಲ್ಪಮಪೀಹ ಭಿನ್ನಂ
ಪ್ರಶಾಧಿ ದೈತ್ಯೇಶ್ವರ ಕಾರ್ಯಮನ್ಯತ್ ॥ ೪೦ ॥

॥ ಹಿರಣ್ಯಕಶಿಪುರುವಾಚ ॥

ಹೇ ದಿಗ್ಗಜಾಸ್ಸಂಕಟದಂತಮಿಶ್ರಾ
ಘ್ನತೈನಮಸ್ಮದ್ರಿಪುಪಕ್ಷಭಿನ್ನಂ ।
ತಜ್ಜಾ ವಿನಾಶಾಯ ಭವಂತಿ ತಸ್ಯ
ಯಥಾರಣೇಃ ಪ್ರಜ್ವಲಿತೋ ಹುತಾಶಃ ॥ ೪೧ ॥

॥ ಶ್ರೀ ಪರಾಶರ ಉವಾಚ ॥

ತತಸ್ಸ ದಿಗ್ಗಜೈರ್ಬಾಲೋ ಭೂಭೃಚ್ಛಿಖರಸನ್ನಿಭೈಃ ।
ಪಾತಿತೋ ಧರಣೀಪೃಷ್ಠೇ ವಿಷಾಣೈರಪ್ಯಪೀಡ್ಯತ ॥ ೪೨ ॥

ಹಲ್ಲುಗಳು ಮುರಿದುವು. ತಾಪದಿಂದ ಹೆಡೆಯ ಮಣಿಗಳು ಒಡೆದುಹೋದುವು. ಎದೆಯು ನಡುಗುತ್ತಿರುವುದು. ಈ ಪ್ರಹ್ಲಾದನ ಚರ್ಮದಲ್ಲಿ ಸ್ವಲ್ಪವೂ ಗಾಯವಾಗಲಿಲ್ಲ. ಇವನಿಗೆ ಬೇರೆ ದಂಡನೆಯನ್ನು ಅಪ್ಪಣೆಮಾಡು ಎಂದುವು.

೪೧–೪೪. ಹಿರಣ್ಯಕಶಿಪುವು “ ಎಲೈ ದಿಗ್ಗಜಗಳೇ ಅರಣಿಯಲ್ಲಿಯೇ ಹುಟ್ಟಿದ ಅಗ್ನಿಯು ಹೆಚ್ಚಿ ಅರಣಿಯನ್ನೇ ನಾಶಮಾಡುವಂತೆ ನನ್ನ ವಂಶದಲ್ಲಿಯೇ ಹುಟ್ಟಿದ ಈ ಪ್ರಹ್ಲಾದನು ನನ್ನ ಶತ್ರುಪಕ್ಷವನ್ನಾಶ್ರಯಿಸಿ ನನ್ನನ್ನೇ ನಾಶಮಾಡುವವನಾದುದರಿಂದ ನಿಮ್ಮ ದಂತಗಳಿಂದ ಇವನನ್ನು ಕೊಲ್ಲಿರಿ ” ಎಂದನು. ಆ ಮೇಲೆ ಪರ್ವತಶಿಖರಕ್ಕೆ ಸಮಾನವಾದ ಆನೆಗಳು ಬಾಲಕನನ್ನು ಭೂಮಿಯಮೇಲೆ ಕೆಡವಿ

ಸ್ಮರತಸ್ತಸ್ಯ ಗೋವಿಂದಮಿಭದಂತಾಸ್ಸಹಸ್ರಶಃ ।
ಶೀರ್ಣಾವಕ್ಷಃಸ್ಥಲಂ ಪ್ರಾಪ್ಯ ಸ ಪ್ರಾಹ ಪಿತರಂ ತತಃ ॥ ೪೩ ॥

॥ ಪ್ರಹ್ಲಾದೋವಾಚ ॥

ದಂತಾ ಗಜಾನಾಂ ಕುಲಿಶಾಗ್ರನಿಷ್ಠುರಾ
ಶ್ಶೀರ್ಣಾ ಯದೇತೇ ನ ಬಲಂ ಮಮೈತತ್।
ಮಹಾವಿಪತ್ಪಾಪವಿನಾಶನೋಽಯಂ
ಜನಾರ್ದನಾನುಸ್ಮರಣಾನುಭಾವಃ ॥ ೪೪ ॥

॥ ಹಿರಣ್ಯಕಶಿಪುರುವಾಚ ॥

ಜ್ವಾಲ್ಯತಾಮಸುರಾ ವಹ್ನಿರಪಸರ್ಪತ ದಿಗ್ಗಜಾಃ ।
ವಾಯೋ ಸಮೇಧಯಾಗ್ನಿಂ ತ್ವಂ ದಹ್ಯತಾಮೇಷ ಪಾಪಕೃತ್ ॥ ೪೫ ॥

॥ ಶ್ರೀ ಪರಾಶರ ಉವಾಚ ॥

ಮಹಾಕಾಷ್ಠಚಯಚ್ಛನ್ನಮಸುರೇಂದ್ರೇ ಸುತಂ ತತಃ ।
ಪ್ರಜ್ವಾಲ್ಯ ದಾನವಾ ವಹ್ನಿಂ ದದಹುಸ್ಸ್ವಾಮಿಚೋದಿತಾಃ ॥ ೪೬ ॥

ದಂತಗಳಿಂದ ಚುಚ್ಚಿದುವು. ಗೋವಿಂದನ ಸ್ಮರಣೆಯನ್ನು ಮಾಡುತ್ತಿದ್ದ ಪ್ರಹ್ಲಾದನ ಎದೆಗೆ ತಗುಲಿದ ಅವುಗಳ ಕೊಂಬುಗಳು ಸಾವಿರ ಚೂರುಗಳಾಗಿ ಹೋದುವು. ಆಗ ಪ್ರಹ್ಲಾದನು ತಂದೆಯನ್ನು ಕುರಿತು "ತಂದೆಯೇ ವಜ್ರದಂತೆ ಕಠಿನವಾದ ಆನೆಯ ದಂತಗಳು ಸಾವಿರ ಚೂರುಗಳಾದುದು ನನ್ನ ಬಲವಲ್ಲ. ಮಹಾವಿಪತ್ತುಗಳೆಂಬ ಪಾಪಗಳನ್ನು ನಾಶಮಾಡುವ ಜನಾರ್ದನನ ಸ್ಮರಣೆಯ ಮಹಿಮೆಯು" ಎಂದನು.

೪೫-೪೬. ಹಿರಣ್ಯಕಶಿಪುವು 'ದಿಗ್ಗಜಗಳೇ ನೀವು ಹೋಗಿರಿ. ಅಸುರರೆ ಬೆಂಕಿಯನ್ನು ಉರಿಸಿರಿ. ವಾಯುವೇ ನೀನು ಉರಿಯನ್ನು ಹೆಚ್ಚಿಸು. ಈ ಪಾಪಿಯಾದ ಪ್ರಹ್ಲಾದನನ್ನು ಸುಟ್ಟುಬಿಡಿ' ಎಂದನು. ಆಗ ದಾನವರು ರಾಕ್ಷಸಾಧಿಪತಿಯ ಪುತ್ರನನ್ನು ತಮ್ಮ ಸ್ವಾಮಿಯ ಅಪ್ಪಣೆಯಂತೆ ದೊಡ್ಡ ಕಟ್ಟಿಗೆಯ

॥ ಪ್ರಹ್ಲಾದೋವಾಚ ॥

ತಾತ್ತೈಷ ವಹ್ನಿಃ ಪವನೇರಿತೋಽಪಿ
ನ ಮಾಂ ದಹತ್ಯತ್ರ ಸಮಂತತೋಽಹಂ ।
ಪಶ್ಯಾಮಿ ಪದ್ಮಾಸ್ತರಣಾಸ್ತೃತಾನಿ
ಶೀತಾನಿ ಸರ್ವಾಣಿ ದಿಶಾಂ ಮುಖಾನಿ ॥ ೪೭ ॥

॥ ಶ್ರೀ ಪರಾಶರ ಉವಾಚ ॥

ಅಥ ದೈತ್ಯೇಶ್ವರಂ ಪ್ರೋಚುರ್ಭಾರ್ಗವಸ್ಯಾತ್ಮಜಾ ದ್ವಿಜಾಃ ।
ಪುರೋಹಿತಾ ಮಹಾತ್ಮಾನಸ್ಸಾಮ್ನಾ ಸಂಸ್ತೂಯ ವಾಗ್ಮಿನಃ ॥ ೪೮ ॥

ರಾಜನ್ನಿಯಮ್ಯತಾಂ ಕೋಪೋ ಬಾಲೇಽತ್ರ ತನಯೇ ನಿಜೇ ।
ಕೋಪೋ ದೇವನಿಕಾಯೇಷು ತತ್ರ ತೇ ಸಫಲೋ ಯತಃ ॥ ೪೯ ॥

ತಥಾ ತಥೈನಂ ಬಾಲಂ ತೇ ಶಾಸಿತಾರೋವಯಂ ನೃಪ ।
ಯಥಾ ವಿಪಕ್ಷನಾಶಾಯ ವಿನೀತಸ್ತೇ ಭವಿಷ್ಯತಿ ॥ ೫೦ ॥

ಬಾಲತ್ವಂ ಸರ್ವದೋಷಾಣಾಂ ದೈತ್ಯರಾಜಾಸ್ಪದಂ ಯತಃ ।
ತತೋಽತ್ರ ಕೋಪಮತ್ಯರ್ಥಂ ಯೋಕ್ತುಮರ್ಹಸಿ ನಾರ್ಭಕೇ ॥ ೫೧ ॥

ರಾಶಿಯಲ್ಲಿ ಉರಿಯುತ್ತಿರುವ ಬೆಂಕಿಗೆ ಹಾಕಿ ಸುಟ್ಟರು. ಪ್ರಹ್ಲಾದನು 'ತಂದೆಯೇ ಈ ಬೆಂಕಿಯು ಗಾಳಿಬೀಸಿ ವಿಶೇಷವಾಗಿ ಉರಿಯುತ್ತಿದ್ದರೂ ನನ್ನನ್ನು ಸುಡುವುದಿಲ್ಲ ನನ್ನ ಸುತ್ತಲೂ ಕಮಲಗಳನ್ನು ಎಲ್ಲಾ ದಿಕ್ಕುಗಳಲ್ಲಿಯೂ ಹರಡಿದಂತೆ ಕಾಣುತ್ತಿರುವುದು' ಎಂದನು.

೪೮–೫೨. ಆಮೇಲೆ ಶುಕ್ರನ ಪುತ್ರರೂ ಮಾತುಬಲ್ಲವರೂ ಪುರೋಹಿತರೂ ಆದ ಶಂಡಾಮರ್ಕಾದಿಗಳು ದೈತ್ಯ ರಾಜನನ್ನು ಕುರಿತು ಒಳ್ಳೆಯ ಮಾತಿನಿಂದ ಸ್ತೋತ್ರಮಾಡುತ್ತ 'ರಾಜನೇ ನಿನ್ನ ಪುತ್ರನೂ ಬಾಲಕನೂ ಆದ ಪ್ರಹ್ಲಾದನ ವಿಷಯದಲ್ಲಿ ಕೋಪವನ್ನು ಬಿಡು. ನಿನ್ನ ಕೋಪವು ದೇವತೆಗಳ ಗುಂಪಿನಲ್ಲಿ

ನ ತ್ಯಕ್ಷತಿ ಹರೇಃ ಪಕ್ಷಮಸ್ಮಾಕಂ ವಚನಾದ್ಯದಿ ।
ತತಃ ಕೃತ್ಯಾಂ ವಧಾಯಾಸ್ಯ ಕರಿಷ್ಯಾಮೋಽನಿವರ್ತಿನೀಂ ॥ ೫೨ ॥

॥ ಶ್ರೀ ಪರಾಶರ ಉವಾಚ ॥

ಏವಮಭ್ಯರ್ಥಿತಸ್ತೈಸ್ತು ದೈತ್ಯರಾಜಃ ಪುರೋಹಿತೈಃ ।
ದೈತ್ಯೈರ್ನಿಷ್ಕಾಸಯಾಮಾಸ ಪುತ್ರಂ ಪಾವಕಸಂಚಯಾತ್ ॥ ೫೩ ॥

ತತೋ ಗುರುಗೃಹೇ ಬಾಲಃ ಸ ವಸನ್ಬಾಲದಾನವಾನ್ ।
ಅಧ್ಯಾಪಯಾಮಾಸ ಮುಹುರುಪದೇಶಾಂತರೇ ಗುರೋಃ ॥ ೫೪ ॥

॥ ಪ್ರಹ್ಲಾದ ಉವಾಚ ॥

ಶ್ರೂಯತಾಂ ಪರಮಾರ್ಥೋ ಮೇ ದೈತೇಯಾ ದಿತಿಜಾತ್ಮಜಾಃ ।
ನ ಚಾನ್ಯಥೈತನ್ಮಂತವ್ಯಂ ನಾತ್ರ ಲೋಭಾದಿಕಾರಣಂ ॥ ೫೫ ॥

ಸಫಲವಾಗುವುದು. ನಾವೂ ಅನೇಕ ಬಗೆಯಲ್ಲಿ ನಿನ್ನ ಪುತ್ರನನ್ನು ವಿನಯವಂತನಾಗುವಂತೆಯೂ ಶತ್ರುಪಕ್ಷ ನಾಶಕನಾಗುವಂತೆಯೂ ಶಿಕ್ಷಿಸುವೆವು. ಚಿಕ್ಕತನವು ಅನೇಕ ದೋಷಗಳಿಗೆ ಆಶ್ರಯವಾದುದು. ಆದುದರಿಂದ ಬಾಲಕನಲ್ಲಿ ನೀನು ಅತ್ಯಂತ ಕೋಪವನ್ನು ಮಾಡಬೇಡ. ನಮ್ಮ ಮಾತಿನಿಂದ ಇವನು ಹರಿಯ ಪಕ್ಷವನ್ನು ಬಿಡದಿದ್ದರೆ ಆಗ ಇವನ ನಾಶಕ್ಕೆ ಕ್ರೂರವಾದ ಆಭಿಚಾರಿಕ ಕರ್ಮವನ್ನು ಮಾಡುತ್ತೇವೆ' ಎಂದರು.

೫೩-೫೪. ದೈತ್ಯರಾಜನ ಪುರೋಹಿತರು ಹೀಗೆಂದು ಕೇಳಿಕೊಂಡಮೇಲೆ ತನ್ನ ಮಗನನ್ನು ಅಗ್ನಿಯಿಂದ ತೆಗೆಸಿದನು. ಆಮೇಲೆ ಆ ಬಾಲಕನು ಗುರುಗಳ ಮನೆಯಲ್ಲಿಯೇ ವಾಸಮಾಡುತ್ತ ಗುರುಗಳು ಹೇಳಿಕೊಡುವ ಕಾಲವನ್ನು ಬಿಟ್ಟು ಮಿಕ್ಕ ಕಾಲಗಳಲ್ಲಿ ತನ್ನ ಜೊತೆಗಾರರಾದ ದಾನವ ಬಾಲಕರಿಗೆ ಪ್ರಹ್ಲಾದನೇ ಪಾಠಗಳನ್ನು ಹೇಳಿಕೊಡುತ್ತಿದ್ದನು ಹೇಗೆಂದರೆ,

೫೫-೫೭. ದೈತ್ಯಪುತ್ರರೇ ನಾನು ಹೇಳುವ ಪರಮಾರ್ಥವಾದ ತತ್ವವನ್ನು ಕೇಳಿರಿ. ಇದು ಭ್ರಾಂತಿಯ ಮಾತೆಂದು ತಿಳಿಯಬೇಡಿರಿ. ನಾನು ಹೇಳುವ ಮಾತಿಗೆ

ಜನ್ಮ ಬಾಲ್ಯಂ ತತಃ ಸರ್ವೋ ಜಂತುಃ ಪ್ರಾಪ್ನೋತಿ ಯೌವನಂ ।
ಅವ್ಯಾಹತೈವ ಭವತಿ ತತೋಽನುದಿವಸಂ ಜರಾ ॥ ೫೬ ॥

ತತಶ್ಚ ಮೃತ್ಯುಮಭ್ಯೇತಿ ಜಂತುರ್ದೈತ್ಯೇಶ್ವರಾತ್ಮಜಾಃ ।
ಪ್ರತ್ಯಕ್ಷಂ ದೃಶ್ಯತೇ ಚೈತದಸ್ಮಾಕಂ ಭವತಾಂ ತಥಾ ॥ ೫೭ ॥

ಮೃತಸ್ಯ ಚ ಪುನರ್ಜನ್ಮ ಭವತ್ಯೇತಚ್ಚ ನಾನ್ಯಥಾ ।
ಆಗಮೋಽಯಂ ತಥಾ ಯಚ್ಚ ನೋಪಾದಾನಂ ವಿನೋದ್ಭವಃ ॥ ೫೮ ॥

ಗರ್ಭವಾಸಾದಿ ಯಾವತ್ತು ಪುನರ್ಜನ್ಮೋಪಪಾದನಂ ।
ಸಮಸ್ತಾವಸ್ಥಕಂ ತಾವದ್ದುಃಖಮೇವಾವಗಮ್ಯತಾಂ ॥ ೫೯ ॥

ಕ್ಷುತ್ತೃಷ್ಣೋಪಶಮಂ ತದ್ವಚ್ಛೀತಾದ್ಯುಪಶಮಂ ಸುಖಂ ।
ಮನ್ಯತೇ ಬಾಲಬುದ್ಧಿತ್ವಾದ್ದುಃಖಮೇವ ಹಿ ತತ್ಪುನಃ ॥ ೬೦ ॥

ಗುರುಗಳ ಉಪದೇಶಕ್ಕೆಸುವಂತೆ ಅಭ್ಯಾಸ ಮುಂತಾದ ಕಾರಣಗಳಿಲ್ಲ ಸಮಸ್ತ ಪ್ರಾಣಿಗಳಿಗೂ, ಜನನ ಬಾಲ್ಯ ಯೌವನ ಮುಪ್ಪು ಮರಣ ಈ ಅವಸ್ಥೆಗಳು ತಡೆಯಿಲ್ಲದೆ ಬರುತ್ತಿರುವುವು. ಇದು ನಮ್ಮೆಲ್ಲರಿಗೂ ಪ್ರತ್ಯಕ್ಷವಾಗಿ ಅನುಭವಕ್ಕೆ ಬಂದಿರುವುದು.

೫೮–೬೦. ಮರಣಹೊಂದಿದವನೇ ಪುನಃ ಜನ್ಮವನ್ನು ಪಡೆವನು. ಎಂಬುದಕ್ಕೆ "ಯೋನಿಮನ್ಯೇ ಪ್ರಪದ್ಯಂತೇ ಶರೀರತ್ವಾಯ ದೇಹಿನಃ । ಸ್ಥಾಣುಮನ್ಯೇಽನುಸಂಯಾಂತಿ ಯಥಾಕರ್ಮ ಯಥಾಶ್ರುತಂ ॥ ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ' ಮುಂತಾದ ಶ್ರುತಿಸ್ಮೃತಿಗಳ ಪ್ರಮಾಣಗಳಿರುವುವು. ಜೀವಶಕ್ತಿಯನ್ನುಳ್ಳ ಶುಕ್ಲಶೋಣಿತಗಳ ಸಂಯೋಗವಿಲ್ಲದೆ ಶರೀರವು ಉತ್ಪತ್ತಿಯಾಗುವುದಿಲ್ಲ. ಗರ್ಭವಾಸ ಮೊದಲುಗೊಂಡು ಪುನರ್ಜನ್ಮವುಂಟಾಗುವವರೆಗೂ ದುಃಖವೇ ಇರುವುದೆಂದು ತಿಳಿಯಬೇಕು. ಹಸಿವು, ಬಾಯಾರಿಕೆ, ಶೀತ, ಉಷ್ಣ ಮುಂತಾದಬಾಧೆಗಳು ಶಾಂತವಾದರೆ ಅದನ್ನು ಮೂಢರು ಸುಖವೆಂದು ತಿಳಿವರು. ಇದು ಭ್ರಾಂತಿಬುದ್ಧಿಯೇ ಹೊರತು, ನಿಜವಾದ ಸುಖವಲ್ಲ. ಇದು ಅವುಗಳನ್ನು ಸಂಪಾದಿಸುವ ಆಯಾಸಕ್ಕೆ ಕಾರಣವಾದುದರಿಂದ ದುಃಖವೇ ಆಗಿರುವುದು.

ಅತ್ಯಂತಸ್ತಿಮಿತಾಂಗಾನಾಂ ವ್ಯಾಯಾಮೇನ ಸುಖೈಷಿಣಾಂ ।
ಭ್ರಾಂತಿಜ್ಞಾನಾವೃತಾಕ್ಷಾಣಾಂ ಪ್ರಹಾರೋಽಪಿ ಸುಖಾಯತೇ ॥ ೬೧ ॥

ಕ್ವ ಶರೀರಮಶೇಷಾಣಾಂ ಶ್ಲೇಷ್ಮಾದೀನಾಂ ಮಹಾಚಯಃ ।
ಕ್ವ ಕಾಂತಿಶೋಭಾಸೌರಭ್ಯಕಮನೀಯಾದಯೋ ಗುಣಾಃ ॥ ೬೨ ॥

ಮಾಂಸಾಸೃಕ್ಪೂಯವಿಣ್ಮೂತ್ರಸ್ನಾಯುಮಜ್ಜಾಸ್ಥಿಸಂಹತೌ ।
ದೇಹೇ ಚೇತ್ಪ್ರೀತಿಮಾನ್ಮೂಢೋ ಭವಿತಾ ನರಕೇಽಪಿ ಸಃ ॥ ೬೩ ॥

ಅಗ್ನೇಶ್ಶೀತೇನ ತೋಯಸ್ಯ ತೃಷಾ ಭಕ್ತಸ್ಯ ಚ ಕ್ಷುಧಾ ।
ಕ್ರಿಯತೇ ಸುಖಕರ್ತೃತ್ವಂ ತದ್ವಿಲೋಮಸ್ಯ ಚೇತರೈಃ ॥ ೬೪ ॥

ಕರೋತಿ ಹೇ ದೈತ್ಯಪುತ್ರಾ ಯಾವನ್ಮಾತ್ರಂ ಪರಿಗ್ರಹಾಃ ।
ತಾವನ್ಮಾತ್ರಂ ಸ ಏವಾಸ್ಯ ದುಃಖಂ ಚೇತಸಿ ಯಚ್ಛತಿ ॥ ೬೫ ॥

೬೧-೬೩. ವಾಯುವೇ ಮುಂತಾದ ದೋಷಗಳಿಂದ ಅವಯವಗಳಲ್ಲಿ ವಿಶೇಷವಾಗಿ ನೋವುಗಳುಳ್ಳವರು ವ್ಯಾಯಾಮಾದಿ ಶ್ರಮಗಳಿಂದ ಸುಖವನ್ನಪೇಕ್ಷಿಸುವರು. ವ್ಯಾಯಾಮಾದಿಗಳು ಶ್ರಮರೂಪವಾದ ದುಃಖವೇ ಹೊರತು, ಸುಖವಲ್ಲ. ಮೋಹದಿಂದ ಕೂಡಿದ ಬುದ್ಧಿಯುಳ್ಳವರಿಗೆ ಪ್ರಣಯ ಕೋಪದಿಂದ ಕೂಡಿದ ಸ್ತ್ರೀಯ ಗೆಜ್ಜೆಯನ್ನು ಕಟ್ಟಿದ ಕಾಲಿನ ಏಟೂ ಸುಖವಾಗಿ ಕಾಣುವುದು. ಮಲ, ಮೂತ್ರ, ಶ್ಲೇಷ್ಮಾದಿಗಳ ಸ್ಥೂಲರೂಪವಾದ ಶರೀರವೆಲ್ಲಿ, ಕಾಂತಿ, ಸೌಂದರ್ಯ, ಸುಗಂಧ ಅಲಂಕಾರ ಮುಂತಾದ ಗುಣಗಳೆಲ್ಲಿ, ದುಃಖಕರವಾದ ದೇಹದಲ್ಲಿ ಸುಖವನ್ನು ಭ್ರಾಂತಿಯಿಂದ ನೋಡುವೆವು. ಮಾಂಸ, ರಕ್ತ, ಕೀವು, ಮಲ, ಮೂತ್ರ, ನರಗಳು, ಕೊಬ್ಬು, ಮೂಳೆ ಇವುಗಳ ಗುಂಪಿನಿಂದ ಕೂಡಿದ ಶರೀರದಲ್ಲಿ ಪ್ರೀತಿಯುಳ್ಳ ಮೂಢ ಮನುಷ್ಯನು ನರಕದಲ್ಲಿಯೂ ಪ್ರೀತಿಯುಳ್ಳವನಾಗುವನು.

೬೪-೬೬. ಶೀತಕಾಲದಲ್ಲಿ ಅಗ್ನಿಯೂ, ಬಾಯಾರಿದಾಗ ನೀರೂ, ಹಸಿವಾಗ ಅನ್ನವೂ ಸುಖಕಾರಣವಾಗಿರುವುದು. ಬೇಸಗೆಯಲ್ಲಿಯೂ, ಬಾಯಾರಿಕೆಯಿಲ್ಲದ್ದಾಗಲೂ, ಹೊಟ್ಟೆತುಂಬಿದಾಗಲೂ ಅವುಗಳೇ ದುಃಖಕಾರಣಗಳಾಗುವುವು. ದೈತ್ಯ

ಯಾವತಃ ಕುರುತೇ ಜಂತುಸ್ಸಂಬಂಧಾನ್ಮನಸಃ ಪ್ರಿಯಾನ್ ।
ತಾವಂತೋಽಸ್ಯ ನಿಖನ್ಯಂತೇ ಹೃದಯೇ ಶೋಕಶಂಕವಃ ॥ ೬೬ ॥

ಯದ್ಯದ್ಗೃಹೇ ತನ್ಮನಸಿ ಯತ್ರ ಕುತ್ರಾವತಿಷ್ಠತಃ ।
ನಾಶದಾಹೋಪಕರಣಂ ಕುತಸ್ತತ್ರೈವ ತಿಷ್ಠತಿ ॥ ೬೭ ॥

ಜನ್ಮನ್ಯತ್ರ ಮಹದ್ದುಃಖಂ ಮ್ರಿಯಮಾಣಸ್ಯ ಚಾಪಿ ತತ್ ।
ಯಾತನಾಸು ಯಮಸ್ಯೋಗ್ರಂ ಗರ್ಭಸಂಕ್ರಮಣೇಷು ಚ ॥ ೬೮ ॥

ಗರ್ಭೇ ಚ ಸುಖಲೇಶೋಽಪಿ ಭವದ್ಭಿರನುಮೀಯತೇ ।
ಯದಿ ತತ್ಕಥ್ಯತಾಮೇವಂ ಸರ್ವಂ ದುಃಖಮಯಂ ಜಗತ್ ॥ ೬೯ ॥

ಬಾಲಕರೇ ಹಣ, ಕುದುರೆ, ಆನೆ, ಆಳುಗಳು ಮುಂತಾದ ಪರಿಕರಗಳೂ ಅವುಗಳನ್ನು ಕಾಪಾಡುವ ಕಷ್ಟವನ್ನು ನೋಡಿದರೆ ಮನಸ್ಸಿಗೆ ದುಃಖವನ್ನೇ ಉಂಟುಮಾಡುವುವು. ಜೀವನು ತನ್ನ ಮನಸ್ಸಿಗೆ ಹಿತವಾದುದೆಂದು ಪುತ್ರ, ಮಿತ್ರ, ಕಳತ್ರಾದಿ ಎಷ್ಟು ಸಂಬಂಧಗಳನ್ನು ಮಾಡುವನೋ ಅವುಗಳೆಲ್ಲವೂ ಮನಸ್ಸಿನಲ್ಲಿ ನೆಟ್ಟ ದುಃಖದ ಗೂಟಗಳೆಂದು ತಿಳಿಯಬೇಕು.

೬೭–೬೯. ಮನೆಯಲ್ಲಿ ಧನಾದಿಗಳನ್ನಿಟ್ಟು ದೇಶಾಂತರಕ್ಕೆ ಹೋದವನು ಅವುಗಳನ್ನೇ ಯೋಚಿಸುತ್ತ ನಾಶವಾಯಿತೇ, ಸುಟ್ಟುಹೋಯಿತೇ, ಕಳ್ಳರು ಕದ್ದುಕೊಂಡು ಹೋದರೇ ಎಂದು ದುಃಖಪಡುತ್ತಿದ್ದರೆ ವಾಸನಾರೂಪವಾಗಿ ದುಃಖವು ಮನಸ್ಸಿನಲ್ಲಿರುವುದೇ ಹೊರತು ಧನಾದಿಗಳಿಗೆ ನಾಶಾದಿಗಳು ಉಂಟಾಗಿರುವುದಿಲ್ಲ. ಜೀವನಿಗೆ ಹುಟ್ಟುವಾಗಲೂ, ಸಾಯುವಾಗಲೂ ನರಕದಲ್ಲಿ ಯಮಯಾತನೆಗಳನ್ನು ಅನುಭವಿಸುವಾಗಲೂ, ಗರ್ಭದಲ್ಲಿರುವಾಗಲೂ ದುಃಖವೇ ಅನುಭವಗೋಚರವಾಗಿರುವುದು. ಇವುಗಳಲ್ಲಿ ಸ್ವಲ್ಪವಾದರೂ ಸುಖವಿದ್ದರೆ ಹೇಳಿರಿ ಹೀಗೆ ಈ ಜಗತ್ತೆಲ್ಲವೂ ದುಃಖರೂಪವಾದುದೇ ಆಗಿರುವುದು.

ತದೇವಮತಿದುಃಖಾನಾಮಾಸ್ಪದೇ ತು ಭವಾರ್ಣವೇ ।
ಭವತಾಂ ಕಥ್ಯತೇ ಸತ್ಯಂ ವಿಷ್ಣುರೇಕಃ ಪರಾಯಣಂ ॥ ೭೦ ॥

ಮಾ ಜಾನೀತ ವಯಂ ಬಾಲಾ ದೇಹೀ ದೇಹೇಷು ಶಾಶ್ವತಃ ।
ಜರಾ ಯೌವನಜನ್ಮಾದ್ಯಾ ಧರ್ಮಾ ದೇಹಸ್ಯ ನಾತ್ಮನಃ ॥ ೭೧ ॥

ಬಾಲೋಽಹಂ ತಾವದಿಚ್ಛಾತೋ ಯತಿಷ್ಯೇ ಶ್ರೇಯಸೇ ಯುವಾ ।
ಯುವಾಹಂ ವಾರ್ಧಕೇ ಪ್ರಾಪ್ತೇ ಕರಿಷ್ಯಾಮ್ಯಾತ್ಮನೋ ಹಿತಂ ॥ ೭೨ ॥

ವೃದ್ಧೋಽಹಂ ಮಮ ಕಾರ್ಯಾಣಿ ಸಮಸ್ತಾನಿ ನ ಗೋಚರೇ ।
ಕಿಂ ಕರಿಷ್ಯಾಮಿ ಮಂದಾತ್ಮಾ ಸಮರ್ಥೇನ ನಯತ್ಕೃತಂ ॥ ೭೩ ॥

ಏವಂ ದುರಾಶಯಾಕ್ಷಿಪ್ತಮಾನಸಃ ಪುರುಷಸ್ಸದಾ ।
ಶ್ರೇಯಸೋಽಭಿಮುಖಂ ಯಾತಿ ನ ಕದಾಚಿತ್ಪಿಪಾಸತಃ ॥ ೭೪ ॥

---

೭೦. ಹೀಗೆ ಅತ್ಯಂತ ದುಃಖಗಳಿಗೆ ಆಶ್ರಯವಾದ ಸಂಸಾರ ಸಮುದ್ರದಲ್ಲಿ ವಿಷ್ಣುವೊಬ್ಬನೇ ರಕ್ಷಕನೆಂಬುದನ್ನು ನಿಮಗೆ ಸತ್ಯವಾಗಿ ಹೇಳುವೆನು.

೭೧–೭೪. ನಾವು ಬಾಲಕರು ಈ ವಿಷಯವನ್ನು ತಿಳಿಯಲು ನಮಗೆ ಅಧಿಕಾರವಿಲ್ಲವೆಂದು ತಿಳಿಯಬೇಡಿರಿ. ದೇಹದಲ್ಲಿರುವ ಆತ್ಮನು ನಿತ್ಯನಾದವನು. ಹುಟ್ಟು ಯೌವನ, ಮುಪ್ಪು ಎಂಬ ಧರ್ಮಗಳು ದೇಹಕ್ಕೆ ಹೊರತು ಆತ್ಮನಿಗಿಲ್ಲ. ಈಗ ನಾನು ಬಾಲಕನು. ಪ್ರಾಯ ಬಂದ ಮೇಲೆ ಆತ್ಮಹಿತಕ್ಕೆ ಪ್ರಯತ್ನ ಮಾಡುವೆನು. ಈಗ ಪ್ರಾಯದವನು ಮುಪ್ಪಿನಲ್ಲಿ ಆತ್ಮಹಿತವನ್ನು ಸಾಧಿಸುವೆನು. ಈಗ ವೃದ್ಧನಾದೆನು. ಯಾವ ಕೆಲಸ ಮಾಡಲೂ ಸಾಧ್ಯವಿಲ್ಲ ಏನು ಮಾಡಲಿ, ಮೂಢನಾಗಿ ಶರೀರದಲ್ಲಿ ಸಾಮರ್ಥ್ಯವಿದ್ದಾಗ ಯಾವುದನ್ನೂ ಮಾಡಲಿಲ್ಲ. ಹೀಗೆಂದು ದುಷ್ಟವಾದ ಇಂದ್ರಿಯ ಸುಖಾಪೇಕ್ಷೆಯಿಂದ ಮನುಷ್ಯನು ಶ್ರೇಯಸ್ಸುಂಟಾಗುವ ಕಾರ್ಯಗಳಿಗೆ ಮನಸ್ಸು ಮಾಡದಿರುವನು. ಮನುಷ್ಯನು ಬಾಲ್ಯದಲ್ಲಿ ಆಟಗಳಲ್ಲಾಸಕ್ತನಾಗಿಯೂ ಪ್ರಾಯದಲ್ಲಿ ವಿಷಯಾಭಿಲಾಷೆಯುಳ್ಳವನಾಗಿಯೂ, ಮುಪ್ಪಿನಲ್ಲಿ ಶಕ್ತಿಯಿಲ್ಲದವನಾ

ಬಲ್ಯೇ ಕ್ರೀಡನಕಾಸಕ್ತಾ ಯೌವನೇ ವಿಷಯೋನ್ಮುಖಾಃ ।
ಅಜ್ಞಾನಯಂತ್ಯಶಕ್ತ್ಯಾ ಚ ವಾರ್ಧಕಂ ಸಮುಪಸ್ಥಿತಂ ॥ ೭೫ ॥

ತಸ್ಮಾದ್ಬಾಲ್ಯೇ ವಿವೇಕಾತ್ಮಾ ಯತೇತ ಶ್ರೇಯಸೇ ಸದಾ ।
ಬಾಲ್ಯಯೌವನವೃದ್ಧಾದ್ಯೈರ್ದೇಹಭಾವೈರಸಂಯುತಃ ॥ ೭೬ ॥

ತದೇತದ್ವೋ ಮಯಾಖ್ಯಾತಂ ಯದಿ ಜಾನೀತ ನಾನೃತಂ ।
ತದಸ್ಮತ್ಪ್ರೀತಯೇ ವಿಷ್ಣುಸ್ಸ್ಮರ್ಯತಾಂ ಬಂಧಮುಕ್ತಿದಃ ॥ ೭೭ ॥

ಆಯಾಸಸ್ಸ್ಮರಣೇ ಕೋಽಸ್ಯ ಸ್ಮೃತೋ ಯಚ್ಛತಿ ಶೋಭನಂ ।
ಪಾಪಕ್ಷಯಶ್ಚ ಭವತಿ ಸ್ಮರತಾಂ ತಮಹರ್ನಿಶಂ ॥ ೭೮ ॥

ಸರ್ವಭೂತಸ್ಥಿತೇ ತಸ್ಮಿನ್ ಮತಿರ್ಮೈತ್ರೀ ದಿವಾನಿಶಂ ।
ಭವತಾಂ ಜಾಯತಾಮೇವಂ ಸರ್ವಕ್ಲೇಶಾನ್ಪ್ರಹಾಸ್ಯಥ ॥ ೭೯ ॥

ಗಿಯೂ ಅಜ್ಞಾನಿಯಾಗಿರುವನು. ಆತ್ಮನಿಗೆ ಶ್ರೇಯಸ್ಸಾಗುವ ಮಾರ್ಗವನ್ನು ವಿಚಾರ ಮಾಡುವುದಿಲ್ಲ.

೭೬-೭೭. ಆದುದರಿಂದ ಜೀವನು ಬಾಲ್ಯದಲ್ಲಿಯೇ ವಿವೇಕಿಯಾಗಿ ಶ್ರೇಯಸ್ಸನ್ನು ಪಡೆಯಲು ಬಾಲ್ಯ, ಯೌವನ, ವಾರ್ಧಕ ಮುಂತಾದ ದೇಹಭಾವಗಳನ್ನು ಬಿಟ್ಟು ಪ್ರಯತ್ನ ಮಾಡಬೇಕು. ಆದುದರಿಂದ ನಿಮಗೆ ನಾನು ಇದನ್ನು ಹೇಳಿರುವೆನು. ಇದು ಸುಳ್ಳೆಂದು ತಿಳಿಯಬೇಡಿರಿ. ನನ್ನ ಸಂತೋಷಕ್ಕೋಸ್ಕರ ಈ ಸಂಸಾರಬಂಧವನ್ನು ಬಿಡುಗಡೆ ಮಾಡುವ ವಿಷ್ಣುವನ್ನು ಸ್ಮರಿಸೋಣ.

೭೮-೮೦. ಆ ದೇವನನ್ನು ಸ್ಮರಿಸುವುದು ಆಯಾಸಕರವಾದ ಕೆಲಸವೂ ಅಲ್ಲ. ಸ್ಮರಿಸಿದರೆ ಆ ದೇವನು ನಮಗೆ ಶುಭವನ್ನೇ ಉಂಟುಮಾಡುವನು. ಅವನನ್ನು ಯಾವಾಗಲೂ ಸ್ಮರಿಸುತ್ತಿರುವವರಿಗೆ ಪಾಪನಾಶವೂ ಆಗುವುದು. ಸಮಸ್ತ ಭೂತಗಳಲ್ಲಿಯೂ ವ್ಯಾಪಿಸಿರುವ ಆ ವಿಷ್ಣುವಿನಲ್ಲಿ ಯಾವಾಗಲೂ ಸ್ನೇಹವನ್ನು ಮಾಡಿರಿ. ಆ ದೇವನು ಸಮಸ್ತ ಭೂತಗಳನ್ನೂ ಪ್ರೀತಿಸುವ ನಿಮ್ಮ ಎಲ್ಲ ದುಃಖಗಳನ್ನೂ ನಾಶಮಾಡುವನು. ಈ ಸಮಸ್ತ ಜಗತ್ತೂ ಆಧ್ಯಾತ್ಮಿಕ, ಆಧಿದೈವಿಕ, ಆಧಿ

ತಾಪತ್ರಯೇಣಾಭಿಹತಂ ಯದೈತತದಖಿಲಂ ಜಗತ್ ।
ತದಾ ಶೋಚ್ಯೇಷು ಭೂತೇಷು ದ್ವೇಷಂ ಪ್ರಾಜ್ಞಃ ಕರೋತಿ ಕಃ ॥ ೮೦ ॥

ಅಥ ಭದ್ರಾಣಿ ಭೂತಾನಿ ಹೀನಶಕ್ತಿರಹಂ ಪರಂ ।
ಮುದಂ ತಥಾಪಿ ಕುರ್ವೀತ ಹಾನಿರ್ದ್ವೇಷಫಲಂ ಯತಃ ॥ ೮೧ ॥

ಬದ್ಧವೈರಾಣಿ ಭೂತಾನಿ ದ್ವೇಷಂ ಕುರ್ವಂತಿ ಚೇತ್ತದಾ ।
ಶೋಚ್ಯಾನ್ಯಹೋಽತಿ ಮೋಹೇನ ವ್ಯಾಪ್ತಾನೀತಿ ಮನೀಷಿಣಾ ॥ ೮೨ ॥

ಏತೇ ಭಿನ್ನದೃಶಾಂ ದೈತ್ಯಾ ವಿಕಲ್ಪಾಃ ಕಥಿತಾ ಮಯಾ ।
ಕೃತ್ವಾಭ್ಯುಪಗಮಂ ತತ್ರ ಸಂಕ್ಷೇಪಶ್ರೂಯತಾಂ ಮಮ ॥ ೮೩ ॥

ವಿಸ್ತಾರಸ್ಸರ್ವಭೂತಸ್ಯ ವಿಷ್ಣೋಸ್ಸರ್ವಮಿದಂ ಜಗತ್ ।
ದ್ರಷ್ಟವ್ಯಮಾತ್ಮವತ್ತಸ್ಮಾದಭೇದೇನ ವಿಚಕ್ಷಣೈಃ ॥ ೮೪ ॥

ಭೌತಿಕಗಳೆಂಬ ತಾಪತ್ರಯಗಳಿಂದ ಕೂಡಿದುದೆಂದು ತಿಳಿದ ಜ್ಞಾನಿಯು ಕಷ್ಟಪಡು ತ್ತಿರುವ ಪ್ರಾಣಿಗಳ ವಿಷಯದಲ್ಲಿ ದ್ವೇಷವನ್ನು ಮಾಡುವುದಿಲ್ಲ.

೮೧-೮೪. ನಾವು ಧನಧಾನ್ಯಾದಿಗಳಿಂದ ಪ್ರಾಣಿಗಳಿಗೆ ಉಪಕಾರ ಮಾಡಲು ಶಕ್ತಿಯಿಲ್ಲದಿದ್ದರೂ ಅವುಗಳಿಗೆ ಸಂತೋಷವನ್ನುಂಟುಮಾಡಬೇಕು. ಅವುಗಳನ್ನು ದ್ವೇಷಿಸಬಾರದು. ದ್ವೇಷಕ್ಕೆ ನಾಶವೇ ಫಲವಾಗಿರುವುದು. ಪ್ರಾಣಿಗಳು ಪ್ರಯೋಜನ ವಿಲ್ಲದೆ ವೈರದಿಂದ ಇತರ ಪ್ರಾಣಿಗಳನ್ನು ದ್ವೇಷಿಸಿದರೆ ಬುದ್ಧಿವಂತರಾದವರು ಅವು ಅಜ್ಞಾನದಿಂದ ಹೀಗೆ ಮಾಡುವುವೆಂದು ಅವುಗಳ ವಿಷಯದಲ್ಲಿ ಕರುಣೆಯನ್ನು ತೋರಿಸಬೇಕು. ಅವುಗಳನ್ನು ದ್ವೇಷಿಸಬಾರದು. ದೈತ್ಯಬಾಲಕರೇ ಈಗ ನಾನು ಹೇಳಿದುದೆಲ್ಲ ಭೇದಬುದ್ಧಿಯುಳ್ಳ ಮಧ್ಯಮಾಧಿಕಾರಿಗಳ ವಿಷಯವಾಯಿತು. ಅಭೇದ ಬುದ್ಧಿಯುಳ್ಳ ಉತ್ತಮಾಧಿಕಾರಿಗಳ ವಿಷಯವನ್ನು ಹೇಳುವೆನು ಕೇಳಿರಿ. ಈ ಸಮಸ್ತ ಜಗತ್ತೂ ಸರ್ವಾತ್ಮಸ್ವರೂಪನಾದ ವಿಷ್ಣುವಿನ ಸ್ವರೂಪವೆಂದೇ ತಿಳಿಯಬೇಕು. ಇದರಿಂದ ತನ್ನಂತೆ ಸಮಸ್ತ ಭೂತಗಳನ್ನೂ ಅಭೇದವಾಗಿ ತಿಳಿಯುವ ಚಾತುರ್ಯ ವುಂಟಾಗುವುದು.

ಸಮುತ್ಸೃಜ್ಯಾಸುರಂ ಭಾವಂ ತಸ್ಮಾದ್ಯೂಯಂ ಯಥಾ ವಯಂ ।
ತಥಾ ಯತ್ನಂ ಕರಿಷ್ಯಾಮೋ ಯಥಾ ಪ್ರಾಪ್ಸ್ಯಾಮ ನಿರ್ವೃತಿಂ ॥ ೮೫ ॥

ನೈವಾಗ್ನಿನಾ ನಚಾರ್ಕೇಣ ನೇಂದುನಾ ನಚ ವಾಯುನಾ ।
ಪರ್ಜನ್ಯವರುಣಾಭ್ಯಾಂ ವಾ ನಸಿದ್ಧೈರ್ನೈವ ರಾಕ್ಷಸೈಃ ॥ ೮೬ ॥

ನ ಯಕ್ಷೈರ್ನ ಚ ದೈತ್ಯೇಂದ್ರೈರ್ನೋರಗೈರ್ನ ಚ ಕಿನ್ನರೈಃ ।
ನ ಮನುಷ್ಯೈರ್ನ ಪಶುಭಿಃ ದೋಷೈರ್ನೈವಾತ್ಮಸಂಭವೈಃ ॥ ೮೭ ॥

ಜ್ವರಾಕ್ಷಿರೋಗಾತಿಸಾರಪ್ಲೀಹಗುಲ್ಮಾದಿಕೈಸ್ತಥಾ ।
ದ್ವೇಷೇರ್ಷ್ಯಾ ಮತ್ಸರಾದ್ಯೈರ್ವಾ ರಾಗಲೋಭಾದಿಭಿಃ ಕ್ಷಯಂ ॥ ೮೮ ॥

ನ ಚಾನ್ಯೈರ್ನೀಯತೇ ಕೈಶ್ಚಿನ್ನಿತ್ಯಾಯಾತ್ಯಂತ ನಿರ್ಮಲಾ ।
ತಾಮವಾಪ್ನೋತ್ಯಮಲೇನ್ಯಸ್ಯ ಕೇಶವೇ ಹೃದಯಂ ನರಃ ॥ ೮೯ ॥

ಅಸಾರಸಂಸಾರವಿವರ್ತನೇಷು
ಮಾಯಾತತೋಷಂ ಪ್ರಸಭಂ ಬ್ರವೀಮಿ ।

೮೫-೮೯. ಆದುದರಿಂದ ನೀವೂ ನಾವೂ ಅಸುರ ಸ್ವಭಾವವನ್ನು ಬಿಟ್ಟು ಶಾಶ್ವತವಾದ ಸುಖವನ್ನು ಪಡೆಯುವ ಪ್ರಯತ್ನವನ್ನು ಮಾಡೋಣ. ಮೋಕ್ಷವೆಂಬ ಆ ಸ್ಥಿತಿಯು ಅಗ್ನಿ, ಸೂರ್ಯ, ಚಂದ್ರ, ವಾಯು, ಮಳೆ, ವರುಣ ಇವರುಗಳಿಂದಲೂ ಸಿದ್ಧರಾಕ್ಷಸ, ಯಕ್ಷ, ದೈತ್ಯ, ಉರಗ, ಕಿನ್ನರರಿಂದಲೂ, ಮನುಷ್ಯ ಪಶುಗಳಿಂದಲೂ ಜ್ವರ, ಕಣ್ಣುನೋವು, ಅತಿಸಾರ, ಪ್ಲೀಹ ಗುಲ್ಮ ಮುಂತಾದ ರೋಗಗಳಿಂದಲೂ ದ್ವೇಷ, ಹೊಟ್ಟೆಕಿಚ್ಚು, ಮಾತ್ಸರ್ಯ, ಕಾಮಲೋಭ ಮುಂತಾದ ಗುಣಗಳಿಂದಲೂ ನಾಶವಾಗಲಾರದು. ಅದು ನಿತ್ಯವಾದುದಾಗಿಯೂ, ಪರಿಶುದ್ಧವಾದುದಾಗಿಯೂ ಇರುವುದು. ಜೀವನು ನಿರ್ಮಲನಾದ ವಿಷ್ಣುವಿನಲ್ಲಿ ಮನಸ್ಸನ್ನಿಟ್ಟು ಮೋಕ್ಷಪದವಿಯನ್ನು ಪಡೆಯುವನು.

ಸರ್ವತ್ರ ದೈತ್ಯಾಸ್ಸಮತಾಮುಪೇತ
ಸಮತ್ವಮಾರಾಧನಮಚ್ಯುತಸ್ಯ ॥ ೯೦ ॥

ತಸ್ಮಿನ್ಪ್ರಸನ್ನೇ ಕಿಮಿಹಾಸ್ತ್ಯಲಭ್ಯಂ
ಧರ್ಮಾರ್ಥಕಾಮೈರಲಮಲ್ಪಕಾಸ್ತೇ ।
ಸಮಾಶ್ರಿತಾದ್ಬ್ರಹ್ಮತರೋರನಂತಾ
ನ್ನಿಸ್ಸಂಶಯೋ ಮುಕ್ತಿಫಲ ಪ್ರಸಾತಃ ॥ ೯೧ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಸಪ್ತದಶೋಽಧ್ಯಾಯಃ

---

೯೦. ದೈತ್ಯಬಾಲಕರೇ ಅಸಾರವಾದ ದೇವ, ಮನುಷ್ಯ, ತಿರ್ಯಗಾದಿ ಜನ್ಮಗಳಲ್ಲಿ ಸಂತೋಷವನ್ನು ಹೊಂದಬೇಡಿರಿ, ಸರ್ವಸಮಾನ ಭಾವವನ್ನು ಬಲಾತ್ಕಾರವಾಗಿ ಅಭ್ಯಾಸಮಾಡಿರಿ. ಸರ್ವಸಮಾನ ಭಾವವೇ ನಾಶರಹಿತವಾದ ವಿಷ್ಣುವಿನ ಪೂಜೆಯೆಂದು ತಿಳಿಯಿರಿ.

೯೧. ಆ ವಿಷ್ಣುವು ಪ್ರಸನ್ನನಾದರೆ ಈ ಜಗತ್ತಿನಲ್ಲಿ ಪಡೆಯಬೇಕಾದುದೇನೂ ಇರುವುದಿಲ್ಲ. ಎಲ್ಲಾ ಇಷ್ಟಾರ್ಥಗಳೂ ಸಿದ್ಧಿಸಿದಂತಾಗುವುದು. ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳು ಅತ್ಯಲ್ಪವಾದವುಗಳು. ಅನಂತವಾದ ಬ್ರಹ್ಮವೆಂಬ ಮರವನ್ನಾಶ್ರಯಿಸಿದವರಿಗೆ ಮುಕ್ತಿಯೆಂಬ ಫಲವು ತಾನಾಗಿ ಹಸ್ತಗತವಾಗುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಹದಿನೇಳನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪ್ರಥಮಾಂಶೇ

ಅಷ್ಟಾದಶೋಽಧ್ಯಾಯಃ

॥ ಶ್ರೀ ಪರಾರ ಉವಾಚ ॥

ತಸ್ಯೈತಾಂ ದಾನವಾಶ್ಚೇಷ್ಟಾಂ ದೃಷ್ಟ್ವಾ ದೈತ್ಯಪತೇರ್ಭಯಾತ್ ।
ಆಚಚಕ್ಷುಸ್ಸ ಚೋವಾಚ ಸೂದಾನಾಹೂಯ ಸತ್ವರಃ ॥ ೧ ॥

॥ ಹಿರಣ್ಯಕಶಿಪುರುವಾಚ ॥

ಹೇಸೂದಾ ಮಮ ಪುತ್ರೋಽಸಾವನ್ಯೇಷಾಮಪಿ ದುರ್ಮತಿಃ ।
ಕುಮಾರ್ಗದೇಶಿಕೋ ದುಷ್ಟೋ ಹನ್ಯತಾಮವಿಲಂಬಿತಂ ॥ ೨ ॥

ಹಾಲಾಹಲಂ ವಿಷಂ ಚಾಸ್ಯ ಸರ್ವಭಕ್ಷ್ಯೇಷು ದೀಯತಾಂ ।
ಅವಿಜ್ಞಾತಮಸೌ ಪಾಪೋ ವಧ್ಯತಾಂ ಮಾ ವಿಚಾರ್ಯತಾಂ ॥ ೩ ॥

ಹದಿನೆಂಟನೆಯ ಅಧ್ಯಾಯವು

೧. ದಾನವರು ಪ್ರಹ್ಲಾದನ ಈ ಚೇಷ್ಟೆಯನ್ನು ನೋಡಿ ಭಯದಿಂದ ದೈತ್ಯ ರಾಜನಿಗೆ ಹೇಳಿದರು. ಅವನು ಆತುರದಿಂದ ಅಡಿಗೆಯವರನ್ನು ಕರೆದು ಹೇಳಿದನು.

೨-೩. ಅಡಿಗೆಯವರೇ ದುರ್ಬುದ್ಧಿಯುಳ್ಳ ನನ್ನ ಮಗನಾದ ಪ್ರಹ್ಲಾದನು ಇತರ ಬಾಲಕರಿಗೂ ದುರ್ಮಾರ್ಗವನ್ನು ಕಲ್ಪಿಸುತ್ತಾನೆ. ಆದುದರಿಂದ ದುಷ್ಟನಾದ ಅವನನ್ನು ಬೇಗ ಕೊಲ್ಲಿರಿ. ಅವನು ತಿನ್ನುವ ಸಮಸ್ತ ಪದಾರ್ಥಗಳಿಗೂ ಹಾಲಾಹಲ ವೆಂಬ ಕ್ರೂರವಾದ ವಿಷವನ್ನು ಅವನಿಗೆ ತಿಳಿಯದಂತೆ ಸೇರಿಸಿಕೊಟ್ಟು ಕೊಂದುಹಾಕಿರಿ. ಈ ವಿಚಾರದಲ್ಲಿ ನೀವು ಯುಕ್ತಾಯುಕ್ತ ವಿಚಾರವನ್ನು ಮಾಡಬೇಡಿರಿ. ಎಂದು ಹೇಳಿದನು.

॥ ಶ್ರೀ ಪರಾಶರ ಉವಾಚ ॥

ತೇ ತಥೈವ ದದುಸ್ತಸ್ಮೈ ಪ್ರಹ್ಲಾದಾಯ ಮಹಾತ್ಮನೇ ।
ವಿಷದಾನಂ ಯಥಾಜ್ಞಪ್ತಂ ಪಿತ್ರಾ ತಸ್ಯ ಮಹಾತ್ಮನಃ ॥ ೪ ॥

ಹಾಲಾಹಲವಿಷಂ ಘೋರಮನಂತೋಚ್ಚಾರಣೇನ ಸಃ ।
ಅಭಿಮಂತ್ರ್ಯ ಸಹಾನ್ನೇನ ಮೈತ್ರೇಯ ಬುಭುಜೇ ತದಾ ॥ ೫ ॥

ಅವಿಕಾರಂ ಸ ತದ್ಭುಕ್ತ್ವಾ ಪ್ರಹ್ಲಾದಸ್ಸ್ವಸ್ಥಮಾನಸಃ ।
ಅನಂತಖ್ಯಾತಿನಿರ್ವೀರ್ಯಂ ಜರಯಾಮಾಸ ದುರ್ವಿಷಂ ॥ ೬ ॥

ತತಸ್ಸೂದಾ ಭಯತ್ರಸ್ತಾ ಜೀರ್ಣಂ ದೃಷ್ಟ್ವಾ ಮಹಾವಿಷಂ ।
ದೈತ್ಯೇಶ್ವರಮುಪಾಗಮ್ಯ ಪ್ರಣಿಪತ್ಯೇದಮಬ್ರುವನ್ ॥ ೭ ॥

ದೈತ್ಯರಾಜ ವಿಷಂ ದತ್ತಮಸ್ಮಾಭಿರತಿಭೀಷಣಂ ।
ಜೀರ್ಣಂ ತಚ್ಚ ಸಹಾನ್ನೇನ ಪ್ರಹ್ಲಾದೇನ ಸುತೇನ ತೇ ॥ ೮ ॥

೪–೬. ಅವರು ಅವನು ಹೇಳಿದಂತೆಯೇ ಮಹಾಮಹಿಮನಾದ ಪ್ರಹ್ಲಾದನಿಗೆ ವಿಷವನ್ನು ಕೊಟ್ಟರು. ಮೈತ್ರೇಯನೇ, ಪ್ರಹ್ಲಾದನು ಭಯಂಕರವಾದ ಹಾಲಾಹಲ ವೆಂಬ ವಿಷವನ್ನು ಅನಂತನ ಮಂತ್ರೋಚ್ಚಾರಣೆಯಿಂದ ಅಭಿಮಂತ್ರಿಸಿ ಅನ್ನದೊಡನೆ ಭೋಜನ ಮಾಡಿದನು. ಅದನ್ನು ಊಟಮಾಡಿದಮೇಲೆ ಪ್ರಹ್ಲಾದನು ಸ್ವಲ್ಪವೂ ವಿಕಾರವಿಲ್ಲದೆ ಶಾಂತಚಿತ್ತನಾಗಿ ಅನಂತ ನಾಮೋಚ್ಚಾರಣೆಯಿಂದ ಶಕ್ತಿಹೀನವಾದ ಕೆಟ್ಟ ವಿಷವನ್ನು ಜೀರ್ಣಿಸಿಕೊಂಡನು.

೭-೮. ಆಮೇಲೆ ಅಡಿಗೆಯುವರು ಭಯಪಟ್ಟು, ಮಹಾ ವಿಷವು ಜೀರ್ಣ ವಾದುದನ್ನು ಕಂಡು ದೈತ್ಯರಾಜನ ಸಮೀಪಕ್ಕೆ ಹೋಗಿ ನಮಸ್ಕಾರಮಾಡಿ ' ದೈತ್ಯ ರಾಜನೇ ನಾವು ಅತಿ ಭಯಂಕರವಾದ ವಿಷವನ್ನು ಅನ್ನದೊಡನೆ ಕೊಟ್ಟೆವು. ನಿನ್ನ ಮಗನಾದ ಪ್ರಹ್ಲಾದನು ಅದನ್ನು ತಿಂದು ಜೀರ್ಣಿಸಿಕೊಂಡನು " ಎಂದು ಹೇಳಿದರು.

॥ ಹಿರಣ್ಯಕಶಿಪುರುವಾಚ ॥

ತ್ವರ್ಯತಾಂ ತ್ವರ್ಯತಾಂ ಸದ್ಯೋ ಹೇ ಹೇ ದೈತ್ಯಪುರೋಹಿತಾಃ ।
ಕೃತ್ಯಾಂ ತಸ್ಯ ವಿನಾಶಾಯ ಹ್ಯುತ್ಪಾದಯತ ಮಾಚಿರಂ ॥ ೯ ॥

॥ ಶ್ರೀ ಪರಾಶರ ಉವಾಚ ॥

ಸಕಾಶಮಾಗಮ್ಯ ತತಃ ಪ್ರಹ್ಲಾದಸ್ಯ ಪುರೋಹಿತಾಃ ।
ಸಾಮಪೂರ್ವಮಥೋಚುಸ್ತೇ ಪ್ರಹ್ಲಾದಂ ವಿನಯಾನ್ವಿತಂ ॥ ೧೦ ॥

॥ ಪುರೋಹಿತಾ ಊಚುಃ ॥

ಜಾತಸ್ತ್ರೈಲೋಕ್ಯವಿಖ್ಯಾತ ಆಯುಷ್ಮನ್ಬ್ರಹ್ಮಣಃ ಕುಲೇ ।
ದೈತ್ಯರಾಜಸ್ಯ ತನಯೋ ಹಿರಣ್ಯಕಶಿಪೋರ್ಭವಾನ್ ॥ ೧೧ ॥

ಕಿಂ ದೇವೈಃ ಕಿಮನಂತೇನ ಕಿಮನ್ಯೇನ ತವಾಶ್ರಯಃ ।
ಪಿತಾ ತೇ ಸರ್ವಲೋಕಾನಾಂ ತ್ವಂ ತಥೈವ ಭವಿಷ್ಯಸಿ ॥ ೧೨ ॥

---

೯. ಹಿರಣ್ಯಕಶಿಪುವು "ದೈತ್ಯಪುರೋಹಿತರೇ ಆ ಪ್ರಹ್ಲಾದನ ನಾಶಕ್ಕಾಗಿ ಶೀಘ್ರವಾಗಿ ಅಭಿಚಾರಿಕ ಕೃತ್ಯವನ್ನು ಮಾಡಿ ಕೃತ್ಯಾ ಎಂಬ ಭೂತವನ್ನು ಉತ್ಪತ್ತಿ ಮಾಡಿರಿ" ಎಂದು ಹೇಳಿದನು.

೧೦-೧೩. ಬಳಿಕ ಅವನ ಪುರೋಹಿತರು ಪ್ರಹ್ಲಾದನ ಸಮೀಪಕ್ಕೆ ಬಂದು ವಿನಯದಿಂದ ಕೂಡಿದ ಅವನನ್ನು ಕುರಿತು ಸಾಮೋಪಾಯದ ಮಾತುಗಳನ್ನಾಡಿದರು. ಎಂತೆಂದರೆ:—ಆಯುಷ್ಮಂತನಾದ ಪ್ರಹ್ಲಾದನೇ ನೀನು ಮೂರು ಲೋಕದಲ್ಲಿ ಪ್ರಸಿದ್ಧವಾದ ಬ್ರಹ್ಮನ ವಂಶದಲ್ಲಿ ಹುಟ್ಟಿದವನು. ದೈತ್ಯರಾಜನಾದ ಹಿರಣ್ಯಕಶಿಪುವಿನ ಮಗನು. ಇಂತಹ ನೀನು ದೇವತೆಗಳನ್ನೂ, ವಿಷ್ಣುವನ್ನೂ ಆಶ್ರಯಿಸುವುದರಿಂದ ಪ್ರಯೋಜನವೇನು? ನಿನ್ನ ತಂದೆಯೋ ಸಮಸ್ತ ಲೋಕಗಳಿಗೂ ಆಶ್ರಯನು. ನೀನೂ ಹಾಗೆಯೇ ಆಗುವೆ. ಆದುದರಿಂದ ನೀನು ಶತ್ರುಪಕ್ಷವನ್ನು ಸ್ತೋತ್ರಮಾಡುವುದನ್ನು ಬಿಡು. ನಿನ್ನ

ತಸ್ಮಾತ್ಪರಿತ್ಯಜ್ಯೈನಾಂ ತ್ವಂ ವಿಪಕ್ಷಸ್ತವಸಂಹಿತಾಂ ।
ಶ್ಲಾಘ್ಯಃ ಪಿತಾ ಸಮಸ್ತಾನಾಂ ಗುರೂಣಾಂ ಪರಮೋ ಗುರುಃ ॥ ೧೩ ॥

॥ ಪ್ರಹ್ಲಾದ ಉವಾಚ ॥

ಏವಮೇತನ್ಮಹಾಭಾಗಾಃ ಶ್ಲಾಘ್ಯಮೇತನ್ಮಹಾಕುಲಂ ।
ಮರೀಚೇಃ ಸಕಲೇಽಪ್ಯಸ್ಮಿನ್ ತ್ರೈಲೋಕ್ಯೇ ನಾನ್ಯಥಾ ಭವೇತ್ ॥ ೧೪ ॥

ಪಿತಾ ಚ ಮಮ ಸರ್ವಸ್ಮಿಂಜಗತ್ಯುತ್ಕೃಷ್ಟಚೇಷ್ಟಿತಃ ।
ಏತದಪ್ಯವಗಚ್ಛಾಮಿ ಸತ್ಯಮತ್ರಾಪಿ ನಾನೃತಂ ॥ ೧೫ ॥

ಗುರೂಣಾಮಪಿ ಸರ್ವೇಷಾಂ ಪಿತಾ ಪರಮಕೋ ಗುರುಃ ।
ಯದುಕ್ತಂ ಭ್ರಾಂತಿಸ್ತತ್ರಾಪಿ ಸ್ವಲ್ಪಾಪಿ ಹಿ ನ ವಿದ್ಯತೇ ॥ ೧೬ ॥

ಪಿತಾ ಗುರುರ್ನ ಸಂದೇಹಃ ಪೂಜನೀಯಃ ಪ್ರಯತ್ನತಃ ।
ತತ್ರಾಪಿ ನಾಪರಾಧ್ಯಾಮೀತ್ಯೇವಂ ಮನಸಿ ಮೇ ಸ್ಥಿತಂ ॥ ೧೭ ॥

ತಂದೆಯೇ ಎಲ್ಲಾ ಗುರುಗಳಿಗಿಂತ ಶ್ರೇಷ್ಠನಾದ ಗುರುವು ಆದುದರಿಂದ ಅವನನ್ನೇ ನೀನು ಸ್ತೋತ್ರಮಾಡಬೇಕು." ಎಂದರು.

೧೪-೧೭. ಪ್ರಹ್ಲಾದನು "ಮಹಾ ಪುಣ್ಯವಂತರಾದ ಗುರುಗಳೇ ಈ ಮೂರು ಲೋಕಗಳಲ್ಲಿಯೂ ಮರೀಚಿ ಪುತ್ರನಾದ ಕಶ್ಯಪನ ಮಹಾವಂಶವು ಶ್ಲಾಘ್ಯವಾದುದು ಯಾರೂ ಅಲ್ಲವೆಂದು ಹೇಳುವುದಿಲ್ಲ. ನನ್ನ ತಂದೆಯೂ ಈ ಜಗತ್ತಿನಲ್ಲಿ ಶ್ಲಾಘ್ಯವಾದ ಅನೇಕ ಕಾರ್ಯಗಳನ್ನು ಮಾಡಿರುವನು. ಇದನ್ನೂ ನಾನು ಬಲ್ಲೆನು. ಎಲ್ಲ ಗುರುಗಳಿಗಿಂತ ತಂದೆಯೇ ಪರಮ ಗುರು ಎಂಬುದು ಸುಳ್ಳಲ್ಲ, ಸತ್ಯವಾದ ಮಾತು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಗುರುವಾದ ತಂದೆಯನ್ನು ಪ್ರಯತ್ನಪೂರ್ವಕವಾಗಿ ಪೂಜಿಸಬೇಕು. ಈ ವಿಷಯದಲ್ಲಿಯೂ ನಾನು ತಪ್ಪುಮಾಡುವುದಿಲ್ಲವೆಂದು ನನ್ನ ಮನಸ್ಸಿನಲ್ಲಿ ದೃಢವಾಗಿರುತ್ತದೆ. ಆದರೆ ನೀವು ವಿಷ್ಣುವಿನಿಂದೇನು ಪ್ರಯೋಜನ

ಯತ್ತ್ವೇತತ್ಕಿಮನಂತೇನೇತ್ಯುಕ್ತಂ ಯುಷ್ಮಾಭಿರೀದೃಶಂ ।
ಕೋ ಬ್ರವೀತಿ ಯಥಾನ್ಯಾಯಂ ಕಿಂತು ನೈತದ್ವಚೋಽರ್ಥವತ್ ॥ ೧೮ ॥

ಇತ್ಯುಕ್ತ್ವಾ ಸೋಽಭವನ್ಮೌನೀ ತೇಷಾಂ ಗೌರವಯಂತ್ರಿತಃ ।
ಪ್ರಹಸ್ಯ ಚ ಪುನಃ ಪ್ರಾಹ ಕಿಮನಂತೇನ ಸಾಧ್ವಿತಿ ॥ ೧೯ ॥

ಸಾಧು ಭೋಃ ಕಿಮನಂತೇನ ಸಾಧು ಭೋ ಗುರವೋ ಮಮ ।
ಶ್ರೂಯತಾಂ ಯದನಂತೇನ ಯದಿ ಖೇದಂ ನ ಯಾಸ್ಯಥ ॥ ೨೦ ॥

ಧರ್ಮಾರ್ಥಕಾಮಮೋಕ್ಷಾಖ್ಯಾಃ ಪುರುಷಾರ್ಥಾ ಉದಾಹೃತಾಃ ।
ಚತುಷ್ಟಯಮಿದಂ ಯಸ್ಮಾತ್ತಸ್ಮಾತ್ಕಿಂ ಕಿಮಿದಂ ವಚಃ ॥ ೨೧ ॥

ಮರೀಚಿಮಿಶ್ರೈರ್ದಕ್ಷಾದ್ಯೈಸ್ತಥೈವಾನ್ಯೈರನಂತತಃ ।
ಧರ್ಮಃ ಪ್ರಾಪ್ತಸ್ತಥಾ ಚಾನ್ಯೈರರ್ಥಃ ಕಾಮಸ್ತಥಾಽಪರೈಃ ॥ ೨೨ ॥

ತತ್ತತ್ತ್ವವೇದಿನೋ ಭೂತ್ವಾ ಜ್ಞಾನಧ್ಯಾನಸಮಾಧಿಭಿಃ ।
ಅವಾಪುರ್ಮುಕ್ತಿಮಪರೇ ಪುರುಷಾ ಧ್ವಸ್ತಬಂಧನಾಃ ॥ ೨೩ ॥

ವೆಂದು ಹೇಳುತ್ತೀರಷ್ಟೆ. ಅಯೋಗ್ಯವಾದ ಈ ಮಾತನ್ನು ಯಾರಾದರೂ ಆಡುವರೇ? ಈ ಮಾತು ಮಾತ್ರ ಅರ್ಥವುಳ್ಳದ್ದಲ್ಲ" ಎಂದು ಹೇಳಿ ಗುರುಗಳಲ್ಲಿ ಗೌರವದಿಂದ ಸುಮ್ಮನಾದನು.

೨೦–೨೪. ಮತ್ತೆ ನಗುತ್ತ ಗುರುಗಳೇ "ಅನಂತನಿಂದೇನು ಪ್ರಯೋಜನ ಎಂದರಲ್ಲವೇ. ನಮ್ಮ ಗುರುಗಳಾದ ತಾವು ದುಃಖ ಹೊಂದದಿದ್ದರೆ ಅನಂತನ ಮಹಿಮೆ ಯನ್ನು ಹೇಳುವೆನು ಕೇಳಿರಿ. ದರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳು ಆ ಅನಂತನಿಂದಲೇ ಉಂಟಾಗುವುವು. ಇವು ವ್ಯರ್ಥವಾದವುಗಳಲ್ಲ. ಪೂಜ್ಯರಾದ ಮರೀಚಿ, ದಕ್ಷ ಮುಂತಾದವರು ಅನಂತನಿಂದಲೇ ಧರ್ಮರೂಪವಾದ ಪುರುಷಾರ್ಥವನ್ನು ಪಡೆದರು. ಮತ್ತೆ ಕೆಲವರು ಅರ್ಥಕಾಮಗಳನ್ನು ಪಡೆದರು. ಇನ್ನೂ ಕೆಲವರು ಜ್ಞಾನ, ಧ್ಯಾನ, ಸಮಾಧಿಗಳಿಂದ ಅನಂತನ ತತ್ವವನ್ನು ತಿಳಿದು

ಧರ್ಮೈಶ್ವರ್ಯಮಹಾತ್ಮ್ಯಜ್ಞಾನಸಂತತಿಕರ್ಮಣಾಂ ।
ವಿಮುಕ್ತೇಶ್ಚೈಕತೋ ಲಭ್ಯಂ ಮೂಲಮಾರಾಧನಂ ಹರೇಃ ॥ ೨೪ ॥

ಯತೋ ಧರ್ಮಾರ್ಥಕಾಮಾಖ್ಯಂ ಮುಕ್ತಿಶ್ಚಾಪಿ ಫಲಂ ದ್ವಿಜಾಃ ।
ತೇನಾಪಿ ಕಿಂ ಕಿಮಿತ್ಯೇವಮನಂತೇನ ಕಿಮುಚ್ಯತೇ ॥ ೨೫ ॥

ಕಿಂ ಚಾಪಿ ಬಹುನೋಕ್ತೇನ ಭವಂತೋ ಗುರವೋ ಮಮ ।
ವದಂತು ಸಾಧು ವಾಽಸಾಧು ವಿವೇಕೋಽಸ್ಮಾಕಮಲ್ಪಕಃ ॥ ೨೬ ॥

ಬಹುನಾತ್ರ ಕಿಮುಕ್ತೇನ ಸ ಏವ ಜಗತಃ ಪತಿಃ ।
ಸ ಕರ್ತಾ ಚ ವಿಕರ್ತಾ ಚ ಸಂಹರ್ತಾ ಚ ಹೃದಿ ಸ್ಥಿತಃ ॥ ೨೭ ॥

ಸ ಭೋಕ್ತಾ ಭೋಜ್ಯಮಪ್ಯೇವಂ ಸ ಏವ ಜಗದೀಶ್ವರಃ ।
ಭವದ್ಭಿರೇತತ್ ಕ್ಷಂತವ್ಯಂ ಬಾಲ್ಯಾದುಕ್ತಂ ತು ಯನ್ಮಯಾ ॥ ೨೮ ॥

ಸಂಸಾರದ ಕಟ್ಟನ್ನು ಬಿಡಿಸಿಕೊಂಡು ಮುಕ್ತಿಯನ್ನು ಪಡೆದರು. ಸಂಪತ್ತು, ಐಶ್ವರ್ಯ, ಮಹಿಮೆ, ಜ್ಞಾನ, ಸಂತಾನ, ಕರ್ಮ, ಮೋಕ್ಷ ಇವುಗಳು ಹರಿಯ ಪೂಜೆಯಿಂದ ದೊರೆವುವು. ಆದುದರಿಂದ ಇವೆಲ್ಲಕ್ಕೂ ವಿಷ್ಣುವಿನ ಪೂಜೆಯೇ ಮೂಲಕಾರಣವು.

೨೫-೨೮. ಗುರುಗಳೇ! ಯಾವ ಅನಂತನಿಂದ ಧರ್ಮಾದಿ ಚತುರ್ವಿಧ ಪುರುಷಾರ್ಥಗಳುಂಟಾಗುವುವೋ ಅಂತಹ ಅನಂತನಿಂದೇನು ಎಂದು ಏಕೆ ಹೇಳುವಿರಿ ಹೆಚ್ಚಾಗಿ ಹೇಳುವುದರಿಂದ ಪ್ರಯೋಜನವೇನು? ತಾವು ನನ್ನ ಗುರುಗಳು. ನಾನು ಹೇಳಿದುದು ಯುಕ್ತವೇ, ಅಯುಕ್ತವೇ ಎಂಬುದನ್ನು ಹೇಳಿರಿ. ನಮ್ಮ ತಿಳುವಳಿಕೆಯು ಅಲ್ಪವಾದುದು. ಹೆಚ್ಚು ಹೇಳುವುದೇನು, ಆ ವಿಷ್ಣುವೇ ಜಗತ್ತಿಗೆ ಸ್ವಾಮಿಯು. ಅವನೇ ಸೃಷ್ಟಿಪಾಲನೆ, ಸಂಹಾರಗಳನ್ನು ಮಾಡುವನು. ಎಲ್ಲರ ಮನಸ್ಸಿನಲ್ಲಿಯೂ ಇರುವನು. ಅವನೇ ಭೋಕ್ತೃವು ಮತ್ತು ಭೋಜ್ಯನು. ಹೀಗೆ ಅವನೇ ಜಗದೀಶ್ವರನು. ಬಾಲಭಾವದಿಂದ ಹೇಳಿದ ನನ್ನ ಮಾತಿನ ತಪ್ಪನ್ನು ತಾವು ಕ್ಷಮಿಸಬೇಕು." ಎಂದು ಹೇಳಿದನು.

॥ ಪುರೋಹಿತಾ ಊಚುಃ ॥

ದಹ್ಯಮಾನಸ್ತ್ವಮಸ್ಮಾಭಿರಗ್ನಿನಾ ಬಾಲ ರಕ್ಷಿತಃ ।
ಭೂಯೋ ನ ವಕ್ಷ್ಯಸೀತ್ಯೇವಂ ನೈವ ಜ್ಞಾತೋಽಸ್ಯ ಬುದ್ಧಿಮಾನ್ ॥ ೨೯ ॥

ಯದಾಸ್ಮದ್ವಚನಾನ್ಮೋಹಗ್ರಾಹಂ ನ ತ್ಯಕ್ಷ್ಯತೇ ಭವಾನ್ ।
ತತಃ ಕೃತ್ಯಾಂ ವಿನಾಶಾಯ ತವ ಸೃಕ್ಷ್ಯಾಮ ದುರ್ಮತೇ ॥ ೩೦ ॥

॥ ಪ್ರಹ್ಲಾದ ಉವಾಚ ॥

ಕಃ ಕೇನ ಹನ್ಯತೇ ಜಂತುರ್ಜಂತುಃ ಕಃ ಕೇನ ರಕ್ಷ್ಯತೇ ।
ಹಂತಿ ರಕ್ಷತಿ ಚೈವಾತ್ಮಾ ಹ್ಯಸತ್ಸಾಧು ಸಮಾಚರನ್ ॥ ೩೧ ॥

ಕರ್ಮಣಾ ಜಾಯತೇ ಸರ್ವಂ ಕರ್ಮೈವ ಗತಿ ಸಾಧನಂ ।
ತಸ್ಮಾತ್ಸರ್ವಪ್ರಯತ್ನೇನ ಸಾಧು ಕರ್ಮ ಸಮಾಚರೇತ್ ॥ ೩೨ ॥

೨೯–೩೦ ಪುರೋಹಿತರು. "ಎಲೈ ಪ್ರಹ್ಲಾದನೇ ನಿನ್ನನ್ನು ಬೆಂಕಿಯಲ್ಲಿ ಸುಡುತ್ತಿದ್ದಾಗ ಮುಂದೆ ಇಂತಹ ಮಾತುಗಳನ್ನಾಡುವುದಿಲ್ಲವೆಂದು ನಾವು ನಿನ್ನನ್ನು ಕಾಪಾಡಿದೆವು. ಬುದ್ಧಿವಂತನಾದ ನೀನು ಇದನ್ನು ತಿಳಿಯಲಿಲ್ಲ. ನಮ್ಮ ಮಾತಿನಿಂದ ನೀನು ದುರ್ಬುದ್ಧಿಯಿಂದುಂಟಾದ ಈ ಹಠವನ್ನು ಬಿಡದಿದ್ದರೆ ದುಷ್ಟನಾದ ನಿನ್ನ ನಾಶಕ್ಕಾಗಿ ಅಭಿಚಾರಕ ಕೃತ್ಯದಿಂದ ಭೂತವನ್ನು ಹುಟ್ಟಿಸುವೆವು" ಎಂದರು.

೩೧. ಪ್ರಹ್ಲಾದನು "ಯಾವ ಪ್ರಾಣಿಯು ಯಾವುದನ್ನು ಕಾಪಾಡಬಲ್ಲದು ? ಯಾವುದನ್ನು ಕೊಲ್ಲಬಲ್ಲದು? ಆತ್ಮನೇ ಕೆಟ್ಟ ಕೆಲಸಗಳನ್ನು ಮಾಡಿ ತನ್ನನ್ನೇ ಕೊಂದುಕೊಳ್ಳುವನು. ಒಳ್ಳೆಯದನ್ನು ಮಾಡಿ ತನ್ನನ್ನೇ ರಕ್ಷಿಸಿಕೊಳ್ಳುವನು. ಕರ್ಮದಿಂದಲೇ ಸಮಸ್ತವೂ ಉಂಟಾಗುವುದು. ಕರ್ಮವೇ ಸದ್ಗತಿಗೆ ಕಾರಣವು. ಆದುದರಿಂದ ಸರ್ವ ಪ್ರಯತ್ನದಿಂದಲೂ ಸತ್ಕರ್ಮವನ್ನೇ ಮಾಡಬೇಕು" ಎಂದನು

೩೨–೩೬. ಪ್ರಹ್ಲಾದನು ಹೀಗೆ ಹೇಳುತ್ತಲೆ ದೈತ್ಯರಾಜನ ಪುರೋಹಿತರು ಕೋಪವನ್ನು ಹೊಂದಿ ಅಭಿಚಾರಕ ಕೃತ್ಯವನ್ನು ಮಾಡಿ ಬಾಯಿಯಲ್ಲಿ ಉರಿಯನ್ನು

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತಾಸ್ತೇನ ತೇ ಕ್ರುದ್ಧಾ ದೈತ್ಯರಾಜಪುರೋಹಿತಾಃ ।
ಕೃತ್ಯಾಮುತ್ಪಾದಯಾಮಾಸುರ್ಜ್ವಾಲಾಮಾಲೋಜ್ಜ್ವಲಾಕೃತಿಂ ॥ ೩೩ ॥

ಅತಿಭೀಮಾ ಸಮಾಸಾದ್ಯ ಪಾದನ್ಯಾಸಕ್ಷತಕ್ಷಿತಿಃ ।
ಶೂಲೇನ ಸಾಧು ಸಂಕ್ರುದ್ಧಾ ತಂ ಜಘಾನಾಶು ವಕ್ಷಸಿ ॥ ೩೪ ॥

ತತ್ತಸ್ಯ ಹೃದಯಂ ಪ್ರಾಪ್ಯ ಶೂಲಂ ಬಾಲಸ್ಯ ದೀಪ್ತಿಮತ್ ।
ಜಗಾಮ ಖಂಡಿತಂ ಭೂಮೌ ತತ್ರಾಪಿ ಶತಧಾ ಗತಂ ॥ ೩೫ ॥

ಯತ್ರಾನಪಾಯೀ ಭಗವಾನ್ ಹೃದ್ಯಾಸ್ತೇ ಹರಿರೀಶ್ವರಃ ।
ಭಂಗೋ ಭವತಿ ವಜ್ರಸ್ಯ ತತ್ರ ಶೂಲಸ್ಯ ಕಾ ಕಥಾ ॥ ೩೬ ॥

ಅಪಾಪೇ ತತ್ರ ಪಾಪೈಶ್ಚ ಪಾತಿತಾ ದೈತ್ಯಯಾಜಕೈಃ ।
ತಾನೇವ ಸಾ ಜಘಾನಾಶು ಕೃತ್ಯಾ ನಾಶಂ ಜಗಾಮ ಚ ॥ ೩೭ ॥

ಉಗುಳುವ ಕೃತ್ಯ ಎಂಬ ಭೂತವನ್ನು ಹುಟ್ಟಿಸಿದರು. ಆ ಭೂತವು ಭಯಂಕರವಾಗಿ ಹೆಜ್ಜೆಯನ್ನಿಟ್ಟು ಭೂಮಿಯಲ್ಲಿ ಹಳ್ಳವನ್ನು ಮಾಡುತ್ತ ಕೋಪದಿಂದ ಬಂದು ತನ್ನ ಕೈಯಲ್ಲಿದ್ದ ಶೂಲಾಯುಧದಿಂದ ಪ್ರಹ್ಲಾದನ ಎದೆಗೆ ಹೊಡೆಯಿತು. ಆ ಶೂಲವು ಬಾಲಕನ ಎದೆಗೆ ತಗುಲಿ ನೂರು ಚೂರಾಗಿ ಭೂಮಿಯ ಮೇಲೆ ಬಿದ್ದಿತು. ಮಹಾ ಮಹಿಮನಾದ ಹರಿಯು ಯಾವನ ಹೃದಯದಲ್ಲಿರುವನೋ ಅವನ ಎದೆಗೆ ತಗುಲಿದ ವಜ್ರಾಯುಧವೇ ಮುರಿದುಬೀಳುವುದು. ಎಂದ ಮೇಲೆ ಶೂಲಾಯುಧದ ಗತಿಯನ್ನು ಹೇಳಬೇಕಾದುದೇನು? ಪಾಪಿಗಳಾದ ಪುರೋಹಿತರು ಪುಣ್ಯವಂತನಾದ ಪ್ರಹ್ಲಾದನ ಮೇಲೆ ಪ್ರಯೋಗಿಸಿದ ಕೃತ್ಯ ಎಂಬ ಭೂತವು ಪುರೋಹಿತರನ್ನೇ ಕೊಂದು ನಾಶವಾಯಿತು.

೩೭. ಪ್ರಹ್ಲಾದನು ಭೂತದಿಂದ ಉರಿಯುತ್ತಿರುವ ಪುರೋಹಿತರನ್ನು ನೋಡಿ ಕೃಷ್ಣನೇ, ಅನಂತನೇ ಕಾಪಾಡು ಎಂದು ಹೇಳುತ್ತ ಅವರನ್ನು ರಕ್ಷಿಸುವುದಕ್ಕಾಗಿ ಅವರ ಸಮೀಪಕ್ಕೆ ಓಡಿಹೋದನು.

ಕೃತ್ಯಯಾ ದಹ್ಯಮಾನಾಂಸ್ತಾನ್ವಿಲೋಕ್ಯ ಸ ಮಹಾಮತಿಃ ।
ಪಾಹಿ ಕೃಷ್ಣೇತ್ಯನಂತೇತಿ ವದನ್ನಭ್ಯವಪದ್ಯತ ॥ ೩೮ ॥

॥ ಪ್ರಹ್ಲಾದ ಉವಾಚ ॥

ಸರ್ವವ್ಯಾಪಿನ್ ಜಗದ್ರೂಪ ಜಗತ್ಸ್ರಷ್ಟರ್ಜನಾರ್ದನ ।
ಪಾಹಿ ವಿಪ್ರಾನಿಮಾನಸ್ಮಾದ್ದುಃಸಹಾನ್ಮಂತ್ರಪಾವಕಾತ್ ॥ ೩೯ ॥

ಯಥಾ ಸರ್ವೇಷು ಭೂತೇಷು ಸರ್ವವ್ಯಾಪೀ ಜಗದ್ಗುರುಃ ।
ವಿಷ್ಣುರೇವ ತಥಾ ಸರ್ವೇ ಜೀವನ್ತ್ವೇತೇ ಪುರೋಹಿತಾಃ ॥ ೪೦ ॥

ಯಥಾ ಸರ್ವಗತಂ ವಿಷ್ಣುಂ ಮನ್ಯಮಾನೋಽನಪಾಯಿನಂ ।
ಚಿಂತಯಾಮ್ಯರಿಪಕ್ಷೇಽಪಿ ಜೀವಂತ್ವೇತೇ ಪುರೋಹಿತಾಃ ॥ ೪೧ ॥

ಯೇ ಹಂತುಮಾಗತಾ ದತ್ತಂ ಯೈರ್ವಿಷಂ ಯೈರ್ಹುತಾಶನಃ ।
ಯೈರ್ದಿಗ್ಗಜೈರಹಂ ಕ್ಷುಣ್ಣೋ ದಷ್ಟಃ ಸರ್ಪೈಶ್ಚ ಯೈರಪಿ ॥ ೪೨ ॥

೩೮-೪೨. "ಸರ್ವವ್ಯಾಪಿಯೂ, ಜಗತ್ತಿನ ಸ್ವರೂಪನೂ, ಪ್ರಪಂಚವನ್ನು ಸೃಷ್ಟಿಸಿದವನೂ ಆದ ಜನಾರ್ದನನೇ ಅಭಿಚಾರಿಕ ಮಂತ್ರರೂಪವಾದ ಕ್ರೂರವಾದ ಅಗ್ನಿಯಿಂದ ಸುಟ್ಟುಹೋಗುತ್ತಿರುವ ಈ ಬ್ರಾಹ್ಮಣರನ್ನು ರಕ್ಷಿಸು. ಸಮಸ್ತ ಭೂತಗಳಲ್ಲಿಯೂ ಸರ್ವವ್ಯಾಪಿಯಾದ ವಿಷ್ಣುವೇ ಇರುವುದರಿಂದ ಈ ಪುರೋಹಿತರು ಜೀವಿಸಲಿ. ನಾನು ವಿಷ್ಣುವು ಸರ್ವಗತನಾಗಿರುವನೆಂದೂ, ಶತ್ರುಪಕ್ಷದಲ್ಲಿಯೂ. ಇರುವನೆಂದೂ ಚಿಂತಿಸುತ್ತಿರುವುದು ನಿಜವಾದರೆ ಈ ಪುರೋಹಿತರು ಜೀವಿಸಲಿ. ಯಾರು ನನ್ನನ್ನು ಕೊಲ್ಲುವುದಕ್ಕೆ ಬಂದರೋ, ಯಾರು ನನಗೆ ವಿಷವನ್ನು ಕೊಟ್ಟರೋ ಯಾರು ನನ್ನನ್ನು ಬೆಂಕಿಯಲ್ಲಿ ಹಾಕಿದರೋ, ದಿಗ್ಗಜಗಳಿಂದ ಯಾರು ನನಗೆ ಬಾಧೆಯನ್ನುಂಟುಮಾಡಿದರೋ, ಯಾವ ಸರ್ಪಗಳು ನನ್ನನ್ನು ಕಚ್ಚಿದುವೋ ಅವುಗಳೆಲ್ಲವನ್ನೂ ನಾನು ಮಿತ್ರಪಕ್ಷದವರಂತೆ ಸಮಾನವಾಗಿ ತಿಳಿದು ಸ್ವಲ್ಪವೂ ಪಾಪಕಾರ್ಯಗಳನ್ನು ಮಾಡದಿದ್ದರೆ ಆ ಸತ್ಯದ ಮಹಿಮೆಯಿಂದ ಈ ದಾನವರ ಪುರೋಹಿತರು ಜೀವಿಸಲಿ" ಎಂದು ಪ್ರಹ್ಲಾದನು ಹೇಳಿದನು.

ತೇಷ್ವಹಂ ಮಿತ್ರಭಾವೇನ ಸಮಃ ಪಾಪೋಽಸ್ಮಿ ನ ಕ್ವಚಿತ್ ।
ಯಥಾ ತೇನಾದ್ಯ ಸತ್ಯೇನ ಜೀವಂತ್ವಸುರಯಾಜಕಾಃ ॥ ೪೩ ॥

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತಾಸ್ತೇನ ತೇ ಸರ್ವೇ ಸಂಸ್ಪೃಷ್ಟಾಶ್ಚ ನಿರಾಮಯಾಃ ।
ಸಮುತ್ತಸ್ಥುರ್ದ್ವಿಜಾ ಭೂಯಸ್ತಮೂಚುಃ ಪ್ರಶ್ರಯಾನ್ವಿತಂ ॥ ೪೪ ॥

॥ ಪುರೋಹಿತಾ ಊಚುಃ ॥

ದೀರ್ಘಾಯುರಪ್ರತಿಹತೋ ಬಲವೀರ್ಯಸಮನ್ವಿತಃ ।
ಪುತ್ರಪೌತ್ರಧನೈಶ್ವರ್ಯೈರ್ಯುಕ್ತೋ ವತ್ಸ ಭವೋತ್ತಮಃ ॥ ೪೫

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತ್ವಾ ತಂ ತತೋ ಗತ್ವಾ ಯಥಾವೃತ್ತಂ ಪುರೋಹಿತಾಃ ।
ದೈತ್ಯರಾಜಾಯ ಸಕಲಮಾಚಚಖ್ಯುರ್ಮಹಾಮುನೇ ॥ ೪೬ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ
ಅಷ್ಟಾದಶೋಽಧ್ಯಾಯಃ

೪೩–೪೪. ಪ್ರಹ್ಲಾದನು ಹೀಗೆ ಹೇಳುತ್ತಲು ಆ ಪುರೋಹಿತರು ಸಂತೋಷದಿಂದ ಯಾವ ಬಾಧೆಯೂ ಇಲ್ಲದವರಾಗಿ ಎದ್ದು ಬಂದು ವಿನಯದಿಂದಿರುವ ಅವನನ್ನು ಕುರಿತು, "ಪ್ರೀತಿಪಾತ್ರನಾದ ಪ್ರಹ್ಲಾದನೇ, ನೀನು ದೀರ್ಘಾಯುವಾಗಿಯೂ ಕಡೆಯಿಲ್ಲದ ಬಲಪರಾಕ್ರಮಗಳಿಂದ ಕೂಡಿದವನಾಗಿಯೂ, ಪುತ್ರ ಪೌತ್ರರಿಂದಲೂ, ಧನದಿಂದಲೂ, ಐಶ್ವರ್ಯದಿಂದಲೂ ಕೂಡಿ ಶ್ರೇಷ್ಠವಾದ ಗುಣವುಳ್ಳವನಾಗಿ ಬಾಳು" ಎಂದು ಆಶೀರ್ವಾದ ಮಾಡಿದರು.

೪೫–೪೬. ಆಮೇಲೆ ಪುರೋಹಿತರು ದೈತ್ಯರಾಜನ ಸಮೀಪಕ್ಕೆ ಹೋಗಿ ನಡೆದ ಸಂಗತಿಗಳನ್ನು ಅವನಿಗೆ ವಿಜ್ಞಾಪನೆ ಮಾಡಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಹದಿನೆಂಟನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಏಕೋನವಿಂಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಹಿರಣ್ಯಕಶಿಪುಃ ಶ್ರುತ್ವಾ ತಾಂ ಕೃತ್ಯಾಂ ವಿತಥೀಕೃತಾಂ ।
ಆಹೂಯ ಪುತ್ರಂ ಪಪ್ರಚ್ಛ ಪ್ರಭಾವಸ್ಯಾಸ್ಯ ಕಾರಣಂ ॥ ೧ ॥

॥ ಹಿರಣ್ಯಕಶಿಪುರುವಾಚ ॥

ಪ್ರಹ್ಲಾದ ಸುಪ್ರಭಾವೋಽಸಿ ಕಿಮೇತತ್ತೇ ವಿಚೇಷ್ಟಿತಂ ।
ಏತನ್ಮಂತ್ರಾದಿಜನಿತಮುತಾಹೋ ಸಹಜಂ ತವ ॥ ೨ ॥

॥ ಶ್ರೀ ಪರಾಶರ ಉವಾಚ ॥

ಏವಂ ಪೃಷ್ಟಸ್ತದಾ ಪಿತ್ರಾ ಪ್ರಹ್ಲಾದೋಽಸುರಬಾಲಕಃ ।
ಪ್ರಣಿಪತ್ಯ ಪಿತುಃ ಪಾದಾವಿದಂ ವಚನಮಬ್ರವೀತ್ ॥ ೩ ॥

ಹತ್ತೊಂಬತ್ತನೆಯ ಅಧ್ಯಾಯವು

೧–೩. ಅಭಿಚಾರಿಕ ಕೃತ್ಯದಿಂದ ಹುಟ್ಟಿದ ಭೂತವು ವ್ಯರ್ಥವಾಗಿ ನಾಶವಾದುದನ್ನು ಕೇಳಿ, ಹಿರಣ್ಯಕಶಿಪುವು ತನ್ನ ಮಗನನ್ನು ಕರೆಸಿ ಇಂತಹ ಮಹಿಮೆಯು ಅವನಿಗೆ ಉಂಟಾಗಲು ಕಾರಣವೇನೆಂದು ಯೋಚಿಸಿ, "ಎಲೈ ಮಗನೇ ನೀನು ಮಹಾ ಮಹಿಮನಾಗಿರುವೆ. ಈ ಮಹಿಮೆಯು ನಿನಗೆ ಮಂತ್ರ ಜಪಾದಿಗಳಿಂದ ಉಂಟಾಯಿತೆ? ಅಥವಾ ಸ್ವಾಭಾವಿಕವಾದುದೇ ?" ಎಂದು ಪ್ರಶ್ನೆ ಮಾಡಿದನು. ಇದನ್ನು ಕೇಳಿ ಬಾಲಕನಾದ ಪ್ರಹ್ಲಾದನು ತಂದೆಯ ಪಾದಗಳಿಗೆ ನಮಸ್ಕಾರವನ್ನು ಮಾಡಿ ಹೇಳಿದನು.

॥ ಪ್ರಹ್ಲಾದ ಉವಾಚ ॥

ನ ಮಂತ್ರಾದಿಕೃತಂ ತಾತ ನ ಚ ನೈಸರ್ಗಿಕೋ ಮಮ ।
ಪ್ರಭಾವ ಏಷ ಸಾಮಾನ್ಯೋ ಯಸ್ಯ ಯಸ್ಯಾಚ್ಯುತೋ ಹೃದಿ ॥ ೪ ॥

ಅನ್ಯೇಷಾಂ ಯೋ ನ ಪಾಪಾನಿ ಚಿಂತಯತ್ಯಾತ್ಮನೋ ಯಥಾ ।
ತಸ್ಯ ಪಾಪಾಗಮಸ್ತಾತ ಹೇತ್ವಾಭಾವಾನ್ನ ವಿದ್ಯತೇ ॥ ೫ ॥

ಕರ್ಮಣಾ ಮನಸಾ ವಾಚಾ ಪರಪೀಡಾಂ ಕರೋತಿ ಯಃ ।
ತದ್ಬೀಜಂ ಜನ್ಮ ಫಲತಿ ಪ್ರಭೂತಂ ತಸ್ಯ ಚಾಶುಭಂ ॥ ೬ ॥

ಸೋಽಹಂ ನ ಪಾಪಮಿಚ್ಛಾಮಿ ನ ಕರೋಮಿ ವದಾಮಿ ವಾ ।
ಚಿಂತಯನ್ಸರ್ವಭೂತಸ್ಥಮಾತ್ಮನ್ಯಪಿ ಚ ಕೇಶವಂ ॥ ೭ ॥

ಶಾರೀರಂ ಮಾನಸಂ ದುಃಖಂ ದೈವಂ ಭೂತಭವಂ ತಥಾ ।
ಸರ್ವತ್ರ ಶುಭಚಿತ್ತಸ್ಯ ತಸ್ಯ ಮೇ ಜಾಯತೇ ಕುತಃ ॥ ೮ ॥

೪–೮. ಪ್ರಹ್ಲಾದನು "ತಂದೆಯೇ ಕೇಳು. ಈ ಮಹಿಮೆಯು ನನಗೆ ಸ್ವಭಾವಸಿದ್ಧವಾದುದೂ ಅಲ್ಲ. ಮಂತ್ರ ಜಪಾದಿಗಳಿಂದ ಬಂದುದೂ ಅಲ್ಲ. ಯಾರ ಯಾರ ಮನಸ್ಸಿನಲ್ಲಿ ವಿಷ್ಣುವು ಇರುವನೋ ಅವರೆಲ್ಲರಿಗೂ ಈ ಮಹಿಮೆಯು ಸಾಮಾನ್ಯವಾಗಿರುವುದು. ತಂದೆಯೇ ಇತರರಿಗೆ ಯಾರು ಪಾಪಫಲವಾದ ದುಃಖಗಳು ಉಂಟಾಗಲೆಂದು ಯೋಚಿಸುವುದಿಲ್ಲವೋ ಅವರಿಗೆ ಕಾರಣವಿಲ್ಲದುದರಿಂದ ಪಾಪಫಲವಾದ ದುಃಖಗಳು ಬರುವುದೇ ಇಲ್ಲ. ಯಾವನು ಮನೋವಾಕ್ಕಾಯಗಳಿಂದ ಪರರಿಗೆ ಹಿಂಸೆಯನ್ನು ಮಾಡುವನೋ ಅವನಿಗೆ ಅದೇ ಕಾರಣವಾಗಿ ಜನ್ಮವೂ ವಿಶೇಷವಾಗಿ ಅಶುಭ ಫಲವೂ ಉಂಟಾಗುವುದು. ನಾನಾದರೊ ಪಾಪವನ್ನು ಮನಸ್ಸಿನಲ್ಲಿ ಯೋಚಿಸುವುದಿಲ್ಲ. ಮಾತಿನಲ್ಲಿ ಹೇಳುವುದಿಲ್ಲ. ಅವಯವಗಳಿಂದ ಪಾಪಕಾರ್ಯಗಳನ್ನು ಮಾಡುವುದೂ ಇಲ್ಲ. ವಿಷ್ಣುವು ಸಮಸ್ತ ಪ್ರಾಣಿಗಳಲ್ಲಿಯೂ ಇರುವನೆಂದು ಮನಸ್ಸಿನಲ್ಲಿ ಯೋಚಿಸುತ್ತಿರುವೆನು. ಶರೀರ ಮತ್ತು ಮನಸ್ಸಿಗೆ ಸಂಬಂಧಪಟ್ಟ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ ಎಂಬ ಮೂರು ಬಗೆಯ ದುಃಖಗಳು ಎಲ್ಲ

ಏವಂ ಸರ್ವೇಷು ಭೂತೇಷು ಭಕ್ತಿರವ್ಯಭಿಚಾರಿಣೀ ।
ಕರ್ತವ್ಯಾ ಪಂಡಿತೈರ್ಜ್ಞಾತ್ವಾ ಸರ್ವಭೂತಮಯಂ ಹರಿಂ ॥ ೯ ॥

॥ ಶ್ರೀ ಪರಾಶರ ಉವಾಚ ॥

ಇತಿ ಶ್ರುತ್ವಾ ಸ ದೈತ್ಯೇಂದ್ರಃ ಪ್ರಾಸಾದಶಿಖರೇ ಸ್ಥಿತಃ ।
ಕ್ರೋಧಾಂಧಕಾರಿತಮುಖಃ ಪ್ರಾಹ ದೈತೇಯಕಿಂಕರಾನ್ ॥ ೧೦ ॥

॥ ಹಿರಣ್ಯಕಶಿಪುರುವಾಚ ॥

ದುರಾತ್ಮಾ ಕ್ಷಿಪ್ಯತಾಮಸ್ಮಾತ್ಪ್ರಾಸಾದಾಚ್ಛತಯೋಜನಾತ್ ।
ಗಿರಿಪೃಷ್ಠೇ ಪತತ್ವಸ್ಮಿನ್ ಶಿಲಾಭಿನ್ನಾಂಗಸಂಹತಿಃ ॥ ೧೧ ॥

॥ ಶ್ರೀ ಪರಾಶರ ಉವಾಚ ॥

ತತಸ್ತಂ ಚಿಕ್ಷಿಪುಸ್ಸರ್ವೇ ಬಾಲಂ ದೈತೇಯಕಿಂಕರಾಃ ।
ಪಪಾತ ಸೋಽಪ್ಯಧಃ ಕ್ಷಿಪ್ತೋ ಹೃದಯೇನೋದ್ವಹನ್ ಹರಿಂ ॥ ೧೨ ॥

ಸಂದರ್ಭಗಳಲ್ಲಿಯೂ ಶುಭವಾದ ಬುದ್ಧಿಯುಳ್ಳ ನನಗೆ ಹೇಗೆ ಬರುವುವು ? ಹೀಗೆ ಹರಿಯು ಸಮಸ್ತ ಭೂತಸ್ವರೂಪನೆಂದು ತಿಳಿದು ಪಂಡಿತರು ಸಮಸ್ತ ಪ್ರಾಣಿಗಳಲ್ಲಿಯೂ ಅಚಲವಾದ ಪ್ರೀತಿಯನ್ನು ಇಡಬೇಕು" ಎಂದನು.

೧೦–೧೧. ಪ್ರಹ್ಲಾದನ ಮಾತನ್ನು ಕೇಳಿ, ಉಪ್ಪರಿಗೆಯ ಮೇಲಿದ್ದ ದೈತ್ಯರಾಜನು ಕೋಪದಿಂದ ಕಪ್ಪಾದ ಮುಖವುಳ್ಳವನಾಗಿ ದೈತ್ಯರ ಆಳುಗಳನ್ನು ಕುರಿತು "ದುರಾತ್ಮನಾದ ಈ ಪ್ರಹ್ಲಾದನನ್ನು ನೂರು ಯೋಜನದಲ್ಲಿರುವ ಉಪ್ಪರಿಗೆಯ ಶಿಖರದಿಂದ ತಳ್ಳಿರಿ. ಪರ್ವತದ ಕೆಳಗಿರುವ ಕಲ್ಲುಗಳ ಮೇಲೆ ಇವನ ಶರೀರವು ಬಿದ್ದು ಚೂರುಗಳಾಗಲಿ" ಎಂದನು.

೧೨–೧೩. ಬಳಿಕ ದೈತ್ಯರ ಆಳುಗಳು ಎಲ್ಲರೂ ಬಂದು ಬಾಲಕನನ್ನು ಉಪ್ಪರಿಗೆಯಿಂದ ಕೆಳಕ್ಕೆ ತಳ್ಳಿದರು. ಪ್ರಹ್ಲಾದನು ಮನಸ್ಸಿನಲ್ಲಿ ಹರಿಯನ್ನು ಧ್ಯಾನಿಸುತ್ತ

ಪತಮಾನಂ ಜಗದ್ಧಾತ್ರೀ ಜಗದ್ಧಾತರಿ ಕೇಶವೇ ।
ಭಕ್ತಿಯುಕ್ತಂ ದಧಾರೈನಮುಪಸಂಗಮ್ಯ ಮೇದಿನೀ ॥ ೧೪ ॥

ತತೋ ವಿಲೋಕ್ಯ ತಂ ಸ್ವಸ್ಥಮವಿಶೀರ್ಣಾಸ್ಥಿಬಂಧನಂ ।
ಹಿರಣ್ಯಕಶಿಪುಃ ಪ್ರಾಹ ಶಂಬರಂ ಮಾಯಿನಾಂ ವರಂ ॥ ೧೫ ॥

॥ ಹಿರಣ್ಯಕಶಿಪುರುವಾಚ ॥

ನಾಸ್ಮಾಭಿಶ್ಶಕ್ಯತೇ ಹಂತುಮಯಂ ದುರ್ವೃತ್ತಬಾಲಕಃ ।
ಮಾಯಾಂ ವೇತ್ತಿ ಭವಾಂಸ್ತಸ್ಮಾನ್ಮಾಯಯೈನಂ ನಿಷೂದಯ ॥ ೧೬ ॥

॥ ಶಂಬರ ಉವಾಚ ॥

ಸೂದಯಾಮ್ಯೇಷ ದೈತ್ಯೇಂದ್ರ ಪಶ್ಯ ಮಾಯಾಬಲಂ ಮಮ ।
ಸಹಸ್ರಮತ್ರ ಮಾಯಾನಾಂ ಪಶ್ಯ ನೋ ದಶಕಂ ತಥಾ ॥ ೧೭ ॥

ಕೆಳಕ್ಕೆ ಬೀಳುತ್ತಿದ್ದನು. ಲೋಕಕ್ಕೆ ತಾಯಿಯಾದ ಭೂದೇವಿಯು ಬಂದು ಸೃಷ್ಟಿಕರ್ತನಾದ ವಿಷ್ಣುವಿನಲ್ಲಿ ಭಕ್ತಿಯುಳ್ಳ ಬಾಲಕನನ್ನು ಹಿಡಿದುಕೊಂಡಳು.

೧೫–೧೬ ಹಿರಣ್ಯಕಶಿಪುವು ಅಷ್ಟು ಮೇಲಿನಿಂದ ಬಿದ್ದ ಪ್ರಹ್ಲಾದನ ಮೂಳೆಗಳು ಮುರಿಯದೆ ಅವನು ಸುಖವಾಗಿದ್ದುದನ್ನು ಕಂಡು ಮಾಯಾ ವಿದ್ಯೆಗಳನ್ನು ಬಲ್ಲವರಲ್ಲಿ ಶ್ರೇಷ್ಠನಾದ ಶಂಬರಾಸುರನನ್ನು ಕರೆದು "ಎಲೈ ಶಂಬರನೇ ಈ ದುಷ್ಟನಾದ ಬಾಲಕನನ್ನು ಕೊಲ್ಲಲು ನಮಗೆ ಸಾಧ್ಯವಾಗಲಿಲ್ಲ. ನೀನು ಮಾಯೆಯನ್ನು ಬಲ್ಲವನಾದುದರಿಂದ ಆ ಶಕ್ತಿಯಿಂದ ಇವನನ್ನು ಸಂಹರಿಸು" ಎಂದನು.

೧೭–೧೮. ಶಂಬರನು, "ದೈತ್ಯೇಂದ್ರನೇ ನನ್ನ ಸಾವಿರಾರು ಮಾಯಾಶಕ್ತಿಗಳನ್ನು ನೋಡು. ಇವನನ್ನು ಕೊಲ್ಲುವೆನು" ಎಂದು ಹೇಳಿ ಸರ್ವತ್ರ ಸಮಾನ ಭಾವವನ್ನಿಟ್ಟಿದ್ದ ಪ್ರಹ್ಲಾದನನ್ನು ಕೊಲ್ಲಬೇಕೆಂದು ಮಾಯೆಯನ್ನು ಪ್ರಯೋಗಿಸಿದನು

॥ ಶ್ರೀ ಪರಾಶರ ಉವಾಚ ॥

ತತಸ್ಸಮಸ್ತಜನ್ಮಾಯೂಃ ಪ್ರಹ್ಲಾದೇ ಶಂಬರೋಽಸುರಃ ।
ವಿನಾಶಮಿಚ್ಛನ್ ದುರ್ಬುದ್ಧಿಸ್ಸರ್ವತ್ರ ಸಮದರ್ಶಿನಿ ॥ ೧೭ ॥

ಸಮಾಹಿತಮನಾಭೂತ್ವಾ ಶಂಬರೇಪಿ ವಿಮತ್ಸರಃ ।
ಮೈತ್ರೇಯ ಸೋಽಪಿ ಪ್ರಹ್ಲಾದಸ್ಸಸ್ಮಾರ ಮಧುಸೂದನಂ ॥ ೧೮ ॥

॥ ಶ್ರೀ ಪರಾಶರ ಉವಾಚ ॥

ತತೋ ಭಗವತಾ ತಸ್ಯ ರಕ್ಷಾರ್ಥಂ ಚಕ್ರಮುತ್ತಮಂ ।
ಆಜಗಾಮ ಸಮಾಜ್ಞಪ್ತಂ ಜ್ವಾಲಾಮಾಲಿ ಸುದರ್ಶನಂ ॥ ೧೯ ॥

ತೇನ ಮಾಯಾ ಸಹಸ್ರಂ ತಚ್ಛಂಬರಸ್ಯಾಶುಗಾಮಿನಾ ।
ಬಾಲಸ್ಯ ರಕ್ಷತಾ ದೇಹಮೇಕೈಕಂ ಚ ನಿಷೂದಿತಂ ॥ ೨೦ ॥

ಸಂಶೋಷಕಂ ತದಾ ವಾಯುಂ ದೈತ್ಯೇಂದ್ರ ಇದಮಬ್ರವೀತ್ ।
ಶೀಘ್ರಮೇಷ ಮಮಾದೇಶಾದ್ದುರಾತ್ಮಾ ನೀಯತಾಂ ಕ್ಷಯಂ ॥ ೨೧ ॥

ಪ್ರಹ್ಲಾದನು ಆಶಂಬರನಲ್ಲಿಯೂ ದ್ವೇಷವಿಲ್ಲದವನಾಗಿ ಏಕಾಗ್ರಚಿತ್ತದಿಂದ ವಿಷ್ಣುವನ್ನು ಧ್ಯಾನಿಸುತ್ತಿದ್ದನು.

೧೯–೨೦. ಆ ಮೇಲೆ ಮಹಾಮಹಿಮನಾದ ವಿಷ್ಣುವು ಅವನ ರಕ್ಷಣಾರ್ಥವಾಗಿ ತನ್ನ ಸುದರ್ಶನವೆಂಬ ಚಕ್ರಕ್ಕೆ ಆಜ್ಞೆಮಾಡಿದನು. ಆ ಚಕ್ರವು ಉರಿಗಳ ಸಮೂಹದಿಂದ ಕೂಡಿ ಅವನ ಬಳಿಗೆ ಬಂದಿತು. ಸುದರ್ಶನವು ಶುದ್ಧ ಜ್ಞಾನ ಸ್ವರೂಪವಾದುದರಿಂದ ಅದು ಬಾಲಕನನ್ನು ರಕ್ಷಿಸುತ್ತ ಶಂಬರನು ಪ್ರಯೋಗಿಸಿದ ಸಾವಿರಾರು ಮಾಯೆಗಳನ್ನು ಒದೊಂದಾಗಿ ನಾಶಮಾಡಿತು.

೨೧–೨೪ ಆಗ ದೈತ್ಯರಾಜನು ದೃಶ್ಯವಾದ ವಧೋಪಾಯಗಳನ್ನು ಬಿಟ್ಟು, ಅದೃಶ್ಯವಾದ ವಧೋಪಾಯವನ್ನು ಮಾಡಬೇಕೆಂದು ವಾಯುವನ್ನು ಕುರಿತು 'ಎಲೈ

ತಥೇತ್ಯುಕ್ತ್ವಾಽಥ ಸೋಽಪ್ಯೇನಂ ವಿವೇಶ ಪವನೋ ಲಘು ।
ಶೀತೋಽತಿರೂಕ್ಷಶ್ಶೋಷಾಯ ತದ್ದೇಹಸ್ಯಾತಿದುಸ್ಸಹಃ ॥ ೨೨ ॥

ತೇನಾವಿಷ್ಟಂ ತಥಾತ್ಮಾನಂ ಸ ಬುದ್ಧ್ವಾ ದೈತ್ಯಬಾಲಕಃ ।
ಹೃದಯೇನ ಮಹಾತ್ಮಾನಂ ದಧಾರ ಧರಣೀಧರಂ ॥ ೨೩ ॥

ಹೃದಯಸ್ಥಸ್ತತಸ್ತಸ್ಯ ತಂ ವಾಯುಮತಿಶೋಷಣಂ ।
ಪಪೌ ಜನಾರ್ದನಃ ಕ್ರುದ್ಧಸ್ಸ ಯಯೌ ಪವನಃ ಕ್ಷಯಂ ॥ ೨೪ ॥

ಕ್ಷೀಣಾಸು ಸರ್ವಮಾಯಾಸು ಪವನೇ ಸಂಕ್ಷಯಂ ಗತೇ ।
ಜಗಾಮ ಸೋಽಪಿ ಭವನಂ ಗುರೋರೇವ ಮಹಾಮತಿಃ ॥ ೨೫ ॥

ಅಹನ್ಯಹನ್ಯಥಾಚಾರ್ಯೋ ನೀತಿಂ ರಾಜ್ಯಫಲಪ್ರದಾಂ ।
ಗ್ರಾಹಯಾಮಾಸ ತಂ ಬಾಲಂ ರಾಜ್ಞಾಮುಶನಸಾ ಕೃತಾಂ ॥ ೨೬ ॥

ಗೃಹೀತನೀತಿಶಾಸ್ತ್ರಂ ತಂ ವಿನೀತಂ ಸ ಯದಾ ಗುರುಃ ।
ಮೇನೇ ತದೈನಂ ತತ್ಪಿತ್ರೇ ಕಥಯಾಮಾಸ ಶಿಕ್ಷಿತಂ ॥ ೨೭ ॥

ಶೋಷವಾಯುವೆ, ಈ ದುರಾತ್ಮನನ್ನು ಬೇಗ ನಾಶಮಾಡು' ಎಂದು ಅಪ್ಪಣೆ ಮಾಡಿದನು. ವಾಯುವು ಅಪ್ಪಣೆಯೆಂದು ಶೀಘ್ರವಾಗಿ ಶೀತರೂಕ್ಷ ರೂಪವಾಗಿ ಪ್ರಹ್ಲಾದನ ಶರೀರವನ್ನು ಪ್ರವೇಶಿಸಿದನು. ದೈತ್ಯಬಾಲಕನು ಇವನ್ನು ತಿಳಿದು ತನ್ನ ಮನಸ್ಸಿನಲ್ಲಿ ವಾಯುಭಕ್ಷ ಸ್ವರೂಪನಾದ ಧರಣೀಧರನೆಂಬ ವಿಷ್ಣುವನ್ನು ಧ್ಯಾನಿಸಿದನು ಮನಸ್ಸಿನಲ್ಲಿ ನೆಲಸಿದ್ದ ಆ ವಿಷ್ಣುವು ಕೋಪದಿಂದ ಆ ವಾಯುವನ್ನು ಪಾನ ಮಾಡುತ್ತಲು ಅದು ನಾಶವಾಯಿತು. ಸಮಸ್ತ ಮಾಯೆಗಳೂ ನಾಶವಾದ ಮೇಲೆ ವಾಯುವು ನಾಶವಾಗುತ್ತಲು ಮಹಾಬುದ್ಧಿವಂತನಾದ ಪ್ರಹ್ಲಾದನು ಗುರುಗಳ ಮನೆಗೇ ಹೋಗಿ ಸೇರಿದನು.

೨೬-೨೭. ಗುರುವು ತನ್ನ ಮನೆಯಲ್ಲಿಯೇ ಇದ್ದ ಪ್ರಹ್ಲಾದನಿಗೆ ಶುಕ್ರಾಚಾರ್ಯನು ರಾಜರಿಗೋಸ್ಕರ ಮಾಡಿದ ರಾಜನೀತಿ ಶಾಸ್ತ್ರವನ್ನು ಪ್ರತಿದಿನವೂ ಹೇಳಿಕೊಡುತ್ತಿದ್ದನು. ಅವನು ನೀತಿಶಾಸ್ತ್ರವನ್ನೆಲ್ಲ ಕಲಿತುಕೊಂಡ ಮೇಲೆ ವಿಧೇಯನಾಗಿರುವನೆಂದು ತಿಳಿದುಕೊಂಡು ಗುರುವು ಅವನ ತಂದೆಯನ್ನ

॥ ಆಚಾರ್ಯ ಉವಾಚ ॥

ಗೃಹೀತನೀತಿಶಾಸ್ತ್ರಸ್ತೇ ಪುತ್ರೋ ದೈತ್ಯಪತೇ ಕೃತಃ ।
ಪ್ರಹ್ಲಾದಸ್ತತ್ತ್ವತೋ ವೇತ್ತಿ ಭಾರ್ಗವೇಣ ಯದೀರಿತಂ ॥ ೨೮ ॥

॥ ಹಿರಣ್ಯಕಶಿಪುರುವಾಚ ॥

ಮಿತ್ರೇಷು ವರ್ತೇತ ಕಥಮರಿವರ್ಗೇ ಚ ಭೂಪತಿಃ ।
ಪ್ರಹ್ಲಾದ ತ್ರಿಷು ಕಾಲೇಸು ಮಧ್ಯಸ್ಥೇಷು ಕಥಂ ಚರೇತ್ ॥ ೨೯ ॥

ಕಥಂ ಮಂತ್ರಿಷ್ವಮಾತ್ಯೇಷು ಬಾಹ್ಯೇಷ್ವಾಭ್ಯಂತರೇಷು ಚ ।
ಚಾರೇಸು ಪೌರವರ್ಗೇಸು ಶಂಕಿತೇಷ್ವಿತರೇಸು ಚ ॥ ೩೦ ॥

ಕೃತ್ಯಾಕೃತ್ಯವಿಧಾನಂ ಚ ದುರ್ಗಾಟವಿಕಸಾಧನಂ ।
ಪ್ರಹ್ಲಾದ ಕಥ್ಯತಾಂ ಸಮ್ಯಕ್ತಥಾ ಕಂಟಕಶೋಧನಂ ॥ ೩೧ ॥

ಕುರಿತು 'ದೈತ್ಯರಾಜನೇ! ನಿನ್ನ ಮಗನು ಶುಕ್ರಾಚಾರ್ಯರು ಮಾಡಿದ ರಾಜನೀತಿ ಶಾಸ್ತ್ರದ ತತ್ತ್ವವನ್ನು ತಿಳಿದಿರುವನು' ಎಂದು ಹೇಳಿದನು.

೨೯-೩೦. ಹಿರಣ್ಯಕಶಿಪುವು 'ಪ್ರಹ್ಲಾದನೇ! ರಾಜನಾದವನು ಮೂರು ಕಾಲಗಳಲ್ಲಿಯೂ ಅಂದರೆ ವೃದ್ಧಿ, ಕ್ಷಯ, ಸಮಕಾಲಗಳಲ್ಲಿ ಶತ್ರು, ಮಿತ್ರ, ಉದಾಸೀನರಾದವರ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕು? ಬುದ್ಧಿ ಸಹಾಯಕರಾದ ಮಂತ್ರಿಗಳಲ್ಲಿಯೂ ಕಾರ್ಯಸಹಾಯಕರಾದ ಅಮಾತ್ಯರಲ್ಲಿಯೂ, ಬಾಹ್ಯವಾದ ಕಂದಾಯ ಮುಂತಾದುವನ್ನು ಕೂಡಿಸುವ ಅಧಿಕಾರಿಗಳಲ್ಲಿಯೂ, ಅಂತರವಾದ ಅಂತಃಪುರ, ಅಡಿಗೆಮನೆ ಮುಂತಾದ ಅಧಿಕಾರಿಗಳಲ್ಲಿಯೂ ಗೂಢಚಾರರ ವಿಷಯದಲ್ಲಿಯೂ, ಪಟ್ಟಣಿಗರ ವಿಷಯದಲ್ಲಿಯೂ, ಶತ್ರುಗಳನ್ನು ಜಯಿಸಿ ಬಲಾತ್ಕಾರವಾಗಿ ಹಿಡಿದು ತಂದ ಆಳುಗಳ ವಿಷಯದಲ್ಲಿಯೂ, ಸಂದೇಹಕ್ಕವಕಾಶವಿಲ್ಲದ ಇತರ ಆಳುಗಳ ವಿಷಯದಲ್ಲಿಯೂ ಹೇಗೆ ನಡೆದುಕೊಳ್ಳಬೇಕು?

೩೧-೩೨. ಸಂಧಿ ವಿಗ್ರಹ ಯಾನಾದಿ ಕರ್ಮಗಳನ್ನು ಯಾವ ಸಂದರ್ಭದಲ್ಲಿ ಮಾಡಬೇಕು? ಯಾವ ಸಂದರ್ಭದಲ್ಲಿ ಮಾಡಬಾರದು? ಗಿರಿ, ವನ, ದುರ್ಗಾದಿ

ಏತಚ್ಚಾನ್ಯಚ್ಚ ಸಕಲಮಧೀತಂ ಭವತಾ ಯಥಾ ।
ತಥಾ ಮೇ ಕಥ್ಯತಾಂ ಜ್ಞಾತುಂ ತವೇಚ್ಛಾಮಿ ಮನೋಗತಂ ॥ ೩೨ ॥

॥ ಶ್ರೀ ಪರಾಶರ ಉವಾಚ ॥

ಪ್ರಣಿಪತ್ಯ ತತಃ ಪಾದೌ ಪಿತುಃ ಪ್ರಶ್ರಯಭೂಷಣಃ ।
ಪ್ರಹ್ಲಾದಃ ಪ್ರಾಹ ದೈತ್ಯೇಂದ್ರಂ ಕೃತಾಂಜಲಿಪುಟಸ್ಥಿತಃ ॥ ೩೩ ॥

॥ ಪ್ರಹ್ಲಾದ ಉವಾಚ ॥

ಮಮೋಪದಿಷ್ಟಂ ಸಕಲಂ ಗುರುಣಾ ನಾತ್ರ ಸಂಶಯಃ ।
ಗೃಹೀತಂ ಚ ಮಯಾ ಕಿಂ ತು ನ ಸದೇತನ್ಮತಂ ಮಮ ॥ ೩೪ ॥

ಸಾಮ ಚೋಪಪ್ರದಾನಂ ಚ ಭೇದದಂಡೌ ತಥೈವ ಚ ।
ಉಪಾಯಾಃ ಕಥಿತಾ ಹ್ಯೇತೇ ಮಿತ್ರಾದೀನಾಂ ಚ ಸಾಧನೇ ॥ ೩೫ ॥

ಗಳನ್ನೂ, ಅರಣ್ಯವಾಸಿಗಳಾದ ಪುಳಿಂದ ಮ್ಲೇಚ್ಛರೇ ಮೊದಲಾದವರನ್ನೂ ವಶಮಾಡಿಕೊಳ್ಳುವ ಬಗೆ ಯಾವುದು? ಕಳ್ಳರು, ನೀಚರಾದ ಶತ್ರುಗಳು ಇವರನ್ನು ನಾಶಮಾಡುವುದು ಹೇಗೆ? ಎಂಬಿವೇ ಮುಂತಾದುವನ್ನು ನೀನು ಹೇಗೆ ಕಲಿತುಕೊಂಡಿರುವೆಯೋ ಹಾಗೆ ಹೇಳು. ನಿನ್ನ ಅಭಿಪ್ರಾಯನ್ನು ನಾನು ತಿಳಿಯಬೇಕೆಂದು ಅಪೇಕ್ಷಿಸುವೆನು' ಎಂದನು.

೩೩–೩೪. ಪ್ರಹ್ಲಾದನು ವಿನಯದಿಂದ ತಂದೆಯ ಪಾದಗಳಿಗೆ ನಮಸ್ಕರಿಸಿ ಕೈಮುಗಿದುಕೊಂಡು "ಗುರುಗಳು ನನಗೆ ಎಲ್ಲವನ್ನೂ ಹೇಳಿಕೊಟ್ಟಿರುವರು. ಇದರಲ್ಲಿ ಸಂದೇಹವಿಲ್ಲ. ನಾನೂ ಅದನ್ನು ಗ್ರಹಿಸಿದೆನು. ಆದರೆ ಅದೇ ನಿಜವೆಂದು ನನ್ನ ಅಭಿಪ್ರಾಯವಲ್ಲ" ಎಂದು ಹೇಳಲು ಪ್ರಾರಂಭಿಸಿದನು.

೩೫–೩೮. "ಮಿತ್ರರೇ ಮೊದಲಾದವರನ್ನು ನಮ್ಮ ವಶಮಾಡಿಕೊಳ್ಳಬೇಕಾದರೆ ಸಾಮ, ದಾನ, ಭೇದ, ದಂಡವೆಂಬ ಉಪಾಯಗಳನ್ನು ಹೇಳಿರುವುದು. ತಂದೆಯೇ ಕೋಪಮಾಡಬೇಡ. ನನಗೆ ಮಿತ್ರಾದಿಗಳೇ ಇಲ್ಲ. ಹೀಗಿರುವಲ್ಲಿ ಸಾಧ್ಯರಿಲ್ಲದಮೇಲೆ

ತಾನೇವಾಹಂ ನ ಪಶ್ಯಾಮಿ ಮಿತ್ರಾದೀಂಸ್ತಾತ ಮಾ ಕ್ರುಧಃ ।
ಸಾಧ್ಯಾಭಾವೇ ಮಹಾಬಾಹೋ ಸಾಧಕೈಃ ಕಿಂ ಪ್ರಯೋಜನಂ ॥ ೩೬ ॥

ಸರ್ವಭೂತಾತ್ಮಕೇ ತಾತ ಜಗನ್ನಾಥೇ ಜಗನ್ಮಯೇ ।
ಪರಮಾತ್ಮನಿ ಗೋವಿಂದೇ ಮಿತ್ರಾಮಿತ್ರಕಥಾ ಕುತಃ ॥ ೩೭ ॥

ತ್ವಯ್ಯಸ್ತಿ ಭಗವಾನ್ವಿಷ್ಣುರ್ಮಯಿ ಚಾನ್ಯತ್ರ ಚಾಸ್ತಿ ಸಃ ।
ಯತಸ್ತತೋಽಯಂ ಮಿತ್ರಂ ಮೇ ಶತ್ರುಶ್ಚೇತಿ ಪೃಥಕ್ಕುತಃ ॥ ೩೮ ॥

ತದೇಭಿರಲಮತ್ಯರ್ಥಂ ದುಷ್ಟಾರಂಭೋಕ್ತಿವಿಸ್ತರೈಃ ।
ಅವಿದ್ಯಾಂತರ್ಗತೈರ್ಯತ್ನಃ ಕರ್ತವ್ಯಸ್ತಾತ ಶೋಭನೇ ॥ ೩೯ ॥

ವಿದ್ಯಾಬುದ್ಧಿರವಿದ್ಯಾಯಾಮಜ್ಞಾನಾತ್ತಾತ ಜಾಯತೇ ।
ಬಾಲೋಽಗ್ನಿಂ ಕಿಂ ನ ಖದ್ಯೋತಮಸುರೇಶ್ವರ ಮನ್ಯತೇ ॥ ೪೦ ॥

ಸಾಧಕವಾದ ಉಪಾಯಗಳಿಂದೇನು ಪ್ರಯೋಜನ? ಸಮಸ್ತ ಭೂತಗಳ ಸ್ವರೂಪನೂ ಜಗತ್ತಿನ ಸ್ವರೂಪನೂ, ಪ್ರಪಂಚಕ್ಕೆಲ್ಲ ಸ್ವಾಮಿಯೂ ಆದ ಪರಮಾತ್ಮನೊಬ್ಬನೇ ಎಲ್ಲೆಡೆಯಲ್ಲಿಯೂ ಇರುವಲ್ಲಿ ಶತ್ರು, ಮಿತ್ರ ಭಾವವು ಎಲ್ಲಿಂದ ಬರುವುದು? ಮಹಾಮಹಿಮನಾದ ವಿಷ್ಣುವು ನಿನ್ನಲ್ಲಿಯೂ, ನನ್ನಲ್ಲಿಯೂ, ಇತರ ಪ್ರಾಣಿಗಳಲ್ಲಿಯೂ ಇರುವನು. ಆದುದರಿಂದ ಇವನು ನನಗೆ ಮಿತ್ರನು, ಇವನು ಶತ್ರುವು ಎಂಬ ಭೇದಭಾವವೇತಕ್ಕೆ?

೩೯–೪೦. ತಂದೆಯೇ. ರಾಗದ್ವೇಷಗಳನ್ನೇ ಮುಖ್ಯವಾಗಿಟ್ಟುಕೊಂಡು ಮಾಡುವ ಈ ರಾಜನೀತಿ ಶಾಸ್ತ್ರ ವಿಸ್ತಾರವು ಅವಿದ್ಯೆಯಲ್ಲಿ ಸೇರಿದುವಾಗಿರುವುದು. ಇದು ಬೇಡ. ಶುಭವಾದ ನಿಷ್ಕಾಮ ಕರ್ಮರೂಪವಾದ ಆತ್ಮವಿದ್ಯೆಯ ಅಭ್ಯಾಸದಲ್ಲಿ ಪ್ರಯತ್ನವನ್ನು ಮಾಡಬೇಕು. ತಂದೆಯೇ! ಅಜ್ಞಾನದಿಂದ ಅವಿದ್ಯೆಯಲ್ಲಿ ವಿದ್ಯೆಯೆಂಬ ಬುದ್ಧಿಯುಂಟಾಗುವುದು. ಅಸುರೇಂದ್ರನೇ! ಬಾಲಕನು ಮಿಣುಕು ಹುಳುವನ್ನು ನೋಡಿ ಬೆಂಕಿಯೆಂದು ತಿಳಿಯುವುದಿಲ್ಲವೇ?

ತತ್ಕರ್ಮ ಯನ್ನ ಬಂಧಾಯ ಸಾ ವಿದ್ಯಾ ಯಾ ವಿಮುಕ್ತಯೇ ।
ಆಯಾಸಾಯಾಪರಂ ಕರ್ಮ ವಿದ್ಯಾನ್ಯಾ ಶಿಲ್ಪನೈಪುಣಂ ॥ ೪೧ ॥

ತದೇತದವಗಮ್ಯಾಹಮಸಾರಂ ಸಾಧ್ಯಮುತ್ತಮಂ ।
ನಿಶಾಮಯ ಮಹಾಭಾಗ ಪ್ರಣಮ್ಯ ಪ್ರಬ್ರವೀಮಿ ಯತ್ ॥ ೪೨ ॥

ನ ಚಿಂತಯತಿ ಕೋ ರಾಜ್ಯಂ ಕೋ ಧನಂ ನಾಭಿವಾಂಛತಿ ।
ತಥಾಪಿ ಭಾವ್ಯಮೇವೈತದುಭಯಂ ಪ್ರಾಪ್ಯತೇ ನರೈಃ ॥ ೪೩ ॥

ಸರ್ವ ಏವ ಮಹಾಭಾಗ ಮಹತ್ತ್ವಂ ಪ್ರತಿ ಸೋದ್ಯಮಃ ।
ತಥಾಪಿ ಪುಂಸಾಂ ಭಾಗ್ಯಾನಿ ನೋದ್ಯಮಾ ಭೂತಿಹೇತವಃ ॥ ೪೪ ॥

ಜಡಾನಾಮವಿವೇಕಾನಾಮಶೂರಾಣಾಮಪಿ ಪ್ರಭೋ ।
ಭಾಗ್ಯಭೋಜ್ಯಾನಿ ರಾಜ್ಯಾನಿ ಸಂತ್ಯನೀತಿಮತಾಮಪಿ ॥ ೪೫ ॥

೪೧-೪೨. ಯಾವ ಕರ್ಮವು (ನಿವೃತ್ತಿ ರೂಪವಾದ ಶಿಲ್ಪಾದಿ ಶಾಸ್ತ್ರಗಳು) ಜನನ ಮರಣ ರೂಪವಾದ ಸಂಸಾರದ ಕಟ್ಟಿಗೆ ಕಾರಣವಾಗದೆ ಮೋಕ್ಷಫಲವನ್ನು ಕೊಡುವುದೋ ಅದೇ ವಿದ್ಯೆಯು ಪ್ರವೃತ್ತಿರೂಪವಾದ ಕರ್ಮಗಳು (ಅರ್ಥಶಾಸ್ತ್ರ ಶಿಲ್ಪ ಐಂದ್ರಜಾಲ ಇತ್ಯಾದಿ ಶಾಸ್ತ್ರಗಳು) ಜೀವನಿಗೆ ಕುಶಲತೆಯನ್ನು ಮಾತ್ರ ಉಂಟು ಮಾಡುವುದು. ನಾನು ಇದನ್ನು ತಿಳಿದು ನಿನಗೆ ನಮಸ್ಕಾರ ಮಾಡಿ ರಾಜ್ಯಾದಿ ಸಾಧ್ಯವಾದ ನೀತಿಶಾಸ್ತ್ರವು ಅಸಾರವೆಂದು ತಿಳಿದು ಉತ್ತಮವೂ ಸಾಧಿಸಬೇಕಾದುದೂ ಆದುದನ್ನು ಹೇಳುವೆನು ಕೇಳು.

೪೩-೪೪. ಲೋಕದಲ್ಲಿ ರಾಜ್ಯವನ್ನೂ, ಧನವನ್ನೂ ಯಾರು ಅಪೇಕ್ಷಿಸುವುದಿಲ್ಲ? ಎಲ್ಲರಿಗೂ ಅದು ಇರುವುದೇ? ಇವೆರಡೂ ಪೂರ್ವ ಪುಣ್ಯವು ಯಾವನಿಗಿರುವುದೋ ಅವನಿಗೆ ಬಂದೇ ಬರುವುದು. ಮಹಾ ಭಾಗ್ಯಶಾಲಿಯಾದ ತಂದೆಯೇ ಎಲ್ಲರೂ ತಾವು ದೊಡ್ಡವರಾಗಬೇಕೆಂದು ಪ್ರಯತ್ನ ಮಾಡುವರು. ಆದರೂ ಜನರಿಗೆ ಈ ಜನ್ಮದ ಪ್ರಯತ್ನವಿಲ್ಲದೆ ಪೂರ್ವ ಪುಣ್ಯದಿಂದಲೇ ಸಂಪತ್ತು ಬಂದಿರುವುದು.

೪೫-೪೬. ದೈತ್ಯರಾಜನೇ ಜಡರಿಗೂ, ಅವಿವೇಕಿಗಳಿಗೂ, ಹೇಡಿಗಳಿಗೂ, ನೀತಿಮಾರ್ಗವನ್ನು ಬಿಟ್ಟವರಿಗೂ ರಾಜ್ಯಸುಖವು ಇರುವುದಿಲ್ಲವೆ? ಇದು ಅವರ

ತಸ್ಮಾದ್ಯತೇತ ಪುಣ್ಯೇಷು ಯ ಇಚ್ಛೇನ್ಮಹತೀಂ ಶ್ರಿಯಂ ।
ಯತಿತವ್ಯಂ ಸಮತ್ವೇ ಚ ನಿರ್ವಾಣಮಪಿ ಚೇಚ್ಛತಾ ॥ ೪೬ ॥

ದೇವಾ ಮನುಷ್ಯಾಃ ಪಶವಃ ಪಕ್ಷಿವೃಕ್ಷಸರೀಸೃಪಾಃ ।
ರೂಪಮೇತದನಂತಸ್ಯ ವಿಷ್ಣೋರ್ಭಿನ್ನಮಿವ ಸ್ಥಿತಂ ॥ ೪೭ ॥

ಏತದ್ವಿಜಾನತಾ ಸರ್ವಂ ಜಗತ್ಸ್ಥಾವರಜಂಗಮಂ ।
ದ್ರಷ್ಟವ್ಯಮಾತ್ಮವದ್ವಿಷ್ಣುರ್ಯತೋಽಯಂ ವಿಶ್ವರೂಪಧೃತ್ ॥ ೪೮ ॥

ಏವಂ ಜ್ಞಾತೇ ಸ ಭಗವಾನನಾದಿಃ ಪರಮೇಶ್ವರಃ ।
ಪ್ರಸೀದತ್ಯಚ್ಯುತಸ್ತಸ್ಮಿನ್ ಪ್ರಸನ್ನೇ ಕ್ಲೇಶಸಂಕ್ಷಯಃ ॥ ೪೯ ॥

॥ ಶ್ರೀ ಪರಾಶರ ಉವಾಚ ॥

ಏತಚ್ಛ್ರುತ್ವಾತಿಕೋಪೇನ ಸಮುತ್ಥಾಯ ತದಾಸನಾತ್ ।
ಹಿರಣ್ಯಕಶಿಪುಃ ಪುತ್ರಂ ಪದಾ ವಕ್ಷಸ್ಯತಾಡಯತ್ ॥ ೫೦ ॥

ಪೂರ್ವಪುಣ್ಯ ಫಲವು. ಆದುದರಿಂದ ಯಾವನು ಮಹಾ ಸಂಪತ್ತನ್ನು ಪಡೆಯಬೇಕೆಂದು ಬಯಸುವನೋ ಅವನು ಪುಣ್ಯಕಾರ್ಯಗಳನ್ನು ಮಾಡಬೇಕು. ಮೋಕ್ಷವನ್ನಪೇಕ್ಷಿಸುವವನು ಸರ್ವಸಮಾನ ಬುದ್ಧಿಯಿಂದಿರಲು ಪ್ರಯತ್ನಪಡಬೇಕು. ದೇವತೆಗಳು, ಮನುಷ್ಯರು, ಪಶುಗಳು ಪಕ್ಷಿಗಳು. ಹಾವುಗಳು, ಮರಗಳು. ಇವುಗಳೆಲ್ಲವೂ ಅನಂತನಾದ ಪರಮಾತ್ಮನ ಬೇರೆ ಬೇರೆ ರೂಪಗಳು. ಇದನ್ನು ತಿಳಿದವನು ಚರಾಚರ ರೂಪವಾದ ಸಮಸ್ತ ಜಗತ್ತೂ ಆತ್ಮಸ್ವರೂಪವಾದುದೆಂದು ತಿಳಿಯುವನು. ಕಾರಣವೇನೆಂದರೆ ವಿಷ್ಣುವೇ ವಿಶ್ವರೂಪವನ್ನು ಧರಿಸಿರುವನು. ಅನಾದಿಯೂ, ಮಹಾಮಹಿಮನೂ ಆದ ಪರಮೇಶ್ವರನನ್ನು ಹೀಗೆ ತಿಳಿದುಕೊಂಡರೆ ನಾಶರಹಿತನಾದ ಆ ದೇವನು ಅವನಿಗೆ ಪ್ರಸನ್ನನಾಗುವನು. ಅವನ ಅನುಗ್ರಹವುಂಟಾದರೆ ಸಮಸ್ತ ದುಃಖಗಳೂ ನಾಶವಾಗುವುವು.

೫೦-೫೧. ಹೀಗೆಂದು ಹೇಳಿದ ಪ್ರಹ್ಲಾದನ ಮಾತನ್ನು ಕೇಳಿ ಹಿರಣ್ಯಕಶಿಪುವು ಸಿಂಹಾಸನದಿಂದ ಎದ್ದು ಕೋಪದಿಂದ ಮಗನ ಎದೆಗೆ ಕಾಲಿನಿಂದ ಒದೆದನು.

ಉವಾಚ ಚ ಸ ಕೋಪೇನ ಸಾಮರ್ಷಃ ಪ್ರಜ್ವಲನ್ನಿವ ।
ನಿಷ್ಪಿಷ್ಯ ಪಾಣಿನಾ ಪಾಣಿಂ ಹಂತುಕಾಮೋ ಜಗದ್ಯಥಾ ॥ ೫೧ ॥

ಹೇ ವಿಪ್ರಚಿತ್ತೇ ಹೇ ರಾಹೋ ಹೇ ಬಲೈಷ ಮಹಾರ್ಣವೇ ।
ನಾಗಪಾಶೈರ್ದೃಢಂ ಬಧ್ವಾ ಕ್ಷಿಪ್ಯತಾಂ ಮಾ ವಿಲಂಬಥ ॥ ೫೨ ॥

ಅನ್ಯಥಾ ಸಕಲಾ ಲೋಕಾಸ್ತಥಾ ದೈತೇಯದಾನವಾಃ ।
ಅನುಯಾಸ್ಯಂತಿ ಮೂಢಸ್ಯ ಮತಮಸ್ಯ ದುರಾತ್ಮನಃ ॥ ೫೩ ॥

ಬಹುಶೋ ವಾರಿತೋಽಸ್ಮಾಭಿರಯಂ ಪಾಪಸ್ತಥಾಪ್ಯರೇಃ ।
ಸ್ತುತಿಂ ಕರೋತಿ ದುಷ್ಟಾನಾಂ ವಧ ಏವೋಪಕಾರಕಃ ॥ ೫೪ ॥

॥ ಶ್ರೀ ಪರಾಶರ ಉವಾಚ ॥

ತತಸ್ತೇ ಸತ್ವರಾ ದೈತ್ಯಾ ಬಧ್ವಾ ತಂ ನಾಗಬಂಧನೈಃ ।
ಭರ್ತುರಾಜ್ಞಾಂ ಪುರಸ್ಕೃತ್ಯ ಚಿಕ್ಷಿಪುಸ್ಸಲಿಲಾರ್ಣವೇ ॥ ೫೫ ॥

ಬಳಿಕ ರೋಷದಿಂದ ಕೈಯನ್ನು ಮಸೆಯುತ್ತ ಜಗತ್ತನ್ನೇ ನಾಶಮಾಡುವವನಂತೆ ಮಾತನಾಡಿದನು.

೫೨-೫೪. 'ಎಲೈ ವಿಪ್ರಚಿತ್ತಿಯೇ, ಎಲೈ ರಾಹುವೇ, ಬಲನೇ ಇವನನ್ನು ನಾಗಪಾಶಗಳಿಂದ ಗಟ್ಟಿಯಾಗಿ ಕಟ್ಟಿ ಸಾವಕಾಶ ಮಾಡದೆ ಸಮುದ್ರದಲ್ಲಿ ಹಾಕಿಬಿಡಿ. ಹಾಗೆ ಮಾಡದಿದ್ದರೆ ಸಮಸ್ತ ಜನರೂ, ದೈತ್ಯರೂ, ದಾನವರೂ, ದುರಾತ್ಮನೂ, ಮೂಢನೂ ಆದ ಇವನ ಮತವನ್ನು ಆಶ್ರಯಿಸುವರು. ಈ ಪಾಪಿಯು ಅನೇಕ ಬಗೆಯಲ್ಲಿ ಬೇಡವೆಂದು ಹೇಳಿದರೂ ನನ್ನ ಶತ್ರುವಿನ ಸ್ತೋತ್ರವನ್ನೇ ಮಾಡುವನು. ದುಷ್ಟರ ಪಕ್ಷಕ್ಕೇ ಉಪಕಾರವನ್ನು ಮಾಡುವನು' ಎಂದು ಹೇಳಿದನು.

೫೫-೫೬. ಆಮೇಲೆ ದೈತ್ಯರು ತಮ್ಮ ರಾಜನ ಅಪ್ಪಣೆಯಂತೆ ಬೇಗ ಬಂದು ಪ್ರಹ್ಲಾದನನ್ನು ನಾಗ ಪಾಶಗಳಿಂದ ಕಟ್ಟಿ ಸಮುದ್ರದಲ್ಲಿ ಹಾಕಿದರು. ಮಹಾ ಸಮುದ್ರದಲ್ಲಿ ಪ್ರಹ್ಲಾದನು ಚಲಿಸುತ್ತಿದ್ದರೆ ಸಮುದ್ರವು ಚಲಿಸಿ ಎಲ್ಲೆಯನ್ನು

ತತಶ್ಚಚಾಲ ಚಲತಾ ಪ್ರಹ್ಲಾದೇನ ಮಹಾರ್ಣವಃ ।
ಉದ್ವೇಲೋಽಭೂತ್ಪರಂ ಕ್ಷೋಭಮುಪೇತ್ಯ ಚ ಸಮಂತತಃ ॥ ೫೬ ॥

ಭೂಲೋಕಮಖಿಲಂ ದೃಷ್ಟ್ವಾ ಪ್ಲಾವ್ಯಮಾನಂ ಮಹಾಂಭಸಾ ।
ಹಿರಣ್ಯಕಶಿಪುರ್ದೈತ್ಯಾನಿದಮಾಹ ಮಹಾಮುನೇ ॥ ೫೭ ॥

ದೈತೇಯಾಸ್ಸಕಲೈಶ್ಶೈಲೈರತ್ರೈವ ವರುಣಾಲಯೇ ।
ನಿಶ್ಛಿದ್ರೈಸ್ಸರ್ವತಸ್ಸರ್ವೈಶ್ಚೀಯತಾಮೇಷ ದುರ್ಮತಿಃ ॥ ೫೮ ॥

ನಾಗ್ನಿರ್ದಹತಿ ನೈವಾಯಂ ಶಸ್ತ್ರೈಶ್ಛಿನ್ನೋ ನ ಚೋರಗೈಃ ।
ಕ್ಷಯಂ ನೀತೋ ನ ವಾತೇನ ನ ವಿಷೇಣ ನ ಕೃತ್ಯಯಾ ॥ ೫೯ ॥

ನ ಮಾಯಾಭಿರ್ನ ಚೈವೋಚ್ಚಾತ್ಪಾತಿತೋ ನ ಚ ದಿಗ್ಗಜೈಃ ।
ಬಾಲೋಽತಿದುಷ್ಟಚಿತ್ತೋಽಯಂ ನಾನೇನಾರ್ಥೋಽಸ್ತಿ ಜೀವತಾ ॥ ೬೦ ॥

ತದೇಷ ತೋಯರಾಣ್ಮಧ್ಯೇ ಸಮಾಕ್ರಾಂತೋ ಮಹೀಧರೈಃ ।
ತಿಷ್ಠತ್ವಬ್ದಸಹಸ್ರಾಂತಂ ಪ್ರಾಣಾನ್ಹಾಸ್ಯತಿ ದುರ್ಮತಿಃ ॥ ೬೧ ॥

ಮೀರಿ ವಿಶೇಷವಾಗಿ ಕ್ಷೋಭೆಯನ್ನುಂಟುಮಾಡಿತು. ಭೂಲೋಕವೇ ನೀರಿನಲ್ಲಿ ತೇಲುತ್ತಿರುವುದನ್ನು ಕಂಡು ಹಿರಣ್ಯಕಶಿಪುವು ದೈತ್ಯರನ್ನು ಕುರಿತು,

೫೮-೬೧. " ದೈತ್ಯರೇ ಎಲ್ಲ ಪರ್ವತಗಳನ್ನೂ ತಂದು ಸಮುದ್ರದಲ್ಲಿರುವ ಈ ದುಷ್ಟನ ಮೇಲೆ ಸ್ವಲ್ಪವೂ ಸ್ಥಳ ಬಿಡದಂತೆ ರಾಶಿರಾಶಿಯಾಗಿ ಹಾಕಿರಿ. ಇವನನ್ನು ಬೆಂಕಿಯು ಸುಡುವುದಿಲ್ಲ. ಆಯುಧಗಳು ಕತ್ತರಿಸುವುದಿಲ್ಲ. ಸರ್ಪಗಳು ಕಡಿಯಲಾರವು. ವಿಷವೂ ಕೊಲ್ಲುವುದಿಲ್ಲ ಅಭಿಚಾರದಿಂದ ಹುಟ್ಟಿದ ಭೂತವೂ ಕೊಲ್ಲದೆ ಹೋಯಿತು. ಮಾಯೆಗಳೂ ನಾಶಮಾಡಲಿಲ್ಲ. ದಿಗ್ಗಜಗಳೂ ಬಾಧೆ ಪಡಿಸಲಿಲ್ಲ. ಎತ್ತರದಿಂದ ಬಿದ್ದರೂ ಇವನು ಸಾಯಲಿಲ್ಲ. ಈ ಹುಡುಗನು ಬಹು ಕೆಟ್ಟ ಮನಸ್ಸಿನವನು. ಇವನು ಬದುಕಿದ್ದುದರಿಂದ ಪ್ರಯೋಜನವಿಲ್ಲ. ಆದುದರಿಂದ ಇವನು ಸಮುದ್ರಮಧ್ಯದಲ್ಲಿ ಪರ್ವತಗಳ ಭಾರವನ್ನು ವಹಿಸಿ ಸಾವಿರ ವರ್ಷಗಳವರೆಗೆ ಇರಲಿ, ತಾನಾಗಿಯೇ ಪ್ರಾಣಬಿಡುವನು " ಎಂದು ಹೇಳಿದನು.

ತತೋ ದೈತ್ಯಾ ದಾನವಾಶ್ಚ ಪರ್ವತೈಸ್ತಂ ಮಹೋದಧೌ ।
ಆಕ್ರಮ್ಯ ಚಯನಂ ಚಕ್ರುರ್ಯೋಜನಾನಿ ಸಹಸ್ರಶಃ ॥ ೬೨ ॥

ಸ ಚಿತಃ ಪರ್ವತೈರಂತಸ್ಸಮುದ್ರಸ್ಯ ಮಹಾಮತಿಃ ।
ತುಷ್ಟಾವಾಹ್ನಿಕವೇಳಾಯಾಮೇಕಾಗ್ರಮತಿರಚ್ಯುತಂ ॥ ೬೩ ॥

॥ ಪ್ರಹ್ಲಾದೋವಾಚ ॥

ನಮಸ್ತೇ ಪುಂಡರೀಕಾಕ್ಷ ನಮಸ್ತೇ ಪುರುಷೋತ್ತಮ ।
ನಮಸ್ತೇ ಸರ್ವಲೋಕಾತ್ಮನ್ನಮಸ್ತೇ ತಿಗ್ಮಚಕ್ರಿಣೇ ॥ ೬೪ ॥

ನಮಸ್ತೇ ವಾಸುದೇವಾಯ ನಮಸ್ತೇ ಕರುಣಾಕರ ।
ನಮಸ್ತೇ ವಿಶ್ವರೂಪಾಯ ನಮಸ್ತೇ ಸರ್ವಮೂರ್ತಯೇ ॥

ನಮೋ ಬ್ರಹ್ಮಣ್ಯ ದೇವಾಯ ಗೋಬ್ರಾಹ್ಮಣ ಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥ ೬೫ ॥

೬೨-೬೩. ಆಮೇಲೆ ದೈತ್ಯರೂ ದಾನವರೂ ಪರ್ವತಗಳನ್ನು ತಂದು ಸಮುದ್ರದಲ್ಲಿದ್ದ ಪ್ರಹ್ಲಾದನ ಮೇಲೆಯೂ ಸುತ್ತಲೂ ಸಾವಿರ ಯೋಜನಗಳವರೆಗೆ ರಾಶಿ ಹಾಕಿದರು. ಪರ್ವತಗಳ ನಡುವೆ ಸಿಕ್ಕಿಕೊಂಡ ಅವನು ಸಂಧ್ಯಾಕಾಲದಲ್ಲಿ ಏಕಾಗ್ರ ಚಿತ್ತದಿಂದ ವಿಷ್ಣುವನ್ನು ಸ್ತೋತ್ರಮಾಡಿದನು. ಎಂತೆಂದರೆ,

೬೪-೬೫. "ಕಮಲದಂತೆ ಕಣ್ಣುಗಳುಳ್ಳವನೇ, ಪುರುಷಶ್ರೇಷ್ಠನೇ, ಸಮಸ್ತ ಲೋಕಗಳಿಗೂ ಆತ್ಮಸ್ವರೂಪನೇ, ತೀಕ್ಷ್ಣವಾದ ಚಕ್ರಾಯುಧವುಳ್ಳವನೇ, ನಿನಗೆ ನಮಸ್ಕಾರವು. ವಾಸುದೇವನೇ, ಕರುಣಾಕರನೇ, ಪ್ರಪಂಚ ಸ್ವರೂಪನೇ, ಸಮಸ್ತ ಮೂರ್ತಿಸ್ವರೂಪನೇ, ನಿನಗೆ ನಮಸ್ಕಾರವು. ಬ್ರಹ್ಮಜ್ಞಾನಿಗಳಿಗೆ ಸ್ವಾಮಿಯಾದವನೇ ಗೋವುಗಳಿಗೂ ಬ್ರಾಹ್ಮಣರಿಗೂ ಹಿತವನ್ನುಂಟುಮಾಡತಕ್ಕವನೇ, ಲೋಕಕ್ಕೆ ಹಿತವನ್ನುಂಟುಮಾಡುವ ಕೃಷ್ಣನೇ, ಗೋವಿಂದನೇ ನಿನಗೆ ನಮಸ್ಕಾರ ಮಾಡುವೆನು. ಬ್ರಹ್ಮನಾಗಿ ಸಕಲವನ್ನೂ ರಕ್ಷಿಸುವೆ. ರುದ್ರನಾಗಿ ಕಲ್ಪಾಂತದಲ್ಲಿ ಎಲ್ಲವನ್ನೂ ಸಂಹರಿಸುವೆ.

ಬ್ರಹ್ಮತ್ವೇ ಸೃಜತೇ ಸರ್ವಂ ಸ್ಥಿತೌ ಪಾಲಯತೇ ಪುನಃ ।
ರುದ್ರರೂಪಾಯ ಕಲ್ಪಾಂತೇ ನಮಸ್ತುಭ್ಯಂ ತ್ರಿಮೂರ್ತಯೇ ॥ ೬೬ ॥

ದೇವಾ ಯಕ್ಷಾ ಸುರಾಸ್ಸಿದ್ಧಾ ನಾಗಗಂಧರ್ವಕಿನ್ನರಾಃ ।
ಪಿಶಾಚಾ ರಾಕ್ಷಸಾಶ್ಚೈವ ಮನುಷ್ಯಾಃ ಪಶವಸ್ತಥಾ ॥ ೬೭ ॥

ಪಕ್ಷಿಣಸ್ಸ್ಥಾವರಾಶ್ಚೈವ ಪಿಪೀಲಿಕಸರೀಸೃಪಾಃ ।
ಭೂಮ್ಯಂಬ್ವಗ್ನಿರ್ನಭೋವಾಯುಶ್ಶಬ್ದಸ್ಸ್ಪರ್ಶಸ್ತಥಾ ರಸಃ ॥ ೬೮ ॥

ರೂಪಂ ಗಂಧೋ ಮನೋಬುದ್ಧಿರಾತ್ಮಾ ಕಾಲಸ್ತಥಾ ಗುಣಾಃ ।
ಏತೇಷಾಂ ಪರಮಾರ್ಥಶ್ಚ ಸರ್ವಮೇತತ್ತ್ವಮಚ್ಯುತ ॥ ೬೯ ॥

ವಿದ್ಯಾವಿದ್ಯೇ ಭವಾಂತ್ಸತ್ಯಮಸತ್ಯಂ ತ್ವಂ ವಿಷಾಮೃತೇ ।
ಪ್ರವೃತ್ತಂ ಚ ನಿವೃತ್ತಂ ಚ ಕರ್ಮ ವೇದೋದಿತಂ ಭವಾನ್ ॥ ೭೦ ॥

ಸಮಸ್ತಕರ್ಮಭೋಕ್ತಾ ಚ ಕರ್ಮೋಪಕರಣಾನಿ ಚ ।
ತ್ವಮೇವ ವಿಷ್ಣೋ ಸರ್ವಾಣಿ ಸರ್ವಕರ್ಮಫಲಂ ಚ ಯತ್ ॥ ೭೧ ॥

ಈ ರೀತಿಯಲ್ಲಿ ತ್ರಿಮೂರ್ತಿರೂಪನಾದ ನಿನಗೆ ನಮಸ್ಕಾರವು. ದೇವತೆಗಳು ಯಕ್ಷರು ಅಸುರರು, ಸಿದ್ಧರು, ನಾಗರು, ಗಂಧರ್ವರು, ಕಿನ್ನರರು. ಪಿಶಾಚಗಳು, ರಾಕ್ಷಸರು, ಮನುಷ್ಯರು, ಪಶುಗಳು, ಪಕ್ಷಿಗಳು, ಮರಗಳು, ಇರುವೆಗಳು, ಹಾವುಗಳು, ಭೂಮ್ಯಾದಿ ಪಂಚಭೂತಗಳು ಶಬ್ದಾದಿ ಪಂಚತನ್ಮಾತ್ರಗಳು ಮನಸ್ಸು, ಬುದ್ಧಿ, ಆತ್ಮ, ಕಾಲ, ಗುಣ, ಇವುಗಳಿಗೆಲ್ಲ ನೀನೆ ಕಾರಣನು. ನೀನೇ ಸಮಸ್ತವಸ್ತು ರೂಪನಾಗಿರುವೆ

೭೦–೭೧. ನೀನೇ ವಿದ್ಯಾವಿದ್ಯಾ ಸ್ವರೂಪನಾಗಿಯೂ, ಸತ್ಯಾಸತ್ಯ, ವಿಷಾಮೃತ, ಸ್ವರೂಪನಾಗಿಯೂ ವೇದದಲ್ಲಿ ಹೇಳುವ ಪ್ರವೃತ್ತಿ, ನಿವೃತ್ತಿ ಕರ್ಮಸ್ವರೂಪನಾಗಿಯೂ ಇರುವೆ. ಸಮಸ್ತ ಕರ್ಮಗಳ ಉಪಕರಣ ಸ್ವರೂಪನೂ ಕರ್ಮಗಳನ್ನನುಭವಿಸುವವನೂ ಸರ್ವಕರ್ಮಗಳ ಫಲರೂಪನೂ, ನೀನೇ ಆಗಿ ಸರ್ವವ್ಯಾಪಿಯಾಗಿರುವೆ.

ಮನುಷ್ಯೇಷ್ವತ್ರ ತಥಾಶೇಷಭೂತೇಷು ಭುವನೇಷು ಚ ।
ತವೈವ ವ್ಯಾಪ್ತಿರೈಶ್ವರ್ಯಗುಣಸಂಸೂಚಿಕೀ ಪ್ರಭೋ ॥ ೭೨ ॥

ತ್ವಾಂ ಯೋಗಿನಶ್ಚಿಂತಯಂತಿ ತ್ವಾಂ ಯಜಂತಿ ಚ ಯಾಜಕಾಃ ।
ಹವ್ಯಕವ್ಯಭುಗೇಕಸ್ತ್ವಂ ಪಿತೃದೇವಸ್ವರೂಪಧೃತ್ ॥ ೭೩ ॥

ರೂಪಂ ಮಹತ್ತೇಽಚ್ಯುತ ಯತ್ರ ವಿಶ್ವಂ
ತತಶ್ಚ ಸೂಕ್ಷ್ಮಂ ಜಗದೇತದೀಶ ।
ರೂಪಾಣಿ ಸೂಕ್ಷ್ಮಾಣಿ ಚ ಭೂತಭೇದಾ
ಸ್ತೇಷ್ವಂತರಾತ್ಮಾಖ್ಯಮತೀವ ಸೂಕ್ಷ್ಮಂ ॥ ೭೪ ॥

ತಸ್ಮಾಚ್ಚ ಸೂಕ್ಷ್ಮಾದಿವಿಶೇಷಣಾನಾ
ಮಗೋಚರೇ ಯತ್ಪರಮಾರ್ಥರೂಪಂ ।
ಕಿಮಪ್ಯಚಿಂತ್ಯಂ ತವ ರೂಪಮಸ್ತಿ
ತಸ್ಮೈ ನಮಸ್ತೇ ಪುರುಷೋತ್ತಮಾಯ ॥ ೭೫ ॥

ನನ್ನಲ್ಲಿಯೂ ಇತರ ಪ್ರಾಣಿಗಳಲ್ಲಿಯೂ, ಸಮಸ್ತ ಭೂತಗಳಲ್ಲಿಯೂ, ಪ್ರಪಂಚದಲ್ಲಿಯೂ, ನಿನ್ನ ವ್ಯಾಪ್ತಿಯು ನಿನ್ನ ಸಂಪತ್ತನ್ನೂ ಗುಣಗಳನ್ನೂ ಸೂಚಿಸುತ್ತಿರುವುದು.

೭೩–೭೫. ನಿನ್ನನ್ನೇ ಯೋಗಿಗಳು ಧ್ಯಾನಿಸುವರು. ಯಜ್ಞಾದಿಗಳನ್ನು ಮಾಡುವವರು ನಿನ್ನನ್ನೇ ಪೂಜಿಸುವರು. ನೀನೇ ದೇವತೆಗಳ ಸ್ವರೂಪನಾಗಿಯೂ ಪಿತೃಗಳ ಸ್ವರೂಪನಾಗಿಯೂ ಹವ್ಯಕವ್ಯಗಳನ್ನು ಭೋಜನಮಾಡುತ್ತೀವೆ ನಾ ರಹಿತನಾದ ಸ್ವಾಮಿಯೇ ಆವರಣ ಸಹಿತವಾದ ಬ್ರಹ್ಮಾಂಡವು ನಿನ್ನ ಮಹಾರೂಪವು ಪ್ರಾಣಿಗಳಲ್ಲಿರುವ ಅಂತರಾತ್ಮರೂಪವು ಅತ್ಯಂತ ಸೂಕ್ಷ್ಮವಾದುದು. ಅವಕ್ಕಿಂತಲೂ ಸೂಕ್ಷ್ಮವಾದ ಯಾವ ವಿಶೇಷಣಗಳಿಗೂ, ತಿಳಿಯದ ಮನಸ್ಸಿನಲ್ಲಿಯೂ ಊಹಿಸಲಾಗದ ಪರಮಾತ್ಮರೂಪವೆಂಬ ಒಂದಾನೊಂದು ರೂಪವು ನಿನಗಿರುವುದು. ಪುರುಷೋತ್ತಮನೆಂಬ ಆ ಹೆಸರಿನ ನಿನಗೆ ನಮಸ್ಕಾರ ಮಾಡುವೆನು.

ಸರ್ವಭೂತೇಷು ಸರ್ವಾತ್ಮನ್ ಯಾ ಶಕ್ತಿರಪರಾ ತವ ।
ಗುಣಾಶ್ರಯಾ ನಮಸ್ತಸ್ಯೈ ಶಾಶ್ವತಾಯೈ ಪರೇಶ್ವರ ॥ ೭೬ ॥

ಯಾತೀತಗೋಚರಾ ವಾಚಾಂ ಮನಸಾಂ ಚಾವಿಶೇಷಣಾ ।
ಜ್ಞಾನಿಜ್ಞಾನಪರಿಚ್ಛೇದ್ಯಾ ತಾಂ ವಂದೇ ಚೇಶ್ವರೀಂ ಪರಾಂ ॥ ೭೭ ॥

ಓಂ ನಮೋ ವಾಸುದೇವಾಯ ತಸ್ಮೈ ಭಗವತೇ ಸದಾ ।
ವ್ಯತಿರಿಕ್ತಂ ನ ಯಸ್ಯಾಸ್ತಿ ವ್ಯತಿರಿಕ್ತೋಽಖಿಲಸ್ಯ ಯಃ ॥ ೭೮ ॥

ನಮಸ್ತಸ್ಮೈ ನಮಸ್ತಸ್ಮೈ ನಮಸ್ತ ಸ್ಮೈ ಮಹಾತ್ಮನೇ ।
ನಾಮರೂಪಂ ನ ಯಸ್ಯಾಸ್ತಿ ಯೋಽಸ್ತಿತ್ವೇ ನೋಪಲಭ್ಯತೇ ॥ ೭೯ ॥

೭೬–೭೭. ಸರ್ವಾತ್ಮನಾದ ವಿಷ್ಣುವೇ ಸಮಸ್ತ ಪ್ರಾಣಿಗಳಲ್ಲಿಯೂ, ಸತ್ತ್ವಾದಿ ಗುಣಗಳನ್ನಾಶ್ರಯಿಸಿಕೊಂಡಿರುವ ಶಾಶ್ವತವಾದ ಅಪರಾ ಎಂಬ ನಿನ್ನ ಜಡಶಕ್ತಿಗೆ ನಮಸ್ಕಾರ ಮಾಡುವೆನು. ವಾಕ್ಕಿಗೂ ಮನಸ್ಸಿಗೂ ಗೋಚರವಾಗದ ಯಾವ ವಿಶೇಷಣಗಳೂ ಇಲ್ಲದ ಜ್ಞಾನಿಯಾದ ಜೀವನ ಜ್ಞಾನಕ್ಕೆ ಮಾತ್ರ ಗೋಚರವಾದ ಪರಾ ಎಂಬ ಚಿಚ್ಛಕ್ತಿಗೆ ನಮಸ್ಕಾರ ಮಾಡುವೆನು. (ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನ ಬಲಕ್ರಿಯಾಚ) ಎಂಬ ಶ್ರುತಿಯಂತೆ ಪರಮಾತ್ಮನ ಈ ಶಕ್ತಿಗಳೇ ಸ್ಥೂಲ ಸೂಕ್ಷ್ಮಾದಿ ಅನೇಕ ರೂಪಗಳನ್ನು ಉತ್ಪತ್ತಿಮಾಡುವುದೆಂದು ಅಭಿಪ್ರಾಯವು.

೭೮–೭೯. ಓಂ ನಮೋ ಭಗವತೇ ವಾಸುದೇವಾಯ ಎಂಬ ದ್ವಾದಶಾಕ್ಷರ ಮಂತ್ರಸ್ವರೂಪನೂ ಮಹಾಮಹಿಮನೂ ಸರ್ವವೂ ಆತ್ಮಸ್ವರೂಪವೇ ಆದುದರಿಂದ ತನಗಿಂತ ಬೇರೆಯಾದ ವಸ್ತುವಿಲ್ಲದವನೂ ಕಲ್ಪಿತವೂ ಕಾರ್ಯರೂಪವೂ ಆದ ಸಮಸ್ತ ಪ್ರಪಂಚಕ್ಕಿಂತ ಬೇರೆಯಾದವನೂ ನಾಮರೂಪಗಳಿಲ್ಲದವನೂ 'ಅಸ್ತೀತ್ಯೇವೋಪಲಬ್ಧವ್ಯಃ' ಎಂಬ ಶ್ರುತಿಯಂತೆ ಸತ್ತಾ ಮಾತ್ರ ಸ್ವರೂಪನೂ ಆದ ನಿನಗೆ ಮೂರು ಬಾರಿ ನಮಸ್ಕಾರ ಮಾಡುವೆನು.

ಯಸ್ಯಾವತಾರರೂಪಾಣಿ ಸಮರ್ಚಯಂತಿ ದಿವೌಕಸಃ ।
ಅಪಶ್ಯಂತಃ ಪರಂ ರೂಪಂ ನಮಸ್ತಸ್ಮೈ ಪರಾತ್ಮನೇ ॥ ೮೦ ॥

ಯೋಂತಸ್ತಿಷ್ಠನ್ನಶೇಷಸ್ಯ ಪಶ್ಯತೀಶಶ್ಶುಭಾಶುಭಂ ।
ತಂ ಸರ್ವಸಾಕ್ಷಿಣಂ ವಿಷ್ಣುಂ ನಮಸ್ಯೇ ಪರಮೇಶ್ವರಂ ॥ ೮೧ ॥

ನಮೋಽಸ್ತು ವಿಷ್ಣವೇ ತಸ್ಮೈ ಯಸ್ಯಾಭಿನ್ನಮಿದಂ ಜಗತ್ ।
ಧ್ಯೇಯಸ್ಸ ಜಗತಾಮಾದ್ಯಸ್ಸ ಪ್ರಸೀದತು ಮೇಽವ್ಯಯಃ ॥ ೮೨ ॥

ಯತ್ರೋತಮೋತಶ್ಚೈತೇ ತಂ ಚ ವಿಶ್ವಮಕ್ಷರ ಸಂಜ್ಞಕೇ ।
ಆಧಾರಭೂತಸ್ಸರ್ವಸ್ಯ ಸ ಪ್ರಸೀದತು ಮೇ ಹರಿಃ ॥ ೮೩ ॥

ಓಂ ನಮೋ ವಿಷ್ಣವೇ ತಸ್ಮೈ ನಮಸ್ತಸ್ಮೈ ಪುನಃ ಪುನಃ ।
ಯತ್ರ ಸರ್ವಂ ಯತಸ್ಸರ್ವಂ ಯಸ್ಸರ್ವಂ ಸಂಶ್ರಯಶ್ಚ ಯಃ ॥ ೮೪ ॥

೮೦–೮೩. ದೇವತೆಗಳು ನಿನ್ನ ಪರರೂಪವನ್ನು ನೋಡದಿರುವುದರಿಂದ ನಿನ್ನ ಅವತಾರ ರೂಪಗಳನ್ನೇ ಪೂಜಿಸುವರು ಸಮಸ್ತ ಪ್ರಾಣಿಗಳ ಅಂತರಾತ್ಮ ಸ್ವರೂಪನಾಗಿದ್ದುಕೊಂಡು ಅವರು ಮಾಡುವ ಶುಭಾಶುಭ ಕರ್ಮಗಳನ್ನು ನೋಡುತ್ತಿರುವ ಪರಮೇಶ್ವರನೂ ಸರ್ವಸಾಕ್ಷಿಸ್ವರೂಪನೂ ಆದ ವಿಷ್ಣುವಿಗೆ ನಮಸ್ಕಾರ ಮಾಡುವೆನು. ಯಾವ ವಿಷ್ಣುವಿಗಿಂತ ಜಗತ್ತು ಬೇರೆಯಾಗಿಲ್ಲವೋ ಆ ಜಗದ್ರೂಪನಾದ ವಿಷ್ಣುವಿಗೆ ನಮಸ್ಕಾರವು. ಜಗತ್ತಿಗೆ ಕಾರಣನಾದ ನಾಶರಹಿತನಾದ ವಿಷ್ಣುವು ನನಗೆ ಪ್ರಸನ್ನನಾಗಲಿ. ಅಕ್ಷರನೆಂಬ ಹೆಸರಿನ ಪ್ರಧಾನ ಮಹತ್ತತ್ತ್ವಾದಿಗಳಲ್ಲಿ ಈ ಪ್ರಪಂಚವು ಓತಪ್ರೋತವಾಗಿರುವುದು. ಅವುಗಳೆಲ್ಲಕ್ಕೂ ಆಶ್ರಯನಾದ ಹರಿಯು ನನಗೆ ಪ್ರಸನ್ನನಾಗಲಿ.

೮೪–೮೬. ಈ ಸಮಸ್ತ ಪ್ರಪಂಚವೂ ಯಾವನಿಂದ ಸೃಷ್ಟಿಯಾಗಿ ಯಾವನ ಸ್ವರೂಪವಾಗಿದ್ದು ಕೊನೆಗೆ ಯಾವನಲ್ಲಿ ಲಯವಾಗುವುದೋ ಸರ್ವಾಶ್ರಯನಾದ ಆ ವಿಷ್ಣುವಿಗೆ ಪುನಃ ಪುನಃ ನಮಸ್ಕಾರಮಾಡುವೆನು. ಅನಂತನು ಸರ್ವಗತನಾದುದರಿಂದ ಅವನೇ ನಾನಾಗಿರುವೆನು. ಈ ಕಾರಣದಿಂದ ನನ್ನಿಂದಲೇ ಸಮಸ್ತ ಪ್ರಪಂಚವೂ

ಸರ್ವಗತ್ವಾದನಂತಸ್ಯ ಸ ಏವಾಹಮವಸ್ಥಿತಃ ।
ಮತ್ತಸ್ಸರ್ವಮಹಂ ಸರ್ವಂ ಮಯಿ ಸರ್ವಂ ಸನಾತನೇ ॥ ೮೫ ॥

ಅಹಮೇವಾವ್ಯಯೋ ನಿತ್ಯಃ ಪರಮಾತ್ಮಾತ್ಮಸಂಶ್ರಯಃ ।
ಬ್ರಹ್ಮಸಂಜ್ಞೋಽಹಮೇವಾಗ್ರೇ ತಥಾಂತೇ ಚ ಪರಃ ಪುಮಾನ್ ॥ ೮೬ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಏಕೋನವಿಂಶೋಽಧ್ಯಾಯಃ

ಉತ್ಪತ್ತಿಯಾಗಿ ನನ್ನ ಸ್ವರೂಪವಾಗಿಯೇ ಇದ್ದು ನನ್ನಲ್ಲಿಯೇ ಲಯವನ್ನು ಹೊಂದುವುದು. ನಾನು ಮಾತ್ರ ಅನಾದಿಯಾದವನು. ನಾನೇ ನಾಶ ರಹಿತನು ನಿತ್ಯನು ನನಗೆ ನಾನೇ ಆಶ್ರಯನು ಪರಮಾತ್ಮನೂ ಪರಬ್ರಹ್ಮನೂ ನಾನೇ ಆಗಿರುವೆನು. ಸೃಷ್ಟಿಗೆ ಪೂರ್ವದಲ್ಲಿಯೂ ನಾನೇ ಇದ್ದೆನು. ಪ್ರಳಯಾನಂತರದಲ್ಲಿಯೂ ನಾನೇ ಇರುವೆನು. ಈ ಕಾರಣದಿಂದ ಪರಮ ಪುರುಷನೆಂದೂ ನನಗೆ ಹೆಸರಿರುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಹತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ವಿಂಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಏವಂ ಸಂಚಿಂತಯನ್ವಿಷ್ಣುಮಭೇದೇನಾತ್ಮನೋ ದ್ವಿಜ ।
ತನ್ಮಯತ್ವಮವಾಪ್ಯಾಗ್ರ್ಯೇ ಮೇನೇ ಚಾತ್ಮಾನಮಚ್ಯುತಂ ॥ ೧ ॥

ವಿಸಸ್ಮಾರ ತದಾತ್ಮಾನಂ ನಾನ್ಯತ್ಕಿಂಚಿದಜಾನತ ।
ಅಹಮೇವಾವ್ಯಯೋ ನಿತಃ ಪರಮಾತ್ಮೇತ್ಯಚಿಂತಯತ್ ॥ ೨ ॥

ತಸ್ಯತದ್ಭಾವನಾಯೋಗಾತ್ ಕ್ಷೀಣಪಾಪಸ್ಯ ವೈ ಕ್ರಮಾತ್ ।
ಶುದ್ಧೇಂತಃಕರಣೇ ವಿಷ್ಣುಸ್ತಸ್ಥೌ ಜ್ಞಾನಮಯೋಽಚ್ಯುತಃ ॥ ೩ ॥

ಯೋಗಪ್ರಭಾವಾತ್ಪ್ರಹ್ಲಾದೇ ಜಾತೇ ವಿಷ್ಣುಮಯೇಸುರೇ ।
ಚಲಂತ್ಯುರಗಬಂದಾಸ್ತೇ ಮೈತ್ರೇಯ ತ್ರುಟಿತಾಃ ಕ್ಷಣಾತ್ ॥ ೪ ॥

ಇಪ್ಪತ್ತನೆಯ ಅಧ್ಯಾಯವು

೧-೬. ಮೈತ್ರೇಯನೇ ಪ್ರಹ್ಲಾದನು ತನ್ನನ್ನು ವಿಷ್ಣುವಿಗೆ ಅಭೇದವಾಗಿರುವಂತೆ ಧ್ಯಾನಮಾಡುತ್ತ ವಿಷ್ಣು ಸ್ವರೂಪವನ್ನೇ ಪಡೆದು ತಾನೇ ವಿಷ್ಣುವೆಂದು ತಿಳಿದುಕೊಂಡನು. ಆಗ ತಾನು ಪ್ರಹ್ಲಾದನೆಂಬುದನ್ನು ಮರೆತುಬಿಟ್ಟನು. ಮತ್ತೊಂದನ್ನು ತಿಳಿಯದೆ ತಾನೇ ನಾಶರಹಿತವಾದ ಪರಮಾತ್ಮನೆಂದು ಚಿಂತಿಸಿದನು. ಈ ಭಾವನೆಯಿಂದ ಅವನ ಪಾಪವೆಲ್ಲವೂ ನಾಶವಾಯಿತು. ಕ್ರಮವಾಗಿ ಅವನ ಮನಸ್ಸು ಶುದ್ಧವಾಗುತ್ತಲು ವಿಷ್ಣುವು ಜ್ಞಾನಸ್ವರೂಪನಾಗಿ ಅವನ ಮನಸ್ಸಿನಲ್ಲಿ ನೆಲಸಿದನು. ಯೋಗದ ಮಹಿಮೆಯಿಂದ ಅಸುರನಾದ ಪ್ರಹ್ಲಾದನು ವಿಷ್ಣುಸ್ವರೂಪನಾಗುತ್ತಲು ಆ ಕ್ಷಣದಲ್ಲಿಯೇ ಸರ್ಪಪಾಶಗಳು ಕಿತ್ತು ಹೋದುವು. ಜಲಜಂತುಗಳಿಂದ ಕೂಡಿದ

ಭ್ರಾಂತಗ್ರಾಹಗಣಸ್ಸೋರ್ಮಿರ್ಯಯೌ ಕ್ಷೋಭಂ ಮಹಾರ್ಣವಃ ।
ಚಚಾಲ ಚ ಮಹೀ ಸರ್ವಾ ಸಶೈಲವನಕಾನನಾ ॥ ೫ ॥

ಸಚ ತಂ ಶೈಲಸಂಘಾತಂ ದೈತ್ಯೈರ್ನ್ಯಸ್ತಮಥೋಪರಿ ।
ಉತ್ಕ್ಷಿಪ್ಯ ತಸ್ಮಾತ್ಸಲಿಲಾನ್ನಿಶ್ಚಕ್ರಾಮ ಮಹಾಮತಿಃ ॥ ೬ ॥

ದೃಷ್ಟ್ವಾ ಚ ಸ ಜಗದ್ಭೂಯೋ ಗಗನಾದ್ಯುಪಲಕ್ಷಿತಂ ।
ಪ್ರಹ್ಲಾದೋಽಸ್ಮೀತಿ ಸಸ್ಮಾರ ಪುನರಾತ್ಮಾನಮಾತ್ಮನಾ ॥ ೭ ॥

ತುಷ್ಟಾವ ಚ ಪುನರ್ಧೀಮಾನನಾದಿಂ ಪುರುಷೋತ್ತಮಂ ।
ಏಕಾಗ್ರಮತಿರವ್ಯಗ್ರೋ ಯತವಾಕ್ಕಾಯಮಾನಸಃ ॥ ೮ ॥

॥ ಪ್ರಹ್ಲಾದೋವಾಚ ॥

ಓಂ ನಮಃ ಪರಮಾರ್ಥಾರ್ಥಸ್ಥೂಲಸೂಕ್ಷ್ಮಕ್ಷರಾಕ್ಷರ ।
ವ್ಯಕ್ತಾವ್ಯಕ್ತ ಕಲಾತೀತ ಸಕಲೇಶ ನಿರಂಜನ ॥ ೯ ॥

ಮಹಾಸಮುದ್ರವು ಅಲೆಯಿಂದ ಅಲ್ಲೋಲಕಲ್ಲೋಲವಾಯಿತು. ಪರ್ವತ ವನಾರಣ್ಯಗಳಿಂದ ಕೂಡಿದ ಭೂಮಿಯು ನಡುಗಿತು. ದೈತ್ಯರು ತಂದುಹಾಕಿದ ಪರ್ವತಗಳ ರಾಶಿಯನ್ನು ಮೇಲಕ್ಕೆ ಎರಚಿ ಮಹಾಬುದ್ಧಿಯುಳ್ಳ ಪ್ರಹ್ಲಾದನು ನೀರಿನಿಂದ ಮೇಲಕ್ಕೆ ಎದ್ದು ಬಂದನು.

೭-೮. ಪ್ರಹ್ಲಾದನು ಪುನಃ ಆಕಾಶಾದಿ ಪಂಚಭೂತಮಯವಾದ ಜಗತ್ತನ್ನು ಕಂಡು ತಾನು ಪ್ರಹ್ಲಾದನೆಂದು ಜ್ಞಾಪಿಸಿಕೊಂಡು ಮತ್ತೆ ತ್ರಿಕರಣ ಪೂರ್ವಕವಾಗಿ ಏಕಾಗ್ರಚಿತ್ತದಿಂದ ಪುರುಷೋತ್ತಮನಾದ ವಿಷ್ಣುವನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು.

೯-೧೧ "ಓಂಕಾರ ಸ್ವರೂಪನೇ, ಪರಮಾರ್ಥ ಜ್ಞಾನರೂಪನೇ, ದೃಶ್ಯವಸ್ತು ಸ್ವರೂಪನೇ, ಜಾಗ್ರತ್ಸ್ವಪ್ನದೃಶ್ಯರೂಪನೇ, ಕಾರ್ಯಕಾರಣರೂಪನೇ, ದೃಶ್ಯಾದೃಶ್ಯ ಸ್ವರೂಪನೇ, ನಿರವಯವ ಸಾವಯವ ಸ್ವರೂಪನೇ, ನಿಯಾಮಕನೇ, ನಿರ್ಲೇಪ

ಗುಣಾಂಜನ ಗುಣಾಧಾರ ನಿರ್ಗುಣಾತ್ಮನ್ಗುಣಸ್ಥಿತ ।
ಮೂರ್ತಾಮೂರ್ತ ಮಹಾಮೂರ್ತೇ ಸೂಕ್ಷ್ಮಮೂರ್ತೇಸ್ಫುಟಾಸ್ಫುಟ

ಕರಾಳಸೌಮ್ಯರೂಪಾತ್ಮನ್ವಿದ್ಯಾ ವಿದ್ಯಾಮಯಾಚ್ಯುತ ।
ಸದಸದ್ರೂಪಸದ್ಭಾವಸದಸದ್ಭಾವಭಾವನ ॥ ೧೧ ॥

ನಿತ್ಯಾನಿತ್ಯ ಪ್ರಪಂಚಾತ್ಮನ್ನಿಷ್ಪ್ರಪಂಚಾಮಲಾಶ್ರಿತ ।
ಏಕಾನೇಕ ನಮಸ್ತುಭ್ಯಂ ವಾಸುದೇವಾದಿಕಾರಣ ॥ ೧೨ ॥

ಯಃ ಸ್ಥೂಲಸೂಕ್ಷ್ಮಃ ಪ್ರಕಟಪ್ರಕಾಶೋ ।
ಯಸ್ಸರ್ವಭೂತೋ ನಚಸರ್ವಭೂತಃ ॥
ವಿಶ್ವಂ ಯತಶ್ಚೈತದವಿಶ್ವಹೇತೋ ।
ನಮೋಽಸ್ತು ತಸ್ಮೈ ಪುರುಷೋತ್ತಮಾಯ ॥ ೧೩ ॥

ನಾದವನೇ, ಗುಣಗಳನ್ನು ಪ್ರಕಾಶ ಪಡಿಸತಕ್ಕವನೇ, ಗುಣಗಳಿಗೆ ಆಶ್ರಯನೇ ನಿರ್ಗುಣಾತ್ಮಸ್ವರೂಪನೇ, ಗುಣಗಳಲ್ಲಿಯೇ ಇರತಕ್ಕವನೇ ಸ್ಥೂಲಸೂಕ್ಷ್ಮ ಪ್ರಪಂಚ ಸ್ವರೂಪನೇ ವಿಶ್ವರೂಪಾಧ್ಯಾಯದಲ್ಲಿ ಹೇಳಿರುವ ಮಹಾಮೂರ್ತಿ ಸ್ವರೂಪನೇ, ಅರ್ಚಾವತಾರವಾದ ಸೂಕ್ಷ್ಮಮೂರ್ತಿ ರೂಪನೇ, ಭಕ್ತರಿಗೆ ಗೋಚರಿಸತಕ್ಕವನೇ, ಇತರರಿಗೆ ಗೋಚರಿಸದಿರತಕ್ಕವನೇ, ಕ್ರೂರಸೌಮ್ಯಮೂರ್ತಿ ರೂಪನೇ ವಿದ್ಯಾ ವಿದ್ಯಾ ಸ್ವರೂಪನೇ, ಕಾರ್ಯಕಾರಣಗಳ ಉತ್ಪತ್ತಿಯುಳ್ಳವನಾಗಿ ಅವುಗಳನ್ನು ರಕ್ಷಿಸ ತಕ್ಕವನೇ, ನಿನಗೆ ನಮಸ್ಕಾರ ಮಾಡುವೆನು.

೧೨. ನಿತ್ಯಾನಿತ್ಯ ಪ್ರಪಂಚ ಸ್ವರೂಪನೇ, ಪ್ರಪಂಚ ಸಂಬಂಧವಿಲ್ಲದವನೇ, ಜ್ಞಾನಿಗಳಿಗೆ ಆಶ್ರಯನಾದವನೇ, ಕಾರಣರೂಪದಿಂದ ಏಕನಾಗಿಯೂ, ಕಾರ್ಯ ರೂಪದಿಂದ ಅನೇಕನಾಗಿಯೂ ಇರತಕ್ಕವನೇ, ಆದಿಕಾರಣನಾದವನೇ ವಾಸುದೇವನೇ ನಿನಗೆ ನಮಸ್ಕಾರ ಮಾಡುವೆನು.

೧೩. ಸ್ಥೂಲರೂಪದಿಂದ ಪ್ರಕಟವಾಗಿಯೂ, ಸೂಕ್ಷ್ಮರೂಪದಿಂದ ಅಪ್ರಕಾಶ ನಾಗಿಯೂ, ಅಥವಾ ಜ್ಞಾನರೂಪದಿಂದ ಪ್ರಕಾಶಿಸುವನಾಗಿಯೂ, ಸರ್ವವಸ್ತು ಸ್ವರೂಪ ನಾಗಿಯೂ, ಸಮಸ್ತ ವಸ್ತುಗಳಿಗಿಂತ ಬೇರೆಯಾದವನಾಗಿಯೂ ಇರುವ ಪುರುಷಶ್ರೇಷ್ಠ ನಾದ ವಿಷ್ಣುವಿಗೆ ನಮಸ್ಕಾರವು.

॥ ಶ್ರೀ ಪರಾಶರ ಉವಾಚ ॥

ತಸ್ಯ ತಚ್ಚೇತಸೋ ದೇವಸ್ಸ್ತುತಿಮಿತ್ಥಂ ಪ್ರಕುರ್ವತಃ ।
ಆವಿರ್ಬಭೂವ ಭಗವಾನ್ಪೀತಾಂಬರಧರೋ ಹರಿಃ ॥ ೧೪ ॥

ಸಸಂಭ್ರಮಸ್ತಮಾಲೋಕ್ಯ ಸಮುತ್ಥಾಯಾಕುಲಾಕ್ಷರಂ ।
ನಮೋಽಸ್ತು ವಿಷ್ಣವೇತ್ಯೇತದ್ವ್ಯಾಜಹಾರ ಸಕೃದ್ದ್ವಿಜ ॥ ೧೫ ॥

॥ ಪ್ರಹ್ಲಾದ ಉವಾಚ ॥

ದೇವ ಪ್ರಪನ್ನಾರ್ತಿಹರ ಪ್ರಸಾದಂ ಕುರು ಕೇಶವ ।
ಅವಲೋಕನ ದಾನೇನ ಭೂಯೋ ಮಾಂ ಪಾವಯಾವ್ಯಯ ॥ ೧೬ ॥

॥ ಶ್ರೀ ಭಗವಾನುವಾಚ ॥

ಕುರ್ವತಸ್ತೇ ಪ್ರಸನ್ನೋಽಹಂ ಭಕ್ತಿಮವ್ಯಭಿಚಾರಿಣೀಂ ।
ಯಥಾಭಿಲಷಿತೋ ಮತ್ತಃ ಪ್ರಹ್ಲಾದ ವ್ರಿಯತಾಂ ವರಃ ॥ ೧೭ ॥

೧೪-೧೬. ಹೀಗೆ ಮನಸ್ಸಿನಲ್ಲಿಯೇ ಸ್ತೋತ್ರ ಮಾಡುತ್ತಿದ್ದ ಪ್ರಹ್ಲಾದನಿಗೆ ವಿಷ್ಣುವು ಪೀತಾಂಬರಧಾರಿಯಾಗಿ ಪ್ರತ್ಯಕ್ಷನಾದನು. ಮೈತ್ರೇಯನೇ, ಪ್ರಹ್ಲಾದನು ದೇವನನ್ನು ಕಂಡು ಸಂಭ್ರಮದಿಂದ ಎದ್ದು ವಿಷ್ಣುವಿಗೆ ನಮಸ್ಕಾರ ಎಂದು ಒಂದು ಬಾರಿ ಹೇಳಿದನು. ಬಳಿಕ ಪ್ರಹ್ಲಾದನು ಸ್ವಾಮಿಯೇ ಶರಣಾಗತರ ದುಃಖವನ್ನು ನಾಶಮಾಡತಕ್ಕವನೇ ಅನುಗ್ರಹವನ್ನು ಮಾಡು. ನಿನ್ನ ದರ್ಶನವನ್ನು ಕೊಟ್ಟು ಮತ್ತೆ ನನ್ನನ್ನು ಕಾಪಾಡು ಎಂದನು.

೧೭. ಭಗವಂತನು, ನನ್ನಲ್ಲಿ ಅಚಲವಾದ ಭಕ್ತಿಭಾವವನ್ನು ಹೊಂದಿರುವ ನಿನಗೆ ಪ್ರಸನ್ನನಾಗಿರುವೆನು. ಪ್ರಹ್ಲಾದನೇ ನಿನಗಿಷ್ಟವಾದ ವರವನ್ನು ಕೇಳು ಎಂದನು.

॥ ಪ್ರಹ್ಲಾದ ಉವಾಚ ॥

ನಾಥ ಯೋನಿಸಹಸ್ರೇಷು ಯೇಷು ಯೇಷು ವ್ರಜಾಮ್ಯಹಂ ।
ತೇಷು ತೇಷ್ವಚ್ಯುತಾಭಕ್ತಿರಚ್ಯುತಾಸ್ತು ಸದಾ ತ್ವಯಿ ॥ ೧೮ ॥

ಯಾ ಪ್ರೀತಿರವಿವೇಕಾನಾಂ ವಿಷಯೇಷ್ವನಪಾಯಿನೀ ।
ತ್ವಾಮನುಸ್ಮರತಸ್ಸಾ ಮೇ ಹೃದಯಾನ್ಮಾಪಸರ್ಪತು ॥ ೧೯ ॥

॥ ಶ್ರೀ ಭಗವಾನುವಾಚ ॥

ಮಯಿ ಭಕ್ತಿಸ್ತವಾಸ್ತ್ಯೇವ ಭೂಯೋಽಪ್ಯೇವಂ ಭವಿಷ್ಯತಿ ।
ವರಶ್ಚ ಮತ್ತಃ ಪ್ರಹ್ಲಾದ ವ್ರಿಯತಾಂ ಯಸ್ತವೇಪ್ಸಿತಃ ॥ ೨೦ ॥

॥ ಪ್ರಹ್ಲಾದ ಉವಾಚ ॥

ಮಯಿ ದ್ವೇಷಾನುಬಂಧೋಽಭೂತ್ಸಂಸ್ತುತಾವುದ್ಯತೇ ತವ ।
ಮತ್ಪಿತುಸ್ತತ್ಕೃತಂ ಪಾಪಂ ದೇವತಸ್ಯ ಪ್ರಣಶ್ಯತು ॥ ೨೧ ॥

೧೮–೧೯. ಪ್ರಹ್ಲಾದನು "ಸ್ವಾಮಿಯೇ ನಾನು ಯಾವ ಜನ್ಮವನ್ನು ಪಡೆದರೂ ಆ ಜನ್ಮಗಳಲ್ಲೆಲ್ಲಾ ನಿನ್ನಲ್ಲಿ ಭಕ್ತಿಯು ನಾಶವಾಗದಿರಲಿ. ಅವಿವೇಕಿಗಳಿಗೆ ವಿಷಯಗಳಲ್ಲಿ ಎಷ್ಟು ಪ್ರೀತಿಯು ಇರವುದೋ ಅಂತಹ ನಿನ್ನ ವಿಷಯವಾದ ಪ್ರೀತಿಯು ನಿನ್ನನ್ನು ಸ್ಮರಿಸುತ್ತಿರುವ ನನ್ನ ಮನಸ್ಸಿನಿಂದ ಹೋಗದಿರಲಿ. ಅಥವಾ ಎಲೈ ಲಕ್ಷ್ಮೀಪತಿಯೇ ನಿನ್ನನ್ನು ಸ್ಮರಿಸುತ್ತಿರುವ ನನ್ನ ಮನಸ್ಸಿನಿಂದ ವಿಷಯಗಳ ಮೇಲಿನ ಪ್ರೀತಿಯು ಹೊರಟುಹೋಗಲಿ" ಎಂದನು.

೨೦. ಭಗವಂತನು 'ನಿನಗೆ ನನ್ನಲ್ಲಿ ಭಕ್ತಿಯು ಇದ್ದೇ ಇರುವುದು ಮುಂದೆಯೂ ಅದು ಇರುವುದು. ಪ್ರಹ್ಲಾದನೇ, ನಿನಗಿಷ್ಟವಾದ ವರವನ್ನು ಕೇಳು' ಎಂದನು.

೨೧. ಪ್ರಹ್ಲಾದನು "ಸ್ವಾಮಿಯೇ ನಾನು ನಿನ್ನನ್ನು ಸ್ತೋತ್ರ ಮಾಡಲು ಪ್ರಾರಂಭಿಸಿದರೆ ನನ್ನ ತಂದೆಗೆ ನನ್ನಲ್ಲಿ ದ್ವೇಷವುಂಟಾಗುವುದು. ಆ ನನ್ನ ತಂದೆಯು ಮಾಡಿದ ಪಾಪವು ನಾಶವಾಗಲಿ."

ಶಸ್ತ್ರಾಣಿ ಪಾತಿತಾನ್ಯಂಗೇ ಕ್ಷಿಪ್ತೋ ಯಚ್ಚಾಗ್ನಿಸಂಹತೌ ।
ದಂಶಿತಶ್ಚೋರಗೈರ್ದತ್ತಂ ಯದ್ವಿಷಂ ಮಮ ಭೋಜನೇ ॥ ೨೨ ॥

ಬದ್ಧ್ವಾ ಸಮುದ್ರೇ ಯತ್ಕ್ಷಿಪ್ತೋ ಯಚ್ಚಿತೋಽಸ್ಮಿ ಶಿಲೋಚ್ಚಯೈಃ ॥೨೩॥

ಅನ್ಯಾನಿ ಚಾಪ್ಯಸಾಧೂನಿ ಯಾನಿ ಪಿತ್ರಾ ಕೃತಾನಿ ಮೇ ।
ತ್ವಯಿ ಭಕ್ತಿಮತೋ ದ್ವೇಷಾದಘಂ ತತ್ಸಂಭವಂ ಚ ಯತ್ ।
ತ್ವತ್ಪ್ರಸಾದಾತ್ಪ್ರಭೋ ಸದ್ಯಸ್ತೇನ ಮುಚ್ಯೇತ ಮೇ ಪಿತಾ ॥ ೨೪ ॥

॥ ಶ್ರೀ ಭಗವಾನುವಾಚ ॥

ಪ್ರಹ್ಲಾದ ಸರ್ವಮೇತತ್ತೇ ಮತ್ಪ್ರಸಾದಾದ್ಭವಿಷ್ಯತಿ ।
ಅನ್ಯಂ ಚ ತೇ ವರಂ ದದ್ಮಿ ವ್ರಿಯತಾಮಸುರಾತ್ಮಜ ॥ ೨೫ ॥

॥ ಪ್ರಹ್ಲಾದ ಉವಾಚ ॥

ಕೃತಕೃತ್ಯೋಽಸ್ಮಿ ಭಗವನ್ವರೇಣಾನೇನ ಯತ್ತ್ವಯಿ ।
ಭವಿತ್ರೀ ತ್ವತ್ಪ್ರಸಾದೇನ ಭಕ್ತಿರವ್ಯಭಿಚಾರಿಣೀ ॥ ೨೬ ॥

೨೨-೨೪. ಹೇ ಸ್ವಾಮಿಯೇ ನಿನ್ನಲ್ಲಿ ಭಕ್ತಿಯುಳ್ಳ ನನ್ನ ಮೇಲಿನ ದ್ವೇಷದಿಂದ ನನ್ನ ತಂದೆಯು ನನ್ನನ್ನು ಆಯುಧಗಳಿಂದ ಹೊಡೆಸಿದನು. ಬೆಂಕಿಯಲ್ಲಿ ಹಾಕಿಸಿದನು. ಹಾವುಗಳಿಂದ ಕಚ್ಚಿಸಿದನು. ವಿಷದ ಅನ್ನವನ್ನು ಉಣಿಸಿ ಕೈಕಾಲುಗಳನ್ನು ಕಟ್ಟಿಸಿ ಸಮುದ್ರಕ್ಕೆ ಹಾಕಿಸಿದನು. ಇನ್ನೂ ಯಾವ ದುಷ್ಕಾರ್ಯಗಳನ್ನು ಮಾಡಿ ನನ್ನ ತಂದೆಯು ಪಾಪವನ್ನು ಗಳಿಸಿದನೋ ನಿನ್ನ ಅನುಗ್ರಹದಿಂದ ಆ ಪಾಪಗಳೆಲ್ಲ ನಾಶವಾಗಲಿ' ಎಂದನು.

೨೫. ಭಗವಂತನು 'ಪ್ರಹ್ಲಾದನೇ ನಿನ್ನ ಇಷ್ಟಗಳೆಲ್ಲವೂ ಸಿದ್ಧಿಸುವುವು. ನಿನಗೆ ಮತ್ತೊಂದು ವರವನ್ನು ಕೊಡುವೆನು ಬೇಕಾದ ವರವನ್ನು ಕೇಳಿಕೊ' ಎಂದನು.

೨೬-೨೭. ಪ್ರಹ್ಲಾದನು 'ಮಹಾಮಹಿಮನಾದ ದೇವನೇ ನೀನು ಕೊಟ್ಟ ವರಗಳಿಂದಲೇ ನಾನು ಕೃತಾರ್ಥನಾದೆನು. ಯಾವನಿಗೆ ನಿನ್ನ ಅನುಗ್ರಹದಿಂದ

ಧರ್ಮಾರ್ಥಕಾಮೈಃ ಕಿಂ ತಸ್ಯ ಮುಕ್ತಿಸ್ತಸ್ಯ ಕರೇ ಸ್ಥಿತಾ ।
ಸಮಸ್ತಜಗತಾಂ ಮೂಲೇ ಯಸ್ಯ ಭಕ್ತಿಸ್ಥಿರಾ ತ್ವಯಿ ॥ ೨೭ ॥

॥ ಶ್ರೀ ಭಗವಾನುವಾಚ ॥

ಯಥಾ ತೇ ನಿಶ್ಚಲಂ ಚೇತೋ ಮಯಿ ಭಕ್ತಿಸಮನ್ವಿತಂ ।
ತಥಾ ತ್ವಂ ಮತ್ಪ್ರಸಾದೇನ ನಿರ್ವಾಣಂ ಪರಮಾಪ್ಸ್ಯಸಿ ॥ ೨೮ ॥

॥ ಶ್ರೀ ಪರಾಶರ ಉವಾಚ ॥

ಇತ್ಯುಕ್ತ್ವಾಂತರ್ದಧೇ ವಿಷ್ಣುಸ್ತಸ್ಯ ಮೈತ್ರೇಯ ಪಶ್ಯತಃ ।
ಸ ಚಾಪಿ ಪುನರಾಗಮ್ಯ ವವಂದೇ ಚರಣೌ ಪಿತುಃ ॥ ೨೯ ॥

ತಂ ಪಿತಾ ಮೂರ್ಧ್ನ್ಯುಪಾಘ್ರಾಯ ಪರಿಷ್ವಜ್ಯ ಚ ಪೀಡಿತಂ ।
ಜೀವಸೀತ್ಯಾಹ ವತ್ಸೇತಿ ಬಾಷ್ಪಾರ್ದ್ರನಯನೋ ದ್ವಿಜ ॥ ೩೦ ॥

ಅಚಲವಾದ ಭಕ್ತಿಯು ನಿನ್ನ ವಿಷಯದಲ್ಲಿ ಉಂಟಾಗುವುದೋ ಅವನಿಗೆ ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳಿಂದ ಪ್ರಯೋಜನವಿರುವುದಿಲ್ಲ. ಸಮಸ್ತ ಜಗತ್ತಿಗೂ ಮೂಲಕಾರಣನಾದ ನಿನ್ನಲ್ಲಿ ಯಾವನಿಗೆ ಭಕ್ತಿಯು ಸ್ಥಿರವಾಗಿರುವುದೋ ಅವನಿಗೆ ಮುಕ್ತಿ ಅಧೀನವಾಗಿರುವುದು' ಎಂದನು.

೨೮-೩೨. ಭಗವಂತನು 'ನಿನ್ನ ಮನಸ್ಸು ನನ್ನ ಭಕ್ತಿಯಿಂದ ಸದಾ ನಿಶ್ಚಲವಾಗಿರುವುದರಿಂದ ನನ್ನ ಅನುಗ್ರಹದಿಂದ ಶ್ರೇಷ್ಠವಾದ ಮುಕ್ತಿಯು ನಿನಗೆ ಉಂಟಾಗುವುದು' ಎಂದು ಹೇಳಿ ಅಂತರ್ಧಾನನಾದನು. ಮೈತ್ರೇಯನೇ ಆ ಪ್ರಹ್ಲಾದನು ಮತ್ತೆ ತಂದೆಯ ಪಾದಗಳಿಗೆ ನಮಸ್ಕಾರ ಮಾಡಿದನು. ತಂದೆಯು ಪ್ರೀತಿಯಿಂದ ಅವನನ್ನು ಆಲಿಂಗಿಸಿಕೊಂಡು ತಲೆಯನ್ನು ಮೂಸಿನೋಡಿ ಕಣ್ಣಿನಲ್ಲಿ ನೀರನ್ನು ಸುರಿಸುತ್ತ "ಮಗನೇ, ಬಹಳವಾಗಿ ಬಾಧೆ ಪಡಿಸಿದರೂ ಬದುಕಿದೆಯಾ" ಎಂದು ಹೇಳಿ ತಾನು ಮಾಡಿದ ಪಾಪಗಳಿಗೆ ಅನುತಾಪ ಪಡುತ್ತ ಪ್ರಹ್ಲಾದನ ವಿಷಯದಲ್ಲಿ ಪ್ರೀತಿಯುಳ್ಳವನಾದನು. ಧರ್ಮಜ್ಞನಾದ ಪ್ರಹ್ಲಾದನು ಗುರುಗಳಿಗೂ

ಪ್ರೀತಿಮಾಂಶ್ಚಾಭವತ್ತಸ್ಮಿನ್ ಅನುತಾಪೀ ಮಹಾಸುರಃ ।
ಗುರು ಪಿತ್ರೋ ಶ್ಚಕಾ ರೈವಂ ಶುಶ್ರೂಷಾಂ ಸೋಽಪಿಧರ್ಮವಿತ್ ॥ ೩೧ ॥

ಪಿತರ್ಯ್ಯುಪರತಿಂ ನೀತೇ ನರಸಿಂಹಸ್ವರೂಪಿಣಾ ।
ವಿಷ್ಣುನಾ ಸೋಽಪಿ ದೈತ್ಯಾನಾಂ ಮೈತ್ರೇಯಾಭೂತ್ಪತಿಸ್ತತಃ ॥ ೩೨ ॥

ತದ್ರಾಜ್ಯಭೂತಿಂ ಸಂಪ್ರಾಪ್ಯ ಕರ್ಮಶುದ್ಧಿಕರೀಂ ದ್ವಿಜ ।
ಪುತ್ರಪೌತ್ರಾಂಶ್ಚ ಸುಬಹೂನವಾಪ್ಯೈಶ್ವರ್ಯಮೇವ ಚ ॥ ೩೩ ॥

ಕ್ಷೀಣಾಧಿಕಾರಸ್ಸ ಯದಾ ಪುಣ್ಯಪಾಪವಿವರ್ಜಿತಃ ।
ತದಾಸಾ ಭಗವದ್ಧ್ಯಾನಾತ್ಪರಂ ನಿರ್ವಾಣಮಾಪ್ತವಾನ್ ॥ ೩೪ ॥

ಏವಂ ಪ್ರಭಾವೋ ದೈತ್ಯೋಽಸೌ ಮೈತ್ರೇಯಾಸೀನ್ಮಹಾಮತಿಃ ।
ಪ್ರಹ್ಲಾದೋ ಭಗವದ್ಭಕ್ತೋಽಯಂ ತ್ವಂ ಮಾಮನುಪೃಚ್ಛಸಿ ॥ ೩೫ ॥

ತಂದೆ ತಾಯಿಗಳಿಗೂ ಸೇವೆಯನ್ನು ಮಾಡುತ್ತಿದ್ದನು. ತನ್ನ ತಂದೆಯಾದ ಹಿರಣ್ಯಕಶಿಪುವು ಬ್ರಹ್ಮಶಾಪದಿಂದ ಮತ್ತೊಂದು ಕಾಲದಲ್ಲಿ ಕೋಪದಿಂದ ತನ್ನನ್ನು ಕೊಲ್ಲುವುದಕ್ಕೆ ಬಂದಾಗ ನರಸಿಂಹಾವತಾರವನ್ನು ಮಾಡಿದ ವಿಷ್ಣುವಿನಿಂದ ಮರಣ ಹೊಂದಿದ ಮೇಲೆ ತಾನೇ ದೈತ್ಯರಿಗೆಲ್ಲಾ ರಾಜನಾದನು.

೩೨-೩೪ ಮೈತ್ರೇಯನೇ ಪ್ರಹ್ಲಾದನು ಭೋಗದಿಂದಲೇ ಕ್ಷಯವಾಗತಕ್ಕ ಪ್ರಾರಬ್ಧಫಲರೂಪವಾದ ರಾಜ್ಯ, ಐಶ್ವರ್ಯ, ಪುತ್ರ, ಪೌತ್ರ ಸಂಪತ್ತುಗಳನ್ನು ಪಡೆದು ಪ್ರಾರಬ್ಧಕರ್ಮಗಳನ್ನು ಕಳೆದುಕೊಂಡು ಜ್ಞಾನಪ್ರಾಪ್ತಿಯಿಂದ ಸಂಚಿತ ಆಗಾಮಿ ರೂಪವಾದ ಪುಣ್ಯ ಪಾಪಗಳಿಲ್ಲದವನಾಗಿ ವಿಷ್ಣುವನ್ನು ಧ್ಯಾನ ಮಾಡುತ್ತ ಶ್ರೇಷ್ಠವಾದ ಮುಕ್ತಿಯನ್ನು ಪಡೆದನು

೩೫-೩೬. ಮೈತ್ರೇಯನೇ, ನೀನು ಕೇಳಿದ ವಿಷ್ಣುಭಕ್ತನಾದ ಪ್ರಹ್ಲಾದನು ದೈತ್ಯನಾದರೂ ಇಂತಹ ಮಹಾ ಮಹಿಮೆಯುಳ್ಳವನಾಗಿದ್ದನು. ಯಾವನು ಈ

ಯಸ್ತ್ವೇತಚ್ಚರಿತಂ ತಸ್ಯ ಪ್ರಹ್ಲಾದಸ್ಯ ಮಹಾತ್ಮನಃ ।
ಶೃಣೋತಿ ತಸ್ಯ ಪಾಪಾನಿ ಸದ್ಯೋ ಗಚ್ಛಂತಿ ಸಂಕ್ಷಯಂ ॥ ೩೫ ॥

ಅಹೋರಾತ್ರಕೃತಂ ಪಾಪಂ ಪ್ರಹ್ಲಾದ ಚರಿತಂ ನರಃ ।
ಶೃಣ್ವನ್ಪಠಂಶ್ಚ ಮೈತ್ರೇಯ ವ್ಯಪೋಹತಿ ನ ಸಂಶಯಃ ॥ ೩೬ ॥

ಪೌರ್ಣಮಾಸ್ಯಾಮಮಾವಾಸ್ಯಾಮಷ್ಟಮ್ಯಾಮಥವಾ ಪಠನ್ ।
ದ್ವಾದಶ್ಯಾಂ ವಾ ತದಾಪ್ನೋತಿ ಗೋಪ್ರದಾನಫಲಂ ನರಃ ॥ ೩೭ ॥

ಪ್ರಹ್ಲಾದಂ ಸಕಲಾಪತ್ಸು ಯಥಾ ರಕ್ಷಿತವಾನ್ಹರಿಃ ।
ತಥಾ ರಕ್ಷತಿ ಯಸ್ತಸ್ಯ ಶೃಣೋತಿ ಚರಿತಂ ಸದಾ ॥ ೩೮ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ವಿಂಶೋಽಧ್ಯಾಯಃ

ಮಹಾ ಮಹಿಮನಾದ ಪ್ರಹ್ಲಾದನ ಚರಿತ್ರೆಯನ್ನು ಕೇಳುವನೋ ಅವನ ಪಾಪ ಗಳೆಲ್ಲವೂ ಆ ಕ್ಷಣದಲ್ಲಿಯೇ ನಾಶವಾಗುತ್ತವೆ.

೩೬-೩೮. ಮೈತ್ರೇಯನೇ, ಪ್ರಹ್ಲಾದನ ಚರಿತ್ರೆಯನ್ನು ಕೇಳಿದರೂ ಪಾರಾಯಣ ಮಾಡಿದರೂ ಮನುಷ್ಯನು ನಿರಂತರವಾಗಿ ಮಾಡಿದ ಪಾಪಗಳನ್ನೆಲ್ಲ ಕಳೆದು ಕೊಳ್ಳುವುದರಲ್ಲಿ ಸಂದೇಹವಿಲ್ಲ. ಈ ಚರಿತ್ರೆಯನ್ನು ಪೂರ್ಣಿಮೆ, ಅಮಾವಾಸ್ಯೆ, ಅಷ್ಟಮಿ, ದ್ವಾದಶಿ, ಈ ತಿಥಿಗಳಲ್ಲಿ ಪಾರಾಯಣ ಮಾಡಿದ ಮನುಷ್ಯನು ಅನೇಕ ಗೋದಾನಗಳನ್ನು ಮಾಡಿದ ಫಲವನ್ನು ಪಡೆವನು. ಅವನ ಚರಿತ್ರೆಯನ್ನು ನಿರಂತ ರವಾಗಿ ಕೇಳುತ್ತಿರುವ ಮನುಷ್ಯನನ್ನು ಹರಿಯು ಪ್ರಹ್ಲಾದನನ್ನು ಸಮಸ್ತ ಆಪತ್ತು ಗಳಿಂದ ರಕ್ಷಿಸಿದಂತೆ ರಕ್ಷಿಸುವನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಇಪ್ಪತ್ತನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಏಕವಿಂಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಪ್ರಹ್ಲಾದಪುತ್ರ ಆಯುಷ್ಮಾನ್ಶಿಬಿರ್ಬಾಷ್ಕಲ ಏವ ಚ ।
ವಿರೋಚನಸ್ತು ಪ್ರಹ್ಲಾದಿರ್ಬಲಿರ್ಜಜ್ಞೇ ವಿರೋಚನಾತ್ ॥ ೧ ॥

ಬಲೇಃ ಪುತ್ರಶತಂ ತ್ವಾಸೀದ್ಬಾಣ ಜ್ಯೇಷ್ಠಂ ಮಹಾಮುನೇ ।
ಹಿರಣ್ಯಾಕ್ಷಸುತಾ ಬ್ರಹ್ಮನ್ಸರ್ವ ಏವ ಮಹಾಬಲಾಃ ॥ ೨ ॥

ಝರ್ಝರಶ್ಶಕುನಿಶ್ಚೈವ ಭೂತಸಂತಾಪನಸ್ತಥಾ ।
ಮಹಾ ನಾ ಭೋ ಮಹಾಬಾಹುಃ ಕಾಲನಾಭಸ್ತಥಾ ಪರಃ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯವು

೨–೩. ಪ್ರಹ್ಲಾದನಿಗೆ ಶಿಬಿ, ಬಾಷ್ಕಲ, ವಿರೋಚನ ಎಂಬವರು ಮಕ್ಕಳು ವಿರೋಚನನಿಗೆ ಬಲಿಯು ಮಗನು. ಬಲಿಗೆ ಬಾಣನೇ ಮುಂತಾದ ನೂರು ಜನ ಮಕ್ಕಳಾದರು. ಹಿರಣ್ಯಾಕ್ಷನಿಗೆ ಮಹಾ ಬಲಶಾಲಿಗಳಾದ ಝರ್ಝರ, ಶಕುನಿ, ಭೂತ ಸಂತಾಪನ, ಮಹಾನಂದ, ಮಹಾಬಾಹು, ಕಾಲನಾಭ ಎಂಬವರು ಮಕ್ಕಳಾದರು. (ಕಾಶ್ಯಪನ ಪತ್ನಿಯರಾದ ಅದಿತಿ, ದಿತಿ ಇವರಿಬ್ಬರ ವಂಶವನ್ನು ಹೇಳಿಯಾಯಿತು. ಮಿಕ್ಕ ಪತ್ನಿಯರ ವಂಶವನ್ನು ಹೇಳಲಾಗುವುದು.)

ಅಭವನ್ದನುಪುತ್ರಾಶ್ಚ ದ್ವಿಮೂರ್ಧಾ ಶಂಬರಸ್ತಥಾ ।
ಅಯೋಮುಖಶ್ಶಂಕುಶಿರಾಃ ಕಪಿಲಶ್ಶಂಕರಸ್ತಥಾ ॥ ೪ ॥

ಏಕವಕ್ತ್ರೋ ಮಹಾಬಾಹುಸ್ತಾರಕಶ್ಚ ಮಹಾಬಲಃ ।
ಸ್ವರ್ಭಾನುರ್ವೃಷಪರ್ವಾ ಚ ಪುಲೋಮಾ ಚ ಮಹಾಸ್ವನಃ ॥ ೫ ॥

ಏತೇ ದನುಸುತಾಃ ಖ್ಯಾತಾ ವಿಪ್ರಚಿತ್ತಿಶ್ಚ ವೀರ್ಯವಾನ್ ॥ ೬ ॥

ಸ್ವರ್ಭಾನೋಸ್ತು ಪ್ರಭಾ ಕನ್ಯಾ ಶರ್ಮಿಷ್ಠಾ ವಾರ್ಷಪರ್ವಣೀ ।
ಉಪದಾನವೀ ಹಯಶಿರಾಃ ಪ್ರಖ್ಯಾತಾ ವರಕನ್ಯಕಾಃ ॥ ೭ ॥

ವೈಶ್ವಾನರಸುತೇ ಚೋಭೇ ಪುಲೋಮಾ ಕಾಲಕಾ ತಥಾ ।
ಉಭೇ ತತ್ರ ಮಹಾಭಾಗೇ ಮರೀಚೇಸ್ತು ಪರಿಗ್ರಹಃ ॥ ೮ ॥

ತಾಭ್ಯಾಂ ಪುತ್ರಸಹಸ್ರಾಣಿ ಷಷ್ಟಿ ರ್ದಾನವಸತ್ತಮಾಃ ।
ಪೌಲೋಮಾಃ ಕಾಲಕೇಯಾಶ್ಚ ಮರೀಚಿತನಯಾಸ್ಸ್ಮೃತಾಃ ॥ ೯ ॥

೪-೯. ಕಾಶ್ಯಪನ ಪತ್ನಿಯಾದ ದನು ಎಂಬವಳಿಗೆ ದ್ವಿಶಿರ, ಶಂಬರ, ಅಯೋಮುಖ, ಶಂಕುಶಿರ, ಕಪಿಲ, ಶಂಕರ, ಏಕವಕ್ತ್ರ, ಮಹಾಬಾಹು, ತಾರಕ, ಸ್ವರ್ಭಾನು. ವೃಷಪರ್ವ, ಪುಲೋಮ, ವಿಪ್ರಚಿತ್ತಿ, ಮುಂತಾದವರು ಮಕ್ಕಳು. ಸ್ವರ್ಭಾನುವಿಗೆ ಪ್ರಭೆಯೆಂಬವಳೂ, ವೃಷಪರ್ವನಿಗೆ ಶರ್ಮಿಷ್ಠೆ, ಉಪದಾನವೀ, ಹಯಶಿರಾ. ಎಂಬವರೂ, ವೈಶ್ವಾನರನಿಗೆ ಪುಲೋಮ, ಕಾಲಕ, ಎಂಬವರೂ ಹೆಣ್ಣುಮಕ್ಕಳು. ಈ ಪುಲೋಮ, ಕಾಲಕ ಎಂಬಿಬ್ಬರೂ ಮರೀಚಿಯೆಂಬುವನ ಪತ್ನಿಯರು. ಇವರಿಬ್ಬರಿಗೂ ಪೌಲೋಮರು, ಕಾಲಕೇಯರು ಎಂಬ ಅರವತ್ತು ಸಾವಿರ ದಾನವರು ಮಕ್ಕಳಾಗಿ ಮರೀಚಿಪುತ್ರರೆನಿಸಿಕೊಂಡರು.

ತತೋಽಪರೇ ಮಹಾವೀರ್ಯಾ ದಾರುಣಾಸ್ತ್ವತಿನಿರ್ಘೃಣಾಃ ।
ಸಿಂಹಿಕಾಯಾಮಥೋತ್ಪನ್ನಾ ವಿಪ್ರಚಿತ್ತೇಸ್ಸುತಾಸ್ತಥಾ ॥ ೧೦ ॥

ತ್ರ್ಯಂಶಶ್ಶಲ್ಯಶ್ಚ ಬಲವಾನ್ನಭಶ್ಚೈವ ಮಹಾಬಲಃ ।
ವಾತಾಪಿರ್ನಮುಚಿಶ್ಚೈವ ಇಲ್ವಲಃ ಖಸೃಮಸ್ತಥಾ ॥ ೧೧ ॥

ಅಂಧಕೋ ನರಕಶ್ಚೈವ ಕಾಲನಾಭಸ್ತಥೈವ ಚ ।
ಸ್ವರ್ಭಾನುಶ್ಚ ಮಹಾವೀರ್ಯೋ ವಕ್ತ್ರಯೋಧೀ ಮಹಾಸುರಃ ॥ ೧೨ ॥

ಏತೇ ವೈ ದಾನವಶ್ರೇಷ್ಠಾ ದನುವಂಶವಿವರ್ಧನಾಃ ।
ಏತೇಷಾಂ ಪುತ್ರಪೌತ್ರಾಶ್ಚ ಶತಶೋಽಥ ಸಹಸ್ರಶಃ ॥ ೧೩ ॥

ಪ್ರಹ್ಲಾದಸ್ಯ ತು ದೈತ್ಯಸ್ಯ ನಿವಾತಕವಚಾಃ ಕುಲೇ ।
ಸಮುತ್ಪನ್ನಾಸ್ಸುಮಹತಾ ತಪಸಾ ಭಾವಿತಾತ್ಮನಃ ॥ ೧೪ ॥

ಷಟ್ಸುತಾಸ್ಸುಮಹಾಸತ್ತ್ವಾಸ್ತಾಮ್ರಾಯಾಃ ಪರಿಕೀರ್ತಿತಾಃ ।
ಶುಕೀ ಶ್ಯೇನೀ ಚ ಭಾಸೀ ಚ ಸುಗ್ರೀವೀ ಶುಚಿಗೃಧ್ರಿಕಾಃ ॥ ೧೫ ॥

೧೦-೧೩. ವಿಪ್ರಚಿತ್ತಿ ಎಂಬವನ ಹೆಂಡತಿಯೂ, ಹಿರಣ್ಯಕಶಿಪುವಿನ ಸಹೋದರಿಯೂ ಆದ ಸಿಂಹಿಕೆಯಲ್ಲಿ ಮಹಾಪರಾಕ್ರಮಿಗಳೂ, ಭಯಂಕರಾಕಾರರೂ ದಯಾಶೂನ್ಯರೂ ಆದ ತ್ರ್ಯಂಶ, ಶಲ್ಯ, ನಭ, ವಾತಾಪಿ, ನಮುಚಿ ಇಲ್ವಲ, ಖಸೃಮ, ಅಂಧಕ, ನರಕ, ಕಾಲನಾಭ, ಸ್ವರ್ಭಾನು, ವಕ್ತ್ರಯೋಧಿ ಮುಂತಾದ ಮಕ್ಕಳು ಹುಟ್ಟಿದರು. ಇವರ ಮಕ್ಕಳೂ ಮೊಮ್ಮಕ್ಕಳುಗಳೂ ಲೆಕ್ಕವಿಲ್ಲದಷ್ಟು ಹೆಚ್ಚಿ ದನುವಂಶವು ಬೆಳೆಯಿತು.

೧೪-೧೫. ಪ್ರಹ್ಲಾದನ ವಂಶದಲ್ಲಿ ನಿವಾತ ಕವಚರೆಂಬ ದೈತ್ಯರು ಉತ್ಪನ್ನರಾದರು. ಕಶ್ಯಪನ ಪತ್ನಿಯಾದ ತಾಮ್ರಾ ಎಂಬುವಳಿಗೆ ಶುಕಿ, ಶ್ಯೇನಿ, ಭಾಸಿ ಸುಗ್ರೀವಿ. ಶುಚಿ, ಗೃಧ್ರಿಕೆ ಎಂಬ ಆರು ಜನ ಹೆಣ್ಣುಮಕ್ಕಳು. ಶುಕಿಯು ಗಿಣಿಗಳನ್ನೂ, ಶ್ಯೇನಿಯು ಗಿಡುಗಗಳನ್ನೂ, ಭಾಸಿಯು ಭಾಸವೆಂಬ ಪಕ್ಷಿಗಳನ್ನೂ

ಶುಕೀ ತು ಜನಯಾಮಾಸ ಉಲೂಕಾ ಪ್ರತ್ಯುಲೂಕಿಕಾನ್ ।
ಶ್ಯೇನೀ ಶ್ಯೇನಾಂಸ್ತಥಾ ಭಾಸಾನ್ಭಾಸೀ ಗೃಧ್ರಾಂಶ್ಚ ಗೃಧ್ರಿಕೀ ॥ ೧೬ ॥

ಶುಚ್ಯೌದಕಾನ್ಪಕ್ಷಿಗಣಾನ್ಸುಗ್ರೀವೀತು ವ್ಯಜಾಯತ ।
ಅಶ್ವಾನುಷ್ಟ್ರಾನ್ಗರ್ದಭಾಂಶ್ಚ ತಾಮ್ರಾವಂಶಃ ಪ್ರಕೀರ್ತಿತಃ ॥ ೧೭ ॥

ವಿನತಾಯಾಸ್ತು ಪುತ್ರೌ ದ್ವೌ ವಿಖ್ಯಾತೌ ಗರುಡಾರುಣೌ ।
ಸುಪರ್ಣಃ ಪತತಾಂ ಶ್ರೇಷ್ಠೋ ದಾರುಣಃ ಪನ್ನಗಾಶನಃ ॥ ೧೮ ॥

ಸುರಸಾಯಾಂ ಸಹಸ್ರಂ ತು ಸರ್ಪಾಣಾಮಮಿತೌಜಸಾಂ ।
ಅನೇಕಶಿರಸಾಂ ಬ್ರಹ್ಮನ್ಖೇಚರಾಣಾಂ ಮಹಾತ್ಮನಾಂ ॥ ೧೯ ॥

ಕಾದ್ರವೇಯಾಸ್ತು ಬಲಿನಸ್ಸಹಸ್ರಮಮಿತೌಜಸಃ ।
ಸುಪರ್ಣವಶಗಾ ಬ್ರಹ್ಮನ್ ಜಜ್ಞಿರೇ ನೈಕಮಸ್ತಕಾಃ ॥ ೨೦ ॥

ತೇಷಾಂ ಪ್ರಧಾನಾ ಭದ್ರಂ ತೇ ಶೇಷವಾಸುಕಿತಕ್ಷಕಾಃ ।
ಶಂಖಶ್ವೇತೌ ಮಹಾಪದ್ಮಃ ಕಂಬಳಾಶ್ವತರಾವುಭೌ ॥ ೨೧ ॥

ಗೃಧ್ರಿಕೆಯು ಹದ್ದುಗಳನ್ನೂ ಪ್ರಸವಿಸಿದರು. ಶುಚಿಯು ನೀರು ಹಕ್ಕಿಗಳನ್ನೂ, ಸುಗ್ರೀವಿಯು ಕುದುರೆ, ಒಂಟೆ, ಕತ್ತೆ ಮುಂತಾದುವುಗಳನ್ನೂ ಹೆತ್ತರು. ತಾಮ್ರಾ ಎಂಬವಳ ವಂಶವು ಹೀಗೆ ಬೆಳೆಯಿತು.

೧೮–೨೨. ಕಶ್ಯಪನ ಪತ್ನಿಯಾದ ವಿನತೆಯಲ್ಲಿ ಗರುಡ, ಅರುಣ ಎಂಬಿಬ್ಬರು ಮಕ್ಕಳು ಹುಟ್ಟಿದರು. ಗರುಡನು ಪಕ್ಷಿಶ್ರೇಷ್ಠನಾಗಿ ಹಾವುಗಳನ್ನು ತಿನ್ನತಕ್ಕವನಾದನು. ಸುರಸೆಯೆಂಬ ಪತ್ನಿಯಲ್ಲಿ ಮಹಾ ಪರಾಕ್ರಮಿಗಳೂ, ಅನೇಕ ತಲೆಗಳುಳ್ಳವರೂ, ಅಂತರಿಕ್ಷದಲ್ಲಿ ಸಂಚರಿಸುವವರೂ ಆದ ಸರ್ಪಗಳು ಹುಟ್ಟಿದರು. ಕಶ್ಯಪನ ಪತ್ನಿಯಾದ ಕದ್ರು ಎಂಬುವಳಲ್ಲಿ ಬಲಶಾಲಿಗಳಾದ ಅನೇಕ ತಲೆಗಳುಳ್ಳ ಸಾವಿರಾರು ಸರ್ಪಗಳು ಹುಟ್ಟಿದರು. ಇವರೆಲ್ಲರೂ ಗರುಡನ ಅಧೀನರು. ಇವರಲ್ಲಿ ಶೇಷ, ವಾಸುಕಿ, ತಕ್ಷಕ, ಶಂಖ, ಶ್ವೇತ, ಮಹಾಪದ್ಮ, ಕಂಬಳ, ಅಶ್ವತರ, ಏಲಾಪುತ್ರ

ಏಲಾಪುತ್ರಸ್ತಥಾ ಕರ್ಣಃ ಕಾರ್ಕೋಟಕಧನಂಜಯೌ ।
ಏತೇ ಚಾನ್ಯೇ ಚ ಬಹವೋ ದಂದಶೂಕಾ ವಿಷೋಲ್ಬಣಾಃ ॥ ೨೨ ॥

ಗಣಂ ಕ್ರೋಧವಶಂ ವಿದ್ಧಿ ತೇ ಚ ಸರ್ವೇ ಚ ದಂಷ್ಟ್ರಿಣಃ ।
ಸ್ಥಲಜಾಃ ಪಕ್ಷಿಣೋಽಬ್ಜಾಶ್ಚ ದಾರುಣಾಃ ಪಿಶಿತಾಶನಾಃ ॥ ೨೩ ॥

ಗಾಸ್ತು ವೈ ಜನಯಾಮಾಸ ಸುರಭಿರ್ಮಹಿಷೀಸ್ತಥಾ ।
ಇರಾ ವೃಕ್ಷಲತಾವಲ್ಲೀ ತೃಣಜಾತೀಶ್ಚ ಸರ್ವಶಃ ॥ ೨೪ ॥

ಖಷಾ ತು ಯಕ್ಷರಕ್ಷಾಂಸಿ ಮುನಿರಪ್ಸರಸ್ತಥಾ ।
ಅರಿಷ್ಟಾ ತು ಮಹಾಸತ್ತ್ವಾನ್ಗಂಧರ್ವಾನ್ಸಮಜೀಜನತ್ ॥ ೨೫ ॥

ಏತೇ ಕಾಶ್ಯಪದಾಯಾದಾಃ ಕೀರ್ತಿತಾಸ್ಸ್ಥಾಣುಜಂಗಮಾಃ ।
ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಶತಶೋಽಥ ಸಹಸ್ರಶಃ ॥ ೨೬

ಕರ್ಣ, ಕಾರ್ಕೋಟಕ, ಧನಂಜಯ ಎಂಬುವರೇ ಮುಖ್ಯರು ಕದ್ರು ಮತ್ತು ಸುರಸಾ ಎಂಬುವರ ವಂಶದಲ್ಲಿ ಹುಟ್ಟಿದ ಸರ್ಪಗಳೆಲ್ಲ ವಿಶೇಷವಾದವಿಷದ ಹಲ್ಲುಗಳುಳ್ಳವುಗಳು.

೨೩. ಕಶ್ಯಪನ ಪತ್ನಿಯಾದ ಕ್ರೋಧವಶಾ ಎಂಬವಳು ಕ್ರೋಧವಶವೆಂಬ ರಾಕ್ಷಸರನ್ನೂ, ವಿಷದ ಹಲ್ಲುಗಳುಳ್ಳ ಸರ್ಪಗಳನ್ನೂ ನೆಲದ ಮೇಲೂ, ನೀರಿನಲ್ಲಿಯೂ ವಾಸಮಾಡುವ ಮಾಂಸಾಹಾರಮಾಡುವ ಪಕ್ಷಿಗಳನ್ನೂ ಪ್ರಸುವಿಸಿದಳು.

೨೪–೨೫. ಸುರಭಿಯೆಂಬ ಪತ್ನಿಯು ಗೋವುಗಳನ್ನೂ, ಎಮ್ಮೆಗಳನ್ನೂ, ಇರಾ ಎಂಬವಳು ಮರ ಬಳ್ಳಿ ಹುಲ್ಲು ಇವುಗಳನ್ನೂ ಖಷಾ ಎಂಬುವಳು ಯಕ್ಷರು ರಾಕ್ಷಸರು, ಮುನಿಗಳು, ಅಪ್ಸರಸ್ಸುಗಳನ್ನೂ, ಅರಿಷ್ಟಾ ಎಂಬವಳು ಮಹಾಬಲಶಾಲಿಗಳಾದ ಗಂಧರ್ವರನ್ನೂ ಪ್ರಸುವಿಸಿದರು.

೨೬–೨೮. ಕಾಶ್ಯಪನ ವಂಶದಲ್ಲಿ ಹುಟ್ಟಿದ ಮಕ್ಕಳು ಮೊಮ್ಮಕ್ಕಳುಗಳಿಂದ ಕೂಡಿದ ಚರಾಚರ ಪ್ರಾಣಿಗಳನ್ನು ಹೇಳಿಯಾಯಿತು. ಇದು ಸ್ವಾರೋಚಿಷಮನ್ವಂ

ಏಷ ಮನ್ವಂತರೇ ಸರ್ಗೋ ಬ್ರಹ್ಮನ್ಸ್ವಾರೋಚಿಷೇ ಸ್ಮೃತಃ ॥ ೨೭ ॥

ವೈವಸ್ವತೇ ಚ ಮಹತಿ ವಾರುಣೇ ವಿತತೇ ಕ್ರತೌ ।
ಜುಹ್ವಾನಸ್ಯ ಬ್ರಹ್ಮಣೋ ವೈ ಪ್ರಜಾಸರ್ಗ ಇಹೋಚ್ಯತೇ ॥ ೨೮ ॥

ಪೂರ್ವಂ ಯತ್ರ ತು ಸಪ್ತರ್ಷೀನುತ್ಪನ್ನಾನೇವ ಮಾನವಾನ್ ।
ಪುತ್ರತ್ವೇ ಕಲ್ಪಯಾಮಾಸ ಸ್ವಯಮೇವ ಪಿತಾಮಹಃ ॥
ಗಂಧರ್ವಭೋಗಿದೇವಾನಾಂ ದಾನವಾನಾಂ ಚ ಸತ್ತಮ ॥ ೨೯ ॥

ದಿತಿರ್ವಿನಷ್ಟಪುತ್ರಾ ವೈ ತೋಷಯಾಮಾಸ ಕಾಶ್ಯಪಂ ।
ತಯಾ ಚಾರಾಧಿತಸ್ಸಮ್ಯಕ್ ಕಾಶ್ಯಪಸ್ತಪತಾಂ ವರಃ ॥ ೩೦ ॥

ವರೇಣ ಛಂದಯಾಮಾಸ ಸಾ ಚ ವವ್ರೇ ತತೋ ವರಂ ।
ಪುತ್ರಮಿಂದ್ರವಧಾರ್ಥಾಯ ಸಮರ್ಥಮಮಿತೌಜಸಂ ॥ ೩೧ ॥

ಸ ಚ ತಸ್ಮೈ ವರಂ ಪ್ರಾದಾದ್ಭಾರ್ಯಾಯೈ ಮುನಿಸತ್ತಮಃ ।
ದತ್ವಾ ಚ ವರಮವ್ಯಗ್ರಃ ಕಾಶ್ಯಪಸ್ತಾಮುವಾಚ ಹ ॥ ೩೨ ॥

ತರದ ಸೃಷ್ಟಿ ವಿಚಾರವು. ಮೈತ್ರೇಯನೇ ವೈವಸ್ವತ ಮನ್ವಂತರದಲ್ಲಿ ವರುಣನ ಮಾಡಿದ ಮಹಾ ಯಜ್ಞದಲ್ಲಿ ಹೋಮಮಾಡುತ್ತಿದ್ದ ಬ್ರಹ್ಮನು ಸೃಷ್ಟಿಮಾಡಿದ ಕ್ರಮವನ್ನು ಹೇಳಲಾಗುವುದು.

೨೯–೩೦. ಬ್ರಹ್ಮನು ವೈವಸ್ವತ ಮನ್ವಂತರದಲ್ಲಿ ಸೃಷ್ಟಿಕಾರ್ಯವನ್ನು ಮಾಡಲು ಹಿಂದಿನ ಮನ್ವಂತರದ ಸಪ್ತರ್ಷಿಗಳನ್ನೇ ಗಂಧರ್ವರಿಗೂ, ನಾಗಗಳಿಗೂ, ದೇವದಾನವರಿಗೂ ತಂದೆಯಾಗಿ ಸೃಷ್ಟಿಕಾರ್ಯವನ್ನು ಮಾಡುವಂತೆ ಗೊತ್ತುಮಾಡಿದನು. ಈ ಸಂಧರ್ಭದಲ್ಲಿ ತನ್ನ ಪುತ್ರರನ್ನು ಕಳೆದುಕೊಂಡ ದಿತಿಯು ಕಾಶ್ಯಪನನ್ನು ಸೇವಿಸಿ ಸಂತೋಷಪಡಿಸಿದಳು. ಸಂತುಷ್ಟನಾದ ಕಾಶ್ಯಪನು ಅವಳಿಗೆ ವರವನ್ನು ಕೊಟ್ಟನು.

೩೧–೩೪. ಆಗ ದಿತಿಯು ಇಂದ್ರನನ್ನು ಕೊಲ್ಲುವುದಕ್ಕಾಗಿ ಒಬ್ಬ ಪುತ್ರನನ್ನು ಕೊಡಬೇಕೆಂದು ವರವನ್ನು ಕೇಳಿದಳು. ಋಷಿಶ್ರೇಷ್ಠನಾದ ಕಾಶ್ಯಪನು ಅವಳಿಗೆ

ಶಕ್ರಂ ಪುತ್ರೋ ನಿಹಂತಾ ತೇ ಯದಿ ಗರ್ಭಂ ಶರಚ್ಛತಂ ।
ಸಮಾಹಿತಾತಿಪ್ರಯತಾ ಶೌಚಿನೀ ಧಾರಯಿಷ್ಯಸಿ ॥ ೩೩ ॥

ಇತ್ಯೇವಮುಕ್ತ್ವಾ ತಾಂ ದೇವೀಂ ಸ ಗತಃ ಕಾಶ್ಯಪೋ ಮುನಿಃ ।
ದಧಾರ ಸಾಪಿ ತಂ ಗರ್ಭಂ ಸಮ್ಯಕ್ಛೌಚ ಸಮನ್ವಿತಾ ॥ ೩೪ ॥

ಗರ್ಭಮಾತ್ಮವಧಾರ್ಥಾಯ ಜ್ಞಾತ್ವಾ ತಂ ಮಘವಾನಪಿ ।
ಶುಶ್ರೂಷುಸ್ತಾಮಥಾಗಚ್ಛದ್ವಿನಯಾದಮರಾಧಿಪಃ ॥ ೩೫ ॥

ತಸ್ಯಾಶ್ಛಿದ್ರಾಂತರಂ ಪ್ರೇಪ್ಸುರತಿಷ್ಠತ್ಪಾಕಶಾಸನಃ ।
ಊನೇ ವರ್ಷಶತೇ ಚಾಸ್ಯಾ ದದರ್ಶಾಂತರಮಾತ್ಮವಾನ್ ॥ ೩೬ ॥

ಅಕೃತ್ವಾ ಪಾದಶೌಚಂ ತಂ ದಿತಿಶ್ಶಯನಮಾವಿಶತ್ ।
ನಿದ್ರಾಮಾಹಾರಯಾಮಾಸ ತಸ್ಯಾಃ ಕುಕ್ಷಿಂ ಪ್ರವಿಶ್ಯ ಸಃ ॥

ವರವನ್ನು ಕೊಟ್ಟು, ನೀನು ನೂರು ವರ್ಷಗಳವರೆಗೆ ಏಕಾಗ್ರಚಿತ್ತದಿಂದ ಶುಚಿಯಾಗಿ ಗರ್ಭವನ್ನು ಧರಿಸಿದ್ದರೆ ಇಂದ್ರನನ್ನು ಕೊಲ್ಲುವ ಮಗನು ಹುಟ್ಟುವನು, ಎಂದು ಹೇಳಿ ಅವಳೊಡನೆ ಕೂಡಿದನು. ದಿತಿಯು ಪರಿಶುದ್ಧವಾದ ಆಚಾರವುಳ್ಳವಳಾಗಿ ಗರ್ಭವನ್ನು ಧರಿಸಿದ್ದಳು.

೩೫-೩೮. ದೇವೇಂದ್ರನು ತನ್ನ ನಾಶಕ್ಕಾಗಿ ಗರ್ಭವು ಬೆಳೆಯುತ್ತಿರುವುದನ್ನು ತಿಳಿದು ದಿತಿಯ ಸೇವೆಯನ್ನು ಮಾಡುವ ನೆವದಿಂದ ಬಂದು ಸಮಯವನ್ನು ಕಾಯುತ್ತಿದ್ದನು. (ಗರ್ಭಿಣಿಯರು ಸಂಧ್ಯಾಕಾಲದಲ್ಲಿ ಭೋಜನವನ್ನು, ಮಾಡಬಾರದು ಮರದ ಬುಡಕ್ಕೆ ಹೋಗಬಾರದು, ಅಲ್ಲಿ ಇರಲೂಬಾರದು, ಜನರೊಡನೆ ಜಗಳ ಮಾಡಬಾರದು, ಮೈ ಮುರಿಯಬಾರದು, ತಲೆಯ ಕೂದಲನ್ನು ಬಿಚ್ಚಿಕೊಂಡಿರಬಾರದು, ಯಾವಾಗಲೂ ಅಶುಚಿಯಾಗಿರಬಾರದು. ಪ್ರಾಣಿಹಿಂಸೆ ಮಾಡಬಾರದು, ಮತ್ತೊಬ್ಬರನ್ನು ಬೈಯ್ಯಬಾರದು, ಸುಳ್ಳಾಡಬಾರದು, ಇವೇ ಮುಂತಾದ ನಿಯಮಗಳನ್ನು ಅನುಸರಿಸಬೇಕು.) ನೂರು ವರ್ಷಗಳಿಗೆ ಕೆಲವು ದಿನಗಳು ಕಡಿಮೆ

ವಜ್ರಪಾಣಿರ್ಮಹಾಗರ್ಭಂ ತಂ ಚಿಚ್ಛೇದಾಥ ಸಪ್ತಧಾ ॥ ೩೭ ॥

ಸ ಪಾಟ್ಯಮಾನೋ ವಜ್ರೇಣ ಪ್ರರುರೋದಾತಿದಾರುಣಂ ।
ಮಾ ರೋದೀರಿತಿ ತಂ ಶಕ್ರಃ ಪುನಃ ಪುನರಭಾಷತ ॥ ೩೮ ॥

ಸೋऽಭವತ್ಸಪ್ತಧಾ ಗರ್ಭಸ್ತಮಿಂದ್ರಃ ಕುಪಿತಃ ಪುನಃ ।
ಏಕೈಕಂ ಸಪ್ತಧಾ ಚಕ್ರೇ ವಜ್ರೇಣಾದ್ರಿವಿದಾರಿಣಾ ॥ ೩೯ ॥

ಮರುತೋ ನಾಮ ದೇವಾಸ್ತೇ ಬಭೂವುರತಿವೇಗಿನಃ ।
ಯದುಕ್ತಂ ವೈ ಮಘವತಾ ತೇನೈವ ಮರುತೋऽಭವನ್ ॥
ದೇವಾ ಏಕೋನಪಂಚಾಶತ್ಸಹಾಯಾ ವಜ್ರಪಾಣಿನಃ ॥ ೪೦ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ಏಕವಿಂಶೋऽಧ್ಯಾಯಃ

ಯಾಗಿರುವಲ್ಲಿ ಇಂದ್ರನಿಗೆ ಸಮಯವು ಸಿಕ್ಕಿತು. ದಿತಿಯು ಕಾಲುಗಳನ್ನು ತೊಳೆದು ಕೊಳ್ಳದೆ ನಿದ್ರೆ ಮಾಡುತ್ತಿದ್ದಳು. ಈ ಸಮಯದಲ್ಲಿ ದೇವೇಂದ್ರನು ಗರ್ಭ ವನ್ನು ಪ್ರವೇಶಿಸಿ ವಜ್ರಾಯುಧದಿಂದ ಗರ್ಭವನ್ನು ಏಳುಭಾಗ ಮಾಡಿದನು. ವಜ್ರ ದಿಂದ ಛೇದಿಸುತ್ತಿದ್ದಾಗ ಗರ್ಭವು ಭಯಂಕರವಾಗಿ ಅಳುತ್ತಿದ್ದಿತು. ಇಂದ್ರನು ಮಾರೋದೀಃ (ಅಳಬೇಡ) ಎಂದು ಹೇಳುತ್ತಿದ್ದನು

೩೯–೪೦. ಗರ್ಭವು ಏಳು ಭಾಗವಾದ ಮೇಲೆ ಮತ್ತೆ ದೇವೇಂದ್ರನು ಕೋಪದಿಂದ ಒಂದೊಂದು ಭಾಗವನ್ನೂ ವಜ್ರಾಯುಧದಿಂದ ಏಳೇಳು ಭಾಗವಾಗಿ ಮಾಡಿದ ಆ ನಲವತ್ತೊಂಭತ್ತು ಭಾಗಗಳೂ ಮಾರೋದೀಃ ಎಂದು ದೇವೇಂದ್ರನು ಹೇಳಿದಂತೆ ಮಹಾ ವೇಗವುಳ್ಳ ಮರುತ್ತೆಂಬ ದೇವತೆಗಳಾಗಿ ದೇವೇಂದ್ರನಿಗೆ ಸಹಾಯಕರಾದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಇಪ್ಪತ್ತೊಂದನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ದ್ವಾವಿಂಶೋಽಧ್ಯಾಯಃ

॥ ಶ್ರೀ ಪರಾಶರ ಉವಾಚ ॥

ಯದಾಭಿಷಿಕ್ತಸ್ಸ ಪೃಥುಃ ಪೂರ್ವಂ ರಾಜ್ಯೇ ಮಹರ್ಷಿಭಿಃ ।
ತತಃ ಕ್ರಮೇಣ ರಾಜ್ಯಾನಿ ದದೌ ಲೋಕಪಿತಾಮಹಃ ॥ ೧ ॥

ನಕ್ಷತ್ರಗ್ರಹವಿಪ್ರಾಣಾಂ ವೀರುಧಾಂ ಚಾಪ್ಯಶೇಷತಃ ।
ಸೋಮಂ ರಾಜ್ಯೇ ನ್ಯಧಾದ್ಬ್ರಹ್ಮಾ ಯಜ್ಞಾನಾಂ ತಪಸಾಮಪಿ ॥ ೨ ॥

ರಾಜ್ಞಾಂ ವೈಶ್ರವಣಂ ರಾಜ್ಯೇ ಜಲಾನಾಂ ವರುಣಂ ತಥಾ ।
ಆದಿತ್ಯಾನಾಂ ಪತಿಂ ವಿಷ್ಣುಂ ವಸೂನಾಮಥ ಪಾವಕಂ ॥ ೩ ॥

ಪ್ರಜಾಪತೀನಾಂ ದಕ್ಷಂ ತು ವಾಸವಂ ಮರುತಾಮಪಿ ।
ದೈತ್ಯಾನಾಂ ದಾನವಾನಾಂ ಚ ಪ್ರಹ್ಲಾದಮಧಿಪಂ ದದೌ ॥ ೪ ॥

ಇಪ್ಪತ್ತೆರಡನೆಯ ಅಧ್ಯಾಯವು

೧-೯. ಮಹರ್ಷಿಗಳು ಪೃಥುವನ್ನು ರಾಜ್ಯಗಳಿಗೆಲ್ಲ ದೊರೆಯಾಗಿ ಪಟ್ಟಾಭಿಷೇಕ ಮಾಡಿದ ಮೇಲೆ ಬ್ರಹ್ಮನು ಕ್ರಮವಾಗಿ ಒಂದೊಂದು ರಾಜ್ಯಗಳನ್ನು ಒಬ್ಬೊಬ್ಬರಿಗೆ ಕೊಟ್ಟನು. ನಕ್ಷತ್ರಗಳು, ಗ್ರಹಗಳು, ಬ್ರಾಹ್ಮಣರು, ಬಳ್ಳಿಗಳು, ಯಜ್ಞಗಳು, ತಪಸ್ಸುಗಳು ಇವುಗಳಿಗೆ ಸೋಮನನ್ನು ರಾಜನಾಗಿ ಮಾಡಿದನು. ಸಮಸ್ತ ರಾಜರಿಗೂ ಕುಬೇರನನ್ನೂ, ನೀರಿಗೆ ವರುಣನನ್ನೂ, ದ್ವಾದಶಾದಿತ್ಯರಿಗೆ ವಿಷ್ಣುವನ್ನೂ, ಅಷ್ಟವಸುಗಳಿಗೆ ಪಾವಕನನ್ನೂ, ಪ್ರಜಾಪತಿಗಳಿಗೆ ದಕ್ಷನನ್ನೂ,

ಪಿತೄಣಾಂ ಧರ್ಮರಾಜಾನಂ ಯಮಂ ರಾಜ್ಯೇಽಭ್ಯಷೇಚಯತ್ ।
ಐರಾವತಂ ಗಜೇಂದ್ರಾಣಾಮಶೇಷಾಣಾಂ ಪತಿಂ ದದೌ ॥ ೫ ॥

ಪತತ್ರಿಣಾಂ ಚ ಗರುಡಂ ನಾಗಾನಾಮಪಿ ವಾಸುಕಿಂ ।
ಉಚ್ಚೈಃಶ್ರವಸಮಶ್ವಾನಾಂ ವೃಷಭಂ ತು ಗವಾಮಪಿ ॥ ೬ ॥

ಮೃಗಾಣಾಂ ಚೈವ ಸರ್ವೇಷಾಂ ರಾಜ್ಯೇ ಸಿಂಹಂ ದದೌ ಪ್ರಭುಃ ।
ಶೇಷಂ ತು ದಂದಶೂಕಾನಾಮಕರೋತ್ಪತಿಮವ್ಯಯಃ ॥ ೭ ॥

ಹಿಮಾಲಯಂ ಸ್ಥಾವರಾಣಾಂ ಮುನೀನಾಂ ಕಪಿಲಂ ಮುನಿಂ ।
ನಖಿನಾಂ ದಂಷ್ಟ್ರಿಣಾಂ ಚೈವ ಮೃಗಾಣಾಂ ವ್ಯಾಘ್ರಮೀಶ್ವರಂ ॥ ೮ ॥

ವನಸ್ಪತೀನಾಂ ರಾಜಾನಂ ಪ್ಲಕ್ಷಮೇವಾಭ್ಯಷೇಚಯತ್ ।
ಏವಮೇವಾನ್ಯಜಾತೀನಾಂ ಪ್ರಾಧಾನ್ಯೇನಾಕರೋತ್ಪ್ರಭೂನ್ ॥ ೯ ॥

ಏವಂ ವಿಭಜ್ಯ ರಾಜ್ಯಾನಿ ದಿಶಾಪಾಲಾನನಂತರಂ ।
ಪ್ರಜಾಪತಿಪತಿರ್ಬ್ರಹ್ಮಾ ಸ್ಥಾಪಯಾಮಾಸ ಸರ್ವತಃ ॥ ೧೦ ॥

ದೇವತೆಗಳಿಗೆ, ಇಂದ್ರನನ್ನೂ, ದೈತ್ಯದಾನವರಿಗೆ ಪ್ರಹ್ಲಾದನನ್ನೂ, ಪಿತೃಗಳಿಗೆ ಯಮನನ್ನೂ, ಆನೆಗಳಿಗೆ ಐರಾವತವನ್ನೂ ಪಕ್ಷಿಗಳಿಗೆ ಗರುಡನನ್ನೂ ನಾಗಗಳಿಗೆ ವಾಸುಕಿಯನ್ನೂ, ಕುದುರೆಗಳಿಗೆ ಉಚ್ಚೈಃಶ್ರವಸ್ಸನ್ನೂ, ಗೋವುಗಳಿಗೆ ವೃಷಭನನ್ನೂ ಸಮಸ್ತ ಮೃಗಗಳಿಗೂ ಸಿಂಹವನ್ನೂ, ಸರ್ಪಗಳಿಗೆ ಆದಿಶೇಷನನ್ನೂ, ಪರ್ವತಗಳಿಗೆ ಹಿಮಾಲಯವನ್ನೂ, ಮುನಿಗಳಿಗೆ ಕಪಿಲನನ್ನೂ, ಹಲ್ಲು ಮತ್ತು ಉಗುರುಗಳೇ ಆಯುಧವಾಗಿ ಉಳ್ಳ ಮೃಗಗಳಿಗೆ ಹುಲಿಯನ್ನೂ, ವೃಕ್ಷಗಳಿಗೆ ಅಶ್ವತ್ಥವನ್ನೂ ರಾಜರನ್ನಾಗಿ ಪಟ್ಟಾಭಿಷೇಕ ಮಾಡಿದನು. ಹೀಗೆಯೇ ಬೇರೆ ಬೇರೆ ಜಾತಿಯ ಚರಾಚರಗಳಿಗೂ ರಾಜನನ್ನು ಗೊತ್ತುಮಾಡಿದನು.

೧೦–೧೫. ಹೀಗೆ ರಾಜ್ಯಗಳನ್ನು ವಿಭಾಗಮಾಡಿದ ಮೇಲೆ ಪ್ರಜಾಪತಿಗಳಿಗೆಲ್ಲ ಸ್ವಾಮಿಯಾದ ಬ್ರಹ್ಮನು ದಿಕ್ಪಾಲಕರನ್ನು ಸ್ಥಾಪಿಸಿದನು. ಪೂರ್ವದಿಕ್ಕಿಗೆ ವೈರಾಜ

ಪೂರ್ವಸ್ಯಾಂ ದಿಶಿ ರಾಜಾನಂ ವೈರಾಜಸ್ಯ ಪ್ರಜಾಪತೇಃ ।
ದಿಶಾಪಾಲಂ ಸುಧನ್ವಾನಮಾತ್ಮಜಂ ಸೋಽಭ್ಯಷೇಚಯತ್ ॥ ೧೨ ॥

ದಕ್ಷಿಣಸ್ಯಾಂ ದಿಶಿ ತಥಾ ಕರ್ದಮಸ್ಯ ಪ್ರಜಾಪತೇಃ ।
ಪುತ್ರಂ ಶಂಖಪದಂ ನಾಮ ರಾಜಾನಂ ಸೋಽಭ್ಯಷೇಚಯತ್ ॥ ೧೩ ॥

ಪಶ್ಚಿಮಾಯಾಂ ದಿಶಿ ತಥಾ ರಜಸಃ ಪುತ್ರಮಚ್ಯುತಂ ।
ಕೇತುಮಂತಂ ಮಹಾತ್ಮಾನಂ ರಾಜಾನಮಭಿಷಿಕ್ತವಾನ್ ॥ ೧೪ ॥

ತಥಾ ಹಿರಣ್ಯರೋಮಾಣಂ ಪರ್ಜನ್ಯಸ್ಯ ಪ್ರಜಾಪತೇಃ ।
ಉದೀಚ್ಯಾಂ ದಿಶಿ ದುರ್ಧರ್ಷಂ ರಾಜಾನಮಭಿಷೇಚಯತ್ ॥ ೧೫ ॥

ತೈರಿಯಂ ಪೃಥಿವೀ ಸರ್ವಾ ಸಪ್ತದ್ವೀಪಾ ಸಕಾನನಾ ।
ಯಥಾ ಪ್ರದೇಶಮದ್ಯಾಪಿ ಧರ್ಮತಃ ಪರಿಪಾಲ್ಯತೇ ॥ ೧೬ ॥

ಏತೇ ಸರ್ವೇ ಪ್ರವೃತ್ತಸ್ಯ ಸ್ಥಿತೌ ವಿಷ್ಣೋರ್ಮಹಾತ್ಮನಃ ।
ವಿಭೂತಿಭೂತಾ ರಾಜಾನೋ ಯೇ ಚಾನ್ಯೇ ಮುನಿಸತ್ತಮ ॥ ೧೭ ॥

ಯೇ ಭವಿಷ್ಯಂತಿ ಯೇ ಭೂತಾಸ್ಸರ್ವಭೂತೇಶ್ವರಾ ದ್ವಿಜ ।
ತೇ ಸರ್ವೇ ಸರ್ವಭೂತಸ್ಯ ವಿಷ್ಣೋರಂಶಸಮುದ್ಭವಾಃ ॥ ೧೮ ॥

ನೆಂಬ ಪ್ರಜಾಪತಿಯ ಮಗನಾದ ಸುಧನ್ವನನ್ನೂ, ದಕ್ಷಿಣದಿಕ್ಕಿಗೆ ಕರ್ದಮ ಪ್ರಜಾಪತಿಯ ಮಗನಾದ ಶಂಖಪದನನ್ನೂ, ಪಶ್ಚಿಮ ದಿಕ್ಕಿಗೆ ರಜಸ್ಸೆಂಬುವನ ಮಗನಾದ ಮಹಾಪರಾಕ್ರಮ ಶಾಲಿಯಾದ ಹಿರಣ್ಯರೋಮನನ್ನೂ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿದನು. ಇವರುಗಳು ಸಪ್ತದ್ವೀಪಗಳಿಂದಲೂ, ಕಾಡುಗಳಿಂದಲೂ ಕೂಡಿದ ಈ ಭೂಮಿಯೆಲ್ಲವನ್ನೂ ಈಗಲೂ ಧರ್ಮದಿಂ ಕಾಪಾಡುತ್ತಿರುವರು.

೧೯–೨೦. ಇವರೆಲ್ಲರೂ ಸ್ಥಿತಿಕಾರ್ಯವನ್ನು ಮಾಡುತ್ತಿರುವ ಮಹಾಮಹಿಮನಾದ ವಿಷ್ಣುವಿನ ಅಂಶದವರಾಗಿ ಅವನ ವಿಭೂತಿ ಸ್ವರೂಪರಾಗಿರುವರು. ಹಿಂದೆ

ಯೇ ತು ದೇವಾಧಿಪತಯೋ ಯೇ ಚ ದೈತ್ಯಾಧಿಪಾಸ್ತಥಾ ।
ದಾನವಾನಾಂ ಚ ಯೇ ನಾಥಾ ಯೇ ನಾಥಾಃ ಪಿಶಿತಾಶಿನಾಂ ॥ ೧೮ ॥

ಪಶೂನಾಂ ಯೇ ಚ ಪತಯಃ ಪತಯೋ ಯೇ ಚ ಪಕ್ಷಿಣಾಂ
ಮನುಷ್ಯಾಣಾಂ ಚ ಪತಯೋ ನಾಗಾನಾಂ ಚಾಧಿಪಾಶ್ಚ ಯೇ ॥ ೧೯ ॥

ವೃಕ್ಷಾಣಾಂ ಪರ್ವತಾನಾಂ ಚ ಗ್ರಹಾಣಾಂ ಚಾಧಿಪಾಶ್ಚ ಯೇ ।
ಅತೀತಾ ವರ್ತಮಾನಾಶ್ಚ ಯೇ ಭವಿಷ್ಯಂತಿ ಚಾಪರೇ ॥
ತೇ ಸರ್ವೇ ಸರ್ವಭೂತಸ್ಯ ವಿಷ್ಣೋರಂಶೇಸಮುದ್ಭವಾಃ ॥ ೨೦ ॥

ನ ಹಿ ಪಾಲನಸಾಮರ್ಥ್ಯಮೃತೇ ಸರ್ವೇಶ್ವರಂ ಹರಿಂ ।
ಸ್ಥಿತೌ ಸ್ಥಿತಿಂ ಮಹಾಪ್ರಾಜ್ಞ ಭವತ್ಯನ್ಯಸ್ಯ ಕಸ್ಯಚಿತ್ ॥ ೨೧ ॥

ಸೃಜತ್ಯೇಷ ಜಗತ್ಸೃಷ್ಟೌ ಸ್ಥಿತೌ ಪಾತಿ ಸನಾತನಃ ।
ಹಂತಿ ಚೈವಾಂತಕತ್ವೇನ ರಜಸ್ಸತ್ವಾದಿಸಂಶ್ರಯಃ ॥ ೨೨ ॥

ಯಾವ ರಾಜರು ಕಳೆದುಹೋದರೋ, ಮುಂದೆ ಯಾರು ರಾಜರಾಗಿ ಬರುವರೊ ಅವರೆಲ್ಲರೂ ಸರ್ವಭೂತ ಸ್ವರೂಪನಾದ ವಿಷ್ಣುವಿನ ಅಂಶದಿಂದಲೇ ಹುಟ್ಟಿದವರು. ದೇವತೆಗಳಿಗೆ ಅಧಿಪತಿಗಳಾದವರೂ, ದೈತ್ಯರೂ, ದಾನವರೂ ರಾಕ್ಷಸರೂ, ಪಶುಗಳೂ, ಪಕ್ಷಿಗಳೂ, ಮನುಷ್ಯರೂ, ನಾಗರೂ, ವೃಕ್ಷಗಳೂ, ಪರ್ವತಗಳೂ, ಗ್ರಹಗಳೂ, ಇವುಗಳ ಅಧಿಪತಿಗಳೂ ಯಾರು ಕಳೆದುಹೋದವರೋ, ಈಗ ಯಾರು ಇರುವರೋ, ಮುಂದೆ ಯಾರು ಆಗುವರೋ ಅವರೆಲ್ಲರೂ ಸರ್ವಭೂತ ಸ್ವರೂಪನಾದ ಮಹಾಮಹಿಮನಾದ ವಿಷ್ಣುವಿನ ಅಂಶದಿಂದಲೇ ಹುಟ್ಟಿದವರು.

೨೧-೨೨. ಪ್ರಾಜ್ಞನಾದ ಮೈತ್ರೇಯನೇ, ಪ್ರಪಂಚ ಸ್ಥಿತಿರೂಪವಾದ ಪಾಲನಸಾಮರ್ಥ್ಯವು ಸರ್ವೇಶ್ವರನಾದ ವಿಷ್ಣುವನ್ನು ಬಿಟ್ಟು ಬೇರೆಯವರಿಗೆ ಇಲ್ಲ ಈ ಮಹಾ ವಿಷ್ಣುವು ಸೃಷ್ಟಿಕಾಲದಲ್ಲಿ ಸೃಷ್ಟಿಯನ್ನೂ, ಸ್ಥಿತಿ ಕಾಲದಲ್ಲಿ ಪಾಲನೆಯನ್ನೂ, ಸಂಹಾರ ಕಾಲದಲ್ಲಿ ನಾಶವನ್ನೂ, ರಜಸ್ಸತ್ವ ತಮೋಗುಣಗಳನ್ನು ಕ್ರಮ.

ಚತುರ್ವಿಭಾಗಸ್ಸಂಸೃಷ್ಟೌ ಚತುರ್ಧಾ ಸಂಸ್ಥಿತಸ್ಥಿತೌ ।
ಪ್ರಳಯಂ ಚ ಕರೋತ್ಯಂತೇ ಚತುರ್ಭೇದೋ ಜನಾರ್ದನಃ ॥ ೨೩॥

ಏಕೇನಾಂಶೇನ ಬ್ರಹ್ಮಾಸೌ ಭವತ್ಯವ್ಯಕ್ತಮೂರ್ತಿಮಾನ್ ।
ಮರೀಚಿಮಿಶ್ರಾಃ ಪತಯಃ ಪ್ರಜಾನಾಮನ್ಯಭಾಗತಃ ॥ ೨೪ ॥

ಕಾಲಸ್ತೃತೀಯಸ್ತಸ್ಯಾಂಶಸ್ಸರ್ವಭೂತಾನಿ ಚಾಪರಃ ।
ಇತ್ಥಂ ಚತುರ್ಧಾ ಸಂಸೃಷ್ಟೌ ವರ್ತತೇಽಸೌ ರಜೋಗುಣಃ ॥ ೨೫ ॥

ಏಕಾಂಶೇನ ಸ್ಥಿತೋ ವಿಷ್ಣುಃ ಕರೋತಿ ಪರಿಪಾಲನಂ ।
ಮನ್ವಾದಿರೂಪೀ ಚಾನ್ಯೇನ ಕಾಲರೂಪೋ ಪರೇಣ ಚ ॥ ೨೬ ॥

ಸರ್ವಭೂತೇಷು ಚಾನ್ಯೇನ ಸಂಸ್ಥಿತಃ ಕುರುತೇ ಸ್ಥಿತಿಂ ।
ಸಸತ್ವಗುಣಮಾಶ್ರಿತ್ಯ ಜಗತಃ ಪುರುಷೋತ್ತಮಃ ॥ ೨೭ ॥

ವಾಗಿ ಆಶ್ರಯಿಸಿ ಮಾಡುತ್ತಿರುವನು. ವಿಷ್ಣುವು ಸ್ಥಿತಿ, ಪ್ರಳಯಗಳನ್ನು ಪ್ರತಿಯೊಂದರಲ್ಲಿಯೂ ನಾಲ್ಕು ಭಾಗವಾಗಿದ್ದುಕೊಂಡು ತಾನೊಬ್ಬನೇ ಮಾಡುತ್ತಿರುವನು.

೨೪-೨೫. ಹೇಗೆಂದರೆ ಸೃಷ್ಟಿಕಾಲದಲ್ಲಿ ರಜೋಗುಣನಾಗಿ ಒಂದಂಶದಿಂದ ಬ್ರಹ್ಮನಾಗಿಯೂ, ಮತ್ತೊಂದಂಶದಿಂದ ಮರೀಚಿಯೇ ಮುಂತಾದ ಪ್ರಜಾಪತಿಗಳಾಗಿಯೂ, ಮೂರನೆಯ ಅಂಶದಿಂದ ಕಾಲರೂಪನಾಗಿಯೂ, ನಾಲ್ಕನೆಯ ಅಂಶದಿಂದ ಸರ್ವಭೂತಸ್ವರೂಪನಾಗಿಯೂ ಸೃಷ್ಟಿಸಿದನು.

೨೬-೨೭ ಸ್ಥಿತಿಕಾಲದಲ್ಲಿ ಸತ್ವಗುಣವನ್ನಾಶ್ರಯಿಸಿ ಒಂದಂಶದಿಂದ ವಿಷ್ಣುವಾಗಿಯೂ ಎರಡನೆಯ ಅಂಶದಿಂದ ಮನ್ವಾದಿಗಳ ಸ್ವರೂಪನಾಗಿಯೂ ,ಮೂರನೆಯ ಅಂಶದಿಂದ ಕಾಲಸ್ವರೂಪನಾಗಿಯೂ, ನಾಲ್ಕನೆಯ-ಅಂಶದಿಂದ ಸರ್ವಭೂತಸ್ವರೂಪನಾಗಿಯೂ, ಪಾಲನೆ ಕಾರ್ಯವನ್ನು ಮಾಡುವನು.

ಅಗ್ನ್ಯಂತಕಾದಿ ರೂಪೇಣ ಭಾಗೇನಾನ್ಯೇನ ವರ್ತತೇ ।
ಕಾಲಸ್ವರೂಪೋ ಭಾಗೋಽನ್ಯಸ್ಸರ್ವಭೂತಾನಿ ಚಾಪರಃ ॥ ೨೯ ॥

ವಿನಾಶಂ ಕುರ್ವತಸ್ತಸ್ಯ ಚತುರ್ಧೈವಂ ಮಹಾತ್ಮನಃ ।
ವಿಭಾಗಕಲ್ಪನಾ ಬ್ರಹ್ಮನ್ಕಥ್ಯತೇ ಸಾರ್ವಕಾಲಿಕೀ ॥ ೩೦ ॥

ಬ್ರಹ್ಮಾ ದಕ್ಷಾದಯಃ ಕಾಲಸ್ತಥೈವಾಖಿಲ ಜಂತವಃ ।
ವಿಭೂತಯೋ ಹರೇರೇತಾ ಜಗತಸ್ಸೃಷ್ಟಿ ಹೇತವಃ ॥ ೩೧ ॥

ವಿಷ್ಣುರ್ಮನ್ವಾದಯಃ ಕಾಲಸ್ಸರ್ವಭೂತಾನಿ ಚ ದ್ವಿಜ ।
ಸ್ಥಿತೇರ್ನಿಮಿತ್ತಭೂತಸ್ಯ ವಿಷ್ಣೋರೇತಾ ವಿಭೂತಯಃ ॥ ೩೨ ॥

ರುದ್ರಃ ಕಾಲಾಂತಕಾದ್ಯಾಶ್ಚ ಸಮಸ್ತಾಶ್ಚೈವ ಜಂತವಃ ।
ಚತುರ್ಧಾ ಪ್ರಳಯಾಯೈತಾ ಜನಾರ್ದನ ವಿಭೂತಯಃ ॥ ೩೩ ॥

ಜಗದಾದೌ ತಥಾ ಮಧ್ಯೇ ಸೃಷ್ಟಿರಾಪ್ರಳಯಾದ್ದ್ವಿಜ ।
ಧಾತ್ರಾ ಮರೀಚಿಮಿಶ್ರೈಶ್ಚ ಕ್ರಿಯತೇ ಜಂತುಭಿಸ್ತಥಾ ॥ ೩೪ ॥

ಸ್ವರೂಪನಾಗಿಯೂ. ಮೂರನೆಯ ಅಂಶದಿಂದ ಕಾಲಸ್ವರೂಪನಾಗಿಯೂ, ನಾಲ್ಕನೆಯ ಅಂಶದಿಂದ ಸರ್ವಭೂತ ಸ್ವರೂಪನಾಗಿಯೂ ನಾಶವನ್ನು ಮಾಡುವನು.

೩೦-೩೩. ಬ್ರಹ್ಮಜ್ಞನಾದ ಮೈತ್ರೇಯನೇ ವಿಷ್ಣುವಿನ ಈ ವಿಭಾಗ ಕಲ್ಪನೆಯು ಎಲ್ಲ ಕಾಲಗಳಲ್ಲಿಯೂ ಇರುವುದು. ಬ್ರಹ್ಮ, ದಕ್ಷಾದಿಗಳು, ಕಾಲ, ಸರ್ವಭೂತ ಈ ನಾಲ್ಕು ಸೃಷ್ಟಿಗೆ ಕಾರಣವಾದ ವಿಷ್ಣುವಿನ ವಿಭೂತಿಗಳು. ವಿಷ್ಣು ಮನ್ವಾದಿಗಳು ಕಾಲಸರ್ವಭೂತಗಳು. ಈ ನಾಲ್ಕು ಸ್ಥಿತಿಕಾರಣವಾದ ವಿಷ್ಣುವಿನ ವಿಭೂತಿಗಳು. ರುದ್ರ, ಕಾಲ, ಯಮ ಮುಂತಾದವರು ಸಮಸ್ತ ಜಂತುಗಳು ಈ ನಾಲ್ಕು ಪ್ರಳಯ ಕಾರಣವಾದ ವಿಷ್ಣುವಿನ ವಿಭೂತಿಗಳು.

೩೪-೩೭. ಜಗತ್ತು ಸೃಷ್ಟಿಯಾಗಿ ಮಧ್ಯದಲ್ಲಿಯೂ ಪ್ರಳಯವಾಗುವ ಪರ್ಯಂತವಾಗಿಯೂ, ಬ್ರಹ್ಮನೂ ಮರೀಚಿ ಮುಂತಾದವರೂ ಪ್ರಾಣಿಗಳೂ ಸೃಷ್ಟಿಕಾರ್ಯವನ್ನು ಮಾಡುತ್ತಲೇ ಇರುವರು. ಬ್ರಹ್ಮನು ಆದಿಯಲ್ಲಿ ಸೃಷ್ಟಿಸುವನು. ಮರೀಚಿ ಮುಂತಾದವರೂ, ಪ್ರಾಣಿಗಳೂ, ಪ್ರತಿಕ್ಷಣದಲ್ಲಿಯೂ ಮಕ್ಕಳನ್ನು ಹುಟ್ಟಿಸುತ್ತಲೇ

ಬ್ರಹ್ಮಾ ಸೃಜತ್ಯಾದಿ ಕಾಲೇ ಮರೀಚಿಪ್ರಮುಖಾಸ್ತಥಾ ।
ಉತ್ಪಾದಯಂತ್ಯಪತ್ಯಾನಿ ಜಂತವಶ್ಚ ಪ್ರತಿಕ್ಷಣಂ ॥ ೩೫ ॥

ಕಾಲೇನ ನ ವಿನಾ ಬ್ರಹ್ಮಾ ಸೃಷ್ಟಿನಿಷ್ಪಾದಕೋ ದ್ವಿಜ ।
ನ ಪ್ರಜಾಪತಯಸ್ಸರ್ವೇ ನ ಚೈವಾಖಿಲಜಂತವಃ ॥ ೩೬ ॥

ಏವಮೇವ ವಿಭಾಗೋಽಯಂ ಸ್ಥಿತಾವಪ್ಯುಪದಿಶ್ಯತೇ ।
ಚತುರ್ಧಾ ದೇವದೇವಸ್ಯ ಮೈತ್ರೇಯ ಪ್ರಳಯೇ ತಥಾ ॥ ೩೭ ॥

ಯತ್ಕಿಂಚಿತ್ಸೃಜ್ಯತೇ ಯೇನ ಸತ್ತ್ವಜಾತೇನ ವೈ ದ್ವಿಜ ।
ತಸ್ಯ ಸೃಜ್ಯಸ್ಯ ಸಂಭೂತೌ ತತ್ಸರ್ವಂ ವೈ ಹರೇಸ್ತನುಃ ॥ ೩೮ ॥

ಹಂತಿ ಯಾವತ್ಕ್ವಚಿತ್ಕಿಂಚಿದ್ಭೂತಂ ಸ್ಥಾವರಜಂಗಮಂ ।
ಜನಾರ್ದನಸ್ಯ ತದ್ರೌದ್ರಂ ಮೈತ್ರೇಯಾಂತಕರಂ ವಪುಃ ॥ ೩೯ ॥

ಏವಮೇಷ ಜಗತ್ಸ್ರಷ್ಟಾ ಜಗತ್ಪಾತಾ ತಥಾ ಜಗತ್ ।
ಜಗದ್ಭಕ್ಷಯಿತಾ ದೇವಸ್ಸಮಸ್ತಸ್ಯ ಜನಾರ್ದನಃ ॥ ೪೦ ॥

ಇರುವರು. ಸೃಷ್ಟಿಕಾಲ ಸಂಬಂಧವಿಲ್ಲದೆ ಬ್ರಹ್ಮನೂ, ಪ್ರಜಾಪತಿಗಳೂ, ಪ್ರಾಣಿಗಳೂ ಸೃಷ್ಟಿಕಾರ್ಯವನ್ನು ಮಾಡಲಾರರು. ಈ ರೀತಿಯಲ್ಲಿಯೇ ಸ್ಥಿತಿ ಪ್ರಳಯಗಳಲ್ಲಿಯೂ ವಿಷ್ಣುವು ನಾಲ್ಕು ಅಂಶಗಳಿಂದ ಸ್ಥಿತಿ ಪ್ರಳಯಗಳನ್ನು ಮಾಡುತ್ತಿರುವನು.

೩೮–೪೦ ಮೈತ್ರೇಯನೇ ! ಪ್ರಪಂಚದಲ್ಲಿ ಪ್ರಾಣಿಮಾತ್ರದಿಂದ ಯಾವ ಶರೀರವು ಹುಟ್ಟಿದರೂ ಆ ಶರೀರವೆಲ್ಲವೂ ವಿಷ್ಣುವಿನ ಶರೀರವೆಂದು ತಿಳಿಯಬೇಕು. ಯಾವುದಾದರೊಂದು ಚರಾಚರ ಪ್ರಾಣಿಯಿಂದ ಮತ್ತೊಂದು ಪ್ರಾಣಿಯನ್ನು ನಾಶ ಮಾಡಿದರೆ ಆ ನಾಶಮಾಡತಕ್ಕ ಶರೀರವು ಜನಾರ್ದನನ ರುದ್ರರೂಪವಾದ ಶರೀರವೆಂದು ತಿಳಿಯಬೇಕು. ಈ ರೀತಿಯಲ್ಲಿ ಜನಾರ್ದನನು ತ್ರಿಮೂರ್ತಿರೂಪನಾಗಿ ಜಗತ್ತನ್ನು ಸೃಷ್ಟಿಸಿ ಪಾಲಿಸಿ ನಾಶಮಾಡುವುದರಿಂದ ತ್ರಿಮೂರ್ತಿಗಳು ವಿಷ್ಣುವಿನ ವಿಭೂತಿಯೆಂದು ತಿಳಿಯಬೇಕು.

ಸೃಷ್ಟಿಸ್ಥಿತ್ಯಂತಕಾಲೇಷು ತ್ರಿಧೈವಂ ಸಂಪ್ರವರ್ತತೇ ।
ಗುಣಪ್ರವೃತ್ತ್ಯಾ ಪರಮಂ ಪದಂ ತಸ್ಯಾ ಗುಣಂ ಮಹತ್ ॥ ೪೧ ॥

ತಚ್ಚ ಜ್ಞಾನಮಯಂ ವ್ಯಾಪಿ ಸ್ವಸಂವೇದ್ಯಮನೂಪಮಂ ।
ಚತುಷ್ಪ್ರಕಾರಂ ತದಪಿ ಸ್ವರೂಪಂ ಪರಮಾತ್ಮನಃ ॥ ೪೨ ॥

॥ ಮೈತ್ರೇಯ ಉವಾಚ ॥

ಚತುಷ್ಪ್ರಕಾರತಾಂ ತಸ್ಯ ಜ್ಞಾನಭೂತಸ್ಯ ವೈ ಮುನೇ ।
ತ್ವಮಾಚಕ್ಷ್ವ ಯಥಾನ್ಯಾಯಂ ಯದುಕ್ತಂ ಪರಮಂ ಪದಂ ॥ ೪೩ ॥

॥ ಶ್ರೀ ಪರಾಶರ ಉವಾಚ ॥

ಮೈತ್ರೇಯ ಕಾರಣಂ ಪ್ರೋಕ್ತಂ ಸಾಧನಂ ಸರ್ವವಸ್ತುಷು ।
ಸಾಧ್ಯಂ ಚ ವಸ್ತ್ವಭಿಮತಂ ಯತ್ಸಾಧಯಿತುಮಾತ್ಮನಃ ॥ ೪೪ ॥

---

೪೧. ಸತ್ವಾದಿಗುಣಗಳ ಚಲನೆಯಿಂದ ಸೃಷ್ಟ್ಯಾದಿ ಕಾರ್ಯಗಳಲ್ಲಿ ಆ ಪರಮಾತ್ಮನ ಸೃಷ್ಟಿ, ಸ್ಥಿತಿ, ಸಂಹಾರ ಶಕ್ತಿಗಳು ಕೆಲಸಮಾಡುವುವು. ಅವನ ಶ್ರೇಷ್ಠಸ್ಥಾನವು ಗುಣರಹಿತವಾದುದರಿಂದ ಪೂರ್ಣವಾದುದು. ಅಸಮಾನವಾದುದು.

೪೨. ಆ ಪರಮಪದವು ಜ್ಞಾನಸ್ವರೂಪವಾಗಿಯೂ, ಸರ್ವವ್ಯಾಪಿಯಾಗಿಯೂ (ಸ್ವಪ್ರಕಾಶವಾದುದಾಗಿ) ಜ್ಞಾನ ಗೋಚರವಾದುದಾಗಿ ಆ ಪರಮಾತ್ಮನ ಸ್ವರೂಪವೂ ನಾಲ್ಕು ಪ್ರಕಾರವಾದದಾಗಿರುವುದು.

೪೩. ಮೈತ್ರೇಯನು, 'ಪರಾಶರ ಮುನಿಗಳೇ, ಜ್ಞಾನಸ್ವರೂಪನೂ, ನಿರ್ಗುಣನೂ ಆದ ಪರಮಾತ್ಮನ ಸ್ವರೂಪವು ಭೇದವಿಲ್ಲದುದರಿಂದ ನಾಲ್ಕು ಪ್ರಾಕಾರವೆಂಬುದು, ಹೇಗೆ ನ್ಯಾಯಸಮ್ಮತವಾಗುವುದೆಂಬುದನ್ನು ಹೇಳಬೇಕು' ಎಂದು ಪ್ರಶ್ನೆ ಮಾಡಿದನು.

೪೪-೪೬. ಪರಾಶರರು ಮೈತ್ರೇಯನೇ ಕೇಳು:-ನಿರ್ಗುಣ ಬ್ರಹ್ಮಪ್ರಾಪ್ತಿಗೆ ಪೂರ್ವದಲ್ಲಿ ಮುಕ್ತಿಗೆ ಉಪಾಯರೂಪವಾದ ಮನೋವೃತ್ತಿ ಭೇದದಿಂದ ಜ್ಞಾನವು.

ಯೋಗಿನೋ ಮುಕ್ತಿಕಾಮಸ್ಯ ಪ್ರಾಣಾಯಾಮಾದಿಸಾಧನಂ ।
ಸಾಧ್ಯಂ ಚ ಪರಮಂಬ್ರಹ್ಮ ಪುನರ್ನಾವರ್ತತೇ ಯತಃ ॥ ೪೫ ॥

ಸಾಧನಾಲಂಬನಂ ಜ್ಞಾನಂ ಮುಕ್ತಯೇ ಯೋಗಿನಾಂ ಹಿ ಯತ್ ।
ಸ ಭೇದಃ ಪ್ರಥಮಸ್ತಸ್ಯ ಜ್ಞಾನಭೂತಸ್ಯ ವೈ ಮುನೇ ॥ ೪೬ ॥

ಯುಂಜತಃ ಕ್ಲೇಶಮುಕ್ತ್ಯರ್ಥಂ ಸಾಧ್ಯಂ ಯದ್ಬ್ರಹ್ಮಯೋಗಿನಃ ।
ತದಾಲಂಬನವಿಜ್ಞಾನಂ ದ್ವಿತೀಯೋಂಶೋ ಮಹಾಮುನೇ ॥ ೪೭ ॥

ಉಭಯೋಸ್ತ್ವವಿಭಾಗೇನ ಸಾಧ್ಯಸಾಧನಯೋರ್ಹಿ ಯತ್ ।
ವಿಜ್ಞಾನಮದ್ವೈತಮಯಂ ತದ್ಭಾಗೋನ್ಯೋ ಮಯೋದಿತಃ ॥ ೪೮ ॥

ನಾಲ್ಕು ಬಗೆಯಾಗಿರುವುದು. ಸಮಸ್ತ ವಸ್ತುಗಳಲ್ಲಿಯೂ ಸಾಧನ, ಸಾಧ್ಯ ಎಂಬೆರಡು ಭೇದಗಳಿರುವುವು. ಕಾರಣವಾದುದನ್ನು ಸಾಧನವೆಂದೂ, ಇಷ್ಟಾರ್ಥ ಸಿದ್ಧಿರೂಪ ವಾದ ಕಾರ್ಯವನ್ನು ಸಾಧ್ಯವೆಂದೂ ಹೇಳುವರು. ಪ್ರಕೃತದಲ್ಲಿ ಮುಕ್ತಿಯನ್ನು ಅಪೇಕ್ಷಿಸುವ ಯೋಗಿಗೆ ಪ್ರಾಣಾಯಾಮಾದಿಗಳು ಸಾಧನಗಳಾಗಿರುವವು. ನಿತ್ಯಸುಖ ಸ್ವರೂಪವಾದ ಪುನರ್ಜನ್ಮರಹಿತವಾದ ಪರಬ್ರಹ್ಮಪ್ರಾಪ್ತಿಯೇ ಸಾಧ್ಯವು. ಯೋಗಿ ಗಳಿಗೆ ಸಾಧನವನ್ನಾಶ್ರಯಿಸಿದ ದೇಹಾದ್ಯಾತ್ಮ ವಿವೇಕರೂಪವಾದ ತ್ವಂಪದಾರ್ಥ ಶುದ್ಧಿಯು ಮುಕ್ತಿಗೆ ಕಾರಣವಾದುದರಿಂದ ಜ್ಞಾನಸ್ವರೂಪನಾದ ಪರಮಾತ್ಮನಲ್ಲಿ ಇದೇ ಮೊದಲನೆಯ ಅವಸ್ಥಾಭೇದವು.

೪೭–೪೮. ಸಂಸಾರ ದುಃಖದ ಬಿಡುಗಡೆಗಾಗಿ ಯೋಗಾಭ್ಯಾಸವನ್ನು ಮಾಡು ತ್ತಿರುವ ಯೋಗಿಗಳಿಗೆಸಾಧ್ಯವಾದ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮ ವಿಷಯ ವಾದ ತತ್ಪದ ಲಕ್ಷ್ಯಾರ್ಥಜ್ಞಾನವೇ ಎರಡನೆಯ ಅಂಶವು. ಸಾಧ್ಯ, ಸಾಧನಗಳಾದ ತತ್ತ್ವಂ ಪದಾರ್ಥಗಳೆರಡಕ್ಕೂ ಭೇದವಿಲ್ಲವೆಂಬ ತಿಳಿವಳಿಕೆಯು ಮೂರನೆಯ ಅಂಶವು

ಜ್ಞಾನತ್ರಯಸ್ಯ ವೈ ತಸ್ಯ ವಿಶೇಷೋ ಯೋ ಮಹಾಮುನೇ ।
ತನ್ನಿರಾಕರಣದ್ವಾರದರ್ಶಿತಾತ್ಮ ಸ್ವರೂಪವತ್ ॥ ೪೯ ॥

ನಿರ್ವ್ಯಾಪಾರಮನಾಖ್ಯೇಯಂ ವ್ಯಾಪ್ತಿಮಾತ್ರಮನೂಪಂ ।
ಆತ್ಮಸಂಬೋಧವಿಷಯಂ ಸತ್ತಾಮಾತ್ರಮಲಕ್ಷಣಂ ॥ ೫೦ ॥

ಪ್ರಶಾಂತಮಭಯಂ ಶುದ್ಧಂ ದುರ್ವಿಭಾವ್ಯಮಸಂಶ್ರಯಂ ।
ವಿಷ್ಣೋರ್ಜ್ಞಾನಮಯಸ್ಯೋಕ್ತಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಂ ॥ ೫೧ ॥

ತತ್ರಾತ್ಮಜ್ಞಾನರೋಧೇನ ಯೋಗಿನೋ ಯಾಂತಿ ಯೇ ಲಯಂ ।
ಸಂಸಾರಕರ್ಷಣೋಪ್ತೌ ತೇ ಯಾಂತಿ ನಿರ್ಬೀಜತಾಂ ದ್ವಿಜ ॥ ೫೨ ॥

೪೯-೫೧. ಈ ತತ್ತ್ವಂ ಪದಾರ್ಥಗಳ ಮತ್ತು ಅಭೇದ ಜ್ಞಾನವೆಂಬ ಮೂರು ಬಗೆಯ ಜ್ಞಾನಗಳನ್ನು ಬಿಟ್ಟುಬಿಡುವುದರಿಂದ ಸ್ವಾನುಭವ ಗೋಚರವಾದ ಆತ್ಮ ಸ್ವರೂಪದಿಂದ ಯಾವ ವ್ಯಾಪಾರವೂ ಇಲ್ಲದ, ಯಾವ ಮಾತಿನಿಂದಲೂ ಹೇಳಲಾಗದ ಸರ್ವವ್ಯಾಪಿಯೂ, ಅಸದೃಶವೂ ಆದ ಸ್ವಪ್ರಕಾಶವೂ, ಸನ್ಮಾತ್ರವೂ ಮನೋವೃತ್ತಿ ಶೂನ್ಯವೂ ಆದ ರಾಗಾದಿದೋಷಗಳಿಲ್ಲದುದರಿಂದ ಭಯರಹಿತವಾದ ದ್ವಿತೀಯ ವಸ್ತು ವಿಲ್ಲದೆ ನಿರ್ವಿಷಯವಾದುದರಿಂದ ಪರಿಶುದ್ಧವಾದ ಮತ್ತು ಮನೋವೃತ್ತಿಯಿಂದ ತಿಳಿಯಲಾಗದ ಯಾವ ಆಶ್ರಯವೂ ಇಲ್ಲದ ಜ್ಞಾನಮಾತ್ರ ಸ್ವರೂಪನಾದ ವಿಷ್ಣುವಿನ ಜ್ಞಾನವೇ ಪರಬ್ರಹ್ಮ ವಿಷಯವಾದ ನಾಲ್ಕನೆಯ ಅಂಶವು.

೫೨-೫೪. ಈ ನಾಲ್ಕನೆಯ ಜ್ಞಾನಸ್ವರೂಪನಾದ ಬ್ರಹ್ಮನಲ್ಲಿ ಯಾವ ಯೋಗಿಗಳು ಅಜ್ಞಾನ ನಾಶದಿಂದ ಐಕ್ಯವನ್ನು ಹೊಂದುವರೋ ಅವರು ವಾಸನಾರಹಿತರಾಗಿ ಸಂಸಾರವೆಂಬ ಕ್ಷೇತ್ರದಲ್ಲಿ ಮತ್ತೆ ಹುಟ್ಟುವುದಿಲ್ಲ. ವಿಷ್ಣುವೆಂಬ ಪರಮ ಪದವು ಈ ರೀತಿಯಲ್ಲಿ ನಿರ್ಮಲವಾಗಿಯೂ, ಶಾಶ್ವತವಾಗಿ·ಸರ್ವವ್ಯಾಪಿಯಾಗಿ ನಾಶರಹಿತ, ವಾಗಿ ದೇಶ-ಕಾಲ-ವಸ್ತು ಪರಿಚ್ಛೇದ ಶೂನ್ಯವಾದುದಾಗಿರುವುದು. ಯೋಗಿಯಾದವನು ಪುಣ್ಯಪಾಪಗಳ ಸಂಬಂಧವಿಲ್ಲದೆ ದುಃಖ ನಾಶವಾದುದರಿಂದ ಪರಬ್ರಹ್ಮ ಸಾಕ್ಷಾತ್ಕಾರವಾದ ಮೇಲೆ ಪುನರ್ಜನ್ಮವನ್ನು ಪಡೆವುದಿಲ್ಲ.

ಏವಂ ಪ್ರಕಾರಮಮಲಂ ನಿತ್ಯಂ ವ್ಯಾಪಕಮಕ್ಷಯಂ ।
ಸಮಸ್ತಭೇದರಹಿತಂ ವಿಷ್ಣ್ವಾಖ್ಯಂ ಪರಮಂ ಪದಂ ॥ ೫೩ ॥
ತದ್ಬ್ರಹ್ಮ ಪರಮಂ ಯೋಗೀ ಪುನರ್ನಾವರ್ತತೇ ಯತಃ ।
ಅಪುಣ್ಯಪುಣ್ಯೋ ಪರಮಃ ಕ್ಷೀಣಕ್ಲೇಶೋತಿನಿರ್ಮಲಃ ॥ ೫೪ ॥
ದ್ವೇ ರೂಪೇ ಬ್ರಹ್ಮಣಸ್ತಸ್ಯ ಮೂರ್ತಂ ಚಾಮೂರ್ತಮೇವ ಚ ।
ಕ್ಷರಾಕ್ಷರ ಸ್ವರೂಪೇ ತೇ ಸರ್ವಭೂತೇಷ್ವವಸ್ಥಿತೇ ॥ ೫೫ ॥
ಅಕ್ಷರಂ ತತ್ಪರಂಬ್ರಹ್ಮ ಕ್ಷರಂ ಸರ್ವಮಿದಂ ಜಗತ್ ।
ಏಕದೇಶಸ್ಥಿತಸ್ಯಾಗ್ನೇರ್ಜ್ಯೋತ್ಸ್ನಾ ವಿಸ್ತಾರಿಣೀ ಯಥಾ ॥
ಪರಸ್ಯ ಬ್ರಹ್ಮಣಶ್ಶಕ್ತಿಸ್ತಥೇದಮಖಿಲಂ ಜಗತ್ ॥ ೫೬ ॥
ತತ್ರಾಪ್ಯಾಸನ್ನದೂರತ್ವಾದ್ಬಹುತ್ವಸ್ವಲ್ಪತಾಮಯಃ ।
ಜ್ಯೋತ್ಸ್ನಾ ಭೇದೋಽಸ್ತಿ ತಚ್ಛಕ್ತೇಸ್ತದ್ವನ್ಮೈತ್ರೇಯ ವಿದ್ಯತೇ ॥ ೫೭ ॥
ಬ್ರಹ್ಮವಿಷ್ಣುಶಿವಾಬ್ರಹ್ಮನ್ಪ್ರಧಾನಾ ಬ್ರಹ್ಮಶಕ್ತಯಃ ।
ತತಶ್ಚ ದೇವಾ ಮೈತ್ರೇಯ ನ್ಯೂನಾದಕ್ಷಾದಯಸ್ತಥಾ ॥ ೫೮ ॥

೫೫-೫೭. ಆ ಪರಬ್ರಹ್ಮನಿಗೆ ಮೂರ್ತ ಅಮೂರ್ತ ಎಂಬೆರಡು ರೂಪಗಳು. ಅವುಗಳನ್ನೇ ಕ್ಷರ, ಅಕ್ಷರ ಸ್ವರೂಪಗಳೆಂದು ಹೇಳುವರು. ಈ ಎರಡು ರೂಪಗಳು ಎಲ್ಲ ಪ್ರಾಣಿಗಳಲ್ಲಿಯೂ ಇರುವುವು. ಅಕ್ಷರವೆಂಬುದೇ ಪರಬ್ರಹ್ಮ ಸ್ವರೂಪವು. ಕ್ಷರ ವೆಂಬುದೇ ಜಗತ್ತಿನ ಸ್ವರೂಪವು. ಒಂದೆಡೆಯಿರುವ ಬೆಂಕಿಯ ಪ್ರಕಾಶವು ಹರಡು ವಂತೆ ಪರಬ್ರಹ್ಮ ಶಕ್ತಿಯು ವಿಸ್ತರಿಸಿ ಈ ಸಮಸ್ತ ಜಗದ್ರೂಪವಾಗಿರುವುದು. ಮೈತ್ರೇಯನೇ ಬೆಂಕಿಯ ಸಮೀಪದಲ್ಲಿ ಹೆಚ್ಚು ಪ್ರಕಾಶವೂ, ದೂರದಲ್ಲಿ ಕಡಿಮೆ ಯಾದ ಪ್ರಕಾಶವೂ ಇರುವಂತೆ ಪರಬ್ರಹ್ಮ ಶಕ್ತಿಗೂ ಬ್ರಹ್ಮನೇ ಮೊದಲಾಗಿ ಸ್ಥಾವರಾಂತವಾದ ಜೀವರುಗಳವರೆಗೆ ಅವಿದ್ಯಾವರಣವು ಹೆಚ್ಚು ಕಡಿಮೆಯಾಗಿ ರುವುದು. ಹೇಗೆಂದರೆ,

೫೮-೫೯. ಮೈತ್ರೇಯನೇ ಕೇಳು:--ಬ್ರಹ್ಮ, ವಿಷ್ಣು, ಶಿವರು ಪರಬ್ರಹ್ಮನ ಮುಖ್ಯ ಶಕ್ತಿಗಳು. ದೇವತೆಗಳ ಶಕ್ತಿಯು ಇವರಿಗಿಂತ ಕಡಿಮೆ. ದಕ್ಷಾದಿಗಳ ಶಕ್ತಿಯೂ ಹಾಗೆಯೇ ಕಡಮೆಯಾದವುಗಳು. ಮನುಷ್ಯರು, ಪಶು, ಪಕ್ಷಿ, ಹಾವು ಗಳು ಇವುಗಳ ಶಕ್ತಿಗಳು ಮತ್ತೂ ಕಡಮೆಯಾದವುಗಳು. ಮರಗಳು, ಬಳ್ಳಿಗಳು ಪೊದೆಗಳು ಇವುಗಳ ಶಕ್ತಿಯು ಅತ್ಯಂತ ಕಡಮೆಯಾದವು.

ತತೋ ಮನುಷ್ಯಾಃ ಪಶವೋ ಮೃಗಪಕ್ಷಿಸರೀಸೃಪಾಃ ।
ನ್ಯೂನಾನ್ಯೂನತರಾಶ್ಚೈವ ವೃಕ್ಷಗುಲ್ಮಾದಯಸ್ತತಃ ॥ ೫೯ ॥

ತದೇತದಕ್ಷರಂ ನಿತ್ಯಂ ಜಗನ್ಮುನಿವರಾಖಿಲಂ ।
ಆವಿರ್ಭಾವತಿರೋಭಾವಜನ್ಮನಾಶವಿಕಲ್ಪವತ್ ॥ ೬೦ ॥

ಸರ್ವಶಕ್ತಿಮಯೋ ವಿಷ್ಣುಸ್ಸ್ವರೂಪಂ ಬ್ರಹ್ಮಣೋ ಪರಂ ।
ಮೂರ್ತಂ ಯದ್ಯೋಗಿಭಿಃ ಪೂರ್ವಂ ಯೋಗಾರಂಭೇಷು ಚಿಂತ್ಯತೇ

ಸಾಲಂಬನೋ ಮಹಾಯೋಗಸ್ಸ ಬೀಜೋ ಯತ್ರ ಸಂಸ್ಥಿತಃ ।
ಮನಸ್ಯವ್ಯಾಹತೇ ಸಮ್ಯಗ್ಯುಂಜತಾಂ ಜಾಯತೇ ಮುನೇ ॥ ೬೨ ॥

ಸಪರಸ್ಸರ್ವಶಕ್ತೀನಾಂ ಬ್ರಹ್ಮಣಸ್ಸಮನಂತರಂ ।
ಮೂರ್ತಂಬ್ರಹ್ಮ ಮಹಾಭಾಗ ಸರ್ವಬ್ರಹ್ಮಮಯೋ ಹರಿಃ ॥ ೬೩ ॥

ಯತ್ರ ಸರ್ವಮಿದಂ ಪ್ರೋತಮೋತಂ ಚೈವಾಖಿಲಂ ಜಗತ್ ।
ತತೋ ಜಾತಂ ಜಗತ್ತಸ್ಮಿನ್ ಸ ಜಗಚ್ಚಾಖಿಲಂ ಮುನೇ ॥ ೬೪ ॥

---

೬೦. ಮೈತ್ರೇಯ ಮುನಿಶ್ರೇಷ್ಠನೇ, ಹುಟ್ಟಿ ನಾಶಹೊಂದುವ ಈ ಸಮಸ್ತ ಜಗತ್ತೂ ಉಪಾಧಿ ವಶದಿಂದ ತೋರಿ ತೋರದಂತಿರುವ ನಿತ್ಯನಾದ ಹೆಚ್ಚು ಕಡಮೆ ಯಾಗದ (ಅಕ್ಷರವೆಂಬ) ಪರಬ್ರಹ್ಮವಸ್ತು ಸ್ವರೂಪವಾದುದು

೬೧-೬೨. ವಿಷ್ಣುವು ಸರ್ವಶಕ್ತಿಸ್ವರೂಪನಾದುದರಿಂದಲೂ ಮೂರ್ತ ಪದಾರ್ಥಗಳೆಲ್ಲವೂ ಪರಬ್ರಹ್ಮನಿಗಿಂತ ಬೇರೆಯಾದುವುಗಳಲ್ಲವಾದುದರಿಂದಲೂ ಯೋಗಿಗಳು ಯೋಗಾಭ್ಯಾಸದ ಪ್ರಾರಂಭದಲ್ಲಿ ವಿಷ್ಣುವಿನ ಮೂರ್ತಿರೂಪವನ್ನು ಧ್ಯಾನಿಸುವರು. ಇದನ್ನು ಸಾಲಂಬನ ಯೋಗವೆಂದೂ ಮಂತ್ರಜಪಾದಿಗಳಿಂದ ಕೂಡದ ಸಬೀಜ ಸಮಾಧಿಯೆಂದೂ ಹೇಳುವರು. ಈ ರೀತಿಯಲ್ಲಿ ಅಭ್ಯಾಸಮಾಡಿದರೆ ಮನಸ್ಸು ಏಕಾಗ್ರತೆಯನ್ನು ಹೊಂದಿ ಸಮಾಧಿಗೆ ಸಹಾಯವಾಗುವುದು.

೬೩-೬೪. ಸರ್ವಶಕ್ತಿಯುತನಾದ ಬ್ರಹ್ಮನ ಶಕ್ತಿಗಳಲ್ಲಿ ಮೂರ್ತಿರೂಪನೂ ಸಮಸ್ತ ಬ್ರಹ್ಮಸ್ವರೂಪನೂ ಪರಬ್ರಹ್ಮನ ಸಮೀಪವರ್ತಿಯೂ ಆದುದರಿಂದ

ಕ್ಷರಾಕ್ಷರಮಯೋ ವಿಷ್ಣುರ್ಬಿಭರ್ತ್ಯಖಿಲಮೀಶ್ವರಃ ।
ಪುರುಷಾವ್ಯಾಕೃತಮಯಂ ಭೂಷಣಾಸ್ತ್ರಸ್ವರೂಪಧೃಕ್ ॥ ೬೫ ॥

॥ ಮೈತ್ರೇಯ ಉವಾಚ ॥

ಭೂಷಣಾಸ್ತ್ರಸ್ವರೂಪಸ್ಥಂ ಯದೇತದಖಿಲಂ ಜಗತ್ ।
ಬಿಭರ್ತಿ ಭಗವಾನ್ವಿಷ್ಣುಸ್ತನ್ಮಮಾಖ್ಯಾತುಮರ್ಹಸಿ ॥ ೬೬ ॥

॥ ಶ್ರೀ ಪರಾಶರ ಉವಾಚ ॥

ನಮಸ್ಕೃತ್ವಾ ಪ್ರಮೇಯಾಯ ವಿಷ್ಣವೇ ಪ್ರಭವಿಷ್ಣವೇ ।
ಕಥಯಾಮಿ ಯಥಾಖ್ಯಾತಂ ವಸಿಷ್ಠೇನ ಮಮಾಭವತ್ ॥ ೬೭ ॥

ಹರಿಯೇ ಶ್ರೇಷ್ಠನು. ಆ ಹರಿಯಲ್ಲಿ ಈ ಜಗತ್ತೆಲ್ಲವೂ ಹಾಸುಹೊಕ್ಕಾಗಿ ಸೇರಿಕೊಂಡಿರುವುವು. ಜಗತ್ತೆಲ್ಲವೂ ಅವನಿಂದಲೇ ಹುಟ್ಟಿತು. ಅವನಲ್ಲಿಯೇ ಇರುವುದು. ಆದುದರಿಂದ ಅವನೇ ಸಕಲ ಜಗತ್ತಾಗಿರುವನು.

೬೫. ಕ್ಷರಾಕ್ಷರ (ಕಾರ್ಯ ಕಾರಣ) ರೂಪನಾದ ವಿಷ್ಣುವು ಪುರುಷಪ್ರಕೃತಿ ರೂಪನಾಗಿ ಈ ಜಗತ್ತನ್ನು ಆಭರಣರೂಪವಾದ ಅಸ್ತ್ರಗಳ ರೂಪದಿಂದ ಧರಿಸಿರುವನು. ಎಂದನು.

೬೬. ಮೈತ್ರೇಯನು, " ಪರಾಶರರೇ ಈ ಸಮಸ್ತ ಜಗತ್ತೂ ವಿಷ್ಣುವಿಗೆ ಭೂಷಣಾಸ್ತ್ರ ಸ್ವರೂಪವಾಗಿರುವುದೆಂಬುದನ್ನು ನನಗೆ ವಿಸ್ತರಿಸಿ ಹೇಳಬೇಕು " ಎಂದನು.

೬೭. ಪರಾಶರನು ' ಮೈತ್ರೇಯನೇ ಒಂದಾವೃತ್ತಿ ಧ್ಯಾನ ಮಾಡಿದ ಮಾತ್ರಕ್ಕೆ ಸಮಸ್ತ ಪುರುಷಾರ್ಥಗಳನ್ನೂ ಕೊಡುವ ಯಾವ ಪ್ರಮಾಣಗಳಿಗೂ ಗೋಚರನಾಗದ ವಿಷ್ಣುವಿಗೆ ನಮಸ್ಕಾರ ಮಾಡಿ ವಸಿಷ್ಠನು ನನಗೆ ಹೇಳಿದ ರೀತಿಯಲ್ಲಿಯೇ ಹೇಳುವೆನು ' ಎಂದು ಹೇಳಲು ಆರಂಭಿಸಿದನು.

ಆತ್ಮಾನಮಸ್ಯ ಜಗತೋ ನಿರ್ಲೇಪಮಗುಣಾಲಯಂ ।
ಬಿಭರ್ತಿ ಕೌಸ್ತುಭಮಣಿ ಸ್ವರೂಪಂ ಭಗವಾನ್ಹರಿಃ ॥ ೬೮ ॥

ಶ್ರೀವತ್ಸಸಂಸ್ಥಾನಧರಮನಂತೇನ ಸಮಾಶ್ರಿತಂ ।
ಪ್ರಧಾನಂ ಬುದ್ಧಿರಪ್ಯಾಸ್ತೇ ಗದಾರೂಪೇಣ ಮಾಧವೇ ॥ ೬೯ ॥

ಭೂತಾದಿಮಿಂದ್ರಿಯಾದಿಂ ಚ ದ್ವಿಧಾಹಂಕಾರಮೀಶ್ವರಃ ।
ಬಿಭರ್ತಿ ಶಂಖರೂಪೇಣ ಶಾರ್ಙ್ಗರೂಪೇಣ ಚ ಸ್ಥಿತಂ ॥ ೭೦ ॥

ಚಲಸ್ವರೂಪಮತ್ಯಂತಂ ಜವೇನಾಂತರಿತಾನಿಲಂ ।
ಚಕ್ರಸ್ವರೂಪಂ ಚ ಮನೋ ಧತ್ತೇ ವಿಷ್ಣುಃ ಕರೇ ಸ್ಥಿತಂ ॥ ೭೧ ॥

ಪಂಚ ರೂಪಾ ತು ಯಾ ಮಾಲಾ ವೈಜಯಂತೀ ಗದಾಭೃತಃ ।
ಸಾಭೂತಹೇತುಸಂಘಾತೋ ಭೂತಮಾಲಾ ಚ ವೈ ದ್ವಿಜ ॥ ೭೨ ॥

ಯಾನೀಂದ್ರಿಯಾಣ್ಯಶೇಷಾಣಿ ಬುದ್ಧಿಕರ್ಮಾತ್ಮಕಾನಿ ವೈ ।
ಶರರೂಪಾಣ್ಯಶೇಷಾಣಿ ತಾನಿ ಧತ್ತೇ ಜನಾರ್ದನಃ ॥ ೭೩ ॥

೬೮-೭೦. ಮಹಾಮಹಿಮನಾದ ಹರಿಯು ಈ ಜಗತ್ತಿಗೆ ಆತ್ಮ (ಜೀವ) ಸ್ವರೂಪವಾದ ಪುಣ್ಯಪಾಪಗಳ ಸಂಬಂಧವಿಲ್ಲದ ಗುಣಗಳಿಗೆ ಆಶ್ರಯವಾಗದ ಕೌಸ್ತುಭಮಣಿ ಸ್ವರೂಪನಾಗಿರುವನು. ಅವನ ಎದೆಯಲ್ಲಿ ದಕ್ಷಿಣಾವರ್ತವಾದ ಶ್ರೀ ವತ್ಸವೆಂಬ ರೋಮರಾಜಿಯಿರುವುದು. ಇದೇ ಪ್ರಕೃತಿಯು. ಇದು ಅನಂತನೆಂಬ ಆದಿಶೇಷನನ್ನು ಆಧಾರ ಮಾಡಿಕೊಂಡಿರುವುದು. ಬುದ್ಧಿಯು ಗದಾಯುಧ ರೂಪ ವಾಗಿರುವುದು, ತಾಮಸಾಹಂಕಾರವನ್ನು ಶಂಖರೂಪದಿಂದಲೂ, ರಾಜಸಾಹಂಕಾರ ವನ್ನು ಶಾರ್ಙವೆಂಬ ಧನುಸ್ಸಿನ ರೂಪದಿಂದಲೂ ಧರಿಸಿರುವನು.

೭೧-೭೩ ಅತ್ಯಂತ ಚಂಚಲವಾದ ; ವೇಗದಲ್ಲಿ ಗಾಳಿಯನು ಮೀರಿಸಿದ ಸಾತ್ವಿಕಾಹಂಕಾರ ಸ್ವರೂಪವಾದ ಮನಸ್ಸನ್ನು ಚಕ್ರರೂಪದಿಂದ ಧರಿಸಿರುವನು. ಮುತ್ತು, ಮಾಣಿಕ್ಯ, ಮರಕತ, ಇಂದ್ರನೀಲ, ವಜ್ರ. ಎಂಬ ಐದು ರತ್ನಗಳ ಬಣ್ಣದಿಂದ ಕೂಡಿದ ವೈಜಯಂತಿಯೆಂಬ ಮಾಲೆಯನ್ನು ಪಂಚಭೂತಗಳ ಮತ್ತು

ಬಿಭರ್ತಿ ಯಶ್ಚಾಸಿವರಮಚ್ಯುತೋಽತ್ಯಂತನಿರ್ಮಲಂ ।
ವಿದ್ಯಾಮಯಂ ತು ಯಜ್ಜ್ಞಾನಮವಿದ್ಯಾ ಚರ್ಮ ಸಂಸ್ಥಿತಂ ॥ ೭೪ ॥

ಇತ್ಥಂ ಪುಮಾನ್ ಪ್ರಧಾನಂ ಚ ಬುದ್ಧ್ಯಹಂಕಾರಮೇವ ಚ ।
ಭೂತಾನಿ ಚ ಹೃಷೀಕೇಶೇ ಮನಸ್ಸರ್ವೇಂದ್ರಿಯಾಣಿ ಚ ॥
ವಿದ್ಯಾವಿದ್ಯೇ ಚ ಮೈತ್ರೇಯ ಸರ್ವಮೇತತ್ಸಮಾಶ್ರಿತಂ ॥ ೭೫ ॥

ಅಸ್ತ್ರಭೂಷಣ ಸಂಸ್ಥಾನಸ್ವರೂಪಂ ರೂಪವರ್ಜಿತಃ ।
ಬಿಭರ್ತಿ ಮಾಯಾರೂಪೋಽಸೌ ಶ್ರೇಯಸೇ ಪ್ರಾಣಿನಾಂ ಹರಿಃ ॥ ೭೬ ॥

ಸ ವಿಕಾರಂ ಪ್ರಧಾನಂ ಚ ಪುಮಾಂಸಂ ಚಾಖಿಲಂ ಜಗತ್ ।
ಬಿಭರ್ತಿ ಪುಂಡರೀಕಾಕ್ಷಸ್ತದೇವಂ ಪರಮೇಶ್ವರಃ ॥ ೭೭ ॥

ಯಾ ವಿದ್ಯಾ ಯಾ ತಥಾವಿದ್ಯಾ ಯತ್ಸದ್ಯಚ್ಚಾಸದವ್ಯಯೇ ।
ತತ್ಸರ್ವಂ ಸರ್ವಭೂತೇಶೇ ಮೈತ್ರೇಯ ಮಧುಸೂದನೇ ॥ ೭೮ ॥

ಪಂಚತನ್ಮಾತ್ರಗಳ ರೂಪದಿಂದ ಧರಿಸಿರುವನು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳನ್ನು ಬಾಣಗಳ ರೂಪದಿಂದ ಧರಿಸಿರುವನು. ಅವನು ಧರಿಸಿರುವ ನಿರ್ಮಲವಾದ ಕತ್ತಿಯು ಜ್ಞಾನಸ್ವರೂಪವಾದುದು. ಆ ಕತ್ತಿಯ ಚೀಲವೇ ಅವಿದ್ಯಾಸ್ವರೂಪವಾದುದು.

೭೫-೭೮. ಮೈತ್ರೇಯನೇ ಈ ರೀತಿಯಲ್ಲಿ ಸಮಸ್ತ ಇಂದ್ರಿಯಾಧಿಪತಿಯಾದ ವಿಷ್ಣುವಿನಲ್ಲಿ ಪುರುಷ, ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು, ಪಂಚ ಭೂತಗಳು, ದಶೇಂದ್ರಿಯಗಳು, ವಿದ್ಯೆ, ಅವಿದ್ಯೆ, ಇವುಗಳೆಲ್ಲವೂ ಆಶ್ರಯವನ್ನು ಪಡೆದಿರುವುವು. ಯಾವ ಆಕಾರವೂ ಇಲ್ಲದ ಮಾಯಾಸ್ವರೂಪನಾದ ವಿಷ್ಣುವು ಸಮಸ್ತ ಜೀವರುಗಳು ಶ್ರೇಯಸ್ಸಿಗಾಗಿ (ಪುರುಷಾರ್ಥಸಿದ್ಧಿಗಾಗಿ) ಅಸ್ತ್ರಭೂಷಣ ಸ್ವರೂಪನಾಗಿರುವನು. ಮತ್ತು ಪರಮೇಶ್ವರನಾದ ವಿಷ್ಣುವು ವಿಕಾರದಿಂದ ಕೂಡಿದವನಾಗಿ ಪ್ರಕೃತಿ ಪುರುಷ ರೂಪನಾಗಿಯೂ ಜಗದ್ರೂಪನಾಗಿಯೂ ಇರುವನು. ವಿದ್ಯಾ ವಿದ್ಯೆಗಳೂ ಸದ ಸತ್ಪದಾರ್ಥಗಳೂ ಸರ್ವಭೂತಾಧಿ ಪತಿಯಾದ ನಾಶರಹಿತನಾದ ಮಧುಸೂದನನಲ್ಲಿರುವುವು.

ಕಲಾ ಕಾಷ್ಠಾ ನಿಮೇಷಾದಿ ದಿನರ್ತ್ವಯನಹಾಯನೈಃ ।
ಕಾಲಸ್ವರೂಪೋ ಭಗವಾನಪರೋ ಹರಿರವ್ಯಯಃ ॥ ೭೯ ॥

ಭೂರ್ಲೋಕೋಽಥ ಭುವರ್ಲೋಕಸ್ಸ್ವರ್ಲೋಕೋ ಮುನಿಸತ್ತಮ ।
ಮಹರ್ಜನಸ್ತಪಸ್ಸತ್ಯಂ ಸಪ್ತ ಲೋಕಾ ಇಮೇ ಪ್ರಭುಃ ॥ ೮೦ ॥

ಲೋಕಾತ್ಮಮೂರ್ತಿಸ್ಸರ್ವೇಷಾಂ ಪೂರ್ವೇಷಾಮಪಿ ಪೂರ್ವಜಃ ।
ಆಧಾರಸ್ಸರ್ವಭೂತಾನಾಂ ಸ್ವಯಮೇವ ಹರಿಃ ಸ್ಥಿತಃ ॥ ೮೧ ॥

ದೇವಮಾನುಷಪಶ್ವಾದಿ ಸ್ವರೂಪೈರ್ಬಹುಭಿರ್ವಿಭುಃ ।
ಸ್ಥಿತಃ ಸರ್ವೇಶ್ವರೋಽನಂತೋ ಭೂತಮೂರ್ತಿರಮೂರ್ತಿಮಾನ್ ॥ ೮೨ ॥

ಋಚೋ ಯಜೂಂಷಿ ಸಾಮಾನಿ ತಥೈವಾಥರ್ವಣಾನಿ ಚ ।
ಇತಿಹಾಸೋಪವೇದಾಶ್ಚ ವೇದಾಂತೇಷು ತಥೋಕ್ತಯಃ ॥ ೮೩ ॥

ವೇದಾಂಗಾನಿ ಸಮಸ್ತಾನಿ ಮನ್ವಾದಿಗದಿತಾನಿ ಚ ।
ಶಾಸ್ತ್ರಾಣ್ಯಶೇಷಾಣ್ಯಾಖ್ಯಾನಾನ್ಯನುವಾಕಾಶ್ಚ ಯೇ ಕ್ವಚಿತ್ ॥ ೮೪ ॥

ಕಾವ್ಯಾಲಾಪಾಶ್ಚ ಯೇ ಕೇಚಿದ್ಗೀತಕಾನ್ಯಖಿಲಾನಿ ಚ ।
ಶಬ್ದಮೂರ್ತಿಧರಸ್ಯೈತದ್ವಪುರ್ವಿಷ್ಣೋರ್ಮಹಾತ್ಮನಃ ॥ ೮೫ ॥

೭೯–೮೧. ನಾಶರಹಿತನಾದ ವಿಷ್ಣುವು ಕಲಾ, ಕಾಷ್ಠಾ, ನಿಮೇಷ, ದಿನ, ಋತು, ವರ್ಷ ಮುಂತಾದ ಕಾಲಸ್ವರೂಪನಾಗಿಯೂ ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕವೆಂಬ ಸಪ್ತಲೋಕ ಸ್ವರೂಪನಾಗಿಯೂ ಇರುವನು. ಅಲ್ಲದೆ ಸಮಸ್ತ ಲೋಕ ಸ್ವರೂಪನಾಗಿ ಅನಾದಿಯಾಗಿ ಸಕಲ ಪ್ರಾಣಿಗಳಿಗೂ ಆಶ್ರಯನಾಗಿರುವನು.

೮೨–೮೫. ಸರ್ವವ್ಯಾಪಿಯಾದ ವಿಷ್ಣುವು ದೇವತೆಗಳು, ಮನುಷ್ಯರು, ಪಶುಗಳು ಮುಂತಾದ ಅನೇಕ ಪ್ರಾಣಿಗಳ ಸ್ವರೂಪನಾಗಿ ಕಲ್ಪಿತವಾದ ಮೂರ್ತಿ ರೂಪದಿಂದಲೂ ಸತ್ಯವಾದ ನಿರಾಕಾರ ಸ್ವರೂದಿಂದಲೂ ಇರುವನು. ಋಗ್ಯಜುಸ್ಸಾಮಾಥರ್ವ ವೇದಗಳೂ ಉಪವೇದಗಳೂ ವೇದಾಂತ ವಾಕ್ಯಗಳೂ ಇತಿಹಾಸಗಳೂ

ಯಾನಿ ಮೂರ್ತಾನ್ಯಮೂರ್ತಾನಿ ಯಾನ್ಯತ್ರಾನ್ಯತ್ರ ವಾ ಕ್ವಚಿತ್ ।
ಸಂತಿ ವೈವಸ್ತುಜಾತಾನಿ ತಾನಿ ಸರ್ವಾಣಿ ತದ್ವಪುಃ ॥ ೮೬ ॥

ಅಹಂ ಹರಿಸ್ಸರ್ವಮಿದಂ ಜನಾರ್ದನೋ
ನಾನ್ಯತ್ತತಃ ಕಾರಣಕಾರ್ಯಜಾತಂ ।
ಈದೃಙ್ಮನೋ ಯಸ್ಯ ನ ತಸ್ಯ ಭೂಯೋ
ಭವೋದ್ಭವಾದ್ವಂದ್ವಗದಾ ಭವಂತಿ ॥ ೮೭ ॥

ಇತ್ಯೇಷ ತೇಂಶಃ ಪ್ರಥಮಃ ಪುರಾಣಸ್ಯಾಸ್ಯ ವೈ ದ್ವಿಜ ।
ಯಥಾವತ್ಕಥಿತೋ ಯಸ್ಮಿಞ್ಛ್ರುತೇ ಪಾಪೈಃ ಪ್ರಮುಚ್ಯತೇ ॥ ೮೮ ॥

ವೇದಾಂತಗಳೂ ಮನ್ವಾದಿ ಧರ್ಮಶಾಸ್ತ್ರಗಳೂ ಪುರಾಣಗಳೂ ಕಲ್ಪ ಸೂತ್ರಗಳೂ ಕಾವ್ಯಗಳೂ ಗೀತಗಳೂ ಇವೆಲ್ಲವೂ ಶಬ್ದಮೂರ್ತಿಯನ್ನು ಧರಿಸಿದ ಮಹಾತ್ಮನಾದ ವಿಷ್ಣುವಿನ ಶರೀರಗಳಾಗಿರುವುವು.

೮೬. ಇಂದ್ರಿಯ ಗೋಚರವಾದ ಮೂರ್ತವಸ್ತುಗಳೂ ಇಂದ್ರಿಯ ಗೋಚರವಲ್ಲದ ಅಮೂರ್ತ ವಸ್ತುಗಳೂ ಇಲ್ಲಿದ್ದರೂ ಮತ್ತೆಲ್ಲಿದ್ದರೂ ಅವುಗಳೆಲ್ಲವೂ ವಿಷ್ಣುವಿನ ಶರೀರಗಳೇ ಆಗಿರುವುವು.

೮೭. ನಾನೂ ವಿಷ್ಣುವು, ಈ ಸಮಸ್ತ ಪ್ರಪಂಚವೂ ವಿಷ್ಣುವು, ಅವನನ್ನು ಬಿಟ್ಟು ಕಾರ್ಯಕಾರಣ ವಸ್ತುಗಳಾವುವೂ ಇರುವುದಿಲ್ಲ. ಇಂತಹ ತಿಳಿವಳಿಕೆಯು ಯಾರಿಗೆ ಬರುವುದೋ ಅವರಿಗೆ ಜನ್ಮದಿಂದುಂಟಾದ ಸುಖ ದುಃಖಾದಿ ದ್ವಂದ್ವರೋಗಗಳು ಬರುವುದಿಲ್ಲ.

೮೮. ಮೈತ್ರೇಯನೇ, ಈರೀತಿಯಲ್ಲಿ ಈ ವಿಷ್ಣುಪುರಾಣದ ಪ್ರಥಮಾಂಶವನ್ನು ಕ್ರಮವಾಗಿ ಹೇಳಿರುವೆನು. ಇದನ್ನು ಪಾರಾಯಣ ಮಾಡಿದವರಿಗೂ ಕೇಳಿ ಜ್ಞಾಪಕದಲ್ಲಿಟ್ಟುಕೊಂಡವರಿಗೂ ಸಮಸ್ತ ಪಾಪಗಳೂ ಪರಿಹಾರವಾಗುವುವು.

ಕಾರ್ತಿಕ್ಯಾಂ ಪುಷ್ಕರಸ್ನಾನೇ ದ್ವಾದಶಾಬ್ದೇ ತು ಯತ್ಫಲಂ ।
ತದಸ್ಯ ಶ್ರವಣೇ ಸರ್ವಂ ಮೈತ್ರೇಯಾಪ್ನೋತಿ ಮಾನವಃ ॥ ೮೯ ॥

ದೇವರ್ಷಿಪಿತೃಗಂಧರ್ವಯಕ್ಷಾದೀನಾಂ ಚ ಸಂಭವಂ ।
ಭವಂತಿ ಶೃಣ್ವತಃ ಪುಂಸೋ ದೇವಾದ್ಯಾ ವರದಾ ಮುನೇ ॥ ೯೦ ॥

ಇತಿ ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ ದ್ವಾವಿಂಶೋಽಧ್ಯಾಯಃ
ಇತಿ ಶ್ರೀ ಪರಾಶರಮುನಿವಿರಚಿತೇ ಶ್ರೀ ವಿಷ್ಣುಪುರಾಣೇ
ಪ್ರಥಮಾಂಶಃ ಸಮಾಪ್ತಃ

---

೮೯. ಈ ಪುರಾಣವನ್ನು ಒಂದಾವೃತ್ತಿ ಕೇಳಿದವರಿಗೆ ಪುಷ್ಕರ ಕ್ಷೇತ್ರದಲ್ಲಿ ಹನ್ನೆರಡು ವರ್ಷದ ಕಾರ್ತೀಕಮಾಸದಲ್ಲಿ ವಾಸಮಾಡಿದ ಸಂಪೂರ್ಣ ಫಲವು ಬರುವುದು.

೯೦. ಈ ಪುರಾಣವನ್ನು ಕೇಳಿದ ಮನುಜನು, ದೇವತೆಗಳು, ಮುನಿಗಳು, ಪಿತೃಗಳು, ಗಂಧರ್ವರು, ಯಕ್ಷಾದಿಗಳೇ ಮುಂತಾದ ಸುಖಾನುಭವ ಸಾಧನವಾದ ಜನ್ಮಗಳನ್ನು ಪಡೆವನು. ಅವನಿಗೆ ದೇವಾದಿಗಳು ಅನುಗ್ರಹವನ್ನು ಮಾಡಿ ಇಷ್ಟವಾದ ವರಗಳನ್ನು ಕೊಡುವರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪ್ರಥಮಾಂಶದಲ್ಲಿ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

ಪ್ರಥಮಾಂಶವು ಸಮಾಪ್ತವಾಯಿತು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ಪ್ರಥಮೋಽಧ್ಯಾಯಃ

॥ ಮೈತ್ರೇಯ ಉವಾಚ ॥

ಭಗವನ್ ಸಮ್ಯಗಾಖ್ಯಾತಂ ಮಮೈತದಖಿಲಂ ತ್ವಯಾ ।
ಜಗತಾಂ ಸರ್ಗಸಂಬಂಧಿ ಯತ್ಪೃಷ್ಟೋಽಸಿ ಮಯಾ ಗುರೋ ॥ ೧ ॥

ಯೋಽಯಮಂಶೋ ಜಗತ್ಸೃಷ್ಟಿಸಂಬಂಧೋ ಗದಿತಸ್ತ್ವಯಾ ।
ತತ್ರಾಹಂ ಶ್ರೋತುಮಿಚ್ಛಾಮಿ ಭೂಯೋಽಪಿ ಮುನಿಸತ್ತಮ ॥ ೨ ॥

ಪ್ರಿಯವ್ರತೋತ್ತಾನಪಾದಾ ಸುತೌ ಸ್ವಾಯಂಭುವಸ್ಯ ಯೌ ।
ತಯೋರುತ್ತಾನಪಾದಸ್ಯ ಧ್ರುವಃ ಪುತ್ರಸ್ತ್ವಯೋದಿತಃ ॥ ೩ ॥

ಪ್ರಿಯವ್ರತಸ್ಯ ನೈವೋಕ್ತಾ ಭವತಾ ದ್ವಿಜ ಸಂತತಿಃ ।
ತಾಮಹಂ ಶ್ರೋತುಮಿಚ್ಛಾಮಿ ಪ್ರಸನ್ನೋ ವಕ್ತುಮರ್ಹಸಿ ॥ ೪ ॥

ಮೊದಲನೆಯ ಅಧ್ಯಾಯವು.

೧-೪. ಗುರುಗಳೂ ಮಹಾಮಹಿಮರೂ ಆದ ಪರಾಶರರೇ, ಪ್ರಪಂಚದ ಸೃಷ್ಟಿಯ ವಿಷಯವಾಗಿ ನಾನು ಪ್ರಶ್ನೆ ಮಾಡಿದುದಕ್ಕೆ ವಿಸ್ತಾರವಾಗಿ ಉತ್ತರವನ್ನು ಹೇಳಿದಿರಿ. ಜಗತ್ತಿನ ಸೃಷ್ಟಿಯ ಸಂದರ್ಭದಲ್ಲಿ ಮತ್ತೆ ಕೆಲವನ್ನು ತಿಳಿಯಬೇಕೆಂದು ಅಪೇಕ್ಷೆಯಿರುವುದು. ಸ್ವಾಯಂಭುವ ಮನುವಿಗೆ ಪ್ರಿಯವ್ರತ, ಉತ್ತಾನಪಾದ

॥ ಪರಾಶರ ಉವಾಚ ॥

ಕರ್ದಮಸ್ಯಾತ್ಮಂ ಕನ್ಯಾಜಾಮುಪಯೇಮೇ ಪ್ರಿಯವ್ರತಃ ।
ಸಮ್ರಾಟ್ಕುಕ್ಷೀ ಚ ತತ್ಕನ್ಯೇ ದಶಪುತ್ರಾಸ್ತಥಾಪರೇ ॥ ೫ ॥

ಮಹಾಪ್ರಾಜ್ಞಾ ಮಹಾವೀರ್ಯಾ ವಿನೀತಾ ದಯಿತಾಃ ಪಿತುಃ ।
ಪ್ರಿಯವ್ರತಸುತಾಃ ಖ್ಯಾತಾಸ್ತೇಷಾಂ ನಾಮಾನಿ ಮೇ ಶೃಣು ॥ ೬ ॥

ಅಗ್ನೀಧ್ರಶ್ಚಾಗ್ನಿಬಾಹುಶ್ಚ ವಪುಷ್ಮಾನ್ದ್ಯುತಿಮಾನ್ ತಥಾ ।
ಮೇಧಾ ಮೇಧಾತಿಥಿರ್ಭವ್ಯಃ ಸವನಃ ಪುತ್ರ ಏವ ಚ ॥ ೭ ॥

ಜ್ಯೋತಿಷ್ಮಾನ್ ದಶಮಸ್ತೇಷಾಂ ಸತ್ಯನಾಮಾ ಸುತೋಽಭವತ್ ।
ಪ್ರಿಯವ್ರತಸ್ಯ ಪುತ್ರಾಣಾಂ ಪ್ರಖ್ಯಾತಾ ಬಲವೀರ್ಯತಃ ॥ ೮ ॥

ಮೇಧಾಗ್ನಿಬಾಹುಪುತ್ರಾಸ್ತು ತ್ರಯೋ ಯೋಗಪರಾಯಣಾಃ ।
ಜಾತಿಸ್ಮರಾ ಮಹಾಭಾಗಾ ನ ರಾಜ್ಯಾಯ ಮನೋ ದಧುಃ ॥ ೯ ॥

ಎಂಬಿಬ್ಬರು ಮಕ್ಕಳಲ್ಲಿ ಉತ್ತಾನಪಾದನ ಮಗನಾದ ಧ್ರುವನ ಸಂತತಿಯ ವೃತ್ತಾಂತವನ್ನು ಹೇಳಿದಿರಿ. ಪ್ರಿಯವ್ರತನ ವಂಶ ವಿಚಾರವನ್ನು ಹೇಳಲಿಲ್ಲ. ಅದನ್ನು ಕೇಳಬೇಕೆಂಬಾಸೆಯು ನನಗಿರುವುದು" ಎಂದು ಮೈತ್ರೇಯನು ಹೇಳಿದನು.

೫–೧೦. ಪರಾಶರನು ಹೇಳುವನು :–ಮೈತ್ರೇಯನೇ ಕೇಳು. ಪ್ರಿಯವ್ರತ ರಾಜನು ಕರ್ದಮಪ್ರಜಾಪತಿಯ ಮಗಳನ್ನು ಮದುವೆಯಾದನು. ಅವನಿಗೆ ಸಮ್ರಾಟ್, ಕುಕ್ಷಿ ಎಂಬಿಬ್ಬರು ಕನ್ಯೆಯರೂ, ಮಹಾಬುದ್ಧಿವಂತರೂ ಪರಾಕ್ರಮಿಗಳೂ ವಿನಯವಂತರೂ, ತಂದೆಗೆ ಪ್ರೀತಿಪಾತ್ರರೂ ಆದ ಅಗ್ನೀಧ್ರ, ಅಗ್ನಿಬಾಹು, ವಪುಷ್ಮಂತ, ದ್ಯುತಿಮಂತ, ಮೇಧ, ಮೇಧಾತಿಥಿ, ಭವ್ಯ, ಸವನ, ಪುತ್ರ, ಸತ್ಯ ಎಂಬ ಹತ್ತು ಜನ ಗಂಡುಮಕ್ಕಳೂ ಹುಟ್ಟಿದರು. ಇವರಲ್ಲಿ ಮೇಧ, ಅಗ್ನಿಬಾಹು ಪುತ್ರ ಎಂಬ ಮೂವರು ಯೋಗಾಭ್ಯಾಸದಲ್ಲಾಸಕ್ತರಾಗಿ ಜನ್ಮಾಂತರ ಜ್ಞಾನವುಳ್ಳ ಮಹಾಮಹಿಮೆಯುಳ್ಳವರಾಗಿದ್ದುದರಿಂದ ರಾಜರಾಗಿರಲು ಇಷ್ಟಪಡಲಿಲ್ಲ. ಅವರು ಯಾವಾಗಲೂ

ನಿರ್ಮಮಾಃ ಸರ್ವಕಾಲಂ ತು ಸಮಸ್ತಾರ್ಥೇಷು ವೈ ಮುನೇ ।
ಚಕ್ರುಃ ಕ್ರಿಯಾ ಯಥಾನ್ಯಾಯಮಫಲಾಕಾಂಕ್ಷಿಣೋ ಹಿ ತೇ ॥ ೧೦ ॥

ಪ್ರಿಯವ್ರತೋ ದದೌ ತೇಷಾಂ ಸಪ್ತಾನಾಂ ಮುನಿಸತ್ತಮ ।
ವಿಭಜ್ಯ ಸಪ್ತದ್ವೀಪಾನಿ ಮೈತ್ರೇಯ ಸುಮಹಾತ್ಮನಾಂ ॥ ೧೧ ॥

ಜಂಬೂದ್ವೀಪಂ ಮಹಾಭಾಗಃ ಸೋಽಗ್ನೀಧ್ರಾಯ ದದೌ ಪಿತಾ ।
ಮೇಧಾತಿಥೇಸ್ತಥಾ ಪ್ರಾದಾತ್ ಪ್ಲಕ್ಷದ್ವೀಪಮಥಾಪರಂ ॥ ೧೨ ॥

ಶಾಲ್ಮಲೇ ಚ ವಪುಷ್ಮಂತಂ ಮಹೇಂದ್ರಮಭಿಷಿಕ್ತವಾನ್ ।
ಜ್ಯೋತಿಷ್ಮಂತಂ ಕುಶದ್ವೀಪೇ ರಾಜಾನಂ ಕೃತವಾನ್ಪ್ರಭುಃ ॥ ೧೩ ॥

ದ್ಯುತಿಮಂತಂ ಚ ರಾಜಾನಂ ಕ್ರೌಂಚದ್ವೀಪೇ ಸಮಾದಿಶತ್ ।
ಶಾಕದ್ವೀಪೇಶ್ವರಂ ಚಾಪಿ ಭವ್ಯಂ ಚಕ್ರೇ ಪ್ರಿಯವ್ರತಃ ॥ ೧೪ ॥

ಪುಷ್ಕರಾಧಿಪತಿಂ ಚಕ್ರೇ ಸವನಂ ಚಾಪಿ ಸ ಪ್ರಭುಃ ।
ಜಂಬೂದ್ವೀಪೇಶ್ವರೋ ಯಸ್ತು ಆಗ್ನೀಧ್ರೋ ಮುನಿಸತ್ತಮ ॥ ೧೫ ॥

ಸಮಸ್ತ ಪದಾರ್ಥಗಳಲ್ಲಿಯೂ ಮಮತಾಶೂನ್ಯರಾಗಿ (ಅಭಿಮಾನವನ್ನು ಬಿಟ್ಟು, ಫಲಾಪೇಕ್ಷೆಯಿಲ್ಲದೆ ವೇದವಿಹಿತವಾದ ಸಮಸ್ತ ಕಾರ್ಯಗಳನ್ನೂ ಮಾಡುತ್ತಿದ್ದರು.

೧೧-೧೪. ಪ್ರಿಯವ್ರತನು ಮಿಕ್ಕ ಏಳು ಜನ ಮಕ್ಕಳಿಗೆ ತನ್ನ ರಾಜ್ಯವನ್ನು ಏಳು ದ್ವೀಪಗಳಾಗಿ ಭಾಗ ಮಾಡಿಕೊಟ್ಟನು. ಅವನು ಜಂಭೂದ್ವೀಪವನ್ನು ಅಗ್ನೀಧ್ರನಿಗೂ, ಪ್ಲಕ್ಷದ್ವೀಪವನ್ನು ಮೇಧಾತಿಥಿಗೂ, ಶಾಲ್ಮಲಿ ದ್ವೀಪವನ್ನು ವಪುಷ್ಮಂತನಿಗೂ, ಕುಶದ್ವೀಪವನ್ನು ಜ್ಯೋತಿಷ್ಮಂತನಿಗೂ, ಕ್ರೌಂಚದ್ವೀಪವನ್ನು ದ್ಯುತಿಮಂತನಿಗೂ, ಶಾಕದ್ವೀಪವನ್ನು ಭವ್ಯನಿಗೂ, ಪುಷ್ಕರದ್ವೀಪವನ್ನು ಸವನನಿಗೂ ಕೊಟ್ಟು ಪಟ್ಟಾಭಿಷೇಕ ಮಾಡಿದನು.

೧೫-೧೮. ಜಂಬೂ ದ್ವೀಪಾಧಿಪತಿಯಾದ ಅಗ್ನೀಧ್ರನಿಗೆ ಬ್ರಹ್ಮಮಾನಸ ಪುತ್ರರಾದ ನವಪ್ರಜಾಪತಿಗಳಿಗೆ ಸಮಾನರಾದ ಒಂಬತ್ತು ಜನ ಮಕ್ಕಳಿದ್ದರು.

ತಸ್ಯ ಪುತ್ರಾ ಬಭೂವುರ್ಹಿ ಪ್ರಜಾಪತಿಸಮಾ ನವ ॥ ೧೬ ॥

ನಾಭಿಃ ಕಿಂಪುರುಷಶ್ಚೈವ ಹರಿವರ್ಷ ಇಲಾವೃತಃ ।
ರಮ್ಯೋ ಹಿರಣ್ವಾನ್‌ಷಷ್ಟಸ್ತು ಕುರುರ್ಭದ್ರಾಶ್ವ ಏವ ಚ ॥ ೧೭ ॥

ಕೇತುಮಾಲಸ್ತಥಾ ಚಾನ್ಯಃ ಸಾಧುಚೇಷ್ಟೋ ನೃಪೋಽಭವತ್ ।
ಜಂಬೂದ್ವೀಪವಿಭಾಗಾಂಸ್ತು ತೇಷಾಂ ವಿಪ್ರ ನಿಶಾಮಯ ॥ ೧೮ ॥

ಪಿತ್ರಾ ದತ್ತಂ ಹಿಮಾಹ್ವಂ ತು ವರ್ಷಂ ನಾಭೇಸ್ತು ದಕ್ಷಿಣಂ ।
ಹೇಮಕೂಟಂ ತಥಾ ವರ್ಷಂ ದದೌ ಕಿಂಪುರುಷಾಯ ಸಃ ॥ ೧೯ ॥

ತೃತೀಯಂ ನೈಷಧಂ ವರ್ಷಂ ಹರಿವರ್ಷಾಯ ದತ್ತವಾನ್ ।
ಇಲಾವೃತಾಯ ಪ್ರದದೌ ಮೇರುರ್ಯತ್ರ ತು ಮಧ್ಯಗಃ ॥ ೨೦ ॥

ನೀಲಾಚಲಾಶ್ರಿತಂ ವರ್ಷಂ ರಮ್ಯಾಯ ಪ್ರದದೌ ಪಿತಾ ।
ಶ್ವೇತಂ ಯದುತ್ತರಂ ತಸ್ಮಾತ್ ಪಿತ್ರಾ ದತ್ತಂ ಹಿರಣ್ವತೇ ॥ ೨೧ ॥

ಯದುತ್ತರಂ ಶೃಂಗವತೋ ವರ್ಷಂ ತತ್ಕುರವೇ ದದೌ ।
ಮೇರೋಃ ಪೂರ್ವೇಣ ಯದ್ವರ್ಷಂ ಭದ್ರಾಶ್ವಾಯ ಪ್ರದತ್ತವಾನ್ ॥ ೨೨ ॥

ನಾಭಿ, ಕಿಂಪುರುಷ, ಹರಿವರ್ಷ, ಇಳಾವೃತ. ರಮ್ಯ, ಹಿರಣ್ವಂತ, ಕುರು, ಭದ್ರಾಶ್ವ ಕೇತುಮಾಲ ಎಂಬ ಆ ಮಕ್ಕಳಿಗೆ ಜಂಭೂದ್ವೀಪವನ್ನು ವಿಭಾಗಮಾಡಿಕೊಟ್ಟನು ಅವುಗಳಿಗೆ ವರ್ಷಗಳೆಂದು ಹೆಸರಿರುವುದು. ಅದನ್ನು ಭಾಗಮಾಡಿಕೊಟ್ಟ ರೀತಿಯನ್ನು ಮುಂದಿನ ಅಧ್ಯಾಯದಲ್ಲಿ ಹೇಳಿರುವುದು.

೧೯–೨೨. ತಂದೆಯಾದ ಅಗ್ನೀಧ್ರನು ನಾಭಿಗೆ ಹಿಮವತ್ಪರ್ವತದ ದಕ್ಷಿಣ ದಿಕ್ಕಿನ ವರ್ಷವನ್ನು ಕೊಟ್ಟನು. ಕಿಂಪುರುಷನಿಗೆ ಹಿಮವತ್ಪರ್ವತದ ಉತ್ತರದಿಕ್ಕಿನ ಹೇಮಕೂಟ ವರ್ಷವನ್ನೂ ಹರಿವರ್ಷನಿಗೆ ನೈಷಧವರ್ಷವನ್ನೂ, ಇಳಾವೃತನಿಗೆ ನಡುವೆ ಮೇರುಪರ್ವತವಿರುವ ಇಳಾವೃತವರ್ಷವನ್ನೂ; ರಮ್ಯನಿಗೆ ನೀಲಾಚಲ ವಿರುವ ರಮ್ಯವರ್ಷವನ್ನೂ, ಹಿರಣ್ವಂತನಿಗೆ ಶ್ವೇತವರ್ಷವನ್ನೂ, ಕುರುವಿಗೆ ಶ್ವೇತ ಪರ್ವತದ ಉತ್ತರ ದಿಕ್ಕಿಗಿರುವ ಕುರುವರ್ಷವನ್ನೂ, ಭದ್ರಾಶ್ವನಿಗೆ ಮೇರುಪರ್ವತದ

ಗಂಧಮಾದನವರ್ಷಂ ತು ಕೇತುಮಾಲಾಯ ದತ್ತವಾನ್ ।
ಇತ್ಯೇತಾನಿ ದದೌ ತೇಭ್ಯಃ ಪುತ್ರೇಭ್ಯಃ ಸ ನರೇಶ್ವರಃ ॥ ೨೩ ॥

ವರ್ಷೇಷ್ವೇತೇಷು ತಾನ್ಪುತ್ರಾನಭಿಷಿಚ್ಯ ಸ ಭೂಮಿಪಃ ।
ಸಾಲಗ್ರಾಮಂ ಮಹಾಪುಣ್ಯಂ ಮೈತ್ರೇಯ ತಪಸೇ ಯಯೌ ॥ ೨೪ ॥

ಯಾನಿ ಕಿಂಪುರುಷಾದೀನಿ ವರ್ಷಾಣ್ಯಷ್ಟೌ ಮಹಾಮುನೇ ।
ತೇಷಾಂ ಸ್ವಾಭಾವಿಕೀ ಸಿದ್ಧಿಃ ಸುಖ ಪ್ರಾಯಾಹ್ಯಯತ್ನತಃ ॥ ೨೫ ॥

ವಿಪರ್ಯಯೋ ನ ತೇಷ್ವಸ್ತಿ ಜರಾಮೃತ್ಯುಭಯಂ ನ ಚ ।
ಧರ್ಮಾಧರ್ಮೌ ನ ತೇಷ್ವಾಸ್ತಾಂ ನೋತ್ತಮಾಧಮಮಧ್ಯಮಾಃ ॥ ೨೬ ॥

ನ ತೇಷ್ವಸ್ತಿ ಯುಗಾವಸ್ಥಾ ದೇಹಾದಿಹ್ರಾಸಲಕ್ಷಣಾಃ ।
ಹಿಮಾಹ್ವಯಂ ತು ವೈ ವರ್ಷಂ ನಾಭೇರಾಸೀನ್ಮಹಾತ್ಮನಃ ॥ ೨೭ ॥

ಪೂರ್ವದಿಕ್ಕಿನ ಭದ್ರಾಶ್ವವರ್ಷವನ್ನೂ, ಕೇತುಮಾಲನಿಗೆ ಮೇರುವಿನ ಪಶ್ಚಿಮ ದಿಕ್ಕಿಗಿರುವ ಗಂಧಮಾದನ ವರ್ಷವನ್ನೂ ಕೊಟ್ಟನು.

೨೪. ಅಗ್ನೀಧ್ರರಾಜನು ಈ ಒಂಭತ್ತು ವರ್ಷಗಳಲ್ಲಿ ತನ್ನ ಒಂಭತ್ತು ಜನ ಮಕ್ಕಳಿಗೂ ಪಟ್ಟಾಭಿಷೇಕವನ್ನು ಮಾಡಿ ತಾನು ತಪಸ್ಸು ಮಾಡುವುದಕ್ಕಾಗಿ ಪುಲಹನ ಆಶ್ರಮವಾದ ಸಾಲಗ್ರಾಮ ಕ್ಷೇತ್ರಕ್ಕೆ ಹೊರಟುಹೋದದು.

೨೫–೨೭. ಮೈತ್ರೇಯನೇ! ಕಿಂಪುರುಷ ವರ್ಷವೇ ಮೊದಲಾದ ಎಂಟು ವರ್ಷಗಳಲ್ಲಿ ವಾಸಮಾಡುವ ಜನರಿಗೆ ಸಮಸ್ತ ಇಷ್ಟಾರ್ಥಗಳೂ ಸ್ವಾಭಾವಿಕವಾಗಿ ಉಂಟಾಗುವುವು. ಪ್ರಯತ್ನವಿಲ್ಲದೆ ಸುಖವು ಲಭಿಸುವುದು. ಅಲ್ಲಿ ಮುಪ್ಪು ಅಕಾಲಮರಣ ಮುಂತಾದ ದುಃಖಾದಿಗಳಿಲ್ಲ. ಧರ್ಮಾಧರ್ಮಗಳಾಗಲಿ ಉತ್ತಮಾಧಮ ಮಧ್ಯಮವೆಂಬ ಭೇದಗಳಾಗಲಿ ದೇಹಾದಿಗಳು ಕುಗ್ಗಿಹೋಗುವ ಯುಗಾದಿಗಳ ಅವಸ್ಥೆಯಾಗಲಿ ಅಲ್ಲಿಲ್ಲ.

ತಸ್ಯರ್ಷಭೋ ಭವತ್ಪುತ್ರೋ ಮೇರುದೇವ್ಯಾಂ ಮಹಾದ್ಯುತಿಃ ।
ಋಷಭಾದ್ಭರತೋ ಜಜ್ಞೇ ಜ್ಯೇಷ್ಠಃ ಪುತ್ರಶತಸ್ಯ ಸಃ ॥ ೨೮ ॥

ಕೃತ್ವಾ ರಾಜ್ಯಂ ಸಧರ್ಮೇಣ ತಥೇಷ್ಟ್ವಾ ವಿವಿಧಾನ್ಮಖಾನ್ ।
ಅಭಿಷಿಚ್ಯ ಸುತಂ ಜ್ಯೇಷ್ಠಂ ಭರತಂ ಪೃಥಿವೀಪತಿಃ ॥ ೨೯ ॥

ತಪಸೇ ಸ ಮಹಾಭಾಗಃ ಪುಲಸ್ತ್ಯಸ್ಯಾಶ್ರಮಂ ಯಯೌ ।
ವಾನಪ್ರಸ್ಥವಿಧಾನೇನ ತತ್ರಾಪಿ ಕೃತನಿಶ್ಚಯಃ ॥ ೩೦ ॥

ತಪಸ್ತೇಪೇ ಯಥಾನ್ಯಾಯ್ಯಂ ಇಯಾಜಚ ಮಹೀಪತಿಃ ।
ತಪಸಾಕರ್ಷಿತೋಽತ್ಯರ್ಥಂ ಕೃಶೋ ಧಮನಿಸಂತತಃ ॥ ೩೧ ॥

ನಗ್ನೋ ವೀಟಂ ಮುಖೇ ಕೃತ್ವಾ ವೀರಾಧ್ವಾನ ಮಿತೋ ಗತಃ ।
ತತಶ್ಚ ಭಾರತಂ ವರ್ಷಮೇತಲ್ಲೋಕೇಷು ಗೀಯತೇ ॥ ೩೨ ॥

ಭರತಾಯ ಯತಃ ಪಿತ್ರಾ ದತ್ತಂ ಪ್ರಾತಿಷ್ಠತಾ ವನಂ ।
ಸುಮತಿರ್ಭರತಸ್ಯಾಭೂತ್ಪುತ್ರಃ ಪರಮಧಾರ್ಮಿಕಃ ॥ ೩೩ ॥

೨೮–೩೦. ಹಿಮವದ್ವರ್ಷಕ್ಕೆ ಅಧಿಪತಿಯಾದ ನಾಭಿರಾಜನ ಹೆಂಡತಿಯಾದ ಮೇರುದೇವಿಯಲ್ಲಿ ಮಹಾ ತೇಜಸ್ವಿಯಾದ ಋಷಭನೆಂಬ ಪುತ್ರನು ಹುಟ್ಟಿದನು. ಋಷಭನಿಗೆ ಹುಟ್ಟಿದ ನೂರು ಮಕ್ಕಳಲ್ಲಿ ಭರತನೆಂಬವನೇ ಹಿರಿಯ ಮಗನು. ಆ ಋಷಭರಾಜನು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡಿ ಅನೇಕ ಯಜ್ಞಗಳನ್ನು ಮಾಡಿ ಶೂರನಾದ ಭರತನಿಗೆ ಪಟ್ಟಾಭಿಷೇಕವನ್ನು ಮಾಡಿ ತಾನು ತಪಸ್ಸನ್ನು ಮಾಡಲು ಪುಲಹನ ಆಶ್ರಮವಾದ ಸಾಲಗ್ರಾಮ ಕ್ಷೇತ್ರಕ್ಕೆ ಹೋದನು.

೩೧–೩೨. ಋಷಭರಾಜನು ವಾನಪ್ರಸ್ಥಾಶ್ರಮ ವಿಧಿಗನುಸಾರವಾಗಿ ತಪಸ್ಸು ಮಾಡುತ್ತ ಅನೇಕ ಯಜ್ಞಗಳನ್ನು ಮಾಡಿದನು. ತಪಸ್ಸಿನಿಂದ ವಿಶೇಷವಾಗಿ ಕೃಶನಾದ ಆ ರಾಜನು ಬೆತ್ತಲೆಯಾಗಿ ನಿಂತು ಬಾಯಿಯಲ್ಲಿ ಕಲ್ಲಿನ ಚಂಡನ್ನಿಟ್ಟು ಕೊಂಡು ವೀರಸ್ವರ್ಗವನ್ನು ಪಡೆದನು.

೩೩–೩೬. ತಂದೆಯು ಭರತನಿಗೆ ಕೊಟ್ಟುದರಿಂದ ಅಲ್ಲಿಂದೀಚೆಗೆ ಆ ದೇಶಕ್ಕೆ ಭಾರತವರ್ಷವೆಂಬ ಹೆಸರು ಬಂದಿತು. ಭರತನು ಸುಮತಿಯೆಂಬ ತನ್ನ ಮಗನಿಗೆ

ಕೃತ್ವಾ ಸಮ್ಯಗ್ದದೌ ತಸ್ಮೈ ರಾಜ್ಯಮಿಷ್ಟಮುಖಃ ಪಿತಾ ।
ಪುತ್ರಸಂಕ್ರಾಮಿತಶ್ರೀಸ್ತು ಭರತಃ ಸ ಮಹೀಪತಿಃ ॥ ೩೪ ॥

ಯೋಗಾಭ್ಯಾಸರತಃ ಪ್ರಾಣಾನ್ ಸಾಲಗ್ರಾಮೇಽತ್ಯಜನ್ ಮುನೇ ।
ಅಜಾಯತ ಚ ವಿಪ್ರೋಽಸೌ ಯೋಗಿನಾಂ ಪ್ರವರೇ ಕುಲೇ ॥ ೩೫ ॥

ಮೈತ್ರೇಯ ತಸ್ಯ ಚರಿತಂ ಕಥಯಿಷ್ಯಾಮಿ ತೇ ಪುನಃ ।
ಸುಮತೇಸ್ತೇಜಸಸ್ತಸ್ಮಾದಿಂದ್ರದ್ಯುಮ್ನೋ ವ್ಯಜಾಯತ ॥ ೩೬ ॥

ಪರಮೇಷ್ಠೀ ತತಸ್ತಸ್ಮಾತ್ಪ್ರತಿಹಾರಸ್ತದನ್ವಯಃ ।
ಪ್ರತಿಹರ್ತೇತಿ ವಿಖ್ಯಾತ ಉತ್ಪನ್ನಸ್ತಸ್ಯ ಚಾತ್ಮಜಃ ॥ ೩೭ ॥

ಭವಸ್ತಸ್ಮಾದಥೋ ಗೀತಿಃ ಪ್ರಸ್ತಾವಸ್ತತ್ಸುತೋ ವಿಭುಃ ।
ಪೃಥುಸ್ತತಸ್ತತೋ ನಕ್ತೋ ನಕ್ತಸ್ಯಾಪಿ ಗಯಃ ಸುತಃ ॥ ೩೮ ॥

ನರೋ ಗಯಸ್ಯ ತನಯಃ ತಸ್ಯಪುತ್ರೋ ವಿರೋಹಣಃ ।
ತಸ್ಯ ಪುತ್ರೋ ಮಹಾವೀರ್ಯೋ ಧೀಮಾಂಸ್ತಸ್ಮಾದಜಾಯತ ॥ ೩೯ ॥

ಮಹಾಂತೋ ಹಿತತಶ್ಚಾಭೂತ್ ಭೌವನಸ್ತಸ್ಯಚಾತ್ಮಜಃ ।
ತ್ವಷ್ಟಾ ತ್ವಷ್ಟುಶ್ಚ ವಿರಜಾ ರಜಸ್ತಸ್ಯಾಪ್ಯಭೂತ್ಸುತಃ ॥ ೪೦ ॥

ರಾಜ್ಯವನ್ನು ಕೊಟ್ಟು ಯೋಗಾಭ್ಯಾಸದಲ್ಲಾಸಕ್ತನಾಗಿ ಸಾಲಗ್ರಾಮ ಕ್ಷೇತ್ರದಲ್ಲಿಯೇ ಶರೀರ ತ್ಯಾಗವಮಾಡಿದನು. ಮೈತ್ರೇಯನೇ ಈ ಭರತನು ಶ್ರೇಷ್ಠವಾದ ಯೋಗಿಗಳ ವಂಶದಲ್ಲಿ ಹುಟ್ಟಿದವನು. ಅವನ ಚರಿತ್ರೆಯನ್ನು ಮುಂದೆ ವಿಸ್ತಾರವಾಗಿ ಹೇಳುವೆನು.

೩೭–೪೨. ಸುಮತಿಗೆ ಇಂದ್ರದ್ಯುಮ್ನನೆಂಬ ಮಗನಾದನು. ಇಂದ್ರದ್ಯುಮ್ನನಿಗೆ ಪರಮೇಷ್ಠಿಯೂ ಪರಮೇಷ್ಠಿಗೆ ಪ್ರತಿಹಾರನೂ ಪ್ರತಿಹಾರನಿಗೆ ಪ್ರತಿಹರ್ತೃವೂ ಪ್ರತಿಹರ್ತೃವಿಗೆ ಭವನನೂ ಅವನಿಗೆ ಗೀತಿಯೂ ಇವನಿಗೆ ಪ್ರಸ್ತಾವನೂ ಪ್ರಸ್ತಾವನಿಗೆ ಪೃಥುವೂ ಪೃಥುವಿಗೆ ನಕ್ತನೂ ನಕ್ತನಿಗೆ ಗಯನೂ ಗಯನಿಗೆ ನರನೂ ನರನಿಗೆ ವಿರೋಹಣನೂ ವಿರೋಹಣನಿಗೆ ಮಹಾವೀರ್ಯನೂ ಮಹಾವೀರ್ಯನಿಗೆ ಧೀಮಂ

ಶತಜಿದ್ರಜಸಸ್ತಸ್ಯ ಜಜ್ಞೇ ಪುತ್ರಶತಂ ಮುನೇ ।
ವಿಷ್ವಗ್ಜ್ಯೋತಿಃ ಪ್ರಧಾನಾಸ್ತೇ ಯೈರಿಮಾವರ್ಧಿತಾಃ ಪ್ರಜಾಃ ॥ ೪೧ ॥

ತೈರಿದಂ ಭಾರತಂ ವರ್ಷಂ ನವಭೇದಮಲಂಕೃತಂ ।
ತೇಷಾಂ ವಂಶಪ್ರಸೂತೈಶ್ಚ ಭುಕ್ತೇಯಂ ಭಾರತೀ ಪುರಾ ॥ ೪೨ ॥

ಕೃತತ್ರೇತಾದಿಸರ್ಗೇಣ ಯುಗಾಖ್ಯಾ ಹ್ಯೇಕಸಪ್ತತಿಃ ॥ ೪೩ ॥

ಏಷ ಸ್ವಾಯಂಭುವಃ ಸರ್ಗೋ ಯೇನೇದಂ ಪೂರಿತಂ ಜಗತ್ ।
ವಾರಾಹೇ ತು ಮುನೇ ಕಲ್ಪೇ ಪೂರ್ವಮನ್ವಂತರಾಧಿಪಃ ॥ ೪೪ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ಪ್ರಥಮೋಽಧ್ಯಾಯಃ

ತನೂ ಧೀಮಂತನಿಗೆ ಮಹಂತನೂ ಮಹಂತನಿಗೆ ಭಾವನನೂ, ಭಾವನನಿಗೆ ತ್ವಷ್ಟೃವೂ ತ್ವಷ್ಟೃವಿಗೆ ವಿರಜನೂ ವಿರಜನಿಗೆ ರಜನೂ ರಜನಿಗೆ ಶತಜಿತುವೂ ಶತಜಿತುವಿಗೆ ವಿಷ್ವಗ್ಜ್ಯೋತಿಯೇ ಮುಂತಾದ ನೂರು ಜನ ಮಕ್ಕಳೂ ಹುಟ್ಟಿದರು. ಇವರಿಂದಲೇ ಈ ಪ್ರಜೆಗಳೆಲ್ಲ ಅಭಿವೃದ್ಧಿಯನ್ನು ಹೊಂದಿದರು. ಇವರ ವಂಶದಿಂದಲೇ ಈ ಭರತ ವರ್ಷವು ಒಂಭತ್ತು ಭಾಗಗಳಾದುವು. ಈ ಒಂಭತ್ತು ಭೇದಗಳನ್ನು ಮೂರನೆಯ ಅಧ್ಯಾಯದಲ್ಲಿ ಹೇಳಿದೆ.

೪೩–೪೪. ಈ ರಾಜರ ವಂಶದವರೇ ಭಾರತವರ್ಷದ ಭೂಭಾಗವನ್ನು ಕೃತ, ತ್ರೇತಾದಿ ಎಪ್ಪತ್ತೊಂದು ಚತುರ್ಯುಗಗಳವರೆಗೆ ಅನುಭವಿಸಿದರು. ವರಾಹ ಕಲ್ಪದಲ್ಲಿ ಈ ಸ್ವಾಯಂಭುವ ಮನುವಿನ ವಂಶದಿಂದಲೇ ಈ ಜಗತ್ತು ತುಂಬಿ ಹೋಯಿತು. ಈ ಸ್ವಾಯಂಭುವ ಮನುವೇ ಹಿಂದಿನ ಮನ್ವಂತರದ ಅಧಿಪತಿಯು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ದ್ವಿತಿಯಾಂಶೇ

ದ್ವಿತೀಯೋಽಧ್ಯಾಯಃ

॥ ಮೈತ್ರೇಯ ಉವಾಚ ॥

ಕಥಿತೋ ಭವತಾ ಬ್ರಹ್ಮನ್ ಸರ್ಗಃ ಸ್ವಾಯಂಭುವಸ್ತು ಮೇ ।
ಶ್ರೋತುಮಿಚ್ಛಾಮ್ಯಹಂ ತ್ವತ್ತಃ ಸಕಲಂ ಮಂಡಲಂ ಭುವಃ ॥ ೧ ॥

ಯಾವಂತಃ ಸಾಗರಾದ್ವೀಪಾಸ್ತಥಾ ವರ್ಷಾಣಿ ಪರ್ವತಾಃ ।
ವನಾನಿ ಸರಿತಃ ಪುರ್ಯೋ ದೇವಾದೀನಾಂ ತಥಾ ಮುನೇ ॥ ೨ ॥

ಯತ್ಪ್ರಮಾಣಮಿದಂ ಸರ್ವಂ ಯದಾಧಾರಂ ಯದಾತ್ಮಕಂ ।
ಸಂಸ್ಥಾನಮಸ್ಯ ಚ ಮುನೇ ಯಥಾವದ್ವಕ್ತುಮರ್ಹಸಿ ॥ ೩ ॥

ಎರಡನೆಯ ಅಧ್ಯಾಯವು.

೧-೩ ಮೈತ್ರೇಯನು 'ಪರಾಶರ ಮುನಿಗಳೇ! ಸ್ವಾಯಂಭುವ ಮನುವಿನ ವಂಶದ ಪ್ರಿಯವ್ರತಾದಿ ರಾಜರುಗಳ ಸೃಷ್ಟಿಕ್ರಮವನ್ನು ಹೇಳಿದಿರಿ. ಸಮಸ್ತ ಸಾಗರಗಳು ಮತ್ತು ದ್ವೀಪಗಳಿಂದ ಕೂಡಿದ ಸಮಸ್ತ ಭೂಮಂಡಲದ ವಿಷಯವನ್ನು ತಿಳಿಯಬೇಕೆಂಬಾಸೆಯು ಇರುವುದು. ಈ ಭೂಮಂಡಲವು ಎಷ್ಟು ಅಳತೆಯುಳ್ಳದು? ಇದಕ್ಕೆ ಆಧಾರವೇನು ? ಇದು ಯಾವ ಸ್ವರೂಪದಿಂದಿರುವುದು ? ವನಗಳು ಪರ್ವತಗಳು, ಪಟ್ಟಣಗಳು, ದೇವತಾದಿಗಳು ಎಲ್ಲೆಲ್ಲಿ ಇರುವುವು ಇವುಗಳನ್ನೆಲ್ಲ ನನಗೆ ಹೇಳಬೇಕು' ಎಂದು ಪ್ರಶ್ನೆ ಮಾಡಿದನು.

॥ ಪರಾಶರ ಉವಾಚ ॥

ಮೈತ್ರೇಯ ಶ್ರೂಯತಾಮೇತತ್ಸಂಕ್ಷೇಪಾದ್ಗದತೋ ಮಮ ।
ನಾಸ್ಯವರ್ಷಶತೇನಾಪಿ ವಕ್ತುಂ ಶಕ್ಯೋಽತಿವಿಸ್ತರಂ ॥ ೪ ॥

ಜಂಬೂಪ್ಲಕ್ಷಾದಯೋ ದ್ವೀಪಾಃ ಶಾಲ್ಮಲಿಶ್ಚಾಪರೋ ದ್ವಿಜ ।
ಕುಶಃ ಕ್ರೌಂಚಸ್ತಥಾ ಶಾಕಃ ಪುಷ್ಕರಶ್ಚೈವ ಸಪ್ತಮಃ ॥ ೫ ॥

ಏತೇ ದ್ವೀಪಾಃ ಸಮುದ್ರೈಸ್ತು ಸಪ್ತ ಸಪ್ತಭಿರಾವೃತಾಃ ।
ಲವಣೇಕ್ಷುಸುರಾಸರ್ಪಿರ್ದಧಿದುಗ್ಧಜಲೈಃ ಸಮಂ ॥ ೬ ॥

ಜಂಬೂದ್ವೀಪಸ್ಸಮಸ್ತಾನಾಂ ಏತೇಷಾಂ ಮಧ್ಯಸಂಸ್ಥಿತಃ ।
ತಸ್ಯಾಪಿ ಮೇರುಃ ಮೈತ್ರೇಯ ಮಧ್ಯೇ ಕನಕಪರ್ವತಃ ॥ ೭ ॥

ಚತುರಾಶೀತಿಸಾಹಸ್ರೋ ಯೋಜನೈರಸ್ಯ ಚೋಚ್ಛ್ರಯಃ ।
ಪ್ರವಿಷ್ಟಃ ಷೋಡಶಾಧಸ್ತಾತ್ ದ್ವಾತ್ರಿಂಶನ್ಮೂರ್ಧ್ನಿ ವಿಸ್ತೃತಃ ॥ ೮ ॥

೪–೮. ಪರಾಶರರು, ಮೈತ್ರೇಯನೇ! ಭೂಮಂಡಲದ ವಿಚಾರವನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. ವಿಸ್ತಾರವಾಗಿ ಹೇಳಬೇಕಾದರೆ ಒಂದು ನೂರು ವರ್ಷಗಳು ಹೇಳಿದರೂ ಸಾಧ್ಯವಾಗುವುದಿಲ್ಲ. ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ, ಪುಷ್ಕರ ಎಂಬಿವೇ ಸಪ್ತ ದ್ವೀಪಗಳು. ಈ ದ್ವೀಪಗಳು ಕ್ರಮವಾಗಿ ಲವಣ, ಇಕ್ಷು, ಸುರಾ, ತುಪ್ಪ, ಮೊಸರು, ಹಾಲು, ಶುದ್ಧೋದಕ ಎಂಬ ಏಳು ಸಮುದ್ರದ ನೀರಿನಿಂದ ಆವರಿಸಿರುವುವು. ಜಂಬೂದ್ವೀಪವು ಎಲ್ಲ ದ್ವೀಪಗಳ ನಡುವೆ ಇರುವುದು. ಅದರ ನಡುವೆ ಮೇರುವೆಂಬ ಸುವರ್ಣ ಪರ್ವತವಿರುವುದು. ಅದು ಎಂಭತ್ತನಾಲ್ಕು ಸಾವಿರ ಯೋಜನ ಎತ್ತರವಿರುವುದು. (ಇಪ್ಪತ್ತನಾಲ್ಕು ಅಂಗುಲಗಳಿಗೆ ಒಂದು ಹಸ್ತ, ನಾಲ್ಕು ಹಸ್ತಗಳಿಗೆ ಒಂದು ದಂಡ. ಎರಡು ಸಾವಿರ ದಂಡಗಳಿಗೆ ಒಂದು ಕ್ರೋಶ, ನಾಲ್ಕು ಕ್ರೋಶಗಳಿಗೆ ಒಂದು ಯೋಜ)

ಮೂಲೇ ಷೋಡಶಸಾಹಸ್ರೋ ವಿಸ್ತಾರಸ್ತಸ್ಯ ಸರ್ವತಃ
ಭೂಪದ್ಮಸ್ಯಾಸ್ಯ ಶೈಲೋಽಸೌ ಕರ್ಣಿಕಾಕಾರಸಂಸ್ಥಿತಃ ॥ ೯ ॥

ಹಿಮವಾನ್ ಹೇಮಕೂಟಶ್ಚ ನಿಷಧಶ್ಚಾಸ್ಯ ದಕ್ಷಿಣೇ ।
ನೀಲಃ ಶ್ವೇತಶ್ಚ ಶೃಂಗೀ ಚ ಉತ್ತರೇ ವರ್ಷಪರ್ವತಾಃ ॥ ೧೦ ॥

ಲಕ್ಷಪ್ರಮಾಣೌ ದ್ವೌ ಮಧ್ಯೇ ದಶಹೀನಾಸ್ತಥಾ ಪರೇ ।
ಸಹಸ್ರದ್ವಿತಯೋಚ್ಛ್ರಾಯಾಸ್ತಾವದ್ವಿಸ್ತಾರಿಣಶ್ಚ ತೇ ॥ ೧೧ ॥

ಭಾರತಂ ಪ್ರಥಮಂ ವರ್ಷಂ ತತಃ ಕಿಂಪುರುಷಂ ಸ್ಮೃತಂ ।
ಹರಿವರ್ಷಂ ತಥೈವಾನ್ಯತ್ ಮೇರೋರ್ದಕ್ಷಿಣತೋ ದ್ವಿಜ ॥ ೧೨ ॥

ರಮ್ಯಕಂ ಚೋತ್ತರಂ ವರ್ಷಂ ತಥೈವ ತು ಹಿರಣ್ಮಯಂ ।
ಉತ್ತರಾಃ ಕುರವಶ್ಚೈವ ಯಥಾ ವೈ ಭಾರತಂ ತಥಾ ॥ ೧೩ ॥

೯–೧೦. ಮೇರುಪರ್ವತವು ಭೂಮಿಯೊಳಗೆ ಹದಿನಾರು ಸಾವಿರ ಯೋಜನದ ವರೆಗೆ ಪ್ರವೇಶಿಸಿರುವುದು. ಇದರ ಶಿಖರದ ವಿಸ್ತಾರವು ಮೂವತ್ತೆರಡು ಸಾವಿರ ಯೋಜನವಿರುವುದು. ಬುಡದಲ್ಲಿ ಹದಿನಾರು ಸಾವಿರ ಯೋಜನ ವಿಸ್ತಾರವಾಗಿರುವುದು. ಭೂಮಿಯೆಂಬ ಕಮಲಕ್ಕೆ ಈ ಪರ್ವತವು ಕರ್ಣಿಕಾಕಾರವಾಗಿರುವುದು.

೧೧–೧೨. ಮೇರುಪರ್ವತಕ್ಕೆ ದಕ್ಷಿಣದಲ್ಲಿ ಹಿಮವಂತ, ಹೇಮಕೂಟ, ನಿಷಧ ಎಂಬ ಪರ್ವತಗಳೂ, ಉತ್ತರದಲ್ಲಿ ನೀಲ, ಶ್ವೇತ, ಶೃಂಗ ಎಂಬ ಪರ್ವತಗಳೂ ಭಾರತಾದಿ ಏಳು ವರ್ಷಗಳೆಂಬ ಭೂಭಾಗಗಳನ್ನು ಬೇರೆಬೇರೆಯಾಗಿ ಮಾಡುವುವು. ನಡುವೆ ಇರುವ ನಿಷಧ, ನೀಲ ಪರ್ವತಗಳ ಪೂರ್ವ ಪಶ್ಚಿಮ ವಿಸ್ತಾರವು ಲಕ್ಷ ಯೋಜನಗಳಾಗುವುವು. ಅಲ್ಲಿಂದ ಮುಂದೆ ಉತ್ತರಕ್ಕೂ ದಕ್ಷಿಣಕ್ಕೂ ಇರುವ ಒಂದೊಂದು ಪರ್ವತಗಳೂ ಹತ್ತುಸಾವಿರ ಯೋಜನದಳತೆಯು ಕಡಿಮೆಯಾಗುತ್ತ ಹೋಗುವುದು. ಆ ಪರ್ವತಗಳ ಎತ್ತರವು ಎರಡು ಸಾವಿರ ಯೋಜನವಿದ್ದು ಅಗಲವೂ ಅಷ್ಟೇ ಇರುವುದು.

೧೩–೧೪. ಮೊದಲನೆಯದೇ ಭಾರತವರ್ಷವು. ಕ್ರಮವಾಗಿ ಕಿಂಪುರುಷ ವರ್ಷ, ಹರಿವರ್ಷಗಳು ಮೇರುವಿಗೆ ದಕ್ಷಿಣದಲ್ಲಿರುವುವು. ಉತ್ತರದಲ್ಲಿ ರಮ್ಯಕ

ನವಸಾಹಸ್ರಮೇಕೈಕಮೇತೇಷಾಂ ದ್ವಿಜಸತ್ತಮ ।
ಇಲಾವೃತಂ ಚ ತನ್ಮಧ್ಯೇ ಸೌವರ್ಣೋ ಮೇರುರುಚ್ಛ್ರಿತಃ ॥ ೧೪ ॥

ಮೇರೋಶ್ಚತುರ್ದಿಶಂ ತತ್ರ ನವಸಾಹಸ್ರವಿಸ್ತೃತಂ ।
ಇಲಾವೃತಂ ಮಹಾಭಾಗ ಚತ್ವಾರಶ್ಚಾತ್ರ ಪರ್ವತಾಃ ॥ ೧೫ ॥

ವಿಷ್ಕಂಭಾರಚಿತಾ ಮೇರೋರ್ಯೋಜನಾಯುತಮುಚ್ಛ್ರಿತಾಃ ।
ನ ವೈಸ್ಸರೋಭಿಶ್ಚಸಮಂದಿಕ್ಷ್ವೇತೇ ಕೇಸರಾಚಲಾಃ ॥ ೧೬ ॥

ಪೂರ್ವೇಣ ಮಂದರೋ ನಾಮ ದಕ್ಷಿಣೇ ಗಂಧಮಾದನಃ ।
ವಿಪುಲಃ ಪಶ್ಚಿಮೇ ಪಾರ್ಶ್ವೇ ಸುಪಾರ್ಶ್ವಶ್ಚೋತ್ತರೇ ಸ್ಥಿತಃ ॥ ೧೭ ॥

ಕದಂಬಸ್ತೇಷು ಜಂಬೂಶ್ಚ ಪಿಪ್ಪಲೋ ವಟ ಏವ ಚ ।
ಏಕಾದಶಶತಾ ಯಾಮಾಃ ಪಾದಪಾ ಗಿರಿಕೇತವಃ । ॥ ೧೮ ॥

ವರ್ಷ, ಹಿರಣ್ಮಯವರ್ಷ, ಉತ್ತರಕುರುವರ್ಷ, ಈ ಉತ್ತರಕುರುವರ್ಷವು ಭಾರತವರ್ಷದಂತೆ ಧನುರಾಕಾರವಾಗಿರುವುದು. ಪ್ರತಿಯೊಂದು ವರ್ಷವೂ ಒಂಭತ್ತು ಸಾವಿರ ಯೋಜನ ವಿಸ್ತಾರವಾಗಿರುವುದು. ನಡುವೆ ಇರುವ ಇಳಾವೃತವರ್ಷದಲ್ಲಿ ಎತ್ತರವಾದ ಮೇರುಪರ್ವತವಿರುವುದು. ಮೇರುವಿನ ನಾಲ್ಕು ದಿಕ್ಕಿನಲ್ಲಿಯೂ ಇರುವ ಇಳಾವೃತವರ್ಷವು ಒಂಭತ್ತು ಸಾವಿರ ಯೋಜನ ವಿಸ್ತಾರವಾಗಿರುವುದು. ಈ ಇಳಾವೃತ ವರ್ಷದಲ್ಲಿ ನಾಲ್ಕು ಪರ್ವತಗಳಿರುವುವು. ಆ ಪರ್ವತಗಳು ಹತ್ತು ಸಾವಿರ ಯೋಜನ ಎತ್ತರವಾಗಿ ಮೇರುವಿಗೆ ಊರೆಕೊಟ್ಟಂತೆ ಇರುವುವು. ಆ ಪರ್ವತಗಳಲ್ಲಿ ನೂತನವಾದ ಸರೋವರಗಳಿರುವುವು. ನಾಲ್ಕು ದಿಕ್ಕಿನಲ್ಲಿರುವ ಪರ್ವತಗಳಿಗೆ ಕೇಸರಾಚಲವೆಂದು ಹೆಸರು.

೧೭–೧೮. ಪೂರ್ವದಿಕ್ಕಿನಲ್ಲಿ ಮಂದರ ಪರ್ವತವೂ ದಕ್ಷಿಣದಿಕ್ಕಿನಲ್ಲಿ ಗಂಧಮಾದನಪರ್ವತವೂ ಪಶ್ಚಿಮದಿಕ್ಕಿನಲ್ಲಿ ವಿಪುಲಪರ್ವತವೂ ಉತ್ತರದಿಕ್ಕಿನಲ್ಲಿಸುಪಾರ್ಶ್ವ ಪರ್ವತವೂ ಇರುವುದು. ಈ ನಾಲ್ಕು ಪರ್ವತಗಳಿಗೂ ಕ್ರಮವಾಗಿ ಕದಂಬ, ನೇರಳೆ,

ಜಂಬೂದ್ವೀಪಸ್ಯ ಸಾ ಜಂಬೂರ್ನಾಮ ಹೇತುರ್ಮಹಾಮುನೇ
ಮಹಾಗಜಪ್ರಮಾಣಾನಿ ಜಂಬ್ವಾಸ್ತಸ್ಯಾಃ ಫಲಾನಿ ವೈ । ॥ ೧೯ ॥

ಪತಂತಿ ಭೂಭೃತಃ ಪೃಷ್ಠೇ ಶೀರ್ಯಮಾಣಾನಿ ಸರ್ವತಃ
ರಸೇನ ತೇಷಾಂ ಪ್ರಖ್ಯಾತಾ ತತ್ರ ಜಂಬೂನದೀತಿ ವೈ ।
ಸರಿತ್ಪ್ರವರ್ತತೇ ಸಾ ಚ ಪೀಯತೇ ತನ್ನಿವಾಸಿಭಿಃ ॥ ೨೦ ॥

ನ ಸ್ವೇದೋ ನ ಚ ದೌರ್ಗಂಧ್ಯಂ ನ ಜರಾ ನೇಂದ್ರಿಯಕ್ಷಯಃ ।
ತತ್ಪಾನಾತ್ಸ್ವಚ್ಛಮನಸಾಂ ಜನಾನಾಂ ತತ್ರ ಜಾಯತೇ ॥ ೨೧ ॥

ತೀರಮೃತ್ತದ್ರಸಂ ಪ್ರಾಪ್ಯ ಸುಖವಾಯುವಿಶೋಷಿತಾ ।
ಜಾಂಬೂನದಾಖ್ಯಂ ಭವತಿ ಸುವರ್ಣಂ ಸಿದ್ಧಭೂಷಣಂ ॥ ೨೨ ॥

ಭದ್ರಾಶ್ವಂ ಪೂರ್ವತೋ ಮೇರೋಃ ಕೇತುಮಾಲಂ ಚ ಪಶ್ಚಿಮೇ ।
ವರ್ಷೇ ದ್ವೇ ತು ಮುನಿಶ್ರೇಷ್ಠ ತಯೋರ್ಮಧ್ಯಮಿಲಾವೃತಂ ॥ ೨೩ ॥

ಅರಳಿ, ಆಲ ಎಂಬ ಮರಗಳು ಸಾವಿರದ ನೂರು ಯೋಜನ ಎತ್ತರವಾಗಿ ಬೆಳೆದು ಆ ಪರ್ವತಗಳಿಗೆ ಬಾವುಟವನ್ನೇರಿಸಿದಂತೆ ಇರುವುವು.

೧೯-೨೩. ಮೈತ್ರೇಯ ಮಹಾಮುನಿಯೇ ! ಆ ಜಂಬೂವೃಕ್ಷವೇ ಜಂಬೂದ್ವೀಪವೆಂಬ ಹೆಸರು ಬರಲು ಕಾರಣವಾಗಿರುವುದು. ಆ ಮರದ ಹಣ್ಣುಗಳು ಒಂದು ದೊಡ್ಡ ಆನೆಯಗಾತ್ರವಾಗಿರುವುವು. ಆ ಹಣ್ಣುಗಳು ಆ ಪರ್ವತದ ತಪ್ಪಲಿನಲ್ಲಿ ಬಿದ್ದು ಒಡೆದುಹೋಗಿ ಸುರಿಯುತ್ತಿರುವ ರಸವು ನದಿಯ ರೂಪದಲ್ಲಿ ಹರಿದುಬರುವುದು. ಅದಕ್ಕೆ ಜಂಬೂನದಿಯೆಂದೇ ಹೆಸರಿರುವುದು. ಅಲ್ಲಿಯ ಜನರು ಆ ನೀರನ್ನೇ ಕುಡಿಯುವರು. ಅದನ್ನು ಕುಡಿವುದರಿಂದ ಅಲ್ಲಿಯ ಜನರಿಗೆ ಶರೀರದಲ್ಲಿ ಬೆವರೂ, ದುರ್ವಾಸನೆಯೂ, ಮುಪ್ಪೂ, ಇಂದ್ರಿಯ ದೌರ್ಬಲ್ಯವೂ ಇಲ್ಲದೆ ಮನಸ್ಸು ಶಾಂತವಾಗಿರುವುದು. ಆ ನದಿಯ ದಡದಲ್ಲಿರುವ ಮಣ್ಣಿನಲ್ಲಿ ಆ ರಸವು ಸೇರಿ ಗಾಳಿಯಿಂದ ಒಣಗಿ ಸಿದ್ಧರಿಗೆ ಆಭರಣಯೋಗ್ಯವಾದ ಜಾಂಬೂನದವೆಂಬ ಚಿನ್ನವಾಗುವುದು.

ವನಂ ಚೈತ್ರರಥಂ ಪೂರ್ವೇ ದಕ್ಷಿಣೇ ಗಂಧಮಾದನಂ ।
ವೈಭ್ರಾಜಂ ಪಶ್ಚಿಮೇ ತದ್ವದುತ್ತರೇ ನಂದನಂ ಸ್ಮೃತಂ ॥ ೨೪ ॥

ಅರುಣೋದಂ ಮಹಾಭದ್ರಂ ಸಿತೋದಮಥಮಾನಸಂ ।
ಸರಾಂಸ್ಯೇತಾನಿ ಚತ್ವಾರಿ ದೇವಭೋಗ್ಯಾನಿ ಸರ್ವದಾ ॥ ೨೫ ॥

ಸಿತಾಂಭಶ್ಚಕುಮುದ್ವಾಂಶ್ಚ ಕುರರೀ ಮಾಲ್ಯವಾಂಸ್ತಥಾ ।
ವೈಕಂಕಪ್ರಮುಖಾ ಮೇರೋಃ ಪೂರ್ವತಃ ಕೇಸರಾಚಲಾಃ ॥ ೨೬ ॥

ತ್ರಿಕೂಟಶ್ಶಿಶಿರಶ್ಚೈವ ಪತಂಗೋ ರುಚಕಸ್ತಥಾ ।
ನಿಷಧಾದ್ಯಾ ದಕ್ಷಿಣತಸ್ತಸ್ಯ ಕೇಸರಪರ್ವತಾಃ ॥ ೨೭ ॥

ಶಿಖಿವಾಸಾಃ ಸ ವೈಡೂರ್ಯಃ ಕಪಿಲೋ ಗಂಧಮಾದನಃ ।
ಜಾರುಧಿಪ್ರಮುಖಾಸ್ತದ್ವತ್ಪಶ್ಚಿಮೇ ಕೇಸರಾಚಲಾಃ ॥ ೨೮ ॥

ಮೇರೋರನಂತರಾಂಗೇಷು ಜಠರಾದಿಷ್ವವಸ್ಥಿತಾಃ ।
ಶಂಖಕೂಟೋಽಥ ಋಷಭೋ ಹಂಸೋ ನಾಗಸ್ತಥಾಪರಃ ॥ ೨೯ ॥

೨೪–೨೬. ಮೇರುವಿನ ಪೂರ್ವಕ್ಕೆ ಭದ್ರಾಶ್ವ ವರ್ಷವೂ, ಪಶ್ಚಿಮಕ್ಕೆ ಕೇತುಮಾಲ ವರ್ಷವೂ ಇವೆರಡರ ನಡುವೆ ಇಳಾವೃತವರ್ಷವೂ ಇರುವುದು. ಪೂರ್ವದಿಕ್ಕಿನಲ್ಲಿ ಚೈತ್ರ ರಥವೆಂಬ ವನವೂ, ದಕ್ಷಿಣದಲ್ಲಿ ಗಂಧಮಾಧನ ವನವೂ, ಪಶ್ಚಿಮದಲ್ಲಿ ವೈಭ್ರಾಜವನವೂ, ಉತ್ತರದಲ್ಲಿ ನಂದನ ವನವೂ ಇರುವುದು. ಅರುಣೋದ, ಮಹಾಭದ್ರ, ಸಿತೋದ, ಮಾನಸ, ಎಂಬ ನಾಲ್ಕು ಸರೋವರಗಳು ದೇವತೆಗಳಿಗೆ ಸಂಪದ್ರೂಪವಾಗಿರುವುವು.

೨೭–೩೦. ಮೇರುವಿಗೆ ಪೂರ್ವದಲ್ಲಿ ಸಿತಾಂಭ, ಕುಮುದ್ವಾನ್, ಕುರರಿ, ಮಾಲ್ಯವಂತ, ವೈಕಂಕ, ಮುಂತಾದ ಕೇಸರ ಪರ್ವತಗಳೂ ದಕ್ಷಿಣದಲ್ಲಿ ತ್ರಿಕೂಟ, ಶಿಶಿರ, ಪತಂಗ, ರುಚಕ, ನಿಷಧ, ಮುಂತಾದ ಕೇಸರ ಪರ್ವತಗಳೂ ಪಶ್ಚಿಮದಲ್ಲಿ

ಕಾಲಾಂಜನಾದ್ಯಾಶ್ಚ ತಥಾ ಹ್ಯುತ್ತರೇ ಕೇಸರಾಚಲಾಃ ।
ಚತುರ್ದಶಸಹಸ್ರಾಣಿ ಯೋಜನಾನಾಂ ಮಹಾಪುರೀ ॥ ೩೦ ॥

ಮೇರೋರುಪರಿ ಮೈತ್ರೇಯ ಬ್ರಹ್ಮಣಃ ಪ್ರಥಿತಾ ದಿವಿ ।
ತಸ್ಯಾಃ ಸಮಂತತಶ್ಚಾಷ್ಟೌ ದಿಶಾಸು ವಿದಿಶಾಸು ಚ ॥ ೩೧ ॥

ಇಂದ್ರಾದಿಲೋಕಪಾಲಾನಾಂ ಪ್ರಖ್ಯಾತಾಃ ಪ್ರವರಾಃ ಪುರಃ ।
ವಿಷ್ಣುಪಾದವಿನಿಷ್ಕ್ರಾಂತಾ ಪ್ಲಾವಯಿತ್ವೇಂದುಮಂಡಲಂ ॥ ೩೨ ॥

ಸಮಂತಾದ್ಬ್ರಹ್ಮಣಃ ಪುರ್ಯಾಂ ಗಂಗಾ ಪತತಿ ವೈ ದಿವಃ ।
ಸಾ ತತ್ರ ಪತಿತಾ ದಿಕ್ಷು ಚತುರ್ಧಾ ಪ್ರತಿಪದ್ಯತೇ ॥ ೩೩ ॥

ಸೀತಾ ಚಾಲಕನಂದಾ ಚ ಚಕ್ಷುರ್ಭದ್ರಾ ಚ ವೈ ಕ್ರಮಾತ್ ।
ಪೂರ್ವೇಣ ಶೈಲಾಚ್ಛೈಲಂ ತು ಸೀತಾ ಯಾತ್ಯಂತರಿಕ್ಷಗಾ ॥ ೩೪ ॥

ತತಶ್ಚ ಪೂರ್ವವರ್ಷೇಣ ಭದ್ರಾಶ್ವೇನೈತಿ ಸಾರ್ಣವಂ ।
ತಥೈವಾಲಕನಂದಾ ಪಿ ದಕ್ಷಿಣೇನೈವ ಭಾರತಂ ॥ ೩೫ ॥

ಶಿಖಿವಾಸ, ವೈಡೂರ್ಯ, ಕಪಿಲ, ಗಂಧಮಾದನ, ಜಾರುಧಿ ಮುಂತಾದ ಕೇಸರ ಪರ್ವತಗಳೂ, ಉತ್ತರದಲ್ಲಿ ಶಂಖಕೂಟ; ಋಷಭ, ಹಂಸ, ನಾಗ, ಕಾಳಾಂಜನ ಮುಂತಾದ ಕೇಸರ ಪರ್ವತಗಳೂ, ಮೇರುವಿನ ಅಂಗಗಳಂತೆ ಹರಡಿರುವುವು.

೩೧–೩೨. ಮೇರುಪರ್ವತದ ಮೇಲುಭಾಗದಲ್ಲಿ ಹದಿನಾಲ್ಕು ಸಾವಿರ ಯೋಜನ ವಿಸ್ತಾರವಾದ ಬ್ರಹ್ಮನ ಪಟ್ಟಣವಿರುವುದು. ಅದರ ಸುತ್ತಲೂ ಎಂಟು ದಿಕ್ಕುಗಳಲ್ಲಿಯೂ ಇಂದ್ರಾದಿ ಲೋಕಪಾಲಕರ ಪಟ್ಟಣಗಳಿರುವುವು.

೩೩–೩೮. ವಿಷ್ಣುವಿನ ಪಾದದಿಂದ ಹೊರಟ ಗಂಗೆಯು ಆಕಾಶದಿಂದ ಬೀಳುತ್ತ ಚಂದ್ರಮಂಡಲವನ್ನು ನೆನಸಿ ಬ್ರಹ್ಮನ ಪಟ್ಟಣದ ಸುತ್ತಲೂ ಬೀಳುತ್ತಿರುವುದು. ಹಾಗೆ ಬಿದ್ದ ಗಂಗೆಯು ನಾಲ್ಕು ಭಾಗವಾಗಿ ಸೀತಾ, ಅಲಕನಂದಾ, ಚಕ್ಷು,

ಪ್ರಯಾತಿ ಸಾಗರಂ ಭೂತ್ವಾ ಸಪ್ತಭೇದಾ ಮಹಾಮುನೇ ।
ಸಾಚಕ್ಷುಃ ಪಶ್ಚಿಮಗಿರೀನತೀತ್ಯ ಸಕಲಾಂಸ್ತತಃ ॥ ೩೬ ॥

ಪಶ್ಚಿಮಂ ಕೇತುಮಾಲಾಖ್ಯಂ ವರ್ಷಂ ಗತ್ವೈತಿ ಚಾರ್ಣವಂ ।
ಭದ್ರಾ ತಥೋತ್ತರಗಿರೀನ್ ಉತ್ತರಾಂಶ್ಚ ತಥಾ ಕುರೂನ್ ॥ ೩೭ ॥

ಅತೀತ್ಯೋತ್ತರಮಂಭೋಧಿಂ ಸಮಭ್ಯೇತಿ ಮಹಾಮುನೇ ।
ಆನೀಲನಿಷಧಾಯಾಮೌ ಮಾಲ್ಯವದ್ಗಂಧಮಾದನೌ ॥ ೩೮ ॥
ತಯೋರ್ಮಧ್ಯಗತೋ ಮೇರುಃ ಕರ್ಣಿಕಾಕಾರಸಂಸ್ಥಿತಃ ।

ಭಾರತಾಃ ಕೇತುಮಾಲಾಶ್ಚ ಭದ್ರಾಶ್ವಾಃ ಕುರವಸ್ತಥಾ ॥ ೩೯ ॥
ಪತ್ರಾಣಿ ಲೋಕಪದ್ಮಸ್ಯ ಮರ್ಯಾದಾ ಶೈಲಬಾಹ್ಯತಃ ।

ಜಠರೋ ಹೇಮಕೂಟಶ್ಚ ಮರ್ಯಾದಾ ಪರ್ವತಾವುಭೌ ॥ ೪೦ ॥
ತೌ ದಕ್ಷಿಣೋತ್ತರಾಯಾಮಾವಾನೀಲನಿಷಧಾಯತೌ ।

ಭದ್ರಾ, ಎಂಬ ಹೆಸರಿನಿಂದ ನಾಲ್ಕು ದಿಕ್ಕಿಗೂ ಹರಿವುದು ಪೂರ್ವದಿಕ್ಕಿನಲ್ಲಿ ಸೀತಾ ನದಿಯು ಒಂದು ಬೆಟ್ಟದಿಂದ ಮತ್ತೊಂದು ಬೆಟ್ಟಕ್ಕೆ ಧುಮುಕುತ್ತ ಭದ್ರಾಶ್ವವರ್ಷದಲ್ಲಿ ಹರಿದು ಸಮುದ್ರಕ್ಕೆ ಸೇರುವುದು. ಚಕ್ಷುನದಿಯು ಪಶ್ಚಿಮದಿಕ್ಕಿನಲ್ಲಿರುವ ಪರ್ವತಗಳನ್ನು ದಾಟಿ ಕೇತುಮಾಲ ವರ್ಷದಲ್ಲಿ ಹರಿದು ಸಮುದ್ರವನ್ನು ಸೇರುವುದು. ಭದ್ರಾನದಿಯು ಉತ್ತರದಿಕ್ಕಿನ ಪರ್ವತಗಳನ್ನು ದಾಟಿ ಉತ್ತರ ಕುರುದೇಶದಲ್ಲಿ ಹರಿದು ಉತ್ತರ ಸಮುದ್ರವನ್ನು ಸೇರುವುದು.

೩೯–೪೦. ಉತ್ತರದಲ್ಲಿರುವ ನೀಲಪರ್ವತದಿಂದ ದಕ್ಷಿಣದ ನಿಷಧಪರ್ವತದ ವರೆಗೂ ಪಶ್ಚಿಮದ ಮಾಲ್ಯವತ್ಪರ್ವತದಿಂದ ಪೂರ್ವದ ಗಂಧಮಾಧನ ಪರ್ವತದ ವರೆಗೂ ನಡುವೆ ಇರುವ ಮೇರುಪರ್ವತವು ಕಮಲದ ಕರ್ಣಿಕಾಕಾರವಾಗಿರುವುದು. ಎಲ್ಲೆಕಟ್ಟಿನ ಪರ್ವತಗಳಿಂದ ಹೊರಗೆ ಭರತ, ಕೇತುಮಾಲ, ಭದ್ರಾಶ್ವ, ಕುರು ವರ್ಷಗಳು ಲೋಕವೆಂಬ ಪದ್ಮದ ದಳಗಳಂತೆ ಇರುವುವು.

ಗಂಧಮಾದನಕೈಲಾಸೌ ಪೂರ್ವಪಶ್ಚಾಯತಾವುಭೌ ॥ ೪೧ ॥
ಅಶೀತಿಯೋಜನಾ ಯಾಮಾವರ್ಣವಾಂತರ್ವ್ಯವಸ್ಥಿತೌ ।
ನಿಷಧಃ ಪಾರಿಯಾತ್ರಶ್ಚ ಮರ್ಯಾದಾ ಪರ್ವತಾವುಭೌ ॥ ೪೨ ॥
ಮೇರೋಃ ಪಶ್ಚಿಮದಿಗ್ಭಾಗೇ ಯಥಾಪೂರ್ವೇ ತಥಾ ಸ್ಥಿತೌ ।
ತ್ರಿಶೃಂಗೋ ಜಾರುಧಿಶ್ಚೈವ ಉತ್ತರೇ ವರ್ಷಪರ್ವತೌ ॥ ೪೩ ॥
ಪೂರ್ವಪಶ್ಚಾಯತಾವೇತಾವರ್ಣವಾಂತರ್ವ್ಯವಸ್ಥಿತೌ ।
ಇತ್ಯೇತೇ ಮುನಿವರ್ಯೋಕ್ತಾ ಮರ್ಯಾದಾ ಪರ್ವತಾಸ್ತವ ॥ ೪೪ ॥
ಜಠರಾದ್ಯಾಃ ಸ್ಥಿತಾ ಮೇರೋರ್ಯೇಷಾಂ ದ್ವೌ ದ್ವೌ ಚತುರ್ದಿಶಂ ।
ಮೇರೋಶ್ಚತುರ್ದಿಶಂ ಯೇ ತು ಪ್ರೋಕ್ತಾಃ ಕೇಸರಪರ್ವತಾಃ ॥ ೪೫ ॥
ಸಿತಾದ್ಯಾಶ್ಚಮುನೇ ತೇಷಾಮತೀವ ಹಿ ಮನೋರಮಾಃ ।
ಶೈಲಾನಾಮಂತರೇದ್ರೋಣ್ಯಃ ಸಿದ್ಧಚಾರಣಸೇವಿತಾಃ ॥ ೪೬ ॥

೪೧–೪೫. ಮೇರುವಿನ ಪೂರ್ವದಿಕ್ಕಿನಲ್ಲಿ ಜಠರ, ಹೇಮಕೂಟ ಎಂಬ ಎಲ್ಲೆಕಟ್ಟಿನ ಪರ್ವತಗಳು ದಕ್ಷಿಣೋತ್ತರವಾಗಿ ನೀಲಪರ್ವತದಿಂದ ನಿಷಧಪರ್ವತದ ವರೆಗೆ ಹಬ್ಬಿರುವುವು. ದಕ್ಷಿಣದಲ್ಲಿ ಗಂಧಮಾದನ ಕೈಲಾಸ ಪರ್ವತಗಳು ಎಂಭತ್ತು ಯೋಜನ ವಿಸ್ತಾರವಾಗಿ ಸಮುದ್ರಪರ್ಯಂತವಾಗಿ ಹಬ್ಬಿರುವುವು. ಪಶ್ಚಿಮದಲ್ಲಿ ನಿಷಧ ಪಾರಿಯಾತ್ರ ಪರ್ವತಗಳು ಹಿಂದಿನಂತೆ ನೀಲಪರ್ವತದಿಂದ ನಿಷಧಪರ್ವತದ ವರೆಗೆ ಹಬ್ಬಿರುವುವು. ಉತ್ತರದಲ್ಲಿ ತ್ರಿಶೃಂಗ ಜಾರುಧಿ ಎಂಬ ಪರ್ವತಗಳು ದಕ್ಷಿಣದ ಪರ್ವತಗಳಂತೆ ವಿಸ್ತಾರವಾಗಿ ಸಮುದ್ರ ಪರ್ಯಂತವಾಗಿ ಹಬ್ಬಿರುವುವು. ಎಲ್ಲೆಕಟ್ಟಿನ ಪರ್ವತಗಳನ್ನು ಹೇಳಿರುವೆನು.

೪೬–೫೦. ಮೇರುವಿನ ನಾಲ್ಕು ದಿಕ್ಕಿನಲ್ಲಿಯೂ ಇರುವ ಸಿತಾದಿಕೇಸರ ಪರ್ವತಗಳ ನಡುವೆ ಅತ್ಯಂತ ಮನೋಹರವಾದ ಗುಹೆಗಳಲ್ಲಿ ಅಣಿಮಾದಿ ಐಶ್ವರ್ಯ ಸಿದ್ಧಿ)ಗಳುಳ್ಳ ಸಿದ್ಧರೂ ಚಾರಣರೆಂಬ ದೇವಗಾಯಕರೂ ವಾಸಮಾಡುವರು.

ಸುರಮ್ಯಾಣಿ ತಥಾ ತಾಸು ಕಾನನಾನಿ ಪುರಾಣಿ ಚ ।
ಲಕ್ಷ್ಮೀವಿಷ್ಣ್ವಗ್ನಿಸೂರ್ಯಾದಿ ದೇವಾನಾಂ ಮುನಿಸತ್ತಮ ॥ ೪೭ ॥

ತಾಸ್ವಾಯತನವರ್ಯಾಣಿ ಜುಷ್ಟಾನಿ ನರಕಿನ್ನರೈಃ ।
ಗಂಧರ್ವಯಕ್ಷರಕ್ಷಾಂಸಿ ತಥಾ ದೈತೇಯದಾನವಾಃ ॥ ೪೮ ॥

ಕ್ರೀಡಂತಿ ತಾಸು ರಮ್ಯಾಸು ಶೈಲದ್ರೋಣೀಷ್ವಹರ್ನಿಶಂ ।
ಭೌಮಾಸ್ತ್ವೇತೇ ಸ್ಮೃತಾಃ ಸ್ವರ್ಗಾಃ ಧರ್ಮಿಣಾ ಮಾಲಯಾಮುನೇ ॥೪೯॥

ನೈತೇಷು ಪಾಪಕರ್ತಾರೋ ಯಾಂತಿ ಜನ್ಮಶತೈರಪಿ ।
ಭದ್ರಾಶ್ವೇ ಭಗವಾನ್ವಿಷ್ಣುರಾಸ್ತೆ ಹಯಶಿರಾದ್ವಿಜ ॥ ೫೦ ॥

ವರಾಹ! ಕೇತುಮಾಲೇತು ಭಾರತೇ ಕೂರ್ಮರೂಪಧೃತ್ ।
ಮತ್ಸ್ಯರೂಪಶ್ಚ ಗೋವಿಂದಃ ಕುರುಷ್ವಾಸ್ತೆ ಸನಾತನಃ ॥೫೧॥

ವಿಶ್ವರೂಪೇಣ ಸರ್ವತ್ರ ಸರ್ವಃ ಸರ್ವೇಶ್ವರೋ ಹರಿಃ ।
ಸರ್ವಸ್ಯಾಧಾರಭೂತೋಽಸೌ ಮೈತ್ರೇಯಾಸ್ತೆಖಿಲಾತ್ಮಕಃ ॥ ೫೨ ॥

ಆ ಗುಹೆಗಳಲ್ಲಿಯೇ ಮನೋಹರವಾದ ಪಟ್ಟಣಗಳೂ ಅರಣ್ಯಗಳೂ ಲಕ್ಷ್ಮಿ, ವಿಷ್ಣು, ಅಗ್ನಿ ಸೂರ್ಯ ಮುಂತಾದ ದೇವತೆಗಳ ಮನೆಗಳೂ ದೇವಗಾಯಕರುಗಳಿಂದ ಕೂಡಿದ ಪ್ರದೇಶಗಳೂ ಇರುವುವು. ಆ ಮನೋಹರವಾದ ಪರ್ವತ ಗುಹೆಗಳಲ್ಲಿ ಗಂಧರ್ವರು, ಯಕ್ಷರು, ರಾಕ್ಷಸರು, ದೈತ್ಯರು, ದಾನವರು ಮುಂತಾದವರು ಯಾವಾಗಲೂ ಕ್ರೀಡಿಸುತ್ತಿರುವರು. ಈ ಗುಹೆಗಳು ಭೂಮಿಯ ಸ್ವರ್ಗಗಳಾಗಿರುವುವು. ಇಲ್ಲಿ ಧರ್ಮವನ್ನು ಆಚರಿಸುವವರೇ ವಾಸವಾಗಿರುವರು. ಪಾಪಮಾಡಿದವರು ನೂರು ಜನ್ಮವನ್ನು ಪಡೆದರೂ ಈ ಪ್ರದೇಶಕ್ಕೆ ಹೋಗಲಾರರು.

೫೦–೫೨. ಮೈತ್ರೇಯನೇ ಭದ್ರಾಶ್ವವರ್ಷದಲ್ಲಿ ಹಯಗ್ರೀವಾವತಾರ ಮಾಡಿದ ವಿಷ್ಣುವು ವಾಸವಾಗಿರುವನು. ಕೇತುಮಾಲ ವರ್ಷದಲ್ಲಿ ವರಾಹ ರೂಪಿಯೂ ಭಾರತದಲ್ಲಿ ಕೂರ್ಮರೂಪಿಯೂ, ಕುರುವರ್ಷದಲ್ಲಿ ಮತ್ಸ್ಯರೂಪಿಯೂ, ಎಲ್ಲೆಡೆಯಲ್ಲಿಯೂ ವಿಶ್ವರೂಪವನ್ನು ಧರಿಸಿದ ವಿಷ್ಣುವು ಸಮಸ್ತಕ್ಕೂ ಆಶ್ರಯನಾಗಿ ಸರ್ವಾತ್ಮ ಸ್ವರೂಪನಾಗಿ ಸರ್ವೇಶ್ವರನಾಗಿರುವನು.

ಯಾನಿ ಕಿಂಪುರುಷಾದ್ಯಾನಿ ವರ್ಷಾಣ್ಯಷ್ಟೌ ಮಹಾಮುನೇ ।
ನ ತೇಷು ಶೋಕೋ ನಾಯಾಸೋ ನೋದ್ವೇಗಃ ಕ್ಷುದ್ಭಯಾದಿಕಂ ॥ ೫೩ ॥

ಸ್ವಸ್ಥಾಃ ಪ್ರಜಾಃ ನಿರಾತಂಕಾಃ ಸರ್ವದುಃಖವಿವರ್ಜಿತಾಃ ।
ದಶದ್ವಾದಶವರ್ಷಾಣಾಂ ಸಹಸ್ರಾಣಿ ಸ್ಥಿರಾಯುಷಃ ॥ ೫೪ ॥

ನ ತೇಷು ವರ್ಷತೇ ದೇವೋ ಭೌಮಾನ್ಯಂ ಭಾಂಸಿ ತೇಷು ವೈ ।
ಕೃತತ್ರೇತಾದಿಕಾನ್ನೈವ ತೇಷು ಸ್ಥಾನೇಷು ಕಲ್ಪನಾ ॥ ೫೫ ॥

ಸರ್ವೇಷ್ವೇತೇಷು ವರ್ಷೇಷು ಸಪ್ತಸಪ್ತಕುಲಾಚಲಾಃ ।
ನದ್ಯಶ್ಚ ಶತಶಸ್ತೇಭ್ಯಃ ಪ್ರಸೂತಾ ಯಾ ದ್ವಿಜೋತ್ತಮ ॥ ೫೬ ॥

ಇತಿ ಶ್ರೀ ವಿಷ್ಣುಪುರಾಣೆ ದ್ವಿತೀಯಾಂಶೇ ದ್ವಿತೀಯೋಽಧ್ಯಾಯಃ

೫೩-೫೪. ಕಿಂಪುರುಷಾದಿ ಎಂಟು ವರ್ಷಗಳಲ್ಲಿ ವಾಸಿಸುವವರಿಗೆ ದುಃಖ, ಆಯಾಸ, ಭಯ, ಹಸಿವು ಮುಂತಾದುವುಗಳಿರುವುದಿಲ್ಲ. ಅಲ್ಲಿರುವ ಪ್ರಜೆಗಳೆಲ್ಲರೂ ನಿರಾತಂಕವಾಗಿ ಸುಖವಾಗಿ ಯಾವ ದುಃಖಗಳೂ ಇಲ್ಲದೆ ಹತ್ತು ಹನ್ನೆರಡು ಸಾವಿರ ವರ್ಷಗಳವರೆಗೆ ಜೀವಿಸಿರುವರು.

೫೫-೫೬. ಅವುಗಳಲ್ಲಿ ಮಳೆ ಬೀಳುವುದಿಲ್ಲ. ಭೂಮಿಯಲ್ಲಿಯೇ ನೀರು ಯಾವಾಗಲೂ ಇರುವುದು. ಅಲ್ಲಿ ಕೃತ, ತ್ರೇತಾದಿಗಳ ಕಾಲ ನಿಯಮವೂ ಇರುವುದಿಲ್ಲ. ಪ್ರತಿಯೊಂದು ವರ್ಷದಲ್ಲಿಯೂ ಏಳುಏಳು ಕುಲಪರ್ವತಗಳು ಇರುವುವು. ಆ ಪರ್ವತಗಳಿಂದ ನೂರಾರು ಹೊಳೆಗಳು ಹರಿದು ಬರುವುವು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ
ಎರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ತೃತೀಯೋಽಧ್ಯಾಯಃ

॥ ಪರಾಶರ ಉವಾಚ ॥

ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಂ ।
ವರ್ಷಂ ತದ್ಭಾರತಂ ನಾಮ ಭಾರತೀ ಯತ್ರ ಸಂತತಿಃ ॥ ೧ ॥

ನವಯೋಜನಸಾಹಸ್ರೋ ವಿಸ್ತಾರೋಽಸ್ಯ ಮಹಾಮುನೇ ।
ಕರ್ಮಭೂಮಿರಿಯಂ ಸ್ವರ್ಗಮಪವರ್ಗಂ ಚ ಗಚ್ಛತಾಂ ॥ ೨ ॥

ಮೂರನೆಯ ಅಧ್ಯಾಯವು

೧-೨. ಮೈತ್ರೇಯ ಮುನಿಯೇ! ಹಿಮವತ್ಪರ್ವತಕ್ಕೆ ದಕ್ಷಿಣದಲ್ಲಿಯೂ ಸಮುದ್ರಕ್ಕೆ ಉತ್ತರದಲ್ಲಿಯೂ ಇರುವ ಭೂಮಿಯೇ ಭಾರತ ವರ್ಷವು. ಭರತನ ಸಂತತಿಯ ಜನರು ಅಲ್ಲಿ ವಾಸವಾಗಿರುವರು. ಇದು ಒಂಭತ್ತುಸಾವಿರ ಯೋಜನ ವಿಸ್ತಾರವಾಗಿರುವುದು. ಸ್ವರ್ಗ ಮೋಕ್ಷಗಳನ್ನು ಪಡೆಯಬೇಕೆಂಬ ಜನರಿಗೆ ಇದು ಅವುಗಳನ್ನು ಸಾಧಿಸುವ ಕರ್ಮಭೂಮಿಯಾಗಿರುವುದು. (ಕಿಂಪುರುಷಾದಿ ಎಂಟು ವರ್ಷಗಳಲ್ಲಿಯೂ ಪುಷ್ಕರ ದ್ವೀಪದಲ್ಲಿಯೂ ವಾಸಿಸುತ್ತಿರುವವರಿಗೆ ಕರ್ಮಗಳ ಅನುಷ್ಠಾನವಿಲ್ಲ. ಪ್ಲಕ್ಷಾದಿ ಐದು ದ್ವೀಪವಾಸಿಗಳು ನಿವೃತ್ತಿರೂಪವಾದ ಕರ್ಮವುಳ್ಳವರಾದುದರಿಂದ ಅವರು ಏಕಾಗ್ರಚಿತ್ತದಿಂದ ಧ್ಯಾನಾಸಕ್ತರಾಗಿರುವರು.)

ಮಹೇಂದ್ರೋ ಮಲಯಸ್ಸಹ್ಯಃ ಶುಕ್ತಿಮಾನೃಕ್ಷಪರ್ವತಃ ।
ವಿಂಧ್ಯಶ್ಚ ಪಾರಿಯಾತ್ರಶ್ಚ ಸಪ್ತಾತ್ರ ಕುಲಪರ್ವತಾಃ ॥ ೩ ॥
ಅತಃ ಸಂಪ್ರಾಪ್ಯತೇ ಸ್ವರ್ಗೋ ಮುಕ್ತಿಮಸ್ಮಾತ್ಪ್ರಯಾಂತಿ ಚ ।
ತಿರ್ಯಕ್ತ್ವಂ ನರಕಂ ವಾ ಪಿ ಯಾಂತ್ಯತಃ ಪುರುಷಾ ಮುನೇ ॥ ೪ ॥
ಇತಸ್ಸ್ವರ್ಗಶ್ಚ ಮೋಕ್ಷಶ್ಚ ಮಧ್ಯಶ್ಚಾಂತಶ್ಚ ಗಮ್ಯತೇ ।
ನ ಖಲ್ವನ್ಯತ್ರ ಮರ್ತ್ಯಾನಾಂ ಕರ್ಮಭೂಮೌ ವಿಧೀಯತೇ ॥ ೫ ॥
ಭಾರತಸ್ಯಾಸ್ಯ ವರ್ಷಸ್ಯ ನವಭೇದಾನ್ನಿಶಾಮಯ ।
ಇಂದ್ರದ್ವೀಪಃ ಕಶೇರುಶ್ಚ ತಾಮ್ರಪರ್ಣೋ ಗಭಸ್ತಿಮಾನ್ ॥ ೬ ॥
ನಾಗದ್ವೀಪಸ್ತಥಾ ಸೌಮ್ಯೋ ಗಾಂಧರ್ವಸ್ತ್ವಥವಾರುಣಃ ।
ಅಯಂ ತು ನವಮಸ್ತೇಷಾಂ ದ್ವೀಪಸ್ಸಾಗರಸಂವೃತಃ ॥ ೭ ॥

೩-೫. ಭಾರತವರ್ಷದಲ್ಲಿ ಪುರುಷಾರ್ಥಸಾಧನೆಗೆ ಕಾರಣವಾದ ಗಂಗಾದಿ ಪುಣ್ಯನದಿಗಳಿಗೆ ಉತ್ಪತ್ತಿಸ್ಥಾನವಾದ ಮಹೇಂದ್ರಮಲಯ, ಸಹ್ಯ, ಶುಕ್ತಿಮಂತ ಋಕ್ಷ ವಿಂಧ್ಯ, ಪಾರಿಯಾತ್ರ ಎಂಬ ಸಪ್ತಕುಲ ಪರ್ವತಗಳಿರುವುವು. ಇಲ್ಲಿ ಶುಭಾಶುಭ ಕರ್ಮಗಳನ್ನು ಮಾಡುವುದರಿಂದ ಸ್ವರ್ಗಮೋಕ್ಷಗಳೂ, ತಿರ್ಯಗ್ಯೋನಿ ಪ್ರಾಪ್ತಿ ಮತ್ತು ನರಕವಾಸಗಳೂ ಜನರಿಗೆ ಲಭಿಸುವುವು. ಇಲ್ಲಿರುವ ಜನರೇ ಶಾಸ್ತ್ರವಿಹಿತವಾದ ಕರ್ಮಗಳನ್ನು ಮಾಡಿ ಭೂಮಿಯಲ್ಲಿಯೇ ಇಳಾವೃತಾದಿ ವರ್ಷಗಳಲ್ಲಿ ವಾಸಮಾಡುವ ಸ್ವರ್ಗಸುಖವನ್ನೂ ಮುಕ್ತಿಯನ್ನೂ ಅಂತರಿಕ್ಷ ಲೋಕ ಮತ್ತು ಪಾತಾಳಲೋಕವಾಸವನ್ನೂ ಪಡೆವರು. ಬೇರೆ ವರ್ಷಗಳಲ್ಲಿ ಜನರಿಗೆ ಶಾಸ್ತ್ರಗಳು ಕರ್ಮಗಳನ್ನು ವಿಧಿಸಿರುವುದಿಲ್ಲ.

೬-೯. ಈ ಭಾರತವರ್ಷವು ಇಂದ್ರದ್ವೀಪ, ಕಶೇರು, ತಾಮ್ರ, ಗಭಸ್ತಿ, ನಾಗದ್ವೀಪ, ಸೌಮ್ಯ ಗಾಂಧರ್ವ, ವಾರುಣ, ಸಾಗರದ್ವೀಪ, ಎಂಬ ಒಂಭತ್ತು

ಯೋಜನಾನಾಂ ಸಹಸ್ರಂ ತು ದ್ವೀಪೋಽಯಂ ದಕ್ಷಿಣೋತ್ತರಾತ್ ।
ಪೂರ್ವೇ ಕಿರಾತಾ ಯಸ್ಯ ಸ್ಯುಃ ಪಶ್ಚಿಮೇ ಯವನಾಃ ಸ್ಥಿತಾಃ ॥ ೮ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಮಧ್ಯೇಶೂದ್ರಾಶ್ಚ ಭಾಗಶಃ ।
ಇಜ್ಯಾ ಯುದ್ಧವಣಿಜ್ಯಾದ್ಯೈಃ ವರ್ತಯಂತೋ ವ್ಯವಸ್ಥಿತಾಃ ॥ ೯ ॥

ಶತದ್ರೂ ಚಂದ್ರ ಭಾಗಾದ್ಯಾ ಹಿಮವತ್ಪಾದನಿಸ್ಸೃತಾಃ ।
ವೇದಸ್ಮೃತಿಮುಖಾಶ್ಚಾನ್ಯಾಃ ಪಾರಿಯಾತ್ರೋದ್ಭವಾ ಮುನೇ ॥ ೧೦ ॥

ನರ್ಮದಾ ಸುರಸಾದ್ಯಾಶ್ಚ ನದ್ಯೋ ವಿಂಧ್ಯವಿನಿರ್ಗತಾಃ ।
ತಾಪೀ ಪಯೋಷ್ಣೀ ನಿರ್ವಿಂಧ್ಯಾ ಪ್ರಮುಖಾ ಋಕ್ಷಸಂಭವಾಃ ॥ ೧೧ ॥

ಗೋದಾವರೀ ಭೀಮರಥೀ ಕೃಷ್ಣವೇಣ್ಯಾದಿಕಾಸ್ತಥಾ ।
ಸಹ್ಯಪಾದೋದ್ಭವಾ ನದ್ಯಃ ಸ್ಮೃತಾಃ ಪಾಪಭಯಾಪಹಾಃ ॥ ೧೨ ॥

ಭಾಗವಾಗಿರುವುದು. ಸಾಗರದ್ವೀಪವು ಉತ್ತರದಿಂದ ದಕ್ಷಿಣಕ್ಕೆ ಒಂದು ಸಾವಿರ ಯೋಜನ ಉದ್ದವಿರುವುದು. ಈ ದ್ವೀಪದ ಪೂರ್ವದಿಕ್ಕಿನಲ್ಲಿ ಕಿರಾತರೂ, ಪಶ್ಚಿಮ ದಿಕ್ಕಿನಲ್ಲಿ ಯವನರೂ ವಾಸಿಸುವರು. ನಡುವೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ, ಶೂದ್ರ, ವರ್ಣದವರೂ ತಮ್ಮ ವೃತ್ತಿಯನ್ನು ಅಂದರೆ ಯಾಗ, ಯುದ್ಧ ವಾಣಿಜ್ಯಾದಿಗಳನ್ನು ನಡೆಸುತ್ತಿರುವರು.

೧೦–೧೪. ಶತದ್ರೂ, ಚಂದ್ರಭಾಗಾ ಮುಂತಾದ ನದಿಗಳು ಹಿಮವತ್ಪರ್ವತ ದಿಂದ ಹರಿದುಬರುವುವು. ವೇದಸ್ಮೃತಿ ಮುಂತಾದ ನದಿಗಳು ಪಾರಿಯಾತ್ರ ಪರ್ವತ ದಲ್ಲಿ ಹುಟ್ಟುವುವು. ನರ್ಮದಾ ಸುರಸಾ ಮುಂತಾದ ನದಿಗಳು ವಿಂಧ್ಯಪರ್ವತದಿಂದ ಹರಿದುಬರುವುವು. ತಾಪೀ, ಪಯೋಷ್ಣೀ, ನಿರ್ವಿಂಧ್ಯಾ ಮುಂತಾದ ನದಿಗಳು ಋಕ್ಷಪರ್ವತದಲ್ಲಿ ಹುಟ್ಟುವುವು. ಗೋದಾವರೀ, ಭೀಮರಥೀ, ಕೃಷ್ಣವೇಣೀ, ಮುಂತಾದ ನದಿಗಳು ಸಹ್ಯಪರ್ವತದಲ್ಲಿ ಹುಟ್ಟಿ ತಮ್ಮಲ್ಲಿ ಸ್ನಾನಮಾಡಿದವರಿಗೆ ಪಾಪ ಭಯವಿಲ್ಲದಂತೆ ಮಾಡುವುವು. ಕೃತಮಾಲಾ ತಾಮ್ರಪರ್ಣೀಮುಂತಾದ ನದಿಗಳೂ ಮಲಯಪರ್ವತದಲ್ಲಿ ಹುಟ್ಟುವುವು. ತ್ರಿಸಾಮಾ, ಋಷಿಕುಲ್ಯಾ, ಮುಂತಾದ

ಕೃತಮಾಲಾ ತಾಮ್ರಪರ್ಣೀಪ್ರಮುಖಾ ಮಲಯೋದ್ಭವಾಃ ।
ತ್ರಿಸಾಮಾ ಋಷಿಕುಲ್ಯಾದ್ಯಾ ಮಹೇಂದ್ರಪ್ರಭವಾಃ ಸ್ಮೃತಾಃ ॥ ೧೩ ॥

ಋಷಿಕುಲ್ಯಾ ಕುಮಾರಾದ್ಯಾಃ ಶುಕ್ತಿಮತ್ಪಾದಸಂಭವಾಃ ।
ಆಸಾಂ ನದ್ಯುಪನದ್ಯಶ್ಚ ಸಂತ್ಯನ್ಯಾಶ್ಚ ಸಹಸ್ರಶಃ ॥ ೧೪ ॥

ತಾಸ್ವಿಮೇ ಕುರುಪಾಂಚಾಲಾ ಮಧ್ಯದೇಶಾದಯೋಜನಾಃ ।
ಪೂರ್ವದೇಶಾದಿಕಾಶ್ಚೈವ ಕಾಮರೂಪನಿವಾಸಿನಃ ॥ ೧೫ ॥

ಆಂಧ್ರಾಃ ಕಲಿಂಗಾಃ ಮಗಧಾ ದಾಕ್ಷಿಣಾತ್ಯಾಶ್ಚ ಕೃತ್ಸ್ನಶಃ ।
ತಥಾಪರಾಂತಾಃ ಸೌರಾಷ್ಟ್ರಾಃ ಶೂದ್ರಾ ಭೀರಾಶ್ಚ ಬರ್ಬರಾಃ ॥ ೧೬ ॥

ಮಾರುಕಾ ಮಾಲವಾಶ್ಚೈವ ಪಾರಿಯಾತ್ರನಿವಾಸಿನಃ ।
ಸೌವೀರಾಃ ಸೈಂಧವಾ ಹೂಣಾಃ ಸಾಲ್ವಾಃ ಕೋಸಲವಾಸಿನಃ ॥ ೧೭ ॥

ಮದ್ರಾ ರಾಮಾಸ್ತಥಾಂಬಷ್ಠಾಃ ಪಾರಸೀಕಾದಯಸ್ತಥಾ ।
ಆಸಾಂ ಪಿಬಂತಿ ಸಲಿಲಂ ವಸಂತಿ ಸರಿತಾಂ ಸದಾ ॥ ೧೮ ॥

ನದಿಗಳು ಮಹೇಂದ್ರಪರ್ವತದಲ್ಲಿ ಹುಟ್ಟುವುವು. ಋಷಿಕುಲ್ಯಾ, ಕುಮಾರಾ ಮುಂತಾದ ನದಿಗಳು ಶುಕ್ತಿಮತ್ಪರ್ವತದ ತಪ್ಪಲಿನಲ್ಲಿ ಹುಟ್ಟುವುವು. ಈ ನದಿಗಳಿಗೆ ಸಾವಿರಾರು ಉಪನದಿಗಳೂ ಇರುವುವು.

೧೫-೧೮. ಆ ನದಿಯ ತೀರದಲ್ಲಿ ಕುರು, ಪಾಂಚಾಲ, ಮಧ್ಯದೇಶ, ಪೂರ್ವದೇಶ, ಕಾಮರೂಪ, ಆಂಧ್ರ, ಕಳಿಂಗ, ಮಗಧ, ದಾಕ್ಷಿಣಾತ್ಯ, ಸೌರಾಷ್ಟ್ರ, ಶೂದ್ರ, ಆಭೀರ, ಬರ್ಬರ, ಮಾರುಕ, ಮಾಳವ, ಪಾರಿಯಾತ್ರ, ಸೌವೀರ, ಸೈಂಧವ, ಹೂಣ, ಸಾಲ್ವ, ಕೋಸಲ, ಮದ್ರ, ಆರಾಮ, ಅಂಭಷ್ಠ, ಪಾರಸೀಕ ಮುಂತಾದ ದೇಶದ ಜನರು ವಾಸಮಾಡುತ್ತ ಅವುಗಳ ನೀರನ್ನು ಕುಡಿಯುತ್ತ ಎಲ್ಲರೂ ಸಮಾನಭಾವದಿಂದ ಕೂಡಿ ಪುಷ್ಟರಾಗಿ ಸಂತೋಷದಿಂದಿರುವರು.

ಸಮಾನತೋ ಮಹಾಭಾಗ ಹೃಷ್ಟಪುಷ್ಟಜನಾಕುಲಾಃ ।
ಚತ್ವಾರಿ ಭಾರತೇ ವರ್ಷೇ ಯುಗಾನ್ಯತ್ರ ಮಹಾಮುನೇ ॥ ೧೯ ॥

ಕೃತಂ ತ್ರೇತಾ ದ್ವಾಪರಶ್ಚ ಕಲಿಶ್ಚಾನ್ಯತ್ರ ನ ಕ್ವಚಿತ್ ।
ತಪಸ್ತಪ್ಯಂತಿ ಯತಯೋ ಜುಹ್ವತೇ ಚಾತ್ರ ಯಜ್ವನಃ ॥ ೨೦ ॥

ದಾನಾನಿ ಚಾತ್ರ ದೀಯಂತೆ ಪರಲೋಕಾರ್ಥಮಾದರಾತ್ ।
ಪುರುಷೈರ್ಯಜ್ಞಪುರುಷೋ ಜಂಬೂದ್ವೀಪೇ ಸದೇಜ್ಯತೇ ।
ಯಜ್ಞೈರ್ಯಜ್ಞಮಯೋ ವಿಷ್ಣುರನ್ಯದ್ವೀಪೇಷು ಚಾನ್ಯಥಾ ॥ ೨೧ ॥

ಅತ್ರಾಪಿ ಭಾರತಂ ಶ್ರೇಷ್ಠಂ ಜಂಬೂದ್ವೀಪೇ ಮಹಾಮುನೇ ।
ಯತೋಹಿ ಕರ್ಮಭೂರೇಷಾ ಹ್ಯತೋಽನ್ಯಾ ಭೋಗಭೂಮಯಃ ॥೨೨॥

ಅತ್ರ ಜನ್ಮಸಹಸ್ರಾಣಾಂ ಸಹಸ್ರೈರಪಿ ಸತ್ತಮ ।
ಕದಾಚಿಲ್ಲಭತೇ ಜಂತುರ್ಮಾನುಷ್ಯಂ ಪುಣ್ಯಸಂಚಯಾತ್ ॥ ೨೩ ॥

೧೯-೨೦. ಭಾರತವರ್ಷದಲ್ಲಿ ಕೃತ, ತ್ರೇತ, ದ್ವಾಪರ, ಕಲಿ ಎಂಬ ನಾಲ್ಕು ಯುಗಗಳ ಧರ್ಮವು ನಡೆವುದು. ಮಿಕ್ಕೆಡೆಗಳಲ್ಲಿ ಯುಗವ್ಯವಸ್ಥೆಯಿಲ್ಲ. ಇಲ್ಲಿ ಯತಿಗಳು ತಪಸ್ಸು ಮಾಡುವರು. ಗೃಹಸ್ಥರು ಯಜ್ಞಮಾಡುವರು. ಪರಲೋಕ ಸುಖಕ್ಕಾಗಿ ಜನರೆಲ್ಲರೂ ದಾನಗಳನ್ನು ಮಾಡುವರು.

೨೧-೨೩. ಜಂಬೂದ್ವೀಪದ ಜನರು ಯಜ್ಞಪುರುಷನಾದ ವಿಷ್ಣುವನ್ನು ಯಾವಾಗಲೂ ಪೂಜಿಸುತ್ತಿರುವರು. ಯಜ್ಞಗಳಿಂದ ಯಜ್ಞಸ್ವರೂಪನಾದ ಅವನನ್ನು ತೃಪ್ತಿಪಡಿಸುವರು. ಮಿಕ್ಕ ದ್ವೀಪಗಳಲ್ಲಿ ಸೋಮ, ವಾಯು, ಸೂರ್ಯಾದಿ ದೇವತೆಗಳನ್ನು ಪೂಜಿಸುವರು. ಈ ಜಂಬೂದ್ವೀಪದಲ್ಲಿ ಭಾರತವರ್ಷವು ಅತ್ಯಂತ ಶ್ರೇಷ್ಠವಾದುದು. ಇದು ಕರ್ಮಭೂಮಿಯು. ಮಿಕ್ಕ ವರ್ಷಗಳು ಭೋಗ ಭೂಮಿಗಳು. ಜೀವನು ಪಡೆವ ಅನೇಕ ಸಾವಿರ ಜನ್ಮಗಳಲ್ಲಿ ಪುಣ್ಯದಿಂದ ಯಾವುದೋ ಒಂದು ಕಾಲದಲ್ಲಿ ಈ ಭಾರತವರ್ಷದಲ್ಲಿ ಮನುಷ್ಯ ಜನ್ಮವನ್ನು ಪಡೆವನು.

ಗಾಯಂತಿ ದೇವಾಃ ಕಿಲ ಗೀತಕಾನಿ
ಧನ್ಯಾಸ್ತು ಯೇ ಭಾರತಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಹೇತುಭೂತೇ
ಭವಂತಿ ಭೂಯಃ ಪುರುಷಾಸ್ಸುರತ್ವಾತ್ ॥ ೨೪ ॥

ಕರ್ಮಾಣ್ಯಸಂಕಲ್ಪಿತತತ್ಫಲಾನಿ
ಸಂನ್ಯಸ್ಯ ವಿಷ್ಣೌ ಪರಮಾತ್ಮರೂಪೇ ।
ಅವಾಪ್ಯತಾಂ ಕರ್ಮಮಹೀಮನಂತೇ
ತಸ್ಮಿನ್ ಲಯಂ ಯೇ ತ್ವಮಲಾಃ ಪ್ರಯಾಂತಿ ॥ ೨೫ ॥

ಜಾನೀಮ ನೈತತ್ಕ್ವ ವಯಂ ವಿಲೀನೈಃ
ಸ್ವರ್ಗಪ್ರದೇ ಕರ್ಮಣಿ ದೇಹ ಬಂಧಂ ।
ಪ್ರಾಪ್ಸ್ಯಾಮ ಧನ್ಯಾಃ ಖಲು ತೇ ಮನುಷ್ಯಾಃ
ಯೇ ಭಾರತೇ ನೇಂದ್ರಿಯವಿಪ್ರಹೀನಾಃ ॥ ೨೬ ॥

೨೪-೨೬. "ಭಾರತ ಭೂಮಿಯಲ್ಲಿ ಯಾರು ಮನುಷ್ಯ ಜನ್ಮವನ್ನು ಪಡೆವರೋ ಅವರೇ ಪುಣ್ಯವಂತರು. ಆ ಭೂಮಿಯು ಸ್ವರ್ಗ ಮೋಕ್ಷಗಳನ್ನು ಪಡೆವುದಕ್ಕೆ ದಾರಿಯಾದುದರಿಂದ ಅಲ್ಲಿ ಹುಟ್ಟುವ ಮನುಜರು ದೇವತೆಗಳಿಗಿಂತ ಹೆಚ್ಚು ಪುಣ್ಯವಂತರು. ಅವರು ಫಲಾಪೇಕ್ಷೆಯಿಲ್ಲದೆ ಕರ್ಮಗಳನ್ನು ಮಾಡಿ ಅವುಗಳ ಫಲಗಳನ್ನು ಪರಮಾತ್ಮನಾದ ವಿಷ್ಣುವಿಗೆ ಸಮರ್ಪಿಸಿ ಪರಿಶುದ್ಧರಾಗಿ ಆ ದೇವರಲ್ಲಿಯೇ ಐಕ್ಯರಾಗುವರು. ಸ್ವರ್ಗಸುಖವನ್ನನುಭವಿಸುವ ಕರ್ಮಫಲವು ಮುಗಿದುಹೋದ ಮೇಲೆ ನಾವೆಲ್ಲಿ ಮತ್ತೆ ಹುಟ್ಟುವೆವೋ ಕಾಣೆವು. ಭಾರತ ಭೂಮಿಯಲ್ಲಿ ಅಂಗಹೀನರಾಗದೆ ಎಲ್ಲ ಇಂದ್ರಿಯ ಶಕ್ತಿಗಳಿಂದ ಕೂಡಿದ ಮನುಜರೇ ಪುಣ್ಯವಂತರು. ಅವರಿಗೆ ಅನಾಯಾಸವಾಗಿ ಮೋಕ್ಷವು ದೊರೆವುದು." ಎಂದು ದೇವತೆಗಳು ಭಾರತ ವರ್ಷವಾಸದ ಮಹಿಮೆಯನ್ನು ಗಾನಮಾಡುತ್ತಿರುವರು.

ನವವರ್ಷಂ ತು ಮೈತ್ರೇಯ ಜಂಬೂದ್ವೀಪಮಿದಂ ಮಯಾ ।
ಲಕ್ಷಯೋಜನವಿಸ್ತಾರಂ ಸಂಕ್ಷೇಪಾತ್ಕಥಿತಂ ತವ　　　॥ ೨೭ ॥

ಜಂಬೂದ್ವೀಪಂ ಸಮಾವೃತ್ಯ ಲಕ್ಷಯೋಜನವಿಸ್ತರಃ ।
ಮೈತ್ರೇಯ ವಲಯಾಕಾರಃ ಸ್ಥಿತಃಕ್ಷಾರೋ ದಧಿರ್ಬಹಿಃ　　　॥ ೨೮ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ತೃತೀಯೋಽಧ್ಯಾಯಃ

೨೭-೨೮. ಮೈತ್ರೇಯನೇ, ಲಕ್ಷ ಯೋಜನ ವಿಸ್ತೀರ್ಣವುಳ್ಳ ಜಂಬೂ ದ್ವೀಪದ ಒಂಭತ್ತು ವರ್ಷಗಳ ವಿಚಾರವನ್ನು ಸಂಗ್ರಹವಾಗಿ ಹೇಳಿರುವೆನು. ಲಕ್ಷ ಯೋಜನ ವಿಸ್ತಾರವುಳ್ಳ ಲವಣಸಮುದ್ರವು ಈ ಜಂಬೂದ್ವೀಪವನ್ನು ಸುತ್ತಲೂ ಆವರಿಸಿಕೊಂಡಿರುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಮೂರನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ಚತುರ್ಥೋಽಧ್ಯಾಯಃ

॥ ಪರಾಶರ ಉವಾಚ ॥

ಕ್ಷಾರೋದೇನ ಯಥಾ ದ್ವೀಪೋ ಜಂಬೂಸಂಜ್ಞೋಽಭಿವೇಷ್ಟಿತಃ ।
ಸಂವೇಷ್ಟ್ಯ ಕ್ಷಾರಮುದಧಿಂ ಪ್ಲಕ್ಷದ್ವೀಪಸ್ತಥಾ ಸ್ಥಿತಃ ॥ ೧ ॥

ಜಂಬೂದ್ವೀಪಸ್ಯ ವಿಸ್ತಾರಃ ಶತಸಾಹಸ್ರಸಂಮಿತಃ ।
ಸ ಏವ ದ್ವಿಗುಣೋ ಬ್ರಹ್ಮನ್ ಪ್ಲಕ್ಷದ್ವೀಪ ಉದಾಹೃತಃ ॥ ೨ ॥

ಸಪ್ತ ಮೇಧಾತಿಥೇಃ ಪುತ್ರಾಃ ಪ್ಲಕ್ಷದ್ವೀಪೇಶ್ವರಸ್ಯ ವೈ ।
ಜ್ಯೇಷ್ಠಃ ಶಾಂತಹಯೋ ನಾಮ ಶಿಶಿರಸ್ತದನಂತರಃ ॥ ೩ ॥

ಸುಖೋದಯಸ್ತಥಾ ನಂದಃ ಶಿವಃ ಕ್ಷೇಮಕ ಏವ ಚ ।
ಧ್ರುವಶ್ಚ ಸಪ್ತಮಸ್ತೇಷಾಂ ಪ್ಲಕ್ಷದ್ವೀಪೇಶ್ವರಾ ಹಿ ತೇ ॥ ೪ ॥

ಪೂರ್ವಂ ಶಾಂತಹಯಂ ವರ್ಷಂ ಶಿಶಿರಂ ಸುಖದಂ ತಥಾ ।
ಆನಂದಂ ಚ ಶಿವಂ ಚೈವಂ ಕ್ಷೇಮಕಂ ಧ್ರುವಮೇವ ಚ ॥ ೫ ॥

ನಾಲ್ಕನೆಯ ಅಧ್ಯಾಯ

೧-೫. ಜಂಬೂದ್ವೀಪವು ಲವಣಸಮುದ್ರದಿಂದ ಸುತ್ತುಗಟ್ಟಿದಂತೆ ಪ್ಲಕ್ಷ ದ್ವೀಪವು ಲವಣಸಮುದ್ರವನ್ನು ಬಳಸಿರುವುದು. ಜಂಬೂದ್ವೀಪವು ಲಕ್ಷಯೋಜನ ವಿಸ್ತಾರವಿರುವುದು. ಪ್ಲಕ್ಷದ್ವೀಪವು ಎರಡು ಲಕ್ಷ ಯೋಜನ ವಿಸ್ತಾರವಿರುವವು. ಆ ಪ್ಲಕ್ಷದ್ವೀಪಕ್ಕೆ ಮೇಧಾತಿಥಿಯ ಮಕ್ಕಳಾದ ಶಾಂತಹಯ, ಶಿಶಿರ, ಸುಖೋದಯ, ಆನಂದ, ಶಿವ, ಕ್ಷೇಮಕ, ಧ್ರುವ, ಎಂಬ ಏಳು ಜನರು ವರ್ಷಾಧಿಪತಿಗಳಾಗಿ ರುವರು. ಆ ವರ್ಷಗಳಿಗೆ ಇವರ ಹೆಸರೇ ಇರುವುದು.

ಮರ್ಯಾದಾಕಾರಕಾಸ್ತೇಷಾಂ ತಥಾನ್ಯೇ ವರ್ಷಪರ್ವತಾಃ ।
ಸಪ್ತೈವ ತೇಷಾಂ ನಾಮಾನಿ ಶೃಣುಷ್ವ ಮುನಿಸತ್ತಮ ॥ ೬ ॥

ಗೋಮೇಧಶ್ಚೈವ ಚಂದ್ರಶ್ಚ ನಾರದೋ ದುಂದುಭಿಸ್ತಥಾ ।
ಸೋಮಕಸ್ಸುಮನಾಃ ಶೈಲೋ ವೈಭ್ರಾಜಶ್ಚೈವ ಸಪ್ತಮಃ ॥ ೭ ॥

ವರ್ಷಾಚಲೇಷು ರಮ್ಯೇಷು ವರ್ಷೇಷ್ವೇತೇಷು ಸತ್ತಮ ।
ವಸಂತಿ ದೇವಗಂಧರ್ವಸಹಿತಾಃ ಸತತಂ ಪ್ರಜಾಃ ॥ ೮ ॥

ತೇಷು ಪುಣ್ಯಾ ಜನಪದಾಶ್ಚಿರಾಚ್ಚ ಮ್ರಿಯತೇ ಜನಃ ।
ನಾಧಯೋ ವ್ಯಾಧಯೋ ವಾಪಿ ಸರ್ವಕಾಲಸುಖಂ ಹಿ ತತ್ ॥ ೯ ॥

ತೇಷಾಂ ನದ್ಯಶ್ಚ ಸಪ್ತೈವ ವರ್ಷಾಣಾಂ ತು ಸಮುದ್ರ ಗಾಃ ।
ನಾಮತಸ್ತಾಃ ಪ್ರವಕ್ಷ್ಯಾಮಿ ಶ್ರುತಾಃ ಪಾಪಂಹರಂತಿ ಯಾಃ ॥ ೧೦ ॥

ಅನುತಪ್ತಾಶಿಖೀ ಚೈವ ವಿಪಾಪಾ ತ್ರಿದಿವಾ ಕ್ಲಮಾ ।
ಅಮೃತಾ ಸುಕೃತಾ ಚೈವ ಸಪ್ತೈತಾಸ್ತತ್ರ ನಿಮ್ನಗಾಃ ॥ ೧೧ ॥

೬-೧೦. ಆ ವರ್ಷಗಳಿಗೆ ಗೋಮೇಧ ಚಂದ್ರ ನಾರದ ದುಂದುಭಿ ಸೋಮಕ, ಸುಮನ, ವೈಭ್ರಾಜ ಎಂಬ ಏಳು ವರ್ಷ ಪರ್ವತಗಳು ಎಲ್ಲೆಯಾಗಿ ರುವುವು. ಈ ಪರ್ವತಗಳಲ್ಲಿಯೂ, ವರ್ಷ ಭೂಪ್ರದೇಶಗಳಲ್ಲಿಯೂ, ದೇವತೆಗಳೂ, ಗಂಧರ್ವರೂ, ಜನರೂ ವಾಸಿಸುವರು. ಆ ಪುಣ್ಯಕರವಾದ ದೇಶಗಳಲ್ಲಿ ಜನರು ಐದು ಸಾವಿರ ವರ್ಷ ಜೀವಿಸಿರುವರು. ಅವರು ಮನೋವ್ಯಥೆಯಾಗಲಿ, ರೋಗವಾಗಲಿ ಇಲ್ಲದೆ ಯಾವಾಗಲೂ ಸುಖವಾಗಿರುವರು. ಆ ಏಳು ವರ್ಷಗಳಲ್ಲಿಯೂ ಏಳು ನದಿಗಳು ಹರಿದು ಸಮುದ್ರವನ್ನು ಸೇರುವುವು. ಆ ನದಿಗಳ ಹೆಸರನ್ನು ಕೇಳಿದರೆ ಪಾಪಗಳು ನಾಶವಾಗುವುವು.

೧೧-೧೪. ಅನುತಪ್ತಾ, ಶಿಖೀ, ವಿಪಾಪಾ, ತ್ರಿದಿವಾ, ಕ್ಲಮಾ, ಅಮೃತಾ, ಸುಕೃತಾ ಎಂಬ ಎಳು ನದಿಗಳೂ, ಏಳು ಪರ್ವತಗಳೂ ಮುಖ್ಯವಾದುವೆಂದು ನಿನಗೆ

ಏತೇ ಶೈಲಾಸ್ತಥಾ ನದ್ಯಃ ಪ್ರಧಾನಾಃ ಕಥಿತಾಸ್ತವ ।
ಕ್ಷುದ್ರನದ್ಯಸ್ತಥಾ ಶೈಲಾಃ ತತ್ರ ಸಂತಿ ಸಹಸ್ರಶಃ ॥ ೧೨ ॥

ತಾಃ ಪಿಬಂತಿ ಸದಾ ಹೃಷ್ಟಾ ನದೀರ್ಜನಪದಾಸ್ತು ತೇ ।
ಅಪಸರ್ಪಿಣೀ ತೇಷಾಂವ್ಯೈ ನ ಚೈವೋತ್ಸರ್ಪಿಣೀ ದ್ವಿಜ ॥ ೧೩ ॥

ನ ತ್ವೇ ವಾಸ್ತಿ ಯುಗಾವಸ್ಥಾ ತೇಷು ಸ್ಥಾನೇಷು ಸಪ್ತಸು ।
ತ್ರೇತಾಯುಗಸಮಃ ಕಾಲಃ ಸರ್ವದೈವ ಮಹಾಮತೇ ॥ ೧೪ ॥

ಪ್ಲಕ್ಷದ್ವೀಪಾದಿಷು ಬ್ರಹ್ಮನ್ ಶಾಕದ್ವೀಪಾಂತಿಕೇಷು ವೈ ।
ಪಂಚವರ್ಷಸಹಸ್ರಾಣಿ ಜನಾ ಜೀವಂತ್ಯನಾಮಯಾಃ ॥ ೧೫ ॥

ಧರ್ಮಃ ಪಂಚಸ್ವಥೈತೇಷು ವರ್ಣಾಶ್ರಮವಿಭಾಗಶಃ ।
ವರ್ಣಾಸ್ತತ್ರಾಪಿ ಚತ್ವಾರಸ್ತಾನ್ನಿಬೋಧ ವದಾಮಿ ತೇ ॥ ೧೬ ॥

ಆರ್ಯಕಾಃ ಕುರರಾಶ್ಚೈವ ವಿದಿಶ್ಯಾ ಭಾವಿನಸ್ತಥಾ ।
ವಿಪ್ರಕ್ಷತ್ರಿಯ ವೈಶ್ಯಾಸ್ತೇ ಶೂದ್ರಾಶ್ಚ ಮುನಿಸತ್ತಮ ॥ ೧೭ ॥

ಹೇಳಿರುವೆನು. ಇನ್ನೂ ಸಣ್ಣ ನದಿಗಳೂ ಬೆಟ್ಟಗಳೂ ಸಾವಿರಾರು ಇರುವುವು. ಅಲ್ಲಿನ ಜನರು ಆ ನದಿಗಳ ನೀರನ್ನು ಕುಡಿದು ಸಂತೋಷಚಿತ್ತರಾಗಿರುವರು. ಆ ಜನರಿಗೆ ಯುಗ ಸಂಬಂಧವಾದ ವೃದ್ಧಿಕ್ಷಯಗಳಿಲ್ಲ. ಏಳು ವರ್ಷಗಳಲ್ಲಿಯೂ ಮೂರು ಪಾಲು ಧರ್ಮವೂ ಸಸ್ಯಾದಿ ಸಮೃದ್ಧಿಯೂ ತ್ರೇತಾಯುಗದಂತೆ ಯಾವಾಗಲೂ ಇರುವುದು. (ಭಾರತ ವರ್ಷದಲ್ಲಿ ಕೃತಯುಗ ಮೊದಲಾಗಿ ತ್ರೇತಾಯುಗದ ಕೊನೆಯ ವರೆಗೆ ಪ್ರಜೆಗಳಿಗೆ ಉತ್ತರೋತ್ತರ ಅಭಿವೃದ್ಧಿಯೂ, ದ್ವಾಪರ ಮೊದಲಾಗಿ ಕಲಿಯ ಕೊನೆಯವರೆಗೆ ಕ್ಷೀಣತೆಯೂ ಇರುವುದು.)

೧೫–೨೦. ಪ್ಲಕ್ಷದ್ವೀಪ ಮೊದಲಾಗಿ ಶಾಕದ್ವೀಪಾಂತವಾಗಿ ವಾಸಿಸುವ ಜನರೆಲ್ಲರೂ ರೋಗಾದಿಗಳಿಲ್ಲದೆ ಐದು ಸಾವಿರ ವರ್ಷಗಳವರೆಗೆ ಜೀವಿಸಿರುವರು. ಪ್ಲಕ್ಷಾದಿಯಾದ ಐದು ದ್ವೀಪಗಳಲ್ಲಿ ವರ್ಣಾಶ್ರಮ ಧರ್ಮಗಳಿರುವುವು. ಆರ್ಯಕರು

ಜಂಬೂವೃಕ್ಷಪ್ರಮಾಣಸ್ತು ತನ್ಮಧ್ಯೇ ಸುಮಹಾಂಸ್ತರುಃ ।
ಪ್ಲಕ್ಷಸ್ತನ್ನಾಮ ಸಂಜ್ಞೋಯಂ ಪ್ಲಕ್ಷದ್ವೀಪೋ ದ್ವಿಜೋತ್ತಮ ॥ ೧೮ ॥

ಇಜ್ಯತೇ ತತ್ರ ಭಗವಾನ್ ತ್ರೈರ್ವರ್ಣೈರಾರ್ಯಕಾದಿಭಿಃ ।
ಸೋಮರೂಪೀ ಜಗತ್ಸ್ರಷ್ಟಾ ಸರ್ವಃ ಸರ್ವೇಶ್ವರೋಹರಿಃ ॥ ೧೯ ॥

ಪ್ಲಕ್ಷದ್ವೀಪಪ್ರಮಾಣೇನ ಪ್ಲಕ್ಷದ್ವೀಪಸ್ಸಮಾವೃತಃ ।
ತಥೈವೇಕ್ಷುರಸೋದೇನ ಪರಿವೇಷಾನುಕಾರಿಣಾ ॥ ೨೦ ॥

ಇತ್ಯೇತ ತ್ತವ ಮೈತ್ರೇಯ ಪ್ಲಕ್ಷದ್ವೀಪ ಉದಾಹೃತಃ ।
ಸಂಕ್ಷೇಪೇಣ ಮಯಾ ಭೂಯಃ ಶಾಲ್ಮಲಂ ಮೇ ನಿಶಾಮಯ ॥ ೨೧ ॥

ಶಾಲ್ಮಲಸ್ಯೇಶ್ವರೋ ವೀರೋ ವಪುಷ್ಮಾನ್ ತತ್ಸುತಾನ್ ಶೃಣು ।
ತೇಷಾಂ ತು ನಾಮಸಂಜ್ಞಾನಿ ಸಪ್ತವರ್ಷಾಣಿ ತಾನಿ ವೈ ॥ ೨೨ ॥

ಶ್ವೇತೋಽಥ ಹರಿತಶ್ಚೈವ ಜೀಮೂತೋ ರೋಹಿತಸ್ತಥಾ ।
ವೈದ್ಯುತೋ ಮಾನಸಶ್ಚೈವ ಸುಪ್ರಭಶ್ಚ ಮಹಾಮುನೇ ॥ ೨೩ ॥

ಕುರರರು, ವಿದಿಶ್ಯರು, ಭಾವಿಗಳು ಎಂದು ಬ್ರಹ್ಮ, ಕ್ಷತ್ರ, ವೈಶ್ಯ, ಶೂದ್ರ ವರ್ಣದವರಿಗೆ ಹೆಸರಿರುವುದು. ಪ್ಲಕ್ಷದ್ವೀಪದ ನಡುವೆ ಜಂಬೂ ದ್ವೀಪದಲ್ಲಿರುವ ಜಂಬೂ ವೃಕ್ಷದಂತೆ ದೊಡ್ಡದಾದ ಅರಳಿ (ಪ್ಲಕ್ಷ) ಯ ಮರವಿರುವುದು. ಇದರಿಂದಲೇ ಪ್ಲಕ್ಷದ್ವೀಪವೆಂಬ ಹೆಸರು ಬಂದಿರುವುದು. ಅಲ್ಲಿ ಆರ್ಯಕರೇ ಮೊದಲಾದ ಮೂರು ವರ್ಣದವರು ಚಂದ್ರರೂಪನೂ ಸೃಷ್ಟಿಕರ್ತನೂ ಸರ್ವೇಶ್ವರನೂ ಆದ ಹರಿಯನ್ನು ಪೂಜಿಸುವರು. ಪ್ಲಕ್ಷದ್ವೀಪವನ್ನು ಆ ದ್ವೀಪದಷ್ಟೇ ವಿಸ್ತಾರವಾದ ಕಬ್ಬಿನ ರಸದ ಸಮುದ್ರವು ಸುತ್ತಲೂ ಆವರಿಸಿರುವುದು.

೨೧—೨೫. ಮೈತ್ರೇಯನೇ ಪ್ಲಕ್ಷದ್ವೀಪದ ವಿಷಯವನ್ನು ಸಂಕ್ಷೇಪವಾಗಿ ಹೇಳಿದೆನು. ಶಾಲ್ಮಲಿ ದ್ವೀಪದ ವಿಷಯವನ್ನು ಹೇಳುವೆನು ಕೇಳು. ಶಾಲ್ಮಲಿ ದ್ವೀಪಕ್ಕೆ ವಪುಷ್ಮಂತನು ಅಧಿಪತಿಯು. ಅವನು ಶ್ವೇತ, ಹರಿತ, ಜೀಮೂತ, ರೋಹಿತ,

ಶಾಲ್ಮಲೇನ ಸಮುದ್ರೋಸೌ ದ್ವೀಪೇನೇಕ್ಷುರಸೋದಕಃ ।
ವಿಸ್ತಾರದ್ವಿಗುಣೇನಾಥ ಸರ್ವತಃ ಸಂವೃತಃ ಸ್ಥಿತಃ ॥ ೨೪ ॥

ತತ್ರಾಪಿ ಪರ್ವತಾಃ ಸಪ್ತ ವಿಜ್ಞೇಯಾ ರತ್ನಯೋನಯಃ ।
ವರ್ಷಾಭಿವ್ಯಂಜಕಾಸ್ತೇ ತು ತಥಾ ಸಪ್ತೈವ ನಿಮ್ನಗಾಃ ॥ ೨೫ ॥

ಕುಮುದಶ್ಚೋನ್ನದಶ್ಚೈವ ತೃತೀಯಶ್ಚ ಬಲಾಹಕಃ ।
ದ್ರೋಣೋ ಯತ್ರ ಮಹೌಷಧ್ಯಃ ಸ ಚತುರ್ಥೋ ಮಹೀಧರಃ ॥ ೨೬ ॥

ಕಂಕಸ್ತು ಪಂಚಮಃ ಷಷ್ಠೋ ಮಹಿಷಃ ಸಪ್ತಮಸ್ತಥಾ ।
ಕಕುದ್ಮಾನ್ಪರ್ವತವರಃ ಸರಿನ್ನಾಮಾನಿ ಮೇ ಶೃಣು ॥ ೨೭ ॥

ಯೋನೀ ತೋಯಾ ವಿತೃಷ್ಣಾ ಚ ಚಂದ್ರಾ ಶುಕ್ಲಾ ವಿಮೋಚನೀ ।
ನಿವೃತ್ತಿಃ ಸಪ್ತಮೀ ತಾಸಾಂ ಸ್ಮೃತಾಃ ಸ್ತಾಃ ಪಾಪಶಾಂತಿದಾಃ ॥ ೨೮ ॥

ಶ್ವೇತಂ ಚ ಲೋಹಿತಂ ಚೈವ ಜೀಮೂತಂ ಹರಿತಂ ತಥಾ ।
ವೈದ್ಯುತಂ ಮಾನಸಂ ಚೈವ ಸುಪ್ರಭಂ ಚಾತಿಶೋಭನಂ ॥ ೨೯ ॥

ಸಪ್ತೈತಾನಿ ತು ವರ್ಷಾಣಿ ಚಾತುರ್ವರ್ಣ್ಯಯುತಾನಿ ವೈ ।
ಶಾಲ್ಮಲೇ ಯೇ ತು ವರ್ಣಾಶ್ಚ ವಸಂತ್ಯೇತೇ ಮಹಾಮುನೇ ॥ ೩೦ ॥

ವೈದ್ಯುತ, ಮಾನಸ, ಸುಪ್ರಭ ಎಂಬ ತನ್ನ ಏಳು ಮಕ್ಕಳಿಗೆ ಅವರ ಹೆಸರಿನ ವರ್ಷಗಳನ್ನೇ ವಿಭಾಗ ಮಾಡಿಕೊಟ್ಟನು. ಕಬ್ಬಿನ ರಸದ ಸಮುದ್ರದ ಎರಡರಷ್ಟು ವಿಸ್ತಾರವಾದ ಶಾಲ್ಮಲಿ ದ್ವೀಪವು ಆ ಸಮುದ್ರವನ್ನು ಆವರಿಸಿರುವುದು. ಅಲ್ಲಿಯೂ ವರ್ಷವಿಭಾಗಕ್ಕೆ ಕಾರಣವಾದ ಏಳು ಪರ್ವತಗಳೂ ಏಳು ನದಿಗಳೂ ಇರುವುವು.

೨೬–೩೦. ಕುಮುದ, ಉನ್ನದ, ಬಲಾಹಕ, ಮಹೌಷಧಿಗಳಿರುವ ದ್ರೋಣ, ಕಂಕ, ಮಹಿಷ, ಕಕುದ್ಮಾನ್ ಎಂಬಿವೇ ಪರ್ವತಗಳು. ಯೋನಿ, ತೋಯ, ವಿತೃಷ್ಣಾ, ಚಂದ್ರಾ, ಶುಕ್ಲಾ, ವಿಮೋಚನೀ, ನಿವೃತ್ತಿ ಎಂಬಿವೇ ನದಿಗಳು. ಇವುಗಳ ಸ್ಮರಣೆಯು ಪಾಪನಾಶಕವಾದುದು. ಶ್ವೇತ, ಹರಿತ, ಜೀಮೂತ, ರೋಹಿತ, ವೈದ್ಯುತ

ಕಪಿಲಾಶ್ಚಾರುಣಾಃ ಪೀತಾಃ ಕೃಷ್ಣಾಶ್ಚೈವ ಪೃಥಕ್ ಪೃಥಕ್ ।
ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಶೂದ್ರಾಶ್ಚೈವ ಯಜಂತಿ ತಂ ॥ ೩೧ ॥

ಭಗವಂತಂ ಸಮಸ್ತಸ್ಯ ವಿಷ್ಣುಮಾತ್ಮಾನಮವ್ಯಯಂ ।
ವಾಯುಭೂತಂ ಮಖಶ್ರೇಷ್ಠೈರ್ಯಜ್ವಾನೋ ಯಜ್ಞಸಂಸ್ಥಿತಿಂ ॥ ೩೨ ॥

ದೇವಾನಾಮತ್ರ ಸಾನ್ನಿಧ್ಯಮತೀವ ಸುಮನೋಹರೇ ।
ಶಾಲ್ಮಲಿಶ್ಚ ಮಹಾವೃಕ್ಷೋ ನಾಮನಿರ್ವೃತಿಕಾರಕಃ ॥ ೩೩ ॥

ಏಷದ್ವೀಪಃ ಸಮುದ್ರೇಣ ಸುರೋದೇನ ಸಮಂತತಃ ।
ವಿಸ್ತಾರಾಚ್ಛಾಲ್ಮಲಸ್ಯೈವ ಸಮೇನ ತು ಸಮಾವೃತಃ ॥ ೩೪ ॥

ಸುರೋದಕಃ ಪರಿವೃತಃ ಕುಶದ್ವೀಪೇನ ಸರ್ವತಃ ।
ಶಾಲ್ಮಲಸ್ಯ ತು ವಿಸ್ತಾರಾತ್ ದ್ವಿಗುಣೇನ ಮಹಾಮುನೇ ॥ ೩೫ ॥

ಜ್ಯೋತಿಷ್ಮತಃ ಕುಶದ್ವೀಪೇ ಸಪ್ತಪುತ್ರಾನ್ ಶೃಣುಷ್ವ ತಾನ್ ।
ಉದ್ಭಿದೋ ವೇಣುಮಾಂಶ್ಚೈವ ಸ್ವೈರಥೋ ಲಂಬನೋ ಧೃತಿಃ ॥ ೩೬ ॥

ಮಾನಸ, ಸುಪ್ರಭ ಎಂಬ ಈ ಏಳು ವರ್ಷಗಳಲ್ಲಿಯೂ ಕಪಿಲ, ಅರುಣ, ಪೀತ, ಕೃಷ್ಣ ಎಂಬ ಬ್ರಾಹ್ಮಣಾದಿ ನಾಲ್ಕು ವರ್ಣಗಳಿರುವುವು. ಈ ಜನರು ಸರ್ವಾತ್ಮನೂ ವಾಯು ಸ್ವರೂಪನೂ ಆದ ವಿಷ್ಣುವನ್ನು ಯಜ್ಞಗಳಿಂದ ಆರಾಧಿಸುವರು.

೩೨-೩೩. ಇಲ್ಲಿ ದೇವತೆಗಳ ಸಾನ್ನಿಧ್ಯವು ಮನೋಹರವಾಗಿರುವುದು. ಶಾಲ್ಮಲಿ (ಬೂರುಗ) ಎಂಬ ದೊಡ್ಡ ಮರವು ಇಲ್ಲಿ ಸುಖಕರವಾಗಿರುವುದು. ಈ ದ್ವೀಪವು ಸುರಾ (ಮದ್ಯ) ರಸದ ಸಮುದ್ರದಿಂದ ಆವರಿಸಿರುವುದು. ಆ ಸಮುದ್ರವು ಶಾಲ್ಮಲಿ ದ್ವೀಪದಷ್ಟೇ ವಿಸ್ತಾರವಾಗಿರುವುದು.

೩೪-೪೦. ಸುರೋದಕ (ಮದ್ಯ) ಸಮುದ್ರದ ಸುತ್ತಲೂ ಶಾಲ್ಮಲಿ ದ್ವೀಪದ ಎರಡರಷ್ಟು ವಿಸ್ತಾರವಾದ ಕುಶದ್ವೀಪವಿರುವುದು. ಜ್ಯೋತಿಷ್ಮಂತನು ಅಲ್ಲಿಯ ರಾಜನಾಗಿರುವನು. ಆವನಿಗೆ ಉದ್ಭಿದ ವೇಣುಮಂತ, ಸ್ವೈರಥ, ಲಂಬನ, ಧೃತಿ,

ಪ್ರಭಾಕರೋಽಥ ಕಪಿಲಸ್ತನ್ನಾಮಾ ವರ್ಷಪದ್ಧತಿಃ ।
ತಸ್ಯಾಂ ವಸಂತಿ ಮನುಜಾಃ ಸಹದೈತೇಯ ದಾನವೈಃ ॥ ೩೭ ॥

ತಥೈವ ದೇವಗಂಧರ್ವಯಕ್ಷಕಿಂಪುರುಷಾದಯಃ ।
ವರ್ಣಾಸ್ತತ್ರಾಪಿ ಚತ್ವಾರೋ ನಿಜಾನುಷ್ಠಾನತತ್ಪರಾಃ ॥ ೩೮ ॥

ದಮಿನಃ ಶುಷ್ಮಿಣಸ್ನೇಹಾ ಮಂದೇಹಾಶ್ಚ ಮಹಾಮುನೇ ।
ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಶೂದ್ರಾಶ್ಚಾನು ಕ್ರಮೋದಿತಾಃ ॥ ೩೯ ॥

ಯಥೋಕ್ತಕರ್ಮಕರ್ತೃತ್ವಾತ್ ಸ್ವಾಧಿಕಾರಂಕ್ಷಯಾಯ ತೇ ।
ತತ್ರ ತೇ ತು ಕುಶದ್ವೀಪೇ ಬ್ರಹ್ಮರೂಪಂ ಜನಾರ್ದನಂ ।
ಯಜಂತಃ ಕ್ಷಪಯಂತ್ಯುಗ್ರಮಧಿಕಾರ ಫಲಪ್ರದಂ ॥ ೪೦ ॥

ವಿದ್ರುಮೋ ಹೇಮಶೈಲಶ್ಚ ದ್ಯುತಿಮಾನ್ಪುಷ್ಪವಾಂಸ್ತಥಾ ।
ಕುಶೇಶಯೋ ಹರಿಶ್ಚೈವ ಸಪ್ತಮೋ ಮಂಥರಾಚಲಃ ॥ ೪೧ ॥

ವರ್ಷಾಚಲಾಸ್ತು ಸಪ್ತೈತೇ ತತ್ರ ದ್ವೀಪೇ ಮಹಾಮತೇ ।
ನದ್ಯಶ್ಚ ಸಪ್ತ ತಾಸಾಂ ಚ ಶೃಣು ನಾಮಾನ್ಯನುಕ್ರಮಾತ್ ॥ ೪೨ ॥

ಪ್ರಭಾಕರ, ಕಪಿಲ ಎಂಬ ಏಳು ಜನ ಮಕ್ಕಳು. ಅವರ ಹೆಸರಿನಿಂದಲೇ ವರ್ಷವಿಭಾಗ ವಾಗಿರುವುದು. ಆ ಕುಶದ್ವೀಪದಲ್ಲಿ ದೈತ್ಯರು, ದಾನವರು, ದೇವತೆಗಳು, ಗಂಧರ್ವರು, ಯಕ್ಷರು, ಕಿಂಪುರುಷರು ಮೊದಲಾದವರೊಡನೆ ಮನುಜರೂ ವಾಸಮಾಡುವರು ಅಲ್ಲಿಯೂ ದಮಿಗಳು, ಶುಷ್ಮಿಗಳು, ತೇಹರು, ಮಂದೇಹರು, ಎಂಬ ಬ್ರಾಹ್ಮಣಾದಿ ನಾಲ್ಕು ವರ್ಣದವರಿರುವರು. ಅವರು ತಂತಮ್ಮ ಕರ್ಮಗಳನ್ನು ಮಾಡುತ್ತ ಬ್ರಹ್ಮ ರೂಪನಾದ ಜನಾರ್ದನನನ್ನು ಪೂಜಿಸುತ್ತ ಜ್ಞಾನಪ್ರಾಪ್ತಿಗಾಗಿ ಅಧಿಕಾರ ರೂಪವಾದ ಫಲವನ್ನು ಕೊಡುವ ತಮ್ಮ ರಾಗದ್ವೇಷಾದಿಗಳಿಗೆ ಕಾರಣವಾದ ಕ್ರೂರವಾದ ಕರ್ಮ ಫಲಗಳನ್ನು ನಾಶಮಾಡಿಕೊಳ್ಳುತ್ತಿರುವರು.

೪೧–೪೫. ಕುಶದ್ವೀಪದಲ್ಲಿ ವಿದ್ರುಮ, ಹೇಮಶೈಲ, ದ್ಯುತಿಮಂತ, ಪುಷ್ಪವಂತ ಕುಶೇಶಯ, ಹರಿ, ಮಂಥರಾಚಲ ಎಂಬ ಏಳು ವರ್ಷ ಪರ್ವತಗಳೂ, ಧೂತಪಾಪಾ

ಧೂತಪಾಪಾ ಶಿವಾ ಚೈವ ಪವಿತ್ರಾ ಸುಮತಿಸ್ತಥಾ ।
ವಿದ್ಯುದಂಭಾ ಮಹೀ ಚಾನ್ಯಾ ಸರ್ವ ಪಾಪಹರಾಸ್ತ್ವಿಮಾಃ ॥ ೪೩ ॥

ಅನ್ಯಾಃ ಸಹಸ್ರಶಸ್ತತ್ರ ಕ್ಷುದ್ರನದ್ಯಸ್ತಥಾಚಲಾಃ ।
ಕುಶದ್ವೀಪೇ ಕುಶಸ್ತಂಬ ಸಂಜ್ಞಯಾ ತಸ್ಯ ತತ್ಸ್ಮೃತಂ ॥ ೪೪ ॥

ತತ್ಪ್ರಮಾಣೇನ ಸ ದ್ವೀಪೋ ಘೃತೋದೇನ ಸಮಾವೃತಃ ।
ಘೃತೋದಶ್ಚ ಸಮುದ್ರೋವೈ ಕ್ರೌಂಚದ್ವೀಪೇನ ಸಂವೃತಃ ॥ ೪೫ ॥

ಕ್ರೌಂಚದ್ವೀಪೋ ಮಹಾಭಾಗ ಶ್ರೂಯತಾಂ ಚಾಪರೋ ಮಹಾನ್ ।
ಕುಶದ್ವೀಪಸ್ಯ ವಿಸ್ತಾರಾತ್ ದ್ವಿಗುಣೋ ಯಸ್ಯ ವಿಸ್ತರಃ ॥ ೪೬ ॥

ಕ್ರೌಂಚದ್ವೀಪೇ ದ್ಯುತಿಮತಃ ಪುತ್ರಾಃ ಸಪ್ತಮಹಾತ್ಮನಃ ।
ತನ್ನಾಮಾನಿ ಚ ವರ್ಷಾಣಿ ತೇಷಾಂ ಚಕ್ರೇ ಮಹೀಪತಿಃ ॥ ೪೭ ॥

ಕುಶಲೋ ಮಂದಗಶ್ಚೋಷ್ಣಃ ಪೀವರೋಥಾಂಧಕಾರಕಃ ।
ಮುನಿಶ್ಚ ದುಂದುಭಿಶ್ಚೈವ ಸಪ್ತೈತೇ ತತ್ಸುತಾ ಮುನೇ ॥ ೪೮ ॥

ಶಿವಾ, ಪವಿತ್ರಾ, ಸುಮತಿ, ವಿದ್ಯುದಂಭಾ, ಮಹೀ, ಸರ್ವಪಾಪಹರಾ ಎಂಬ ಏಳು ನದಿಗಳೂ, ಸಾವಿರಾರು ಸಣ್ಣ ಬೆಟ್ಟಗಳೂ, ನದಿಗಳೂ ಇರುವವು. ದೊಡ್ಡದಾದ ಕುಶಸ್ತಂಬವಿರುವುದರಿಂದ ಆ ದ್ವೀಪಕ್ಕೆ ಕುಶದ್ವೀಪವೆಂದು ಹೆಸರು ಬಂದಿರುವುದು. ಆ ಕುಶದ್ವೀಪದಷ್ಟೇ ವಿಸ್ತಾರವಾದ ತುಪ್ಪದ ಸಮುದ್ರವು ಆ ದ್ವೀಪವನ್ನಾವರಿಸಿ ರುವುದು. ಆ ತುಪ್ಪದ ಸಮುದ್ರವನ್ನು ಕ್ರೌಂಚದ್ವೀಪವು ಆವರಿಸಿರುವುದು.

೪೬-೫೧. ಕ್ರೌಂಚ ದ್ವೀಪವು ಕುಶದ್ವೀಪದ ಎರಡರಷ್ಟು ವಿಸ್ತಾರವಾದುದು. ಈ ದ್ವೀಪದಲ್ಲಿ ದ್ಯುತಿಮಂತನ, ಕುಶಲ, ಮಂದಗ, ಉಷ್ಣ; ಪೀವರ, ಅಂಧಕಾರಕ, ಮುನಿ, ದುಂದುಭಿ ಎಂಬ ಏಳು ಜನ ಮಕ್ಕಳು ಅವರ ಹೆಸರಿನ ವರ್ಷ ಗಳಿಗೆ ಅಧಿಪತಿಗಳಾಗಿರುವರು. ಅಲ್ಲಿಯೂ ದೇವತೆಗಳೂ, ಗಂಧರ್ವರೂ ವಾಸವಾ

ತತ್ರಾಪಿ ದೇವಗಂಧರ್ವಸೇವಿತಾಃ ಸುಮನೋರಮಾಃ ।
ವರ್ಷಾಚಲಾ ಮಹಾಬುದ್ಧೇ ತೇಷಾಂ ನಾಮಾನಿ ಮೇ ಶೃಣು ॥ ೪೯ ॥

ಕ್ರೌಂಚಶ್ಚ ವಾಮನಶ್ಚೈವ ತೃತೀಯಶ್ಚಾರ್ಥಕಾರಕಃ ।
ಚತುರ್ಥೋ ರತ್ನಶೈಲಶ್ಚ ಸ್ವಾಹಿನೀಹಯಸನ್ನಿಭಃ ॥
ದಿವಾವೃತ್ ಪಂಚಮಶ್ಚಾತ್ರ ತಥಾನ್ಯಃ ಪುಂಡರೀಕವಾನ್ ॥ ೫೦ ॥

ದುಂದುಭಿಶ್ಚ ಮಹಾಶೈಲೋ ದ್ವಿಗುಣಾಸ್ತೇ ಪರಸ್ಪರಂ ।
ದ್ವೀಪಾದ್ವೀಪೇಷು ಯೇ ಶೈಲಾ ಯಥಾ ದ್ವೀಪೇಷು ತೇ ತಥಾ ॥ ೫೧ ॥

ವರ್ಷೇಷ್ವೇತೇಷುರಮ್ಯೇಷುವರ್ಷಶೈಲವರೇಷು ಚ ।
ನಿವಸಂತಿ ನಿರಾತಂಕಾಃ ಸಹದೇವಗಣೈಃ ಪ್ರಜಾಃ ॥ ೫೨ ॥

ಪುಷ್ಕರಾಃ ಪುಷ್ಕಲಾ ಧನ್ಯಾಃ ತಿಷ್ಯಾಖ್ಯಾಶ್ಚ ಮಹಾಮುನೇ ।
ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಶೂದ್ರಾಶ್ಚಾನುಕ್ರಮೋದಿತಾಃ ॥ ೫೩ ॥

ತೇ ತತ್ರ ನದ್ಯೋ ಮೈತ್ರೇಯ ಯಾಃ ಪಿಬಂತಿ ಶೃಣುಷ್ವ ತಾಃ ।
ಸಪ್ತ ಪ್ರಧಾನಾಃ ಶತಶಸ್ತತ್ರಾನ್ಯಾಃ ಕ್ಷುದ್ರನಿಮ್ನಗಾಃ ॥ ೫೪ ॥

ಗಿರುವ ಕ್ರೌಂಚ, ವಾಮನ, ಅರ್ಥಕಾರಕ, ರತ್ನಶೈಲ, ದಿವಾವೃತ, ಪುಂಡರೀಕ, ಮಹಾಶೈಲ ಎಂಬ ವರ್ಷ ಪರ್ವತಗಳೂ ಇರುವುವು. ಹಿಂದೆ ಹೇಳಿದ ದ್ವೀಪಗಳಿಗಿಂತ ಮುಂದಿನ ದ್ವೀಪಗಳು ಎರಡರಷ್ಟು ದೊಡ್ಡವು. ಪರ್ವತಗಳೂ ಹಾಗೆಯೇ ದೊಡ್ಡವು.

೫೨-೫೫. ಈ ಮನೋಹರವಾದ ವರ್ಷಗಳಲ್ಲಿಯೂ ಪರ್ವತಗಳಲ್ಲಿಯೂ ದೇವತೆಗಳೊಡನೆ ಪ್ರಜೆಗಳು ವಾಸಮಾಡುವರು. ಇಲ್ಲಿ ಪುಷ್ಕರ, ಪುಷ್ಕಲ, ಧನ್ಯ, ತಿಷ್ಯಾ ಎಂಬ ಬ್ರಾಹ್ಮಣಾದಿ ನಾಲ್ಕು ವರ್ಷಗಳಿರುವುವು. ಗೌರೀ, ಕುಮುದ್ವತಿ, ಸಂಧ್ಯಾ, ರಾತ್ರಿ, ಮನೋಜವಾ, ಖ್ಯಾತಿ, ಪುಂಡರೀಕ ಎಂಬ ಏಳು ಮುಖ್ಯ ನದಿಗಳೂ ಸಾವಿರಾರು ಸಣ್ಣ ನದಿಗಳೂ ಬೆಟ್ಟಗಳೂ ಇರುವುವು. ಪುಷ್ಕರಾದಿಯಾದ

ಗೌರೀ ಕುಮುದ್ವತೀ ಚೈವ ಸಂಧ್ಯಾ ರಾತ್ರಿರ್ಮನೋಜವಾ ।
ಖ್ಯಾತಿಶ್ಚ ಪುಂಡರೀಕಾ ಚ ಸಪ್ತೈತಾ ವರ್ಷನಿಮ್ನಗಾಃ ॥ ೫೫ ॥

ತತ್ರಾಪಿ ವರ್ಣೈರ್ಭಗವಾನ್ ಪುಷ್ಕರಾದ್ಯೈರ್ಜನಾರ್ದನಃ ।
ಯಾಗೈ ರುದ್ರಸ್ವರೂಪಸ್ಥ ಇಜ್ಯತೇ ಯಜ್ಞಸನ್ನಿಧೌ ॥ ೫೬ ॥

ಕ್ರೌಂಚದ್ವೀಪಃ ಸಮುದ್ರೇಣ ದಧಿಮಂಡೋದಕೇನ ಚ ।
ಆವೃತಃ ಸರ್ವತಃ ಕ್ರೌಂಚದ್ವೀಪತುಲ್ಯೇನ ಮಾನತಃ ॥ ೫೭ ॥

ದಧಿಮಂಡೋದಕಶ್ಚಾಪಿ ಶಾಕದ್ವೀಪೇನ ಸಂವೃತಃ ।
ಕ್ರೌಂಚದ್ವೀಪಸ್ಯ ವಿಸ್ತಾರಾತ್ ದ್ವಿಗುಣೇನ ಮಹಾಮತೇ ॥ ೫೮ ॥

ಶಾಕದ್ವೀಪೇಶ್ವರಸ್ಯಾಪಿ ಭವ್ಯಸ್ಯ ಸುಮಹಾತ್ಮನಃ ।
ಸಪ್ತೈವ ತನಯಾಸ್ತೇಷಾಂ ದದೌ ವರ್ಷಾಣಿ ಸಪ್ತ ಸಃ ॥ ೫೯ ॥

ಜಲದಶ್ಚ ಕುಮಾರಶ್ಚ ಸುಕುಮಾರೋ ಮರೀಚಕಃ ।
ಕುಸುಮೋದಃ ಸುಮೋದಶ್ಚ ಸಪ್ತಮಶ್ಚ ಮಹಾದ್ರುಮಃ ॥ ೬೦ ॥

ತತ್ಸಂಜ್ಞಾನ್ಯೇವ ತತ್ರಾಪಿ ಸಪ್ತವರ್ಷಾಣ್ಯನುಕ್ರಮಾತ್ ।
ತತ್ರಾಪಿ ಪರ್ವತಾಃ ಸಪ್ತ ವರ್ಷವಿಚ್ಛೇದಕಾರಿಣಃ ॥ ೬೧ ॥

ನಾಲ್ಕು ವರ್ಣದವರು ಯಾಗಗಳನ್ನು ಮಾಡುವುದರಿಂದ ರುದ್ರರೂಪನಾದ ವಿಷ್ಣುವನ್ನು ಪೂಜಿಸುವರು.

೫೭–೬೩. ಕ್ರೌಂಚ ದ್ವೀಪವು ಅದರ ವಿಸ್ತಾರಕ್ಕೆ ಸಮವಾದ ಮೊಸರಿನ ಸಾರವಾದ ನೀರಿನಿಂದ ತುಂಬಿದ ಸಮುದ್ರದಿಂದ ಆವರಿಸಿರುವುದು. ಮೊಸರಿನ ಸಮುದ್ರವನ್ನು ಕ್ರೌಂಚ ದ್ವೀಪದ ಎರಡರಷ್ಟು ವಿಸ್ತಾರವಾದ ಶಾಕದ್ವೀಪವು ಆವರಿಸಿರುವುದು. ಶಾಕ ದ್ವೀಪದ ರಾಜನಾದ ಭವ್ಯನು ತನ್ನ ಜಲದ, ಕುಮಾರ, ಸುಕುಮಾರ, ಮರೀಚಕ, ಕುಸುಮೋದ, ಸುಮೋದ, ಮಹಾದ್ರುಮ ಎಂಬ ಏಳು ಜನ ಮಕ್ಕಳಿಗೆ ಅವರ ಹೆಸರಿನ ಏಳು ವರ್ಷಗಳನ್ನು ವಿಭಾಗಮಾಡಿಕೊಟ್ಟನು. ಇಲ್ಲಿಯೂ ಉದಯ

ಪೂರ್ವಸ್ತತ್ರೋದಯಗಿರಿಃ ಜಲಾಧಾರಸ್ತಥಾಪರಃ ।
ತಥಾ ರೈವತಕಃ ಶ್ಯಾಮಸ್ತಥೈವಾಂಭೋ ಗಿರಿರ್ದ್ವಿಜ ॥ ೬೨ ॥

ಆಂಬಿಕೇಯಸ್ತಥಾ ರಮ್ಯಃ ಕೇಸರೀ ಪರ್ವತೋತ್ತಮಃ ।
ಶಾಕಸ್ತತ್ರ ಮಹಾವೃಕ್ಷಃ ಸಿದ್ಧಗಂಧರ್ವಸೇವಿತಃ ॥ ೬೩ ॥

ಯತ್ಪತ್ರ ವಾತಸಂಸ್ಪರ್ಶಾದಾಹ್ಲಾದೋ ಜಾಯತೇ ಪರಃ ।
ತತ್ರ ಪುಣ್ಯಾ ಜನಪದಾಶ್ಚಾತುರ್ವರ್ಣ್ಯಸಮನ್ವಿತಾಃ ॥ ೬೪ ॥

ನದ್ಯಶ್ಚಾತ್ರ ಮಹಾಪುಣ್ಯಾಃ ಸರ್ವಪಾಪಭಯಾಪಹಾಃ ।
ಸುಕುಮಾರೀ ಕುಮಾರೀ ಚ ನಲಿನೀ ವೇಣುಕೀ ತಥಾ ॥ ೬೫ ॥

ಇಕ್ಷುಶ್ಚ ಧೇನುಕಾಚೈವ ಗಭಸ್ತಿ ಸ್ಸಪ್ತಮೀ ತಥಾ ।
ಅನ್ಯಾಸ್ತ್ವಯುತಶಸ್ತತ್ರ ಕ್ಷುದ್ರನದ್ಯೋ ಮಹಾಮುನೇ ॥ ೬೬ ॥

ಗಿರಿ, ಜಲಾಧಾರ, ರೈವತಕ, ಶ್ಯಾಮ, ಅಂಭೋಗಿರಿ, ಅಂಬಿಕೇಯ, ಕೇಸರಿಪರ್ವತ ಎಂಬ ವರ್ಷ ವಿಭಾಗ ಕಾರಣವಾದ ಏಳು ಪರ್ವತಗಳಿರುವುವು.

೬೩-೬೬. ಶಾಕದ್ವೀಪದಲ್ಲಿ ಶಾಕವೃಕ್ಷವೆಂಬ ಒಂದು ದೊಡ್ಡ ಮರವಿರುವುದು. ಆ ಮರದ ಎಲೆಯ ಗಾಳಿಯು ತಗುಲಿದರೆ ಅಲ್ಲಿರುವ ಸಿದ್ಧ ಗಂಧರ್ವಾದಿಗಳಿಗೆ ಮಹಾ ಸಂತೋಷವುಂಟಾಗುವುದು. ಅದರ ಎಲೆಗಳು ಒಳಭಾಗದಲ್ಲಿ ಒರಟಾಗಿಯೂ, ಹೊರ ಭಾಗದಲ್ಲಿ ಮೃದುವಾಗಿಯೂ ಇರುವುದು. ಆ ದ್ವೀಪದಲ್ಲಿರುವ ಪುಣ್ಯಕರವಾದ ದೇಶ ಗಳಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣದವರೂ ತುಂಬಿರುವರು. ಸುಕುಮಾರೀ, ಕುಮಾರೀ, ನಲಿನೀ, ವೇಣುಕೀ, ಇಕ್ಷು, ಧೇನುಕಾ, ಗಭಸ್ತಿ ಎಂಬ ಏಳು ನದಿಗಳು ಮಹಾಪುಣ್ಯಪ್ರದವಾಗಿ ಸಮಸ್ತ ಪಾಪಗಳನ್ನೂ ನಾಶಮಾಡುವುವು. ಆ ದ್ವೀಪದಲ್ಲಿ ಸಣ್ಣ ನದಿಗಳೂ ಬೆಟ್ಟಗಳೂ ಹತ್ತು ಸಾವಿರಕ್ಕಿಂತ ಹೆಚ್ಚಾಗಿರುವುವು.

ಮಹೀಧರಾಸ್ತಥಾ ಸಂತಿ ಶತಶೋಽಥ ಸಹಸ್ರಶಃ ।
ತಾಃ ಪಿಬಂತಿ ಮುದಾ ಯುಕ್ತಾ ಜಲದಾದಿಷು ಯೇ ಸ್ಥಿತಾಃ ॥ ॥ ೬೭ ॥

ವರ್ಷೇಷು ತೇ ಜನಪದಾಃ ಸ್ವರ್ಗಾದಭ್ಯೇತ್ಯಮೇದಿನೀಂ
ಧರ್ಮಹಾನಿಃ ನ ತೇಷ್ವಸ್ತಿ ನ ಸಂಘರ್ಷಃ ಪರಸ್ಪರಂ । ॥ ೬೮ ॥

ಮರ್ಯಾದಾ ವ್ಯುತ್ಕ್ರಮೋ ವಾಪಿ ತೇಷು ದೇಶೇಷು ಸಪ್ತಸು
ಮಂಗಾಶ್ಚ ಮಾಗಧಾಶ್ಚೈವ ಮಾನಸಾ ಮಂದಗಾಸ್ತಥಾ ! ॥ ೬೯ ॥

ಮಂಗಾ ಬ್ರಾಹ್ಮಣಭೂಯಿಷ್ಠಾ ಮಾಗಧಾಃ ಕ್ಷತ್ರಿಯಾಸ್ತು ತೇ
ವೈಶ್ಯಾಸ್ತು ಮಾನಸಾ ಜ್ಞೇಯಾಃ ಶೂದ್ರಾಸ್ತೇಷಾಂ ತು ಮಂದಗಾಃ ।

ಶಾಕದ್ವೀಪೇಷು ತೈರ್ವಿಷ್ಣುಃ ಸೂರ್ಯರೂಪಧರೋ ಮುನೇ
ಯಥೋಕ್ತೈರಿಜ್ಯತೇ ಸಮ್ಯಕ್ ಕರ್ಮಭಿರ್ನಿಯತಾತ್ಮಭಿಃ । ॥ ೭೧ ॥

೬೭-೭೧. ಸ್ವರ್ಗಸುಖವನ್ನನುಭವಿಸಿದ ಮೇಲೆ ಪುಣ್ಯಶೇಷವಿರುವ ಜನರು ಸ್ವರ್ಗದಿಂದ ಶಾಕದ್ವೀಪದ ಭೂ ಭಾಗಕ್ಕೆ ಬಂದು ಅಲ್ಲಿನ ಜಲದಾದಿ ವರ್ಷಗಳಲ್ಲಿ ಹರಿಯುವ ನದಿಯ ನೀರನ್ನು ಕುಡಿಯುವರು. ಅಲ್ಲಿನ ದೇಶಗಳಲ್ಲಿರುವ ಜನರು ಯಾರೂ ಧರ್ಮವನ್ನು ಬಿಡುವುದಿಲ್ಲ. ಒಬ್ಬರೊಡನೊಬ್ಬರು ಜಗಳವಾಡುವುದಿಲ್ಲ. ಆ ಏಳು ವರ್ಷಗಳಲ್ಲಿ ಯಾರೂ ಮರ್ಯಾದೆಯನ್ನು ಮೀರಿ ನಡೆಯುವುದಿಲ್ಲ. ಮಂಗ, ಮಾಗಧ, ಮಾನಸ, ಮಂದಗ, ಎಂಬುದು ಅಲ್ಲಿಯ ಬ್ರಾಹ್ಮಣಾದಿ ನಾಲ್ಕು ವರ್ಣಗಳು. ಅವರು ಇಂದ್ರಿಯಗಳನ್ನು ನಿಗ್ರಹಿಸಿ ಅಲ್ಲಿ ಸೂರ್ಯರೂಪಿಯಾದ ವಿಷ್ಣುವನ್ನು ಶಾಸ್ತ್ರೋಕ್ತವಾದ ಕರ್ಮಾನುಷ್ಠಾನದಿಂದ ಪೂಜಿಸುವರು. ಈ ಶಾಕದ್ವೀಪವನ್ನು ಇದರಷ್ಟೇ ವಿಸ್ತಾರವಾದ ಕ್ಷೀರಸಮುದ್ರವು ಆವರಿಸಿರುವುದು.

ಶಾಕದೀಪಸ್ತು ಮೈತ್ರೇಯ ಕ್ಷೀರೋದೇನ ಸಮಾವೃತಃ
ಶಾಕದ್ವೀಪಪ್ರಮಾಣೇನ ವಲಯೇನೇವ ವೇಷ್ಟಿತಃ । ॥ ೭೨ ॥

ಕ್ಷೀರಾಬ್ಧಿಃ ಸರ್ವತೋ ಬ್ರಹ್ಮನ್ ಪುಷ್ಕರಾಖ್ಯೇನ ವೇಷ್ಟಿತಃ
ದ್ವೀಪೇನ ಶಾಕದ್ವೀಪಾತ್ತು ದ್ವಿಗುಣೇನ ಸಮಂತತಃ । ॥ ೭೩ ॥

ಪುಷ್ಕರೇ ಸವನಸ್ಯಾಪಿ ಮಹಾಪೀತೋಽಭವತ್ಸುತಃ
ಧಾತಕಿಶ್ಚ ತಯೋಸ್ತತ್ರ ದ್ವೇ ವರ್ಷೇ ನಾಮ ಚಿಹ್ನಿತೇ । ॥ ೭೪ ॥

ಮಹಾಪೀತಂ ತಥೈವಾನ್ಯದ್ಧಾತಕೀ ಷಂಡಸಂಜ್ಞಿತಂ
ಏಕಶ್ಚಾತ್ರ ಮಹಾಭಾಗ ಪ್ರಖ್ಯಾತೋ ವರ್ಷಪರ್ವತಃ । ॥ ೭೫ ॥

ಮಾನಸೋತ್ತರಸಂಜ್ಞೋ ವೈ ಮಧ್ಯತೋ ವಲಯಾಕೃತಿಃ
ಯೋಜನಾನಾಂ ಸಹಸ್ರಾಣಿ ಊರ್ಧ್ವಂ ಪಂಚಾಶದುಚ್ಛ್ರಿತಃ । ॥ ೭೬ ॥

ತಾವದೇವ ಚ ವಿಸ್ತೀರ್ಣಃ ಸರ್ವತಃ ಪರಿಮಂಡಲಃ
ಪುಷ್ಕರದ್ವೀಪವಲಯಂ ಮಧ್ಯೇನ ವಿಭಜನ್ನಿವ । ॥ ೭೭ ॥

೭೨-೭೫. ಕ್ಷೀರ ಸಮುದ್ರವನ್ನು ಶಾಕದ್ವೀಪದ ಎರಡರಷ್ಟು ವಿಸ್ತಾರವಾದ ಪುಷ್ಕರ ದ್ವೀಪವು ಆವರಿಸಿರುವುದು. ಪುಷ್ಕರ ದ್ವೀಪಾಧಿಪತಿಯಾದ ಸವನನಿಗೆ ಮಹಾಪೀತ, ಧಾತಕಿ ಎಂಬಿಬ್ಬರು ಮಕ್ಕಳು. ಸವನನು ಮಹಾಪೀತ, ಧಾತಕೀಷಂಡ ಎಂಬೆರಡು ವರ್ಷಗಳನ್ನು ತನ್ನ ಇಬ್ಬರು ಮಕ್ಕಳಿಗೂ ಕೊಟ್ಟನು. ಈ ಪುಷ್ಕರ ದ್ವೀಪದಲ್ಲಿ ಮಾನಸೋತ್ತರವೆಂಬ ಪ್ರಸಿದ್ಧವಾದ ವರ್ಷಪರ್ವತವು ದ್ವೀಪದ ನಡುವೆ ವಲಯಾಕಾರವಾಗಿರುವುದು. ಅದು ಸುತ್ತಲೂ ಐವತ್ತು ಸಾವಿರ ಯೋಜನ ಎತ್ತರವಾಗಿಯೂ ಅಷ್ಟೇ ವಿಸ್ತಾರವಾದುದಾಗಿಯೂ ಇರುವುದು.

೭೬-೭೮. ವಲಯಾಕಾರವಾದ ಪುಷ್ಕರ ದ್ವೀಪವನ್ನು ವಲಯಾಕಾರವಾದ ಈ ಪರ್ವತವು ಮಧ್ಯದಲ್ಲಿದ್ದು ಎರಡು ವರ್ಷಗಳನ್ನಾಗಿ ವಿಭಾಗಿಸಿರುವುದು. ಆ ಎರಡು ವರ್ಷಗಳೂ ವಲಯಾಕಾರವಾಗಿಯೇ ಇರುವುವು. ಅಲ್ಲಿರುವ ಮನುಜರು ರೋಗ

ಸ್ಥಿತೋಽಸೌ ತೇನವಿಚ್ಛಿನ್ನಂ ಜಾತಂ ತದ್ವರ್ಷಯೋರ್ದ್ವಯಂ
ವಲಯಾಕಾರಮೇಕೈಕಂ ತಯೋರ್ವರ್ಷಂ ತಥಾ ಗಿರಿಃ । ॥ ೭೮ ॥

ದಶವರ್ಷಸಹಸ್ರಾಣಿ ತತ್ರ ಜೀವಂತಿ ಮಾನವಾಃ
ನಿರಾಮಯಾ ವಿಶೋಕಾಶ್ಚ ರಾಗದ್ವೇಷವಿವರ್ಜಿತಾಃ । ॥ ೭೯ ॥

ಅಧಮೋತ್ತಮೌ ತೇಷ್ವಾಸ್ತಾಂ ನ ವಧ್ಯವಧಕೌ ದ್ವಿಜ
ನೇರ್ಷ್ಯಾಸೂಯಾ ಭಯಂ ರೋಷೋದೋಷೋ ಲೋಭಾದಿಕೋನ ಚ ।

ಮಹಾಪೀತಂ ಬಹಿರ್ವರ್ಷಂ ಧಾತಕೀ ಸಂಜ್ಞಿಕಂ ತತಃ
ಮಾನಸೋತ್ತರಶೈಲಸ್ಯ ದೇವದೈತ್ಯಾದಿಸೇವಿತಂ । ॥ ೮೧ ॥

ಸತ್ಯಾನೃತೇನ ತತ್ರಾಸ್ತಾಂ ದ್ವೀಪೇ ಪುಷ್ಕರಸಂಜ್ಞಿತೇ
ನ ತತ್ರ ನದ್ಯಃ ಶೈಲಾ ವಾ ದ್ವೀಪೇ ವರ್ಷದ್ವಯಾನ್ವಿತೇ । ॥ ೮೨ ॥

ತುಲ್ಯವೇಷಾಸ್ತು ಮನುಜಾ ದೇವೈಸ್ತತ್ರೈಕರೂಪಿಣಃ
ವರ್ಣಾಶ್ರಮಾಚಾರಹೀನಂ ಧರ್ಮಾಹರಣವರ್ಜಿತಂ । ॥ ೮೩ ॥

ದುಃಖಾದಿಗಳೂ, ರಾಗದ್ವೇಷಾದಿಗಳೂ ಇಲ್ಲದವರಾಗಿ ಹತ್ತು ಸಾವಿರ ವರ್ಷಗಳವರೆಗೆ ಜೀವಿಸಿರುವರು.

೭೯–೮೪. ಆ ವರ್ಷಗಳಲ್ಲಿ ಅಧಮರೂ, ಉತ್ತಮರೂ ಇಲ್ಲ. ಕೊಲ್ಲುವವರೂ ಕೊಲೆಗೆ ಯೋಗ್ಯರೂ ಇಲ್ಲ ಜನರಲ್ಲಿ ಈರ್ಷ್ಯೆ, ಅಸೂಯೆ, ಭಯ, ರೋಗ, ರೋಷ, ದೋಷ, ಲೋಭ ಮುಂತಾದ ದುರ್ಗುಣಗಳಿಲ್ಲ. ಎಲ್ಲರೂ ಸಮಾನಭಾವದಿಂದಿರುವರು. ಮಾನಸೋತ್ತರ ಪರ್ವತದ ಒಳಭಾಗವು ಮಹಾಪೀತವರ್ಷವು ಹೊರಭಾಗವು ಧಾತಕೀಷಂಡವು. ದೇವತೆಗಳೂ ದೈತ್ಯರೂ ಅಲ್ಲಿ ವಾಸಮಾಡುವರು. ಆ ದ್ವೀಪದ ಜನರು ಸತ್ಯವನ್ನೂ, ಸುಳ್ಳನ್ನೂ ಹೇಳುವ ಪ್ರಸಂಗವೇ ಇಲ್ಲ. ಆ ಪುಷ್ಕರ ದ್ವೀಪದ ಎರಡು ವರ್ಷಗಳಲ್ಲಿಯೂ ನದಿಗಳಾಗಲಿ, ಬೆಟ್ಟಗಳಾಗಲಿ ಇಲ್ಲ. ಅಲ್ಲಿಯ ಮನುಷ್ಯರು ದೇವತೆಗೆ ಸಮಾನವಾದ ವೇಷದಿಂದಿರುವರು. ಅವರಿಗೆ ವರ್ಣಾಶ್ರಮಾ

ತ್ರಯೀವಾರ್ತಾ ದಂಡನೀತಿಶುಶ್ರೂಷಾರಹಿತಂ ಚ ತತ್
ವರ್ಷದ್ವಯಂ ತು ಮೈತ್ರೇಯ ಭೌಮಃ ಸ್ವರ್ಗೋಯಮುತ್ತಮಃ ॥ ೮೪ ॥

ಸರ್ವರ್ತು ಸುಖದಃ ಕಾಲೋ ಜರಾರೋಗಾದಿವರ್ಜಿತಃ
ಪುಷ್ಕರೇ ಧಾತಕೀಷಂಡೇ ಮಹಾಪೀತೇ ಚ ವೈ ಮುನೇ । ॥ ೮೫ ॥

ನ್ಯಗ್ರೋಧಃ ಪುಷ್ಕರದ್ವೀಪೇ ಬ್ರಹ್ಮಣಃ ಸ್ಥಾನಮುತ್ತಮಂ
ತಸ್ಮಿನ್ನಿವಸತಿ ಬ್ರಹ್ಮಾ ಪೂಜ್ಯಮಾನಃ ಸುರಾಸುರೈಃ ॥ ೮೬ ॥

ಸ್ವಾದೂದಕೇನೋದಧಿನಾ ಪುಷ್ಕರಃ ಪರಿವೇಷ್ಟಿತಃ ।
ಸಮೇನ ಪುಷ್ಕರಸ್ಯೈವ ವಿಸ್ತಾರಾನ್ಮಂಡಲಾಕೃತೇಃ ॥ ೮೭ ॥

ಏವಂ ದ್ವೀಪಾಃ ಸಮುದ್ರೈಸ್ತು ಸಪ್ತಸಪ್ತಭಿರಾವೃತಾಃ ।
ದ್ವೀಪಶ್ಚೈವ ಸಮುದ್ರಶ್ಚ ಸಮಾನೌ ದ್ವಿಗುಣೌ ಪರೌ ॥ ೮೮ ॥

ಚಾರವಾಗಲಿ, ಧರ್ಮಾಚರಣೆಯಾಗಲಿ, ವೇದ, ತರ್ಕ, ರಾಜನೀತಿ ಶಾಸ್ತ್ರಾದಿಗಳ ಅಭ್ಯಾಸವಾಗಲಿ ಇಲ್ಲ. ಈ ಎರಡು ವರ್ಷಗಳೂ ಉತ್ತಮವಾದ ಭೂಮಿಯ ಸ್ವರ್ಗವಾಗಿರುವುವು. ಸಮಸ್ತ ಋತುಗಳ ಸುಖವನ್ನೂ ಉಂಟುಮಾಡಿ ಮುಪ್ಪು, ರೋಗ ಮುಂತಾದವುಗಳಿಲ್ಲದ ಕಾಲವು ಇಲ್ಲಿರುವುದು.

೮೫-೮೬. ಆ ಪುಷ್ಕರ ದ್ವೀಪದಲ್ಲಿ ಪುಷ್ಕರವೆಂಬ ಹೆಸರುಳ್ಳ ದೊಡ್ಡದಾದ ಭೂಮಿಗೆಲ್ಲ ನೆರಳನ್ನು ಕೊಡುವ ಒಂದು ಆಲದ ಮರವಿರುವುದು. "ಸಪ್ರಜಾಪತಿ ರೇಕಃ ಪುಷ್ಕರ ಪರ್ಣೇಸಮಭವತ್" ಎಂಬ ವೇದ ವಚನದಂತೆ ಆ ಪುಷ್ಕರ ವೃಕ್ಷದ ಸಮೀಪದಲ್ಲಿ ಬ್ರಹ್ಮನು ವಾಸವಾಗಿರುವನು. ದೇವಾಸುರರು ಅವನನ್ನು ಪೂಜಿಸುತ್ತಿರುವರು. ಸಿಹಿ ನೀರಿನ ಸಮುದ್ರವು ಆ ಪುಷ್ಕರ ದ್ವೀಪದಷ್ಟೇ ವಿಸ್ತಾರವಾಗಿ ಸುತ್ತಿಕೊಂಡಿರುವುದು.

೮೭-೮೮. ಹೀಗೆ ಏಳು ದ್ವೀಪಗಳೂ ಅವುಗಳಿಗೆ ಸಮಾನ ವಿಸ್ತಾರವಾದ ಸಮುದ್ರಗಳಿಂದ ಬಳಸಿರುವುವು. ಕ್ರಮವಾಗಿ ಒಂದು ದ್ವೀಪಕ್ಕಿಂತ ಮತ್ತೊಂದು ಎರಡರಷ್ಟು ವಿಸ್ತಾರವಾಗಿರುವುದು. ಯಾವಾಗಲೂ ಎಲ್ಲಾ ಸಮುದ್ರಗಳ ನೀರೂ ಹೆಚ್ಚು ಕಡಮೆಯಾಗಿ ಸಮಾನಗಳಾಗಿರುವುವು.

ಪಯಾಂಸಿ ಸರ್ವದಾ ಸರ್ವಸಮುದ್ರೇಷು ಸಮಾನಿ ವೈ ।
ನ್ಯೂನಾತಿರಿಕ್ತತಾ ತೇಷಾಂ ಕದಾಚಿನ್ನೈವ ಜಾಯತೇ ॥ ೮೯ ॥

ಸ್ಥಾಲೀಸ್ಥಮಗ್ನಿಸಂಯೋಗಾದುದ್ರೇಕಿ ಸಲಿಲಂ ಯಥಾ ।
ತಥೇಂದುವೃದ್ಧೌ ಸಲಿಲಮಂಭೋಧೌ ಮುನಿಸತ್ತಮ ॥ ೯೦ ॥

ಅನ್ಯೂನಾನತಿರಿಕ್ತಾಶ್ಚ ವರ್ಧಂತ್ಯಾಪೋಹ್ರಸಂತಿ ಚ ।
ಉದಯಾಸ್ತಮಯೇಷ್ವಿಂದೋಃ ಪಕ್ಷಯೋಃ ಶುಕ್ಲಕೃಷ್ಣಯೋಃ ॥ ೯೧ ॥

ದಶೋತ್ತರಾಣಿ ಪಂಚೈವ ಅಂಗುಲಾನಾಂ ಶತಾನಿ ವೈ ।
ಅಪಾಂ ವೃದ್ಧಿಕ್ಷಯೌ ದೃಷ್ಟಾ ಸಾಮುದ್ರೀಣಾಂ ಮಹಾಮುನೇ ॥ ೯೨ ॥

೮೯-೯೨. ಒಂದು ಪಾತ್ರೆಯ ನೀರನ್ನು ಬೆಂಕಿಯಿಂದ ಕಾಯಿಸಿದರೆ ನೀರು ವಿರಳವಾಗಿ ಹೆಚ್ಚುವುದು. ಬೆಂಕಿಯನ್ನು ತೆಗೆದು ನೀರು ಆರಿದರೆ ಹಿಂದೆ ಇದ್ದಷ್ಟೇ ಇರುವುದು. ಹಾಗೆಯೇ ಶುಕ್ಲ ಪಕ್ಷದಲ್ಲಿ ಚಂದ್ರನು ವೃದ್ಧಿಯಾಗುತ್ತ ಬಂದು ಪೂರ್ಣಿಮೆಯ ದಿನ ಪೂರ್ಣನಾದಾಗ ಸಮುದ್ರದ ನೀರು ಉಕ್ಕುವುದು. ಅಮಾವಾಸ್ಯೆಯ ದಿನ ಹಿಂದಿನಂತೆಯೇ ಇರುವುದು. ಪ್ರತಿ ದಿನವೂ ಚಂದ್ರೋದಯವಾದಾಗ ಸಮುದ್ರವು ಸ್ವಲ್ಪ ಉಕ್ಕುವುದು. ಚಂದ್ರಾಸ್ತಮಯವಾದಾಗ ಸ್ವಲ್ಪ ತಗ್ಗುವುದು. ಸಮುದ್ರ ಉಕ್ಕಿದಾಗ ಇಪ್ಪತ್ತೊಂದೂಕಾಲು ಮೊಳ ಎತ್ತರದವರೆಗೆ ಉಕ್ಕುವುದೆಂದು ಶಾಸ್ತ್ರ ಸಿದ್ಧಾಂತವೂ, ಸಮುದ್ರತೀರ ವಾಸಿಗಳ ಅನುಭವವೂ ಇರುವುದು.

೯೩. ಪುಷ್ಕರದ್ವೀಪದ ಜನರಿಗೆ ಅಡಿಗೆಯನ್ನು ಮಾಡದೆ ಭಕ್ಷ್ಯಭೋಜ್ಯಾದಿಗಳಿಂದ ಕೂಡಿದ ಷಡ್ರಸೋಪೇತವಾದ ಭೋಜನವು ಕಾಲಕ್ಕೆ ಸರಿಯಾಗಿ ತಾನಾಗಿ ಸಿದ್ಧವಾಗಿ ಬರುವುದು. ಆದರಿಂದ ಪ್ರಜೆಗಳೆಲ್ಲರೂ ಸದಾ ತೃಪ್ತರಾಗಿರುವರು.

ಭೋಜನಂ ಪುಷ್ಕರದ್ವೀಪೇ ತತ್ರಸ್ವಯಮುಪಸ್ಥಿತಃ ।
ಷಡ್ರಸಂ ಭುಂಜತೇ ವಿಪ್ರಪ್ರಜಾಃ ಸರ್ವಾಃ ಸದೈವ ಹಿ ॥ ೯೩ ॥

ಸ್ವಾದೂದಕಸ್ಯ ಪುರತೋ ದೃಶ್ಯತೇ ಲೋಕಸಂಸ್ಥಿತಿಃ ।
ದ್ವಿಗುಣಾ ಕಾಂಚನೀಭೂಮಿಃ ಸರ್ವಜಂತುವಿವರ್ಜಿತಾ ॥ ೯೪ ॥

ಲೋಕಾಲೋಕಸ್ತತಃ ಶೈಲೋ ಯೋಜನಾಯುತ ವಿಸ್ತೃತಃ ।
ಉಚ್ಛ್ರಾಯೇಣಾಪಿ ತಾವಂತಿ ಸಹಸ್ರಾಣ್ಯಚಲೋ ಹಿ ಸಃ ॥ ೯೫ ॥

ತತಸ್ತಮಃ ಸಮಾವೃತ್ಯ ತಂ ಶೈಲಂ ಸರ್ವತಃ ಸ್ಥಿತಃ ।
ತಮಶ್ಚಾಂಡಕಟಾಹೇನ ಸಮಂತಾತ್ಪರಿವೇಷ್ಟಿತಂ ॥ ೯೬ ॥

೯೪-೯೫. ಸ್ವಾದೂದಕ ಸಮುದ್ರದಿಂದಾಚೆಗೆ ಆ ಸಮುದ್ರದ ಎರಡರಷ್ಟು ವಿಸ್ತಾರವಾದ ಸುವರ್ಣಭೂಮಿಯು ಇರುವುದು. ಅಲ್ಲಿ ಜನರು ಯಾರೂ ವಾಸವಾಗಿಲ್ಲ. ಯಾವ ಪ್ರಾಣಿಗಳೂ ಇಲ್ಲ. ಯೋಗಿಗಳು ಇದನ್ನು ಕಂಡಿರುವರು. ಅಲ್ಲಿಂದಾಚೆಗೆ ಹತ್ತು ಸಾವಿರ ಯೋಜನ ವಿಸ್ತಾರವೂ ಅಷ್ಟೇ ಎತ್ತರವೂ ಇರುವ ಲೋಕಾಲೋಕವೆಂಬ ಪರ್ವತವಿರುವುದು.

೯೬-೯೭. ಆ ಲೋಕಾಲೋಕ ಪರ್ವತದಿಂದಾಚೆಗೆ ಕತ್ತಲೆಯು ಆ ಪರ್ವತವನ್ನೆಲ್ಲ ವ್ಯಾಪಿಸಿರುವುದು. ಆ ಕತ್ತಲೆಯ ಸುತ್ತಲೂ ಬ್ರಹ್ಮಾಂಡ ಕಟಾಹವು ವ್ಯಾಪಿಸಿರುವುದು. ಮೈತ್ರೇಯ ಮಹಾ ಮುನಿಯೇ! ಸಪ್ತದ್ವೀಪ ಸಮುದ್ರಗಳಿಂದ ಕೂಡಿದ ಈ ಬ್ರಹ್ಮಾಂಡ ಕಟಾಹದಲ್ಲಿರುವ ಭೂಮಿಯು ಐವತ್ತು ಕೋಟಿ ಯೋಜನ ವಿಸ್ತಾರವಾದುದಾಗಿರುವುದು.

ಪಂಚಾಶತ್ಕೋಟಿವಿಸ್ತಾರಾ ಸೇಯಮುರ್ವೀ ಮಹಾಮುನೇ ।
ಸಹೈವಾಂಡಕಟಾಹೇನ ಸದ್ವೀಪಾಬ್ಧಿಮಹೀಧರಾ ॥ ೯೭ ॥

ಸೇಯಂ ಧಾತ್ರೀ ವಿಧಾತ್ರೀ ಚ ಸರ್ವಭೂತಗುಣಾಧಿಕಾ ।
ಆಧಾರಭೂತಾ ಸರ್ವೇಷಾಂ ಮೈತ್ರೇಯ ಜಗತಾಮಿತಿ ॥ ೯೮ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಚತುರ್ಥೋಽಧ್ಯಾಯಃ

---

೯೮. ಮೈತ್ರೇಯನೇ! ಈ ಭೂಮಿಯೇ ಸಮಸ್ತ ಜಗತ್ತನ್ನೂ ಹುಟ್ಟಿಸಿ ಕಾಪಾಡುತ್ತ ಪಂಚಭೂತಗಳ ಗುಣಗಳಿಂದ ಕೂಡಿದುದಾಗಿ ಅತ್ಯಂತ ಶ್ರೇಷ್ಠವಾದುದಾಗಿರುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ನಾಲ್ಕನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ದ್ವಿತೀಯಾಂಶೇ

ಪಂಚಮೋಽಧ್ಯಾಯಃ

॥ ಪರಾಶರ ಉವಾಚ ॥

ವಿಸ್ತಾರ ಏಷ ಕಥಿತಃ ಪೃಥಿವ್ಯಾ ಭವತೋ ಮಯಾ ।
ಸಪ್ತತಿಸ್ತು ಸಹಸ್ರಾಣಿ ದ್ವಿಜೋಚ್ಛ್ರಾಯೋಽಪಿ ಕಥ್ಯತೇ ॥ ೧ ॥

ದಶಸಾಹಸ್ರಮೇಕೈಕಂ ಪಾತಾಲಂ ಮುನಿಸತ್ತಮ ।
ಅತಲಂ ವಿತಲಂ ಚೈವ ನಿತಲಂ ಚ ಗಭಸ್ತಿಮಾನ್ ॥ ೨ ॥

ಮಹಾಖ್ಯಂ ಸುತಲಂ ಚಾಗ್ರ್ಯಂ ಪಾತಾಲಂ ಚಾಪಿ ಸಪ್ತಮಂ ।
ಶುಕ್ಲ ಕೃಷ್ಣಾರುಣಾಃ ಪೀತಾಶ್ಶರ್ಕರಾ ಶ್ಶೈಲಕಾಂಚನಾಃ
ಭೂಮಯೋ ಯತ್ರ ಮೈತ್ರೇಯ ವರಪ್ರಾಸಾದಶೋಭಿತಾಃ ॥ ೩ ॥

ಐದನೆಯ ಅಧ್ಯಾಯವು

೧-೪. ಮೈತ್ರೇಯನೇ ಭೂಮಿಯ ವಿಸ್ತಾರವನ್ನು ಹೇಳಿದೆನು. ಭೂಮಿಯು ಎಪ್ಪತ್ತು ಸಾವಿರ ಯೋಜನ ಎತ್ತರವಾಗಿರುವ ಬಗೆಯನ್ನು ಹೇಳುವೆನು. ಒಂದೊಂದು ಪಾತಾಳ ಲೋಕವೂ ಹತ್ತು ಸಾವಿರ ಯೋಜನ ಎತ್ತರವಾಗಿರುವುದು. ಅತಲ, ವಿತಲ, ನಿತಲ, ಗಭಸ್ತಿ, ಮಹಾತಲ, ಸುತಲ, ಪಾತಾಳ ಎಂದು ಏಳು ಅಧೋಲೋಕಗಳು. ಬಿಳುಪು, ಕಪ್ಪು, ಕೆಂಪು, ಹಳದಿ, ನುರುಜುಗಲ್ಲು ಶಿಲೆ, ಚಿನ್ನ ಎಂಬ ಕ್ರಮವಾದ ಭೂಮಿಯುಳ್ಳದಾಗಿ ಶ್ರೇಷ್ಠವಾದ ಉಪ್ಪರಿಗೆ ಮನೆಗಳಿಂದ ಕೂಡಿದುದಾಗಿರು

ತೇಷು ದಾನವದೈತೇಯಜಾತಯಃ ಶತಶಂಘಶಃ ।
ನಿವಶಂತಿ ಮಹಾನಾಗಜಾತಯಶ್ಚ ಮಹಾಮುನೇ ॥ ೪ ॥

ಸ್ವರ್ಲೋಕಾದಪಿ ರಮ್ಯಾಣಿ ಪಾತಾಲಾನೀತಿ ನಾರದಃ ।
ಪ್ರಾಹ ಸ್ವರ್ಗಸದಾಂ ಮಧ್ಯೇ ಪಾತಾಲೇಭ್ಯೋ ಗತೋ ದಿವಂ ॥ ೫ ॥

ಆಹ್ಲಾದಕಾರಿಣಃ ಶುಭ್ರಾಃ ಮಣಯೋ ಯತ್ರ ಸುಪ್ರಭಾಃ ।
ನಾಗಾಭರಣಭೂಷಾಸು ಪಾತಾಲಂ ಕೇನ ತತ್ಸಮಂ ॥ ೬ ॥

ದೈತ್ಯದಾನವಕನ್ಯಾಭಿರಿತಶ್ಚೇತಶ್ಚ ಶೋಭಿತೇ ।
ಪಾತಾಲೇ ಕಸ್ಯ ನ ಪ್ರೀತಿರ್ವಿಮುಕ್ತಸ್ಯಾಪಿ ಜಾಯತೇ ॥ ೭ ॥

ದಿವಾರ್ಕರಶ್ಮಯೋ ಯತ್ರ ಪ್ರಭಾಂ ತನ್ವಂತಿ ನಾತಪಂ ।
ಶಶಿನಶ್ಚ ನ ಶೀತಾಯ ನಿಶಿ ದ್ಯೋತಾಯ ಕೇವಲಂ ॥ ೮ ॥

ವುದು. ಅವುಗಳಲ್ಲಿ ದಾನವರು, ದೈತ್ಯರು, ನಾಗಗಳು ನೂರಾರು ಬಗೆಗಳಾಗಿ ಗುಂಪು ಗುಂಪಾಗಿ ವಾಸಮಾಡುವರು.

೫. ಪಾತಾಳ ಲೋಕಗಳನ್ನು ನೋಡಿಕೊಂಡು ಬಂದ ನಾರದನು ಸ್ವರ್ಗದಲ್ಲಿ ದೇವತೆಗಳ ಸಭೆಯ ನಡುವೆ "ಸ್ವರ್ಗಲೋಕಕ್ಕಿಂತಲೂ ಪಾತಾಳ ಲೋಕಗಳು ಮನೋಹರವಾಗಿವೆ" ಎಂದು ಹೇಳಿದನು.

೬–೮. ನಾಗಗಳು ಧರಿಸಿರುವ ಆಭರಣಗಳಲ್ಲಿರುವ ರತ್ನಗಳ ಕಾಂತಿಗಳು ಶುಭ್ರವಾಗಿ ಸಂತೋಷವನ್ನುಂಟುಮಾಡುತ್ತ ಬೆಳಕನ್ನು ಕೊಡುತ್ತಿರುವುವು. ಆದುದರಿಂದ ಈ ಲೋಕಕ್ಕೆ ಸಮಾನವಾದ ಲೋಕವಿಲ್ಲ. ದೈತ್ಯ, ದಾನವ ಕನ್ಯೆಯರು ಅತ್ತಿತ್ತ ತಿರುಗುವುದರಿಂದ ಅಲಂಕಾರವಾಗಿರುವ ಪಾತಾಳಲೋಕದ ವಿಷಯದಲ್ಲಿ ಮೋಕ್ಷ ಹೊಂದಿದವರಿಗೂ ಪ್ರೀತಿಯುಂಟಾಗುವುದು. ಅಲ್ಲಿ ಹಗಲಿನಲ್ಲಿ ಸೂರ್ಯ ಕಿರಣಗಳು ಬೆಳಕನ್ನು ಕೊಡುವುವೇ ಹೊರತು ಬಿಸಿಲನ್ನುಂಟುಮಾಡುವುದಿಲ್ಲ.

ಭಕ್ಷ್ಯಭೋಜ್ಯಮಹಾಪಾನಮುದಿತೈರತಿಭೋಗಿಭಿಃ ।
ಯತ್ರ ನ ಜ್ಞಾಯತೇ ಕಾಲೋ ಗತೋಽಪಿ ದನುಜಾದಿಭಿಃ ॥ ೯ ॥

ವನಾನಿ ನದ್ಯೋ ರಮ್ಯಾಣಿ ಸಾರಾಂಸಿ ಕಮಲಾಕರಾಃ ।
ಪುಂಸ್ಕೋಕಿಲಾಭಿಲಾಪಾಶ್ಚ ಮನೋಜ್ಞಾನ್ಯಂಬರಾಣಿ ಚ ॥ ೧೦ ॥

ಭೂಷಣಾನಿ ಚ ರಮ್ಯಾಣಿ ಗಂಧಾಢ್ಯಂ ಚಾನುಲೇಪನಂ ।
ವೀಣಾವೇಣುಮೃದಂಗಾನಾಂ ನಾದೈಸ್ತೂರ್ಯಾಣಿ ಚ ದ್ವಿಜ ॥ ೧೧ ॥

ಏತಾನ್ಯನ್ಯಾನಿ ಚೋದಾರಭಾಗ್ಯಭೋಗ್ಯಾನಿ ದಾನವೈಃ ।
ದೈತ್ಯೋರಗೈಶ್ಚ ಭುಜ್ಯಂತೆ ಪಾತಾಲಾಂತರಗೋಚರೈಃ ॥ ೧೨ ॥

ಪಾತಾಲಾನಾಮಧಶ್ಚಾಸ್ತೇ ವಿಷ್ಣೋರ್ಯಾ ತಾಮಸೀ ತನುಃ ।
ಶೇಷಾಖ್ಯಾ ಯದ್ಗುಣಾನ್ವಕ್ತುಂ ನ ಶಕ್ತಾ ದೈತ್ಯದಾನವಾಃ ॥ ೧೩ ॥

ರಾತ್ರಿಯಲ್ಲಿ ಚಂದ್ರಕಿರಣಗಳು ಬೆಳಕನ್ನು ಕೊಡುವುವು. ಶೀತವನ್ನುಂಟುಮಾಡು ವುದಿಲ್ಲ ಭಕ್ಷ್ಯಭೋಜ್ಯ ಮಹಾ ಪಾನಗಳಿಂದ ಸಂತೋಷಹೊಂದಿದ ಸುಖಾನುಭವದ ಲ್ಲಾಸಕ್ತರಾದ ಮನುಜರೇ ಮೊದಲಾದವರು ಕಳೆದುಹೋದ ಕಾಲವನ್ನೇ ತಿಳಿವುದಿಲ್ಲ.

೧೦–೧೨. ಮನೋಹರವಾದ ವನಗಳು, ನದಿಗಳು, ಕಮಲದ ಸರೋವರ ಗಳು, ಗಂಡು ಕೋಗಿಲೆಯ ಕೂಗು, ಮನೋಹರವಾದ ವಸ್ತ್ರಗಳು, ಆಭರಣಗಳು, ಸುಗಂಧವಾದ ಅನುಲೇಪನ, ವೀಣೆ, ಕೊಳಲು, ಮೃದಂಗ ಮುಂತಾದ ವಾದ್ಯಗಳ ಧ್ವನಿ ಮುಂತಾದ ಇನ್ನೂ ಅನೇಕ ಸುಖಗಳನ್ನು ಪಾತಾಳ ಲೋಕಗಳಲ್ಲಿರುವ ದೈತ್ಯರೂ, ದಾನವರೂ, ಉರಗರೂ ಅನುಭವಿಸುತ್ತಿರುವರು.

೧೩–೧೫ ಪಾತಾಳ ಲೋಕಗಳ ಕೆಳಭಾಗದಲ್ಲಿ ವಿಷ್ಣುವಿನ ತಾಮಸಗುಣ ಸಂಬಂಧವಾದ ಶೇಷನೆಂಬ ಹೆಸರಿನ ಶರೀರವಿರುವುದು. ಆ ಮೂರ್ತಿಯ ಗುಣಗಳನ್ನು ಹೇಳಲು ದೈತ್ಯದಾನವರಿಗೆ ಶಕ್ತಿಯಿಲ್ಲ. ಆ ಮೂರ್ತಿಗೆ ಅನಂತನೆಂದು ಹೆಸರಿರುವುದು, ಸಿದ್ಧರೂ, ದೇವತೆಗಳೂ, ದೇವರ್ಷಿಗಳೂ ಅವನನ್ನು ಪೂಜಿರುವರು. ಅವನಿಗೆ

ಯೋಽನಂತಃ ಪಠ್ಯತೇ ಸಿದ್ಧೈರ್ದೇವದೇವರ್ಷಿಪೂಜಿತಃ ।
ಸಹಸ್ರಶಿರಸಾ ವ್ಯಕ್ತಃ ಸ್ವಸ್ತಿಕಾಮಲಭೂಷಣಃ ॥ ೧೪ ॥

ಫಣಾಮಣಿಸಹಸ್ರೇಣ ಯಃ ಸ ವಿದ್ಯೋತಯನ್ ದಿಶಃ ।
ಸರ್ವಾನ್ ಕರೋತಿ ನಿರ್ವೀರ್ಯಾನ್ ಹಿತಾಯ ಜಗತೋಽಸುರಾನ್

ಮದಾಘೂರ್ಣಿತನೇತ್ರೋಽಸೌ ಯಃ ಸದೈವೈಕಕುಂಡಲಃ ।
ಕಿರೀಟಸ್ರಗ್ಧರೋ ಭಾತಿ ಸಾಗ್ನಿಃ ಶ್ವೇತಇವಾಚಲಃ ॥ ೧೬ ॥

ನೀಲವಾಸಾ ಮದೋದ್ರಿಕ್ತಃ ಶ್ವೇತಹಾರೋಪಶೋಭಿತಃ ।
ಸಾಭ್ರಗಂಗಾಪ್ರಪಾತೋಽಸೌ ಕೈಲಾಸಾದ್ರಿರಿವೋನ್ನತಃ ॥ ೧೭ ॥

ಲಾಂಗಲಾಸಕ್ತಹಸ್ತಾಗ್ರೋ ಬಿಭ್ರನ್ಮುಸಲಮುತ್ತಮಂ ।
ಉಪಾಸ್ಯತೇ ಸ್ವಯಂ ಕಾಂತ್ಯಾ ಯೋ ವಾರುಣ್ಯಾ ಚ ಮೂರ್ತಯಾ ॥ ೧೮ ॥

ಸಾವಿರ ಹೆಡೆಗಳಿರುವುವು. ಆ ಹೆಡೆಯಲ್ಲಿ ಸ್ವಸ್ತಿಕವೆಂಬ ರೇಖೆಯಿರುವುದು. ಆ ರೇಖೆಯೇ ಅವನಿಗೆ ಆಭರಣಪ್ರಾಯವಾಗಿರುವುದು. ಅವನ ಸಾವಿರ ಹೆಡೆಗಳಲ್ಲಿರುವ ರತ್ನಗಳಿಂದ ದಿಕ್ಕುಗಳೆಲ್ಲ ಪ್ರಕಾಶಿಸುತ್ತಿರುವುವು. ಅವನು ಆ ತೇಜಸ್ಸಿನಿಂದ ಜಗತ್ತಿನ ಹಿತಕ್ಕಾಗಿ ಸಮಸ್ತ ರಾಕ್ಷಸರನ್ನೂ ಶಕ್ತಿಹೀನರನ್ನಾಗಿ ಮಾಡುತ್ತಿರುವನು.

೧೬-೧೮. ಆ ಅನಂತನು ಮದದಿಂದ ಕಣ್ಣುಗಳನ್ನು ತಿರುಗಿಸುತ್ತ ಯಾವಾಗಲೂ ಒಂದೇ ಒಂದು ಕರ್ಣಾಭರಣವನ್ನೂ, ಕಿರೀಟವನ್ನೂ, ಹಾರವನ್ನೂ, ಧರಿಸಿ ಅಗ್ನಿಯಿಂದ ಕೂಡಿದ ಶ್ವೇತಪರ್ವತದಂತೆ ಪ್ರಕಾಶಿಸುತ್ತಿರುವನು. ನೀಲವಾದ ವಸ್ತ್ರವನ್ನು ಧರಿಸಿ ಮದಿಸಿದವನಾಗಿ ಬಿಳಿಯ ಹಾರವನ್ನು ಧರಿಸಿದ ಅವನು ಮೇಘಗಳಿಂದಲೂ, ಗಂಗಾಪ್ರವಾಹದಿಂದಲೂ ಕೂಡಿದ ಎತ್ತರವಾದ ಕೈಲಾಸಪರ್ವತದಂತೆ ಕಾಣುವನು. ಕೈಯಲ್ಲಿ ನೇಗಿಲನ್ನೂ, ಮುಸಲಾಯುಧವನ್ನೂ ಹಿಡಿದು ಪ್ರಕಾಶಿಸುತ್ತಾ ಮೂರ್ತಿರೂಪಳಾದ ಮದಿರಾದೇವಿಯ ಸೇವೆಯನ್ನು ಸ್ವೀಕರಿಸುತ್ತಿರುವನು.

ಕಲ್ಪಾಂತೇ ಯಸ್ಯ ವಕ್ತ್ರೇಭ್ಯೋ ವಿಷಾನಲಶಿಖೋಜ್ಜ್ವಲಃ ।
ಸಂಕರ್ಷಣಾತ್ಮಕೋ ರುದ್ರೋ ನಿಷ್ಕ್ರಮ್ಯಾತ್ತಿ ಜಗತ್ತ್ರಯಂ ॥ ೧೯ ॥

ಸ ಬಿಭ್ರಚ್ಛೇಖರೀಭೂತಮಶೇಷಂ ಕ್ಷಿತಿಮಂಡಲಂ ।
ಆಸ್ತೇ ಪಾತಾಲಮೂಲಸ್ಥಶ್ಶೇಷೋ ಶೇಷಸುರಾರ್ಚಿತಃ ॥ ೨೦ ॥

ತಸ್ಯ ವೀರ್ಯಂ ಪ್ರಭಾವಶ್ಚ ಸ್ವರೂಪಂ ರೂಪಮೇವ ಚ ।
ನಹಿ ವರ್ಣಯಿತುಂ ಶಕ್ಯಂ ಜ್ಞಾತುಂ ವಾ ತ್ರಿದಶೈರಪಿ ॥ ೨೧ ॥

ಯಸ್ಯೈಷಾ ಸಕಲಾ ಪೃಥ್ವೀ ಫಣಾಮಣಿಶಿಖಾರುಣಾ ।
ಆಸ್ತೇ ಕುಸುಮಮಾಲೇವ ಕಸ್ತದ್ವೀರ್ಯಂ ವದಿಷ್ಯತಿ ॥ ೨೨ ॥

ಯದಾ ವಿಜೃಂಭತೇಽನಂತೋ ಮದಾಘೂರ್ಣಿತಲೋಚನಃ ।
ತದಾ ಚಲತಿ ಭೂರೇಷಾ ಸಾದ್ರಿತೋಯಾ ಸಕಾನನಾ ॥ ೨೩ ॥

೧೯–೨೧. ಕಲ್ಪದ ಕೊನೆಯಲ್ಲುಂಟಾಗುವ ಪ್ರಳಯಕಾಲದಲ್ಲಿ ಇವನ ಬಾಯಿಗಳಿಂದ ವಿಷವೆಂಬ ಬೆಂಕಿಯ ಉರಿಯ ರೂಪನಾದ ಸಂಕರ್ಷಣನೆಂಬ ರುದ್ರನು ಹೊರಟು ಮೂರು ಲೋಕವನ್ನೂ ನುಂಗುವನು. ಆ ಶೇಷನು ಸಮಸ್ತ ಭೂಮಂಡಲವನ್ನೂ ಕಿರೀಟದಂತೆ ಧರಿಸಿಕೊಂಡು ಪಾತಾಳ ಲೋಕದ ಬುಡದಲ್ಲಿರುವನು. ಸಮಸ್ತ ದೇವತೆಗಳೂ ಅವನನ್ನು ಪೂಜಿಸುವರು. ಅವನ ಬಲವನ್ನೂ ಮಹಿಮೆಯನ್ನೂ ತತ್ವವನ್ನೂ ಆಕಾರವನ್ನೂ ದೇವತೆಗಳೂ ತಿಳಿಯಲಾರರು.ಮತ್ತು ವರ್ಣಿಸಲಾರರು.

೨೨–೨೩. ಸಮಸ್ತ ಭೂಮಂಡಲವೂ ಆದಿಶೇಷನ ಹೆಡೆಯ ರತ್ನದ ಕಾಂತಿಯಂತೆ ಕೆಂಪಾಗಿ ಹೂಮಾಲೆಯಂತೆ ಇರುತ್ತಿರಲು ಅವನ ಬಲವನ್ನು ಯಾರು ಹೇಳಬಲ್ಲರು? ಅನಂತನು ಮದದಿಂದ ಕಣ್ಣುಗಳನ್ನು ತಿರುಗಿಸುತ್ತ ಆಗುಳಿಸಿದಾಗ ಪರ್ವತಗಳು, ಸಮುದ್ರಗಳು, ಕಾಡುಗಳು ಇವುಗಳಿಂದ ಕೂಡಿದ ಈ ಭೂಮಿಯು ಚಲಿಸುವುದು. ಗಂಧರ್ವರು, ಅಪ್ಸರಸರು, ಸಿದ್ಧರು, ಕಿನ್ನರರು, ಉರಗರು, ಚಾರಣರು

ಗಂಧರ್ವಾಪ್ಸರಸಃ ಸಿದ್ಧಾಃ ಕಿನ್ನರೋರಗಚಾರಣಾಃ ।
ನಾಂತಂ ಗುಣಾನಾಂ ಗಚ್ಛಂತಿ ತೇನಾನಂತೋಽಯಮವ್ಯಯಃ ॥ ೨೪ ॥

ಯಸ್ಯ ನಾಗವಧೂಹಸ್ತೈರ್ಲೇಪಿತಂ ಹರಿಚಂದನಂ ।
ಮುಹುಃ ಶ್ವಾಸನಿಲಾಪಾಸ್ತಂ ಯಾತಿ ದಿಕ್ಪಟವಾಸತಾಂ ॥ ೨೫ ॥

ಯಮಾರಾಧ್ಯ ಪುರಾಣರ್ಷಿರ್ಗರ್ಗೋ ಜ್ಯೋತೀಂಷಿ ತತ್ವತಃ ।
ಜ್ಞಾತವಾನ್ ಸಕಲಂ ಚೈವ ನಿಮಿತ್ತಫಲಿತಂ ಫಲಂ ॥ ೨೬ ॥

ತೇನೇಯಂ ನಾಗವರ್ಯೇಣ ಶಿರಸಾ ವಿಧೃತಾ ಮಹೀ ।
ಬಿಭರ್ತಿ ಮಾಲಾಂ ಲೋಕಾನಾಂ ಸದೇವಾಸುರಮಾನುಷಾಂ ॥ ೨೭ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಪಂಚಮೋಽಧ್ಯಾಯಃ

ಇವರೆಲ್ಲರೂ ಅನಂತನ ಗುಣಗಳ ಕೊನೆಯನ್ನು ತಿಳಿಯಲಾರದುದರಿಂದ ನಾಶರಹಿತನಾದ ಇವನಿಗೆ ಅನಂತನೆಂದು ಹೆಸರು ಬಂದಿರುವುದು. ನಾಗಸ್ತ್ರೀಯರು ತಮ್ಮ ಕೈಗಳಿಂದ ಇವನಿಗೆ ಬಳಿದ ಶ್ರೀಗಂಧವು ಇವನು ಉಸಿರುಬಿಡುವ ಗಾಳಿಯಿಂದ ಹಾರಿ ಹೋಗಿ ದಿಕ್ಕುಗಳಲ್ಲಿ ಸುಗಂಧ ದ್ರವ್ಯದ ಹುಡಿಯನ್ನು ಎರಚಿದಂತೆ ಕಾಣುವುದು.

೨೬-೨೭. ಪುರಾತನ ಋಷಿಯಾದ ಗರ್ಗನು ಈ ಅನಂತನನ್ನು ಪೂಜಿಸಿ ಅವನ ಅನುಗ್ರಹದಿಂದ ಗ್ರಹ ನಕ್ಷತ್ರಾದಿಗಳ ಚಲನರೂಪವಾದ ಜ್ಯೋತಿಶ್ಶಾಸ್ತ್ರದ ತತ್ವವನ್ನೂ, ಶುಭಾಶುಭ ಫಲಗಳನ್ನೂ ಶಕುನಗಳನ್ನೂ ತಿಳಿದುಕೊಂಡನು. ಇಂತಹ ನಾಗಶ್ರೇಷ್ಠನಾದ ಆದಿಶೇಷನು ದೇವಾಸುರ ಮನುಷ್ಯರಿಂದಲೂ ಲೋಕಗಳ ಸಾಲಿನಿಂದಲೂ ಕೂಡಿದ ಈ ಭೂಮಿಯನ್ನು ತಲೆಯಲ್ಲಿ ಧರಿಸಿರುವನು. ಸಮಸ್ತ ಲೋಕಗಳಿಗೂ ಆಶ್ರಯವಾದ ಭೂಮಿಗೆ ಅನಂತನು ಆಶ್ರಯನಾಗಿರುವನೆಂದು ಮುಖ್ಯಾಭಿಪ್ರಾಯವು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಐದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣುಪುರಾಣೇ ಪ್ರಥಮಾಂಶೇ

ಷಷ್ಠೋಽಧ್ಯಾಯಃ

॥ ಪರಾಶರ ಉವಾಚ ॥

ತತಶ್ಚ ನರಕಾನ್ವಿಪ್ರ ಭುವೋಽಧಃ ಸಲಿಲಸ್ಯ ಚ ।
ಪಾಪಿನೋ ಯೇಷು ಪಚ್ಯಂತೇ ತಾನ್ ಶೃಣುಷ್ವ ಮಹಾಮುನೇ ॥ ೧ ॥

ರೌರವಸ್ಸೂಕರೋ ರೋಧಸ್ತಾಲೋ ವಿಶಸನಸ್ತಥಾ ।
ಮಹಾಜ್ವಾಲಸ್ತಪ್ತಕುಂಭೋ ಲವಣೋಽಥ ವಿಲೋಹಿತಃ ॥ ೨ ॥

ರುಧಿರಾಂಭೋ ವೈತರಣಿಃ ಕ್ರಿಮಿಶಃ ಕ್ರಿಮಿಭೋಜನಃ ।
ಅಸಿಪತ್ರವನಂ ಕೃಷ್ಣೋ ಲಾಲಾಭಕ್ಷಶ್ಚ ದಾರುಣಃ ॥ ೩ ॥

ಆರನೆಯ ಅಧ್ಯಾಯವು.

೧. ಭಾರತ ವರ್ಷದಲ್ಲಿ ಪುಣ್ಯವನ್ನು ಮಾಡಿದವರಿಗೆ ಸುಖವನ್ನು ಅನುಭವಿಸುವ ಭೂಭಾಗಗಳನ್ನು ಹೇಳಿಯಾಯಿತು. ಪಾಪಮಾಡಿದವರಿಗೆ ಯಾತನೆಯನ್ನನುಭವಿಸುವ ಭೂಭಾಗವನ್ನು ಹೇಳಲಾಗುವುದು. ಮೈತ್ರೇಯನೇ ಕೇಳು. ಭೂಮಿಯು ತಮೋಗರ್ಭೋದಕದಿಂದ ಕೆಳಗೆ ಪಾಪಿಗಳು ದುಃಖವನ್ನನುಭವಿಸುವ ಸ್ಥಳಗಳನ್ನು ಹೇಳುವೆನು.

೨-೬. ರೌರವ, ಸೂಕರ, ರೋಧ, ತಾಲ, ವಿಶಸನ, ಮಹಾಜ್ವಾಲ, ತಪ್ತಕುಂಭ, ಲವಣ, ವಿಲೋಹಿತ, ರುಧಿರಾಂಭ, ವೈತರಣಿ, ಕ್ರಿಮಿಶ, ಕ್ರಿಮಿಭೋಜನ

ತಥಾ ಪೂಯವಹಃ ಪಾಪೋ ವಹ್ನಿಜ್ವಾಲೋ ಹ್ಯಧಃ ಶಿರಾಃ ।
ಸಂದಂಶಃ ಕೃಷ್ಣಸೂತ್ರಶ್ಚ ತಮಶ್ಚಾವೀಚಿರೇವ ಚ ॥ ೪ ॥

ಶ್ವಭೋಜನೋಽಥಾಪ್ರತಿಷ್ಠೋ ಹ್ಯವೀಚಿಶ್ಚ ತಥಾಪರಃ ।
ಇತ್ಯೇವಮಾದಯಶ್ಚಾನ್ಯೇ ನರಕಾ ಭೃಶದಾರುಣಾಃ ॥ ೫ ॥

ಯಮಸ್ಯ ವಿಷಯೇ ಘೋರಾಃ ಶಸ್ತ್ರಾಗ್ನಿಭಯದಾಯಿನಃ ।
ಪತಂತಿ ಯೇಷು ಪುರುಷಾಃ ಪಾಪಕರ್ಮರತಾಸ್ತು ಯೇ ॥ ೬ ॥

ಕೂಟಸಾಕ್ಷೀ ತಥಾ ಸಮ್ಯಕ್ ಪಕ್ಷಪಾತೇನ ಯೋ ವದೇತ್ ।
ಯಶ್ಚಾನ್ಯದ ನೃತಂ ವಕ್ತಿ ಸ ನರೋ ಯಾತಿ ರೌರವಂ ॥ ೭ ॥

ಭ್ರೂಣಹಾ ಪುರಹಂತಾ ಚ ಗೋಘ್ನಶ್ಚ ಮುನಿಸತ್ತಮ ।
ಯಾಂತಿ ತೇ ನರಕಂ ರೋಧಂ ಯಶ್ಚೋಚ್ಛ್ವಾಸನಿರೋಧಕಃ ॥ ೮ ॥

ಅಸಿಪತ್ರವನ, ಕೃಷ್ಣ, ಲಾಲಾಭಕ್ಷ, ದಾರುಣ, ಪೂಯವಹ, ಪಾಪ, ವಹ್ನಿಜ್ವಾಲ, ಅಧಃಶಿರ, ಸಂದಂಶ, ಕೃಷ್ಣಸೂತ್ರ, ತಮ, ಅವೀಚಿ. ಶ್ವಭೋಜನ, ಅಪ್ರತಿಷ್ಠ, ದ್ವಿತೀಯಾವೀಚಿ ಇವೇ ಮೊದಲಾದ ಇನ್ನೂ ಭಯಂಕರವಾದ ನರಕಗಳು ಯಮನ ರಾಜ್ಯದಲ್ಲಿ ಕ್ರೂರವಾದ ಆಯುಧಗಳ ಮತ್ತು ಬೆಂಕಿಯ ಭಯವನ್ನುಂಟುಮಾಡುತ್ತಿರುವುವು. ಪಾಪಕಾರ್ಯಗಳನ್ನು ಮಾಡಿದ ಜನರು ಆ ನರಕಗಳಲ್ಲಿ ಬೀಳುವರು.

೭–೧೧. ತನಗೆ ತಿಳಿದಿರುವುದನ್ನು ಬೇರೆ ವಿಧವಾಗಿ ಸಾಕ್ಷಿಹೇಳುವವನೂ, ಪಕ್ಷಪಾತದಿಂದ ಅನ್ಯಾಯವನ್ನು ಹೇಳುವ ನ್ಯಾಯಾಧಿಕಾರಿಯೂ, ಸುಳ್ಳನ್ನು ಹೇಳುವ ಮನುಜನೂ ರೌರವವೆಂಬ ನರಕಕ್ಕೆ ಹೋಗುವರು. ಗರ್ಭವನ್ನು ನಾಶಮಾಡಿದವನೂ, ಪಟ್ಟಣವನ್ನು ಹಾಳುಮಾಡಿದವನೂ, ಗೋವನ್ನು ಕೊಂದವನೂ, ಉಸಿರನ್ನು ತಡೆದು ಹಿಂಸೆಕೊಡುವ ನರಕಕ್ಕೆ ಹೋಗುವರು. ಮದ್ಯವನ್ನು ಕುಡಿದವನೂ, ಬ್ರಹ್ಮಹತ್ಯೆ ಮಾಡಿದವನೂ, ಚಿನ್ನವನ್ನು ಕದ್ದವನೂ, ಇವರೊಡನೆ ಸ್ನೇಹದಿಂದಿರುವವವೂ, ಸೂಕರವೆಂಬ ನರಕಕ್ಕೆ ಹೋಗುವರು. ಕ್ಷತ್ರಿಯನನ್ನೂ, ವೈಶ್ಯನನ್ನು ಕೊಂದವನೂ,

ಸುರಾಪೋ ಬ್ರಹ್ಮಹಾ ಹರ್ತಾ ಸುವರ್ಣಸ್ಯ ಚ ಸೂಕರೇ ।
ಪ್ರಯಾತಿ ನರಕೇ ಯಶ್ಚ ತೈಃ ಸಂಸರ್ಗಮುಪೈತಿ ವೈ ॥ ೯ ॥

ರಾಜನ್ಯವೈಶ್ಯ ಹಂತಾಯಃ ತಥೈವ ಗುರುತಲ್ಪಗಃ ।
ತಪ್ತಕುಂಭೇ ಸ್ವಸಾಗಾಮೀ ಹಂತಿ ರಾಜಭಟಾಂಶ್ಚ ಯಃ ॥ ೧೦ ॥

ಸಾಧ್ವೀವಿಕ್ರಯಕೃದ್ಬಂಧಪಾಲಃ ಕೇಸರಿವಿಕ್ರಯೀ ।
ತಪ್ತಲೋಹೇ ಪತಂತ್ಯೇತೇ ಯಶ್ಚ ಭಕ್ತಂ ಪರಿತ್ಯಜೇತ್ ॥ ೧೧ ॥

ಸುತಾಂ ಸ್ನುಷಾಂ ಚಾಭಿಗಾಮೀ ಮಹಾಜ್ವಾಲೇ ನಿಪಾತ್ಯತೇ ।
ಅವಮಂತಾ ಗುರೂಣಾಂ ಯೋ ಯಶ್ಚಾಕ್ರೋಷ್ಟಾ ನರಾಧಮಃ ॥ ೧೨ ॥

ವೇದದೂಷಯಿತಾ ಯಶ್ಚ ವೇದವಿಕ್ರಯಕಶ್ಚ ಯಃ ।
ಅಗಮ್ಯಗಾಮೀ ಯಶ್ಚ ಸ್ಯಾತ್ತೇ ಯಾಂತಿ ಲವಣಂ ದ್ವಿಜ । ॥ ೧೩ ॥

ಚೋರೋ ವಿಲೋಹೇ ಪತತಿ ಮರ್ಯಾದಾದೂಷಕಸ್ತಥಾ ॥ ೧೪ ॥

ಗುರುಪತ್ನೀ ಸಂಗ ಮಾಡಿದವನೂ, ಸಹೋದರಿಯರ ಸಂಗ ಮಾಡಿದವನೂ, ರಾಜನ ದೂತನನ್ನು ಕೊಂದವನೂ ತಪ್ತಕುಂಭವೆಂಬ ನರಕಕ್ಕೆ ಹೋಗುವರು. ಪತಿವ್ರತೆಯಾದ ಹೆಂಡತಿಯನ್ನು ಮಾರಿದವನೂ, ಸೆರೆಮನೆಯನ್ನು ಕಾಯುವವನೂ, ಕುದುರೆಯನ್ನು ಮಾರುವವನೂ, ತನ್ನ ಆಳನ್ನು ಬಿಟ್ಟುಬಿಡುವವನೂ ತಪ್ತಲೋಹವೆಂಬ ನರಕದಲ್ಲಿ ಬೀಳುವರು.

೧೨-೧೪. ಸೊಸೆಯೊಡನೆಯೂ, ಮಗಳೊಡನೆಯೂ ಸಂಗಮಾಡಿದವನೂ, ಗುರುಗಳನ್ನು ಅಪಮಾನ ಮಾಡಿದವನೂ, ಬೈಯುವವನೂ ಮಹಾಜ್ವಾಲವೆಂಬ ನರಕಕ್ಕೆ ಬೀಳುವರು. ವೇದವನ್ನು ನಿಂದಿಸುವವನೂ, ಅದನ್ನು ಮಾರುವವನೂ. ಪರಸ್ತ್ರೀಗಮನ ಮಾಡುವವನೂ ಲವಣವೆಂಬ ನರಕಕ್ಕೆ ಹೋಗುವರು. ಕಳ್ಳನೂ, ಧರ್ಮ ಮಾರ್ಗವನ್ನು ದೂಷಿಸುವವನೂ ವಿಲೋಹವೆಂಬ ನರಕಕ್ಕೆ ಹೋಗವರು,

ದೇವದ್ವಿಜಪಿತೃದ್ವೇಷ್ಟಾ ರತ್ನದೂಷಯಿತಾ ಚ ಯಃ
ಸ ಯಾತಿ ಕೃಮಿಭಕ್ಷೇ ವೈ ಕೃಮಿಶೇ ಚ ದುರಿಷ್ಟಕೃತ್ । ॥ ೧೫ ॥

ಪಿತೃದೇವಾತಿಥೀಂಸ್ತ್ಯಕ್ತ್ವಾ ಪರ್ಯಶ್ನಾತಿ ನರಾಧಮಃ
ಲಾಲಾಭಕ್ಷೇ ಸ ಯಾತ್ಯುಗ್ರೇ ಶರಕರ್ತಾ ಚ ವೇಧಕೇ । ॥ ೧೬ ॥

ಕರೋತಿ ಕರ್ಣಿನೋ ಯಶ್ಚ ಯಶ್ಚ ಖಡ್ಗಾದಿಕೃನ್ನರಃ।
ಪ್ರಯಾಂತ್ಯೇತೇ ವಿಶಸನೇ ನರಕೇ ಭೃಶದಾರುಣೇ । ॥ ೧೭ ॥

ಅಸತ್ಪ್ರತಿಗೃಹೀತಾ ತು ನರಕೇ ಯಾತ್ಯಧೋಮುಖೇ।
ಅಯಾಜ್ಯಯಾಜಕಶ್ಚೈವ ತಥಾ ನಕ್ಷತ್ರಸೂಚಕಃ । ॥ ೧೮ ॥

ವೇಗೀ ಪೂಯವಹಂ ಚೈಕೋ ಯಾತಿ ಮೃಷ್ಟಾನ್ನಭುಕ್ ನರಃ ॥ ೧೯ ॥

ಲಾಕ್ಷಾಮಾಂಸರಸಾನಾಂ ಚ ತಿಲಾನಾಂ ಲವಣಸ್ಯ ಚ ।
ವಿಕ್ರೇತಾ ಬ್ರಾಹ್ಮಣೋ ಯಾತಿ ತಮೇವ ನರಕಂ ದ್ವಿಜ ॥ ೨೦ ॥

ದೇವತೆಗಳನ್ನೂ, ಬ್ರಾಹ್ಮಣರನ್ನೂ, ಪಿತೃಗಳನ್ನೂ, ದ್ವೇಷಿಸುವವನೂ, ರತ್ನವನ್ನು ದೂಷಿಸತಕ್ಕವನೂ ಕೃಮಿಭಕ್ಷವೆಂಬ ನರಕಕ್ಕೆ ಹೋಗುವನು. ದುಷ್ಟವಾದ ಯಾಗ (ಅಭಿಚಾರ) ವನ್ನು ಮಾಡುವವನು ಕೃಮಿಶವೆಂಬ ನರಕಕ್ಕೆ ಹೋಗುವನು.

೧೬–೧೭. ಪಿತೃಗಳನ್ನೂ, ದೇವತೆಗಳನ್ನೂ, ಅತಿಥಿಗಳನ್ನೂ ಬಿಟ್ಟು ಮುಂಚಿತವಾಗಿ ಊಟಮಾಡುವವನು ಲಾಲಾಭಕ್ಷವೆಂಬ ನರಕಕ್ಕೆ ಹೋಗುವನು. ಬಾಣಗಳನ್ನು ಮಾಡುವವನು ವೇಧಕವೆಂಬ ನರಕಕ್ಕೆ ಹೋಗುವನು. ಕರ್ಣಿಯೆಂಬ ಬಾಣಗಳನ್ನೂ, ಕತ್ತಿ ಮೊದಲಾದ ಆಯುಧಗಳನ್ನೂ ಮಾಡುವವನು ಕ್ರೂರವಾದ ವಿಶಸನವೆಂಬ ನರಕಕ್ಕೆ ಹೋಗುವನು.

೧೮–೨೧. ಅಯೋಗ್ಯರಿಂದ ಅಯೋಗ್ಯವಾದ ಪದಾರ್ಥಗಳನ್ನು ದಾನ ತೆಗೆದುಕೊಳ್ಳತಕ್ಕವನು ಅಧೋಮುಖವೆಂಬ ನರಕಕ್ಕೆ ಹೋಗುವನು. ಯಾಗ ಮಾಡಲು ಯೋಗ್ಯರಲ್ಲದವರಿಗೆ ಯಾಗ ಮಾಡಿಸುವವನೂ, ಶಾಸ್ತ್ರಜ್ಞಾನವಿಲ್ಲದೆ ಜ್ಯೋತಿಷ ಫಲಗಳನ್ನು ಹೇಳಿ ಜೀವಿಸುವವನೂ ಅದೇ ನರಕಕ್ಕೇ ಹೋಗುವರು ಕೈಯಲ್ಲಾಗದ

ಮಾರ್ಜಾರಕುಕ್ಕುಟಚ್ಛಾಗಶ್ವವರಾಹವಿಹಂಗಮಾನ್ ।
ಪೋಷಯನ್ನರಕಂ ಯಾತಿ ತಮೇವ ದ್ವಿಜಸತ್ತಮ ॥ ೨೧ ॥

ಅಪೂಪವಿಕ್ರಚ್ಚೈವ ತಥಾಪುಸ್ತಕ ವಿಕ್ರಯೀ ।
ರಂಗೋಪಜೀವೀ ಕೈವರ್ತಃ ಕುಂಡಾಶೀಗರದಸ್ತಥಾ ।
ಸೂಚೀ ಮಾಹಿಷಿಕಶ್ಚೈವ ಪರ್ವಕಾರೀ ಚ ಯೋ ದ್ವಿಜ ॥ ೨೨ ॥

ಆಗಾರದಾಹೀ ಮಿತ್ರಘ್ನಃ ಶಾಕುನಿಗ್ರಾಮಯಾಜಕಃ ।
ರುಧಿರಾಪೇ ಪತಂತ್ಯೇತೇ ಸೋಮ ವಿಕ್ರಯಿಣಶ್ಚ ಯೇ ॥ ೨೩ ॥

ಕಾರ್ಯವನ್ನು ಸಾಹಸದಿಂದ ಮಾಡುವವನೂ, ಮಕ್ಕಳು ಮುಂತಾದವರನ್ನು ಬಿಟ್ಟು ತಾನೊಬ್ಬನೇ ಮೃಷ್ಟಾನ್ನವನ್ನುಣ್ಣುವನೂ, ಅರಗು, ಮಾಂಸ, ಎಳ್ಳು, ಉಪ್ಪು, ಬೆಲ್ಲ ಮುಂತಾದ ರಸವರ್ಗಗಳು ಇವುಗಳನ್ನು ಮಾರುವ ಬ್ರಾಹ್ಮಣನೂ, ಬೆಕ್ಕು, ಕೋಳಿ, ಆಡು, ನಾಯಿ, ಹಂದಿ, ಹಕ್ಕಿಗಳು, ಇವುಗಳನ್ನು ಸಾಕುವ ಬ್ರಾಹ್ಮಣನೂ ಪೂಯವಹ ವೆಂಬ ನರಕಕ್ಕೆ ಹೋಗುವರು.

೨೨-೨೩. ಬ್ರಾಹ್ಮಣನಾದವನು ಭಕ್ಷ್ಯಗಳನ್ನು ಮಾರಿದರೂ, ಪುಸ್ತಕ ಗಳನ್ನು ಮಾರಿದರೂ, ನಾಟ್ಯದಿಂದ ಜೀವಿಸಿದರೂ, ಬೇಟೆಯಿಂದ ಜೀವಿಸಿದರೂ, ಗಂಡನು ಜೀವಿಸಿದ್ದಾಗ ಜಾರತನದಿಂದ ಹುಟ್ಟಿದ ಕುಂಡನೆಂಬವನ ಮನೆಯಲ್ಲಿ ಊಟಮಾಡಿದರೂ, ವಿಷವನ್ನು ಹಾಕಿದರೂ, ಚಾಡಿ ಹೇಳಿದರೂ, ಎಮ್ಮೆಯಿಂದ ಜೀವಿಸಿದರೂ, ಅಥವಾ ಹೆಂಡತಿಯು ಸಂಪಾದಿಸಿದ ಹಣದಿಂದ ಜೀವಿಸಿದರೂ ಧನದಾಸೆ ಯಿಂದ ಪರ್ವದಿನವಲ್ಲದಾಗ ಪರ್ವಕಾರ್ಯಗಳನ್ನು ಮಾಡಿಸಿದರೂ, ಮನೆಯನ್ನು ಸುಟ್ಟರೂ, ಮಿತ್ರನನ್ನು ಕೊಂದರೂ ಗ್ರಾಮಸಂಪಾದನೆಗೋಸ್ಕರ ಯಜ್ಞವನ್ನು ಸೋಮರಸವನ್ನು (ಯಾಗಫಲ) ಮಾರಿದರೂ ರುಧಿರಾಪವೆಂಬ ನರಕದಲ್ಲಿ ಬೀಳುವನು.

ಮಧುಹಾ ಗ್ರಾಮಹಂತಾ ಚ ಯಾತಿ ವೈತರಣೀಂ ನರಃ । ॥ ೨೪ ॥

ಧನಯೌವನ ಮತ್ತಾಶ್ಚ ಮರ್ಯಾದಾ ಭೇದಿನೋಹಿಯೇ ।
ತೇ ಕೃಷ್ಣಂ ಯಾಂತ್ಯಶೌಚಾಶ್ಚ ಕುಹಕಾಜೀವಿನಶ್ಚ ಯೇ ॥ ೨೫ ॥

ಅಸಿಪತ್ರವನಂ ಯಾತಿ ವನಚ್ಛೇದೀ ವೃಥೈವ ಯಃ ।
ಔರಭ್ರಿಕೋ ಮೃಗವ್ಯಾಧಾ ವಹ್ನಿಜ್ವಾಲೇ ಪತಂತಿ ವೈ ॥ ೨೬ ॥

ಯಾಂತ್ಯೇ ತೇ ದ್ವಿಜ ತತ್ರೈವ ಯಶ್ಚಾಪಾಕೇಷು ವಹ್ನಿದಃ ॥ ೨೭ ॥

ವ್ರತೇಷು ಲೋಪಕೋ ಯಶ್ಚ ಸ್ವಾಶ್ರಮಾತ್ಪ್ರಚ್ಯುತಶ್ಚ ಯಃ ।
ಸಂದಂಶೇಯಾತನಾಮಧ್ಯೇ ಪತತಸ್ತಾವುಭಾವಪಿ ॥ ೨೮ ॥

ದಿವಾಸ್ವಪ್ನೇಷು ಸ್ಕಂದಂತಿ ಯೇ ನರಾ ಬ್ರಹ್ಮಚಾರಿಣಃ ।
ಪುತ್ರೈರಧ್ಯಾಪಿತಾ ಯೇ ಚ ತೇ ಪತಂತಿ ಶ್ವಭೋಜನೇ । ॥ ೨೯ ॥

೨೪-೨೭. ಜೇನುಗೂಡನ್ನು ನಾಶಮಾಡುವವನು, ವೈತರಣೀನದಿಯಲ್ಲಿ ಬೀಳುವವನು, ಧನಮದದಿಂದಲೂ, ಪ್ರಾಯದ ಮದದಿಂದಲೂ ಹೊಲ, ಗದ್ದೆಗಳನ್ನಾಕ್ರಮಿಸಿದವರು, ಶುಚಿತ್ವವಿಲ್ಲದವರು, ಇಂದ್ರಜಾಲ ವೃತ್ತಿಯಿಂದ ಜೀವಿಸುವವರು ಇವರೆಲ್ಲರೂ ಕೃಷ್ಣಸೂತ್ರವೆಂಬ ನರಕಕ್ಕೆ ಹೋಗುವರು. ಯಜ್ಞಾರ್ಥವಲ್ಲದೆ ವ್ಯರ್ಥವಾಗಿ ಕಾಡಿನ ಮರಗಳನ್ನು ಕಡಿಯುವವನು ಅಸಿಪತ್ರವೆಂಬ ನರಕಕ್ಕೆ ಹೋಗುವನು. ಆಡು; ಕುರಿಗಳಿಂದ ಜೀವಿಸುವವನೂ, ಮೃಗಗಳನ್ನು ಬೇಟೆಯಾಡಿ ಜೀವಿಸುವವನೂ, ಇಟ್ಟಿಗೆ, ಮಣ್ಣಿನಮಡಕೆ ಮುಂತಾದುವನ್ನು ಸುಡುವವನೂ ವಹ್ನಿಜ್ವಾಲವೆಂಬ ನರಕಕ್ಕೆ ಹೋಗುವರು.

೨೮-೨೯ ಮಾಡಬೇಕಾದ ವ್ರತಗಳನ್ನು ಬಿಟ್ಟವರೂ, ತಮ್ಮ ಆಶ್ರಮಧರ್ಮವನ್ನು ಬಿಟ್ಟವರೂ, ಸಂದಂಶವೆಂಬ ಯಾತನೆಯನ್ನುಂಟುಮಾಡುವ ನರಕಕ್ಕೆ ಬೀಳುವರು. ಹಗಲು ನಿದ್ರೆಮಾಡುವ ಬ್ರಹ್ಮಚಾರಿಗಳೂ, ಶುಕ್ಲವನ್ನು ವಿಸರ್ಜಿಸುವವರೂ, ಮಕ್ಕಳುಗಳಿಂದ ಶಿಷ್ಯರಿಗೆ ವೇದವನ್ನು ಹೇಳಿಸುವವರೂ ಶ್ವಭೋಜನವೆಂಬ ನರಕಕ್ಕೆ ಹೋಗುವರು.

ಏತೇ ಚಾನ್ಯೇ ಚ ನರಕಾಃ ಶತಶೋಽಥ ಸಹಸ್ರಶಃ ।
ಏಷು ದುಷ್ಕೃತಕರ್ಮಾಣಃ ಪಚ್ಯಂತೇ ಯಾತನಾಗತಾಃ ॥ ೩೦ ॥

ತಥೈವ ಪಾಪಾನ್ಯೇತಾನಿ ತಥಾನ್ಯಾನಿ ಸಹಸ್ರಶಃ ।
ಭುಜ್ಯಂತೇ ಯಾನಿ ಪುರುಷೈಃ ನರಕಾಂತರಗೋಚರೈಃ ॥ ೩೧ ॥

ವರ್ಣಾಶ್ರಮವಿರುದ್ಧಂ ಚ ಕರ್ಮ ಕುರ್ವಂತಿ ಯೇ ನರಾಃ ।
ಕರ್ಮಣಾ ಮನಸಾ ವಾಚಾ ನಿರಯೇಷು ಪತಂತಿ ತೇ ॥ ೩೨ ॥

ಅಧಃ ಶಿರೋಭಿಃ ದೃಶ್ಯಂತೇ ನಾರಕೈರ್ದಿವಿ ದೇವತಾಃ ।
ದೇವಾಶ್ಚಾಧೋಮುಖಾನ್ಸರ್ವಾನ್ ಅಧಃ ಪಶ್ಯಂತಿ ನಾರಕಾನ್ ॥ ೩೩ ॥

೩೦-೩೨. ಇವಲ್ಲದೆ ಇನ್ನೂ ಸಾವಿರಾರು ನರಕಗಳಿರುವುವು. ಅವುಗಳಲ್ಲಿ ಪಾಪಿಗಳು ಯಾತನೆಯನ್ನನುಭವಿಸುತ್ತಿರುವರು. ಪಾಪಿಗಳು ದೊಡ್ಡ ಪಾಪಗಳಿಗೆ ಗೊತ್ತಾದ ನರಕ ದುಃಖವನ್ನನುಭವಿಸಿದಮೇಲೆ ಮಿಕ್ಕ ಸಣ್ಣ ಪಾಪಗಳಿಗೆ ಬೇರೆ ಬೇರೆ ನರಕಗಳಲ್ಲಿ ದುಃಖವನ್ನನುಭವಿಸುವರು. ವರ್ಣಾಶ್ರಮ ಧರ್ಮಗಳಿಗೆ ವಿರುದ್ಧವಾದ ಕರ್ಮಗಳನ್ನು ಯಾರು ಮನೋವಾಕ್ಕಾಯಗಳೆಂಬ ತ್ರಿಕರಣಪೂರ್ವಕವಾಗಿ ಮಾಡುವರೋ ಅವರೂ ನರಕಗಳಲ್ಲಿ ಬೀಳುವರು.

೩೩. ನರಕಲೋಕದಲ್ಲಿರುವವರು ಸ್ವರ್ಗದಲ್ಲಿರುವ ದೇವತೆಗಳನ್ನು ನೋಡಿ ತಲೆಯನ್ನು ತಗ್ಗಿಸುವರು. ಅಂದರೆ ಸುಖಿಗಳಾದ ದೇವತೆಗಳನ್ನು ನೋಡಿ ಅವರಿಗೆ ಕ್ಲೇಶವು ಅಧಿಕವಾಗುವುದೆಂದು ಭಾವವು. ದೇವತೆಗಳೂ ತಲೆಯನ್ನು ತಗ್ಗಿಸಿದ ನರಕದುಃಖವನ್ನನುಭವಿಸುವವರನ್ನು ನೋಡಿ ತಾವೂ ತಲೆಯನ್ನು ತಗ್ಗಿಸುವರು ಅಂದರೆ ತಮ್ಮ ಪುಣ್ಯಕ್ಷಯವಾದ ಮೇಲೆ ಪಾಪಕರ್ಮ ಫಲಾನುಭವಕ್ಕಾಗಿ ನರಕದಲ್ಲಿ ಬೀಳುವೆವೆಂಬ ಸಂದೇಹದಿಂದ ಅವರಿಗೆ ಸ್ವರ್ಗದಲ್ಲಿಯೂ ಸುಖವಿಲ್ಲವೆಂದು ಭಾವವು. (ನರಕದವರಿಗೆ ದೇವದರ್ಶನವು ಅವರ ದುಃಖಾತಿಶಯವನ್ನು ತೋರಿಸುವುದಕ್ಕಾಗಿ ದೇವತೆಗಳಿಗೆ ನರಕದ ದರ್ಶನವು ವೈರಾಗ್ಯೋತ್ಪತ್ತಿಗಾಗಿ ಹೇಳಿರುವುದು.)

ಸ್ಥಾವರಾಃ ಕ್ರಿಮಯೋಽಬ್ಜಾಃ ಪಕ್ಷಿಣಃ ಪಶವೋ ನರಾಃ ।
ಧಾರ್ಮಿಕಾಸ್ತ್ರಿದಶಾಸ್ತದ್ವನ್ಮೋಕ್ಷಿಣಶ್ಚ ಯಥಾಕ್ರಮಂ ॥ ೩೪ ॥

ಸಹಸ್ರಭಾಗಃ ಪ್ರಥಮೋ ದ್ವಿತೀಯಾನುಕ್ರಮಾತ್ತಥಾ ।
ಸರ್ವೇ ಹ್ಯೇತೇ ಮಹಾಭಾಗ ಯಾವನ್ಮುಕ್ತಿಸಮಾಶ್ರಯಾಃ ॥ ೩೫ ॥

ಯಾವಂತೋ ಜಂತವಸ್ಸ್ವರ್ಗೇ ತಾವಂತೋ ನರಕೌಕಸಃ ।
ಪಾಪಕೃದ್ಯಾತಿನರಕಂ ಪ್ರಾಯಶ್ಚಿತ್ತಪರಾಙ್ಮುಖಃ ॥ ೩೬ ॥

---

೩೪. ಪಾಪಿಗಳು ನರಕದುಃಖವನ್ನನುಭವಿಸಿದ ಮೇಲೆ ಕ್ರಮವಾಗಿ ಸ್ಥಾವರ, ಕ್ರಿಮಿ, ಮೀನು ಮುಂತಾದ ಜಲಜಂತುಗಳು, ಪಕ್ಷಿಗಳು, ಪಶುಗಳು, ಮನುಜರು, ಧಾರ್ಮಿಕರು, ದೇವತೆಗಳು, ಮುಮುಕ್ಷುಗಳು ಎಂಬ ಒಂಭತ್ತು ಬಗೆಯ ಜನ್ಮಗಳಲ್ಲಿ ಪುಣ್ಯವಿಶೇಷದಿಂದ ಉತ್ತರೋತ್ತರ ಉತ್ಕೃಷ್ಟವಾದ ಜನ್ಮವನ್ನು ಪಡೆವರು.

೩೫. ಈ ಒಂಭತ್ತು ಬಗೆಯ ಜನ್ಮಗಳಲ್ಲಿ ಸ್ಥಾವರಜನ್ಮವನ್ನು ಪಡೆದ ಜೀವರುಗಳಲ್ಲಿ ಸಾವಿರಕ್ಕೊಬ್ಬ ಜೀವನು ಕ್ರಿಮಿ ಜನ್ಮವನ್ನೂ, ಕ್ರಿಮಿ ಜನ್ಮದಲ್ಲಿ ಸಾವಿರಕ್ಕೊಬ್ಬನು ಜಲಜಂತು ಜನ್ಮವನ್ನೂ, ಹೀಗೆಯೇ ಉತ್ತರೋತ್ತರವಾಗಿ ಸಾವಿರಕ್ಕೊಬ್ಬ ಜೀವನು ಪುಣ್ಯದಿಂದ ಉತ್ಕೃಷ್ಟ ಜನ್ಮವನ್ನು ಪಡೆವನು. ಮುಮುಕ್ಷುಗಳು ಜ್ಞಾನನಿಷ್ಠರಾದುದರಿಂದ ಅಲ್ಲಿಯವರೆಗೇ ಈ ಜನ್ಮಗಳ ಪ್ರಾಪ್ತಿಯು ಕರ್ಮಾನುಸಾರವಾಗಿ ಜೀವರಿಗೆ ಉಂಟಾಗುವುವು. ಸಂಸಾರದಲ್ಲಿ ಸ್ಥಾವರಾದಿ ಜೀವರುಗಳ ಸಂಖ್ಯೆಯೇ ವಿಶೇಷವಾಗಿರುವುದು. ಉತ್ತರೋತ್ತರ ಜನ್ಮಗಳಲ್ಲಿ ಜೀವರುಗಳ ಸಂಖ್ಯೆಯು ಕಡಿಮೆಯಾಗುತ್ತ ಬರುವುದು. ಇದರಿಂದ ಮೋಕ್ಷವು ದುರ್ಲಭವಾದುದೆಂದು ಸೂಚಿಸಿದಹಾಗಾಯಿತು. ಈ ಒಂಭತ್ತು ಬಗೆಯ ಜನ್ಮಕ್ರಮವು ನಿಯಮಿತವಾದುದಲ್ಲ. ಪುಣ್ಯ ಪಾಪಗಳ ಹೆಚ್ಚು ಕಡಿಮೆಯಿಂದ ದೇವನಾಗಿದ್ದವನು ಮನುಷ್ಯನಾಗಬಹುದು.

೩೬. ಸ್ವರ್ಗದಲ್ಲಿ ಎಷ್ಟು ಜೀವರುಗಳಿರುವರೋ ಅಷ್ಟೇ ಜೀವರು ನರಕದಲ್ಲಿಯೂ ಇರುವರು. ಅಂದರೆ, ನರಕಾನುಭವವಾದ ಮೇಲೆ ಪುಣ್ಯದಿಂದ ಸ್ವರ್ಗಾನುಭವವೂ, ಸ್ವರ್ಗಾನುಭವವಾದ ಮೇಲೆ ಪಾಪಶೇಷದಿಂದ ನರಕಾನುಭವವೂ ಉಂಟಾಗುವುದೆಂದು ಭಾವವು. ಪಾಪಮಾಡಿದವನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ನರಕಕ್ಕೆ ಹೋಗುವನು. ಪ್ರಾಯಶ್ಚಿತ್ತ ಮಾಡಿಕೊಂಡರೆ ನರಕವಾಸವಿಲ್ಲ.

ಪಾಪಾನಾಮನುರೂಪಾಣಿ ಪ್ರಾಯಶ್ಚಿತ್ತಾನಿ ಯದ್ಯಥಾ ।
ತಥಾ ತಥೈವ ಸಂಸ್ಮೃತ್ಯ ಪ್ರೋಕ್ತಾನಿ ಪರಮರ್ಷಿಭಿ ॥ ೩೭ ॥

ಪಾಪೇ ಗುರೂಣಿ ಗುರುಣಿ ಸ್ವಲ್ಪಾನ್ಯಲ್ಪೇ ಚ ತದ್ವಿದಃ ।
ಪ್ರಾಯಶ್ಚಿತ್ತಾನಿ ಮೈತ್ರೇಯ ಜಗುಃ ಸ್ವಾಯಂಭುವಾದಯಃ ॥ ೩೮ ॥

ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃ ಕರ್ಮಾತ್ಮಕಾನಿ ವೈ ।
ಯಾನಿ ತೇಷಾಮಶೇಷಾಣಾಂ ಕೃಷ್ಣಾನುಸ್ಮರಣಂ ಪರಂ ॥ ೩೯ ॥

ಕೃತೇ ಪಾಪೇಽನುತಾಪೋ ವೈ ಯಸ್ಯ ಪುಂಸಃ ಪ್ರಜಾಯತೇ ।
ಪ್ರಾಯಶ್ಚಿತ್ತಂ ತು ತಸ್ಯೈಕಂ ಹರಿಸಂಸ್ಮರಣಂ ಪರಂ ॥ ೪೦ ॥

---

೩೭. ಪಾಪಗಳಿಗೆ ಅನುರೂಪವಾದ ಪ್ರಾಯಶ್ಚಿತ್ತವಾವುದು? ಅದನ್ನು ಯಾವ ಕ್ರಮದಲ್ಲಿ ಮಾಡಿಕೊಳ್ಳಬೇಕು? ಎಂಬುದನ್ನು ಮಹರ್ಷಿಗಳು ಹೇಳಿರುವರು.

೩೮. ಪ್ರಾಯಶ್ಚಿತ್ತವು ಕರ್ಮ, ಭಕ್ತಿ, ಜ್ಞಾನ ರೂಪವಾಗಿ ಮೂರು ಬಗೆಯಾಗಿರುವುದು. ಶಾಸ್ತ್ರಗಳಲ್ಲಿ ಪಾಪಗಳಿಗೆ ಕರ್ಮರೂಪವಾದ ಪ್ರಾಯಶ್ಚಿತ್ತವನ್ನು ಹೇಳಿರುವುದು. ಪ್ರಬಲವಾದ ಪಾಪವಾದರೆ ಪ್ರಾಯಶ್ಚಿತ್ತ ಕರ್ಮವೂ ಪ್ರಬಲವಾದುದಾಗುವುದು. ಅಲ್ಪವಾದುದಾದರೆ ಅಲ್ಪವಾಗುವುದು. ಇದನ್ನು ವೇದಾರ್ಥವನ್ನು ಬಲ್ಲ ಸ್ವಾಯಂಭುವಾದಿ ಮನುಗಳು ಧರ್ಮಶಾಸ್ತ್ರ ರೂಪದಲ್ಲಿ ಹೇಳಿರುವರು.

೩೯. ಸಮಸ್ತ ಪ್ರಾಯಶ್ಚಿತ್ತಗಳೂ ತಪೋರೂಪವಾದ ದಾನಪೂಜಾ ರೂಪವಾದ ಕರ್ಮಗಳಾಗಿರುವುವು. ಕರ್ಮರೂಪವಾದ ಪ್ರಾಯಶ್ಚಿತ್ತದಿಂದ ಪಾಪಗಳು ನಿಶ್ಶೇಷವಾಗಿ ಹೋಗುವುದಿಲ್ಲವಾದುದರಿಂದಲೂ, ಅವುಗಳನ್ನು ಮಾಡುವುದು ಕಷ್ಟವಾದುದರಿಂದಲೂ ಭಕ್ತಿಯಿಂದ ಶ್ರೀ ಕೃಷ್ಣನ ಸ್ಮರಣೆಯನ್ನು ಮಾಡುವುದೇ ಸುಲಭವಾದುದಾಗಿಯೂ, ಶ್ರೇಷ್ಠವಾದುದಾಗಿಯೂ ಇರುವುದು.

೪೦. ಯಾವ ಮನುಷ್ಯನಿಗೆ ತಾನು ಪಾಪಕಾರ್ಯ ಮಾಡಿದುದಕ್ಕೆ ಸಂತಾಪ ಉಂಟಾಗುವುದೋ ಅದೇ ಅವನಿಗೆ ಪ್ರಾಯಶ್ಚಿತ್ತವು. ಅವನು ಅನುತಾಪಪಡುವಾಗ ಹರಿಸ್ಮರಣೆಯನ್ನು ಮಾಡುತ್ತಿದ್ದರೆ ಅದೇ ಶ್ರೇಷ್ಠವಾದ ಪ್ರಾಯಶ್ಚಿತ್ತವಾಗುವುದು.

ಪ್ರಾತರ್ನಿಶಿ ತಥಾ ಸಂಧ್ಯಾ ಮಧ್ಯಾಹ್ನಾದಿಷು ಸಂಸ್ಮರನ್ ।
ನಾರಾಯಣಮವಾಪ್ನೋತಿ ಸದ್ಯಃ ಪಾಪಕ್ಷಯಂನರಃ ॥ ೪೧ ॥

ವಿಷ್ಣುಸಂಸ್ಮರಣಕ್ಷೀಣ ಸಮಸ್ತಕ್ಲೇಶಸಂಚಯಃ ।
ಮುಕ್ತಿಂ ಪ್ರಯಾತಿ ಸ್ವರ್ಗಾಪ್ತಿಸ್ತಸ್ಯ ವಿಘ್ನೋನುಮೀಯತೇ ॥ ೪೨ ॥

ವಾಸುದೇವೇ ಮನೋ ಯಸ್ಯ ಜಪಹೋಮಾರ್ಚನಾದಿಷು ।
ತಸ್ಯಾಂತರಾಯೋ ಮೈತ್ರೇಯ ದೇವೇಂದ್ರತ್ವಾದಿಕಂ ಫಲಂ ॥ ೪೩ ॥

ಕ್ವ ನಾಕಪೃಷ್ಠಗಮನಂ ಪುನರಾವೃತ್ತಿಲಕ್ಷಣಂ ।
ಕ್ವ ಜಪೋ ವಾಸುದೇವೇತಿ ಮುಕ್ತಿಬೀಜಮನುತ್ತಮಂ ॥ ೪೪ ॥

---

೪೧ ಪ್ರಾತಃಕಾಲ, ರಾತ್ರಿ, ಸಂಧ್ಯಾಕಾಲಗಳು, ಮಧ್ಯಾಹ್ನ ಮುಂತಾದ ಕಾಲಗಳಲ್ಲಿ ನಾರಾಯಣನ ಸ್ಮರಣೆಯನ್ನು ಮಾಡುತ್ತಿದ್ದರೆ ಆ ಕ್ಷಣವೇ ಪಾಪಗಳೆಲ್ಲ ನಾಶವಾಗುವುವು. ಪ್ರಾಯಶ್ಚಿತ್ತಕ್ಕೆ ದೇಶ, ಕಾಲ, ಅವಸ್ಥಾ ಮುಂತಾದ ನಿಯಮಗಳುಂಟು. ಆದರೂ ಅದು ಕಾಲಾಂತರದಲ್ಲಿ ಪಾಪವನ್ನು ನಾಶಮಾಡುವುದು. ಹರಿಸ್ಮರಣೆಗೆ ದೇಶ ಕಾಲಾದಿಗಳ ನಿಯಮವಿಲ್ಲ. ತತ್ಕ್ಷಣದಲ್ಲಿಯೇ ಪಾಪ ಕ್ಷಯರೂಪವಾದ ಫಲಪ್ರಾಪ್ತಿಯಾಗುವುದರಿಂದ ನಾರಾಯಣ ಸ್ಮರಣೆಯು ಅತ್ಯಂತ ಶ್ರೇಷ್ಠವಾದುದು.

೪೨. ವಿಷ್ಣುವಿನ ಸ್ಮರಣೆಯಿಂದ ಮನುಷ್ಯನು ತನ್ನ ಸಮಸ್ತ ಕ್ಲೇಶಗಳನ್ನೂ ಕಳೆದುಕೊಂಡು ಮೋಕ್ಷವನ್ನು ಹೊಂದುವನು. ಸ್ವರ್ಗಪ್ರಾಪ್ತಿಯು ಮೋಕ್ಷಕ್ಕೆ ವಿಘ್ನಕಾರಿಯಾದುದು.

೪೩. ಜಪ, ಹೋಮ, ದೇವತಾರ್ಚನಾದಿಗಳಲ್ಲಿ ವಾಸುದೇವನನ್ನು ಸ್ಮರಿಸಿ ಫಲಸಮರ್ಪಣೆಯನ್ನು ಮಾಡುವುದೂ ಮೋಕ್ಷಕಾರಣವಾಗಿರುವುದು. ಜಪ ಹೋಮಾದಿಗಳಿಂದ ಪ್ರಾಪ್ತವಾದ ದೇವೇಂದ್ರತ್ವವೇ ಮುಂತಾದ ಅಧಿಕಾರಗಳು ಮೋಕ್ಷಕ್ಕೆ ವಿಘ್ನಕಾರಿಗಳು.

೪೪–೪೬. ಸತ್ಯಲೋಕಾದಿಗಳಿಗೆ ಹೋದರೂ ಪುಣ್ಯಕ್ಷಯವಾದ ಮೇಲೆ ಪುನರ್ಜನ್ಮವುಂಟಾಗುವುದು. ಮುಕ್ತಿಗೆ ಕಾರಣವಾದ ವಾಸುದೇವಮಂತ್ರ ಜಪವೇ

ತಸ್ಮಾದಹರ್ನಿಶಂ ವಿಷ್ಣುಂ ಸಂಸ್ಮರನ್ ಪುರುಷೋ ಮುನೇ ।
ನ ಯಾತಿ ನರಕಂ ಸದ್ಯಃ ಸಂಕ್ಷೀಣಾಖಿಲಪಾತಕಃ ॥ ೪೫ ॥

ಮನಃ ಪ್ರೀತಿಕರಃ ಸ್ವರ್ಗೋ ನರಕಸ್ತದ್ವಿಪರ್ಯಯಃ ।
ನರಕಃ ಸ್ವರ್ಗಸಂಜ್ಞೇ ವೈ ಪಾಪಪುಣ್ಯೇ ದ್ವಿಜೋತ್ತಮ ॥ ೪೬ ॥

ವಸ್ತ್ವೇಕಮೇವ ದುಃಖಾಯ ಸುಖಾಯೇರ್ಷ್ಯೋದ್ಭವಾಯ ಚ ।
ಕೋಪಾಯ ಚ ಯತಸ್ತಸ್ಮಾದ್ವಸ್ತುದುಃಖಾತ್ಮಕಂ ಕುತಃ ॥ ೪೭ ॥

ತದೇವ ಪ್ರೀತಯೇ ಭೂತ್ವಾ ಪುನರ್ದುಃಖಾಯ ಜಾಯತೇ ।
ತದೇವ ಕೋಪಾಯ ತತಃ ಪ್ರಸಾದಾಯ ಚ ಜಾಯತೇ ॥ ೪೮ ॥

ತಸ್ಮಾದ್ದುಃಖಾತ್ಮಕಂ ನಾಸ್ತಿ ನ ಚ ಕಿಂಚಿತ್ಸುಖಾತ್ಮಕಂ ।
ಮನಸಃ ಪರಿಣಾಮೋಽಯಂ ಸುಖದುಃಖಾದಿಲಕ್ಷಣಂ ॥ ೪೯ ॥

ಅತ್ಯಂತ ಶ್ರೇಷ್ಠವಾದುದು. ಆದುದರಿಂದ ಮನುಷ್ಯನು ಹಗಲೂ ರಾತ್ರಿಯೂ ವಿಷ್ಣು ಸ್ಮರಣೆಯನ್ನು ಮಾಡುತ್ತಿದ್ದರೆ ಆ ಕ್ಷಣದಲ್ಲಿಯೇ ಸಮಸ್ತ ಪಾಪಗಳೂ ನಾಶವಾಗುವುದರಿಂದ ನರಕಕ್ಕೆ ಹೋಗುವುದಿಲ್ಲ. ಸ್ವರ್ಗವು ಮನಸ್ಸಿಗೆಹಿತವಾಗಿರುವುದು. ನರಕವು ಮನಸ್ಸಿಗೆ ಬೇಡವಾದುದು. ಪಾಪವೇ ನರಕವು. ಪುಣ್ಯವೇ ಸ್ವರ್ಗವು. ಅಂದರೆ ಪಾಪಪುಣ್ಯಗಳು ನರಕ ಸ್ವರ್ಗಸಾಧನಗಳೆಂದು ಅಭಿಪ್ರಾಯವು.

೪೭–೪೯. ಒಂದೇ ವಸ್ತುವು ದೇಶ, ಕಾಲ, ಭೋಕ್ತೃ ಭೇದದಿಂದ ಸುಖಕ್ಕೂ ದುಃಖಕ್ಕೂ ಈರ್ಷ್ಯೆಗೂ ಕೋಪಕ್ಕೂ ಕಾರಣವಾಗುವುದು. ಆದುದರಿಂದ ಹೂ, ಗಂಧ, ಸ್ತ್ರೀ ಮುಂತಾದ ಸಕಲ ವಸ್ತುಗಳೂ ಅಸತ್ಯವಾದುವುಗಳು. ಸಂತೋಷ ಸಾಧಕವಾದ ವಸ್ತುವೇ ದುಃಖಕಾರಣವೂ ಆಗುವುದು. ಕೋಪಕ್ಕೆ ಕಾರಣವಾದುದೇ ಶಾಂತಿಗೂ ಕಾರಣವಾಗುತ್ತದೆ. ಆದುದರಿಂದ ಯಾವ ವಸ್ತುವೇ ಆಗಲಿ ಕೇವಲ ಸುಖಸಾಧನವೂ ಅಲ್ಲ. ಕೇವಲ ದುಃಖಸಾಧನವೂ ಅಲ್ಲ. ಸುಖದುಃಖಾದಿಗಳು ಮನಸ್ಸಿನ ಪರಿಣಾಮವಾಗಿರುವುದು.

ಜ್ಞಾನಮೇವ ಪರಂ ಬ್ರಹ್ಮಾಽಜ್ಞಾನಂ ಬಂಧಾಯ ಚೇಷ್ಯತೇ ॥ ೫೦ ॥

ಜ್ಞಾನಾತ್ಮಕಮಿದಂ ಸರ್ವಂ ನ ಜ್ಞಾನಾದ್ವಿದ್ಯತೇ ಪರಂ ।
ವಿದ್ಯಾಽವಿದ್ಯೇ ಚ ಮೈತ್ರೇಯ ಜ್ಞಾನಮೇವೋಪಧಾರಯ ॥ ೫೧ ॥

ಏವಮೇತನ್ಮಯಾಖ್ಯಾತಂ ಭವತೋ ಮಂಡಲಂ ಭುವಃ ।
ಪಾತಾಲಾನಿ ಚ ಸರ್ವಾಣಿ ತಥೈವ ನರಕಾದ್ವಿಜ ॥ ೫೨ ॥

ಸಮುದ್ರಾಃ ಪರ್ವತಾಶ್ಚೈವ ದ್ವೀಪವರ್ಷಾಣಿ ನಿಮ್ನಗಾಃ ।
ಸಂಕ್ಷೇಪಾತ್ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೫೩ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಷಷ್ಠೋಽಧ್ಯಾಯಃ

೫೦-೫೧. ಜ್ಞಾನವೇ ಪರಬ್ರಹ್ಮ ಸ್ವರೂಪವಾದುದು. ಅವಿದ್ಯೆಯಿಂದ ಅಹಂಕಾರಾದಿ ರೂಪವಾಗಿ ಕಂಡ ಜ್ಞಾನವೇ ಬಂಧಕವಾದುದು. ಜ್ಞಾನವೇ ವಿದ್ಯೆಯಿಂದ ಅಹಂಕಾರಾದಿ ರೂಪವಾದ ಅಜ್ಞಾನವನ್ನು ನಾಶಮಾಡಿ ಸಂಸಾರ ಬಂಧದ ಬಿಡುಗಡೆಯನ್ನುಂಟುಮಾಡುವುದು. ಇದೇ ಮೋಕ್ಷವು. ಸಮಸ್ತ ಪ್ರಪಂಚವೂ ಜ್ಞಾನಸ್ವರೂಪವಾದುದೇ ಆದುದರಿಂದ ಜ್ಞಾನಕ್ಕಿಂತ ಬೇರೆಯಾದ ವಸ್ತುವೇ ಇಲ್ಲ. ಮೈತ್ರೇಯನೇ, ವಿದ್ಯೆಯೂ, ಅವಿದ್ಯೆಯೂ ಜ್ಞಾನವೆಂದೇ ತಿಳಿಯಬೇಕು. ಕರ್ಮ ಫಲಾಪೇಕ್ಷಾರೂಪವಾದ ಅಜ್ಞಾನವಿರುವವರೆಗೆ ಪ್ರಾಯಶ್ಚಿತ್ತಾದಿಗಳು ಬೇಕು. ಫಲಾಪೇಕ್ಷೆಯಿಲ್ಲದೆ ಆತ್ಮಾನುಸಂಧಾನವುಳ್ಳ ಅಪರೋಕ್ಷ ಜ್ಞಾನಿಗೆ ಪಾಪ ಶಂಕೆಯೇ ಇಲ್ಲದುದರಿಂದ ಪ್ರಾಯಶ್ಚಿವೂ ಇಲ್ಲ. ಪರಬ್ರಹ್ಮವೊಂದೇ ಸತ್ಯವಾದುದರಿಂದ ಅದರ ಪ್ರಾಪ್ತಿಗೆ ಪ್ರಯತ್ನವನು ಮಾಡಬೇಕು.

೫೨-೫೩. "ಮೈತ್ರೇಯನೇ ಭೂಮಂಡಲದ ಸ್ವರೂಪವನ್ನೂ ಪಾತಾಳಾದಿ ಲೋಕಗಳನ್ನೂ ನರಕ ಲೋಕವನ್ನೂ ನಿನಗೆ ಹೇಳಿದೆನು. ಸಮುದ್ರಗಳು, ಪರ್ವತಗಳು, ನದಿಗಳು, ದ್ವೀಪಗಳು, ವರ್ಷಗಳು ಇವುಗಳನ್ನು ಸಂಕ್ಷೇಪವಾಗಿ ಹೇಳಿದೆನು. ಮತ್ತೇನನ್ನು ಕೇಳಬೇಕೆಂದಿರುವೆಯೋ ಅದನ್ನು ಹೇಳು" ಎಂದು ಹೇಳಿದನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ದ್ವಿತೀಯಾಂಶದಲ್ಲಿ

ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ದ್ವಿತೀಯಾಂಶೇ

ಸಪ್ತಮೋಽಧ್ಯಾಯಃ

॥ ಮೈತ್ರೇಯ ಉವಾಚ ॥

ಕಥಿತಂ ಭಗವನ್ ಬ್ರಹ್ಮನ್ ಮಮೈತದಖಿಲಂ ತ್ವಯಾ ।
ಭುವರ್ಲೋಕಾದಿಕಾನ್ ಲೋಕಾನ್ ಶ್ರೋತುಮಿಚ್ಛಾಮ್ಯಹಂ ಗುರೋ

ತಥೈವ ಗ್ರಹಸಂಸ್ಥಾನ ಪ್ರಮಾಣಾನಿ ಯಥಾ ತಥಾ ।
ಸಮಾಚಕ್ಷ್ವ ಮಹಾಭಾಗ ಮಹ್ಯಂ ತ್ವಾಂಪರಿಪೃಚ್ಛತೇ ॥ ೨ ॥

ಏಳನೆಯ ಅಧ್ಯಾಯ

೧–೨. ಮೈತ್ರೇಯನು, " ಬ್ರಹ್ಮಜ್ಞಾನಿಗಳಾದ ಪರಾಶರರೇ ! ತಾವು ನನಗೆ ಭೂಲೋಕದ ವಿಚಾರವನ್ನೆಲ್ಲ ಹೇಳಿದಿರಿ. ಭುವರ್ಲೋಕಾದಿ ಸಮಸ್ತ ಲೋಕಗಳನ್ನೂ, ಗ್ರಹಗಳು ಇರುವ ಸ್ಥಳಗಳನ್ನೂ, ಅವುಗಳಲ್ಲಿ ಒಂದು ಗ್ರಹದಿಂದ ಮತ್ತೊಂದು ಗ್ರಹಕ್ಕೆ ಇರುವ ದೂರ ಮುಂತಾದುವುಗಳನ್ನೂ ವಿಸ್ತಾರವಾಗಿ ಹೇಳಬೇಕು " ಎಂದನು.

॥ ಪರಾಶರ ಉವಾಚ ॥

ರವಿಚಂದ್ರಮಸೋರ್ಯಾವತ್ ಮಯೂಖೈರವಭಾಸ್ಯತೇ ।
ಸಸಮುದ್ರಸರಿಚ್ಛೈಲಾ ತಾವತೀ ಪೃಥಿವೀ ಸ್ಮೃತಾ ॥ ೩ ॥

ಯಾವತ್ಪ್ರಮಾಣಾ ಪೃಥಿವೀ ವಿಸ್ತಾರಪರಿಮಂಡಲಾತ್ ।
ನಭಸ್ತಾವತ್ಪ್ರಮಾಣಂ ವೈ ವ್ಯಾಸಮಂಡಲತೋ ದ್ವಿಜ ॥ ೪ ॥

ಭೂಮೇರ್ಯೋಜನಲಕ್ಷೇ ತು ಮೈತ್ರೇಯ ರವಿಮಂಡಲಂ ।
ಲಕ್ಷೇ ದಿವಾಕರಸ್ಯಾಪಿ ಮಂಡಲಂ ಶಶಿನಃ ಸ್ಥಿತಂ ॥ ೫ ॥

ಪೂರ್ಣೇ ಶತಸಹಸ್ರೇ ತು ಯೋಜನಾನಾಂ ನಿಶಾಕರಾತ್ ।
ನಕ್ಷತ್ರಮಂಡಲಂ ಕೃತ್ಸ್ನಂ ಉಪರಿಷ್ಟಾತ್ಪ್ರಕಾಶತೇ ॥ ೬ ॥

ದ್ವೇ ಲಕ್ಷೇ ಚೋಪರಿ ಬ್ರಹ್ಮನ್ ಬುಧೋ ನಕ್ಷತ್ರಮಂಡಲಾತ್ ।
ತಾವತ್ಪ್ರಮಾಣಭಾಗೇ ತು ಬುಧಸ್ಯಾಪ್ಯುಶನಾಸ್ಥಿತಃ ॥ ೭ ॥

೩–೪. ಪರಾಶರರು ಹೇಳುವರು:— ಸೂರ್ಯಚಂದ್ರರ ಕಿರಣಗಳಿಂದ ಪ್ರಕಾಶಿಸುತ್ತಿರುವ ಸಮುದ್ರ, ಪರ್ವತ, ನದಿಗಳಿಂದ ಕೂಡಿದ ಭೂಮಿಯೇ ಭೂಲೋಕವು. ಭೂಮಿಯ ವ್ಯಾಸವು ಎಷ್ಟು ಅಳತೆಯಿದೆಯೋ ಭೂಪರಿಧಿಯಿಂದ ಅಷ್ಟೇ ದೂರದವರೆಗೆ ಭೂಮಿಯ ಸುತ್ತಲೂ ಆಕಾಶರೂಪವಾದ ಭುವರ್ಲೋಕವಿರುವುದು.

೫–೧೧. ಭೂಮಿಗೆ ಲಕ್ಷ ಯೋಜನ ದೂರದಲ್ಲಿ ಸೂರ್ಯ ಮಂಡಲವಿರುವುದು. ಸೂರ್ಯನಿಂದ ಲಕ್ಷ ಯೋಜನ ದೂರದಲ್ಲಿ ಚಂದ್ರಮಂಡಲವಿರುವುದು. ಚಂದ್ರನಿಂದ ಲಕ್ಷ ಯೋಜನ ದೂರದಲ್ಲಿ ನಕ್ಷತ್ರ ಮಂಡಲವಿರುವುದು. ನಕ್ಷತ್ರ ಮಂಡಲದಿಂದ ಎರಡು ಲಕ್ಷ ಯೋಜನ ದೂರದಲ್ಲಿ ಬುಧಗ್ರಹವಿರುವುದು. ಬುಧನಿಗೆ ಅಷ್ಟೇ ದೂರದಲ್ಲಿ ಶುಕ್ರಗ್ರಹವಿರುವುದು. ಶುಕ್ರನಿಗೆ ಅಷ್ಟೇ ದೂರದಲ್ಲಿ ಅಂಗಾರಕನಿರುವನು. ಅಂಗಾರಕನಿಗೆ ಎರಡು ಲಕ್ಷ ಯೋಜನ ದೂರದಲ್ಲಿ ಗುರುವು ಇರುವನು. ಬೃಹಸ್ಪತಿಗೆ

ಅಂಗಾರಕೋಽಪಿ ಶುಕ್ರಸ್ಯ ತತ್ಪ್ರಮಾಣೇ ವ್ಯವಸ್ಥಿತಃ ।
ಲಕ್ಷದ್ವಯೇನ ಭೌಮಸ್ಯ ಸ್ಥಿತೋ ದೇವಪುರೋಹಿತಃ ॥ ೮ ॥
ಸೌರಿರ್ಬೃಹಸ್ಪತೇಶ್ಚೋರ್ಧ್ವಂ ದ್ವಿಲಕ್ಷೇ ಸಮವಸ್ಥಿತಃ ।
ಸಪ್ತರ್ಷಿಮಂಡಲಂ ತಸ್ಮಾಲ್ಲಕ್ಷಮೇಕಂ ದ್ವಿಜೋತ್ತಮ ॥ ೯ ॥
ಋಷಿಭ್ಯಸ್ತು ಸಹಸ್ರಾಣಾಂ ಶತಾದೂರ್ಧ್ವಂ ವ್ಯವಸ್ಥಿತಃ ।
ಮೇಧೀಭೂತಃ ಸಮಸ್ತಸ್ಯ ಜ್ಯೋತಿಶ್ಚಕ್ರಸ್ಯ ವೈ ಧ್ರುವಃ ॥ ೧೦ ॥
ತ್ರೈಲೋಕ್ಯಮೇತತ್ಕಥಿತಂ ಉತ್ಸೇಧೇನ ಮಹಾಮುನೇ ।
ಇಜ್ಯಾಫಲಸ್ಯ ಭೂರೇಷಾ ಇಜ್ಯಾ ಚಾತ್ರ ಪ್ರತಿಷ್ಠಿತಾ ॥ ೧೧ ॥
ಧ್ರುವಾದೂರ್ಧ್ವಂ ಮಹರ್ಲೋಕೋ ಯತ್ರ ತೇ ಕಲ್ಪವಾಸಿನಃ ।
ಏಕಯೋಜನಕೋಟೇ ತು ಮಹರ್ಲೋಕೋಭಿಧೀಯತೇ ॥ ೧೨ ॥

ಎರಡು ಲಕ್ಷ ಯೋಜನ ದೂರದಲ್ಲಿ ಗುರುವು ಇರುವನು. ಬೃಹಸ್ಪತಿಗೆ ಎರಡು ಲಕ್ಷ ಯೋಜನ ದೂರದಲ್ಲಿ ಶನಿಯು ಇರುವನು. ಅಲ್ಲಿಂದಾಚೆಗೆ ಲಕ್ಷ ಯೋಜನ ದೂರದಲ್ಲಿ ಸಪ್ತರ್ಷಿ ಮಂಡಲವಿರುವುದು. ಸಪ್ತರ್ಷಿ ಮಂಡಲಕ್ಕೆ ಲಕ್ಷ ಯೋಜನ ದೂರದಲ್ಲಿ ಧ್ರುವ ನಕ್ಷತ್ರವಿರುವುದು. ಈ ಧ್ರುವ ನಕ್ಷತ್ರವು ಜ್ಯೋತಿಶ್ಚಕ್ರದ ನಡುವೆ ಇರುವುದು. ಈ ಗ್ರಹ ಮಂಡಲವಿರುವ ಪ್ರದೇಶವೆಲ್ಲ ಸ್ವರ್ಗಲೋಕವು ಭಾರತ ಭೂಮಿಯಲ್ಲಿ ಮಾಡಿದ ಯಾಗಾದಿಗಳಿಗೆ ಫಲಾನುಭವ ಸ್ಥಾನವಾಗಿರುವ ಮೂರು ಲೋಕಗಳನ್ನೂ ಹೇಳಿರುವೆನು. (ಭಾರತ ಭೂಮಿಯಲ್ಲಿ ಹುಟ್ಟಿದವರು ಯಾವಾಗಲೂ ಧರ್ಮಕಾರ್ಯದಲ್ಲಾಸಕ್ತರಾಗಿರಬೇಕೆಂದು ಇದರ ಅಭಿಪ್ರಾಯವು).

೧೨. ಧ್ರುವ ಮಂಡಲದಿಂದ ಮೇಲೆ ಒಂದು ಕೋಟಿ ಯೋಜನ ಎತ್ತರವಾದ ಮಹರ್ಲೋಕವಿರುವುದು. ಅಲ್ಲಿ ಕಲ್ಪಪರ್ಯಂತವಾಗಿ ವಾಸಮಾಡುವ ಭೃಗುವೇ ಮೊದಲಾದವರಿರುವರು. ಕಲ್ಪಾಂತದಲ್ಲಿ ಮೂರು ಲೋಕವೂ ಸಂಕರ್ಷಣ ರೂಪವಾದ ಅಗ್ನಿ ಶಕ್ತಿಯಿಂದ ಸುಡುತ್ತಿರಲಾಗಿ ಅದರ ಶಾಕದಿಂದ ಆ ಭೃಗ್ವಾದಿಗಳು ಜನಲೋಕಕ್ಕೆ ಹೋಗುವರು.

ದ್ವೇಕೋಟ್ಯೌ ತು ಜನೋಲೋಕೋ ಯತ್ರ ತೇ ಬ್ರಹ್ಮಣಸ್ಸುತಾಃ ।
ಸನಂದನಾದ್ಯಾಃ ಕಥಿತಾಃ ಮೈತ್ರೇಯಾಮಲಚೇತಸಃ ॥ ೧೩ ॥

ಚತುರ್ಗುಣೋತ್ತರೇ ಚೋರ್ಧ್ವಂ ಜನಲೋಕಾತ್ತಪಃ ಸ್ಮೃತಃ ।
ವೈರಾಜಾ ಯತ್ರ ತೇ ದೇವಾಃ ಸ್ಥಿತಾ ದಾಹವಿವರ್ಜಿತಾಃ ॥ ೧೪ ॥

ಷಡ್ಗುಣೇನ ತಪೋಲೋಕಾತ್ ಸತ್ಯಲೋಕೋ ವಿರಾಜತೇ ।
ಅಪುನರ್ಮಾರಕಾ ಯತ್ರ ಬ್ರಹ್ಮಲೋಕೋ ಹಿ ಸಂಸ್ಮೃತಃ ॥ ೧೫ ॥

ಪಾದಗಮ್ಯಂ ತು ಯತ್ಕಿಂಚಿದ್ವಸ್ತ್ವಸ್ತಿ ಪೃಥಿವೀಮಯಂ ।
ಸ ಭೂರ್ಲೋಕಃ ಸಮಾಖ್ಯಾತೋ ವಿಸ್ತಾರೋಽಸ್ಯ ಮಯೋದಿತಃ ॥ ೧೬ ॥

ಭೂಮಿಸೂರ್ಯಾಂತರಂ ಯಸ್ತು ಸಿದ್ಧಾದಿಮುನಿಸೇವಿತಂ ।
ಭುವರ್ಲೋಕಸ್ತು ಸೋಪ್ಯುಕ್ತೋ ದ್ವಿತೀಯೋ ಮುನಿಸತ್ತಮ ॥ ೧೭ ॥

---

೧೩. ಜನಲೋಕವು ಎರಡು ಕೋಟಿ ಯೋಜನ ಎತ್ತರವಾಗಿರುವುದು. ಅಲ್ಲಿ ಬ್ರಹ್ಮನ ಪುತ್ರರಾದ ಸನಂದನಾದಿ ಜ್ಞಾನಿಗಳು ವಾಸಮಾಡುವರು.

೧೪. ಜನಲೋಕದ ನಾಲ್ಕರಷ್ಟು ಎಂದರೆ ಎಂಟು ಕೋಟಿ ಯೋಜನ ಎತ್ತರವಾಗಿ ತಪೋಲೋಕವಿರುವುದು. ಅಲ್ಲಿ ಅಗ್ನಿ ಬಾಧೆಯಿಲ್ಲದ ವೈರಾಜ ಎಂಬ ದೇವತೆಗಳು ವಾಸವಾಗಿರುವರು.

೧೫. ಜನಲೋಕದ ಆರರಷ್ಟು ಎಂದರೆ ಹನ್ನೆರಡು ಕೋಟಿ ಯೋಜನ ಎತ್ತರವಾಗಿ ತಪೋಲೋಕವಿರುವುದು. ಅಲ್ಲಿರುವವರಿಗೆ ಪುನಃ ಮೃತ್ಯುಭಯವಿಲ್ಲ.

೧೬–೧೭. ಜನರು ಕಾಲಿನಿಂದ ಸಂಚಾರಮಾಡುವುದಕ್ಕೆ ಸಾಧ್ಯವಾದ ಭೂಮಿಯು ಎಲ್ಲಿಯವರೆಗೆ ಇರುವುದೋ ಅದೇ ಭೂಲೋಕವು ಭೂಮಿಗೂ ಸೂರ್ಯನಿಗೂ ನಡುವೆ ಇರುವ ಅಂತರದಲ್ಲಿ ಸಿದ್ಧರೇ ಮುಂತಾದ ಋಷಿಗಳು ವಾಸಿಸುವರು. ಅದೇ ಎರಡನೆಯದಾದ ಭುವರ್ಲೋಕವು. ಧ್ರುವ ಮಂಡಲಕ್ಕೂ

ಧ್ರುವಸೂರ್ಯಾಂತರಂ ಯಸ್ತು ನಿಯುತಾನಿ ಚತುರ್ದಶ ।
ಸ್ವರ್ಲೋಕಃ ಸೋಽಪಿ ಕಥಿತೋ ಲೋಕಸಂಸ್ಥಾನಚಿಂತಕೈಃ ॥ ೧೮ ॥

ತ್ರೈಲೋಕ್ಯಮೇತತ್ಕೃತಕಂ ಮೈತ್ರೇಯ ಪರಿಪಠ್ಯತೇ ।
ಜನಸ್ತಪಸ್ತಥಾ ಸತ್ಯಮಿತಿ ಚಾಕೃತಕಂ ತ್ರಯಂ ॥ ೧೯ ॥

ಕೃತಕಾಕೃತಕಯೋರ್ಮಧ್ಯೇ ಮಹರ್ಲೋಕ ಇತಿ ಸ್ಮೃತಃ ।
ಶೂನ್ಯೋ ಭವತಿ ಕಲ್ಪಾಂತೇ ಯೋಽತ್ಯಂತಂ ನ ವಿನಶ್ಯತಿ ॥ ೨೦ ॥

ಏತೇ ಸಪ್ತ ಮಹಾ ಲೋಕಾ ಮೈತ್ರೇಯ ಕಥಿತಾಸ್ತವ ।
ಪಾತಾಲಾನಿ ಚ ಸಪ್ತೈವ ಬ್ರಹ್ಮಾಂಡಸ್ಯೈವ ವಿಸ್ತರಃ ॥ ೨೧ ॥

ಏತದಂಡಕಟಾಹೇನ ತಿರ್ಯಕ್ಚೋರ್ಧ್ವಮಧಸ್ತಥಾ ।
ಕಪಿತ್ಥಸ್ಯ ಯಥಾ ಬೀಜಂ ಸರ್ವತೋ ವೈ ಸಮಾವೃತಂ ॥ ೨೨ ॥

ಸೂರ್ಯಮಂಡಲಕ್ಕೂ ನಡುವೆ ಇರುವ ಹದಿನಾಲ್ಕು ಲಕ್ಷ ಯೋಜನದಳತೆಯ ಲೋಕವೇ ಸ್ವರ್ಗಲೋಕವು. ಈಮೂರು ಲೋಕಗಳೂ ಪ್ರತಿಕಲ್ಪದಲ್ಲಿಯೂ ಕಾರ್ಯ ರೂಪವಾಗಿರುವುದರಿಂದ ಕೃತಕವಾದುವು. ಜನಲೋಕ, ತಪೋಲೋಕ, ಸತ್ಯಲೋಕ ಗಳು ಕೃತಕಗಳಲ್ಲ.

೨೦. ಕೃತಕ, ಅಕೃತಕ, ಲೋಕಗಳ ನಡುವೆ ಮಹರ್ಲೋಕವಿರುವುದು ಇದು ಕಲ್ಪಾಂತದಲ್ಲಿ ಕಾಣಿಸುವುದಿಲ್ಲ. ಆದರೆ ಜನಶೂನ್ಯವಾದುದರಿಂದ ಕೃತಾಕೃತಕ ವಾದುದಾಗಿರುವುದು.

೨೧–೨೨. ಮೈತ್ರೇಯನೇ ! ಈ ಸಪ್ತಮಹಾಲೋಕಗಳನ್ನೂ ಸಪ್ತ ಪಾತಾಳ ಗಳನ್ನೂ ನಿನಗೆ ಹೇಳಿರುವೆನು. ಇವೆಲ್ಲವೂ ಸೇರಿ ಬ್ರಹ್ಮಾಂಡವೆನಿಸುವುದು ಈ ಹದಿನಾಲ್ಕು ಲೋಕಗಳೂ ಬ್ರಹ್ಮಾಂಡ ಕಟಾಹದೊಳಗೆ ಮೇಲೂ ಕೆಳಗೂ ಅಡ್ಡ ಲಾಗಿಯೂ ಎಲ್ಲೆಡೆಗಳಲ್ಲಿಯೂ ಬೇಲದ ಹಣ್ಣಿನೊಳಗೆ ಬೀಜಗಳು ಆವರಿಸಿರುವಂತೆ ಆವರಿಸಿಕೊಂಡಿರುವುವು.

ದಶೋತ್ತರೇಣ ಪಯಸಾ ಮೈತ್ರೇಯಾಂಡಂ ಚ ತದ್ವೃತಂ ।
ಸರ್ವೋಽಂಬುಪರಿಧಾನೋಽಸೌ ವಹ್ನಿನಾ ವೇಷ್ಟಿತೋ ಬಹಿಃ ॥ ೨೩ ॥

ವಹ್ನಿಶ್ಚ ವಾಯುನಾ ವಾಯುರ್ಮೈತ್ರೇಯ ನಭಸಾವೃತಃ ।
ಭೂತಾದಿನಾ ನಭಸ್ಸೋಽಪಿ ಮಹತಾ ಪರಿವೇಷ್ಟಿತಃ ।
ದಶೋತ್ತರಾಣ್ಯಶೇಷಾಣಿ ಮೈತ್ರೇಯೈತಾನಿ ಸಪ್ತ ವೈ ॥ ೨೪ ॥

ಮಹಾಂತಂ ಚ ಸಮಾವೃತ್ಯ ಪ್ರಧಾನಂ ಸಮುಪಸ್ಥಿತಂ ।
ಅನಂತಸ್ಯ ನ ತಸ್ಯಾಂತಸ್ಸಂಖ್ಯಾನಂ ವಾಪಿ ವಿದ್ಯತೇ ॥ ೨೫ ॥

ತದನಂತಮಸಂಖ್ಯಾತಪ್ರಮಾಣಂ ಚಾಪಿ ವೈ ಯತಃ ।
ಹೇತುಭೂತಮಶೇಷಸ್ಯ ಪ್ರಕೃತಿಸ್ಸಾ ಪರಾ ಮುನೇ ॥ ೨೬ ॥

೨೩-೨೪ ಸಪ್ತಸಾಗರವಳಿತೆಯು ಗರ್ಭೋದವ ಹೊರಗೆ ಒಂದು ಕೋಟಿ ಯೋಜನದಳತೆಯ ಬ್ರಹ್ಮಾಂಡ ಕಟಾಹವಿರುವುದು. ಬ್ರಹ್ಮಾಂಡ ಕಟಾಹದ ಹತ್ತರಷ್ಟು ಅಳತೆಯ ನೀರಿನಿಂದ ಬ್ರಹ್ಮಾಂಡ ಕಟಾಹವು ಆವರಿಸಿರುವುದು. ಆ ನೀರನ್ನು ಅಗ್ನಿಯೂ ಅಗ್ನಿಯನ್ನು ವಾಯುವೂ ವಾಯುವನ್ನು ಆಕಾಶವೂ ಆಕಾಶವನ್ನು ಅಹಂಕಾರತತ್ವವೂ ಅಹಂಕಾರತತ್ವವನ್ನು ಮಹತ್ತತ್ವವೂ ಆವರಿಸಿರುವುದು. ಈ ಏಳು ತತ್ವಗಳೂ ಬ್ರಹ್ಮಾಂಡ ಕಟಾಹದ ಹತ್ತರಷ್ಟು ಇರುವುವು. ಮಹತ್ತತ್ವವನ್ನು ಪ್ರಕೃತಿಯು ಆವರಿಸಿರುವುದು.

೨೫-೨೬. ಆ ಪ್ರಕೃತಿಯು ಅನಂತವಾದುದು. ಅದಕ್ಕೆ ಅಳತೆಯಿಲ್ಲ. ಆದುದರಿಂದಲೇ ಅನಂತವೆಂದು ಹೆಸರುಬಂದಿರುವುದು. ಇದೇ ಸಮಸ್ತ ಜಗತ್ತಿಗೂ ಕಾರಣವಾದ ಪರಾಪ್ರಕೃತಿಯು.

ಅಂಡಾನಾಂತು ಸಹಸ್ರಾಣಾಂ ಸಹಸ್ರಾಣ್ಯಯುತಾನಿ ಚ ।
ಈದೃಶಾನಾಂ ತಥಾ ತತ್ರ ಕೋಟಿಕೋಟಿಶತಾನಿ ಚ ॥ ೨೭ ॥

ದಾರುಣ್ಯಗ್ನಿರ್ಯಥಾ ತೈಲಂ ತಿಲೇ ತದ್ವತ್ಪುಮಾನಪಿ ।
ಪ್ರಧಾನೇಽವಸ್ಥಿತೋ ವ್ಯಾಪೀ ಚೇತನಾತ್ಮಾತ್ಮವೇದನಃ ॥ ೨೮ ॥

ಪ್ರಧಾನಂ ಚ ಪುಮಾಂಶ್ಚೈವ ಸರ್ವಭೂತಾತ್ಮಭೂತಯಾ ।
ವಿಷ್ಣುಶಕ್ತ್ಯಾ ಮಹಾಬುದ್ಧೇ ವೃತಾ ಸಂಶ್ರಯಧರ್ಮಿಣೌ ॥ ೨೯ ॥

ತಯೋಸ್ಸೈವ ಪೃಥಗ್ಭಾವಕಾರಣಂ ಸಂಶ್ರಯಸ್ಯ ಚ ।
ಕ್ಷೋಭಕಾರಣಭೂತಾ ಚ ಸರ್ಗಕಾಲೇ ಮಹಾಮತೇ ॥ ೩೦ ॥

ಯಥಾ ಸಕ್ತಂ ಜಲೇ ವಾತೋ ಬಿಭರ್ತಿ ಕಣಿಕಾಶತಂ ।
ಶಕ್ತಿಸ್ಸಾಪಿ ತಥಾ ವಿಷ್ಣೋಃ ಪ್ರಧಾನಪುರುಷಾತ್ಮಕಂ ॥ ೩೧ ॥

೨೭–೨೮. ಇಂತಹ ಸಾವಿರಾರು ಕೋಟಿ ಬ್ರಹ್ಮಾಂಡಗಳಿರುವುವು. ಮರದಲ್ಲಿ ಸೂಕ್ಷ್ಮವಾದ ಬೆಂಕಿಯೂ, ಎಳ್ಳಿನಲ್ಲಿ ಎಣ್ಣೆಯೂ ಇರುವಂತೆ ಪುರುಷನು ಪ್ರಕೃತಿಯಲ್ಲಿ ಸ್ವಪ್ರಕಾಶಚೇತನ ರೂಪನಾಗಿರುವನು.

೨೯-೩೦. ಪ್ರಕೃತಿ ಪುರುಷರಿಬ್ಬರೂ ಸಮಸ್ತ ಭೂತಗಳಿಗೂ ಆತ್ಮಸ್ವರೂಪವಾದ ಸದ್ರೂಪವಾದ ವಿಷ್ಣುಶಕ್ತಿಯಿಂದ ಕೂಡಿದವರಾಗಿ ನಿಯಮ್ಯನಿಯಾಮಕಭಾವದಿಂದಿರುವರು. ಅಥವಾ ಪರಸ್ಪರ ಆಶ್ರಯಭಾವದಿಂದಿರುವರು. ಆ ಶಕ್ತಿಯೇ ಪ್ರಕೃತಿ ಪುರುಷರಿಬ್ಬರಿಗೂ ಪ್ರಳಯ ಕಾಲದಲ್ಲಿ ಕೂಡಿರುವುದಕ್ಕೂ ಸೃಷ್ಟಿಕಾಲದಲ್ಲಿ ಚಾಂಚಲ್ಯಕ್ಕೂ ಕಾರಣವಾಗಿರುವುದು.

೩೧–೩೨. ನೀರಿನಲ್ಲಿರುವ ಪರಮಾಣುಗಳನ್ನು ಗಾಳಿಯು ಅದರಲ್ಲಿ ಸೇರದೆ ಹೇಗೆ ಧರಿಸಿರುವುದೋ ಹಾಗೆ ಪ್ರಕೃತಿ ಪುರುಷ ರೂಪವಾದ ಜಗತ್ತನ್ನು ಅದರಲ್ಲಿ

ಯಥಾ ಚ ಪಾದಪೋ ಮೂಲಸ್ಕಂಧಶಾಖಾದಿಸಂಯುತಃ ।
ಆದಿಬೀಜಾತ್ಪ್ರಭವತಿ ಬೀಜಾನ್ಯನ್ಯಾನಿ ವೈ ತತಃ ॥ ೩೨ ॥

ಪ್ರಭವಂತಿ ತತಸ್ತೇಭ್ಯಸ್ಸಂಭವಂತ್ಯಪರೇ ದ್ರುಮಾಃ ।
ತೇಽಪಿ ತಲ್ಲಕ್ಷಣದ್ರವ್ಯಕಾರಣಾನುಗತಾ ಮುನೇ ॥ ೩೩ ॥

ಏವಮವ್ಯಾಕೃತಾತ್ಪೂರ್ವಂ ಜಾಯಂತೇ ಮಹದಾದಯಃ ।
ವಿಶೇಷಾಂತಾಸ್ತತಸ್ತೇಭ್ಯಸ್ಸಂಭವಂತಿ ಸುರಾದಯಃ ।
ತೇಭ್ಯಶ್ಚ ಪುತ್ರಾಸ್ತೇಷಾಂ ಚ ಪುತ್ರಾಣಾಮಪರೇ ಸುತಾಃ ॥ ೩೪ ॥

ಬೀಜವೃಕ್ಷಪ್ರರೋಹೇಣ ಯಥಾ ನಾಪಚಯಸ್ತರೋಃ ।
ಭೂತಾನಾಂ ಭೂತಸರ್ಗೇಣ ನೈವಾಸ್ತ್ಯಪಚಯಸ್ತಥಾ ॥ ೩೫ ॥

ಸೇರಿಕೊಳ್ಳದೆಯೇ ವಿಷ್ಣುಶಕ್ತಿಯು ಧರಿಸಿರುವುದು. ಮತ್ತು ಬೇರು, ಬುಡ, ಕೊಂಬೆ ಮುಂತಾದುವುಗಳಿಂದ ಕೂಡಿದ ಮರವು ಒಂದು ಬೀಜದಿಂದ ಹುಟ್ಟುವುದು ಆ ಮರದಿಂದ ಅನೇಕ ಬೀಜಗಳಾಗುವುವು. ಆ ಬೀಜಗಳಿಂದ ಬೇರೆ ಮರಗಳು ಹುಟ್ಟುವುವು. ಆ ಮರವೂ ಹಿಂದಿನ ಮರದ ಲಕ್ಷಣ ಜಾತಿ ಮುಂತಾದುವುಗಳಿಗೇ ಸೇರಿರುವುದು. ಹೀಗೆ ಕಾರಣವಾದ ವಸ್ತುಗಳ ಲಕ್ಷಣಗಳೇ ಕಾರ್ಯದಲ್ಲಿಯೂ ಅನುಗತವಾಗಿರುವುವು.

೩೪-೩೫. ಹೀಗೆಯೇ ಪ್ರಕೃತಿಯಿಂದ ಮಹತ್ತತ್ವವೇ ಮೊದಲಾಗಿ ಭೂಪರ್ಯಂತವಾಗಿ ತತ್ವಗಳು ಉತ್ಪತ್ತಿಯಾಗುವುವು. ಇವುಗಳಿಂದಲೇ ದೇವತೆಗಳೇ ಮೊದಲಾದ ಪ್ರಾಣಿಗಳು ಉತ್ಪನ್ನರಾಗಿರುವರು. ಅವರ ಮಕ್ಕಳು ಮೊಮ್ಮಕ್ಕಳು ಹುಟ್ಟಿ ಪ್ರಾಣಿಗಳು ಹೆಚ್ಚುತ್ತಲೇ ಇರುವರು. ಒಂದು ಬೀಜದಿಂದ ಮರವು ಹುಟ್ಟಿ ಅನೇಕ ಮರಗಳಾಗಿ ಮರಗಳ ಸಂಖ್ಯೆ ಹೇಗೆ ಕಡಿಮೆಯಾಗುವುದಿಲ್ಲವೋ ಹಾಗೆ ಪ್ರಾಣಿಗಳ ಸೃಷ್ಟಿಕ್ರಮದಿಂದ ಅವುಗಳ ಸಂಖ್ಯೆಯು ಕಡಿಮೆಯಾಗುವುದಿಲ್ಲ.

ಸನ್ನಿಧಾನಾದ್ಯಥಾಕಾಶಕಾಲಾದ್ಯಾಃ ಕಾರಣಂ ತರೋಃ ।
ತಥೈವಾಪರಿಣಾಮೇನ ವಿಶ್ವಸ್ಯ ಭಗವಾನ್ ಹರಿಃ ॥ ೩೬ ॥

ವ್ರೀಹಿಬೀಜೇ ಯಥಾ ಮೂಲಂ ನಾಳಂ ಪತ್ರಾಂಕುರೌ ತಥಾ ।
ಕಾಂಡಂ ಕೋಶಸ್ತಥಾ ಪುಷ್ಪಂ ಕ್ಷೀರಂ ತದ್ವಚ್ಚ ತಂಡುಲಂ ॥ ೩೭ ॥

ತುಷಃ ಕಣಾಶ್ಚ ಸಂತೋ ವೈ ಯಾಂತ್ಯಾವಿರ್ಭಾವಮಾತ್ಮನಃ ।
ಪ್ರರೋಹಹೇತುಸಾಮಗ್ರ್ಯಮಾಸಾದ್ಯ ಮುನಿಸತ್ತಮ ॥ ೩೮ ॥

ತಥಾ ಕರ್ಮಸ್ವನೇಕೇಷು ದೇವಾದ್ಯಾಃ ಸಮವಸ್ಥಿತಾಃ ।
ವಿಷ್ಣುಶಕ್ತಿಂ ಸಮಾಸಾದ್ಯ ಪ್ರರೋಹಮುಪಯಾಂತಿ ವೈ ॥ ೩೯ ॥

---

೩೬. ಮರವು ಬೆಳೆವುದಕ್ಕೆ ಆಕಾಶ, ಕಾಲ ಮುಂತಾದುವುಗಳ ಸಾಮೀಪ್ಯವು ಹೇಗೆ ಕಾರಣವೋ ಹಾಗೆ ಮಹಾ ಮಹಿಮನಾದ ವಿಷ್ಣುವು ತಾನು ಯಾವ ವಿಕಾರವನ್ನೂ ಹೊಂದದೆ ಪ್ರಪಂಚದ ಅಭಿವೃದ್ಧಿಗೆ ಕಾರಣನಾಗಿರುವನು.

೩೭–೩೯. ಮೈತ್ರೇಯನೇ! ಬತ್ತದ ಬೀಜದಲ್ಲಿ ಬೇರು, ನಾಳ, ಎಲೆ, ಮೊಳಕೆ, ಹೂ, ಹಾಲು, ಅಕ್ಕಿ, ಹೊಟ್ಟು ಇವುಗಳು ಇದ್ದುದೇ ತಾನು ಬೆಳೆವುದಕೆ ಕಾರಣವಾದ ಭೂಮಿ, ನೀರು ಮುಂತಾದುವುಗಳ ಸಂಯೋಗವನ್ನು ಹೊಂದಿ ಬೆಳೆದು ವ್ಯಕ್ತವಾಗುವುವು. ಹಾಗೆಯೇ ಅನೇಕ ಕರ್ಮಗಳ ಸೂಕ್ಷ್ಮವಾದ ಸಂಸ್ಕಾರ ರೂಪದಿಂದಿದ್ದ ದೇವಾದಿ ಪ್ರಾಣಿ ಸಮೂಹಗಳು ವಿಷ್ಣುಶಕ್ತಿಯನ್ನು ಸಾನ್ನಿಧ್ಯ ರೂಪದಿಂದ ಪಡೆದು ಅಭಿವೃದ್ಧಿಯನ್ನು ಹೊಂದುವುವು. "ಸದೇವ ಸೌಮ್ಯೇದ ಮಗ್ರ ಆಸೀತ್" ಎಂಬ ಶ್ರುತಿಯೇ ಇದಕ್ಕೆ ಪ್ರಮಾಣವು. ಇದರಿಂದ ಅಸದ್ವಾದವನ್ನು ನಿರಾಕರಿಸಿದಂತೆ ಆಯಿತು.

ಸ ಚ ವಿಷ್ಣುಃ ಪರಂ ಬ್ರಹ್ಮ ಯತಸ್ಸರ್ವಮಿದಂ ಜಗತ್ ।
ಜಗಚ್ಚ ಯೋ ಯತ್ರ ಚೇದಂ ಯಸ್ಮಿಂಶ್ಚ ಲಯಮೇಷ್ಯತಿ ॥ ೪೦ ॥

ತದ್ಬ್ರಹ್ಮ ಪರಮಂ ಧಾಮ ಸದಸತ್ತತ್ಪರಂ ಪದಂ ।
ಯಸ್ಯ ಸರ್ವಮಭೇದೇನ ಜಗದೇತಚ್ಚರಾಚರಂ ॥ ೪೧ ॥

ಸ ಏವ ಮೂಲಪ್ರಕೃತಿರ್ವ್ಯಕ್ತರೂಪೀ ಜಗಚ್ಚ ಸಃ ।
ತಸ್ಮಿನ್ನೇವ ಲಯಂ ಸರ್ವಂ ಯಾತಿ ತತ್ರ ಚ ತಿಷ್ಠತಿ ॥ ೪೨ ॥

ಕರ್ತಾ ಕ್ರಿಯಾಣಾಂ ಸ ಸ ಇಜ್ಯತೇ ಕ್ರತುಃ
ಸ ಏವ ತತ್ಕರ್ಮಫಲಂ ಚ ತಸ್ಯ ।

೪೦-೪೨. ಆ ವಿಷ್ಣುವೇ ಪರಬ್ರಹ್ಮನು. ಅವನಿಂದಲೇ ಈ ಸಮಸ್ತ ಜಗತ್ತು ಉತ್ಪತ್ತಿಯಾಯಿತು. ಅವನಲ್ಲಿಯೇ ಇರುವುದು. ಅವನಲ್ಲಿಯೇ ಲಯ ಹೊಂದುವುದು. ವೇದಪ್ರಸಿದ್ಧವಾದ ಬ್ರಹ್ಮನೇ ಆ ವಿಷ್ಣುವಿನ ಶ್ರೇಷ್ಠವಾದ ತೇಜೋರೂಪವು. ಅವನಿಗೂ ಈ ಚರಾಚರ ಜಗತ್ತಿಗೂ ಭೇದವಿಲ್ಲ. ಅವನೇ ಮೂಲ ಪ್ರಕೃತಿ ರೂಪದಿಂದ ವ್ಯಕ್ತನಾಗಿ ಜಗದ್ರೂಪವಾಗುವನು. ಸಮಸ್ತ ಪ್ರಪಂಚವೂ ಅವನಲ್ಲಿಯೇ ಇದ್ದು ಅವನಲ್ಲಿಯೇ ಲಯವಾಗುವುದು. ವಿಷ್ಣು ಪರಬ್ರಹ್ಮರಿಗೆ ಭೇದವಿಲ್ಲದುದರಿಂದ ವಿಷ್ಣುವೇ ಸರ್ವಕಾರಣನೆಂದು ಅಭಿಪ್ರಾಯವು.

೪೩. ಸಮಸ್ತ ಕಾರ್ಯಗಳಿಗೂ ಅವನೇ ಕರ್ತೃವು. ಅವನೇ ಯಜ್ಞವನ್ನು ಮಾಡುವನು. ಯಜ್ಞವೂ ಅವನೇ, ಆ ಕರ್ಮ ಫಲವೂ ಅವನಿಗೇ ಸೇರಿದುದು.

ಸ್ರುಗಾದಿ ಯತ್ಸಾಧನಮಪ್ಯ ಶೇಷಂ
ಹರೇರ್ನ ಕಿಂಚಿದ್ವ್ಯತಿರಿಕ್ತಮಸ್ತಿ ॥ ೪೩ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಸಪ್ತಮೋಽಧ್ಯಾಯಃ

ಸೃಕ್ಕು, ಸ್ರುವ ಮುಂತಾದ ಯಜ್ಞಕ್ಕೆ ಬೇಕಾದ ವಸ್ತುಗಳೆಲ್ಲವೂ ವಿಷ್ಣುಸ್ವರೂಪವಾದುವುಗಳೇ, ಆದುದರಿಂದ ವಿಷ್ಣುವಿಗಿಂತ ಬೇರೆಯಾದುವುಗಳಾವುವೂ ಇಲ್ಲ.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ
ಏಳನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ದ್ವಿತೀಯಾಂಶೇ

ಅಷ್ಟಮೋಽಧ್ಯಾಯಃ

॥ ಪರಾಶರ ಉವಾಚ ॥

ವ್ಯಾಖ್ಯಾತಮೇತದ್ಬ್ರಹ್ಮಾಂಡಸಂಸ್ಥಾನಂ ತವ ಸುವ್ರತ ।
ತತಃ ಪ್ರಮಾಣಸಂಸ್ಥಾನೇ ಸೂರ್ಯಾದೀನಾಂ ಶೃಣುಷ್ವ ಮೇ ॥ ೧ ॥

ಯೋಜನಾನಾಂ ಸಹಸ್ರಾಣಿ ಭಾಸ್ಕರಸ್ಯ ರಥೋ ನವ ।
ಈಷಾದಂಡಸ್ತಥೈವಾಸ್ಯ ದ್ವಿಗುಣೋ ಮುನಿಸತ್ತಮ ॥ ೨ ॥

ಎಂಟನೆಯ ಅಧ್ಯಾಯವು

೧-೩. ತಪಸ್ವಿಯಾದ ಮೈತ್ರೇಯನೇ ಬ್ರಹ್ಮಾಂಡದ ಸ್ಥಿತಿಯನ್ನು ನಿನಗೆ ವಿವರಿಸಿ ಹೇಳಿದೆನು. ಇನ್ನುಮುಂದೆ ಸೂರ್ಯಾದಿ ಗ್ರಹಗಳ ಸ್ಥಿತಿಯನ್ನು ವಿವರಿಸಿ ಹೇಳುವೆನು ಕೇಳು. ಸೂರ್ಯನ ರಥವು ಒಂಭತ್ತು ಸಾವಿರ ಯೋಜನ ವಿಸ್ತಾರವಾದುದು. ರಥದ ಅಚ್ಚಿಗೂ, ನೊಗಕ್ಕೂ ಸಂಬಂಧಿಸಿದ ಈಚಿಮರವು ಹದಿನೆಂಟು ಸಾವಿರ ಯೋಜನ ಉದ್ದವಾದುದಾಗಿರುವುದು. ಮೇರುವಿಗೂ ಮಾನಸಾಚಲಕ್ಕೂ ಎಷ್ಟು ದೂರವಿರುವುದೋ ಅಷ್ಟೇ ಅಚ್ಚಿನ ಅಳತೆಯಿರುವುದು. ಆ ರಥದ ಅಚ್ಚು ಒಂದು ಕಡೆ ಮೇರು ಪರ್ವತದ ಶಿಖರದ ಮೇಲೆಯೂ ಮತ್ತೊಂದು ಕಡೆ ಮಾನ

ಸಾರ್ಧಕೋಟಿಸ್ತಥಾ ಸಪ್ತ ನಿಯುತಾನ್ಯಧಿಕಾನಿ ವೈ ।
ಯೋಜನಾನಾಂ ತು ತಸ್ಯಾಕ್ಷಸ್ತತ್ರ ಚಕ್ರಂ ಪ್ರತಿಷ್ಠಿತಂ ॥ ೩ ॥

ತ್ರಿನಾಭಿಮತಿಪಂಚಾರೇ ಷಣ್ಣೇಮಿನ್ಯಕ್ಷಯಾತ್ಮಕೇ ।
ಸಂವತ್ಸರಮಯೇ ಕೃತ್ಸ್ನಂ ಕಾಲಚಕ್ರಂ ಪ್ರತಿಷ್ಠಿತಂ ॥ ೪ ॥

ಹಯಾಶ್ಚ ಸಪ್ತ ಛಂದಾಂಸಿ ತೇಷಾಂ ನಾಮಾನಿ ಮೇ ಶೃಣು ।
ಗಾಯತ್ರೀ ಚ ಬೃಹತ್ಯುಷ್ಣಿಕ್ ಜಗತೀ ತ್ರಿಷ್ಟುಭೇವ ಚ ॥ ೫ ॥

ಅನುಷ್ಟುಪ್ ಪಂಙ್ಕ್ತಿರಿತ್ಯುಕ್ತಾಶ್ಛಂದಾಂಸಿ ಹರಯೋ ರವೇಃ ।
ಚತ್ವಾರಿಂಶತ್ಸಹಸ್ರಾಣಿ ದ್ವಿತೀಯೋಽಕ್ಷೋ ವಿವಸ್ವತಃ ॥ ೬ ॥

ಸೋತ್ತರ ಪರ್ವತ ಶಿಖರದ ಮೇಲೆಯೂ ಇರುವುದು. ಅದಕ್ಕೆ ಸೇರಿಸಿದ ಸೂರ್ಯನ ರಥ ಚಕ್ರವು ಎಣ್ಣೆಯ ಗಾಣಕ್ಕೆ ಸಂಬಂಧಿಸಿದ ಚಕ್ರದಂತೆ ಮಾನಸೋತ್ತರ ಪರ್ವತದಲ್ಲಿ ಸುತ್ತುತ್ತಿರುವುದು. ಆ ಅಚ್ಚಿನ ಅಳತೆಯು ಒಂದು ಕೋಟಿ ಐವತ್ತೇಳು ಲಕ್ಷ ಯೋಜನದುದ್ದವಿರುವುದು.

೪. ಉಪಾಸನೆಗಾಗಿ ಸೂರ್ಯನ ರಥಧ ಕಾಲರೂಪವಾದ ಚಕ್ರವನ್ನು ವರ್ಣಿಸಿರುವರು. ಆ ಚಕ್ರವು ಮೇಖಲಾರೂಪವಾದ ಪೂರ್ವಾಹ್ಣ ಮಧ್ಯಾಹ್ನ ಅಪರಾಹ್ಣವೆಂಬ ಮೂರು ಸ್ತಂಭಗಳುಳ್ಳದು. ಋತುರೂಪವಾದ ಆರು ವರ್ತುಲ ಭಾಗವುಳ್ಳದು. ಕಾಲರೂಪವಾದುದರಿಂದ ನಾಶರಹಿತವಾದುದು. ಸಂವತ್ಸರ ರೂಪವಾಗಿ ಉಪಾಸನೆ ಮಾಡುವುದರಿಂದ ಈ ಚಕ್ರವು ಸಂವತ್ಸರ ರೂಪವಾದುದಾಗಿ ಎಲ್ಲ ಕಾಲವೂ ಇದರಲ್ಲಿ ಸೇರಿಹೋಗಿರುವುದು. ಇದನ್ನು ಮುಂದೆ ಅಲ್ಲಲ್ಲಿ ವಿವರಿಸಲಾಗುವುದು.

೫. ಸೂರ್ಯನ ರಥಕ್ಕೆ ಗಾಯತ್ರಿ, ಉಷ್ಣಿತ್, ಜಗತಿ, ತ್ರಿಷ್ಟುಪ್, ಪಂಕ್ತಿ ಎಂಬ ಏಳು ಛಂದೋರೂಪವಾದ ಕುದುರೆಗಳು ಇರುವುವು. ಸೂರ್ಯನ ರಥಾಶ್ವಗಳನ್ನು ಛಂದಸ್ಸಿನ ರೂಪವಾಗಿ ಉಪಾಸನೆ ಮಾಡಬೇಕೆಂದು ಇದರ ಅಭಿಪ್ರಾಯವು.

೬-೮. ಕಾಲಚಕ್ರದ ಎರಡನೆಯ ಅಚ್ಚು ನಲವತ್ತೈದೂವರೆ ಸಾವಿರ ಯೋಜನದಳತೆಯಾಗಿರುವುದು. ಎರಡು ಅಚ್ಚಿನ ಅಳತೆಯು ಎಷ್ಟಿರುವುದೋ

ಪಂಚಾನ್ಯಾನಿ ತು ಸಾರ್ಧಾನಿ ಸ್ಯಂದನಸ್ಯ ಮಹಾಮತೇ ।
ಅಕ್ಷಪ್ರಮಾಣಮುಭಯೋಃ ಪ್ರಮಾಣಂ ತದ್ಯುಗಾರ್ಧಯೋಃ ॥ ೭ ॥

ಹ್ರಸ್ವೋಽಕ್ಷಸ್ತದ್ಯುಗಾರ್ಧೇನ ಧ್ರುವಾಧಾರೋರಥಸ್ಯ ತು ।
ದ್ವಿತೀಯೋಽಕ್ಷೇ ತತಶ್ಚ ಕ್ರಂ ಸಂಸ್ಥಿತಂ ಮಾನಸಾಚಲೇ ॥ ೮ ॥

ಮಾನಸೋತ್ತರಶೈಲಸ್ಯ ಪೂರ್ವತೋ ವಾಸವೀ ಪುರೀ ॥ ೯ ॥

ದಕ್ಷಿಣೇ ತು ಯಮಸ್ಯಾನ್ಯಾ ಪ್ರತೀಚ್ಯಾಂ ವರುಣಸ್ಯ ಚ ।
ಉತ್ತರೇಣ ಚ ಸೋಮಸ್ಯ ತಾಸಾಂ ನಾಮಾನಿ ಮೇ ಶೃಣು ॥ ೧೦ ॥

ವಸ್ವೌಕಸಾರಾ ಶಕ್ರಸ್ಯ ಯಾಮ್ಯಾ ಸಂಯಮನೀ ತಥಾ ।
ಪುರೀ ಸುಖಾ ಜಲೇಶಸ್ಯ ಸೋಮಸ್ಯ ಚ ವಿಭಾವರೀ ॥ ೧೧ ॥

ಕಾಷ್ಠಾಂಗತೋ ದಕ್ಷಿಣತಃ ಕ್ಷಿಪ್ತೇಷುರಿವ ಸರ್ಪತಿ ।
ಮೈತ್ರೇಯ ಭಗವಾನ್ಭಾನುರ್ಜ್ಯೋತಿಷಾಂ ಚಕ್ರಸಂಯುತಃ ॥ ೧೨ ॥

ಅಷ್ಟೇ ನೊಗದಳತೆಯೂ ಇರುವುದು. ಚಿಕ್ಕ ಅಚ್ಚು ಮತ್ತು ನೊಗದ ಅರ್ಧಭಾಗವೂ ವಾಯುರೂಪವಾದ ಹಗ್ಗದಿಂದ ಆಧಾರಭೂತವಾದ ಧ್ರುವಮಂಡಲಕ್ಕೆ ಸಂಬಂಧಿಸಿರುವುದು. ಸೂರ್ಯನ ರಥದ ಚಕ್ರವು ಎರಡನೆಯ ಅಚ್ಚಿನಲ್ಲಿ ಮಾನಸಾಚಲದ ಮೇಲಿರುವುದು.

೯-೧೧. ಮಾನಸೋತ್ತರ ಪರ್ವತದ ಪೂರ್ವದಿಕ್ಕಿನಲ್ಲಿ ವಸ್ವೌಕಸಾರವೆಂಬ ದೇವೇಂದ್ರನ ಪಟ್ಟಣವಿರುವುದು. ದಕ್ಷಿಣದಲ್ಲಿ ಸಂಯಮಿನೀ ಎಂಬ ಯಮನ ಪಟ್ಟಣವೂ, ಪಶ್ಚಿಮದಲ್ಲಿ ಸುಖಪುರಿ ಎಂಬ ವರುಣನ ಪಟ್ಟಣವೂ, ಉತ್ತರದಿಕ್ಕಿನಲ್ಲಿ ವಿಭಾವರಿ ಎಂಬ ಕುಬೇರನ ಪಟ್ಟಣವೂ ಇರುವುದು.

೧೨-೧೩. ಮೈತ್ರೇಯನೇ ಮಹಾಮಹಿಮನಾದ ಸೂರ್ಯನು ದಕ್ಷಿಣ ದಿಕ್ಕಿನಿಂದ ಬಾಣಬಿಟ್ಟಂತೆ ವೇಗವಾಗಿ ಜ್ಯೋತಿಶ್ಚಕ್ರದೊಡನೆ ತಿರುಗುತ್ತಿರುವನು. ಆ ಸೂರ್ಯನೇ ಹಗಲು ರಾತ್ರಿಗಳ ಸ್ಥಿತಿಗೂ ಕಾರಣನಾಗಿರುವನು. ದುಃಖಗಳೂ,

ಅಹೋರಾತ್ರವ್ಯವಸ್ಥಾನಕಾರಣಂ ಭಗವಾನ್ ರವಿಃ ।
ದೇವಯಾನಃ ಪರಃ ಪಂಥಾ ಯೋಗಿನಾಂ ಕ್ಲೇಶಸಂಕ್ಷಯೇ ॥ ೧೩ ॥

ದಿವಸಸ್ಯ ರವಿರ್ಮಧ್ಯೇ ಸರ್ವಕಾಲಂ ವ್ಯವಸ್ಥಿತಃ ।
ಸರ್ವದ್ವೀಪೇಷು ಮೈತ್ರೇಯ ನಿಶಾರ್ಧಸ್ಯ ಚ ಸಂಮುಖಃ ॥ ೧೪ ॥

ಉದಯಾಸ್ತಮಯೇ ಚೈವ ಸರ್ವಕಾಲಂ ತು ಸಂಮುಖೇ ।
ದಿಶಾಸ್ವಶೇಷಾಸು ತಥಾ ಮೈತ್ರೇಯ ವಿದಿಶಾಸು ಚ ॥ ೧೫ ॥

ಯೈರ್ಯತ್ರ ದೃಶ್ಯತೇ ಭಾಸ್ವಾನ್ ಸ ತೇಷಾಮುದಯಃ ಸ್ಮೃತಃ ।
ತಿರೋಭಾವಂ ಚ ಯತ್ರೈತಿ ತತ್ರೈವಾಸ್ತಮಯೋ ರವೇಃ ॥ ೧೬ ॥

ನೈವಾಸ್ತಮಯಮರ್ಕಸ್ಯ ನೋದಯಃ ಸರ್ವದಾಸತಃ ।
ಉದಯಾಸ್ತಮಯಾಖ್ಯಂ ಹಿ ದರ್ಶನಾದರ್ಶನಂ ರವೇಃ ॥ ೧೭ ॥

ರೋಗಗಳೂ ನಾಶವಾಗುತ್ತಿರಲಾಗಿ ಕ್ರಮ ಮುಕ್ತಿಯನ್ನು ಪಡೆಯುವ ಯೋಗಿಗಳಿಗೆ ದೇವಯಾನ ಮಾರ್ಗವಾಗಿರುವನು. ' ಸೂರ್ಯದ್ವಾರೇಣತೇ ವಿರಜಾಃ ಪ್ರಯಾಂತಿ ' ವತ್ ಕ್ಷಿಪ್ಯನ್ನ ಸಾವಾದಿತ್ಯಂಗಚ್ಛತಿ ' ಎಂಬ ಶ್ರುತಿಗಳೇ ಇದಕ್ಕೆ ಪ್ರಮಾಣವು.

೧೪-೧೭. ಮೈತ್ರೇಯನೇ, ಸೂರ್ಯನು ಯಾವಾಗಲೂ ಹಗಲಿನ ಮಧ್ಯದಲ್ಲಿದ್ದಂತೆ ಭೂಮಿಗೆ ಲಕ್ಷ ಯೋಜನ ಎತ್ತರದಲ್ಲಿರುವ ಆಕಾಶದಲ್ಲಿ ಪ್ರಕಾಶಿಸುತ್ತಿರುವನು. ಎಲ್ಲ ದ್ವೀಪಗಳಿಗೂ ಅದು ಮಧ್ಯಾಹ್ನವಾಗಿರುವುದು. ಅದಕ್ಕೆ ಸಮಸೂತ್ರದಲ್ಲಿರುವ ದ್ವೀಪದ ಮತ್ತೊಂದು ಭಾಗದಲ್ಲಿ ಮಧ್ಯರಾತ್ರಿಯಾಗಿರುವುದು. ಎಲ್ಲ ದಿಕ್ಕುಗಳಲ್ಲಿಯೂ ಉದಯಾಸ್ತಮಯ ಕಾಲಗಳು ಒಂದಕ್ಕೆ ಮತ್ತೊಂದು ಎದುರಾಗಿರುವುದು. ಎಲ್ಲಿ ಯಾರು ಸೂರ್ಯನನ್ನು ಮೊದಲು ನೋಡುವರೋ ಅದೇ ಉದಯಕಾಲವು. ಎಲ್ಲಿ ಸೂರ್ಯನು ಕಾಣದೆ ಹೋಗುವನೋ ಅದೇ ಅಸ್ತಮಯಕಾಲವು. ಸೂರ್ಯನಿಗೆ ಉದಯಾಸ್ತಮಯಗಳಿಲ್ಲ. ದರ್ಶನಾದರ್ಶನವೇ ಉದಯಾಸ್ತಮಯಗಳೆನಿಸುವುವು.

ಶಕ್ರಾದೀನಾಂ ಪುರೇ ತಿಷ್ಠನ್ ಸ್ಪೃಶತ್ಯೇಷ ಪುರತ್ರಯಂ ।
ವಿಕೋಣೌ ದ್ವೌ ವಿಕೋಣಸ್ಥಃ ತ್ರೀನ್ಕೋಣಾನ್ ದ್ವೇ ಪುರೇ ತಥಾ ॥೧೮॥

ಉದಿತೋ ವರ್ಧಮಾನಾಭಿರಾಮಧ್ಯಾಹ್ನಾತ್ತಪನ್ರವಿಃ ।
ತತಃ ಪರಂ ಹ್ರಸಂತೀಭಿರ್ಗೋಭಿರಸ್ತಂ ನಿಗಚ್ಛತಿ ॥ ೧೯ ॥

ಉದಯಾಸ್ತಮಯಾಭ್ಯಾಂ ಚ ಸ್ಮೃತೇ ಪೂರ್ವಾಪರೇ ದಿಶೌ ।
ಯಾವತ್ಪುರಸ್ತಾತ್ತಪತಿ ತಾವತ್ಪೃಷ್ಠೇ ಥ ಪಾರ್ಶ್ವಯೋಃ ॥ ೨೦ ॥

೧೮-೨೦. ಸೂರ್ಯನು ಮಧ್ಯಾಹ್ನದಲ್ಲಿ ಇಂದ್ರಾದಿಗಳ ಪಟ್ಟಣದಲ್ಲಿದ್ದು ತನ್ನ ಕಿರಣಗಳಿಂದ ಮೂರು ಪಟ್ಟಣಗಳನ್ನು ಸ್ಪರ್ಶಮಾಡುವನು. ಭೂಮಂಡಲದ ಅರ್ಧ ಭಾಗದಲ್ಲಿ ಸೂರ್ಯನು ಕಾಣುವನು. ಆ ಭಾಗದಲ್ಲಿ ಹಗಲಾಗುವುದು. ಮತ್ತರ್ಧ ಭಾಗದಲ್ಲಿ ಕಾಣಿಸುವುದಿಲ್ಲ. ಆ ಭಾಗದಲ್ಲಿ ರಾತ್ರಿಯಾಗುವುದು. ಇಂದ್ರನ ಪಟ್ಟಣದಲ್ಲಿ ಮಧ್ಯಾಹ್ನವಾದಾಗ ಕುಬೇರನ ಪಟ್ಟಣದಲ್ಲಿ ಸಾಯಂಕಾಲವೂ, ಯಮನ ಪಟ್ಟಣದಲ್ಲಿ ಪ್ರಾತಃಕಾಲವೂ ಈಶಾನ್ಯದಲ್ಲಿರುವವರಿಗೆ ಮೂರನೆ ಯಾಮವೂ, ಆಗ್ನೇಯದಲ್ಲಿರುವವರಿಗೆ ಪ್ರಥಮ ಯಾಮವೂ ಆಗಿರುವುದು. ಇದರಂತೆ ಮಿಕ್ಕ ಪಟ್ಟಣಗಳಲ್ಲಿದ್ದಾಗ ತಿಳಿಯಬೇಕು. ಸೂರ್ಯನು ಉದಯಿಸಿದಮೇಲೆ ಮಧ್ಯಾಹ್ನದ ವರೆಗೂ ಕಿರಣಗಳು ಹೆಚ್ಚುತ್ತ ಬಳಿಕ ಕಡಿಮೆಯಾಗುತ್ತ ಸಂಧ್ಯಾಕಾಲದಲ್ಲಿ ಅಸ್ತನಾಗುವನು. ಸೂರ್ಯನು ಉದಯಿಸಿದ ಸ್ಥಳವೇ ಪೂರ್ವವು. ಅಸ್ತಮಾನವಾಗುವ ಸ್ಥಳವೇ ಪಶ್ಚಿಮವು. ಪೂರ್ವಾಭಿಮುಖವಾಗಿ ನಿಂತರೆ ಎಡ ಬಲ ಭಾಗಗಳು ಉತ್ತರ ದಕ್ಷಿಣಗಳು, ಸೂರ್ಯಕಿರಣಗಳು ನಾಲ್ಕು ದಿಕ್ಕುಗಳಲ್ಲಿಯೂ ಲೋಕಾಲೋಕ ಪರ್ವತ ಪರ್ಯಂತವಾಗಿ ಹರಡುವುದೆಂದು ಅಭಿಪ್ರಾಯವು.

ಋತೇಮರಗಿರೇರ್ಮೇರೋರುಪರಿ ಬ್ರಹ್ಮಣಃ ಸಭಾಂ ।
ಯೇ ಯೇ ಮರೀಚಯೋಽರ್ಕಸ್ಯ ಪ್ರಯಾಂತಿ ಬ್ರಹ್ಮಣಸ್ಸಭಾಂ ॥ ೨೧ ॥

ತೇ ತೇ ನಿರಸ್ತಾಸ್ತದ್ಭಾಸಾ ಪ್ರತೀಪಮುಪಯಾಂತಿ ವೈ ।
ತಸ್ಮಾದ್ದಿಶ್ಯುತ್ತರಸ್ಯಾಂ ವೈ ದಿವಾರಾತ್ರಿಸ್ಸದೈವ ಹಿ ॥ ೨೨ ॥

ಸರ್ವೇಷಾಂ ದ್ವೀಪವರ್ಷಾಣಾಂ ಮೇರುರುತ್ತರತೋ ಯತಃ ।
ಪ್ರಭಾ ವಿವಸ್ವತೋ ರಾತ್ರಾವಸ್ತಂ ಗಚ್ಛತಿ ಭಾಸ್ಕರೇ ॥ ೨೩ ॥

ವಿಶತ್ಯಗ್ನಿಮತೋ ರಾತ್ರಾವಗ್ನಿರ್ದೂರಾತ್ಪ್ರಕಾಶತೇ ।
ವಹ್ನೇಃಪ್ರಭಾತಥಾ ಭಾನುಂ ದಿನೇಷ್ವಾವಿಶತಿ ದ್ವಿಜ ॥ ೨೪ ॥

ಅತೀವವಹ್ನಿಸಂಯೋಗಾತ್ತತಃ ಸೂರ್ಯಃ ಪ್ರಕಾಶತೇ ।
ತೇಜಸೀ ಭಾಸ್ಕರಾಗ್ನೇಯೇ ಪ್ರಕಾಶೋಷ್ಣಸ್ವರೂಪಿಣೀ ॥ ೨೫ ॥

೨೧-೨೨ ಸೂರ್ಯಕಿರಣಗಳು ಮೇರುಪರ್ವತದ ಮೇಲಿರುವ ಬ್ರಹ್ಮನ ಸಭೆಯನ್ನು ಪ್ರವೇಶಿಸುವುದಿಲ್ಲ. ಬ್ರಹ್ಮನ ಸಭೆಯು ಕಾಂತಿಯು ಸೂರ್ಯಕಿರಣಗಳನ್ನು ತಳ್ಳುವುದರಿಂದ ಅವು ಹಿಂದಿರುಗುವುವು.

೨೩. ಸಮಸ್ತ ದ್ವೀಪ ವರ್ಷಗಳಿಗೂ ಮೇರುವು ಉತ್ತರದಲ್ಲಿರುವುದರಿಂದ ಉತ್ತರ ದಿಕ್ಕಿನಲ್ಲಿ ಯಾವಾಗಲೂ ಹಗಲುರಾತ್ರಿಗಳಿರುವುವು. ಅಂದರೆ ಬ್ರಹ್ಮಸಭೆಯು ಕಾಂತಿಯಿಂದ ಯಾವಾಗಲೂಹಗಲಾಗಿಯೂ ಸೂರ್ಯಕಿರಣಗಳ ಪ್ರವೇಶವಿಲ್ಲದುದರಿಂದ ಯಾವಾಗಲೂ ರಾತ್ರಿಯಾಗಿಯೂ ಇರುವುದೆಂದು ಅಭಿಪ್ರಾಯವು

೨೪-೨೫. ಸೂರ್ಯನು ಅಸ್ತವಾಗುತ್ತಿರಲು ಅವನ ಕಾಂತಿಯು ರಾತ್ರಿಯಲ್ಲಿ ಅಗ್ನಿಯನ್ನು ಪ್ರವೇಶಿಸುವುದು. ಆದುದರಿಂದ ಅಗ್ನಿಯು ದೂರದಲ್ಲಿದ್ದರೂ ಪ್ರಕಾಶವಾಗಿ ಕಾಣುವುದು. ಹಗಲಿನಲ್ಲಿ ಅಗ್ನಿಯ ಕಾಂತಿಯು ಸೂರ್ಯನನ್ನು ಪ್ರವೇಶಿಸುವುದು. ಆದರಿಂದ ಸೂರ್ಯನು ವಿಶೇಷವಾಗಿ ಪ್ರಕಾಶಿಸುವನು. ಸೂರ್ಯಾಗ್ನಿಗಳ ತೇಜಸ್ಸು ಕ್ರಮವಾಗಿ ಪ್ರಕಾಶ, ಉಷ್ಣಸ್ವರೂಪಗಳು ಒಂದರಲ್ಲೊಂದು ಸೇರುವುದರಿಂದ ಹಗಲು ರಾತ್ರಿಗಳಲ್ಲಿ ಜನರಿಗೆ ಹಿತವನ್ನುಂಟುಮಾಡುವುವು.

ಪರಸ್ಪರಾನುಪ್ರವೇಶಾದಾಪ್ಯಾಯೇತೇ ದಿವಾನಿಶಂ ।
ದಕ್ಷಿಣೋತ್ತರಭೂಮ್ಯರ್ಧೇ ಸಮುತ್ತಿಷ್ಠತಿ ಭಾಸ್ಕರೇ ॥ ೩೬ ॥

ಅಹೋರಾತ್ರಂ ವಿಶತ್ಯಂಭಸ್ತಮಃ ಪ್ರಾಕಾಶ್ಯಶೀಲವತ್ ।
ಆತಾಮ್ರಾ ಹಿ ಭವಂತ್ಯಾಪೋ ದಿವಾನಕ್ತಪ್ರವೇಶನಾತ್ ॥ ೩೭ ॥

ದಿನಂ ವಿಶತಿ ಚೈವಾಂಭೋ ಭಾಸ್ಕರೇಸ್ತಮುಪೇಯುಷಿ ।
ತಸ್ಮಾಚ್ಛುಕ್ಲಾ ಭವಂತ್ಯಾಪೋ ನಕ್ತಮಹ್ನಃಪ್ರವೇಶನಾತ್ ॥ ೩೮ ॥

ಏವಂ ಪುಷ್ಕರಮಧ್ಯೇ ನ ಯದಾ ಯಾತಿ ದಿವಾಕರಃ ।
ತ್ರಿಂಶದ್ಭಾಗಂ ತು ಮೇದಿನ್ಯಾ ಸ್ತದಾ ಮೌಹೂರ್ತಿಕೀ ಗತಿಃ ॥ ೩೯ ॥

ಕುಲಾಲಚಕ್ರಪರ್ಯಂತೇ ಭ್ರಮನ್ನೇಷ ದಿವಾಕರಃ ।
ಕರೋತ್ಯಹಸ್ತಥಾ ರಾತ್ರಿಂ ವಿಮುಂಚನ್ಮೇದಿನೀಂ ದ್ವಿಜ ॥ ೪೦ ॥

೩೬-೩೮. ಮೇರುಪರ್ವತದ ದಕ್ಷಿಣಾರ್ಧ ಭೂಮಿಯಲ್ಲಿ ಸೂರ್ಯನಿರುವಾಗ ಕತ್ತಲೆಯ ಸ್ವಭಾವದ ರಾತ್ರಿಯು, ನೀರಿನಲ್ಲಿ ಪ್ರವೇಶಿಸುವುದು. ಉತ್ತರಾರ್ಧ ಭೂಮಿಯಲ್ಲಿ ಸೂರ್ಯನಿರುವಾಗ ಪ್ರಕಾಶ ಸ್ವಭಾವದ ಹಗಲು, ರಾತ್ರಿಯಲ್ಲಿ ನೀರನ್ನು ಪ್ರವೇಶಿಸುವುದು. ಹಗಲಿನಲ್ಲಿ ರಾತ್ರಿಯು ನೀರನ್ನು ಪ್ರವೇಶಿಸುವುದರಿಂದ ನೀರು ಸ್ವಲ್ಪ ಕೆಂಪಾಗುವುದು. ರಾತ್ರಿಯಲ್ಲಿ ಹಗಲು ನೀರನ್ನು ಪ್ರವೇಶಿಸುವುದರಿಂದ ನೀರು ಬೆಳ್ಳಗಾಗುವುದು. "ಯದ್ವೈದಿವಾ ಭವತ್ಯ ಪೋರಾತ್ರಿಃ ಪ್ರವಿಶತಿತಸ್ಮಾತ್ತಾಮ್ರಾ ಆಪೋದಿವಾದದೃಶೇ ಯನ್ನಕ್ತಂ ಭವತ್ಯಪೋಽಹಃ ಪ್ರವಿಶತಿ ತಸ್ಮಾಚ್ಚಂದ್ರಾ ಆಪೋನಕ್ತಂ ದದೃಶೇ" ಎಂಬ ವೇದವಚನವೇ ಇದಕ್ಕೆ ಪ್ರಮಾಣವು.

೩೯-೪೦. ಈ ರೀತಿಯಲ್ಲಿ ಪುಷ್ಕರ ದ್ವೀಪದ ಮಧ್ಯ ಪ್ರದೇಶದಿಂದ ತನ್ನ ರಥ ಚಕ್ರಕ್ಕೆ ಆಶ್ರಯವಾದ ಮಾನಸೋತ್ತರ ಪರ್ವತದ ತುದಿಯವರೆಗೆ ಇರುವ ಭೂಮಿಯ ಮೂವತ್ತನೆಯ ಒಂದು ಭಾಗದವರೆಗೆ ಸೂರ್ಯನ ಸಂಚಾರ ಕಾಲಕ್ಕೆ ಒಂದು ಮುಹೂರ್ತವೆಂದು ಹೆಸರು ಬಂದಿರುವುದು. ಸೂರ್ಯನು ಕುಂಬಾರನ ಚಕ್ರದ ಅಂಚಿನಲ್ಲಿ ಒಂದು ಪ್ರಾಣಿಯು ಸುತ್ತುವಂತೆ ಕಾಲ ಚಕ್ರ(ಜ್ಯೋತಿಶ್ಚಕ್ರ)ದಲ್ಲಿ ಸುತ್ತುತ್ತ ಹೆಚ್ಚು ಕಡಿಮೆಗಳಾದ ಹಗಲು ರಾತ್ರಿಗಳನ್ನು ಭೂಮಿಯ ಮೇಲೆ ಉಂಟು ಮಾಡುತ್ತಿರುವನು.

ಅಯನಸ್ಯೋತ್ತರಸ್ಯಾದೌ ಮಕರಂ ಯಾತಿ ಭಾಸ್ಕರಃ ।
ತತಃ ಕುಂಭಂ ಚ ಮೀನಂ ಚ ರಾಶೇ ರಾಶ್ಯಂತರಂ ದ್ವಿಜ ॥ ೩೧ ॥

ತ್ರಿಷ್ವೇತೇಷ್ವಥ ಭುಕ್ತೇಷು ತತೋ ವೈಷುವತೀಂ ಗತಿಂ ।
ಪ್ರಯಾತಿ ಸವಿತಾ ಕುರ್ವನ್ ಅಹೋರಾತ್ರಂ ತತಸ್ಸಮಂ ॥ ೩೨ ॥

ತತೋ ರಾತ್ರಿಃ ಕ್ಷಯಂ ಯಾತಿ ವರ್ಧತೇಽನುದಿನಂ ದಿನಂ ।
ತತಶ್ಚ ಮಿಥುನಸ್ಯಾಂತೇ ಪರಾಂ ಕಾಷ್ಠಾಮುಪಾಗತಃ ॥ ೩೩ ॥

ರಾಶಿಂ ಕರ್ಕಟಕಂ ಪ್ರಾಪ್ಯ ಕುರುತೇ ದಕ್ಷಿಣಾಯನಂ ।
ಕುಲಾಲಚಕ್ರಪರ್ಯಂತೇ ಯಥಾ ಶೀಘ್ರಂ ಪ್ರವರ್ತತೇ ॥ ೩೪ ॥

ದಕ್ಷಿಣಪ್ರಕ್ರಮೇ ಸೂರ್ಯಸ್ತಥಾ ಶೀಘ್ರಂ ಪ್ರವರ್ತತೇ ।
ಅತಿವೇಗತಯಾ ಕಾಲಂ ವಾಯುವೇಗಗತಿಶ್ಚರನ್ ॥ ೩೫ ॥

೩೧-೩೨. ಉತ್ತರಾಯಣ ಪ್ರಾರಂಭದಲ್ಲಿ ಸೂರ್ಯನು ಮಕರರಾಶಿಯನ್ನು ಪ್ರವೇಶಿಸುವನು. ಕ್ರಮವಾಗಿ ಕುಂಭ, ಮೀನ ರಾಶಿಗಳನ್ನು ಪ್ರವೇಶಿಸಿದಮೇಲೆ ವಿಷುವದ್ಗತಿಯಿಂದ ಹಗಲು, ರಾತ್ರಿಗಳನ್ನು ಭೂಮಿಯಲ್ಲಿ ಸಮಾನವಾಗಿ ಮಾಡುತ್ತ ಮೇಷ ರಾಶಿಯನ್ನು ಪ್ರವೇಶಿಸುವನು.

೩೩-೩೫. ಆಮೇಲೆ ರಾತ್ರಿ ಪ್ರಮಾಣವು ಕಡಿಮೆಯಾಗುತ್ತ ಹಗಲಿನ ಪ್ರಮಾಣವು ಕ್ರಮವಾಗಿ ಹೆಚ್ಚುತ್ತ ಬರುವುದು. ಬಳಿಕ ಕ್ರಮವಾಗಿ ಮಿಥುನ ರಾಶಿಯ ಕೊನೆಯಲ್ಲಿ ಉತ್ತರದಿಕ್ಕಿನ ಕೊನೆಯನ್ನು ಸೇರಿ ಕರ್ಕಟ ರಾಶಿಯನ್ನು ಪ್ರವೇಶಿಸಿ, ದಕ್ಷಿಣಾಯನವನ್ನು ಪ್ರಾರಂಭಿಸುವನು. ಕುಂಬಾರನ ಚಕ್ರವು ಅಂಚಿನಲ್ಲಿ ಶೀಘ್ರವಾಗಿ ತಿರುಗುವಂತೆ ದಕ್ಷಿಣಾಯನದಲ್ಲಿ ಸೂರ್ಯನು ಶೀಘ್ರಗತಿಯಿಂದ ನಡೆವನು. ಈ ಕಾರಣದಿಂದ ದೂರವಾದ ಭೂಪ್ರದೇಶವನ್ನು ಸ್ವಲ್ಪಕಾಲದಲ್ಲಿಯೇ ದಾಟಿಹೋಗುವನು.

ತಸ್ಮಾತ್ಪ್ರಕೃಷ್ಟಾಂ ಭೂಮಿಂ ತು ಕಾಲೇನಾಲ್ಪೇನ ಗಚ್ಛತಿ ।
ಸೂರ್ಯೋ ದ್ವಾದಶಭಿಶ್ಶೈಘ್ರ್ಯಾನ್ಮುಹೂರ್ತೈರ್ದಕ್ಷಿಣಾಯನೇ ॥ ೩೬ ॥

ತ್ರಯೋದಶಾರ್ಧಮೃಕ್ಷಾಣಾಮಹ್ನಾ ತು ಚರತೇ ದ್ವಿಜ ।
ಮುಹೂರ್ತೈಸ್ತಾವದೃಕ್ಷಾಣಿ ನಕ್ತಮಷ್ಟಾದಶೈಶ್ಚರನ್ ॥ ೩೭ ॥

ಕುಲಾಲಚಕ್ರಮಧ್ಯಸ್ಥೋ ಯಥಾ ಮಂದಂ ಪ್ರಸರ್ಪತಿ ।
ತಥೋದಗಯನೇ ಸೂರ್ಯಸ್ಸರ್ಪತೇ ಮಂದವಿಕ್ರಮಃ ॥ ೩೮ ॥

ತಸ್ಮಾದ್ದೀರ್ಘೇಣ ಕಾಲೇನ ಭೂಮಿಮಲ್ಪಾಂ ತು ಗಚ್ಛತಿ ।
ಅಷ್ಟಾದಶಮುಹೂರ್ತಂ ತು ಉತ್ತರಾಯಣ ಪಶ್ಚಿಮಂ ॥ ೩೯ ॥

ಅಹೋ ಭವತಿ ತತ್ರಾಪಿ ತಪತೇ ಮಂದವಿಕ್ರಮಃ ।
ತ್ರಯೋದಶಾರ್ಧಮಹ್ನೈವ ಋಕ್ಷಾಣಾಂ ಚರತೇ ರವಿಃ ॥ ೪೦ ॥

೩೬–೩೭. ದಕ್ಷಿಣಾಯನದ ಹಗಲಿನಲ್ಲಿ ಸೂರ್ಯನು ಶೀಘ್ರವಾಗಿ ಹನ್ನೆರಡು ಮುಹೂರ್ತದಲ್ಲಿ ಜ್ಯೋತಿಶ್ಚಕ್ರದ ಹದಿಮೂರೂವರೆ ನಕ್ಷತ್ರದಿಂದ ಕೂಡಿದ ಅರ್ಧಭಾಗದಲ್ಲಿ ಸಂಚರಿಸುವನು. ರಾತ್ರಿಯಲ್ಲಿ ಹದಿನೆಂಟು ಮುಹೂರ್ತದಲ್ಲಿ ಮಿಕ್ಕ ಅರ್ಧಭಾಗದಲ್ಲಿ ನಿಧಾನವಾಗಿ ಸಂಚರಿಸುವನು. ಇದರಿಂದ ದಕ್ಷಿಣಾಯನದಲ್ಲಿ ಹಗಲು ಕಡಿಮೆಯಾಗಿಯೂ, ರಾತ್ರಿಯು ಹೆಚ್ಚಾಗಿಯೂ ಆಗುವುದು. ಉತ್ತರಾಯಣದಲ್ಲಿ ಹಗಲು ಹದಿನೆಂಟು ಮುಹೂರ್ತದಲ್ಲಿ ಅರ್ಧ ಜ್ಯೋತಿಶ್ಚಕ್ರವನ್ನೂ, ರಾತ್ರಿ ಹನ್ನೆರಡು ಮುಹೂರ್ತದಲ್ಲಿ ಮಿಕ್ಕ ಅರ್ಧ ಜ್ಯೋತಿಶ್ಚಕ್ರವನ್ನೂ ನಿಧಾನವಾಗಿ ಸಂಚರಿಸುವನು. ಇದರಿಂದ ಉತ್ತರಾಯಣದಲ್ಲಿ ಹಗಲು ಹೆಚ್ಚಾಗಿಯೂ ರಾತ್ರಿಯು ಕಡಿಮೆಯಾಗಿಯೂ ಆಗುವುದು. ದೇಶಭೇದದಿಂದ ಹಗಲು, ರಾತ್ರಿಗಳ ಪ್ರಮಾಣವು ವಿಶೇಷವಾಗಿ ಹೆಚ್ಚು ಕಡಿಮೆಗಳಾಗುವುದೆಂದು ತಿಳಿಯಬೇಕು.

೩೮–೪೭. ಕುಂಬಾರನ ಚಕ್ರದಲ್ಲಿ ಮಧ್ಯಪ್ರದೇಶದಲ್ಲಿರುವ ಮಣ್ಣಿನ ಉಂಡೆಯು ಅತ್ಯಂತ ನಿಧಾನವಾಗಿ ಸುತ್ತುತ್ತಿರುವಂತೆ ಧ್ರುವಮಂಡಲವು ಜ್ಯೋತಿಶ್ಚಕ್ರವು ತಿರುಗುತ್ತಿರುವಾಗ ನಿಧಾನವಾಗಿ ಸುತ್ತುತ್ತಿರುವುದು. ಕುಂಬಾರನ ಚಕ್ರದ ಮಧ್ಯ

ಮುಹೂರ್ತೈಸ್ತಾವದೃಕ್ಷಾಣಿ ರಾತ್ರೌ ದ್ವಾದಶಭಿಶ್ಚರನ್ ।
ಅತೋ ಮಂದತರಂ ನಾಭ್ಯಾಂ ಚಕ್ರಂ ಭ್ರಮತಿ ವೈ ಯಥಾ ॥ ೪೧ ॥

ಮೃತ್ಪಿಂಡ ಇವ ಮಧ್ಯಸ್ಥೋ ಧ್ರುವೋ ಭ್ರಮತಿ ವೈ ತಥಾ ।
ಕುಲಾಲಚಕ್ರನಾಭಿಸ್ತು ಯಥಾ ತತ್ರೈವ ವರ್ತತೇ ॥ ೪೨ ॥

ಧ್ರುವಸ್ತಥಾ ಹಿ ಮೈತ್ರೇಯ ತತ್ರೈವ ಪರಿವರ್ತತೇ ।
ಉಭಯೋಃ ಕಾಷ್ಠಯೋರ್ಮಧ್ಯೇ ಭ್ರಮತೋ ಮಂಡಲಾನಿ ಚ ॥ ೪೩ ॥

ದಿವಾನಕ್ತಂ ಚ ಸೂರ್ಯಸ್ಯ ಮಂದಾ ಶೀಘ್ರಾ ಚ ವೈ ಗತಿಃ ।
ಮಂದಾಹ್ನಿ ಯಸ್ಮಿನ್ನಯನೇ ಶೀಘ್ರಾ ನಕ್ತಂ ತದಾ ಗತಿಃ ॥ ೪೪ ॥

ಶೀಘ್ರಾ ನಿಶಿ ಯಥಾ ಚಾಸ್ಯ ತಥಾ ಮಂದಾ ಗತಿರ್ದಿನಾ ।
ಏಕಪ್ರಮಾಣಮೇವೈಷ ಮಾರ್ಗಂ ಯಾತಿ ದಿವಾಕರಃ ॥ ೪೫ ॥

ಅಹೋರಾತ್ರೇಣ ಯೋ ಭುಂಕ್ತೇ ಸಮಸ್ತಾ ರಾಶಯೋ ದ್ವಿಜ ।
ಷಡೇವ ರಾಶಯೋ ಭುಂಕ್ತೇ ರಾತ್ರಾವನ್ಯಾಂಶ್ಚ ಷಟ್ ದಿವಾ ॥ ೪೬ ॥

ರಾಶಿಪ್ರಮಾಣಜನಿತಾ ದೀರ್ಘಹ್ರಸ್ವಾತ್ಮತಾ ದಿನಾ ।
ತಥಾ ನಿಶಾಯಾಂ ರಾಶೀನಾಂ ಪ್ರಮಾಣೈರ್ಲಘುದೀರ್ಘತಾ ॥ ೪೭ ॥

ಪ್ರವೇಶವುಒಂದೇ ಕಡೆಯಲ್ಲಿರುವಂತೆ ಧ್ರುವಮಂಡಲವು ಅಲ್ಲಿಯೆ ತಿರುಗುತ್ತಿರುವುದು. ಯಾವ ಅಯನದಲ್ಲಿ ಹಗಲು ಹೆಚ್ಚಾಗುವುದೋ ಅದರಲ್ಲಿ ರಾತ್ರಿ ಪ್ರಮಾಣವು ಕಡಿಮೆಯಾಗುವುದು. ಯಾವ ಅಯನದಲ್ಲಿ ರಾತ್ರಿಪ್ರಮಾಣವು ಹೆಚ್ಚುವುದೋ ಅದರಲ್ಲಿ ಅಹಃಪ್ರಮಾಣವು ಕಡಿಮೆಯಾಗುವುದು. ಸೂರ್ಯನು ಒಂದೇ ಪ್ರಮಾಣದಲ್ಲಿ ಚಲಿಸುತ್ತ ಹಗಲು ರಾತ್ರಿಗಳಲ್ಲಿ ಹನ್ನೆರಡು ರಾಶಿಗಳನ್ನೂ ಅನುಭವಿಸುವನು. ಹಗಲು ಆರು ರಾಶಿಗಳನ್ನೂ, ರಾತ್ರಿ ಆರು ರಾಶಿಗಳನ್ನೂ ಅನುಭವಿಸುವನು. ರಾಶಿಪ್ರಮಾಣದಿಂದಹಗಲು ರಾತ್ರಿಗಳ ಪ್ರಮಾಣವು ಹೆಚ್ಚು ಕಡಿಮೆಗಳಾಗುವುವು.

ದಿನಾದೇರ್ದೀರ್ಘಹ್ರಸ್ವತ್ವಂ ತದ್ಭೋಗೇನೈವ ಜಾಯತೇ ।
ಉತ್ತರೇ ಪ್ರಕ್ರಮೇ ಶೀಘ್ರಾ ನಿಶಿ ಮಂದಾ ಗತಿರ್ದಿವಾ । ॥ ೪೮ ॥

ದಕ್ಷಿಣೇತ್ವಯನೇ ಚೈವ ವಿಪರೀತಾ ವಿವಸ್ವತಃ ।
ಉಷಾ ರಾತ್ರಿಸ್ಸಮಾಖ್ಯಾತಾ ವ್ಯುಷ್ಟಿಶ್ಚಾಪ್ಯುಚ್ಯತೇ ದಿನಂ ॥ ೪೯ ॥

ಪ್ರೋಚ್ಯತೇ ಚ ತಥಾ ಸಂಧ್ಯಾ ಉಷಾ ವ್ಯುಷ್ಟ್ಯೋರ್ಯದಂತರಂ ।
ಸಂಧ್ಯಾಕಾಲೇ ತು ಸಂಪ್ರಾಪ್ತೇ ರೌದ್ರೇ ಪರಮದಾರುಣೇ ॥ ೫೦ ॥

ಮಂದೇಹಾ ರಾಕ್ಷಸಾ ಘೋರಾಃ ಸೂರ್ಯಮಿಚ್ಛಂತಿ ಖಾದಿತುಂ ।
ಪ್ರಜಾಪತಿಕೃತಃ ಶಾಪಃ ತೇಷಾಂ ಮೈತ್ರೇಯ ರಕ್ಷಸಾಂ ॥ ೫೧ ॥

೪೮–೫೩. ಹಗಲು ರಾತ್ರಿಗಳ ಹೆಚ್ಚು ಕಡಮೆಗಳು ಸೂರ್ಯನ ಶೀಘ್ರ ಮಂದಗತಿಗಳಿಂದ ಉಂಟಾಗುವುವು. ಆ ಗತಿಗಳು ಜ್ಯೋತಿಶ್ಶಾಸ್ತ್ರದ ಲೆಕ್ಕದಂತೆ ರಾಶಿಗಳ ಪ್ರಮಾಣದಿಂದ ಉಂಟಾಗುವುವು. ಈ ದೇಶದಲ್ಲಿ ಉತ್ತರಾಯಣದಲ್ಲಿ ಹಗಲು ಹೆಚ್ಚಿ ರಾತ್ರಿಯು ಕಡಮೆಯಾಗುವುದು. ದಕ್ಷಿಣಾಯನದಲ್ಲಿ ರಾತ್ರಿಯು ಹೆಚ್ಚಿ ಹಗಲು ಕಡಮೆಯಾಗುವುದು. ವೇದದಲ್ಲಿ 'ರಾತ್ರಿರ್ವಾ ಉಷಾ ಅಹರ್ವ್ಯುಷ್ಟಿಃ' ಎಂದು ರಾತ್ರಿಗೆ ಉಷಾ ಎಂದೂ ಹಗಲಿಗೆ ವ್ಯುಷ್ಟಿಯೆಂದೂ ಇವೆರಡರ ಮಧ್ಯಕಾಲಕ್ಕೆ ಸಂಧ್ಯೆಯೆಂದೂ ಹೆಸರಿರುವುದು. ಭಯಂಕರವಾದ ಸಂಧ್ಯಾಕಾಲವು ಪ್ರಾಪ್ತವಾದರೆ ಕ್ರೂರರಾದ ಮಂದೇಹರೆಂಬ ರಾಕ್ಷಸರು ಸೂರ್ಯನನ್ನು ನುಂಗಬೇಕೆಂದು ಬರುವರು. ಮಂದೇಹರು ಪ್ರತಿದಿನವೂ ಮರಣಹೊಂದಬೇಕೆಂದೂ ಅವರ ಶರೀರವು ನಾಶವಾಗಬಾರದೆಂದೂ ಬ್ರಹ್ಮನು ಶಾಪವನ್ನು ಕೊಟ್ಟಿರುವನು. ಆದುದ ರಿಂದ ಸೂರ್ಯನಿಗೂ, ಮಂದೇಹರಿಗೂ ಭಯಂಕರವಾದ ಯುದ್ಧವಾಗುವುದು. ಆಗ ಬ್ರಾಹ್ಮಣಶ್ರೇಷ್ಠರು ಬ್ರಹ್ಮ ವಾಚಕವಾದ ಓಂಕಾರದಿಂದಲೂ, ಗಾಯತ್ರೀ ಮಂತ್ರದಿಂದಲೂ ಅಭಿಮಂತ್ರಿಸಿದ ನೀರನ್ನು ಅರ್ಘ್ಯರೂಪದಿಂದ ಚೆಲ್ಲುವರು. ಆ ನೀರು ವಜ್ರಾಯುಧವಾಗಿ ಆ ದುಷ್ಟರಾದ ರಾಕ್ಷಸರನ್ನು ಕೊಲ್ಲುವುದು. (ಇಲ್ಲಿ ಬ್ರಹ್ಮನು ವರವನ್ನು ಕೊಟ್ಟರೂ ರಾಕ್ಷಸರಿಗೆ ದುಃಖಫಲರೂಪವಾದುದರಿಂದ ಶಾಪವೆಂದು

ಅಕ್ಷಯತ್ವಂ ಶರೀರಾಣಾಂ ಮರಣಂ ಚ ದಿನೇ ದಿನೇ ।
ತತಸ್ಸೂರ್ಯಸ್ಯ ತೈರ್ಯುದ್ಧಂ ಭವತ್ಯತ್ಯಂತದಾರುಣಂ ॥ ೫೨ ॥

ತತೋ ದ್ವಿಜೋತ್ತಮಾಸ್ತೋಯಂ ಪ್ರಕ್ಷಿಪಂತಿ ಮಹಾಮುನೇ ।
ಓಂಕಾರಬ್ರಹ್ಮಸಂಯುಕ್ತ ಗಾಯತ್ರ್ಯಾ ಚಾಭಿಮಂತ್ರಿತಂ ॥ ೫೩ ॥

ತೇನ ದಹ್ಯಂತಿ ತೇ ಪಾಪಾ ವಜ್ರೀಭೂತೇನ ವಾರಿಣಾ ।
ಅಗ್ನಿಹೋತ್ರೇ ಹೂಯತೇ ಯಾ ಸಮಂತ್ರಾ ಪ್ರಥಮಾಹುತಿಃ ॥ ೫೪ ॥

ಸೂರ್ಯೋ ಜ್ಯೋತಿಸ್ಸಹಸ್ರಾಂಶುಸ್ತಯಾ ದೀಪ್ಯತಿ ಭಾಸ್ಕರಃ ।
ಓಂಕಾರೋ ಭಗವಾನ್ವಿಷ್ಣುಃ ತ್ರಿಧಾಮಾ ವಚಸಾಂ ಪತಿಃ ॥ ೫೫ ॥

ತದುಚ್ಚಾರಣತಸ್ತೇ ತು ವಿನಾಶಂ ಯಾಂತಿ ರಾಕ್ಷಸಾಃ ।
ವೈಷ್ಣವೋಂಶಃ ಪರಃ ಸೂರ್ಯೋ ಯೋಂತರ್ಜ್ಯೋತಿರಸಂಪ್ಲವಂ ॥೫೬॥

ಹೇಳಿದೆ. ದ್ವಿಜರು ಪ್ರತಿದಿನವೂ ಸಂಧ್ಯೋಪಾಸನೆಯನ್ನು ಮಾಡಬೇಕೆಂಬದಾಗಿ ವೇದದಲ್ಲಿ ಈ ಕಥೆಯು ಅರ್ಥವಾದರೂಪದಲ್ಲಿ ಹೇಳಿರುವುದು ಹೇಗೆಂದರೆ:—ರಕ್ಷಾಂಸಿಹ ವಾಪುರೋನುವಾಕೇತಪೋಗ್ರ ಮತಿಷ್ಠಂತ ತಾ ಪ್ರಜಾಪತಿರ್ವರೇಣೋಪಾಮಂತ್ರಯತ ತಾನಿವರಮವೃಣೀತಾದಿತ್ಯೋನೋ ಯೋದ್ಧಾ ಇತಿತಾನ್ ಪ್ರಜಾಪತಿರಬ್ರವೀದ್ಯೋಧಯಧ್ವಂ" ಇತ್ಯಾದಿ)

೫೪-೫೬. ಅಗ್ನಿಹೋತ್ರದಲ್ಲಿ ಪ್ರಾತಃ ಸಂಧ್ಯಾಕಾಲಗಳಲ್ಲಿ 'ಸೂರ್ಯೋ ಜ್ಯೋತಿರ್ಜ್ಯೋತಿರಗ್ನಿಸ್ವಾಹಾ-ಅಗ್ನಿರ್ಜ್ಯೋತಿ ರ್ಜ್ಯೋತಿಸ್ಸೂರ್ಯಸ್ವಾಹಾ' ಎಂದು ಮಂತ್ರ ಪೂರ್ವಕವಾಗಿ ಮೊದಲನೆಯ ಆಹುತಿಯನ್ನು ಹೋಮಮಾಡುವರು. ಇದರಿಂದ ಸೂರ್ಯನು ಪ್ರಕಾಶಮಾನನಾಗಿರುವನು. ಓಂಕಾರವು ಮಹಾಮಹಿಮನಾದ ವಿಷ್ಣುಸ್ವರೂಪವಾದುದು. ಋಗ್ಯಜುಸ್ಸಾಮ ವೇದಗಳ ಸ್ವರೂಪವಾದುದಾಗಿ

ಅಭಿಧಾಯಕ ಓಂಕಾರಸ್ತಸ್ಯ ಸ ಪ್ರೇರಕಃ ಪರಃ ।
ತೇನ ತತ್ಪ್ರೇರಿತಂ ಜ್ಯೋತಿರೋಂಕಾರೇಣಾತಿ ದೀಪ್ತಿಮತ್ ॥ ೫೭ ॥

ದಹತ್ಯಶೇಷರಕ್ಷಾಂಸಿ ಮಂದೇಹಾಖ್ಯಾನ್ಯಘಾನಿ ವೈ ।
ತಸ್ಮಾನ್ನೋಲ್ಲಂಘನಂ ಕಾರ್ಯಂ ಸಂಧ್ಯೋಪಾಸನಕರ್ಮಣಃ ॥ ೫೮ ॥

ಸ ಹಂತಿ ಸೂರ್ಯಂ ಸಂಧ್ಯಾಯಾ ನೋಪಾಸ್ತಿಂ ಕುರುತೇ ಹಿಯಃ ।
ತತಃ ಪ್ರಯಾತಿ ಭಗವಾನ್ ಬ್ರಾಹ್ಮಣೈರಭಿರಕ್ಷಿತಃ ।
ವಾಲಖಿಲ್ಯಾದಿಭಿಶ್ಚೈವ ಜಗತಃ ಪಾಲನೋದ್ಯತಃ ॥ ೫೯ ॥

ಕಾಷ್ಠಾ ನಿಮೇಷಾ ದಶಪಂಚ ಚೈವ
ತ್ರಿಂಶಚ್ಚ ಕಾಷ್ಠಾಗಣಯೇತ್ಕಲಾಂ ತಾಂ ।

ವೇದಾಧಿಪತಿಯಾದುದು. ಆದುದರಿಂದ ಇದರ ಉಚ್ಚಾರಣೆಯಿಂದ ರಾಕ್ಷಸರು ನಾಶವಾಗುವರು. ಸೂರ್ಯನು ವಿಷ್ಣುವಿನ ಅಂಶದಿಂದ ಅಂತರ್ಜ್ಯೋತಿಸ್ವರೂಪನಾಗಿ ನಿರ್ವಿಕಾರವಾಗಿರುವನು. ಓಂಕಾರವು ಸೂರ್ಯನಲ್ಲಿರುವ ವಿಷ್ಣುವಿನ ಶ್ರೇಷ್ಠವಾದ ತೇಜಸ್ಸನ್ನು ಪ್ರೇರಣೆಮಾಡುವುದು. ಆದುದರಿಂದ ಓಂಕಾರದಿಂದ ಪ್ರೇರಿತವಾದ ಪ್ರಕಾಶವಾದ ಸೂರ್ಯನ ತೇಜಸ್ಸು ಮಂದೇಹರೆಂಬ ಪಾಪಸ್ವರೂಪರಾದ ರಾಕ್ಷಸರನ್ನೆಲ್ಲ ನಾಶಮಾಡಿಬಿಡುವುದು.

೫೮-೫೯. ಆದುದರಿಂದ ದ್ವಿಜರು ಸಂಧ್ಯೋಪಾಸನಾರೂಪವಾದ ಕರ್ಮವನ್ನು ಬಿಡಬಾರದು. ಸಂಧ್ಯೋಪಾಸನೆಯನ್ನು ಮಾಡದವನು ಸೂರ್ಯನನ್ನು ಕೊಂದ ಪಾಪಕ್ಕೆ ಗುರಿಯಾಗುವನು. ಬ್ರಾಹ್ಮಣರ ಸಂಧ್ಯಾಕರ್ಮದಿಂದ ರಕ್ಷಿತನಾದ ಮಹಾಮಹಿಮನಾದ ಸೂರ್ಯನು ವಾಲಖಿಲ್ಯಾದಿ ಮುನಿಗಳೊಡನೆ ಜಗತ್ತನ್ನು ರಕ್ಷಿಸುವ ಉದ್ಯೋಗವನ್ನು ಮಾಡುತ್ತಿರುವನು.

೬೦-೬೧. ಹದಿನೈದು ನಿಮಿಷಗಳಿಗೆ ಕಾಷ್ಠವೆಂದೂ, ಮೂವತ್ತು ಕಾಷ್ಠಗಳಿಗೆ ಒಂದು ಕಲೆಯೆಂದೂ, ಮೂವತ್ತು ಕಲೆಗಳಿಗೆ ಒಂದು ಮುಹೂರ್ತವೆಂದೂ,

ತ್ರಿಂಶತ್ಕಲಾಶ್ಚೈವ ಭವೇನ್ಮುಹೂರ್ತಃ
ತೈಸ್ತ್ರಿಂಶತಾರಾತ್ರ್ಯಹನೀಸಮೇತೇ ॥ ೬೦ ॥

ಹ್ರಾಸವೃದ್ಧೀ ತ್ವಹರ್ಭಾಗೈರ್ದಿವಸಾನಾಂ ಯಥಾಕ್ರಮಂ ।
ಸಂಧ್ಯಾ ಮುಹೂರ್ತಮಾತ್ರಾ ವೈ ಹ್ರಾಸವೃದ್ಧೌ ಸಮಾ ಸ್ಮೃತಾ ॥ ೬೧ ॥

ಲೇಖಾಪ್ರಭೃತ್ಯಥಾ ದಿತ್ಯೇ ತ್ರಿಮುಹೂರ್ತ ಗತೇ ತು ವೈ ।
ಪ್ರಾತಃ ಸ್ಮೃತಃ ತತಃ ಕಾಲೋ ಭಾಗಶ್ಚಾಹ್ನಸ್ಸ ಪಂಚಮಃ ॥ ೬೨ ॥

ತಸ್ಮಾತ್ಪ್ರಾತಸ್ತನಾತ್ಕಾಲಾತ್ ತ್ರಿಮುಹೂರ್ತಸ್ತು ಸಂಗವಃ ।
ಮಧ್ಯಾಹ್ನಸ್ತ್ರಿಮುಹೂರ್ತಸ್ತು ತಸ್ಮಾತ್ಕಾಲಾತ್ತು ಸಂಗವಾನ್ ॥ ೬೩ ॥

ತಸ್ಮಾನ್ಮಾಧ್ಯಾಹ್ನಿಕಾತ್ಕಾಲಾದಪರಾಹ್ಣ ಇತಿ ಸ್ಮೃತಃ ।
ತ್ರಯ ಏವ ಮುಹೂರ್ತಾಸ್ತು ಕಾಲಭಾಗಃ ಸ್ಮೃತೋ ಬುಧೈಃ ॥ ೬೪ ॥

ಅಪರಾಹ್ಣೇ ವ್ಯತೀತೇ ತು ಕಾಲಃ ಸಾಯಾಹ್ನ ಉಚ್ಯತೇ ।
ದಶಪಂಚಮುಹೂರ್ತಾವೈ ಮುಹೂರ್ತಾಸ್ತ್ರಯ ಏವ ಚ ॥ ೬೫ ॥

ಮೂವತ್ತು ಮುಹೂರ್ತಗಳಿಗೆ ಹಗಲು ರಾತ್ರಿ ಕೂಡಿದ ಒಂದು ದಿನವೆಂದೂ ಅಳತೆಯನ್ನು ಗೊತ್ತುಮಾಡಿರುವುದು. ಹಗಲು ರಾತ್ರಿಗಳ ಪ್ರಮಾಣವು ಹೆಚ್ಚು ಕಡಿಮೆಯಾದರೂ ಸಂಧ್ಯಾಲವು ಒಂದು ಮುಹೂರ್ತಮಾತ್ರವಾಗಿರುವುದು.

೬೨-೬೫. ಸೂರ್ಯೋದಯ ಮೊದಲಾಗಿ ಮೂರು ಮುಹೂರ್ತಗಳು ಪ್ರಾತಃಕಾಲವೆನಿಸುವುದು. ಇದು ಹಗಲಿನ ಒಂದು ಭಾಗವು. ಆ ಮೇಲೆ ಮೂರು ಮುಹೂರ್ತವು ಸಂಗವಕಾಲವು. ಬಳಿಕ ಮೂರು ಮುಹೂರ್ತಗಳು ಮಧ್ಯಾಹ್ನ ಕಾಲವು. ಮಧ್ಯಾಹ್ನದ ಮೇಲೆ ಮೂರು ಮುಹೂರ್ತವು ಅಪರಾಹ್ಣಕಾಲವು, ಅಪ ರಾಹ್ಣವಾದ ಮೇಲೆ ಉಳಿದ ಮೂರು ಮುಹೂರ್ತಗಳು ಸಾಯಾಹ್ನವು. ಹೀಗೆ ಹಗಲಿನ ಹದಿನೈದು ಮುಹೂರ್ತಗಳನ್ನು ಮೂರು ಮುಹೂರ್ತದ ಐದು ಭಾಗವಾಗಿ ಮಾಡಿರುವುದು.

ದಶಪಂಚಮುಹೂರ್ತಂ ವೈ ಅಹೋರ್ವೈವತಂಸ್ಮೃತಂ ।
ವರ್ಧತೇಽಹೋ ಹ್ರಸತಿ ಚ ಅಯನೇ ದಕ್ಷಿಣೋತ್ತರೇ ॥ ೬೬ ॥

ಅಹಸ್ತು ಗ್ರಸತೇ ರಾತ್ರಿಂ ರಾತ್ರಿರ್ಗ್ರಸತಿ ವಾಸರಂ ।
ಶರದ್ವಸಂತಯೋರ್ಮಧ್ಯೇ ವಿಷುವಂತು ವಿಭಾವ್ಯತೇ ॥ ೬೭ ॥

ತುಲಾಮೇಷಗತೇ ಭಾನೌ ಸಮರಾತ್ರಿ ದಿನಂ ತು ತತ್ ।
ಕರ್ಕಟಾವಸ್ಥಿತೇ ಭಾನೌ ದಕ್ಷಿಣಾಯನಮುಚ್ಯತೇ ॥ ೬೮ ॥

ಉತ್ತರಾಯಣಮಪ್ಯುಕ್ತಂ ಮಕರಸ್ಥೇ ದಿವಾಕರೇ ।
ತ್ರಿಂಶನ್ಮುಹೂರ್ತಂ ಕಥಿತಂ ಅಹೋರಾತ್ರಂ ತು ಯನ್ಮಯಾ
ತಾನಿ ಪಂಚದಶ ಬ್ರಹ್ಮನ್ ಪಕ್ಷ ಇತ್ಯಭಿಧೀಯತೇ । ॥ ೬೯ ॥

ಮಾಸಃ ಪಕ್ಷದ್ವಯೇನೋಕ್ತೋ ದ್ವೌ ಮಾಸೌ ಚಾರ್ಕಜಾವೃತುಃ
ಋತುತ್ರಯಂ ಚಾಪ್ಯಯನಂ ದ್ವೇಯನೇ ವರ್ಷಸಂಜ್ಞಿತೇ । ॥ ೭೦ ॥

೬೬–೬೮. ವಿಷುವತ್ಕಾಲಗಳಲ್ಲಿ ಹಗಲು ಹದಿನೈದು ಮುಹೂರ್ತವಿರುವುದು. ದಕ್ಷಿಣೋತ್ತರಾಯಣಗಳಲ್ಲಿ ಹಗಲು ರಾತ್ರಿಗಳು ಹೆಚ್ಚು ಕಡಿಮೆಗಳಾಗುತ್ತಿರುವುವು. ಶರದೃತು ವಸಂತ ಋತುಗಳಲ್ಲಿ ಸೂರ್ಯನು ತುಲಾ ಮೇಷ ರಾಶಿಗಳಲ್ಲಿದ್ದಾಗ ಹಗಲು ರಾತ್ರಿಗಳ ಪ್ರಮಾಣವು ಸಮಾನವಾಗಿರುವುದು. ಸೂರ್ಯನು ಕಟಕ ರಾಶಿಗೆ ಬಂದಾಗ ದಕ್ಷಿಣಾಯನವೂ, ಮಕರರಾಶಿಗೆ ಬಂದಾಗ ಉತ್ತರಾಯಣವೂ ಪ್ರಾರಂಭವಾಗುವುದು.

೬೯–೭೦. ಮೂವತ್ತು ಮುಹೂರ್ತಗಳಿಂದ ಕೂಡಿದ ಹಗಲು ರಾತ್ರಿಗಳಿಗೆ ಒಂದು ದಿನ. ಹದಿನೈದು ದಿನಗಳಿಗೊಂದು ಪಕ್ಷವು. ಎರಡು ಪಕ್ಷಗಳಿಗೊಂದು ಮಾಸವು. ಎರಡು ಮಾಸಗಳಿಗೆ ಒಂದು ಋತುವು. ಮೂರು ಋತುಗಳಿಗೊಂದು ಅಯನವು. ಎರಡು ಅಯನಗಳಿಗೊಂದು ವರ್ಷವು.

ಸಂವತ್ಸರಾದಯಃ ಪಂಚ ಚತುರ್ಮಾಸವಿಕಲ್ಪಿತಾಃ
ನಿಶ್ಚಯಃ ಸರ್ವಕಾಲಸ್ಯ ಯುಗಮಿತ್ಯಭಿಧೀಯತೇ । ॥ ೭೧ ॥

ಸಂವತ್ಸರಸ್ತು ಪ್ರಥಮೋ ದ್ವಿತೀಯಃ ಪರಿವತ್ಸರಃ
ಇದ್ವತ್ಸರಸ್ತೃತೀಯಸ್ತು ಚತುರ್ಥಶ್ಚಾನುವತ್ಸರಃ ।
ವತ್ಸರಃ ಪಂಚಮಶ್ಚಾತ್ರ ಕಾಲೋಽಯಂ ಯುಗಸಂಜ್ಞಿತಃ ॥ ೭೨ ॥

ಯಃ ಶ್ವೇತಸ್ಯೋತ್ತರೇ ಶೈಲಃ ಶೃಂಗವಾನಿತಿ ವಿಶ್ರುತಃ ।
ತ್ರೀಣಿ ತಸ್ಯ ತು ಶೃಂಗಾಣಿ ಯೈರಸೌ ಶೃಂಗವಾನ್ ಸ್ಮೃತಃ ॥ ೭೩ ॥

೭೧-೭೨. ಅಮಾವಾಸ್ಯೆಯಿಂದ ಅಮಾವಾಸ್ಯೆಯವರೆಗೆ ಚಾಂದ್ರಮಾಸ, ಮೂವತ್ತು ದಿನಗಳಿಗೆ ಸಾವನಮಾಸ, ಸೂರ್ಯನು ಒಂದು ರಾಶಿಯಲ್ಲಿರುವವರೆಗೆ ಸೌರಮಾಸ, ಅಶ್ವಿನ್ಯಾದಿ ಇಪ್ಪತ್ತೇಳು ನಕ್ಷತ್ರಗಳಲ್ಲಿ ಚಂದ್ರನಿರುವ ಕಾಲಕ್ಕೆ ನಕ್ಷತ್ರ ಮಾಸವೆಂದು ನಾಲ್ಕು ಬಗೆಯ ಮಾಸಗಳು. ಸಂವತ್ಸರ, ಪರಿವತ್ಸರ, ಇದ್ವತ್ಸರ, ಅನುವತ್ಸರ, ವತ್ಸರ ಎಂದು ಐದು ಬಗೆಯ ವರ್ಷಗಳು. ಈ ಐದು ವರ್ಷಗಳಿಗೆ ಯುಗವೆಂದು ಹೆಸರು ಕೊಟ್ಟಿರುವರು. (ಶುಕ್ಲಪಕ್ಷದ ಪಾಡ್ಯಮಿಯ ದಿನ ಒಂದೇ ನಕ್ಷತ್ರದಲ್ಲಿ ಚಂದ್ರ ಸೂರ್ಯರಿರುವಾಗ ಸಂಕ್ರಮಣವಾದರೆ ಆ ದಿನ ನಾಲ್ಕು ಬಗೆಯ ಮಾಸಗಳೂ ಏಕಕಾಲದಲ್ಲಿ ಪ್ರಾರಂಭವಾಗುವುವು. ಆ ಒಂದು ವರ್ಷದಲ್ಲಿ ಸೌರಮಾನದಿಂದ ಆರು ದಿನ ಕಡಿಮೆಯಾಗುವುದು ಚಾಂದ್ರಮಾನದಿಂದ ಆರು ದಿನ ಹೆಚ್ಚಾಗುವುದು. ಹೀಗೆ ಪ್ರತಿವರ್ಷದಲ್ಲಿಯೂ ಸೂರ್ಯ ಚಂದ್ರರಿಗಿರುವ ದೂರಕ್ಕನುಸಾರವಾಗಿ ಮೇಲೆ ಹೇಳಿದ ಐದು ವರ್ಷರೂಪವಾದ ಯುಗದಲ್ಲಿ ಸೌರಮಾನದ ಅರವತ್ತು ತಿಂಗಳುಗಳೂ, ಸಾವನದ ಅರವತ್ತೊಂದು ತಿಂಗಳೂ, ಚಾಂದ್ರಮಾನದ ಅರವತ್ತೆರಡು ತಿಂಗಳುಗಳೂ ಆಗುವುವು. ಈ ಮಧ್ಯದಲ್ಲಿ ಎರಡು ಅಧಿಕಮಾಸಗಳಾಗುವವು ಮತ್ತೆ ಆರನೆಯ ವರ್ಷದಲ್ಲಿ ಚಂದ್ರ ಸೂರ್ಯರ ಸಂಬಂಧದಿಂದ ಯುಗ ಪ್ರಾರಂಭವಾಗುವುದು.)

೭೩-೭೫. ಶ್ವೇತ ದ್ವೀಪದ ಉತ್ತರದಲ್ಲಿ ಶೃಂಗಪರ್ವತವಿರುವುದು ಅದಕ್ಕೆ ಮೂರು ಶಿಖರಗಳಿರುವುವು. ಇದರಿಂದಲೇ ಅದಕ್ಕೆ ಶೃಂಗಪರ್ವತವೆಂದು ಹೆಸರು

ದಕ್ಷಿಣಂ ಚೋತ್ತರಂ ಚೈವ ಮಧ್ಯಮಂ ವೈಷುವಂ ತಥಾ ।
ಶರದ್ವಸಂತಯೋರ್ಮಧ್ಯೇ ತದ್ಭಾನುಃ ಪ್ರತಿಪದ್ಯತೇ ।
ಮೇಷಾದೌ ಚ ತುಲಾದೌ ಚ ಮೈತ್ರೇಯ ವಿಷುವಂ ಸ್ಮೃತಂ ॥ ೭೪ ॥

ತದಾ ತುಲ್ಯಮಹೋರಾತ್ರಂ ಕರೋತಿ ತಿಮಿರಾಪಹಃ ।
ದಶಪಂಚಮುಹೂರ್ತಂ ವೈ ತದೇತದುಭಯಂ ಸ್ಮೃತಂ ॥ ೭೫ ॥

ಪ್ರಥಮೇ ಕೃತ್ತಿಕಾಭಾಗೇ ಯದಾ ಭಾಸ್ವಾನ್ ತದಾ ಶಶೀ ।
ವಿಶಾಖಾನಾಂ ಚತುರ್ಥಾಂಶೇ ಮುನೇ ತಿಷ್ಠತ್ಯಸಂಶಯಂ ॥ ೭೬ ॥

ವಿಶಾಖಾನಾಂ ಯದಾ ಸೂರ್ಯಶ್ಚರತ್ಯಂಶಂ ತೃತೀಯಕಂ ।
ತದಾ ಚಂದ್ರಂ ವಿಜಾನೀಯಾತ್ ಕೃತ್ತಿಕಾಶಿರಸಿ ಸ್ಥಿತಂ ॥ ೭೭ ॥

ತದೈವ ವಿಷುವಾಖ್ಯೋ ವೈ ಕಾಲಃ ಪುಣ್ಯೋಽಭಿಧೀಯತೇ ।
ತದಾ ದಾನಾನಿ ದೇಯಾನಿ ದೇವೇಭ್ಯಃ ಪ್ರಯತಾತ್ಮಭಿಃ ॥ ೭೮ ॥

ಬಂದಿರುವುದು. ಆ ಶಿಖರಗಳು ದಕ್ಷಿಣದಲ್ಲೊಂದು, ಉತ್ತರದಲ್ಲೊಂದು, ಮಧ್ಯ, ದಲ್ಲೊಂದು ಇರುವುವು. ನಡುವೆ ಇರುವ ಶಿಖರಕ್ಕೆ ವಿಷುವವೆಂದುಹೆಸರು. ಶರದ್ರುತು, ವಸಂತರುತುಗಳ ನಡುವೆ ಸೂರ್ಯನು ಮೇಷ, ತುಲಾ ಮಾಸಗಳ ಆದಿಯಲ್ಲಿ ಆ ಶಿಖರವನ್ನು ಸೇರುವನು. ಆದೇ ಕಾಲವನ್ನು ವಿಷುವತ್ಪುಣ್ಯ ಕಾಲವೆಂದು ಹೇಳುವರು. ಆಗ ಸೂರ್ಯನು ಹಗಲು ರಾತ್ರಿಗಳನ್ನು ಕ್ರಮವಾಗಿ ಹದಿನೈದು ಮುಹೂರ್ತಗಳಿರುವಂತೆ ಮಾಡುವನು.

೭೬-೭೮. ಮೈತ್ರೇಯ ಮುನಿಯೇ! ಸೂರ್ಯನು ಕೃತ್ತಿಕಾ ನಕ್ಷತ್ರದ ಮೊದಲನೆಯ ಪಾದದಲ್ಲಿರುವಾಗ ಚಂದ್ರನು ವಿಶಾಖಾ ನಕ್ಷತ್ರದ ನಾಲ್ಕನೆಯ ಪಾದದಲ್ಲಿದ್ದರೂ, ಸೂರ್ಯನು ವಿಶಾಖಾ ನಕ್ಷತ್ರದ ಮೂರನೆಯ ಪಾದದಲ್ಲಿದ್ದಾಗ, ಚಂದ್ರನು ಕೃತ್ತಿಕಾ ನಕ್ಷತ್ರದ ಪ್ರಥಮ ಪಾದದಲ್ಲಿದ್ದರೂ ಆಗ ಸೂರ್ಯ ಚಂದ್ರರಿಗೆ ಆರು ರಾಶಿಗಳ ಅಂತರವಿರುವುದರಿಂದ ಆ ಕಾಲವನ್ನು ಮಹಾವಿಸುವತ್ಪುಣ್ಯಕಾಲವೆಂದು ಹೇಳುವರು. ಆ ಕಾಲದಲ್ಲಿ ಜನರು ಪ್ರಯತ್ನಪೂರ್ವಕವಾಗಿ ದೇವತೆಗಳನ್ನುದ್ದೇಶಿಸಿ,

ಬ್ರಾಹ್ಮಣೇಭ್ಯಃ ಪಿತೃಭ್ಯಶ್ಚ ಮುಖಮೇತತ್ತು ದಾನಜಂ ।
ದತ್ತದಾನಸ್ತು ವಿಷುವೇ ಕೃತಕೃತ್ಯೋಽಭಿಜಾಯತೇ ॥ ೭೯ ॥

ಅಹೋರಾತ್ರಾರ್ಧಮಾಸೌ ತು ಕಲಾ ಕಾಷ್ಠಾಃ ಕ್ಷಣಾಸ್ತಥಾ ।
ಪೌರ್ಣಮಾಸೀ ತಥಾ ಜ್ಞೇಯಾ ಅಮಾವಾಸ್ಯಾ ತಥೈವ ಚ ।
ಸಿನೀವಾಲೀ ಕುಹೂಶ್ಚೈವ ರಾಕಾ ಚಾನುಮತಿಸ್ತಥಾ ॥ ೮೦ ॥

ತಪಸ್ತಪಸ್ಯೌ ಮಧುಮಾಧವೌ ಚ
ಶುಕ್ರಃ ಶುಚಿಶ್ಚಾಯನಮುತ್ತರಂ ಸ್ಯಾತ್ ।
ನಭೋ ನಭಸ್ಯಾಚ ಇಷ ಸ್ತಥೋರ್ಜಃ
ಸಹಃ ಸಹಸ್ಯಾವಿತಿ ದಕ್ಷಿಣಂ ಸ್ಯಾತ್ ॥ ೮೧ ॥

ಲೋಕಾಲೋಕಸ್ತು ಯಃ ಶೈಲಃ ಪ್ರಾಗುಕ್ತೋ ಭವತೋ ಮಯಾ ।
ಲೋಕಪಾಲಾಸ್ತು ಚತ್ವಾರಸ್ತತ್ರ ತಿಷ್ಠಂತಿ ಸುವ್ರತಾಃ ॥ ೮೨ ॥

ಬ್ರಾಹ್ಮಣರಿಗೆ ದಾನಾದಿಗಳನ್ನು ಮಾಡಬೇಕು. ಈ ಕಾಲವು ಪಿತೃಗಳಿಗೂ, ದೇವತೆಗಳಿಗೂ ದಾನಕ್ಕೋಸ್ಕರವಾಗಿ ತೆರೆದ ಬಾಯಂತಿರುವುದು. ಈ ಮಹಾ ವಿಷುವತ್ಪುಣ್ಯ ಕಾಲದಲ್ಲಿ ದಾನಮಾಡಿದವರು ಕೃತಾರ್ಥರಾಗುವರು.

೮೦-೮೧. ಯಾಗಾದಿಗಳಿಗಾಗಿ ಅಹಸ್ಸು, ರಾತ್ರಿ, ಅರ್ಧಮಾಸ, ಕಲಾ, ಕಾಷ್ಠಾ, ಕ್ಷಣ, ಪೌರ್ಣಮಾ, ಅಮಾವಾಸ್ಯಾ, ಸಿನೀವಾಲೀ, ಕುಹೂ, ರಾಕಾ, ಅನುಮತಿ ಎಂಬ ಕಾಲಭೇದಗಳನ್ನು ತಿಳಿಯಬೇಕು. ಮಾಘ, ಫಾಲ್ಗುಣ, ಚೈತ್ರ, ವೈಶಾಖ, ಜೇಷ್ಠ, ಆಷಾಢ ಮಾಸಗಳು ಉತ್ತರಾಯಣವೆಂದೂ, ಶ್ರಾವಣ, ಭಾದ್ರಪದ ಆಶ್ವಯುಜ, ಕಾರ್ತೀಕ, ಮಾರ್ಗಶಿರ, ಪುಷ್ಯ ಮಾಸಗಳು ದಕ್ಷಿಣಾಯನವೆಂದೂ ತಿಳಿಯಬೇಕು.

೮೨-೮೪. ಹಿಂದೆ ನಾನು ಹೇಳಿದ ಲೋಕಾ ಲೋಕಪರ್ವತದಲ್ಲಿ ಸುಧನ್ವ, ಶಂಖಪಾಲ, ಹಿರಣ್ಯರೋಮ, ಕೇತುಮಾನ್, ಎಂಬ ನಾಲ್ಕು ಜನ ಲೋಕಪಾಲಕರು

ಸುಧನ್ವಾ ಶಂಖಪಾಶ್ಚೈವ ಕರ್ದಮಸ್ಯಾತ್ಮಜೌ ದ್ವಿಜ ।
ಹಿರಣ್ಯರೋಮಾ ಚೈವಾನ್ಯಶ್ಚತುರ್ಥಃ ಕೇತು ಮಾನಪಿ ॥ ೮೩ ॥

ನಿರ್ದ್ವಂದ್ವಾ ನಿರಭೀಮಾನಾ ನಿಸ್ತಂದ್ರಾ ನಿಷ್ಪರಿಗ್ರಹಾಃ ।
ಲೋಕಪಾಲಾಃ ಸ್ಥಿತಾಹ್ಯೇತಾಃ ಲೋಕಾಲೋಕೇ ಚತುರ್ದಿಶಂ ॥ ೮೪ ॥

ಉತ್ತರಂ ಯದಗಸ್ತ್ಯಸ್ಯ ಅಜವೀಥ್ಯಾಶ್ಚ ದಕ್ಷಿಣಂ ।
ಪಿತೃಯಾನಃ ಸ ವೈ ಪಂಥಾ ವೈಶ್ವಾನರಪಥಾದ್ಬಹಿಃ ॥ ೮೫ ॥

ತತ್ರಾಸತೇ ಮಹಾತ್ಮಾನ ಋಷಯೋ ಯೇಗ್ನಿಹೋತ್ರಿಣಃ ।
ಭೂತಾರಂಭಕೃತಂ ಬ್ರಹ್ಮ ಶಂಸಂತೋ ಋತ್ವಿಗುದ್ಯತಾಃ ।
ಪ್ರಾರಭಂತೇ ಲೋಕಕಾಮಾಃ ತೇಷಾಂ ಪಂಥಾಃ ಸದಕ್ಷಿಣಃ ॥ ೮೬ ॥

ನಾಲ್ಕು ದಿಕ್ಕಿನಲ್ಲಿಯೂ ಇರುವರು. ಇವರು ಶೀತೋಷ್ಣ ಸುಖ ದುಃಖಾದಿ ದ್ವಂದ್ವ ರಹಿತರಾಗಿಯೂ ದೇಹಾದಿಗಳಲ್ಲಿ ಅಭಿಮಾನವಿಲ್ಲದವರಾಗಿಯೂ ಆಲಸ್ಯಾದಿ ದೋಷಗಳಿಲ್ಲದವರಾಗಿಯೂ ಇರುವರು.

೮೫. ಅಗಸ್ತ್ಯ ನಕ್ಷತ್ರಕ್ಕೆ ಉತ್ತರ ದಿಕ್ಕಿನಲ್ಲಿ ಅಜವೀಧಿಗೆ ದಕ್ಷಿಣಕ್ಕೆ ಇರುವ ವೈಶ್ವಾನರ ವೀಧಿಯನ್ನು ಬಿಟ್ಟು ವೃಗವೀಧಿಯೆಂಬುದು ಮಾತ್ರ ಪಿತೃಯಾನ ಮಾರ್ಗ ವೆನಿಸುವುದು. (ಸಮಸ್ತ ಗ್ರಹಗಳಿಗೂ ಉತ್ತರ, ಮಧ್ಯಮ, ದಕ್ಷಿಣ ಎಂಬ ಮೂರು ಮಾರ್ಗಗಳು ಕ್ರಮವಾಗಿ ಅಜಭವ, ಐರಾವತ, ವೈಶ್ವಾನರ ಎಂಬ ಹೆಸರಿನಿಂದ ಇರುವುವು. ಅಶ್ವಿನೀ ಮೊದಲಾಗಿ ಮೂರು ಮೂರು ನಕ್ಷತ್ರಗಳಿಂದ ಉತ್ತರ ಮಾರ್ಗದಲ್ಲಿ ನಾಗವೀಧಿ, ಗಜವೀಧಿ ಐರಾವತವೀಧಿ, ಎಂದು ಮೂರು ಭಾಗಗಳು. ಮಘಾದಿಯಾಗಿ ಮೂರು ಮೂರು ನಕ್ಷತ್ರಗಳಿಂದ ಮಧ್ಯ ಮಾರ್ಗದಲ್ಲಿ ಆರ್ಷವೀಧಿ, ಗೋವೀಧಿ, ಜರದ್ಗವೀವೀಧಿ ಎಂದು ಮೂರು ಭಾಗಗಳು. ಮೂಲಾದಿಯಾಗಿ ಮೂರು ಮೂರು ನಕ್ಷತ್ರಗಳಿಂದ ದಕ್ಷಿಣ ಮಾರ್ಗದಲ್ಲಿ ಅಜವೀಧಿ, ಮೃಗವೀಧಿ, ವೈಶ್ವಾನರ ವೀಧಿ ಎಂದು ಮೂರು ಭಾಗಗಳು.)

೮೬–೮೯. ಅಗ್ನಿಹೋತ್ರವನ್ನು ಮಾಡಿದವರೂ ವೇದಾಭ್ಯಾಸವನ್ನು ಮಾಡುತ್ತ ಪ್ರವೃತ್ತಿ ರೂಪವಾದ ಕರ್ಮಗಳನ್ನು ಮಾಡಿ ಸಂತತಿಯನ್ನು ಅಭಿವೃದ್ಧಿ

ಚಲಿತಂ ತೇ ಪುನರ್ಬ್ರಹ್ಮ ಸ್ಥಾಪಯಂತಿ ಯುಗೇ ಯುಗೇ ।
ಸಂತತ್ಯಾ ತಪಸಾ ಚೈವ ಮರ್ಯಾದಾಭಿ ಶ್ರ್ರುತೇನ ಚ ॥ ೮೭ ॥

ಜಾಯಮಾನಾಸ್ತು ಪೂರ್ವೇ ತೇ ಪಶ್ಚಿಮಾನಾಂ ಗೃಹೇಷು ವೈ ।
ಪಶ್ಚಿಮಾಶ್ಚೈವ ಪೂರ್ವೇಷಾಂ ಜಾಯಂತೇ ನಿಧನೇಷ್ವಿಹ ॥ ೮೮ ॥

ಏವಮಾವರ್ತಮಾನಾಸ್ತೇ ತಿಷ್ಠಂತ್ಯಾ ಭೂತಸಂಪ್ಲವಂ ।
ಸವಿತುರ್ದಕ್ಷಿಣಂ ಮಾರ್ಗಂ ಶ್ರಿತಾ ಹ್ಯಾಚಂದ್ರತಾರಕಂ ॥ ೮೯ ॥

ನಾಗವೀಥ್ಯುತ್ತರಂ ಯಚ್ಚ ಸಪ್ತರ್ಷಿಭ್ಯಶ್ಚ ದಕ್ಷಿಣಂ ।
ಉತ್ತರಃ ಸವಿತುಃ ಪಂಥಾ ದೇವಯಾನಸ್ತು ಸ ಸ್ಮೃತಃ ॥ ೯೦ ॥

ತತ್ರ ತೇ ವಶಿನಃ ಸಿದ್ಧಾ ವಿಮಲಾ ಬ್ರಹ್ಮಚಾರಿಣಃ ।
ಸಂತತಿಂ ತೇ ಜುಗುಪ್ಸಂತಿ ತಸ್ಮಾನ್ಮೃತ್ಯುರ್ಜಿತಶ್ಚ ತೈಃ ॥ ೯೧ ॥

ಮಾಡಿದ ಗೃಹಸ್ಥರೂ ಋತ್ವಿಕ್ಕುಗಳಾಗಿ ಲೋಕೋಪಕಾರಕ್ಕಾಗಿ ಯಜ್ಞಕಾರ್ಯದಲ್ಲಾಸಕ್ತರಾದವರೂ ದಕ್ಷಿಣ ಮಾರ್ಗದಲ್ಲಿ ಪಿತೃಯಾನ ಮಾರ್ಗದಲ್ಲಿರುವರು. ಅವರು ಪ್ರತಿ ಯುಗದಲ್ಲಿಯೂ ಬಿಟ್ಟುಹೋದ ಸಂಪ್ರದಾಯಗಳನ್ನೂ, ವೇದವನ್ನೂ ಸ್ಥಾಪಿಸಿ ವಂಶಾಭಿವೃದ್ಧಿಯನ್ನು ಮಾಡಿ ತಪಸ್ಸನ್ನು ಮಾಡುತ್ತ ವರ್ಣಾಶ್ರಮ ಧರ್ಮಗಳನ್ನೂ, ಶಾಸ್ತ್ರಗಳನ್ನೂ ಲೋಕದಲ್ಲಿ ನಡೆಸುವುದಕ್ಕಾಗಿ ಹಿಂದೆ ತಮ್ಮ ವಂಶದಲ್ಲಿಯೇ ಹುಟ್ಟಿದ ಮಕ್ಕಳ ಮನೆಯಲ್ಲಿ ಹುಟ್ಟುವರು. ಹೀಗೆಯೇ ಅವರು ಸೂರ್ಯನ ದಕ್ಷಿಣದ ಧೂಮಾದಿ ಮಾರ್ಗವನ್ನಾಶ್ರಯಿಸಿ ಪುನರ್ಜನ್ಮವನ್ನು ಪಡೆಯುತ್ತ ಪ್ರಳಯ ಪರ್ಯಂತವಾಗಿ ಅಂದರೆ ಚಂದ್ರ ನಕ್ಷತ್ರಗಳಿರುವವರೆಗೂ ಇರುತ್ತಿರುವರು.

೯೦-೯೨. ನಾಗವೀಥಿಗೆ ಉತ್ತರದಲ್ಲಿ ಸಪ್ತರ್ಷಿ ಮಂಡಲಕ್ಕೆ ದಕ್ಷಿಣ ದಿಕ್ಕಿನಲ್ಲಿರುವ ಸೂರ್ಯನ ಮಾರ್ಗವು ದೇವಯಾನ ಮಾರ್ಗವೆನಿಸುವುದು. ಆ ಮಾರ್ಗದಲ್ಲಿ ಪರಿಶುದ್ಧರೂ, ಇಂದ್ರಿಯಗಳನ್ನು ತಮ್ಮಧೀನದಲ್ಲಿಟ್ಟುಕೊಂಡಿರುವ ಬ್ರಹ್ಮಚಾರಿಗಳೂ ಸಂತತಿಯನ್ನು ಅಪೇಕ್ಷಿಸದಿದ್ದುದರಿಂದ ಮೃತ್ಯುವನ್ನು ಜಯಿಸಿದವರಾಗಿ ಊರ್ಧ್ವ

ಅಷ್ಟಾಶೀತಿಸಹಸ್ರಾಣಿ ಯತೀನಾಮೂರ್ಧ್ವರೇತಸಾಂ ।
ಉದಕ್ಪಂಥಾನಮರ್ಯಮ್ಣ ಸ್ಥಿತಾನ್ಯಾಭೂತಸಂಪ್ಲವಾತ್ ॥ ೯೨ ॥

ತೇಽಸಂಪ್ರಯೋಗಾಲ್ಲೋಭಸ್ಯ ಮೈಥುನಸ್ಯ ಚ ವರ್ಜನಾತ್ ।
ಇಚ್ಛಾದ್ವೇಷಾಪ್ರವೃತ್ತ್ಯಾ ಚ ಭೂತಾರಂಭವಿವರ್ಜನಾತ್ ॥ ೯೩ ॥

ಪುನಶ್ಚಾಕಾಮಸಂಯೋಗಾಚ್ಛಬ್ದಾದೇರ್ದೋಷದರ್ಶನಾತ್ ।
ಇತ್ಯೇಭಿಃ ಕಾರಣೈಃ ಶುದ್ಧಾಸ್ತೇಽಮೃತತ್ವಂ ಹಿ ಭೇಜಿರೇ ॥ ೯೪ ॥

ಆಭೂತಸಂಪ್ಲವಂ ಸ್ಥಾನಮಮೃತತ್ವಂ ವಿಭಾವ್ಯತೇ ।
ತ್ರೈಲೋಕ್ಯಸ್ಥಿತಿಕಾಲೋಽಯಮಪುನರ್ಮಾರ ಉಚ್ಯತೇ ॥ ೯೫ ॥

ಬ್ರಹ್ಮಹತ್ಯಾಶ್ವಮೇಧಾಭ್ಯಾಂ ಪಾಪಪುಣ್ಯಕೃತೋ ವಿಧಿಃ ।
ಆಭೂತಸಂಪ್ಲವಾಂತಂ ತತ್ಫಲಮುಕ್ತಂ ತಯೋರ್ದ್ವಿಜ ॥ ೯೬ ॥

ಯಾವನ್ಮಾತ್ರಪ್ರದೇಶೇ ತು ಮೈತ್ರೇಯಾವಸ್ಥಿತೋ ಧ್ರುವಃ ।
ಕ್ಷಯಮಾಯಾತಿ ತಾವತ್ತು ಭೂಮೇರಾಭೂತಸಂಪ್ಲವಾತ್ ॥ ೯೭ ॥

ರೇತಸ್ಸುಗಳಾದ ಎಂಬತ್ತೆಂಟು ಸಾವಿರ ಮುನಿಗಳು ಸೂರ್ಯನ ಉತ್ತರ ಮಾರ್ಗವನ್ನು ಆಶ್ರಯಿಸಿ ಬ್ರಹ್ಮನ ಹಗಲು ಮುಗಿವವರೆಗೆ ಇರುವರು.

೯೩–೯೫. ಅವರು ಅತ್ಯಾಶೆಯಿಲ್ಲದುದರಿಂದಲೂ, ಸ್ತ್ರೀ ಸಂಗವಿಲ್ಲದೆ ಮಕ್ಕಳನ್ನು ಪಡೆಯದೆ ಇಚ್ಛಾದ್ವೇಷಗಳನ್ನು ಬಿಟ್ಟು ಮೌನವನ್ನಾಶ್ರಯಿಸಿ ನಿವೃತ್ತಿಧರ್ಮವನ್ನಾಶ್ರಯಿಸಿದುದರಿಂದ ಶುದ್ಧರಾಗಿ ಮೋಕ್ಷವನ್ನು ಪಡೆವರು. ಇವರಿಗೆ ಪುನರ್ಜನ್ಮವಿಲ್ಲ. ಬ್ರಹ್ಮನ ಹಗಲಿನ ಕೊನೆಯಲ್ಲಿ ಮೂರು ಲೋಕವೂ ಲಯವಾಗುವುದು. ಅಲ್ಲಿಯವರೆಗೂ ಅವರು ಆ ಸ್ಥಳದಲ್ಲಿರುವರು. ಅದು ಕ್ರಮಮುಕ್ತಿಸ್ಥಾನವು.

೯೬–೯೭ ಬ್ರಹ್ಮಹತ್ಯೆಗೂ, ಅಶ್ವಮೇಧ ಯಜ್ಞಕ್ಕೂ ಬರುವ ಪಾಪ ಪುಣ್ಯ ಫಲವನ್ನು ಅವುಗಳನ್ನು ಮಾಡಿದವರು ಬ್ರಹ್ಮನ ಹಗಲು ಕೊನೆಯಾಗುವವರೆಗೂ ಅನುಭವಿಸಬೇಕು. ಮೈತ್ರೇಯನೇ! ಧ್ರುವನು ಯಾವ ಪ್ರದೇಶದಲ್ಲಿರುವನೋ ಆ ಸ್ಥಳವೂ ಮೂರು ಲೋಕಗಳ ಪ್ರಳಯ ಕಾಲದಲ್ಲಿ ನಾಶವಾಗುವುದು.

ಊರ್ಧ್ವೋತ್ತರಮೃಷಿಭ್ಯಸ್ತು ಧ್ರುವೋ ಯತ್ರ ವ್ಯವಸ್ಥಿತಃ ।
ಏತದ್ವಿಷ್ಣುಪದಂ ದಿವ್ಯಂ ತೃತೀಯಂ ವ್ಯೋಮ್ನಿ ಭಾಸ್ವರಂ ॥ ೯೮ ॥

ನಿರ್ಧೂತದೋಷ ಪಂಕಾನಾಂ ಯತೀನಾಂ ಸಂಯತಾತ್ಮನಾಂ ।
ಸ್ಥಾನಂ ತತ್ಪರಮಂ ವಿಪ್ರ ಪಾಪಪುಣ್ಯಪರಿಕ್ಷಯೇ ॥ ೯೯ ॥

ಅಪುಣ್ಯಪುಣ್ಯೋಪರಮೇ ಕ್ಷೀಣಾಶೇಷಾಪ್ತಿ ಹೇತವಃ ।
ಯತ್ರ ಗತ್ವಾ ನ ಶೋಚಂತಿ ತದ್ವಿಷ್ಣೋಃ ಪರಮಂ ಪದಂ ॥ ೧೦೦ ॥

ಧರ್ಮಧ್ರುವಾದ್ಯಾಸ್ತಿಷ್ಠಂತಿ ಯತ್ರ ತೇ ಲೋಕಸಾಕ್ಷಿಣಃ ।
ತತ್ಸಾರ್ಷ್ಟ್ಯೋತ್ಪನ್ನಯೋಗೇದ್ಧಾಸ್ತದ್ವಿಷ್ಣೋಃ ಪರಮಂ ಪದಂ ॥ ೧೦೧ ॥

ಯತ್ರೋತಮೇತತ್ಪ್ರೋತಂ ಚ ಯದ್ಭೂತಂ ಸಚರಾಚರಂ ।
ಭಾವ್ಯಂ ಚ ವಿಶ್ವಂ ಮೈತ್ರೇಯ ತದ್ವಿಷ್ಣೋಃ ಪರಮಂ ಪದಂ ॥ ೧೦೨ ॥

೯೮-೧೦೦. ಸಪ್ತರ್ಷಿ ಮಂಡಲದಿಂದ ಮೇಲು ಭಾಗದಲ್ಲಿ ಉತ್ತರ ದಿಕ್ಕಿಗೆ ಧ್ರುವನಿರುವ ವಿಷ್ಣುಪದವೆಂಬ ಸ್ಥಾನಕ್ಕಿಂತ ಶ್ರೇಷ್ಠವಾದ ಮೂರನೆಯ ಸ್ಥಾನವು ಆಕಾಶದಲ್ಲಿ ಪ್ರಕಾಶಿಸುತ್ತಿರುವುದು. ಅದು ಪುಣ್ಯ ಪಾಪಗಳ ನಾಶದಿಂದ ಎಲ್ಲ ದೋಷಗಳನ್ನೂ ಕಳೆದುಕೊಂಡ ಏಕಾಗ್ರಚಿತ್ತರಾದ ಯತಿಗಳು ವಾಸಿಸುವ ಶ್ರೇಷ್ಠವಾದ ಸ್ಥಳವಾಗಿರುವುದು. ಅವರು ಪುಣ್ಯ ಪಾಪಗಳ ನಾಶದಿಂದ ಪುನರ್ಜನ್ಮವಿಲ್ಲದವರಾಗಿ ಅಲ್ಲಿ ಆನಂದದಿಂದಿರುವರು. ಅದೇ ವಿಷ್ಣುವಿನ ಪರಮ ಪದವು.

೧೦೧-೧೦೨. ಧರ್ಮ, ಧ್ರುವ ಮುಂತಾದವರು ವಿಷ್ಣುವಿಗೆ ಸಮಾನವಾದ ಐಶ್ವರ್ಯಾದಿಗಳನ್ನು ಪಡೆದು ಯೋಗಾಂಗವಾದ ಸಮಾಧಿಯಿಂದ ಪ್ರಕಾಶವುಳ್ಳವರಾಗಿ ಯಾವ ಸ್ಥಳದಲ್ಲಿರುವರೋ ಅದೇ ವಿಷ್ಣುವಿನ ಪರಮಪದವು. ಯಾವ ಪ್ರದೇಶದಲ್ಲಿ ಸಮಸ್ತ ಚರಾಚರ ಪ್ರಪಂಚವು ಓತಪ್ರೋತವಾಗಿರುವುದೋ ಅದೇ ವಿಷ್ಣುವಿನ ಪರಮಪದವು.

ದಿವೀವಚಕ್ಷುರಾತತಂ ವಿತತಂ ಯನ್ಮಹಾತ್ಮನಾಂ ।
ವಿವೇಕಜ್ಞಾನದೃಷ್ಟಂ ಚ ತದ್ವಿಷ್ಣೋಃ ಪರಮಂ ಪದಂ　　॥ ೧೦೩ ॥

ಯಸ್ಮಿನ್ ಪ್ರತಿಷ್ಠಿತೋ ಭಾಸ್ವಾನ್ ಮೇಢೀಭೂತಃ ಸ್ವಯಂ ಧ್ರುವಃ ।
ಧ್ರುವೇ ಚ ಸರ್ವಜ್ಯೋತೀಂಷಿ ಜ್ಯೋತಿಸ್ಸಂಭೋಮುಚೋ ದ್ವಿಜ ॥೧೦೪॥

ಮೇಘೇಷು ಸಂತತಾ ವೃಷ್ಟಿಃ ವೃಷ್ಟೇಃ ಸೃಷ್ಟೇಶ್ಚ ಪೋಷಣಂ ।
ಆಪ್ಯಾಯನಂ ಚ ಸರ್ವೇಷಾಂ ದೇವಾದೀನಾಂ ಮಹಾಮುನೇ　　॥ ೧೦೫ ॥

ತತಶ್ಚಾಜ್ಯಾಹುತಿದ್ವಾರಾ ಪೋಷಿತಾಸ್ತೆ ಹವಿರ್ಭುಜಃ ।
ಸೃಷ್ಟೇಃ ಕಾರಣತಾಂ ಯಾಂತಿ ಭೂತಾನಾಂ ಸ್ಥಿತಯೇ ಪುನಃ　　॥ ೧೦೬ ॥

ಏವಮೇತತ್ಪದಂ ವಿಷ್ಣೋಃ ತೃತೀಯಮಮಲಾತ್ಮಕಂ ।
ಆಧಾರಭೂತಂ ಲೋಕಾನಾಂ ತ್ರಯಾಣಾಂ ವೃದ್ಧಿಕಾರಣಂ　　॥ ೧೦೭ ॥

---

೧೦೩. ಅಂತರಿಕ್ಷದಲ್ಲಿ ಸಮಸ್ತವನ್ನೂ ಪ್ರಕಾಶಪಡಿಸುವ ಸೂರ್ಯರೂಪವಾದ ಕಣ್ಣಿನಂತೆ ವಿಸ್ತಾರವಾದ ಸಮಸ್ತವನ್ನೂ ಪ್ರಕಾಶಪಡಿಸುವುದರಲ್ಲಿ ಪ್ರಸಿದ್ಧವಾದ, ವಿವೇಕರೂಪವಾದ ಮಹಾತ್ಮರ ಜ್ಞಾನದಿಂದ ತಿಳಿದ, ಪ್ರಪಂಚಕ್ಕೆ ವಿಲಕ್ಷಣವಾದ ಅಳತೆಗೆ ಸಿಕ್ಕದುದೆಂಬದಾಗಿ ತಿಳಿದ ಜ್ಞಾನವೇ ಆ ವಿಷ್ಣುವಿನ ಪರಮಪದವು. ಇದು "ತದ್ವಿಷ್ಣೋಃಪರಮಂ ಪದಂ" ಎಂಬ ಎರಡು ಮಂತ್ರಗಳ ಅರ್ಥಾನುವಾದವು.

೧೦೪–೧೦೭. ಸೂರ್ಯನು ಯಾವ ಜ್ಯೋತಿಶ್ಚಕ್ರದಲ್ಲಿರುವನೋ ಆ ಜ್ಯೋತಿಶ್ಚಕ್ರಕ್ಕೆ ಧ್ರುವಮಂಡಲವು ಮೇಟಿಯ ಕಂಬದಂತಿರುವುದು. ಆದುದರಿಂದ ಧ್ರುವ ಮಂಡಲದಲ್ಲಿ ಸಮಸ್ತ ಗ್ರಹಗಳ ತೇಜಸ್ಸೂ ಇರುವುದು. ಆ ತೇಜಸ್ಸುಗಳಲ್ಲಿ ಮೇಘಗಳಿರುವುವು. ಮೇಘಗಳಿಂದ ಮಳೆಯಾಗುವುದು. ಮಳೆಯಿಂದ ಸೃಷ್ಟಿ ಮಾಡಿದ ಪ್ರಪಂಚದ ಪೋಷಣೆಯೂ ದೇವತೆಗಳ ತೃಪ್ತಿಯೂ ಉಂಟಾಗುವುದು. ತುಪ್ಪವನ್ನು ಹೋಮಮಾಡುವುದರಿಂದ ತೃಪ್ತಿಗೊಂಡ ದೇವತೆಗಳು ಸೃಷ್ಟಿಗೂ, ಪ್ರಾಣಿಗಳ ರಕ್ಷಣೆಗೂ ಕಾರಣರಾಗಿರುವರು. ಈ ರೀತಿಯಲ್ಲಿ ವಿಷ್ಣುವಿನ ಮೂರನೆಯ ಸ್ಥಾನವು ಪರಿಶುದ್ಧವಾದುದಾಗಿ ಮೂರು ಲೋಕಕ್ಕೂ ಆಶ್ರಯವಾದುದಾಗಿಯೂ ಅಭಿವೃದ್ಧಿಗೆ ಕಾರಣವಾದುದಾಗಿಯೂ ಇರುವುದು.

ತತಃ ಪ್ರಭವತಿ ಬ್ರಹ್ಮನ್ ಸರ್ವಪಾಪಹರಾ ಸರಿತ್ ।
ಗಂಗಾ ದೇವಾಂಗನಾಂಗಾನಾಮನುಲೇಪನಪಿಂಜರಾ ॥ ೧೦೮ ॥

ವಾಮಪಾದಾಂಬುಜಾಂಗುಷ್ಠ ನಖಸ್ರೋತೋ ವಿನಿರ್ಗತಾಂ ।
ವಿಷ್ಣೋಃ ಬಿಭರ್ತಿ ಯಾಂ ಭಕ್ತ್ಯಾ ಶಿರಸಾಹರ್ನಿಶಂ ಧ್ರುವಃ ॥ ೧೦೯ ॥

ತತಃ ಸಪ್ತರ್ಷಯೋ ಯಸ್ಯಾಃ ಪ್ರಾಣಾಯಾಮಪರಾಯಣಾಃ ।
ತಿಷ್ಠಂತಿ ವೀಚಿಮಾಲಾಭಿರೂಹ್ಯಮಾನಜಟಾ ಜಲೇ ॥ ೧೧೦ ॥

ವಾರ್ಯೋಘೈಃ ಸಂತತೈರ್ಯಸ್ಯಾಃ ಪ್ಲಾವಿತಂ ಶಶಿಮಂಡಲಂ ।
ಭೂಯೋಧಿಕತಮಾಂ ಕಾಂತಿಂ ವಹತ್ಯೇತದಹಃ ಕ್ಷಯೇ ॥ ೧೧೧ ॥

ಮೇರುಪೃಷ್ಠೇ ಪತತ್ಯೋಚ್ಚೈಃ ನಿಷ್ಕ್ರಾಂತಾ ಶಶಿಮಂಡಲಾತ್ ।
ಜಗತಃ ಪಾವನಾರ್ಥಾಯ ಯಾ ಪ್ರಯಾತಿ ಚತುರ್ದಿಶಂ ॥ ೧೧೨ ॥

---

೧೦೮. ಬ್ರಹ್ಮಜ್ಞಾನಿಯಾದ ಮೈತ್ರೇಯನೇ! ಆ ವಿಷ್ಣುಪದದಲ್ಲಿ ಅಂದರೆ ತ್ರಿವಿಕ್ರಮಾವತಾರ ಮಾಡಿದ ವಿಷ್ಣುವಿನ ಪಾದದಿಂದ ಒಡೆದ ಬ್ರಹ್ಮಾಂಡದ ರಂಧ್ರದಿಂದ ಹುಟ್ಟಿದ ಸಮಸ್ತ ಪಾಪಗಳನ್ನೂ ನಾಶಮಾಡುವ ಗಂಗೆಯು ದೇವಸ್ತ್ರೀಯರು ತನ್ನಲ್ಲಿ ಜಲಕೇಳಿ ಮಾಡಿದಾಗ ಅವರ ಮೈಗೆ ಬಳಿದು ಕೊಂಡಿದ್ದ ಕೇಸರಿಯ ಗಂಧವು ನೀರಿಗೆ ಸೇರಿದುದರಿಂದ ಪಿಂಗಳವರ್ಣವಾದ ನೀರಿನಿಂದ ಕೂಡಿ ಹರಿದು ಬರುತ್ತಿರುವುದು.

೧೦೯-೧೧೨. ವಿಷ್ಣುವಿನ ಎಡಗಾಲಿನ ಹೆಬ್ಬೆರಳ ಉಗುರಿನ ತುದಿಯಿಂದ ಹೊರಟ ಆ ಗಂಗಾಪ್ರವಾಹವನ್ನು ಧ್ರುವನು ಭಕ್ತಿಯಿಂದ ಯಾವಾಗಲೂ ತನ್ನ ತಲೆಯಲ್ಲಿ ಧರಿಸಿರುವನು. ಆಮೇಲೆ ಸಪ್ತರ್ಷಿಗಳು ಆ ಗಂಗೆಯ ನೀರಿನ ಅಲೆಯಲ್ಲಿ ತಮ್ಮ ಜಟೆಗಳನ್ನು ಇತ್ತತ್ತ ಚಲಿಸುತ್ತ ಪ್ರಾಣಾಯಾಮದಲ್ಲಾಸಕ್ತರಾಗಿ ಅಘಮರ್ಷಣ ಮಂತ್ರವನ್ನು ಜಪಮಾಡುತ್ತಿರುವರು. ಸಂತತವಾದ ಆ ನೀರಿನ ಪ್ರವಾಹದಿಂದ ಚಂದ್ರಮಂಡಲವು ನೆನೆದು ರಾತ್ರಿಯಲ್ಲಿ ಹೆಚ್ಚು ಕಾಂತಿಯನ್ನು ಹೊಂದಿರುವುದು ಆ ಪ್ರವಾಹವು ಚಂದ್ರಮಂಡಲದಿಂದ ಮೇರುಪರ್ವತದ ಮೇಲೆಬಿದ್ದು ಈ ಭೂಲೋಕವನ್ನು ಶುದ್ಧಗೊಳಿಸಲು ನಾಲ್ಕು ದಿಕ್ಕಿಗೂ ಹರಿಯುತ್ತಿರುವುದು.

ಸೀತಾ ಚಾಲಕನಂದಾ ಚ ಚಕ್ಷುರ್ಭದ್ರಾ ಚ ಸಂಸ್ಥಿತಾ ।
ಏಕೈವ ಯಾ ಚತುರ್ಭೇದಾ ದಿಗ್ಭೇದ ಗತಿಲಕ್ಷಣಾ ॥ ೧೧೩ ॥

ಭೇದಂ ಚಾಲಕನಂದಾಖ್ಯಂ ಯಸ್ಯಾಃ ಶರ್ವೋಽಪಿ ದಕ್ಷಿಣಂ ।
ದಧಾರ ಶಿರಸಾ ಪ್ರೀತ್ಯಾ ವರ್ಷಾಣಾಮಧಿಕಂ ಶತಂ ॥ ೧೧೪ ॥

ಶಂಭೋರ್ಜಟಾಕಲಾಪಾಚ್ಚ ವಿನಿಷ್ಕ್ರಾಂತಾಸ್ಥಿಶರ್ಕರಾಃ ।
ಪ್ಲಾವಯಿತ್ವಾ ದಿವಂ ನಿನ್ಯೇ ಯಾ ಪಾಪಾನ್ಸಗರಾತ್ಮಜಾನ್ ॥ ೧೧೫ ॥

ಸ್ನಾತಸ್ಯ ಸಲಿಲೇ ಯಸ್ಯಾಃ ಸದ್ಯಃ ಪಾಪಂ ಪ್ರಣಶ್ಯತಿ ।
ಅಪೂರ್ವಪುಣ್ಯಪ್ರಾಪ್ತಿಶ್ಚ ಸದ್ಯೋ ಮೈತ್ರೇಯ ಜಾಯತೇ ॥ ೧೧೬ ॥

ದತ್ತಾಃ ಪಿತೃಭ್ಯೋ ಯತ್ರಾಪಃ ತನಯೈಃ ಶ್ರದ್ಧಯಾನ್ವಿತೈಃ ।
ಸಮಾಶತಂ ಪ್ರಯಚ್ಛಂತಿ ತೃಪ್ತಿಂ ಮೈತ್ರೇಯ ದುರ್ಲಭಾಂ ॥ ೧೧೭ ॥

೧೧೩-೧೧೫. ಒಂದೇ ಆದ ಗಂಗೆಯು ಪೂರ್ವಾದಿ ನಾಲ್ಕುದಿಕ್ಕಿಗೂ ಹರಿಯುವಾಗ ಕ್ರಮವಾಗಿ ಸೀತಾ, ಅಲಕನಂದಾ, ಚಕ್ಷು, ಭದ್ರಾ ಎಂಬ ಹೆಸರನ್ನು ಪಡೆಯುವುದು. ದಕ್ಷಿಣದಿಕ್ಕಿಗೆ ಹರಿಯುವ ಅಲಕನಂದೆಯನ್ನು ಶಿವನು ಪ್ರೀತಿಯಿಂದ ಅನೇಕ ವರ್ಷಗಳವರೆಗೆ ತನ್ನ ತಲೆಯಲ್ಲಿ ಧರಿಸಿದನು. ಶಿವನ ಜಟಾಸಮೂಹದಿಂದ ಹೊರಟ ಗಂಗೆಯು ಪಾಪಿಗಳಾದ ಸಗರ ಪುತ್ರರ ಮೂಳೆಯ ಚೂರುಗಳನ್ನು ನೆನೆಸಿ ಅವರನ್ನು ಸ್ವರ್ಗಕ್ಕೆ ಕಳುಹಿಸಿದಳು.

೧೧೬-೧೧೮. ಮೈತ್ರೇಯನೇ! ಆ ಗಂಗೆಯ ನೀರಿನಲ್ಲಿ ಸ್ನಾನಮಾಡಿದವರಿಗೆ ಆ ಕ್ಷಣದಲ್ಲಿಯೇ ಪಾಪಗಳೆಲ್ಲ ನಾಶವಾಗಿ ಅಪೂರ್ವವಾದ ಪುಣ್ಯವು ಪ್ರಾಪ್ತವಾಗುವುದು. ಜನರು ಭಕ್ತಿಯಿಂದ ಗಂಗೆಯ ನೀರಿನಲ್ಲಿ ಪಿತೃಗಳಿಗೆ ತರ್ಪಣವನ್ನು ಮಾಡಿದರೆ ಆ ಪಿತೃಗಳಿಗೆ ನೂರು ವರ್ಷಗಳವರೆಗೂ ತೃಪ್ತಿಯನ್ನುಂಟುಮಾಡುವುದು. ಬ್ರಾಹ್ಮಣರೂ, ರಾಜರೂ ಗಂಗೆಯ ದಡದಲ್ಲಿ ಮಹಾ ಯಜ್ಞಗಳಿಂದ ಯಜ್ಞಪುರುಷ

ಯಸ್ಯಾಮಿಷ್ಟ್ವಾ ಮಹಾಯಜ್ಞೈರ್ಯಜ್ಞೇಶಂ ಪುರುಷೋತ್ತಮಂ ।
ದ್ವಿಜ ಭೂಪಾಃ ಪರಾ ವೃದ್ಧಿಮವಾಪುರ್ದಿವಿ ಚೇಹ ಚ ॥ ೧೧೮ ॥

ಸ್ನಾನಾದ್ವಿಧೂತಪಾಪಾಶ್ಚ ಯಜ್ಜಲೇ ಯತಯಸ್ತಥಾ ।
ಕೇಶವಾಸಕ್ತಮನಸಃ ಪ್ರಾಪ್ತಾನಿರ್ವಾಣಮುತ್ತಮಂ ॥ ೧೧೯ ॥

ಶ್ರುತಾಭಿಲಷಿತಾ ದೃಷ್ಟಾ ಸ್ಪೃಷ್ಟಾ ಪೀತಾವಗಾಹಿತಾ ।
ಯಾ ಪಾವಯತಿ ಭೂತಾನಿ ಕೀರ್ತಿತಾ ಚ ದಿನೇ ದಿನೇ ॥ ೧೨೦ ॥

ಗಂಗಾ ಗಂಗೇತಿ ಯೈರ್ನಾಮ ಯೋಜನಾನಾಂ ಶತೇಷ್ವಪಿ ।
ಸ್ಥಿತೈರುಚ್ಚಾರಿತಂ ಹಂತಿ ಪಾಪಂ ಜನ್ಮತ್ರಯಾರ್ಜಿತಂ ॥ ೧೨೧ ॥

ನಾದ ವಿಷ್ಣುವನ್ನು ಆರಾಧಿಸಿ ಇಹಪರಗಳಲ್ಲಿ ವಿಶೇಷವಾದ ಕೀರ್ತಿಯನ್ನೂ, ಸುಖವನ್ನೂ ಪಡೆದರು.

೧೧೯-೧೨೦. ಆ ಗಂಗೆಯ ನೀರಿನಲ್ಲಿ ಯತಿಗಳು ಸ್ನಾನಮಾಡಿ ಪಾಪಗಳನ್ನು ಕಳೆದುಕೊಂಡು ವಿಷ್ಣುವಿನಲ್ಲಿಯೇ ಮನಸ್ಸನ್ನಿಟ್ಟವರಾಗಿ ಏಕಾಗ್ರಚಿತ್ತದಿಂದ ಅವನನ್ನು ಧ್ಯಾನಿಸುತ್ತ ಶ್ರೇಷ್ಠವಾದ ಮುಕ್ತಿಯನ್ನು ಪಡೆದರು. ಆ ಗಂಗೆಯು ಪ್ರತಿದಿನವೂ ತನ್ನ ಹೆಸರನ್ನು ಕೇಳಿದವರು, ತನ್ನನ್ನು ಅಪೇಕ್ಷಿಸಿದವರು, ಮುಟ್ಟಿದವರು, ನೋಡಿದವರು, ಕುಡಿದವರು, ಸ್ನಾನಮಾಡಿದವರು ಇವರುಗಳ ಪಾಪವನ್ನು ನಾಶಮಾಡಿ ಅವರನ್ನು ಪರಿಶುದ್ಧವಾಗಿ ಮಾಡುವುದು.

೧೨೧. ನೂರು ಯೋಜನ ದೂರದಲ್ಲಿದ್ದರೂ ಗಂಗೆಯು ಗಂಗಾ! ಗಂಗಾ !! ಎಂದು ತನ್ನ ನಾಮಸ್ಮರಣೆ ಮಾಡಿದವರ ಮೂರು ಜನ್ಮಗಳ ಪಾಪಗಳನ್ನೂ ನಾಶಮಾಡುವುದು.

ಯತಃ ಸಾ ಪಾವನಾಯಾಲಂ ತ್ರಯಾಣಾಂ ಜಗತಾಮಪಿ ।
ಸಮುದ್ಭೂತಾ ಪರಂ ತತ್ತು ತೃತೀಯಂ ಭಗವತ್ಪದಂ ॥ ೧೨೨ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಅಷ್ಟಮೋಽಧ್ಯಾಯಃ

---

೧೨೨. ಮೂರು ಲೋಕಗಳನ್ನೂ ಪರಿಶುದ್ಧಮಾಡುವ ಗಂಗೆಯು ಎಲ್ಲಿ ಹುಟ್ಟಿತೋ ಅದೇ ಮೂರನೆಯದಾದ ಶ್ರೇಷ್ಠವಾದ ವಿಷ್ಣುವಿನ ಪರಮಪದವೆಂಬ ಸ್ಥಾನವು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ
ಎಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ನವಮೋಽಧ್ಯಾಯಃ

॥ ಪರಾಶರ ಉವಾಚ ॥

ತಾರಾಮಯಂ ಭಗವತಃ ಶಿಂಶುಮಾರಾಕೃತಿ ಪ್ರಭೋಃ ।
ದಿವಿ ರೂಪಂ ಹರೇರ್ಯತ್ತು ತಸ್ಯ ಪುಚ್ಛೇ ಸ್ಥಿತೋ ಧ್ರುವಃ ॥ ೧ ॥

ಸೈಷ ಭ್ರಮನ್ ಭ್ರಾಮಯತಿ ಚಂದ್ರಾದಿತ್ಯಾದಿಕಾನ್ ಗ್ರಹಾನ್ ।
ಭ್ರಮಂತಮನು ತಂ ಯಾಂತಿ ನಕ್ಷತ್ರಾಣಿ ಚ ಚಕ್ರವತ್ ॥ ೨ ॥

ಸೂರ್ಯಾಚಂದ್ರಮಸೌ ತಾರಾ ನಕ್ಷತ್ರಾಣಿ ಗ್ರಹೈಸ್ಸಹ ।
ವಾತಾನೀಕಮಯೈರ್ಬಂಧೈಃ ಧ್ರುವೇ ಬದ್ಧಾನಿ ತಾನಿ ವೈ ॥ ೩ ॥

ಒಂಭತ್ತನೆಯ ಅಧ್ಯಾಯವು

೧–೪. ನಕ್ಷತ್ರಗಳ ಗುಂಪು ಉಡು ಅಥವಾ ಹೆಂಟೆಗೊದ್ದದ ಆಕಾರವಾಗಿ ಬಾಲವು ಪ್ರದಕ್ಷಿಣಾಕಾರವಾಗಿ ಸುತ್ತಿಕೊಂಡು ಅದರ ತುದಿಯು ಎದ್ದು ನಿಂತಿರಲು ಆ ತುದಿಯಲ್ಲಿ ಧ್ರುವ ನಕ್ಷತ್ರವು ಇರುವುದು. ಆ ಶಿಂಶುಮಾರಾಕೃತಿಯ ನಕ್ಷತ್ರಗಳ ಗುಂಪು ಭಗವಂತನಾದ ವಿಷ್ಣುವಿನ ರೂಪವಾಗಿರುವುದು. ಸೂರ್ಯಚಂದ್ರರೂ, ಅಶ್ವಿನ್ಯಾದಿ ತಾರೆಗಳೂ, ನಕ್ಷತ್ರಗಳೂ, ಗ್ರಹಗಳೂ, ವಾಯುರೂಪವಾದ ಹಗ್ಗಗಳಿಂದ ಧ್ರುವಕ್ಕೆ ಸಂಭಂಧಿಸಿರುವುವು. ಧ್ರುವನಕ್ಷತ್ರವು ಶಿಂಶುಮಾರ ಚಕ್ರವಲ್ಲಿದ್ದುಕೊಂಡು

ಶಿಂಶುಮಾರಾಕೃತಿ ಪ್ರೋಕ್ತಂ ಯದ್ರೂಪಂ ಜ್ಯೋತಿಷಾಂ ದಿವಿ ।
ನಾರಾಯಣೋಽಯನಂ ಧಾಮ್ನಾಂ ತಸ್ಯಾಧಾರಃ ಸ್ವಯಂ ಹೃದಿ ॥ ೪ ॥

ಉತ್ತಾನಪಾದಪುತ್ರಸ್ತು ತಮಾರಾಧ್ಯ ಜಗತ್ಪತಿಂ ।
ಸತಾರಾ ಶಿಂಶುಮಾರಸ್ಯ ಧ್ರುವಃ ಪುಚ್ಛೇ ವ್ಯವಸ್ಥಿತಃ ॥ ೫ ॥

ಆಧಾರಃ ಶಿಂಶುಮಾರಸ್ಯ ಸರ್ವಾಧ್ಯಕ್ಷೋ ಜನಾರ್ದನಃ ।
ಧ್ರುವಸ್ಯ ಶಿಂಶುಮಾರಶ್ಚ ಧ್ರುವೇ ಭಾನುರ್ವ್ಯವಸ್ಥಿತಃ ॥ ೬ ॥

ತದಾಧಾರಂ ಜಗಚ್ಚೇದಂ ಸದೇವಾಸುರಮಾನುಷಂ ।
ಯೇನ ವಿಪ್ರ ವಿಧಾನೇನ ತನ್ಮಮೈಕಮನಾಃ ಶೃಣು ॥ ೭ ॥

ವಿವಸ್ವಾನಷ್ಟಭಿರ್ಮಾಸೈಃ ಆದಾಯಾಪೋ ರಸಾನ್ವಿತಾಃ ।
ವರ್ಷತ್ಯೇವ ತತಶ್ಚಾನ್ನಮನ್ನಾದಪ್ಯಖಿಲಂ ಜಗತ್ ॥ ೮ ॥

ತಾನೂ ತಿರುಗುತ್ತ ಇತರ ಗ್ರಹಗಳನ್ನೂ ತಿರುಗಿಸುತ್ತಿರುವುದು. ಆಕಾಶದಲ್ಲಿ ಜ್ಯೋತೀ ರೂಪವಾದ ನಕ್ಷತ್ರಗಳಿಗೂ ಪ್ರಕಾಶ ರೂಪವಾದ ಸೂರ್ಯಚಂದ್ರರಿಗೂ ಶಿಂಶುಮಾರ ರೂಪದ ನಡುವೆ ಇರುವ ನಾರಾಯಣನೇ ಆಶ್ರಯನಾಗಿರುವನು.

೫-೭. ಉತ್ತಾನಪಾದರಾಯನ ಮಗನಾದ ಧ್ರುವನು ವಿಷ್ಣುವನ್ನು ಪೂಜಿಸಿ ತಾರಾಮಯವಾದ ಶಿಂಶುಮಾರ ಚಕ್ರದ ಬಾಲದ ತುದಿಯಲ್ಲಿ ನಕ್ಷತ್ರ ರೂಪವಾಗಿರುವನು. ಆ ಶಿಂಶುಮಾರ ಚಕ್ರಕ್ಕೆ ಸರ್ವಾಧ್ಯಕ್ಷನಾದ ನಾರಾಯಣನೇ ಆಶ್ರಯನು. ಶಿಂಶುಮಾರವು ಧ್ರುವನಿಗೂ, ಧ್ರುವನು ಸೂರ್ಯನಿಗೂ, ಸೂರ್ಯನು ದೇವಾಸುರ ಮನುಷ್ಯರಿಂದ ಕೂಡಿದ ಜಗತ್ತಿಗೂ ಆಶ್ರಯರಾಗಿರುವರು.

೮. ಮೈತ್ರೇಯನೇ! ನಾನು ಹೇಳುವುದನ್ನು ಏಕಾಗ್ರಚಿತ್ತದಿಂದ ಕೇಳು. ಸೂರ್ಯನು ಎಂಟು ತಿಂಗಳವರೆಗೆ ಕಿರಣಗಳಿಂದ ನೀರನ್ನು ಗ್ರಹಿಸಿ ಮಳೆಯನ್ನು ಸುರಿಸುವನು. ಅದರಿಂದ ಅನ್ನವೂ, ಅನ್ನದಿಂದ ಸಮಸ್ತ ಜಗತ್ತೂ ವೃದ್ಧಿಯಾಗುವುದು.

ವಿವಸ್ವಾನಂಶುಭಿಃ ತೀಕ್ಷ್ಣೈರಾದಾಯ ಜಗತೋ ಜಲಂ ।
ಸೋಮಂ ಪುಷ್ಣಾತ್ಯಥೇಂದುಶ್ಚ ವಾಯುನಾಡೀಮಯೈರ್ದಿವಿ ॥ ೯ ॥

ನಾಲೈರ್ವಿಕ್ಷಿಪತೇಽಭ್ರೇಷು ಧೂಮಾಗ್ನ್ಯನಿಲಮೂರ್ತಿಷು ।
ನ ಭ್ರಶ್ಯಂತಿ ಯತಸ್ತೇಭ್ಯೋ ಜಲಾನ್ಯಭ್ರಾಣಿ ತಾನ್ಯತಃ ॥ ೧೦ ॥

ಅಭ್ರಸ್ಥಾಃ ಪ್ರಪತಂತ್ಯಾಪೋ ವಾಯುನಾ ಸಮುದೀರಿತಾಃ ।
ಸಂಸ್ಕಾರಂ ಕಾಲಜನಿತಂ ಮೈತ್ರೇಯಾಸಾದ್ಯ ನಿರ್ಮಲಾಃ ॥ ೧೧ ॥

ಸರಿತ್ಸಮುದ್ರಭೌಮಾಸ್ತು ತಥಾಪಃ ಪ್ರಾಣಿಸಂಭವಾಃ ।
ಚತುಃ ಪ್ರಕಾರಾ ಭಗವಾನ್ ಆದತ್ತೇ ಸವಿತಾ ಮುನೇ ॥ ೧೨ ॥

ಆಕಾಶಗಂಗಾಸಲಿಲಂ ತಥಾದಾಯ ಗಭಸ್ತಿಮಾನ್ ।
ಅನಭ್ರಗತಮೇವೋರ್ವ್ಯಾಂ ಸದ್ಯಃ ಕ್ಷಿಪತಿ ರಶ್ಮಿಭಿಃ ॥ ೧೩ ॥

ತಸ್ಯ ಸಂಸ್ಪರ್ಶನಿರ್ಧೂತ ಪಾಪಪಂಕೋ ದ್ವಿಜೋತ್ತಮ ।
ನ ಯಾತಿ ನರಕಂ ಮರ್ತ್ಯೋ ದಿವ್ಯಂ ಸ್ನಾನಂ ಹಿ ತತ್ಸ್ಮೃತಂ ॥ ೧೪ ॥

೯-೧೧. ಸೂರ್ಯನು ತೀಕ್ಷ್ಣವಾದ ತನ್ನ ಕಿರಣಗಳಿಂದ ಜಗತ್ತಿನ ನೀರನ್ನು ತೆಗೆದುಕೊಂಡು ಚಂದ್ರನಿಗೆಕೊಡುವನು, ಚಂದ್ರನು ವಾಯು ನಾಡೀರೂಪವಾದ ನಾಳಗಳಿಂದ ಹೊಗೆ, ಬೆಂಕಿ, ಗಾಳಿಗಳ ರೂಪವಾದ ಮೇಘಗಳಿಗೆ ಆ ನೀರನ್ನು ಕೊಡುವನು. ಆ ನೀರು ಮೇಘಗಳಿಂದ ಬೀಳುವುದಿಲ್ಲ ಆದುದರಿಂದ ಮೇಘಗಳಿಗೆ ಅಭ್ರವೆಂದು ಹೆಸರು ಬಂದಿರುವುದು. ಮೇಘಗಳಲ್ಲಿರುವ ನೀರು ಕಾಲದಿಂದುಂಟಾದ ಸಂಸ್ಕಾರದಿಂದ ಪರಿಶುದ್ಧವಾದುದಾಗಿ ಗಾಳಿಯಿಂದ ತಳ್ಳಿಸಿಕೊಂಡು ಮಳೆಯಾಗಿ ಬೀಳುವುದು.

೧೨-೧೪. ಸೂರ್ಯನು ನದಿ, ಸಮುದ್ರ, ಭೂಮಿ, ಪ್ರಾಣಿಗಳ ಶರೀರ ಇವುಗಳಲ್ಲಿರುವ ನಾಲ್ಕು ಬಗೆಯ ನೀರುಗಳನ್ನು ಕಿರಣಗಳಿಂದ ಗ್ರಹಿಸುವನು. ಹಾಗೆಯೇ ಸೂರ್ಯನು ಆಕಾಶಗಂಗೆಯ ನೀರನ್ನು ಕಿರಣಗಳಿಂದ ತೆಗೆದುಕೊಂಡು ಮೋಡವಿಲ್ಲದೆಯೇ ಭೂಮಿಯಮೇಲೆ ಆ ನೀರನ್ನು ಚೆಲ್ಲುವನು. ಆ ನೀರಿನ ಸ್ಪರ್ಶದಿಂದ ಮನುಷ್ಯರು ಪಾಪಗಳನ್ನು ಕಳೆದುಕೊಂಡು ನರಕಕ್ಕೆ ಹೋಗುವುದಿಲ್ಲ. ಇದು ದಿವ್ಯ ಸ್ನಾನವೆನಿಸುವುದು.

ದೃಷ್ಟಸೂರ್ಯಂ ಹಿ ಯದ್ವಾರಿ ಪತತ್ಯಭ್ರೈಃ ವಿನಾ ದಿವಃ ।
ಆಕಾಶಗಂಗಾಸಲಿಲಂ ತದ್ಗೋಭಿಃ ಕ್ಷಿಪ್ಯತೇ ರವೇಃ ॥ ೧೫ ॥

ಕೃತ್ತಿಕಾದಿಷು ಋಕ್ಷೇಷು ವಿಷಮೇಷ್ವಂಬು ಯದ್ದಿವಃ ।
ದೃಷ್ಟಾರ್ಕಂ ಪತಿತಂ ಜ್ಞೇಯಂ ತದ್ಗಾಂಗಂ ದಿಗ್ಗಜೋಜ್ಝಿತಂ ॥ ೧೬ ॥

ಯುಗ್ಮರ್ಕ್ಷೇಷು ಚ ಯತ್ತೋಯಂ ಪತತ್ಯರ್ಕೋಜ್ಝಿತಂ ದಿವಃ ।
ತತ್ಸೂರ್ಯರಶ್ಮಿಭಿಃ ಸಮ್ಯಕ್ ಸಮಾದಾಯ ನಿರಸ್ಯತೇ ॥ ೧೭ ॥

ಉಭಯಂ ಪುಣ್ಯಮತ್ಯರ್ಥಂ ನೃಣಾಂ ಪಾಪಾಪಹಂ ದ್ವಿಜ ।
ಆಕಾಶಗಂಗಾಸಲಿಲಂ ದಿವ್ಯಂ ಸ್ನಾನಂ ಮಹಾಮುನೇ ॥ ೧೮ ॥

ಯತ್ತು ಮೇಘೈಃ ಸಮುತ್ಸೃಷ್ಟಂ ವಾರಿ ತತ್ಪ್ರಾಣಿನಾಂ ದ್ವಿಜ ।
ಪುಷ್ಣಾತ್ಯೋಷಧಯಃ ಸರ್ವಾ ಜೀವನಾಯಾಮೃತಂ ಹಿ ತತ್ ॥ ೧೯ ॥

೧೫-೧೮. ಸೂರ್ಯನಿರುವಾಗ ಅವನ ಕಿರಣಗಳಿಂದ ಆಕಾಶಗಂಗೆಯ ನೀರು ಮೇಘಸಂಬಂಧವಿಲ್ಲದೆ ಕೃತ್ತಿಕಾ, ಮೃಗಶಿರಾದಿ ವಿಷಮ ನಕ್ಷತ್ರಗಳಲ್ಲಿ ಭೂಮಿಯ ಮೇಲೆ ಬಿದ್ದರೆ ಅದು ದಿಗ್ಗಜಗಳಿಂದ ಬಿದ್ದ ಗಂಗೆಯ ನೀರೆಂದು ತಿಳಿಯಬೇಕು. ರೋಹಿಣಿ, ಆರಿದ್ರೆ ಮುಂತಾದ ಸಮ ನಕ್ಷತ್ರಗಳಲ್ಲಿ ಬಿದ್ದರೆ ಸೂರ್ಯನ ಕಿರಣಗಳಿಂದಲೇ ಬಿದ್ದ ನೀರೆಂದು ತಿಳಿಯಬೇಕು. ಈ ಎರಡೂ ಪುಣ್ಯಪ್ರದವಾದವುಗಳು. ಮನುಷ್ಯರ ಪಾಪಗಳನ್ನು ಪರಿಹರಿಸುವ ಈ ಆಕಾಶ ಗಂಗಾ ಸ್ನಾನವನ್ನು ದಿವ್ಯಸ್ನಾನವೆಂದು ಹೇಳುವರು.

೧೯-೨೦. ಮೇಘಗಳಿಂದ ಬಿದ್ದ ನೀರು ಪ್ರಾಣಿಗಳನ್ನೂ (ಓಷಧಿ) ಸಸ್ಯಗಳನ್ನೂ ಪೋಷಿಸುವುದರಿಂದ ಅವು ಜೀವಿಸಲು ಅಮೃತ ರೂಪವಾಗಿರುವುದು.

ತೇನ ವೃದ್ಧಿಂ ಪರಾಂ ನೀತಃ ಸಲಿಲೇನೌಷಧೀಗಣಃ ।
ಸಾಧಕಃ ಫಲಪಾಕಾಂತಃ ಪ್ರಜಾನಾಂ ದ್ವಿಜ ಜಾಯತೇ ॥ ೨೦ ॥

ತೇನ ಯಜ್ಞಾನ್ಯಥಾ ಪ್ರೋಕ್ತಾನ್ ಮಾನವಾಃ ಶಾಸ್ತ್ರಚಕ್ಷುಷಃ ।
ಕುರ್ವಂತ್ಯಹರಹಸ್ತೈಶ್ಚ ದೇವಾನಾಪ್ಯಾಯಯಂತಿ ಚ ॥ ೨೦ ॥

ಏವಂ ಯಜ್ಞಾಶ್ಚ ವೇದಾಶ್ಚ ವರ್ಣಾಶ್ಚ ದ್ವಿಜಪೂರ್ವಕಾಃ ।
ಸರ್ವದೇವನಿಕಾಯಾಶ್ಚ ಪಶುಭೂತಗಣಾಶ್ಚ ಯೇ ॥ ೨೨ ॥

ವೃಷ್ಟ್ಯಾ ಧೃತಮಿದಂ ಸರ್ವಮನ್ನಂ ನಿಷ್ಪಾದ್ಯತೇ ಯಯಾ ।
ಸಾಪಿ ನಿಷ್ಪಾದ್ಯತೇ ವೃಷ್ಟಿಃ ಸವಿತ್ರಾ ಮುನಿಸತ್ತಮ ॥ ೨೩ ॥

ಆಧಾರಭೂತಃ ಸವಿತುಃ ಧ್ರುವೋ ಮುನಿವರೋತ್ತಮ ।
ಧ್ರುವಸ್ಯ ಶಿಂಶುಮಾರೋಽಸೌ ಸೋಽಪಿ ನಾರಾಯಣಾಶ್ರಯಃ ॥ ೨೪ ॥

ಆ ನೀರಿನಿಂದ ಸಸ್ಯಗಳು ವಿಶೇಷವಾಗಿ ಬೆಳೆದು ಫಲವಾಗಿ ಪ್ರಜೆಗಳಿಗೆ ಪ್ರಯೋಜನವನ್ನುಂಟುಮಾಡುವುವು.

೨೧. ಆ ಸಸ್ಯಗಳಿಂದ ಶಾಸ್ತ್ರಗಳನ್ನು ತಿಳಿದ ಜನರು ಪ್ರತಿದಿನವೂ ವಿಧಿಗನುಸಾರವಾಗಿ ಯಜ್ಞಗಳನ್ನು ಮಾಡುವರು. ಆ ಯಜ್ಞಗಳಿಂದ ದೇವತೆಗಳನ್ನು ತೃಪ್ತಿಪಡಿಸುವರು.

೨೨-೨೪. ಈ ರೀತಿಯಲ್ಲಿ ಯಜ್ಞಗಳೂ, ವೇದಗಳೂ, ಬ್ರಾಹ್ಮಣಾದಿ ವರ್ಣಗಳೂ, ದೇವತೆಗಳೂ, ಪಶುಗಳೂ, ಪ್ರಾಣಿಗಳೂ ಅನ್ನವನ್ನುಂಟುಮಾಡುವ ಮಳೆಯಿಂದ ಉಂಟಾಗಿರುವುದು. ಆ ಮಳೆಯು ಸೂರ್ಯನಿಂದ ಉಂಟಾಗುವುದು. ಸೂರ್ಯನಿಗೆ ಧ್ರುವನೇ ಆಶ್ರಯನಾಗಿರುವನು. ಧ್ರುವನಿಗೆ ಶಿಂಶುಮಾರ ಚಕ್ರವು ಆಶ್ರಯವಾಗಿರುವುದು. ಶಿಂಶುಮಾರ ಚಕ್ರಕ್ಕೆ ನಾರಾಯಣನೇ ಆಶ್ರಯನಾಗಿರುವನು.

ಹೃದಿ ನಾರಾಯಣಸ್ತಸ್ಯ ಶಿಂಶುಮಾರಸ್ಯ ಸಂಸ್ಥಿತಃ ।
ಧಾರಯನ್ ಸರ್ವಭೂತಾನಾಮಾದಿಭೂತಃ ಸನಾತನಃ　　　॥ ೨೫ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ನವಮೋಽಧ್ಯಾಯಃ

---

೨೫. ನಾರಾಯಣನು ಶಿಂಶುಮಾರ ಚಕ್ರದ ಹೃದಯ ಪ್ರದೇಶದಲ್ಲಿದ್ದು ಸಮಸ್ತ ಪ್ರಾಣಿಗಳನ್ನೂ ಧರಿಸಿ ಸಮಸ್ತಕ್ಕೂ ಕಾರಣಸ್ವರೂಪನಾಗಿ ಅನಾದಿಯಾಗಿರುವನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ
ಒಂಭತ್ತನೆಯ ಅಧ್ಯಾಯವು ಮುಗಿದುದು.

ಶ್ರೀ

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ದಶಮೋಽಧ್ಯಾಯಃ

॥ ಪರಾಶರ ಉವಾಚ ॥

ತ್ರ್ಯಶೀತಿಮಂಡಲಶತಂ ಕಾಷ್ಠಯೋರಂತರಂ ದ್ವಯೋಃ ।
ಆರೋಹಣಾವರೋಹಾಭ್ಯಾಂ ಭಾನೋರಬ್ದೇನ ಯಾ ಗತಿಃ ॥ ೧ ॥

ಸರಥೋಽಧಿಷ್ಠಿತೋ ದೇವೈರಾದಿತ್ಯೈಃ ಋಷಿಭಿಸ್ತಥಾ ।
ಗಂಧರ್ವೈರಪ್ಸರೋಭಿಶ್ಚ ಗ್ರಾಮಣೀಸರ್ಪರಾಕ್ಷಸೈಃ ॥ ೨ ॥

ಹತ್ತನೆಯ ಅಧ್ಯಾಯವು

೧. ಸೂರ್ಯನು ತನ್ನ ರಥದಲ್ಲಿ ಉತ್ತರ ದಕ್ಷಿಣ ದಿಕ್ಕುಗಳಿಗೆ ನಡುವೆ ಇರುವ ನೂರೆಂಭತ್ತಮೂರು ಭಾಗಗಳುಳ್ಳ ಎರಡು ಮಂಡಲಗಳನ್ನು ಒಂದು ವರ್ಷದಲ್ಲಿ ಆರೋಹಣಾವರೋಹಣ ಕ್ರಮದಲ್ಲಿ ಸುತ್ತಬೇಕು. ನೊಗಕ್ಕೂ ಅಚ್ಚಿನ ತುದಿಗೂ ಸಂಬಂಧಿಸಿದ ವಾಯುರೂಪವಾದ ಹಗ್ಗವನ್ನು ಧ್ರುವನು ಆಕರ್ಷಿಸಿದಾಗ ಸೂರ್ಯನು ಉತ್ತರಾಯಣದಲ್ಲಿ ಪ್ರತಿದಿನವೂ ಒಳಭಾಗದ ಮಂಡಲದ ಒಂದೊಂದು ಭಾಗವನ್ನೂ ಪ್ರವೇಶಿಸುವನು. ಇದು ಆರೋಹಣವು. ಧ್ರುವನು ವಾಯುರೂಪವಾದ ಹಗ್ಗವನ್ನು ಸಡಿಲಿಸಿದಾಗ ದಕ್ಷಿಣಾಯನದಲ್ಲಿ ಪ್ರತಿದಿನವೂ ಹೊರಭಾಗದಲ್ಲಿ ಮಂಡಲದ ಒಂದೊಂದು ಭಾಗವನ್ನು ಪ್ರವೇಶಿಸುವನು. ಇದು ಅವರೋಹಣವು.

೨. ಆ ಸೂರ್ಯನ ರಥವು ಪ್ರತಿ ತಿಂಗಳಲ್ಲಿಯೂ ದೇವತೆಗಳು, ಋಷಿಗಳು, ಗಂಧರ್ವರು, ಅಪ್ಸರರು, ಯಕ್ಷರು, ಸರ್ಪ, ರಾಕ್ಷಸರು ಈ ಏಳು ಅಧಿಕಾರಿಗಳಿಂದ ಕೂಡಿರುವುದು.

ಧಾತಾಕೃತಸ್ಥಲಾ ಚೈವ ಪುಲಸ್ತ್ಯೋ ವಾಸುಕಿಸ್ತಥಾ ।
ರಥ ಭೃತ್ ಗ್ರಾಮಣೀರ್ಹೇತಿಸ್ತುಂಬುರುಶ್ಚೈವ ಸಪ್ತಮಃ ॥ ೩ ॥

ಏತೇ ವಸಂತಿ ವೈ ಚೈತ್ರೇ ಮಧುಮಾಸೇ ಸದೈವ ಹಿ ।
ಮೈತ್ರೇಯ ಸ್ಯಂದನೇ ಭಾನೋಃ ಸಪ್ತಮಾಸಾಧಿಕಾರಿಣಃ ॥ ೪ ॥

ಅರ್ಯಮಾ ಪುಲಹಶ್ಚೈವ ರಥೌಜಾಃ ಪುಂಜಿಕಸ್ಥಲಾ ।
ಪ್ರಹೇತಿಃ ಕಚ್ಛವೀರಶ್ಚ ನಾರದಶ್ಚ ರಥೇ ರವೇಃ ॥ ೫ ॥

ಮಾಧವೇ ನಿವಸಂತ್ಯೇತೇ ಶುಚಿಸಂಜ್ಞೇ ನಿಬೋಧ ಮೇ ॥ ೬ ॥

ಮಿತ್ರೋಽತ್ರಿಸ್ತಕ್ಷಕೋ ರಕ್ಷಃ ಪೌರುಷೇಯೋಽಥ ಮೇನಕಾ ।
ಹಾಹಾರಥಸ್ವನಶ್ಚೈವ ಮೈತ್ರೇಯೈತೇ ವಸಂತಿ ವೈ ॥ ೭ ॥

ವಸಿಷ್ಠೋ ವರುಣೋ ರಂಭಾ ಸಹಜನ್ಯಾಹುಹೂರಥ ।
ರಥಚಿತ್ರಸ್ತಥಾ ಶುಕ್ರೇ ವಸಂತ್ಯಾಷಾಢಸಂಜ್ಞಿಕೇ ॥ ೮ ॥

೩-೪. ಮಧು ಮಾಸವೆಂಬ ಚೈತ್ರ ಮಾಸದಲ್ಲಿ ಧಾತೃವೆಂಬ ಸೂರ್ಯನು ಕೃತಸ್ಥಳಾ ಎಂಬ ಅಪ್ಸರೆಯೂ, ಪುಲಸ್ತ್ಯಋಷಿ ವಾಸುಕಿಯೆಂಬ ಸರ್ಪ ರಥಭೃತ್ ಎಂಬ ಯಕ್ಷಹೇತಿಯೆಂಬ ರಾಕ್ಷಸ ತುಂಬುರು ಎಂಬ ಗಂಧರ್ವ ಇವರು ಮಾಸಾಧಿಕಾರಿಗಳಾಗಿ ಸೂರ್ಯನ ರಥದಲ್ಲಿರುವರು.

೫-೭. ವೈಶಾಖ ಮಾಸದಲ್ಲಿ ಅರ್ಯಮ, ಪುಲಹ, ರಥೌಜ, ಪುಂಜಕಸ್ಥಲಿ, ಪ್ರಹೇತಿ, ಕಚ್ಛವೀರ, ನಾರದ ಇವರು ಅಧಿಕಾರಿಗಳು. ಜ್ಯೇಷ್ಠಮಾಸದಲ್ಲಿ ಮಿತ್ರ ಅತ್ರಿ, ತಕ್ಷಕ, ಪೌರುಷೇಯ, ಮೇನಕಾ, ರಥಸ್ವನ, ಹಾಹಾ ಇವರು ಅಧಿಕಾರಿಗಳು.

೮-೯. ಆಷಾಢ ಮಾಸದಲ್ಲಿ ವರುಣ, ವಸಿಷ್ಠ, ರಂಭಾ, ಸಹಜನ್ಯಾ, ಹುಹೂ, ರಥಚಿತ್ರ, ರಥ ಇವರು ಅಧಿಕಾರಿಗಳು. ಶ್ರಾವಣ ಮಾಸದಲ್ಲಿ ಇಂದ್ರ,

ಇಂದ್ರೋ ವಿಶ್ವಾವಸುಃ ಸ್ರೋತಾ ಏಲಾಪತ್ರಸ್ತಥಾಂಗಿರಾಃ ।
ಪ್ರಮ್ಲೋಚಾ ಚ ನಭಸ್ಯೇತೇ ಸರ್ಪಶ್ಚಾತ್ರೇ ವಸಂತಿ ವೈ ॥ ೯ ॥

ವಿವಸ್ವಾನುಗ್ರಸೇನಶ್ಚ ಭೃಗುರಾಪೂರಣಸ್ತಥಾ ।
ಅನುಮ್ಲೋಚಾ ಶಂಖಪಾಲೋ ವ್ಯಾಘ್ರೋ ಭಾದ್ರಪದೇ ತಥಾ ॥ ೧೦ ॥

ಪೂಷಾವಸುರುಚಿರ್ವಾತೋ ಗೌತಮೋಽಥ ಧನಂಜಯಃ ।
ಸುಷೇಣೋಽನ್ಯೋ ಘೃತಾಚೀ ಚ ವಸಂತ್ಯಾಶ್ವಯುಜೇ ರವೌ ॥ ೧೧ ॥

ವಿಶ್ವಾವಸುರ್ಭರದ್ವಾಜಃ ಪರ್ಜನ್ಯೈರಾವತೌ ತಥಾ ।
ವಿಶ್ವಾಚೀ ಸೇನಜಿಚ್ಚಾಪಃ ಕಾರ್ತಿಕೇ ಚಾಧಿಕಾರಿಣಃ ॥ ೧೨ ॥

ಅಂಶಕಾಶ್ಯಪತಾರ್ಕ್ಷ್ಯಾಸ್ತು ಮಹಾಪದ್ಮಸ್ತಥೋರ್ವಶೀ ।
ಚಿತ್ರಸೇನಸ್ತಥಾ ವಿದ್ಯುತ್ ಮಾರ್ಗಶೀರ್ಷಾಧಿಕಾರಿಣಃ ॥ ೧೩ ॥

ಕ್ರತುರ್ಭಗಸ್ತಥೋರ್ಣಾಯುಃ ಸ್ಫೂರ್ಜಃ ಕಾರ್ಕೋಟಕಸ್ತಥಾ ।
ಅರಿಷ್ಟನೇಮಿಶ್ಚೈವಾನ್ಯಾ ಪೂರ್ವಚಿತ್ತಿರ್ವರಾಪ್ಸರಾಃ ॥ ೧೪ ॥

ಪೌಷೇ ಮಾಸಿ ವಸಂತ್ಯೇತೇ ಸಪ್ತಭಾಸ್ಕರಮಂಡಲೇ ।
ಲೋಕಪ್ರಕಾಶನಾರ್ಥಾಯ ವಿಪ್ರವರ್ಯಾಧಿಕಾರಿಣಃ ॥ ೧೫ ॥

ವಿಶ್ವಾವಸು, ಸ್ರೋತ, ಏಲಾಪುತ್ರ, ಅಂಗಿರ, ಪ್ರಮ್ಲೋಚ, ಸರ್ಪ ಎಂಬಿವರು ಅಧಿಕಾರಿಗಳು.

೧೦–೧೫. ಭಾದ್ರಪದ ಮಾಸದಲ್ಲಿ ವಿವಸ್ವಂತ, ಉಗ್ರಸೇನ, ಭೃಗು, ಆಪೂರಣ, ಅನುಮ್ಲೋಚ, ಶಂಖಪಾಲ, ವ್ಯಾಘ್ರ ಎಂಬಿವರು ಅಧಿಕಾರಿಗಳು, ಆಶ್ವಯುಜ ಮಾಸದಲ್ಲಿ ಪೂಷ, ವಸುರುಚಿ, ವಾತ, ಗೌತಮ, ಧನಂಜಯ, ಸುಷೇಣ, ಘೃತಾಚಿ ಇವರು ಅಧಿಕಾರಿಗಳು. ಕಾರ್ತೀಕ ಮಾಸದಲ್ಲಿ ವಿಶ್ವಾವಸು, ಭರದ್ವಾಜ, ಪರ್ಜನ್ಯ, ಐರಾವತ, ವಿಶ್ವಾಚೀ, ಸೇನಜಿತ್, ಆಪ ಇವರುಗಳು ಅಧಿಕಾರಿಗಳು. ಮಾರ್ಗಶಿರ ಮಾಸದಲ್ಲಿ ಅಂಶ, ತಾರ್ಕ್ಷ್ಯ, ಕಾಶ್ಯಪ, ಮಹಾಪದ್ಮ, ಊರ್ವಶಿ, ಚಿತ್ರಸೇನ, ವಿದ್ಯುತ್ ಇವರು ಅಧಿಕಾರಿಗಳು. ಪುಷ್ಯಮಾಸದಲ್ಲಿ ಕ್ರತು, ಭಗ, ಊರ್ಣಾಯು, ಸ್ಫೂರ್ಜ, ಕಾರ್ಕೋಟಕ, ಅರಿಷ್ಟನೇಮಿ, ಪೂರ್ವಚಿತ್ತಿ ಇವರು ಅಧಿಕಾರಿಗಳು.

ತ್ವಷ್ಟಾಥ ಜಮದಗ್ನಿಶ್ಚ ಕಂಬಳೋಽಥ ತಿಲೋತ್ತಮಾ ।
ಬ್ರಹ್ಮೋಪೇತೋಽಥ ಋತಜಿತ್ ಧೃತರಾಷ್ಟ್ರಶ್ಚ ಸಪ್ತಮಃ ॥ ೧೬ ॥

ಮಾಘೇ ಮಾಸೇ ವಸಂತ್ಯೇತೇ ಸಪ್ತ ಮೈತ್ರೇಯ ಭಾಸ್ಕರೇ ।
ಶ್ರೂಯತಾಂ ಚಾಪರೇ ಸೂರ್ಯೇ ಫಾಲ್ಗುನೇ ನಿವಸಂತಿ ಯೇ ॥ ೧೭ ॥

ವಿಷ್ಣುರಶ್ವತರೋ ರಂಭಾ ಸೂರ್ಯವರ್ಚಾಶ್ಚ ಸತ್ಯಜಿತ್ ।
ವಿಶ್ವಾಮಿತ್ರಸ್ತಥಾ ರಕ್ಷೋ ಯಜ್ಞೋಪೇತೋ ಮಹಾಮುನೇ ॥ ೧೮ ॥

ಮಾಸೇಷ್ವೇತೇಷು ಮೈತ್ರೇಯ ವಸಂತ್ಯೇ ತೇ ತ್ರ ಸಪ್ತಕಾಃ ।
ಸವಿತುರ್ಮಂಡಲೇ ಬ್ರಹ್ಮನ್ ವಿಷ್ಣುಶಕ್ತ್ಯುಪಬೃಂಹಿತಾಃ ॥ ೧೯ ॥

ಸ್ತುವಂತಿ ಮುನಯಃ ಸೂರ್ಯಂ ಗಂಧರ್ವೈರ್ಗೀಯತೇ ಪುರಃ ।
ನೃತ್ಯಂತ್ಯಪ್ಸರಸೋ ಯಾಂತಿ ಸೂರ್ಯಸ್ಯಾನು ನಿಶಾಚರಾಃ ॥ ೨೦ ॥

ವಹಂತಿ ಪನ್ನಗಾ ಯಕ್ಷೈಃ ಕ್ರಿಯತೇಽಭೀಶು ಸಂಗ್ರಹಃ ।
ವಾಲಖಿಲ್ಯಾಸ್ತಥೈವೈನಂ ಪರಿವಾರ್ಯ ಸಮಾಸತೇ ॥ ೨೧ ॥

೧೬–೧೮. ಮಾಘಮಾಸದಲ್ಲಿ ತ್ವಷ್ಟ್ರ, ಜಮದಗ್ನಿ, ಕಂಬಳ, ತಿಲೋತ್ತಮಾ, ಬ್ರಹ್ಮೋಪೇತ, ಋತಜಿತು, ಧೃತರಾಷ್ಟ್ರ ಈ ಏಳು ಜನರೂ ಲೋಕ ಪ್ರಕಾಶನಾರ್ಥವಾಗಿ ಸೂರ್ಯಮಂಡಲದ ಅಧಿಕಾರಿಗಳಾಗಿರುವರು. ಫಾಲ್ಗುಣಮಾಸದಲ್ಲಿ ವಿಷ್ಣು, ಅಶ್ವತರ, ರಂಭಾ, ಸೂರ್ಯವರ್ಚ, ಸತ್ಯಜಿತ್, ವಿಶ್ವಾಮಿತ್ರ ಯಜ್ಞೋಪೇತ, ಇವರು ಅಧಿಕಾರಿಗಳು.

೧೯–೨೨. ಮೈತ್ರೇಯನೇ, ಈ ಮಾಸಗಳಲ್ಲಿ ಮೇಲೆ ಹೇಳಿದ ಏಳು ಅಧಿಕಾರಿಗಳು ಸೂರ್ಯಮಂಡಲದಲ್ಲಿ ವಿಷ್ಣು ಶಕ್ತಿಯಿಂದ ಪ್ರೇರಿತರಾಗಿ ಮುನಿಗಳು ಸೂರ್ಯನನ್ನು ಸ್ತೋತ್ರಮಾಡುವರು. ಗಂಧರ್ವರು ಗಾನಮಾಡುವರು. ಅಪ್ಸರಸ್ತ್ರೀಯರು ನರ್ತನಮಾಡುವರು. ರಾಕ್ಷಸರು ಸೂರ್ಯನನ್ನನುಸರಿಸಿ ಹೋಗುವರು.

ಸೋಽಯಂ ಸಪ್ತಗಣಃ ಸೂರ್ಯಮಂಡಲೇ ಮುನಿಸತ್ತಮ ।
ಹಿಮೋಷ್ಣವಾರಿವೃಷ್ಟೀನಾಂ ಹೇತುಃ ಸ್ವಸಮಯಂಗತಃ ॥ ೨೨ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ದಶಮೋಽಧ್ಯಾಯಃ

ಸರ್ಪಗಳು ರಥವನ್ನು ನಡೆಸುವವು. ಯಕ್ಷರು ಹಗ್ಗಗಳನ್ನು ಕಟ್ಟುವರು. ವಾಲ್ಖಿಲ್ಯರು ಸೂರ್ಯನ ಸುತ್ತಲೂ ಇದ್ದು ಸೇವಿಸುತ್ತಿರುವರು. ಈ ಏಳು ಅಧಿಕಾರಿಗಳೂ ಸೂರ್ಯಮಂಡಲದಲ್ಲಿ ತಮ್ಮ ಅಧಿಕಾರವು ಬಂದ ಕಾಲದಲ್ಲಿ ಹಿಮ, ಉಷ್ಣ ಮಳೆ ಇವುಗಳಿಗೆ ಕಾರಣರಾಗಿರುವರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ
ಹತ್ತನೆಯ ಅಧ್ಯಾಯವು ಮುಗಿದುದು.

ಶ್ರೀ

ಶ್ರೀ ವಿಷ್ಣು ಪುರಾಣೇ ದ್ವಿತೀಯಾಂಶೇ

ಏಕಾದಶೋಧ್ಯಾಯಃ

॥ ಮೈತ್ರೇಯ ಉವಾಚ ॥

ಯದೇತದ್ಭಗವಾನಾಹ ಗಣಸ್ಸಪ್ತವಿಧೋ ರವೇಃ ।
ಮಂಡಲೇ ಹಿಮವಾರ್ಯುಷ್ಣಕಾರಣಂ ತನ್ಮಯಾ ಶ್ರುತಂ ॥ ೧ ॥

ವ್ಯಾಪಾರಶ್ಚಾಪಿ ಕಥಿತೋ ಗಂಧರ್ವೋರಗರಕ್ಷಸಾಂ ।
ಋಷೀಣಾಂ ವಾಲಖಿಲ್ಯಾನಾಂ ತಥೈವಾಪ್ಸರಸಾಂ ಗುರೋ ॥ ೨ ॥

ಯಕ್ಷಾಣಾಂ ಚ ರಥೇ ಭಾನೋರ್ವಿಷ್ಣುಶಕ್ತಿಧೃತಾತ್ಮನಾಂ ।
ಕಿಂ ಚಾದಿತ್ಯಸ್ಯ ಯತ್ಕರ್ಮ ತನ್ನಾತ್ರೋಕ್ತಂ ತ್ವಯಾ ಮುನೇ ॥ ೩ ॥

ಹನ್ನೊಂದನೆಯ ಅಧ್ಯಾಯವು.

೧-೫. ಮೈತ್ರೇಯನು ಪ್ರಶ್ನೆಮಾಡುವನು :— "ಪರಾಶರರೇ! ಸೂರ್ಯ ಮತ್ತು ಅವನ ಏಳು ಬಗೆಯ ಗಣಗಳು ಸೂರ್ಯಮಂಡಲದಲ್ಲಿ ಹಿಮ, ಮಳೆ, ಉಷ್ಣ ಇವುಗಳಿಗೆ ಕಾರಣಗಳೆಂದು ಹೇಳಿದಿರಿ. ಗಂಧರ್ವರು, ಉರಗರು, ರಾಕ್ಷಸರು, ಋಷಿಗಳು, ವಾಲಖಿಲ್ಯರು, ಅಪ್ಸರಸರು, ಯಕ್ಷರು ಇವರು ವಿಷ್ಣುಶಕ್ತಿಯಿಂದ ಸೂರ್ಯನ ರಥದಲ್ಲಿ ಮಾಡುವ ಕೆಲಸಗಳನ್ನು ಹೇಳಿದಿರಿ. ಆದರೆ ಸೂರ್ಯನು ಮಾಡುವ ಕೆಲಸವನ್ನು ಮಾತ್ರ ತಾವು ಹೇಳಲಿಲ್ಲ. ಸಪ್ತ ಗಣಗಳಿಂದ ಹಿಮ,

ಯದಿ ಸಪ್ತಗಣೋ ವಾರಿ ಹಿಮಮುಷ್ಣಂ ಚ ವರ್ಷತಿ ।
ತತ್ಕಿಮತ್ರ ರವೇರ್ಯೇನ ವೃಷ್ಟಿಸ್ಸೂರ್ಯಾದಿತೀರ್ಯತೇ ॥ ೪ ॥

ವಿವಸ್ವಾನುದಿತೋ ಮಧ್ಯೇ ಯಾತ್ಯಸ್ತಮಿತಿ ಕಿಂ ಜನೈಃ ।
ಬ್ರವೀತ್ಯೇತತ್ಸಮಂ ಕರ್ಮ ಯದಿ ಸಪ್ತಗಣಸ್ಯ ತತ್ ॥ ೫ ॥

॥ ಪರಾಶರ ಉವಾಚ ॥

ಮೈತ್ರೇಯ ಶ್ರೂಯತಾಮೇತದ್ಯದ್ಭವಾನ್ಪರಿಪೃಚ್ಛತಿ ।
ಯಥಾ ಸಪ್ತಗಣೇಽಪ್ಯೇಕಃ ಪ್ರಾಧಾನ್ಯೇನಾಧಿಕೋ ರವಿಃ ॥ ೬ ॥

ಸರ್ವಶಕ್ತಿಃ ಪರಾ ವಿಷ್ಣೋಃ ಋಗ್ಯಜುಸ್ಸಾಮಸಂಜ್ಞಿತಾ ।
ಸೈಷಾ ತ್ರಯೀ ತಪತ್ಯಂಹೋ ಜಗತಶ್ಚ ಹಿನಸ್ತಿ ಯತ್ ॥ ೭ ॥

ಸೈಷಾ ವಿಷ್ಣುಸ್ಸ್ಥಿತಸ್ಸ್ಥಿತ್ಯಾಂ ಜಗತಃ ಪಾಲನೋದ್ಯತಃ ।
ಋಗ್ಯಜುಸ್ಸಾಮಭೂತೋಽಂತಸ್ಸವಿತುರ್ದ್ವಿಜ ತಿಷ್ಠತಿ ॥ ೮ ॥

ಉಷ್ಣ, ಮಳೆಗಳುಂಟಾಗುತ್ತಿರಲಾಗಿ ಸೂರ್ಯನಿಂದಲೇ ಮಳೆಯಾಗುವುದೆಂದು ಹೇಳಲು ಕಾರಣವೇನು? ಸೂರ್ಯನು ಹುಟ್ಟುವನು. ಅಸ್ತವಾಗುವನು ಎಂದು ಜನರು ಹೇಳಲು ಕಾರಣವೇನು?" ಎಂದು ಪ್ರಶ್ನೆ ಮಾಡಿದನು.

೬-೧೦. ಪರಾಶರರು ಹೇಳುವರು:—ಮೈತ್ರೇಯನೇ ಕೇಳು. ಈ ಸಪ್ತ ಗಣಗಳಲ್ಲಿ ಸೂರ್ಯನೇ ಮುಖ್ಯನೆಂದು ಹೇಳಲು ಕಾರಣವೇನೆಂದರೆ:— ಋಗ್ಯಜುಸ್ಸಾಮವೆಂಬ ವಿಷ್ಣುವಿನ ಪರಾಶಕ್ತಿಯು ಸೂರ್ಯರೂಪದಿಂದ ತನ್ನನ್ನು ಉಪಾಸನೆ ಮಾಡಿದವರ ಪಾಪಗಳನ್ನು ನಾಶಮಾಡುವುದು. ಆದುದರಿಂದ ವಿಷ್ಣುವು ಋಗ್ಯಜುಸ್ಸಾಮ ರೂಪನಾಗಿ ಸೂರ್ಯನಲ್ಲಿದ್ದು ಜಗತ್ತನ್ನು ಕಾಪಾಡುತ್ತಿರುವನು. ವೇದಮಯವಾದ ವಿಷ್ಣುಶಕ್ತಿಯು ಪ್ರತಿ ತಿಂಗಳಲ್ಲಿಯೂ ಸೂರ್ಯನಲ್ಲಿ ಸೇರುತ್ತಿರುವುದು.

ಮಾಸಿ ಮಾಸಿ ರವಿರ್ಯೋ ಯಸ್ತತ್ರ ತತ್ರ ಹಿ ಸಾಪರಾ ।
ತ್ರಯೀಮಯೀ ವಿಷ್ಣುಶಕ್ತಿರವಸ್ಥಾನಂ ಕರೋತಿ ಹಿ ॥ ೯ ॥

ಋಚಸ್ತಪಂತಿ ಪೂರ್ವಾಹ್ಣೇ ಮಧ್ಯಾಹ್ನೇ ಚ ಯಜೂಂಷ್ಯಥ ।
ಬೃಹದ್ರಥಂತರಾದೀನಿ ಸಾಮಾನ್ಯಹ್ನಃಕ್ಷಯೇ ರವಿಂ ॥ ೧೦ ॥

ಅಂಗಮೇಷಾತ್ರ ಯಾ ವಿಷ್ಣೋಃ ಋಗ್ಯಜುಸ್ಸಾಮಸಂಜ್ಞಿತಾ ।
ವಿಷ್ಣುಶಕ್ತಿರವಸ್ಥಾನಂ ಸದಾದಿತ್ಯೇ ಕರೋತಿ ಸಾ ॥ ೧೧ ॥

ನ ಕೇವಲಂ ರವೇಶ್ಶಕ್ತಿರ್ವೈಷ್ಣವೀ ಸಾ ತ್ರಯೀಮಯೀ ।
ಬ್ರಹ್ಮಾಥ ಪುರುಷೋ ರುದ್ರಸ್ತ್ರಯಮೇತತ್ತ್ರಯೀಮಯಂ ॥ ೧೨ ॥

ಸರ್ಗಾದಾವೃಙ್ಮಯೋ ಬ್ರಹ್ಮಾ ಸ್ಥಿತೌ ವಿಷ್ಣುರ್ಯಜುರ್ಮಯಃ ।
ರುದ್ರಸ್ಸಾಮಮಯೋಂತಾಯ ತಸ್ಮಾತ್ತಸ್ಯಾಶುಚಿರ್ಧ್ವನಿಃ ॥ ೧೩ ॥

ಪೂರ್ವಾಹ್ಣದಲ್ಲಿ ಋಗ್ವೇದ ಮಂತ್ರಗಳೂ, ಮಧ್ಯಾಹ್ನದಲ್ಲಿ ಯಜುರ್ವೇದ ಮಂತ್ರಗಳೂ, ಸಾಯಾಹ್ನದಲ್ಲಿ ರಥಂತರಾದಿ ಸಾಮವೇದ ಮಂತ್ರಗಳೂ ಸೂರ್ಯನನ್ನು ಸ್ತೋತ್ರಮಾಡುತ್ತಿರುವುವು.

೧೧-೧೨. ವಿಷ್ಣುವಿನ ಅಂಶವಾದ ಋಗ್ಯಜುಸ್ಸಾಮ ವೇದಗಳೆಂಬ ವಿಷ್ಣುಶಕ್ತಿಯು ಯಾವಾಗಲೂ ಸೂರ್ಯನಲ್ಲಿ ಇರುತ್ತಿರುವುದು ಸೂರ್ಯನಲ್ಲಿರುವುದು ಮಾತ್ರ ವಿಷ್ಣುವಿನ ವೇದಮಯವಾದ ಶಕ್ತಿಯೆಂದು ತಿಳಿಯಬಾರದು. ಬ್ರಹ್ಮ, ವಿಷ್ಣು, ರುದ್ರರೆಂಬ ತ್ರಿಮೂರ್ತಿಗಳೂ ವೇದಸ್ವರೂಪರೆಂದು ತಿಳಿಯಬೇಕು.

೧೩. ಬ್ರಹ್ಮನು ಸೃಷ್ಟಿಕಾರ್ಯವನ್ನು ಮಾಡುತ್ತ ಋಗ್ವೇದ ಸ್ವರೂಪನಾಗಿರುವನು. ವಿಷ್ಣುವು ಸ್ಥಿತಿಕಾರ್ಯವನ್ನು ಮಾಡುತ್ತ ಯಜುರ್ವೇದ ಸ್ವರೂಪನಾಗಿರುವನು. ರುದ್ರನು ನಾಶಕಾರ್ಯವನ್ನು ಮಾಡುತ್ತ ಸಾಮವೇದ ಸ್ವರೂಪನಾಗಿರುವನು. ನಾಶಕರವಾದುದರಿಂದ ಸಾಮಧ್ವನಿಯು ಅಶುಚಿಯೆಂದು ಈ ಧ್ವನಿಯಿಂದ ಬೇರೆ ವೇದಗಳನ್ನು ಹೇಳುವುದಿಲ್ಲ. 'ನ ಸಾಮಧ್ವನಾವೃಗ್ಯಜುಷೀ' ಎಂದು ಗೌತಮಸೂತ್ರವಿರುವುದು.

ಏವಂ ಸಾ ಸಾತ್ತ್ವಿಕೀ ಶಕ್ತಿರ್ವೈಷ್ಣವೀ ಯಾ ತ್ರಯೀಮಯೀ ।
ಆತ್ಮಸಪ್ತಗಣಸ್ಥಂ ತಂ ಭಾಸ್ವಂತಮಧಿತಿಷ್ಠತಿ ॥ ೧೪ ॥

ತಯಾ ಚಾಧಿಷ್ಠಿತಸ್ಸೋಽಪಿ ಜಾಜ್ವಲೀತಿ ಸ್ವರಶ್ಮಿಭಿಃ ।
ತಮಸ್ಸಮಸ್ತಜಗತಾಂ ನಾಶಂ ನಯತಿ ಚಾಖಿಲಂ ॥ ೧೫ ॥

ಸ್ತುವಂತಿ ಚೈನಂ ಮುನಯೋ ಗಂಧರ್ವೈರ್ಗೀಯತೇ ಪುರಃ ।
ನೃತ್ಯಂತ್ಯಪ್ಸರಸೋ ಯಾಂತಿ ತಸ್ಯ ಚಾನು ನಿಶಾಚರಾಃ ॥ ೧೬ ॥

ವಹಂತಿ ಪನ್ನಗಾ ಯಕ್ಷೈಃ ಕ್ರಿಯತೇಽಭೀಶು ಸಂಗ್ರಹಃ ।
ವಾಲಖಿಲ್ಯಾಸ್ತಥೈವೈನಂ ಪರಿವಾರ್ಯ ಸಮಾಸತೇ ॥ ೧೭ ॥

ನೋದೇತಾ ನಾಸ್ತಮೇತಾ ಚ ಕದಾಚಿಚ್ಛಕ್ತಿರೂಪಧೃತ್ ।
ವಿಷ್ಣುರ್ವಿಷ್ಣೋಃ ಪೃಥಕ್ತಸ್ಯ ಗಣಸ್ಸಪ್ತವಿಧೋಽಪ್ಯಯಂ ॥ ೧೮ ॥

೧೪-೧೭. ಈ ರೀತಿಯಲ್ಲಿ ಮೂರು ವೇದಸ್ವರೂಪವಾದ ವಿಷ್ಣು ಸಂಬಂಧವಾದ ಸಾತ್ವಿಕ ಶಕ್ತಿಯು ತಾನೂ ಸೇರಿ ಏಳು ಗಣಗಳಿಂದ ಕೂಡಿದ ಸೂರ್ಯನಲ್ಲಿ ಇರುವುದು. ಆ ಕಾರಣದಿಂದ ಸೂರ್ಯನು ತನ್ನ ಕಿರಣಗಳಿಂದ ವಿಶೇಷವಾಗಿ ಪ್ರಕಾಶಿಸುತ್ತಿರುವನು. ಮತ್ತು ಸಮಸ್ತ ಜಗತ್ತಿನ ಕತ್ತಲೆಯನ್ನೂ ನಾಶಮಾಡುತ್ತಿರುವನು. ಋಷಿಗಳು ಅವನನ್ನು ಸ್ತೋತ್ರಮಾಡುವರು. ಗಂಧರ್ವರು ಅವನ ಮುಂದೆ ಗಾನಮಾಡುವರು. ಅಪ್ಸರಸ್ತ್ರೀಯರು ನರ್ತನ ಮಾಡುವರು. ರಾಕ್ಷಸರು ಅವನನ್ನು ಅನುಸರಿಸಿ ಹೋಗುತ್ತಿರುವರು. ಸರ್ಪಗಳು ರಥವನ್ನು ಸಿದ್ಧಮಾಡುವುವು. ಯಕ್ಷರು ಕಿರಣಗಳನ್ನು ಕೂಡಿಸುವರು. ವಾಲಖಿಲ್ಯರು ಸೇವೆಮಾಡುವರು.

೧೮-೨೦. ಶಕ್ತಿರೂಪವನ್ನು ಧರಿಸಿದ ವಿಷ್ಣುವು ಉದಯವಾಗುವುದೂ ಇಲ್ಲ. ಅಸ್ತವಾಗುವುದೂ ಇಲ್ಲ. ಸೂರ್ಯಾದಿ ಸಪ್ತಗಣಗಳಿಗೆ ಆಶ್ರಯನಾದ ವಿಷ್ಣುವು ಪ್ರತಿ ತಿಂಗಳಿನಲ್ಲಿಯೂ ಸೂರ್ಯಮಂಡಲಕ್ಕೆ ಬರುವ ಹೋಗುವ ಕಾರ್ಯವನ್ನು

ಸ್ತಂಭಸ್ಥ ದರ್ಪಣಸ್ಯೈತಿ ಯೋಯ ಆಸನ್ನತಾಂನರಃ ।
ಛಾಯಾದರ್ಶನ ಸಂಯೋಗಂ ಸಸ ಪ್ರಾಪ್ನೋತ್ಯಥಾತ್ಮನಃ ॥ ೧೯ ॥

ಏವಂ ಸಾ ವೈಷ್ಣವೀ ಶಕ್ತಿರ್ನೈವಾಪೇತಿ ತತೋ ದ್ವಿಜ ।
ಮಾಸಾನುಮಾಸಂ ಭಾಸ್ವಂತಮಧ್ಯಾಸ್ತೇ ತತ್ರಸಂಸ್ಥಿತಂ ॥ ೨೦ ॥

ಪಿತೃದೇವಮನುಷ್ಯಾದೀನ್ ಸ ಸದಾಪ್ಯಾಯಯನ್ಪ್ರಭುಃ ।
ಪರಿವರ್ತತ್ಯಹೋರಾತ್ರ ಕಾರಣಂ ಸವಿತಾ ದ್ವಿಜ ॥ ೨೧ ॥

ಸೂರ್ಯರಶ್ಮಿ ಸುಷುಮ್ನಾಯಸ್ತ ರ್ಪಿತಸ್ತೇನ ಚಂದ್ರಮಾಃ ।
ಕೃಷ್ಣಪಕ್ಷೇ ಮರೈಃ ಶಶ್ವತ್ ಪೀಯತೇ ವೈ ಸುಧಾಮಯಃ ॥ ೨೨ ॥

ಪೀತಂ ತು ದ್ವಿಕಲಂ ಸೋಮಂ ಕೃಷ್ಣಪಕ್ಷಕ್ಷಯೇ ದ್ವಿಜ ।
ಪಿಬಂತಿ ಪಿತರಸ್ತೇಷಾಂ ಭಾಸ್ಕರಾತ್ತರ್ಪಣಂ ತಥಾ ॥ ೨೩ ॥

ಮಾಡುವುದಿಲ್ಲ. ಸೂರ್ಯಾದಿಸಪ್ತಗಣಗಳು ಮಾತ್ರ ವಿಷ್ಣುಶಕ್ತಿಗಿಂತ ಬೇರೆಯಾದು ವಾದುದರಿಂದ ಅವು ಒಂದುಹೋಗಿ ಮಾಡಬೇಕಾದ ಕಾರ್ಯಗಳನ್ನು ಮಾಡುವುವು. ಹೇಗೆಂದರೆ:—ಒಂದು ಕಂಬದಲ್ಲಿರುವ ಕನ್ನಡಿಯ ಸಮೀಪಕ್ಕೆ ಬಂದವನು ಅದರಲ್ಲಿ ತನ್ನ ಪ್ರತಿಬಿಂಬವನ್ನು ಕಾಣುವನು. ಕನ್ನಡಿಯೋ ಅವನಸಮೀಪಕ್ಕೆ ಹೋಗುವುದಿಲ್ಲ. ಹಾಗೆಯೇ ಸೂರ್ಯಮಂಡಲದ ವೈಷ್ಣವೀಶಕ್ತಿಯು ನಾಶ ವಾಗುವುದಿಲ್ಲ. ಪ್ರತಿತಿಂಗಳಿನಲ್ಲಿಯೂ ಅಲ್ಲಿಗೆ ಬರುವ ಸೂರ್ಯಾದಿ ಗಣಗಳಿಗೆ ಆಶ್ರಯಸ್ಥಾನವಾಗಿರುವುದು.

೨೧-೨೩. ಹೀಗೆ ವಿಷ್ಣುಶಕ್ತಿಯನ್ನಾಶ್ರಯಿಸಿದ ಸೂರ್ಯನು ಪಿತೃದೇವ ಮನುಷ್ಯರೇಮೊದಲಾದವರನ್ನು ಯಾವಾಗಲೂ ತೃಪ್ತಿಪಡಿಸುತ್ತ ಹಗಲು ರಾತ್ರಿಗಳಿಗೆ ಕಾರಣನಾಗಿ ಸುತ್ತುತ್ತಿರುವನು. ಸೂರ್ಯಕಿರಣಗಳೆಂಬ ಅಮೃತಕಿರಣಗಳನ್ನು ಕೃಷ್ಣಪಕ್ಷದಲ್ಲಿ ದೇವತೆಗಳು ಪಾನಮಾಡುವರು. ಕೊನೆಯಲ್ಲಿ ಎರಡು ಕಲೆಗಳು ಉಳಿದಿದ್ದಾಗ ಅಂದರೆ ಅಮಾವಾಸ್ಯೆಯ ದಿನ ಆ ಅಮೃತಕಿರಣವನ್ನು ಪಿತೃಗಳು ಪಾನಮಾಡುವರು. ಹೀಗೆ ದೇವತೆಗಳೂ ಪಿತೃಗಳೂ ಸೂರ್ಯನಿಂದ ತೃಪ್ತಿ ಹೊಂದುವರು.

ಆದತ್ತೇ ರಶ್ಮಿಭಿರ್ಯಂ ತು ಕ್ಷಿತಿಸಂಸ್ಥಂ ರಸಂ ರವಿಃ ।
ತಮುತ್ಸೃಜತಿ ಭೂತಾನಾಂ ಪುಷ್ಟ್ಯರ್ಥಂ ಸಸ್ಯವೃದ್ಧಯೇ ॥ ೨೪ ॥

ತೇನ ಪ್ರೀಣಾತ್ಯಶೇಷಾಣಿ ಭೂತಾನಿ ಭಗವಾನ್ರವಿಃ ।
ಪಿತೃದೇವ ಮನುಷ್ಯಾದೀನೇವಮಾಪ್ಯಾಯಯತ್ಯಸೌ ॥ ೨೫ ॥

ಪಕ್ಷತೃಪ್ತಿಂ ತು ದೇವಾನಾಂ ಪಿತೄಣಾಂ ಚೈಕಮಾಸಿಕೀಂ ।
ಶಶ್ವತ್ತೃಪ್ತಿಂ ಚ ಮರ್ತ್ಯಾನಾಂ ಮೈತ್ರೇಯಾರ್ಕಃ ಪ್ರಯಚ್ಛತಿ ॥ ೨೬ ॥

ಇತಿ ಶ್ರೀ ವಿಷ್ಣು ಪುರಾಣೇ ದ್ವಿತೀಯಾಂಶೇ
ಏಕಾದಶೋಽಧ್ಯಾಯಃ

೨೪-೨೫. ಸೂರ್ಯನು ಭೂಮಿಯಲ್ಲಿರುವ ನೀರನ್ನು ತನ್ನ ಕಿರಣಗಳಿಂದ ತೆಗೆದುಕೊಂಡು ಆ ನೀರನ್ನು ಪ್ರಾಣಿಗಳ ಮತ್ತು ಸಸ್ಯಗಳ ವೃದ್ಧಿಗಾಗಿ ಮಳೆಯ ರೂಪದಲ್ಲಿ ಕೊಡುವನು. ಈ ರೀತಿಯಿಂದ ಅವನು ಸಮಸ್ತ ಪ್ರಾಣಿಗಳನ್ನೂ, ಪಿತೃ ದೇವ ಮನುಷ್ಯಾದಿಗಳನ್ನೂ ತೃಪ್ತಿ ಪಡಿಸುವನು.

೨೬. ಮೈತ್ರೇಯನೇ! ಸೂರ್ಯನು ದೇವತೆಗಳಿಗೆ ಹದಿನೈದು ದಿನಕ್ಕೊಂದು ಬಾರಿಯೂ, ಪಿತೃಗಳಿಗೆ ತಿಂಗಳಿಗೊಂದು ಬಾರಿಯೂ, ಮನುಜರಿಗೆ ದಿನಕ್ಕೊಂದು ಬಾರಿಯೂ ತೃಪ್ತಿಯನ್ನುಂಟುಮಾಡುವನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಹನ್ನೊಂದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ದ್ವಾದಶೋಽಧ್ಯಾಯಃ

॥ ಪರಾಶರ ಉವಾಚ ॥

ರಥಃ ತ್ರಿಚಕ್ರಃ ಸೋಮಸ್ಯ ಕುಂದಾಭಾಸ್ತಸ್ಯ ವಾಜಿನಃ ।
ವಾಮದಕ್ಷಿಣತೋ ಯುಕ್ತಾ ದಶ ತೇನ ಚರತ್ಯಸೌ ॥ ೧ ॥

ವೀಥ್ಯಾಶ್ರಯಾಣಿ ಋಕ್ಷಾಣಿ ಧ್ರುವಾಧಾರೇಣ ವೇಗಿನಾ ।
ಹ್ರಾಸವೃದ್ಧಿಕ್ರಮಸ್ತಸ್ಯ ರಶ್ಮೀನಾಂ ಸವಿತುರ್ಯಥಾ ॥ ೨ ॥

ಅರ್ಕಸ್ಯೇವ ಹಿ ತಸ್ಯಾಶ್ವಾಃ ಸಕೃದ್ಯುಕ್ತಾ ವಹಂತಿ ತೇ ।
ಕಲ್ಪಮೇಕಂ ಮುನಿಶ್ರೇಷ್ಠ ವಾರಿಗರ್ಭಸಮುದ್ಭವಾಃ ॥ ೩ ॥

ಹನ್ನೆರಡನೆಯ ಅಧ್ಯಾಯವು.

೧-೩. ಚಂದ್ರನ ರಥಕ್ಕೆ ಮೂರು ಚಕ್ರಗಳಿರುವುವು. ಆ ರಥಕ್ಕೆ ಎಡ ಬಲ ಭಾಗಗಳಲ್ಲಿ ಕಟ್ಟುವ ಹತ್ತು ಕುದುರೆಗಳು ಮಲ್ಲಿಯ ಹೂ ಬಣ್ಣದಂತೆ ಬೆಳ್ಳಗಿರುವುವು. ಚಂದ್ರನು ಆ ರಥದಲ್ಲಿ ನಾಗವೀಥಿಯೇ ಮುಂತಾದ ಮಾರ್ಗಗಳನ್ನನುಸರಿಸಿದ ಅಶ್ವಿನ್ಯಾದಿ ನಕ್ಷತ್ರ ಮಾರ್ಗಗಳನ್ನು ಧ್ರುವವನ್ನನುಸರಿಸಿದ ವೇಗದಿಂದ ಸಂಚರಿಸುತ್ತಿರುವನು. ಅವನ ಕಿರಣಗಳೂ ಕೂಡ ಸೂರ್ಯನ ಕಿರಣಗಳಂತೆ ಉದಯಾದಿ ಅಸ್ತ ಪರ್ಯಂತವಾಗಿ ಕ್ರಮವಾಗಿ ಹೆಚ್ಚುತ್ತಲೂ ಕಡಮೆಯಾಗುತ್ತಲೂ ಇರುವುವು. ಸೂರ್ಯನ ಕುದುರೆಗಳಂತೆಯೇ ನೀರಿನೊಳಗೆ ಹುಟ್ಟಿದ ಅವನ ಕುದುರೆಗಳು ಒಂದಾವೃತ್ತಿ ರಥಕ್ಕೆ ಕಟ್ಟಿದ ಮೇಲೆ ಒಂದು ಕಲ್ಪವು ಮುಗಿಯುವವರೆಗೂ ಅದನ್ನು ಎಳೆಯುತ್ತಿರುವುವು.

ಕ್ಷೀಣಂ ಪೀತಂ ಸುರೈಃ ಸೋಮಮಮಾಪ್ಯಾಯಯತಿ ದೀಪ್ತಿಮಾನ್ ।
ಮೈತ್ರೇಯೈಕಕಲಂ ಸಂತಂ ರಶ್ಮಿನೈಕೇನ ಭಾಸ್ಕರಃ ॥ ೪ ॥

ಕ್ರಮೇಣ ಯೇನ ಪೀತೋಽಸೌ ದೇವೈಸ್ತೇನ ನಿಶಾಕರಂ ।
ಆಪ್ಯಾಯಯತ್ಯನುದಿನಂ ಭಾಸ್ಕರೋ ವಾರಿತಸ್ಕರಃ ॥ ೫ ॥

ಸಂಭೃತಂ ಚಾರ್ಧಮಾಸೇನ ತತ್ಸೋಮಸ್ಥಂ ಸುಧಾ ಸ್ಮೃತಂ ।
ಪಿಬಂತಿ ದೇವಾ ಮೈತ್ರೇಯ ಸುಧಾಹಾರಾಯತೋಮರಾಃ ॥ ೬ ॥

ತ್ರಯಸ್ತ್ರಿಂಶತ್ಸಹಸ್ರಾಣಿ ತ್ರಯಸ್ತ್ರಿಂಶಚ್ಛತಾನಿ ಚ ।
ತ್ರಯಸ್ತ್ರಿಂಶತ್ತಥಾ ದೇವಾಃ ಪಿಬಂತಿ ಕ್ಷಣದಾಕರಂ ॥ ೭ ॥

ಕಲಾದ್ವಯಾವಶಿಷ್ಟಸ್ತು ಪ್ರವಿಷ್ಟಃ ಸೂರ್ಯಮಂಡಲಂ ।
ಅಮಾಖ್ಯರಶ್ಮೌ ವಸತಿ ಅಮಾವಾಸ್ಯಾ ತತಃ ಸ್ಮೃತಾ ॥ ೮ ॥

೪-೭. ಮೈತ್ರೇಯನೇ ! ಕೃಷ್ಣಪಕ್ಷದಲ್ಲಿ ದೇವತೆಗಳು ಚಂದ್ರನ ಕಲೆಯನ್ನು ಪಾನಮಾಡಿದ ಮೇಲೆ ಅಮಾವಾಸ್ಯೆಯ ದಿನ ಹದಿನೈದನೆಯ ಕಲೆಯನ್ನು ಪಿತೃಗಳು ಪಾನಮಾಡುವರು. ಆಮೇಲೆ ಕ್ಷೀಣನಾದ ಚಂದ್ರನಲ್ಲಿ ಹದಿನಾರನೆಯ ಕಲೆಯು ಒಂದೇ ಉಳಿದಿರುವುದು. ಆ ಚಂದ್ರನನ್ನು ಸೂರ್ಯನು ಸುಷುಮ್ನಾ ಎಂಬ ಒಂದು ಕಿರಣದಿಂದ ಕಲಾ ಪೂರ್ಣನಾಗಿ ಮಾಡಿ ತೃಪ್ತಿಪಡಿಸುವನು. ಯಾವ ಕ್ರಮದಲ್ಲಿ ಕೃಷ್ಣಪಕ್ಷದ ಪಾಡ್ಯದ ದಿನದಿಂದ ಅಗ್ನಿಯೇ ಮುಂತಾದ ದೇವತೆಗಳು ಚಂದ್ರನ ಕಲೆಯನ್ನು ಪಾನಮಾಡುವರೋ ಅದೇ ಕ್ರಮದಿಂದ ಪ್ರತಿದಿನವೂ ಯಾರಿಗೂ ತಿಳಿಯದಂತೆ ನೀರನ್ನು ಗ್ರಹಿಸುವ ಸೂರ್ಯನು ತಾನು ಗ್ರಹಿಸಿದ ನೀರಿನಿಂದ ಚಂದ್ರನನ್ನು ಪೂರ್ಣಕಲಾಯುತನನ್ನಾಗಿ ಮಾಡುವನು. ಹೀಗೆ ಹದಿನೈದು ದಿನದಲ್ಲಿ ಪೂರ್ಣನಾದ ಚಂದ್ರನಲ್ಲಿರುವ ಅಮೃತ ರಸವನ್ನು ಅಮೃತವೇ ಆಹಾರವುಳ್ಳ ಸಮಸ್ತ ದೇವತೆಗಳೂ ಪಾನಮಾಡುವರು.

೮-೯. ಎರಡು ಕಳೆಯನ್ನು ಮಾತ್ರ ಉಳಿಸಿಕೊಂಡಿರುವ ಚಂದ್ರನು ಸೂರ್ಯಮಂಡಲವನ್ನು ಪ್ರವೇಶಿಸಿ ಅಮಾ ಎಂಬ ಕಿರಣದಲ್ಲಿ ವಾಸಮಾಡುವುದರಿಂದ ಆ

ಅಪ್ಸು ತಸ್ಮಿನ್ ಅಹೋರಾತ್ರೇ ಪೂರ್ವಂ ವಿಶತಿ ಚಂದ್ರಮಾಃ ।
ತತೋ ವೀರುತ್ಸು ವಸತಿ ಪ್ರಯಾತ್ಯರ್ಕಂ ತತಃ ಕ್ರಮಾತ್ ॥ ೯ ॥

ಛಿನತ್ತಿ ವೀರುಧೋ ಯಸ್ತು ವೀರುತ್ಸಂಸ್ಥೇ ನಿಶಾಕರೇ ।
ಪತ್ರಂ ವಾ ಪಾತಯತ್ಯೇಕಂ ಬ್ರಹ್ಮಹತ್ಯಾಂ ಸ ವಿಂದತಿ ॥ ೧೦ ॥

ಸೋಮಂ ಪಂಚದಶೇ ಭಾಗೇ ಕಿಂಚಿಚ್ಛಿಷ್ಟೇ ಕಲಾತ್ಮಕೇ ।
ಅಪರಾಹ್ಣೇ ಪಿತೃಗಣಾ ಜಘನ್ಯಂ ಪರ್ಯುಪಾಸತೇ ॥ ೧೧ ॥

ಪಿಬಂತಿ ದ್ವಿಕಲಾ ಕಾರಂ ಶಿಷ್ಟಾ ತಸ್ಯ ಕಲಾತು ಯಾ ।
ಸುಧಾಮೃತಮಯೀ ಪುಣ್ಯಾ ತಾಮಿಂದೋಃ ಪಿತರೋ ಮುನೇ ॥ ೧೨ ॥

ನಿಃ ಸೃತಂ ತದಮಾವಾಸ್ಯಾಂ ಗಭಸ್ತಿಭ್ಯಃ ಸುಧಾಮೃತಂ ।
ಮಾಸತೃಪ್ತಿಮವಾಪ್ಯಾಗ್ರ್ಯ್ಯ ಪಿತರಃ ಸಂತಿ ನಿರ್ವೃತಾಃ ॥ ೧೩ ॥

ದಿನಕ್ಕೆ ಅಮಾವಾಸ್ಯೆ ಎಂದು ಹೆಸರು. ಆ ದಿನ ಚಂದ್ರನು ನೀರಿನಲ್ಲಿ ಪ್ರವೇಶಿಸಿದ ಮೇಲೆ ಬಳ್ಳಿಗಳಲ್ಲಿ ವಾಸಮಾಡುವನು. ಬಳಿಕ ಕ್ರಮವಾಗಿ ಸೂರ್ಯನನ್ನು ಸೇರುವನು.

೧೦–೧೩. ಚಂದ್ರನು ಬಳ್ಳಿಗಳಲ್ಲಿರುವಾಗ ಆ ಬಳ್ಳಿಗಳನ್ನು ಯಾರು ಕತ್ತರಿಸುವರೋ ಅಥವಾ ಅದರ ಒಂದು ಎಲೆಯನ್ನಾದರೂ ಯಾರು ಕೆಡಹುವರೋ ಅವರು ಬ್ರಹ್ಮಹತ್ಯೆಯ ಪಾಪವನ್ನು ಪಡೆವರು. ಕೃಷ್ಣಪಕ್ಷದ ಹದಿನೈದನೆಯ ತಿಥಿಯಲ್ಲಿ ಚಂದ್ರನ ಹದಿನೈದನೆಯ ಕಳೆಯು ಸ್ವಲ್ಪವಾಗಿ ಉಳಿದಿರಲು ಅಪರಾಹ್ಣ ಕಾಲದಲ್ಲಿ ಪಿತೃಗಣಗಳು ಅಮೃತಪಾನಾರ್ಥವಾಗಿ ಕಳಾರೂಪವಾದ ಚಂದ್ರನನ್ನು ಸೇವಿಸುವರು. ಎರಡು ಕಳೆಗಳು ಉಳಿದಿರುವ ಚಂದ್ರನಲ್ಲಿರುವ ಹದಿನೈದನೆಯ ಕಳೆಯು ಪುಣ್ಯಕರವೂ, ಅಮೃತಸ್ವರೂಪವೂ ಆದುದರಿಂದ ಪಿತೃಗಳು ಅದನ್ನೇ ಪಾನಮಾಡುವರು ಸೌಮ್ಯರು, ಬರ್ಹಿಷದರು, ಅಗ್ನಿಷ್ವಾತ್ತರು ಎಂಬ ಮೂರು ಬಗೆಯ ಪಿತೃಗಳು ಅಮಾವಾಸ್ಯೆಯಲ್ಲಿ ಕಿರಣಗಳಿಂದ ಹೊರಟ ಅಮೃತವನ್ನು ಪಾನಮಾಡಿ ಮಾಸತೃಪ್ತಿಯನ್ನು ಪಡೆದು ಸುಖ ಹೊಂದುವರು.

ಸೌಮ್ಯಾ ಬರ್ಹಿಷದಶ್ಚೈವ ಅಗ್ನಿಷ್ವಾತ್ತಾಶ್ಚ ತೇ ತ್ರಿಧಾ ।
ಏವಂ ದೇವಾನ್ ಸಿತೇ ಪಕ್ಷೇ ಕೃಷ್ಣೇ ಪಕ್ಷೇ ತಥಾ ಪಿತೄನ್ ॥
ವೀರುಧಶ್ಚಾಮೃತಮಯೈಃ ಶೀತೈರಪ್ಪರಮಾಣುಭಿಃ ॥ ೧೪ ॥

ವೀರುಧೋಷಧಿನಿಷ್ಪತ್ತ್ಯಾ ಮನುಷ್ಯ ಪಶುಕೀಟಕಾನ್ ।
ಆಪ್ಯಾಯಯತಿ ಶೀತಾಂಶುಃ ಪ್ರಕಾಶಾಹ್ಲಾದನೇನ ಚ ॥ ೧೫ ॥

ವಾಯ್ವಗ್ನಿದ್ರವ್ಯ ಸಂಭೂತೋ ರಥಶ್ಚಂದ್ರಸುತಸ್ಯ ಚ ।
ಪಿಶಂಗೈಸ್ತುರಗೈರ್ಯುಕ್ತಃ ಸೋಽಷ್ಟಾಭಿರ್ವಾಯುವೇಗಿಭಿಃ ॥ ೧೬ ॥

ಸವರೂಥಃ ಸಾನುಕರ್ಷೋ ಯುಕ್ತೋ ಭೂಸಂಭವೈರ್ಹಯೈಃ ।
ಸೋಪಾಸಂಗಪತಾಕಸ್ತು ಶುಕ್ರಸ್ಯಾಪಿ ರಥೋ ಮಹಾನ್ ॥ ೧೭ ॥

ಅಷ್ಟಾಭಿಃ ಕಾಂಚನಃ ಶ್ರೀಮಾನ್ ಭೌಮಸ್ಯಾಪಿ ರಥೋ ಮಹಾನ್ ।
ಪದ್ಮರಾಗಾರುಣೈರಶ್ವೈಃ ಸಂಯುಕ್ತೋ ವಹ್ನಿಸಂಭವೈಃ ॥ ೧೮ ॥

೧೪–೧೫. ಚಂದ್ರನು ಶುಕ್ಲಪಕ್ಷದಲ್ಲಿ ದೇವತೆಗಳನ್ನೂ ಕೃಷ್ಣಪಕ್ಷದಲ್ಲಿ ಪಿತೃಗಳನ್ನೂ ತೃಪ್ತಿಪಡಿಸಿ ಅಮೃತಮಯವಾಗಿ ತಣ್ಣಗಿರುವ ನೀರಿನ ಪರಮಾಣುಗಳಿಂದ ಬಳ್ಳಿಗಳನ್ನೂ, ಸಸ್ಯಗಳನ್ನೂ ಬೆಳೆಸಿ ಅವುಗಳ ಫಲಗಳಿಂದ ಮನುಷ್ಯರನ್ನೂ, ಪಶುಪಕ್ಷಿಗಳೇ ಮುಂತಾದ ಜಂತುಗಳನ್ನೂ ತೃಪ್ತಿಪಡಿಸುವನು. ತನ್ನ ಪ್ರಕಾಶದಿಂದ ಎಲ್ಲರನ್ನೂ ಆನಂದಗೊಳಿಸುವನು.

೧೬–೧೭. ಚಂದ್ರನ ಸುತನಾದ ಬುಧನ ರಥವು ವಾಯು ಮತ್ತು ಅಗ್ನಿ ರೂಪವಾದ ವಸ್ತುಗಳಿಂದ ಹುಟ್ಟಿದುದು. ಆ ರಥಕ್ಕೆ ಪಿಂಗಳ ವರ್ಣವುಳ್ಳ ವಾಯುವಿನಂತೆ ನಡಿಗೆಯುಳ್ಳ ಎಂಟು ಕುದುರೆಗಳನ್ನು ಕಟ್ಟಿರುವುದು. ಆ ರಥದಲ್ಲಿ ರಥಿಕನು ಮರೆಯಾಗಿರುವ ಪ್ರದೇಶವೂ ನೊಗದ ಕೆಳಗಿನ ಹಲಗೆಗಳೂ ಪತಾಕೆಗಳೂ ಇರುವುವು.

೧೮–೧೯. ಶುಕ್ರನ ರಥವು ದೊಡ್ಡದಾಗಿ ಚಿನ್ನದಿಂದ ಮಾಡಿದುದಾಗಿಯೂ, ಕಾಂತಿಯುಕ್ತವಾದುದಾಗಿಯೂ, ಎಂಟು ಕುದುರೆಗಳನ್ನು ಕಟ್ಟಿದುದಾಗಿಯೂ ಇರು

ಅಷ್ಟಾಭಿಃ ಪಾಂಡುರೈರ್ಯುಕ್ತೋ ವಾಜಿಭಿಃ ಕಾಂಚನೋ ರಥೇ ।
ತಸ್ಮಿನ್ ತಿಷ್ಠತಿ ವರ್ಷಂ ವೈ ರಾಶೌ ರಾಶೌ ಬೃಹಸ್ಪತಿಃ ॥ ೧೯ ॥

ಆಕಾಶಸಂಭವೈರಶ್ವೈಃ ಶಬಲೈಃ ಸ್ಯಂದನಂ ಯುತಂ ।
ಸಮಾರುಹ್ಯ ಶನೈರ್ಯಾತಿ ಮಂದಗಾಮೀ ಶನೈಶ್ಚರಃ ॥ ೨೦ ॥

ಸ್ವರ್ಭಾನೋಸ್ತುರಗಾಹ್ಯಷ್ಟೌ ಭೃಂಗಾಭಾ ಧೂಸರಂ ರಥಂ ।
ಸಕೃದ್ಯುಕ್ತಾಸ್ತು ಮೈತ್ರೇಯ ವಹಂತ್ಯವಿರತಂ ಸದಾ ॥ ೨೧ ॥

ಆದಿತ್ಯಾನ್ನಿಸ್ಸೃತೋ ರಾಹುಃ ಸೋಮಂ ಗಚ್ಛತಿ ಪರ್ವಸು ।
ಆದಿತ್ಯಮೇತಿ ಸೋಮಾಚ್ಚ ಪುನಃ ಸೌರೇಷು ಪರ್ವಸು ॥ ೨೨ ॥

ತಥಾ ಕೇತುರಥಸ್ಯಾಶ್ವಾ ಅಷ್ಟೌ ತೇ ವಾತರಂಹಸಃ ।
ಪಲಾಲಧೂಮವರ್ಣಾಭಾ ಲಾಕ್ಷಾರಸನಿಭಾರುಣಾಃ ॥ ೨೩ ॥

ವುದು. ಅಂಗಾರಕನ ರಥವು ದೊಡ್ಡದಾಗಿ ಅಗ್ನಿಯಲ್ಲಿ ಹುಟ್ಟಿದ ಪದ್ಮರಾಗದ ಬಣ್ಣದಂತೆ ಕೆಂಪಾದ ಕುದುರೆಗಳನ್ನು ಕಟ್ಟಿದುದಾಗಿರುವುದು. ಬಿಳಿದಾದ ಎಂಟು ಕುದುರೆಗಳನ್ನು ಕಟ್ಟಿದ ಚಿನ್ನದ ತೇರಿನಲ್ಲಿರುವ ಬೃಹಸ್ಪತಿಯು ಒಂದೊಂದು ವರ್ಷ ಒಂದೊಂದು ರಾಶಿಯಲ್ಲಿರುವನು.

೨೦-೨೩. ಆಕಾಶದಲ್ಲಿ ಹುಟ್ಟಿದ ಚಿತ್ರವರ್ಣದ ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತು ನಿಧಾನವಾದ ನಡಿಗೆಯುಳ್ಳ ಶನಿಯು ನಿಲ್ಲಗೆ ನಡೆಯುತ್ತಿರುವನು. ರಾಹುವಿಗೆ ಎಂಟು ಕರಿಯ ಕುದುರೆಗಳನ್ನು ಕಟ್ಟಿದ ಬೂದಿಯ ಬಣ್ಣದ ರಥವಿರುವುದು ಆ ರಥದಲ್ಲಿ ಕುಳಿತು ರಾಹುವು ಕಲ್ಪಾಂತ ಪರ್ಯಂತವಾಗಿ ಸಂಚರಿಸುತ್ತ ಚಂದ್ರಗ್ರಹಣ ಕಾಲದಲ್ಲಿ ಸೂರ್ಯನಿಂದ ಚಂದ್ರನ ಸಮೀಪಕ್ಕೂ, ಸೂರ್ಯಗ್ರಹಣ ಕಾಲದಲ್ಲಿ ಚಂದ್ರನಿಂದ ಸೂರ್ಯನ ಸಮೀಪಕ್ಕೂ ಹೋಗುವನು. ಕೇತುವಿನ ರಥಕ್ಕೆ ವಾಯುವೇಗದ ಎಂಟು ಕುದುರೆಗಳಿರುವುವು. ಅವು ಹೊಟ್ಟಿನಂತೆ ಹೊಗೆಯಬಣ್ಣವಾಗಿಯೂ ಅರಗಿನಂತೆ ಕೆಂಪು ಬಣ್ಣವಾಗಿಯೂ ಇರುವುವು.

ಏತೇ ಮಯಾ ಗ್ರಹಾಣಾಂ ವೈ ತವಾಖ್ಯಾತಾ ರಥಾ ನವ ।
ಸರ್ವೇ ಧ್ರುವೇ ಮಹಾಭಾಗ ಪ್ರಬದ್ಧಾ ವಾಯುರಶ್ಮಿಭಿಃ ॥ ೨೪ ॥

ಗ್ರಹರ್ಕ್ಷತಾರಾಧಿಷ್ಣ್ಯಾನಿ ಧ್ರುವೇ ಬದ್ಧಾನ್ಯಶೇಷತಃ ।
ಭ್ರಮಂತ್ಯುಚಿತಚಾರೇಣ ಮೈತ್ರೇಯಾನಿಲರಶ್ಮಿಭಿಃ ॥ ೨೫ ॥

ಯಾವಂತ್ಯಶ್ಚೈವ ತಾರಾಸ್ತಾಸ್ತಾವಂತೋ ವಾತರಶ್ಮಯಃ ।
ಸರ್ವೇ ಧ್ರುವನಿಬದ್ಧಾಸ್ತೇ ಭ್ರಮಂತೋ ಭ್ರಾಮಯಂತಿ ತಂ ॥ ೨೬ ॥

ತೈಲಪೀಡಾ ಯಥಾ ಚಕ್ರಂ ಭ್ರಮಂತೋ ಭ್ರಾಮಯಂತಿ ವೈ ।
ತಥಾ ಭ್ರಮಂತಿ ಜ್ಯೋತೀಂಷಿ ವಾತವಿದ್ಧಾನಿ ಸರ್ವಶಃ ॥ ೨೭ ॥

ಅಲಾತಚಕ್ರವದ್ಯಾಂತಿ ವಾತಚಕ್ರೇರಿತಾನಿ ತು ।
ಯಸ್ಮಾಜ್ಜ್ಯೋತೀಂಷಿ ವಹತಿ ಪ್ರವಹಸ್ತೇನ ಸಂಸ್ಮೃತಃ. ॥ ೨೮ ॥

೨೪-೨೬. ಮೈತ್ರೇಯನೇ ! ನವಗ್ರಹಗಳ ರಥಗಳನ್ನು ನಿನಗೆ ಹೇಳಿದೆನು. ಸಮಸ್ತ ಗ್ರಹಗಳ ರಥಗಳೂ ವಾಯುರೂಪವಾದ ಹಗ್ಗಗಳಿಂದ ಧ್ರುವನಿಗೆ ಸಂಬಂಧಿಸಿರುವುವು. ಗ್ರಹಗಳು ಅಶ್ವಿನ್ಯಾದಿ ನಕ್ಷತ್ರಗಳು ಸಮಸ್ತ ನಕ್ಷತ್ರ ಮಂಡಲಗಳೂ ವಾಯುರೂಪವಾದ ಹಗ್ಗಗಳಿಂದ ಧ್ರುವ ಮಂಡಲಕ್ಕೆ ಸಂಬಂಧಿಸಿ ಅವುಗಳಿಗೆ ತಕ್ಕ ವೇಗಗಳಿಂದ ತಿರುಗುತ್ತಿರುವುವು. ಎಷ್ಟು ನಕ್ಷತ್ರಗಳಿವೆಯೋ ಅಷ್ಟು ಪ್ರವಹ ಎಂಬ ವಾಯುರೂಪವಾದ ಹಗ್ಗಗಳು ಧ್ರುವನಿಗೆ ಸಂಬಂಧಿಸಿ ತಾವೂ ತಿರುಗುತ್ತ ಧ್ರುವನನ್ನೂ ತಿರುಗಿಸುತ್ತಿರುವುವು.

೨೭-೨೮. ಎಣ್ಣೆಯ ಗಾಣವು ತಾನು ತಿರುಗುತ್ತಾ ಸುತ್ತಲೂ ಚಕ್ರವನ್ನು ತಿರುಗಿಸುವಂತೆ ಜ್ಯೋತಿಶ್ಚಕ್ರಗಳು ಗಾಳಿಯು ತಳ್ಳುವುದರಿಂದ ಧ್ರುವದ ಸುತ್ತಲೂ ಸುತ್ತುತ್ತಿರುವುವು. ವಾಯುವು ಜ್ಯೋತಿಶ್ಚಕ್ರವನ್ನು ಕೊಳ್ಳಿಯನ್ನು ತಿರುಗಿಸುವುದರಿಂದ ಚಕ್ರದಂತೆ ಕಾಣುವ ಹಾಗೆ ತಿರುಗಿಸುತ್ತಿರುವುದರಿಂದ ಆ ವಾಯುವಿಗೆ ಪ್ರವಹವೆಂದು ಹೆಸರು ಬಂದಿರುವುದು.

ಶಿಂಶುಮಾರಸ್ತು ಯಃ ಪ್ರೋಕ್ತಃ ಸ ಧ್ರುವೋ ಯತ್ರತಿಷ್ಠತಿ।
ಸನ್ನಿವೇಶಂ ಚ ತಸ್ಯಾಪಿ ಶೃಣುಷ್ವ ಮುನಿಸತ್ತಮ ॥ ೨೯ ॥

ಯದಹ್ನಾ ಕುರುತೇ ಪಾಪಂ ದೃಷ್ಟ್ವಾ ತಂ ನಿಶಿಮುಚ್ಯತೇ ।
ಯಾವಂತ್ಯಶ್ಚೈವ ತಾರಾಸ್ತಾಃ ಶಿಂಶುಮಾರಾಶ್ರಿತಾ ದಿವಿ ॥ ೩೦ ॥

ತಾವಂತ್ಯೇವ ತು ವರ್ಷಾಣಿ ಜೀವಂತ್ಯಭ್ಯಧಿಕಾನಿ ತು ।
ಉತ್ತಾನಪಾದಸ್ತಸ್ಯಾಧೋ ವಿಜ್ಞೇಯೋಹ್ಯುತ್ತರೋ ಹನುಃ ॥ ೩೧ ॥

ಯಜ್ಞೋಧರಶ್ಚ ವಿಜ್ಞೇಯೋ ಧರ್ಮೋ ಮೂರ್ಧಾನಮಾಶ್ರಿತಃ ।
ಹೃದಿ ನಾರಾಯಣಶ್ಚಾಸ್ತೇ ಅಶ್ವಿನೌ ಪೂರ್ವಪಾದಯೋಃ ॥ ೩೨ ॥

ವರುಣಶ್ಚಾರ್ಯಮಾ ಚೈವ ಪಶ್ಚಿಮೇ ತಸ್ಯ ಸಕ್ಥಿನೀ ।
ಶಿಶ್ನಃ ಸಂವತ್ಸರಸ್ತಸ್ಯ ಮಿತ್ರೋಪಾನಂ ಸಮಾಶ್ರಿತಃ ॥ ೩೩ ॥

೨೯-೩೦ ಇನ್ನು ಧ್ರುವನಿರುವ ಶಿಂಶುಮಾರ ಚಕ್ರವಿರುವ ಬಗೆಯನ್ನು ಹೇಳುವೆನು ಕೇಳು. ಪ್ರತಿರಾತ್ರಿಯಲ್ಲಿ ಅದರ ದರ್ಶನವನ್ನು ಮಾಡಿದರೆ ಹಗಲು ಮಾಡಿದ ಪಾಪಗಳೆಲ್ಲ ನಾಶವಾಗುವುವು. ಮತ್ತು ಆ ಶಿಂಶುಮಾರ ಚಕ್ರದಲ್ಲಿ ಎಷ್ಟು ನಕ್ಷತ್ರಗಳಿರುವುವೋ ಅಷ್ಟು ವರ್ಷಗಳವರೆಗೆ ಆಯುಸ್ಸು ಹೆಚ್ಚುವುದು.

೩೧-೩೪. ಶಿಂಶುಮಾರ ಚಕ್ರದಲ್ಲಿ ನಕ್ಷತ್ರರೂಪದಲ್ಲಿ ಶಿಂಶುಮಾರದ ಅವಯವಗಳಲ್ಲಿ ದೇವತೆಗಳಿರುವುದನ್ನು ಹೇಳಲಾಗುವುದು. ಶಿಂಶುಮಾರಾಕೃತಿಯು ಬಾಲದ ತುದಿಯಲ್ಲಿ ಧ್ರುವನೂ, ಎಡಬಲದ ಎರಡು ಕೆನ್ನೆಗಳಲ್ಲಿ ಯಜ್ಞ, ಧರ ಎಂಬುವರೂ, ತಲೆಯಲ್ಲಿ ಧರ್ಮನೂ, ಹೃದಯದಲ್ಲಿ ನಾರಾಯಣನೂ, ಮುಂಗಾಲುಗಳಲ್ಲಿ ಅಶ್ವಿನೀದೇವತೆಗಳೂ, ಹಿಂಭಾಗದ ತೊಡೆಯಲ್ಲಿ ವರುಣ ಮತ್ತು ಅರ್ಯಮನೂ ಶಿಶ್ನದಲ್ಲಿ ಸಂವತ್ಸರನೂ, ಅಪಾನದಲ್ಲಿ ಮಿತ್ರನೂ, ಬಾಲದಲ್ಲಿ ಅಗ್ನಿ, ಇಂದ್ರ, ಬ್ರಹ್ಮ, ಅಭಯ ಎಂಬ ನಾಲ್ಕು ದೇವತೆಗಳೂ ಇರುವರು. ಶಿಂಶುಮಾರದ ಅವಯುವಗಳಲ್ಲಿರುವ

ಪುಚ್ಛೇಽಗ್ನಿಶ್ಚ ಮಹೇಂದ್ರಶ್ಚ ಕಶ್ಯಪೋಽಥ ತತೋ ಧ್ರುವಃ ।
ತಾರಕಾ ಶಿಂಶುಮಾರಸ್ಯ ನಾಸ್ತಮೇತಿ ಚತುಷ್ಟಯಂ ॥ ೩೪ ॥

ಇತ್ಯೇಷ ಸನ್ನಿವೇಶೋ ವಃ ಪೃಥಿವ್ಯಾ ಜ್ಯೋತಿಷಾಂ ತಥಾ ।
ದ್ವೀಪಾನಾಮುದಧೀನಾಂ ಚ ಪರ್ವತಾನಾಂ ಚ ಕೀರ್ತಿತಃ ॥ ೩೫ ॥

ವರ್ಷಾಣಾಂ ಚ ನದೀನಾಂ ಚ ಯೇ ಚ ತೇಷು ವಸಂತಿ ವೈ ।
ತೇಷಾಂ ಸ್ವರೂಪಮಾಖ್ಯಾತಂ ಸಂಕ್ಷೇಪಾಚ್ಛ್ರೂಯತಾಂ ಪುನಃ ॥ ೩೬ ॥

ಯದಂಬು ವೈಷ್ಣವಃ ಕಾಯಃ ತತೋ ವಿಪ್ರ ವಸುಂಧರಾ ।
ಪದ್ಮಾಕಾರಾ ಸಮುದ್ಭೂತಾ ಪರ್ವತಾಬ್ಧ್ಯಾದಿಸಂಯುತಾ ॥ ೩೭ ॥

ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುಃ
ವನಾನಿ ವಿಷ್ಣುರ್ಗಿರಯೋ ದಿಶಶ್ಚ ।

ಕೊನೆಯ ಈ ನಾಲ್ಕು ದೇವತಾರೂಪವಾದ ನಕ್ಷತ್ರಗಳು ಅಸ್ತವಾಗುವುದಿಲ್ಲ. ಧ್ರುವ ಸಹಿತವಾಗಿ ಈ ಐದು ನಕ್ಷತ್ರಗಳು ಯಾವಾಗಲೂ ಪ್ರಕಾಶಿಸುತ್ತಿರುವುವು.

೩೫-೩೬. ಮೈತ್ರೇಯನೇ! ಭೂಮಿ, ಜ್ಯೋತಿಶ್ಚಕ್ರ, ದ್ವೀಪಗಳು, ಸಮುದ್ರಗಳು, ಪರ್ವತಗಳು, ವರ್ಷಗಳು, ನದಿಗಳು, ವರ್ಷವಾಸಿಗಳ ಸ್ವರೂಪ, ಇವುಗಳೆಲ್ಲವನ್ನೂ ವಿಸ್ತಾರವಾಗಿ ಹೇಳಿದೆನು. ಪುನಃ ಅವುಗಳನ್ನೇ ಸಂಗ್ರಹವಾಗಿ ಹೇಳುವೆನು ಕೇಳು.

೩೭-೩೮. ಮಹಾ ಸಮುದ್ರೋದಕವು ವಿಷ್ಣುವಿನ ಶರೀರವು. ಆ ಮಹಾ ಸಮುದ್ರದ ಗರ್ಭೋದಕದಲ್ಲಿ ಪರ್ವತ ಸಮುದ್ರಾದಿಗಳಿಂದ ಕೂಡಿದ ಭೂಮಿಯು ಕಮಲದ ಆಕಾರದಲ್ಲಿ ಹುಟ್ಟಿತು. ಅದೂ ವಿಷ್ಣುವಿನ ಸ್ವರೂಪವಾದುದು. ತೇಜೋರೂಪವಾದ ಗ್ರಹಗಳೂ, ಲೋಕಗಳೂ, ವನಗಳೂ, ಪರ್ವತಗಳು, ದಿಕ್ಕುಗಳು,

ಸದ್ಯಃ ಸಮುದ್ರಾಶ್ಚ ಸ ಏವ ಸರ್ವಂ
ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥ ೩೮ ॥

ಜ್ಞಾನಸ್ವರೂಪೋ ಭಗವಾನ್ಯತೋಽಸೌ
ಅಶೇಷಮೂರ್ತಿರ್ನ ತು ವಸ್ತುಭೂತಃ ।
ತತೋ ಹಿ ಶೈಲಾಬ್ಧಿಧರಾದಿಭೇದಾನ್
ಜಾನೀಹಿ ವಿಜ್ಞಾನವಿಜೃಂಭಿತಾನಿ ॥ ೩೯ ॥

ಯದಾ ತು ಶುದ್ಧಂ ನಿಜರೂಪಿ ಸರ್ವಂ
ಕರ್ಮಕ್ಷಯೇ ಜ್ಞಾನಮಪಾಸ್ತದೋಷಂ ।
ತದಾ ಹಿ ಸಂಕಲ್ಪತರೋಃ ಫಲಾನಿ
ಭವಂತಿ ನೋ ವಸ್ತುಷು ವಸ್ತುಭೇದಾಃ ॥ ೪೦ ॥

ನದಿಗಳು, ಸಮುದ್ರಗಳು, ಭಾವರೂಪವಾದ ಮತ್ತು ಅಭಾವರೂಪವಾದ ಸಮಸ್ತ ವಸ್ತುಗಳೂ ವಿಷ್ಣುಸ್ವರೂಪಗಳಾಗಿಯೇ ಇರುವುವು.

೩೯. ಮಹಾಮಹಿಮನಾದ ವಿಷ್ಣುವು ವಸ್ತುರೂಪವೆಂದ ಪ್ರಪಂಚಸ್ವರೂಪನಾಗಿಲ್ಲ. ಜ್ಞಾನ ಸ್ವರೂಪದಿಂದ ಪ್ರಪಂಚಸ್ವರೂಪನಾಗಿರುವನು. ಆದುದರಿಂದ ಪರ್ವತ, ಸಮುದ್ರ, ಭೂಮಿ ಮುಂತಾದ ಭೇದಗಳು ಆತ್ಮಾಯುತರೂಪವಾದ ಜ್ಞಾನದಲ್ಲಿ ಮಾಯೆಯಿಂದ ಪ್ರಕಾಶಿಸುತ್ತಿರುವುವೆಂದು ತಿಳಿಯಬೇಕು.

೪೦. ಪ್ರತಿಬಂಧ ರೂಪವಾದ ಕರ್ಮ ಕ್ಷಯವಾದಮೇಲೆ ಈ ಸಮಸ್ತ ಜಗತ್ತೂ ಶುದ್ಧವಾದ ಆತ್ಮಸ್ವರೂಪವಾಗಿ ಅಶುಭಾವವೇ ಮೊದಲಾದ ದೋಷಗಳಿಲ್ಲದುದಾಗಿ ಜ್ಞಾನಸ್ವರೂಪವೇ ಆಗುವುದು. ಆಗ ಸಂಕಲ್ಪದಿಂದುಂಟಾದ ಅವಸ್ತುಗಳಾದ ಭೂಮಿ ಮೊದಲಾದವುಗಳಲ್ಲಿ ವಸ್ತುರೂಪವಾದ ಭೇದಗಳು (ನಾಶವಾಗುವುವು) ಕಾಣದೆ ಹೋಗುವುವು. "ಯತ್ರತ್ವಸ್ಯ ಸರ್ವಮಾತ್ಮೈವಾಭೂತ್ತತ್ಕೇನ ಕಂಪಶ್ಯೇತ್" ಎಂಬ ಶ್ರುತಿಯೇ ಇದಕ್ಕೆ ಪ್ರಮಾಣವು.

ವಸ್ತ್ವಸ್ತಿ ಕಿಂ ಕುತ್ರಚಿದಾದಿಮಧ್ಯ
ಪರ್ಯಂತ ಹೀನಂ ಚಸದೈಕರೂಪಂ ।
ಯಚ್ಚಾನ್ಯಥಾತ್ವಂ ದ್ವಿಜ ಯಾತಿ ಭೂಯೋ
ನ ತತ್ತಥಾ ತತ್ರ ಕುತೋ ಹಿ ತತ್ತ್ವಂ ॥ ೪೧ ॥

ಮಹೀಘಟತ್ವಂ ಘಟತಃ ಕಪಾಲಿಕಾ
ಕಪಾಲಿಕಾಚೂರ್ಣರಜಸ್ತತೋಽಣುಃ ।
ಜನ್ಯೈಃ ಸ್ವಕರ್ಮಸ್ತಿಮಿತಾತ್ಮನಿಶ್ಚಯೈಃ
ಆಲಕ್ಷ್ಯತೇ ಬ್ರೂಹಿ ಕಿಮತ್ರ ವಸ್ತು ॥ ೪೨ ॥

---

೪೧. ಆದಿ ಮಧ್ಯಾಂತವಿಲ್ಲದ ಸದಾ ಏಕರೂಪವಾಗಿರುವ ಆತ್ಮ ತತ್ತ್ವದಲ್ಲಿ ಯಾವ ವಸ್ತುವು ಎಲ್ಲಿರುವುದು ? ಉತ್ಪತ್ತಿಗೆ ಪೂರ್ವದಲ್ಲಿಯೂ, ನಾಶವಾದ ಮೇಲೂ ಇಲ್ಲದ ಪರಿಣಾಮ ರೂಪ ವಿಕಾರವುಳ್ಳ ಜಗತ್ತು ಕಪ್ಪೆಯ ಚಿಪ್ಪಿನಲ್ಲಿ ಕಾಣುವ ಬೆಳ್ಳಿಯಂತೆ ಸತ್ಯವಾದುದಲ್ಲ.

೪೨. ಮಣ್ಣು ಮೊದಲು ಉಂಡೆಯಾಗಿ ಘಟವಾಗುವುದು. ಘಟವು ನಾಶವಾಗಿ ಕಪಾಲವಾಗಿಯೂ, ಕಪಾಲವು ಹುಡಿ ಮಣ್ಣಾಗಿಯೂ, ಆ ಮೇಲೆ ಅಣುರೂಪವಾಗಿಯೂ ಕಾಣುವುದು. 'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' ಎಂಬ ವೇದ ವಚನದಂತೆ ವಿಕಾರಗಳೆಲ್ಲ ಪರಿಣಾಮ ರೂಪಗಳಾದುದರಿಂದ ಅಸತ್ಯವಾದುವುಗಳು. ಕಾರಣರೂಪವಾದ ಮಣ್ಣು ಮಾತ್ರ ಎಲ್ಲ ವಿಕಾರಗಳಲ್ಲಿಯೂ ಅನುವರ್ತಿಸಿರುವುದರಿಂದ ಸತ್ಯವಾದುದೆನಿಸುವುದು. ಜನರು ತಮ್ಮ ಕರ್ಮಫಲಾನುಭವ ರೂಪವಾದ ಪ್ರತಿಬಂಧಕದಿಂದ ಆತ್ಮಜ್ಞಾನವಿಲ್ಲದವರಾಗಿ ಈ ಪರಿಣಾಮಪರಂಪರೆಯಲ್ಲಿ ಯಾವುದು ಸತ್ಯವಾದ ವಸ್ತುವೆಂದು ತಿಳಿಯುವರು? (ಆತ್ಮಜ್ಞಾನವಿಲ್ಲದವರಿಗೆ ಸದ್ರೂಪವಾದ ಆತ್ಮತತ್ತ್ವಜ್ಞಾನವಾಗುವುದಿಲ್ಲವೆಂದು ಭಾವವು.)

ತಸ್ಮಾನ್ನ ವಿಜ್ಞಾನಮೃತೇಽಸ್ತಿ ಕಿಂಚಿತ್
ಕ್ವಚಿತ್ಕದಾಚಿತ್ ದ್ವಿಜ ವಸ್ತುಜಾತಂ ।
ವಿಜ್ಞಾನಮೇಕಂ ನಿಜ ಕರ್ಮಭೇದ
ವಿಭಿನ್ನ ಚಿತ್ತೈರ್ಬಹುಧಾಭ್ಯುಪೇತಂ ॥ ೪೩ ॥

ಜ್ಞಾನಂ ವಿ ಶುದ್ಧಂ ವಿಮಲಂಚ ನಿತ್ಯ
ಮಶೇಷಶೋಕಾದಿನಿರಸ್ತಸಂಗಂ ।
ಏಕಃ ಸದೈಕಂ ಪರಮಃ ಪರೇಶಃ
ಸ ವಾಸುದೇವೋ ನ ಯತೋಽನ್ಯದಸ್ತಿ ॥ ೪೪ ॥

ಸದ್ಭಾವ ಏಷೋ ಭವತೋ ಮಯೋಕ್ತೋ
ಜ್ಞಾನಂ ಯಥಾ ಸತ್ಯಮಸತ್ಯಮನ್ಯತ್ ।
ಏತತ್ತು ಯತ್ಸಂವ್ಯವಹಾರಭೂತಂ
ತತ್ರಾಪಿ ಚೋಕ್ತಂ ಭುವನಾಶ್ರಿತಂ ತೇ ॥ ೪೫ ॥

---

೪೩. । ಆದುದರಿಂದ ಮೈತ್ರೇಯನೇ! ಜ್ಞಾನವನ್ನು ಬಿಟ್ಟು ಎಲ್ಲಿಯೂ ಯಾವಾಗಲೂ ಯಾವ ವಸ್ತುವೂ ಇರುವುದಿಲ್ಲ. ಜ್ಞಾನವೇ ಅವರವರ ಕರ್ಮಭೇದದಿಂದ ಉಂಟಾದ ಬೇರೆ ಮನಸ್ಸಿನಿಂದ ವಸ್ತುಗಳನ್ನು ಅನೇಕ ಬಗೆಯಾಗಿ ತಿಳಿವಂತೆ ಮಾಡುವುದು.

೪೪. ಜ್ಞಾನನೆಂಬುದು ವಿಷಯಭೋಗಗಳಿಲ್ಲದುದು, ರಾಗದ್ವೇಷಾದಿ ದೋಷಗಲಿಲ್ಲದುದು, ಶಾಶ್ವತವಾದುದು. ಸುಖ ದುಃಖಾದಿಗಳ ಸಂಬಂಧವಿಲ್ಲದುದು. ಏಕರೂಪವಾದುದು. ಸರ್ವೋತ್ತಮವಾದುದು, ಅದು ಪರಮೇಶ್ವರನಾದ ವಾಸುದೇವ ಸ್ವರೂಪವಾದುದು. ಇದನ್ನು ಬಿಟ್ಟು ಮತ್ತೊಂದು ವಸ್ತುವಾವುದೂ ಇರುವುದಿಲ್ಲ.

೪೫. ಈ ಜ್ಞಾನವೊಂದೇ ಪರಮಾರ್ಥ ಸತ್ಯವಾದುದೆಂದು ನಾನು ಹೇಳಿದೆನು. ಮಿಕ್ಕ ಈ ಪ್ರಪಂಚಾದಿಗಳೆಲ್ಲವೂ ವ್ಯಾವಹಾರಿಕ ಸತ್ಯತ್ವವುಳ್ಳವು. ಪರಮಾರ್ಥವಾದುವುಗಳಲ್ಲವೆಂದು ತಿಳಿವುದಕ್ಕಾಗಿ ಅವುಗಳನ್ನು ವಿವರಿಸಿ ಹೇಳಿದೆನು.

ಯಜ್ಞಾಃ ಪಶುರ್ವಹ್ನಿರಶೇಷ ಋತ್ವಿಕ್
ಸೋಮಸ್ಸುರಾಃ ಸ್ವರ್ಗಮಯಶ್ಚ ಕಾಮಃ ।
ಇತ್ಯಾದಿ ಕರ್ಮಾಶ್ರಿತಮಾರ್ಗದೃಷ್ಟಂ
ಭೂರಾದಿಭೋಗಶ್ಚ ಫಲಾನಿ ತೇಷಾಂ ॥ ೪೬ ॥

ಯಚ್ಚೈತದ್ಭುವನಗತಂ ಮಯಾ ತವೋಕ್ತಂ ।
ಸರ್ವತ್ರ ವ್ರಜತಿ ಹಿ ತತ್ರ ಕರ್ಮವಶ್ಯಃ ।
ಜ್ಞಾತ್ವೈತದ್ಧ್ರುವಮಚಲಂ ಸದೈಕರೂಪಂ
ತತ್ಕುರ್ಯಾದ್ವಿಶತಿ ಹಿ ಯೇನ ವಾಸುದೇವಂ ॥ ೪೭ ॥

ಇತಿ ಶ್ರೀ ವಿಷ್ಣು ಪುರಾಣೆ ದ್ವಿತೀಯಾಂಶೇ ದ್ವಾದಶೋಽಧ್ಯಾಯಃ

---

೪೬. ಯಜ್ಞ, ಪಶು, ಅಗ್ನಿ, ಋತ್ವಿಕ್ಕುಗಳು, ಸೋಮರಸ ದೇವತೆಗಳು ಸ್ವರ್ಗ, ಇಚ್ಛಾವಿಶೇಷ ಮುಂತಾದ ಕರ್ಮ ಮಾರ್ಗಗಳನ್ನಾಶ್ರಯಿಸಿ ಧರ್ಮಗಳೆಲ್ಲವೂ ಭೂರ್ಭುವಸ್ಸ್ವರ್ಲೋಕಗಳಲ್ಲಿ ಫಲವನ್ನನುಭವಿಸುವುದೇ ಪ್ರಯೋಜನವಾಗಿ ಉಳ್ಳವುಗಳು.

೪೭. ನಾನು ಪ್ರಪಂಚಸ್ವರೂಪವನ್ನು ನಿನಗೆ ಹೇಳಲು ಕಾರಣವೇನೆಂದರೆ ಜೀವನು ಕರ್ಮವಶನಾಗಿ ಅನೇಕ ಜನ್ಮಗಳಲ್ಲಿ ಹುಟ್ಟುವನೆಂಬುದನ್ನು ತಿಳಿದು ನಿತ್ಯನೂ ಪರಿಪೂರ್ಣನಾದುದರಿಂದ ಏಕರೂಪನೂ ಆದ ವಾಸುದೇವನನ್ನು ತನ್ನ ಕರ್ಮರೂಪವಾದ ಯಾವ ಉಪಾಯದಿಂದ ಸೇವಿಸಿ ಅವನ ಅನುಗ್ರಹದಿಂಧುಂಟಾದ ಜ್ಞಾನದಿಂದ ಆವನಲ್ಲಿಯೇ ಐಕ್ಯನಾಗುವನೋ ಆ ಕೆಲಸವನ್ನೇ ಮಾಡಲಿ ಎಂಬುದಾಗಿ ಹೇಳಿರುವೆನು

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಹನ್ನೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ತ್ರಯೋದಶೋಽಧ್ಯಾಯಃ

॥ ಮೈತ್ರೇಯ ಉವಾಚ ॥

ಭಗವನ್ ಸಮ್ಯಗಾಖ್ಯಾತಂ ಯತ್ಪೃಷ್ಟೋಽಸಿ ಮಯಾಖಿಲಂ ।
ಭೂಸಮುದ್ರಾದಿಸರಿತಾಂ ಸಂಸ್ಥಾನಂ ಗ್ರಹಸಂಸ್ಥಿತಿಃ ॥ ೧ ॥

ವಿಷ್ಣ್ವಾಧಾರಂ ಯಥಾ ಚೈತತ್ ತ್ರೈಲೋಕ್ಯಂ ಸಮವಸ್ಥಿತಂ ।
ಪರಮಾರ್ಥಶ್ಚ ಮೇ ಪ್ರೋಕ್ತೋ ಯಥಾ ಜ್ಞಾನಂ ಪ್ರಧಾನತಃ ॥ ೨ ॥

ಯತ್ತ್ವೇತದ್ಭಗವಾನಾಹ ಭರತಸ್ಯ ಮಹೀಪತೇಃ ।
ಶ್ರೋತುಮಿಚ್ಛಾಮಿ ಚರಿತಂ ತನ್ಮಮಾಖ್ಯಾತುಮರ್ಹಸಿ ॥ ೩ ॥

೧-೩. ಮೈತ್ರೇಯನು, "ಮಹಾಮಹಿಮೆಯುಳ್ಳ ಪರಾಶರರೇ! ಭೂಮಿ ಸಮುದ್ರಗಳು, ನದಿಗಳು, ಗ್ರಹಗಳು ಇವುಗಳ ಸ್ಥಿತಿಯನ್ನು ಚೆನ್ನಾಗಿ ಹೇಳಿದಿರಿ, ಈ ಮೂರು ಲೋಕಕ್ಕೂ ವಿಷ್ಣುವೇ ಆಶ್ರಯನಾಗಿರುವನೆಂದೂ ಜ್ಞಾನವೇ ವಿಷ್ಣು ಸ್ವರೂಪವೆಂದೂ ಜ್ಞಾನದ ಮತ್ತು ಪ್ರಕೃತಿಯ ಪರಮಾರ್ಥ ತತ್ತ್ವವನ್ನು ವಿವರಿಸಿದಿರಿ, ಭರತರಾಜನ ವಿಚಾರವನ್ನು ಹೇಳಿದಿರಷ್ಟೆ, ಅವನ ಚರಿತ್ರೆಯನ್ನು ವಿಸ್ತಾರವಾಗಿ ನನಗೆ ಹೇಳಬೇಕು."

ಭರತಃ ಸ ಮಹೀಪಾಲಃ ಸಾಲಗ್ರಾಮೇ ವಸತ್ಕಿಲ ।
ಯೋಗಯುಕ್ತಃ ಸಮಾಧಾಯ ವಾಸುದೇವೇ ಸದಾಮನಃ ॥ ೪ ॥

ಪುಣ್ಯದೇಶಪ್ರಭಾವೇನ ಧ್ಯಾಯತಶ್ಚ ಸದಾ ಹರಿಂ ।
ಕಥಂ ನು ನಾಭವನ್ಮುಕ್ತಿರ್ಯದಭೂತ್ಸ ದ್ವಿಜಃ ಪುನಃ ॥ ೫ ॥

ವಿಪ್ರತ್ವೇ ಚ ಕೃತಂ ತೇನ ಯದ್ಭೂಯಃ ಸುಮಹಾತ್ಮನಾ ।
ಭರತೇನ ಮುನಿಶ್ರೇಷ್ಠ ತತ್ಸರ್ವಂ ವಕ್ತುಮರ್ಹಸಿ ॥ ೬ ॥

॥ ಪರಾಶರ ಉವಾಚ ॥

ಸಾಲಗ್ರಾಮೇ ಮಹಾಭಾಗೋ ಭಗವನ್ನ್ಯಸ್ತಮಾನಸಃ ।
ಉವಾಸ ಸುಚಿರಂ ಕಾಲಂ ಮೈತ್ರೇಯ ಪೃಥಿವೀಪತಿಃ ॥ ೭ ॥

ಅಹಿಂಸಾದಿಷ್ವಶೇಷೇಷು ಗುಣೇಷು ಗುಣಿನಾಂ ವರಃ ।
ಅವಾಪ ಪರಮಾಂ ಕಾಷ್ಠಾಂ ಮನಸಶ್ಚಾಪಿ ಸಂಯಮೇ ॥ ೮ ॥

೪-೬. ಭರತರಾಜನು ಸಾಲಿಗ್ರಾಮವೆಂಬ ಕ್ಷೇತ್ರದಲ್ಲಿ ಯೋಗಾಭ್ಯಾಸ ಮಾಡುತ್ತಾ ಯಾವಾಗಲೂ ಮನಸ್ಸನ್ನು ವಾಸುದೇವನಲ್ಲಿಯೇ ನೆಲೆಗೊಳಿಸಿದ್ದನಷ್ಟೆ. ಪುಣ್ಯಕ್ಷೇತ್ರದಲ್ಲಿ ಸದಾ ವಿಷ್ಣುವನ್ನು ಧ್ಯಾನಮಾಡುತ್ತಿರುವ ಆ ರಾಜನಿಗೆ ಮುಕ್ತಿಯು ಏತಕ್ಕೆ ಉಂಟಾಗಲಿಲ್ಲ? ಅವನು ಏನಾದನು ? ಆ ಭರತನು ಬ್ರಾಹ್ಮಣ ಜನ್ಮವನ್ನು ಪಡೆದಾಗ ಮತ್ತೇನು ಮಾಡಿದನು? ಅವುಗಳೆಲ್ಲವನ್ನೂ ನನಗೆ ಹೇಳಬೇಕು ಎಂದನು.

೭-೧೦. ಪರಾಶರರು ಹೇಳುವರು:— ಮೈತ್ರೇಯನೇ! ಆ ಭರತರಾಜನು ಸಾಲಗ್ರಾಮಕ್ಷೇತ್ರದಲ್ಲಿ ತನ್ನ ಮನಸ್ಸನ್ನು ಭಗವಂತನಲ್ಲಿಯೇ ಇಟ್ಟು ಬಹುಕಾಲ ವಾಸಮಾಡುತ್ತಿದ್ದನು. ಅವನು ಅಹಿಂಸಾದಿ ಸದ್ಗುಣಗಳಿಂದ ಕೂಡಿ ಯಮ ನಿಯಮಾದಿ ಯೋಗಾಭ್ಯಾಸದಿಂದ ಮನಸ್ಸನ್ನು ಏಕಾಗ್ರವಾಗಿ ನೆಲೆಗೊಳಿಸಿ ಸಮಾಧಿ ಯೆಂಬ ಯೋಗಾಂಗದ ತುಟ್ಟ ತುದಿಯನ್ನು ಮುಟ್ಟಿದ್ದನು. ಭರತನು ಯಜ್ಞೇಶ, ಅಚ್ಯುತ, ಗೋವಿಂದ, ಮಾಧವ, ಅನಂತ, ಕೇಶವ, ಕೃಷ್ಣ, ವಿಷ್ಣು, ಹೃಷೀಕೇಶ,

ಯಜ್ಞೇಶಾಚ್ಯುತ ಗೋವಿಂದ ಮಾಧವಾನಂತ ಕೇಶವ ।
ಕೃಷ್ಣವಿಷ್ಣೋ ಹೃಷೀಕೇಶ ವಾಸುದೇವ ನಮೋಸ್ತುತೇ ॥ ೯ ॥

ಇತಿ ರಾಜಾಹಭರತೋ ಹರೇರ್ನಾಮಾನಿ ಕೇವಲಂ ।
ನಾನ್ಯಜ್ಜಗಾದ ಮೈತ್ರೇಯ ಕಿಂಚಿತ್ಸ್ವಪ್ನಾಂತರೇಷ್ವಪಿ ।
ಏತತ್ಪದಂ ತದರ್ಥಂ ಚ ವಿನಾ ನಾನ್ಯದಚಿಂತಯತ್ ॥ ೧೦ ॥

ಸಮಿತ್ಪುಷ್ಪಕುಶಾದಾನಂ ಚಕ್ರೇ ದೇವಕ್ರಿಯಾಕೃತೇ ।
ನಾನ್ಯಾನಿ ಚಕ್ರೇ ಕರ್ಮಾಣಿ ನಿಸ್ಸಂಗೋ ಯೋಗತಾಪಸಃ ॥ ೧೧ ॥

ಜಗಾಮ ಸೋಽಭಿಷೇಕಾರ್ಥಮೇಕದಾ ತು ಮಹಾನದೀಂ ।
ಸಸ್ನೌ ತತ್ರ ತದಾ ಚಕ್ರೇ ಸ್ನಾನಸ್ಯಾನಂತರಕ್ರಿಯಾಃ ॥ ೧೨ ॥

ಅಥಾಜಗಾಮ ತತ್ತೀರಂ ಜಲಂ ಪಾತುಂ ಪಿಪಾಸಿತಾ ।
ಆಸನ್ನಪ್ರಸವಾ ಬ್ರಹ್ಮನ್ನೇಕೈವ ಹರಿಣೀ ವನಾತ್ ॥ ೧೩ ॥

ವಾಸುದೇವ ನಿನಗೆ ನಮಸ್ಕಾರ ಎಂದು ಹರಿಯ ನಾಮಗಳನ್ನು ಮಾತ್ರ ಹೇಳುತ್ತ ಸ್ವಪ್ನದಲ್ಲಿಯೂ ಕೂಡ ಇದನ್ನು ಬಿಟ್ಟು ಬೇರೆ ಮಾತನ್ನು ಹೇಳುತ್ತಿರಲಿಲ್ಲ. ಈ ನಾಮಗಳನ್ನು ಹೇಳುತ್ತಾ ಇವುಗಳ ಅರ್ಥವನ್ನು ಮನಸ್ಸಿನಲ್ಲಿ ಯೋಚಿಸುತ್ತ ಮತ್ತಾವುದನ್ನೂ ಮನಸ್ಸಿನಲ್ಲಿ ಯೋಚಿಸದಿದ್ದನು.

೧೧–೧೩. ಯೋಗಾಭ್ಯಾಸಿಯಾದ ಆ ತಪಸ್ವಿಯು ದೇವಪೂಜಾರ್ಥವಾಗಿ ಸಮಿತ್ತು, ಹೂ, ದರ್ಭೆ ಮುಂತಾದುವುಗಳನ್ನು ತರುತ್ತ ಮತ್ತೊಂದು ಕರ್ಮವನ್ನೂ ಮಾಡದೆ ಯಾವ ಸಂಬಂಧವೂ ಇಲ್ಲದವನಾಗಿದ್ದನು. ಅವನು ಒಂದಾನೊಂದು ದಿನ ಸ್ನಾನಮಾಡುವುದಕ್ಕಾಗಿ ಮಹಾನದಿಗೆ ಹೋಗಿ ಅಲ್ಲಿ ಸ್ನಾನಮಾಡಿ ನಿತ್ಯಕರ್ಮ ಗಳನ್ನು ಮಾಡಿದನು. ಆ ಸಮಯಕ್ಕೆ ಸರಿಯಾಗಿ ಮರಿಯನ್ನು ಹಾಕುವ ಸಮಯ ವೊದಗಿದ ಒಂದೇ ಒಂದು ಜಿಂಕೆಯು ನೀರನ್ನು ಕುಡಿಯುವುದಕ್ಕಾಗಿ ಕಾಡಿನಿಂದ ಆ ನದಿಯ ದಡಕ್ಕೆ ಬಂದಿತು. ಅದು ನೀರು ಕುಡಿದು ತೃಪ್ತಿಹೊಂದುವ ಹೊತ್ತಿಗೆ

ತತಸ್ಸಮಭವತ್ತತ್ರ ಪೀತಪ್ರಾಯೋ ಜಲೇ ತಯಾ ।
ಸಿಂಹಸ್ಯ ನಾದಃ ಸುಮಹಾನ್ ಸರ್ವಪ್ರಾಣಿಭಯಂಕರಃ ॥ ೧೪ ॥

ತತಃ ಸಾ ಸಹಸಾ ತ್ರಾಸಾದಾಪ್ಲುತಾ ನಿಮ್ನಗಾತಟಂ ।
ಅತ್ಯುಚ್ಚಾರೋಹಣೇನಾಸ್ಯಾ ನದ್ಯಾಂ ಗರ್ಭಃ ಪಪಾತ ಸಃ ॥ ೧೫ ॥

ತಮೂಹ್ಯಮಾನಂ ವೇಗೇನ ವೀಚಿಮಾಲಾಪರಿಪ್ಲುತಂ ।
ಜಗ್ರಾಹ ಸ ನೃಪೋ ಗರ್ಭಾತ್ ಪತಿತಂ ಮೃಗಪೋತಕಂ ॥ ೧೬ ॥

ಗರ್ಭಪ್ರಚ್ಯುತಿದುಃಖೇನ ಪ್ರೋತ್ತುಂಗಾಕ್ರಮಣೇನ ಚ ।
ಮೈತ್ರೇಯ ಸಾಪಿ ಹರಿಣೀ ಪಪಾತ ಚ ಮಮಾರ ಚ ॥ ೧೭ ॥

ಹರಿಣೀಂ ತಾಂ ವಿಲೋಕ್ಯಾಥ ವಿಪನ್ನಾಂ ನೃಪ ತಾಪಸಃ ।
ಮೃಗಪೋತಂ ಸಮಾದಾಯ ಪುನರಾಶ್ರಮಮಾಗತಃ ॥ ೧೮ ॥

ಚಕಾರಾನುದಿನಂ ಚಾಸೌ ಮೃಗಪೋತಸ್ಯ ವೈ ನೃಪಃ ।
ಪೋಷಣಂ ಪುಷ್ಯಮಾಣಶ್ಚ ಸ ತೇನ ವವೃಧೇ ಮುನೇ ॥ ೧೯ ॥

ಸರಿಯಾಗಿ ಸಮಸ್ತ ಪ್ರಾಣಿಗಳಿಗೂ ಭಯವನ್ನುಂಟುಮಾಡುವ ಸಿಂಹದ ದೊಡ್ಡ ಧ್ವನಿಯು ಕೇಳಿಸಿತು. ಅದು ಆ ಕ್ಷಣದಲ್ಲಿಯೇ ಭಯದಿಂದ ಎತ್ತರವಾದ ನದಿಯ ದಡವನ್ನು ಹಾರಿ ಹತ್ತುವಾಗ ಅದರ ಗರ್ಭವು ನೀರೊಳಕ್ಕೆ ಬಿದ್ದಿತು.

೧೬-೨೦. ಗರ್ಭದಲ್ಲಿದ್ದ ಮರಿಯು ನದಿಯ ನೀರಿನ ಅಲೆಯಿಂದ ನೆನೆದು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರಲು ರಾಜನು ಕಂಡು ಆ ಮರಿಯನ್ನು ಎತ್ತಿಕೊಂಡನು. ಗರ್ಭವು ಬಿದ್ದುದರಿಂದಲೂ ಎತ್ತರವಾದ ದಡವನ್ನೇರಿದುದರಿಂದಲೂ ಉಂಟಾದ ನೋವಿನಿಂದ ಆ ಜಿಂಕೆಯು ಬಿದ್ದು ಸತ್ತುಹೋಯಿತು. ತಾಪಸನಾದ ರಾಜನು ಸತ್ತುಹೋದ ಜಿಂಕೆಯನ್ನು ನೋಡಿ ಮರಿಯನ್ನೆತ್ತಿಕೊಂಡು ಆಶ್ರಮಕ್ಕೆ ಬಂದನು. ಆ ತಾಪಸನು ಪ್ರತಿದಿನವೂ ಆ ಮರಿಯನ್ನು ಸಾಕುತ್ತಾ ಬಂದನು. ಅದು ಬೆಳೆಯುತ್ತಿದ್ದಿತು. ಹೀಗೆ ಅದು ಆಶ್ರಮದ ಸುತ್ತಲೂ ಇದ್ದ ಹುಲ್ಲನ್ನು ಮೇಯುತ್ತ

ಚಚಾರಾಶ್ರಮಪರ್ಯಂತೇ ತೃಣಾನಿ ಗಹನೇಷು ಸಃ ।
ದೂರಂ ಗತ್ವಾ ಚ ಶಾರ್ದೂಲತ್ರಾಸಾದಭ್ಯಾಯಯೌ ಪುನಃ ॥ ೨೦ ॥

ಪ್ರಾತರ್ಗತ್ವಾತಿದೂರಂ ಚ ಸಾಯಮಾಯಾತ್ಯಥಾಶ್ರಮಂ ।
ಪುನಶ್ಚ ಭರತಸ್ಯಾಭೂದಾಶ್ರಮಸ್ಯೋಟಜಾಜಿರೇ ॥ ೨೧ ॥

ತಸ್ಯ ತಸ್ಮಿನ್ ಮೃಗೇ ದೂರಸಮೀಪಪರಿವರ್ತಿನಿ ।
ಆಸೀಚ್ಚೇತಃ ಸಮಾಸಕ್ತಂ ನ ಯಯಾವನ್ಯತೋ ದ್ವಿಜ ॥ ೨೨ ॥

ವಿಮುಕ್ತರಾಜ್ಯತನಯಃ ಪ್ರೋಜ್ಝಿತಾಶೇಷಬಾಂಧವಃ ।
ಮಮತ್ವಂ ಸ ಚಕಾರೋಚ್ಚೈಸ್ತಸ್ಮಿನ್ ಹರಿಣಪೋತಕೇ ॥ ೨೩ ॥

ಕಿಂ ವೃಕೈರ್ಭಕ್ಷಿತೋ ವ್ಯಾಘ್ರೈಃ ಕಿಂ ಸಿಂಹೇನ ನಿಪಾತಿತಃ ।
ಚಿರಾಯಮಾಣೇ ನಿಷ್ಕ್ರಾಂತೇ ತಸ್ಯಾಸೀದಿತಿ ಮಾನಸಂ ॥ ೨೪ ॥

ಕಾಡಿನಲ್ಲಿ ಸ್ವಲ್ಪದೂರಕ್ಕೆ ಹೋಗಿ ಹುಲಿಯ ಭಯದಿಂದ ಆಶ್ರಮಕ್ಕೆ ಬಂದು ಬಿಡುತ್ತಿದ್ದಿತು.

೨೧–೨೩. ಆ ಜಿಂಕೆಯ ಮರಿಯು ಪ್ರಾತಃಕಾಲದಲ್ಲಿ ಕಾಡಿನಲ್ಲಿ ಬಹುದೂರ ಹೋಗಿ ಸಾಯಂಕಾಲಕ್ಕೆ ಆಶ್ರಮಕ್ಕೆ ಬಂದು ಭರತನ ಪರ್ಣಶಾಲೆಯ ಅಂಗಳದಲ್ಲಿ ಇರುತ್ತಿದ್ದಿತು. ಹೀಗಿರುವಲ್ಲಿ ಭರತನ ಮನಸ್ಸು ಜಿಂಕೆಯು ದೂರದಲ್ಲಿದ್ದರೂ ಸಮೀಪದಲ್ಲಿದ್ದರೂ ಅದರಲ್ಲಿಯೇ ಆಸಕ್ತವಾಗಿ ಮತ್ತೊಂದೆಡೆಗೆ ಹೋಗದಿದ್ದಿತು. ಅವನು ರಾಜ್ಯವನ್ನೂ, ಮಕ್ಕಳನ್ನೂ, ನೆಂಟರನ್ನೂ ಬಿಟ್ಟಿದ್ದರೂ ಆ ಜಿಂಕೆಯ ಮರಿಯಲ್ಲಿ ವಿಶೇಷವಾದ ಅಭಿಮಾನವನ್ನಿಟ್ಟಿದ್ದನು.

೨೪–೨೮ ಪರ್ಣಶಾಲೆಯನ್ನು ಬಿಟ್ಟುಹೋದ ಮರಿಯು ಬಹಳ ಹೊತ್ತಿನವರೆಗೂ ಬರದೆ ಇದ್ದರೆ, ಸಿಂಹವೋ, ಹುಲಿಯೋ, ತೋಳವೋ ಅದನ್ನು ತಿಂದಿರಬಹುದೆಂಬ ಮನಸ್ಸುಂಟಾಗುತ್ತಿದ್ದಿತು. ಅದರ •ಗೊರಸಿನಿಂದ ಕಿತ್ತುಹೋದ ಈ ಭೂಮಿಯು ಚಿತ್ರತರವಾಗಿರುವುದು. ನನ್ನ ಪ್ರೀತಿಗೆ ಪಾತ್ರವಾದ ಜಿಂಕೆಯ ಮರಿ

ವಿಕ್ಷಾ ವಸುಮತೀ ತಸ್ಯ ಖುರಾಗ್ರಕ್ಷತಕರ್ಬುರಾ ।
ಪ್ರೀತಯೇ ಮಮ ಯಾತೋಽಸೌ ಕ್ವ ವನ್ಯೈಣಕಪೋತಕಃ ॥ ೨೫ ॥

ವಿಷಾಣಾಗ್ರೇಣ ಮದ್ಬಾಹುಕಂಡೂಯನಪರೋ ಹಿ ಸಃ ।
ಕ್ಷೇಮೇಣಾಭ್ಯಾಗತೋಽರಣ್ಯಾದಪಿ ಮಾಂ ಸುಖಯಿಷ್ಯತಿ ॥ ೨೬ ॥

ಏತೇ ಲೂನಶಿಖಾಸ್ತಸ್ಯ ದಶನೈರಚಿರೋದ್ಗತೈಃ ।
ಕುಶಕಾಶಾವಿರಾಜಂತೇ ವಟವಃ ಸಾಮಗಾ ಇವ ॥ ೨೭ ॥

ಇತ್ಥಂ ಚಿರಗತೇ ತಸ್ಮಿನ್ ಸ ಚಕ್ರೇ ಮಾನಸಂ ಮುನಿಃ ।
ಪ್ರೀತಿಪ್ರಸನ್ನವದನಃ ಪಾರ್ಶ್ವಸ್ಥೇ ಚಾಭವನ್ಮೃಗೇ ॥ ೨೮ ॥

ಸಮಾಧಿಭಂಗಸ್ತಸ್ಯಾಸೀತ್ತನ್ಮಯತ್ವಾದೃತಾತ್ಮನಃ ।
ಸಂತ್ಯಕ್ತರಾಜ್ಯಭೋಗರ್ದ್ಧಿಃ ಸ್ವಜನಸ್ಯಾಪಿ ಭೂಪತೇಃ ॥ ೨೯ ॥

ಚಪಲೇ ಚಪಲಂ ತಸ್ಮಿನ್ ದೂರಗಂ ದೂರಗಾಮಿನಿ ।
ಮೃಗಪೋತೇ ಭವಚ್ಚಿತ್ತಂ ಸ್ಥೈರ್ಯವತ್ತಸ್ಯ ಭೂಪತೇಃ ॥ ೩೦ ॥

ಯೆಲ್ಲಿ? ಅದು ತನ್ನ ಕೊಂಬಿನ ತುದಿಯಿಂದ ನನ್ನ ತೋಳುಗಳನ್ನು ಕೆರೆಯುವುದು. ಅದು ಕಾಡಿನಿಂದ ಬಂದು ನನ್ನನ್ನು ಸಂತೋಷಪಡಿಸುವುದೇ? ಈಗ ತಾನೆ ಹುಟ್ಟಿರುವ ಅದರ ಹಲ್ಲುಗಳಿಂದ ಕಚ್ಚಿದ ಈ ದರ್ಭೆಯ ತುದಿಗಳು ಕತ್ತರಿಸಿ ಹೋಗಿರುವುದರಿಂದ ಸಾಮಶಾಖೆಯ ಬ್ರಹ್ಮಚಾರಿಗಳಂತೆ ಬೋಳಾಗಿರುವುವು ಎಂದು ಮನಸ್ಸಿನಲ್ಲಿ ಯೋಚಿಸುತ್ತಿದ್ದನು. ಆ ಮುನಿಯು ಆ ಮೃಗವು ತನ್ನ ಸಮೀಪದಲ್ಲಿದ್ದರೆ ಪ್ರೀತಿಯಿಂದ, ಸಂತೋಷದಿಂದ ಕೂಡಿದ ಮುಖವುಳ್ಳವನಾಗಿರುತ್ತಿದ್ದನು.

೨೯-೩೪. ರಾಜ್ಯವನ್ನೂ, ಸ್ವಜನರನ್ನೂ, ಸಂಪತ್ತನ್ನೂ ಸುಖಾನುಭವವನ್ನೂ ಬಿಟ್ಟ ಆ ರಾಜನಿಗೆ ಆ ಜಿಂಕೆಯಮೇಲಿನ ಅಭಿಮಾನದಿಂದ ಸಮಾಧಿ ಭಂಗವುಂಟಾಯಿತು. ಅವನ ಮನಸ್ಸು ಜಿಂಕೆಯ ಮರಿಯಲ್ಲಿಯೇ ನೆಲೆಸಿ ಅದು ಚಲಿಸಿದರೆ, ದೂರ ಹೋದರೆ ಇವನ ಮನಸ್ಸು ಚಲಿಸಿ ದೂರವಾಗಿ ಹೋಗುತ್ತಿದ್ದಿತು ಕೆಲವು ಕಾಲದ

ಕಾಲೇನ ಗಚ್ಛತಾ ಸೋಽಥ ಕಾಲಂ ಚಕ್ರೇ ಮಹೀಪತಿಃ ।
ಪಿತೇವ ಸಾಸ್ರಂ ಪುತ್ರೇಣ ಮೃಗಪೋತೇನ ವೀಕ್ಷಿತಃ ॥ ೩೧ ॥

ಮೃಗಮೇವ ತದಾದ್ರಾಕ್ಷಿತ್ ತ್ಯಜನ್ಪ್ರಾಣಾನಸಾವಪಿ ।
ತನ್ಮಯತ್ವೇನ ಮೈತ್ರೇಯ ನಾನ್ಯತ್ಕಿಂಚಿದಚಿಂತಯತ್ ॥ ೩೨ ॥

ತತಶ್ಚ ತತ್ಕಾಲಕೃತಾಂ ಭಾವನಾಂ ಪ್ರಾಪ್ಯ ತಾದೃಶೀಂ ।
ಜಂಬೂಮಾರ್ಗೇ ಮಹಾರಣ್ಯೇ ಜಜ್ಞೇ ಜಾತಿಸ್ಮರೋ ಮೃಗಃ ॥ ೩೩ ॥

ಜಾತಿಸ್ಮರತ್ವಾದುದ್ವಿಗ್ನಃ ಸಂಸಾರಸ್ಯ ದ್ವಿಜೋತ್ತಮ ।
ವಿಹಾಯ ಮಾತರಂ ಭೂಯಃ ಸಾಲಗ್ರಾಮಮುಪಾಯಯೌ ॥ ೩೪ ॥

ಶುಷ್ಕೈಸ್ತೃಣೈಸ್ತಥಾ ಪರ್ಣೈಃ ಸ ಕುರ್ವನ್ನಾತ್ಮಪೋಷಣಂ ।
ಮೃಗತ್ವಹೇತುಭೂತಸ್ಯ ಕರ್ಮಣೋ ನಿಷ್ಕೃತಿಂ ಯಯೌ ॥ ೩೫ ॥

ಮೇಲೆ ರಾಜನು ಮರಣಹೊಂದಿದನು. ಅವನು ಪ್ರಾಣವನ್ನು ಬಿಡುವಾಗ ತಂದೆಯನ್ನು ಮಗನು ಕಣ್ಣೀರು ಸುರಿಸುತ್ತ ನೋಡುವಂತೆ ಜಿಂಕೆಯು ಮರಿಯು ಕಣ್ಣೀರಿಡುತ್ತ ಅವನನ್ನು ನೋಡುತ್ತಿದ್ದಿತು. ಅವನೂ ಆ ಜಿಂಕೆಯನ್ನೇ ನೋಡುತ್ತಿದ್ದನು. ಅವನ ಮನಸ್ಸು ಜಿಂಕೆಯ ರೂಪವನ್ನೇ ಪಡೆದು ಮತ್ತೊಂದನ್ನು ಯೋಚಿಸುತ್ತಿರಲಿಲ್ಲ. ಆ ರಾಜನು ಮರಣಕಾಲದ ಆ ಭಾವನೆಯಿಂದ ಕಾಳಾಂಜನ ಗಿರಿಯಲ್ಲಿರುವ ದೊಡ್ಡ ಕಾಡಿನಲ್ಲಿ ಪೂರ್ವಜನ್ಮದ ಜ್ಞಾನವುಳ್ಳ ಮೃಗವಾಗಿ ಹುಟ್ಟಿದನು. ಪೂರ್ವಜನ್ಮದ ಸ್ಮರಣೆಯಿಂದ ಸಂಸಾರದ ವಿಷಯದಲ್ಲಿ ವೈರಾಗ್ಯವುಳ್ಳವನಾಗಿ ತಾಯಿಯನ್ನು ಬಿಟ್ಟು, ಮತ್ತೆ ಸಾಲಗ್ರಾಮಕ್ಷೇತ್ರಕ್ಕೆ ಬಂದು ಸೇರಿದನು.

೩೫–೩೮. ಮೃಗರೂಪನಾದ ರಾಜನು ಒಣಗಿದ ಹುಲ್ಲು ಎಲೆಗಳನ್ನು ಆಹಾರ ಮಾಡುತ್ತಾ ತನ್ನ ಮೃಗಜನ್ಮಕ್ಕೆ ಕಾರಣವಾದ ಕರ್ಮಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡನು. ಅವನು ಅಲ್ಲಿಯೇ ಮೃಗದೇಹವನ್ನು ಬಿಟ್ಟು ಪೂರ್ವಜನ್ಮ ಸ್ಮರಣೆ

ತತ್ರ ಚೋತ್ಸೃಷ್ಟದೇಹೋಽಸೌ ಜಜ್ಞೇ ಜಾತಿಸ್ಮರೋ ದ್ವಿಜಃ ।
ಸದಾಚಾರವತಾಂ ಶುದ್ಧೇ ಯೋಗಿನಾಂ ಪ್ರವರೇ ಕುಲೇ ॥ ೩೬ ॥

ಸರ್ವವಿಜ್ಞಾನ ಸಂಪನ್ನಃ ಸರ್ವಶಾಸ್ತ್ರಾರ್ಥತತ್ತ್ವವಿತ್ ।
ಅಪಶ್ಯತ್ಸ ಚ ಪ್ರಕೃತೇರ್ಭಿನ್ನ ಆತ್ಮಾನಂ ಪ್ರಕೃತೇಃ ಪರಂ ॥ ೩೭ ॥

ಆತ್ಮನೋಽಧಿಗತಜ್ಞಾನಾ ದ್ದೇವಾದೀನಿ ಮಹಾಮುನೇ ।
ಸರ್ವಭೂತಾನ್ಯಭೇದೇನ ದದರ್ಶ ಸ ತದಾತ್ಮನಃ ॥ ೩೮ ॥

ನಪಪಾಠಗುರುಪ್ರೋಕ್ತಾಂ ಕೃತೋಪನಯನಃ ಶ್ರುತಿಂ ।
ನ ದದರ್ಶ ಚ ಕರ್ಮಾಣಿ ಶಾಸ್ತ್ರಾಣಿ ಜಗೃಹೇ ನ ಚ ॥ ೩೯ ॥

ವ್ಯಕ್ತೋಽಪಿ ಬಹುಶಃ ಕಿಂಚಿತ್ ಜಡಂ ವಾಕ್ಯಮಭಾಷತ ।
ತದಪ್ಯಸಂಸ್ಕಾರಗುಣಂ ಗ್ರಾಮ್ಯಭಾಷೋಕ್ತಿಸಂಯುತಂ ॥ ೪೦ ॥

ಅಪಧ್ವಸ್ತವಪುಃ ಸೋಽಥ ಮಲಿನಾಂಬರಧೃಕ್ ದ್ವಿಜಃ ।
ಕ್ಲಿನ್ನದಂತಾಂತರಃ ಸರ್ವೈಃ ಪರಿಭೂತಃ ಸ ನಾಗರೈಃ ॥ ೪೧ ॥

ಯುಳ್ಳ ಬ್ರಾಹ್ಮಣನಾಗಿ ಯೋಗಿಗಳೂ, ಆಚಾರಶೀಲರೂ ಆದ ಶುದ್ಧ ಬ್ರಾಹ್ಮಣ ವಂಶದಲ್ಲಿ ಹುಟ್ಟಿದನು. ಅವನು ಹುಟ್ಟಿದ ಕ್ಷಣದಲ್ಲಿಯೇ ಸಮಸ್ತ ಶಾಸ್ತ್ರಾರ್ಥವನ್ನೂ ತಿಳಿದ ಜ್ಞಾನಿಯಾಗಿ ತಾನು ಪ್ರಕೃತಿಗಿಂತ ಶ್ರೇಷ್ಠವಾದ ಆತ್ಮಸ್ವರೂಪನೆಂದು ತಿಳಿದು ಕೊಂಡನು. ಆ ಜ್ಞಾನದಿಂದ ದೇವಾದಿಗಳೂ, ಸಮಸ್ತ ಭೂತಗಳೂ ಆತ್ಮಸ್ವರೂಪ ನಾದ ತನಗಿಂತ ಬೇರೆಯಾದುವುಗಳಲ್ಲವೆಂದು ತಿಳಿದುಕೊಂಡನು.

೩೯-೪೨. ಅವನು ಉಪನಯನ ಮಾಡಿದರೂ ಗುರುಗಳು ಹೇಳಿದ ವೇದ ವನ್ನು ಪಾಠ ಮಾಡಲಿಲ್ಲ. ವರ್ಣಾಶ್ರಮ ಧರ್ಮಾಭಿಮಾನವಿಲ್ಲದಿದ್ದುದರಿಂದ ಕರ್ಮಗಳನ್ನೂ ಮಾಡಲಿಲ್ಲ. ಶಾಸ್ತ್ರಗಳನ್ನು ಓದಲಿಲ್ಲ. ತಿಳಿದವನಾದರೂ ಮೂಢ ರಂತೆ ಹಾಸ್ಯಾಸ್ಪದವೂ, ಅಶುದ್ಧವೂ, ಗ್ರಾಮ್ಯವೂ ಆದ ಅಲ್ಪವಾದ ಮಾತುಗಳನ್ನಾ ಡುತ್ತಿದ್ದನು. ಕೊಳೆಯಾದ ಮೈಯುಳ್ಳ ಕೊಳೆಯಾದ ಬಟ್ಟೆಗಳನ್ನು ಧರಿಸುತ್ತ

ಸಂಮಾನನಾಪರಾಂ ಹಾನಿಂ ಯೋಗರ್ದ್ಧೇಃ ಕುರುತೇ ಯತಃ ।
ಜನೇನಾವಮತೋ ಯೋಗೀ ಯೋಗಸಿದ್ಧಿಂ ಚ ವಿಂದತಿ ॥ ೪೨ ॥

ತಸ್ಮಾಚ್ಚರೇತ ವೈ ಯೋಗೀ ಸತಾಂ ಧರ್ಮಮದೂಷಯನ್ ।
ಜನಾ ಯಥಾವಮನ್ಯೇರನ್ ಗಚ್ಛೇಯುರ್ನೈವ ಸಂಗತಿಂ ॥ ೪೩ ॥

ಹಿರಣ್ಯಗರ್ಭವಚನಂ ವಿಚಿಂತ್ಯೇತ್ಥಂ ಮಹಾಮತಿಃ ।
ಆತ್ಮಾನಂ ದರ್ಶಯಾಮಾಸ ಜಡೋನ್ಮತ್ತಾಕೃತಿಂ ಜನೇ ॥ ೪೪ ॥

ಭುಂಕ್ತೇ ಕುಲ್ಮಾಷವಾಟ್ಯಾದಿ ಶಾಕಂ ವನ್ಯಫಲಂ ಕಣಾನ್ ।
ಯದ್ಯದಾಪ್ನೋತಿ ಸುಬಹು ತದತ್ತೇ ಕಾಲಸಂಯಮಂ ॥ ೪೫ ॥

ಪಿತರ್ಯುಪರತೇ ಸೋಽಥ ಭ್ರಾತೃಭ್ರಾತೃವ್ಯಬಾಂಧವೈಃ ।
ಕಾರಿತಃ ಕ್ಷೇತ್ರಕರ್ಮಾದಿ ಕದನ್ನಾಹಾರಪೋಷಿತಃ ॥ ೪೬ ॥

ಕೊಳೆಯಾದ ಹಲ್ಲುಗಳುಳ್ಳವನಾಗಿ ಗೌರವವೂ ಯೋಗಕ್ಕೆ ತಡೆಯೆಂದು ಜನರ ಅಪಮಾನಕ್ಕೆ ಪಾತ್ರನಾಗಿ ಯೋಗಿಯಾಗಿ ಯೋಗಸಿದ್ಧಿಯನ್ನು ಸಂಪಾದಿಸುತ್ತಿದ್ದನು.

೪೩–೪೬. ಯೋಗಿಯಾದವನು ಅಪಮಾನಕ್ಕಾಗಿ ನಿಷಿದ್ಧ ಕಾರ್ಯಗಳನ್ನು ಮಾಡದೆ ಜನರು ತನ್ನನ್ನು ಅಪಮಾನಮಾಡಿ ತನ್ನ ವಿಚಾರಕ್ಕೆ ಬರದಂತೆ ಮಾಡಿಕೊಳ್ಳಬೇಕೆಂಬ ಬ್ರಹ್ಮನ ಮಾತನ್ನು ಯೋಚಿಸಿ ಮಹಾಬುದ್ಧಿವಂತನಾದ ಅವನು ತನ್ನನ್ನು ಮೂಢನಂತೆಯೂ ಹುಚ್ಚನಂತೆಯೂ ತೋರಿಸಿಕೊಳ್ಳುತ್ತಿದ್ದನು. ಅವನು ಇನ್ನೂ ಹಣ್ಣಾಗದ ಉದ್ದು ಮುಂತಾದ ಎಳೆಯ ಕಾಳುಗಳನ್ನೂ, ಗೋಧಿನುಚ್ಚು, ಸೊಪ್ಪುಗಳು, ಕಾಡುಹಣ್ಣುಗಳು ಮುಂತಾದುವು ಕಾಲಕ್ಕೆ ದೊರೆತುದನ್ನು ತಿಂದು ತೃಪ್ತಿಪಡುತ್ತಿದ್ದನು. ತಂದೆಯು ಸತ್ತ ಮೇಲೆ ಸಹೋದರರೂ, ಬಂಧುಗಳೂ ಅವನಿಂದ ಹೊಲಗದ್ದೆಗಳ ಕೆಲಸವನ್ನು ಮಾಡಿಸಿ ಕುತ್ಸಿತವಾದ (ತಂಗಳು) ಅನ್ನವನ್ನು ಹಾಕುತ್ತಿದ್ದರು. ಅವನು ಅದರಿಂದಲೇ ತೃಪ್ತನಾಗುತ್ತಿದ್ದನು.

ಸಮಾಕ್ಷ ಪೀನಾವಯವೋ ಜಡಕಾರೀ ಚ ಕರ್ಮಣಿ ।
ಸರ್ವಲೋಕೋಪಕರಣಂ ಬಭೂವಾಹಾರವೇತನಃ ॥ ೪೭ ॥

ತಂ ತಾದೃಶಮಸಂಸ್ಕಾರವಿಪ್ರಾಕೃತಿವಿಚೇಷ್ಟಿತಂ ।
ಕ್ಷತ್ತಾಸೌ ವೀರರಾಜಸ್ಯ ಕಾಳ್ಯೈ ಪಶುಮಯೋಜಯತ್ ॥ ೪೮ ॥

ರಾತ್ರೌ ತಂ ಸಮಲಂಕೃತ್ಯ ವೈಶಸಸ್ಯ ವಿಧಾನತಃ ।
ಅಧಿಷ್ಠಿತಂ ಮಹಾಕಾಳೀ ಜ್ಞಾತ್ವಾಯೋಗೇಶ್ವರಂ ತಥಾ ॥ ೪೯ ॥

ತತಃ ಖಡ್ಗಂ ಸಮಾದಾಯ ನಿಶಿತಂ ನಿಶಿ ಸಾ ತದಾ ।
ಕ್ಷತ್ತಾರಂ ಕ್ರೂರಕರ್ಮಾಣಂ ಅಚ್ಛಿನತ್ಕಂಠಮೂಲತಃ ॥ ೫೦ ॥

ಸ್ವಪಾರ್ಷದಯುತಾದೇವೀ ಪಪೌರುಧಿರಮುಲ್ಬಣಂ ।
ತತಸ್ಸೌ ವೀರರಾಜಸ್ಯ ಪ್ರಯಾತಸ್ಯ ಮಹಾತ್ಮನಃ ॥ ೫೧ ॥

೪೭-೪೮. ಸರ್ವಸಮಾನ ದೃಷ್ಟಿಯೂ, ಕೊಬ್ಬಿದ ಅವಯವಗಳುಳ್ಳವನೂ, ನಿದಾನವಾಗಿ ಕೆಲಸ ಮಾಡತಕ್ಕವನೂ ಆದ ಅವನು ಆಹಾರದ ಕೂಲಿಗಾಗಿ ಎಲ್ಲರಿಗೂ ಕೆಲಸವನ್ನು ಮಾಡಿಕೊಟ್ಟು ಉಪಕಾರ ಮಾಡುತ್ತಿದ್ದನು. ಇಂತಹ ವೇದಾಭ್ಯಾಸಾದಿಗಳಿಲ್ಲದ ಬ್ರಾಹ್ಮಣಾಕಾರವನ್ನುಳ್ಳ ಅವನನ್ನು ಕಂಡು ವೀರರಾಜನೆಂಬವನ ಸಾರಥಿಯು ಕಾಳಿಗೆ ಬಲಿಯನ್ನು ಕೊಡುವುದಕ್ಕಾಗಿ ಗೊತ್ತುಮಾಡಿಕೊಂಡನು.

೪೯-೫೦. ರಾತ್ರಿಯಲ್ಲಿ ಅವನಿಗೆ ಬಲಿಯನ್ನು ಕೊಡುವ ಪಶುವಿನ ಅಲಂಕಾರವನ್ನು ಮಾಡಿ ನಿಲ್ಲಿಸಿದುದನ್ನು ಮಹಾಕಾಳಿಯು ಕಂಡು ಇವನು ಯೋಗೀಶ್ವರನೆಂಬುದನ್ನು ತಿಳಿದು ಹರಿತವಾದ ಕತ್ತಿಯನ್ನು ತಿಗೆದುಕೊಂಡು ಕ್ರೂರ ಕಾರ್ಯವನ್ನು ಮಾಡುತ್ತಿದ್ದ ಆ ಸಾರಥಿಯ ಕತ್ತನ್ನು ಆ ಕ್ಷಣದಲ್ಲಿಯೇ ಕತ್ತರಿಸಿದಳು. ಮತ್ತು ತನ್ನ ಸೇವೆಮಾಡುವ ದೇವಿಯರೊಡನೆ ಅವನ ರಕ್ತವನ್ನು ಪಾನಮಾಡಿದಳು.

೫೧-೫೩. ಆ ಮೇಲೆ ಸೌವೀರರಾಜನ ಬಿಟ್ಟಿ ಆಳುಗಳನ್ನು ಹಿಡಿದು ಕೆಲಸ ಮಾಡಿಸುವ ಅಧಿಕಾರಿಯು ಬೂದಿಯು ಮುಚ್ಚಿದ ಕೆಂಡದಂತಿದ್ದ ಈ ಮಹಾತ್ಮನನ್ನು

ವಿಷ್ಟಿಕರ್ಮಾರ್ಹಮನ್ಯೇತಂ ವಿಷ್ಟಿಯೋಗ್ಯೋಽಯ ಮಿತ್ಯಪಿ ।
ತಂ ತಾದೃಶಂ ಮಹಾತ್ಮಾನಂ ಭಸ್ಮಚ್ಛನ್ನಮಿವಾನಲಂ ॥ ೫೨ ॥

ಕ್ಷತ್ತಾ ಸೌವೀರರಾಜಸ್ಯ ವಿಷ್ಟಿಯೋಗ್ಯಮಮನ್ಯತ ।
ಸ ರಾಜಾ ಶಿಬಿಕಾರೂಢೋ ಗಂತುಂ ಕೃತಮತಿರ್ದ್ವಿಜ ।
ಬಭೂವೇಕ್ಷುಮತೀತೀರೇ ಕಪಿಲರ್ಷೇರ್ವರಾಶ್ರಮಂ ॥ ೫೩ ॥

ಶ್ರೇಯಃ ಕಿಮತ್ರ ಸಂಸಾರೇ ದುಃಖಪ್ರಾಯೇ ನೃಣಾಮಿತಿ ।
ಪ್ರಷ್ಟುಂ ತಂ ಮೋಕ್ಷಧರ್ಮಜ್ಞಂ ಕಪಿಲಾಖ್ಯಂ ಮಹಾಮುನಿಂ ॥ ೫೪ ॥

ಉವಾಹ ಶಿಬಿಕಾಂ ತಸ್ಯ ಕ್ಷತ್ತುರ್ವಚನಚೋದಿತಃ ।
ನೃಣಾಂ ವಿಷ್ಟಿಗೃಹೀತಾನಾಮನ್ಯೇಷಾಂ ಸೋಽಪಿ ಮಧ್ಯಗಃ ॥ ೫೫ ॥

ಗೃಹೀತೋ ವಿಷ್ಟಿನಾ ವಿಪ್ರಃ ಸರ್ವಜ್ಞಾನೈಕಭಾಜನಃ ।
ಜಾತಿಸ್ಮರೋಽಸೌ ಪಾಪಸ್ಯ ಕ್ಷಯಕಾಮ ಉವಾಹ ತಾಂ ॥ ೫೬ ॥

ಬಿಟ್ಟಿ ಆಳಿಗೆ ತಕ್ಕವನೆಂದು ತಿಳಿದನು. ಸೌವೀರರಾಜನು ಇಕ್ಷುಮತೀನದಿಯ ತೀರದಲ್ಲಿರುವ ಕಪಿಲಋಷಿಯ ಆಶ್ರಮಕ್ಕೆ ಪಲ್ಲಕ್ಕಿಯನ್ನೇರಿ ಹೋಗಬೇಕೆಂದು ನಿಶ್ಚಯಿಸಿದ್ದನು. ಮೋಕ್ಷಧರ್ಮವನ್ನು ತಿಳಿದ ಕಪಿಲಮಹಾಮುನಿಯನ್ನು "ಜನನ ಮರಣ ರೂಪವಾಗಿ ದುಃಖವೇ ವಿಶೇಷವಾಗಿರುವ ಈ ಸಂಸಾರದಲ್ಲಿ ಶ್ರೇಯಸ್ಸಿಗೆ ಸಾಧನವಾದ ಮಾರ್ಗವಾವುದೆಂದು" ಪ್ರಶ್ನೆ ಮಾಡುವುದೇ ಅವನ ಉದ್ದೇಶವಾಗಿದ್ದಿತು. ಸಾರಥಿಯ ಮಾತಿನಿಂದ ಬಿಟ್ಟಿ ಆಳುಗಳ ನಡುವೆ ಈ ಮಹಾತ್ಮನೂ ರಾಜನ ಪಲ್ಲಕ್ಕಿಯನ್ನು ಹೊತ್ತುಕೊಂಡು ಹೊರಟನು.

೫೬–೫೭. ಪೂರ್ವಜನ್ಮ ಸ್ಮರಣೆಯುಳ್ಳವನೂ ಜ್ಞಾನಿಯೂ ಆದ ಆ ಬ್ರಾಹ್ಮಣನು ತನ್ನ ಪಾಪಕ್ಷಯಕ್ಕಾಗಿ ಬಿಟ್ಟಿಯ ಆಳಾಗಿ ಪಲ್ಲಕ್ಕಿಯನ್ನು ಹೊತ್ತನು. ಬುದ್ಧಿವಂತರಲ್ಲಿ ಶ್ರೇಷ್ಠನಾದ ಆ ಬ್ರಾಹ್ಮಣನು ನಾಲ್ಕು ಮೊಳ ದೂರದಲ್ಲಿ ಮಾತ್ರ

ಯುಯೌ ಜಡಗತಿಃ ಸೋಽಥ ಯುಗಮಾತ್ರಾವಲೋಕನಂ ।
ಕುರ್ವನ್ಮತಿಮತಾಂ ಶ್ರೇಷ್ಠಸ್ತೇತ್ವನ್ಯೇ ತ್ವರಿತಂ ಯಯುಃ ॥ ೫೭ ॥

ವಿಲೋಕ್ಯ ನೃಪತಿಃ ಸೋಽಥ ವಿಷಮಾಂ ಶಿಬಿಕಾಗತಿಂ ।
ಕಿಮೇತದಿತ್ಯಾಹ ಸಮಂ ಗಮ್ಯತಾಂ ಶಿಬಿಕಾವಹಾಃ ॥ ೫೮ ॥

ಪುನಸ್ತಥೈವ ಶಿಬಿಕಾಂ ವಿಲೋಕ್ಯ ವಿಷಮಾಂ ಹಸನ್ ।
ನೃಪಃ ಕಿಮೇತದಿತ್ಯಾಹ ಭವದ್ಭಿರ್ಗಮ್ಯತೇಽನ್ಯಥಾ ॥ ೫೯ ॥

ಭೂಪತೇರ್ವದತಸ್ತಸ್ಯ ಶೃತ್ವೇವಂ ಬಹುಶೋ ವಚಃ ।
ಶಿಬಿಕೋದ್ವಾಹಕಾಃ.ಪ್ರೋಚುರಯಂ ಯಾತೀತ್ಯಸತ್ವರಂ ॥ ೬೦ ॥

॥ ರಾಜೋವಾಚ ॥

ಕಿಂ ಶ್ರಾಂತೋ ಸ್ವಲ್ಪಮಧ್ವಾನಂ ತ್ವಯೋಢಾ ಶಿಬಿಕಾ ಮಮ ।
ಕಿಮಾಯಾಸ ಸಹೋ ನತ್ವಂ ಪೀವಾನಸಿ ನಿರೀಕ್ಷ್ಯಸೇ ॥ ೬೧ ॥

ದೃಷ್ಟಿಯನ್ನಿಟ್ಟುಕೊಂಡು ನಿದಾನವಾಗಿ ನಡೆಯುತ್ತಿದ್ದನು. ಮಿಕ್ಕವರು ವೇಗವಾಗಿ ನಡೆಯುತ್ತಿದ್ದರು.

೫೮-೬೦. ರಾಜನು ಪಲ್ಲಕ್ಕಿಯನ್ನು ಓರೆಯಾಗಿ ಹೊತ್ತಿರುವವರನ್ನು ನೋಡಿ ನೆಟ್ಟಗೆ ಸಮನಾಗಿ ಹೊತ್ತು ನಡೆಯಿರಿ. ಎಂದು ಹೇಳಿದರೂ ವಿಷಮವಾಗಿಯೇ ಹೊತ್ತು ನಡೆಯುತ್ತಿರುವವರನ್ನು ಕಂಡು ನಗುತ್ತ ಏಕೆ ಹೀಗೆ ಮಾಡುವಿರೆಂದು ಕೇಳಲು ರಾಜನು ಮತ್ತೆ ಮತ್ತೆ ಹೇಳುತ್ತಿದ್ದ ಮಾತನ್ನು ಕೇಳಿ ಆಳುಗಳು ಇವನೊಬ್ಬನು ಮೆಲ್ಲಗೆ ಹೋಗುತ್ತಾನೆಂದು ಹೇಳಿದರು.

೬೧. “ರಾಜನು ಎಲೈ ಮನುಷ್ಯನೇ ನನ್ನ ಪಲ್ಲಕ್ಕಿಯನ್ನು ಸ್ವಲ್ಪದೂರ ಹೊತ್ತುದಕ್ಕೇ ನಿನಗೆ ಆಯಾಸವಾಯಿತೇ ? ನೀನು ಕೊಬ್ಬಿದ ಮೈಯುಳ್ಳವನಾಗಿರುವೆ ಇಷ್ಟು ಆಯಾಸವನ್ನು ಸಹಿಸಲಾರೆಯಾ ?” ಎಂದನು.

॥ ಬ್ರಾಹ್ಮಣಃ ॥

ನಾಹಂ ಪೀವಾನ್ನ ಚೈವೋಢಾ ಶಿಬಿಕಾಭವತೋಮಯಾ ।
ನ ಶ್ರಾಂತೋಽಸ್ಮಿ ನ ವಾಯಾಸಸ್ಸೋಢವ್ಯೋಽಸ್ತಿಮಹೀಪತೇ ॥ ೬೨ ॥

॥ ರಾಜಾ ॥

ಪ್ರತ್ಯಕ್ಷಂ ದೃಶ್ಯಸೇ ಪೀವಾನದ್ಯಾಪಿಶಿಬಿಕಾ ತ್ವಯಿ ।
ಶ್ರಮಶ್ಚ ಭಾರೋದ್ವಹನೇ ಭವತ್ಯೇವ ಹಿ ದೇಹಿನಾಂ ॥ ೬೩ ॥

॥ ಬ್ರಾಹ್ಮಣ ಉವಾಚ ॥

ಪ್ರತ್ಯಕ್ಷಂ ಭವತಾ ಭೂಪ ಯದ್ದೃಷ್ಟಂ ಮಮ ತದ್ವದ ।
ಬಲವಾನಬಲಶ್ಚೇತಿ ವಾಚ್ಯಂ ಪಶ್ಚಾದ್ವಿಶೇಷಣಂ ॥ ೬೪ ॥

ತ್ವಯೋಢಾಶಿಬಿಕಾ ಚೇತಿ ತ್ವಯ್ಯದ್ಯಾಪಿ ಚ ಸಂಸ್ಥಿತಾ ।
ಮಿಥ್ಯೈತದತ್ರತು ಭವಾನ್ ಶೃಣೋತು ವಚನಂ ಮಮ ॥ ೬೫ ॥

---

೬೨. ಬ್ರಾಹ್ಮಣನು "ರಾಜನೇ ನಾನು ಕೊಬ್ಬಿದ ಮೈಯುಳ್ಳವನಲ್ಲ, ನಿನ್ನ ಪಲ್ಲಕ್ಕಿಯನ್ನೂ ನಾನು ಹೊತ್ತಿಲ್ಲ. ನನಗೆ ಆಯಾಸವೂ ಆಗಿಲ್ಲ. ಆಯಾಸವನ್ನು ಸಹಿಸಬೇಕಾದುದೂ ಇಲ್ಲ" ಎಂದನು.

೬೩. ರಾಜನು "ಏನಯ್ಯಾ ಸ್ಥೂಲವಾದ ನಿನ್ನನ್ನು ನಾನು ನೋಡುತ್ತಿರುತ್ತೇನೆ. ಈಗಲೂ ನನ್ನ ಪಲ್ಲಕ್ಕಿಯು ನಿನ್ನ ಮೇಲೆ ಇರುತ್ತದೆ. ಭಾರವನ್ನು ಹೊತ್ತ ಮನುಷ್ಯನಿಗೆ ಶ್ರಮವಾಗಿಯೇ ಆಗುವುದು" ಎಂದನು.

೬೪–೬೫. ಬ್ರಾಹ್ಮಣನು "ರಾಜನೇ ನೀನು ಪ್ರತ್ಯಕ್ಷವಾಗಿ ನೋಡಿದುದನ್ನು ನನಗೆ ಮೊದಲು ಹೇಳು. ಆಮೇಲೆ ಬಲವುಳ್ಳವನೂ, ಬಲವಿಲ್ಲದವನೂ ಎಂಬ ವಿಶೇಷಣ ಶಬ್ದಗಳನ್ನು ಹೇಳಬೇಕು. ನೀನು ಪಲ್ಲಕ್ಕಿಯನ್ನು ಹೊತ್ತಿರುವೆ. ನಿನ್ನ ಮೇಲೆ ಅದು ಈಗಲೂ ಇರುತ್ತದೆ. ಎಂಬ ಮಾತು ಸತ್ಯವಾದುದಲ್ಲ. ಈ ವಿಷಯದಲ್ಲಿ

ಭೂಮೌ ಪಾದಯುಗಂ ತ್ವಾಸ್ತೇ ಜಂಘೇ ಪಾದದ್ವಯಾಶ್ರಿತೇ ।
ಊರ್ವೋರ್ಜಂಘಾದ್ವಯಾವಸ್ಥೌ ತದಾಧಾರಂ ತಥೋದರಂ ॥ ೮೬ ॥

ವಕ್ಷಸ್ಥಲಂ ತಥಾ ಬಾಹೂ ಸ್ಕಂಧೌ ಚೋದರಸಂಸ್ಥಿತೌ ।
ಸ್ಕಂಧಾಶ್ರಿತೇಯಂ ಶಿಬಿಕಾ ಮಮ ಭಾರೋಽತ್ರ ಕಿಂಕೃತಃ ॥ ೮೭ ॥

ಶಿಬಿಕಾಯಾಂ ಸ್ಥಿತಶ್ಚಾಯಂ ದೇಹಸ್ತ್ವದುಪಲಕ್ಷಿತಃ ।
ತತ್ರ ತ್ವಮಹಮಪ್ಯತ್ರ ಪ್ರೋಚ್ಯತೇ ಚೇದಮನ್ಯಥಾ ॥ ೮೮ ॥

ಅಹಂ ತ್ವಂ ಚ ತಥಾನ್ಯೇ ಚ ಭೂತೈರೂಹ್ಯಾಮ ಪಾರ್ಥಿವ ।
ಗುಣಪ್ರವಾಹ ಪತಿತೋ ಭೂತವರ್ಗೋಽಪಿ ಯಾತ್ಯಯಂ ॥ ೮೯ ॥

ಕರ್ಮವಶ್ಯಾ ಗುಣಾಹ್ಯೇತೇ ಸ ತ್ವಾದ್ಯಾಃ ಪೃಥಿವೀಪತೇ ।
ಅವಿದ್ಯಾಸಂಚಿತಂ ಕರ್ಮ ತಚ್ಚಾಶೇಷೇಷು ಜಂತುಷು ॥ ೯೦ ॥

ನಾನು ಹೇಳುವುದನ್ನು ಕೇಳು. ಭೂಮಿಯ ಮೇಲೆ ಎರಡು ಪಾದಗಳಿವೆ. ಪಾದಗಳ ಮೇಲೆ ಮೊಣಕಾಲುಗಳು, ಅದರ ಮೇಲೆ ತೊಡೆಗಳು, ಅದರ ಮೇಲೆ ಹೊಟ್ಟೆ, ಅದರ ಮೇಲೆ ಎದೆ ತೋಳುಗಳು, ಹೆಗಲುಗಳೂ ಇರುವುವು. ಹೆಗಲಮೇಲೆ ಪಲ್ಲಕ್ಕಿಯಿರುವುದು ಹೀಗಿರುವಲ್ಲಿ ಸಾಕ್ಷಿಯಾದ ನನಗೆ ಭಾರವೆಲ್ಲಿಯದು? ಪಲ್ಲಕ್ಕಿಯಲ್ಲಿ ನೀನು ಭ್ರಾಂತಿಯಿಂದ ನಾನೆಂದು ತಿಳಿದುಕೊಂಡಿರುವ ಶರೀರವಿರುವುದು. ನೀನಲ್ಲ. ಆದುದರಿಂದ ಪಲ್ಲಕ್ಕಿಯಲ್ಲಿರುವವನು ನಾನು. ನನ್ನನ್ನು ಹೊರುವವನು ನೀನು. ಎಂಬ ಮಾತೂ ಸತ್ಯವಾದುದಲ್ಲ, ಭ್ರಾಂತಿಯ ಮಾತಾಗಿರುವುದು.

೮೯-೯೦. ರಾಜನೇ! ನಾನು, ನೀನು, ಇತರ ಜೀವರುಗಳೂ ಭೂತವರ್ಗವಾದ ದೇಹಗಳಲ್ಲಿ ಸೇರಿರುವೆವು. ಈ ಭೂತವರ್ಗಗಳು ಅವಿದ್ಯಾ ಸಂಚಿತ ಕರ್ಮಾಧೀನವಾಗಿ ಸತ್ವಾದಿಗುಣಪ್ರವಾಹದಲ್ಲಿ ಸೇರಿ ಹೋಗಿರುವುವು. ಸತ್ವಾದಿಗುಣಗಳು ಕರ್ಮಾಧೀನವಾದುವುಗಳು. ಕರ್ಮಗಳು ಅವಿದ್ಯೆಯಿಂದ ಸಂಚಿತವಾಗಿರುವುವು.

ಆತ್ಮಾ ಶುದ್ಧೋಽಕ್ಷರಃ ಶಾಂತೋ ನಿರ್ಗುಣಃ ಪ್ರಕೃತೇಃ ಪರಃ ।
ಪ್ರವೃದ್ಧ್ಯಪಚಯೌ ನಾಸ್ಯ ಚೈಕಸ್ಯಾಖಿಲಜಂತುಷು ॥ ೭೧ ॥

ಯಥಾ ನೋಪಚಯಸ್ತಸ್ಯ ನೈವಾಸ್ಯಾಪಚಯಸ್ತಥಾ ।
ತದಾ ಪೀವಾನಸೀತಿತ್ವಂ ಕಯಾ ಯುಕ್ತ್ಯಾ ತ್ವಯೇರಿತಂ ॥ ೭೨ ॥

ಭೂಪಾದ ಜಂಘಾಕಟ್ಯೂರುಜಠರಾದಿಷು ಸಂಸ್ಥಿತೇ ।
ಶಿಬಿಕೇಯಂ ಯದಾ ಸ್ಕಂಧೇ ತದಾ ಭಾರಃ ಸಮಸ್ತ್ವಯಾ ॥ ೭೩ ॥

ತಥಾನ್ಯೈರ್ಜಂತುಭಿರ್ಭೂಪ ಶಿಬಿಕೋಢಾ ನ ಕೇವಲಂ ।
ಶೈಲದ್ರುಮಗೃಹೋತ್ಥೋಽಪಿ ಪೃಥಿವೀಸಂಭವೋಽಪಿ ವಾ ॥ ೭೪ ॥

ಯದಾ ಪುಂಸಃ ಪೃಥಗ್ಭಾವಃ ಪ್ರಾಕೃತೈಃ ಕಾರಣೈಃ ನೃಪ ।
ಸೋಢವ್ಯಸ್ತುತದಾಯಾಸಃ ಕಥಂವಾ ನೃಪತೇ ಮಯಾ ॥ ೭೫ ॥

೭೧–೭೨. ಆತ್ಮನು ಪರಿಶುದ್ಧನು, ನಾಶರಹಿತನು, ಶಾಂತನು ಸತ್ವಾದಿಗುಣ ರಹಿತನು, ಪ್ರಕೃತಿಗಿಂತ ಶ್ರೇಷ್ಠನು. ಅವನಿಗೆ ವೃದ್ಧಿಕ್ಷಯಗಳಿಲ್ಲ. ಅವನೊಬ್ಬನೇ ಸಮಸ್ತ ಪ್ರಾಣಿಗಳಲ್ಲಿಯೂ ಇರುವನು. ಆತ್ಮನಿಗೆ ವೃದ್ಧಿಯು ಹೇಗೆ ಇಲ್ಲವೋ ಹಾಗೆಯೇ ಕ್ಷಯವೂ ಇರುವುದಿಲ್ಲ. ಹೀಗಿರುವಲ್ಲಿ ನೀನು ಸ್ಥೂಲವಾಗಿರುವೆಯೆಂದು ಯಾವ ಆಧಾರದ ಮೇಲೆ ಹೇಳಿದೆ?

೭೩-೭೪ ರಾಜನೇ ಆತ್ಮಭಿನ್ನವಾದ ಭೂಮಿ, ಪಾದ, ಮೊಳಕಾಲು, ತೊಡೆ, ಸೊಂಟ, ಹೊಟ್ಟೆ, ಎದೆ, ಇವುಗಳ ಮೇಲಿರುವ ಹೆಗಲಿನಲ್ಲಿ ಪಲ್ಲಕ್ಕಿಯಿದ್ದರೆ ಅದು ಸರ್ವವ್ಯಾಪಿಯಾದ ಆತ್ಮಸ್ವರೂಪನಾದ ನನಗೆ ಭಾರವಾದರೆ ನಿನಗೂ ಭಾರವಾಗ ಬೇಕು. ಇತರ ಪ್ರಾಣಿಗಳಿಗೂ ಭಾರವಾಗಬೇಕು. ಹಾಗೆ ಆದರೆ ಬೆಟ್ಟ, ಮರ, ಮನೆ, ಭೂಮಿ, ಮುಂತಾದುವುಗಳ ಭಾರವೂ ಎಲ್ಲರಿಗೂ ಉಂಟಾಗಬೇಕಾಗುವುದು.

೭೫-೭೬. ಪ್ರಕೃತಿ ಸಂಬಂಧವಾದ ಕಾರಣಗಳಿಂದ ಬೇರೆಯಾದ ಪುರುಷನಾದ ನನಗೆ ಭಾರವೆಂಬುದು ಇಲ್ಲವಾದುದರಿಂದ ಆ ಭಾರದಿಂದುಂಟಾದ ಆಯಾಸವು ನನಗೆ

ಯದ್ದ್ರವ್ಯಾಶಿಬಿಕಾ ಚೇಯಂ ತದ್ದ್ರವ್ಯೋ ಭೂತಸಂಗ್ರಹಃ ।
ಭವತೋ ಮೇಽಖಿಲಸ್ಯಾಸ್ಯ ಮಮತ್ವೇನೋಪಬೃಂಹಿತಃ ॥ ೨೬ ॥

॥ ಪರಾಶರ ಉವಾಚ ॥

ಏವಮುಕ್ತ್ವಾಭವನ್ಮೌನೀ ಸ ವಹನ್ ಶಿಬಿಕಾಂ ದ್ವಿಜ ।
ಸೋಽಪಿ ರಾಜಾವತೀರ್ಯೋರ್ವ್ಯಾಂ ತತ್ಪಾದೌ ಜಗೃಹೇ ತ್ವರನ್ ॥ ೨೭ ॥

ಭೋ ಭೋ ವಿಸೃಜ್ಯ ಶಿಬಿಕಾಂ ಪ್ರಸಾದಂ ಕುರು ಮೇ ದ್ವಿಜ ।
ಕಥ್ಯತಾಂ ಕೋ ಭವಾನತ್ರ ಜಾಲ್ಮರೂಪಧರಃ ಸ್ಥಿತಃ ॥ ೨೮ ॥

ಯೋ ಭವಾನ್ಯನ್ನಿಮಿತ್ತಂ ವಾ ಯದಾಗಮನ ಕಾರಣಂ ।
ತತ್ಸರ್ವಂ ಕಥ್ಯತಾಂ ಬ್ರಹ್ಮನ್ ಮಹ್ಯಂ ಶುಶ್ರೂಷವೇ ತ್ವಯಾ ॥ ೨೯ ॥

ಹೇಗೆ ಬರುವುದು ? ಪಲ್ಲಕ್ಕಿಯು ಯಾವ ಪಂಚಭೂತಗಳಿಂದಾಗಿರುವುದೋ ಸಮಸ್ತ ಶರೀರಗಳೂ ಅದೇ ಪಂಚಭೂತಗಳಿಂದಾಗಿರುವುವು. ಎಲ್ಲರಿಗೂ ಸಮಾನವಾದ ಪಂಚಭೂತಗಳಿಂದುಂಟಾದ ಶರೀರದಲ್ಲಿ ನನಗೂ, ನಿನಗೂ, ಎಲ್ಲರಿಗೂ ನನ್ನದೆಂಬ ಅಭಿಮಾನವು ಧೃಢವಾಗಿರುವುದು. ಹೀಗೆಂದು ಪಲ್ಲಕ್ಕಿಯನ್ನು ಹೊತ್ತುಕೊಂಡೇ ಆ ಬ್ರಾಹ್ಮಣನು ಸುಮ್ಮನಾದನು. ಆ ರಾಜನು ಭೂಮಿಗೆ ಇಳಿದು ಆತುರದಿಂದ ಬಂದು ಆ ಬ್ರಾಹ್ಮಣನ ಪಾದಗಳನ್ನು ಹಿಡಿದುಕೊಂಡನು.

೨೮-೨೯. ರಾಜನು "ಮಹಾಮಹಿಮನಾದ ಬ್ರಾಹ್ಮಣನೇ ಪಲ್ಲಕ್ಕಿಯನ್ನು ಬಿಟ್ಟು ನನ್ನಲ್ಲಿ ಅನುಗ್ರಹವನ್ನು ಮಾಡು. ಜಡವೇಷವನ್ನು ಧರಿಸಿದ ನೀನು ಯಾರೆಂಬುದನ್ನು ನನಗೆ ಹೇಳಬೇಕು. ನೀನು ಯಾವ ಜಾತಿಯವನು ? ಯಾವ ಪ್ರಯೋಜನಕ್ಕಾಗಿ ಇಲ್ಲಿಗೆ ಬಂದಿರುವೆ ? ಬರಲು ಕಾರಣವೇನು ? ಇವೆಲ್ಲವನ್ನೂ ಬ್ರಹ್ಮಜ್ಞಾನಿಯಾದ ನೀನು ಕೇಳಬೇಕೆಂದು ಬಯಸುವ ನನಗೆ ಹೇಳಬೇಕು" ಎಂದು ಹೇಳಿದನು.

॥ ಬ್ರಾಹ್ಮಣ ಉವಾಚ ॥

ಶ್ರೂಯತಾಂ ಸೋಹಮಿತ್ಯೇತದ್ವಕ್ತುಂ ಭೂಪ ನ ಶಕ್ಯತೇ ।
ಉಪಭೋಗನಿಮಿತ್ತಂ ತು ಸರ್ವತ್ರಾಗಮನಕ್ರಿಯಾ ॥ ೮೦ ॥

ಸುಖದುಃಖೋಪಭೋಗೌ ಯೌ ತೌ ದೇಶಾದ್ಯುಪಪಾದಿತೌ
ಧರ್ಮಾಧರ್ಮೋದ್ಭವೌ ಭೋಕ್ತುಂ ಜಂತುರ್ದೇಶಾದಿಮೃಚ್ಛತಿ ॥ ೮೧ ॥

ಸರ್ವತ್ರೈವ ಹಿ ಭೂಪಾಲ ಜಂತೋಃ ಸರ್ವಸ್ಯ ಕಾರಣಂ ।
ಧರ್ಮಾಧರ್ಮೌ ಯತಃ ಕಸ್ಮಾತ್ಕಾರಣಂ ಪೃಚ್ಛ್ಯತೇ ತ್ವಯಾ ॥ ೮೨ ॥

॥ ರಾಜೋವಾಚ ॥

ಧರ್ಮಾಧರ್ಮೌ ನ ಸಂದೇಹಃ ಸರ್ವಕಾರ್ಯೇಷು ಕಾರಣಂ ।
ಉಪಭೋಗನಿಮಿತ್ತಂ ಚ ದೇಹಾದ್ದೇಹಾಂತರಾಗಮಃ ॥ ೮೩ ॥

ಯತ್ತ್ವೇತದ್ಭವತಾ ಪ್ರೋಕ್ತಂ ಸೋಹಮಿತ್ಯೇತದಾತ್ಮನಃ ।
ವಕ್ತುಂ ನ ಶಕ್ಯತೇ ಶ್ರೋತುಂ ತನ್ಮಮೇಚ್ಛಾ ಪ್ರವರ್ತತೇ ॥ ೮೪ ॥

೮೦-೮೨. ಬ್ರಾಹ್ಮಣನು, ರಾಜನೇ! ನಾನು ಇಂಥವನೆಂದು ಹೇಳಲು ಸಾಧ್ಯವಿಲ್ಲ. ಎಲ್ಲೆಡೆಯಲ್ಲಿಯೂ ಬರುವುದೆಂಬ ಕಾರ್ಯವು ದುಃಖಗಳನ್ನು ಅನುಭವಿಸುವುದಕ್ಕಾಗಿ ನಡೆವುದು. ಜೀವನು ಸುಖದುಃಖಗಳನ್ನನುಭವಿಸಲು ದೇಶಕಾಲಾದಿಗಳು ಗೊತ್ತಾಗಿರುವುವು. ಧರ್ಮಾಧರ್ಮಗಳಿಂದ ಹುಟ್ಟಿದ ಸುಖದುಃಖರೂಪವಾದ ಫಲಗಳನ್ನನುಭವಿಸುವುದಕ್ಕಾಗಿ ಜೀವನು ದೇಹಾದಿಗಳನ್ನು ಪಡೆವನು. ರಾಜನೇ ಸಮಸ್ತ ಪ್ರಾಣಿಗಳಿಗೂ ಸುಖದುಃಖಗಳುಂಟಾಗಬೇಕಾದರೆ ಧರ್ಮಾಧರ್ಮಗಳೇ ಕಾರಣಗಳಾಗಿರುವಲ್ಲಿ ನಾನು ಬಂದ ಕಾರಣವನ್ನು ನೀನೇಕೆ ಕೇಳುವೆ? ಎಂದನು.

೮೩-೮೪. ರಾಜನು 'ಸಮಸ್ತ ಕಾರ್ಯಗಳಿಗೂ ಧರ್ಮಾಧರ್ಮಗಳು ಕಾರಣಗಳೆಂಬ ವಿಷಯದಲ್ಲಿಯೂ ಸುಖ ದುಃಖಾನುಭವಗಳಿಗಾಗಿ ಜೀವನು ಒಂದು ಶರೀರದಿಂದ ಮತ್ತೊಂದ ಶರೀರಕ್ಕೆ ಹೋಗುವನೆಂಬ ವಿಷಯದಲ್ಲಿಯೂ ಸಂದೇಹವಿಲ್ಲ.

ಯೋಽಸ್ತಿ ಸೋಽಹಮಿತಿ ಬ್ರಹ್ಮನ್ ಕಥಂ ವಕ್ತುಂ ನ ಶಕ್ಯತೇ ।
ಆತ್ಮನ್ಯೇಷ ನ ದೋಷಾಯ ಶಬ್ದೋಽಹಮಿತಿ ಯೋ ದ್ವಿಜ ॥ ೮೫ ॥

॥ ಬ್ರಾಹ್ಮಣ ಉವಾಚ ॥

ಶಬ್ದೋಽಹಮಿತಿ ದೋಷಾಯ ನಾತ್ಮನ್ಯೇಷ ತಥೈವ ತತ್ ।
ಅನಾತ್ಮನ್ಯಾತ್ಮವಿಜ್ಞಾನಂ ಶಬ್ದೋ ವಾ ಭ್ರಾಂತಿಲಕ್ಷಣಃ ॥ ೮೬ ॥

ಜಿಹ್ವಾ ಬ್ರವೀತ್ಯಹಮಿತಿ ದಂತೋಷ್ಠೌ ತಾಲುಕೇ ನೃಪ ।
ಏತೇ ನಾಹಂ ಯತಸ್ಸರ್ವೇ ವಾಙ್ನಿಷ್ಪಾದನಹೇತವಃ ॥ ೮೭ ॥

ಕಿಂ ಹೇತುಭಿರ್ವದತ್ಯೇಷಾ ವಾಗೇವಾಹಮಿತಿ ಸ್ವಯಂ ।
ಅತಃ ಪೀವಾನಸೀತ್ಯೇತದ್ವಕ್ತುಮಿತ್ಥಂ ನ ಯುಜ್ಯತೇ ॥ ೮೮ ॥

ಪಿಂಡಃ ಪೃಥಗ್ಯತಃ ಪುಂಸಃ ಶಿರಃ ಪಾಣ್ಯಾದಿಲಕ್ಷಣಃ ।
ತತೋಽಹಮಿತಿ ಕುತ್ರೈತಾಂ ಸಂಜ್ಞಾಂ ರಾಜನ್ ಕರೋಮ್ಯಹಂ ॥ ೮೯ ॥

ವಿಷಯವನ್ನು ಕೇಳಬೇಕೆಂಬ ನನ್ನ ಆಸೆಯಿದೆ. ಬ್ರಹ್ಮಜ್ಞನೇ ಅಹಂಶಬ್ದವಾಚ್ಯವಾದ ವಸ್ತುವು ಇರುತ್ತಿರಲಾಗಿ ಹೇಗೆ ಹೇಳಲು ಸಾಧ್ಯವಿಲ್ಲ? ಆತ್ಮವಿಷಯಲ್ಲಿ ಅಹಂಶಬ್ಧವು ಗುರುವಿನ ವಿಷಯದಲ್ಲಿ ಹುಂಕಾರ ತ್ವಂಕಾರಗಳು ದೋಷವಾಗುವಂತೆ ದೋಷವಾದುದಲ್ಲ' ಎಂದನು.

೮೬-೯೦. ಬ್ರಾಹ್ಮಣನು ರಾಜನೇ ಆತ್ಮನ ವಿಷಯದಲ್ಲಿ (ಅಹಂ) ನಾನು ಎಂಬ ಶಬ್ದಪ್ರಯೋಗವು ದೋಷವಾದುದಲ್ಲವೆಂಬುದು ನಿಜವಾದುದು. ಆದರೆ ಅನಾತ್ಮವಾದ ದೇಹಾದಿಗಳಲ್ಲಿ ಆತ್ಮನೆಂಬ ಬುದ್ಧಿಯೂ ಅವುಗಳ ವಿಷಯಗಳಲ್ಲಿ (ಅಹಂ) ನಾನು ಎಂಬ ಶಬ್ದಪ್ರಯೋಗವೂ ಭ್ರಾಂತಿಜ್ಞಾನದಿಂದ ಉಂಟಾಗಿರುವುದು ಮಾತು ಹುಟ್ಟುವುದಕ್ಕೆ ನಾಲಿಗೆ, ಹಲ್ಲು, ತುಟಿ, ದವಡೆಗಳು, ಸಹಕಾರಿಗಳು, ನಾನು ಮಾತನಾಡುತ್ತೇನೆ" ಎಂಬ ಸಂದರ್ಭದಲ್ಲಿ ಮಾತಿಗೆ ಈ ಇಂದ್ರಿಯಗಳು ಒಂದೊಂದೇ

ಯದ್ಯನ್ಯೋಽಸ್ತಿ ಪರಃ ಕೋಽಪಿ ಮತ್ತಃ ಪಾರ್ಥಿವಸತ್ತಮ ।
ತದೈಷೋಽಹಮಯಂ ಚಾನ್ಯೋ ವಕ್ತುಮೇವಮಪೀಷ್ಯತೇ ॥ ೯೦ ॥

ಯದಾ ಸಮಸ್ತದೇಹೇಷು ಪುಮಾನೇಕೋ ವ್ಯವಸ್ಥಿತಃ ।
ತದಾ ಹಿ ಕೋ ಭವಾನ್ಸೋಽಹಮಿತ್ಯೇತದ್ವಿಫಲಂ ವಚಃ ॥ ೯೧ ॥

ತ್ವಂ ರಾಜಾ ಶಿಬಿಕಾ ಚೇಯಂ ವಯಂ ವಾಹಾಃ ಪುರಸ್ಸರಾಃ ।
ಅಯಂ ಚ ಭವತೋ ಲೋಕೋ ನ ಸದೇತನ್ನೃಪೋಚ್ಯತೇ ॥ ೯೨ ॥

ವೃಕ್ಷೋದಾರು ತತಶ್ಚೇಯಂ ಶಿಬಿಕಾ ತ್ವದಧಿಷ್ಠಿತಾ ।
ಕ್ವ ವೃಕ್ಷಸಂಜ್ಞಾ ವಾ ತಸ್ಯಾ ದಾರುಸಂಜ್ಞಾಥ ವಾ ನೃಪ ॥ ೯೩ ॥

ಕರ್ತೃವಾಗಲಾರದು. ಎಲ್ಲವೂ ಕೂಡಿ ಮಾತು ಹುಟ್ಟುವುದಕ್ಕೆ ಕಾರಣಗಳಾಗಿರುವುವು. ಆದುದರಿಂದ ನಾನು ಎಂಬುದಕ್ಕೆ ಇಂದ್ರಿಯಗಳು ಅರ್ಥವಲ್ಲ. ಮಾತುಗಳೇ ನಾನು ಎಂದು ಹೇಳುವುದಕ್ಕೂ ಕಾರಣಗಳಿಲ್ಲ. ಸ್ಥೂಲ ಶರೀರನಾಗಿರುತ್ತಿ ಎಂದು ಹೇಳಿದ ನಿನ್ನ ಮಾತಿನಲ್ಲಿ ಸ್ಥೂಲತ್ವವು ಕಾಣುವುದಿಲ್ಲ. ಆದುದರಿಂದ ಮಾತುಗಳೂ ನಾನಲ್ಲ. ತಲೆ ಕೈಕಾಲು ಮುಂತಾದುವುಗಳಿಂದ ಕೂಡಿದ ಶರೀರವು ಪುರುಷನಿಗಿಂತ ಬೇರೆಯಾಗಿರುವುದರಿಂದ ನಾನು ಎಂಬ ಶಬ್ದದ ಅರ್ಥವನ್ನು ಯಾವುದಲ್ಲಿ ತೋರಿಸಲಿ? ರಾಜಶ್ರೇಷ್ಠನೇ! ನನಗಿಂತ ಬೇರೆಯಾದವನು ಮತ್ತೊಬ್ಬನಿದ್ದರೆ ಆಗ ಇಂಥವನು ನಾನು ಎಂದು ಹೇಳಬಹುದು.

೯೧. ಸಮಸ್ತ ಶರೀರಗಳಲ್ಲಿಯೂ ಪರಮಾತ್ಮನೊಬ್ಬನೇ ಇರುತ್ತಿರಲಾಗಿ ನೀನು ಯಾರು? ಎಂಬ ನಿನ್ನ ಪ್ರಶ್ನೆಯೂ ನಾನು ಇಂಥವನು ಎಂಬ ನನ್ನ ಉತ್ತರವೂ ವ್ಯರ್ಥವಾದವುಗಳಾಗುವುವು.

೯೨-೯೩ ನೀನು ರಾಜನು. ಇದು ಪಲ್ಲಕ್ಕಿಯು. ನಾವು ವಾಹಕರು ಇವರೆಲ್ಲರೂ ನಿನ್ನ ಸೇವಕರು. ಎಂಬುದು ಸತ್ಯವಾದುದಲ್ಲ. ಏಕೆಂಬುವನ್ನು ಹೇಳುವೆನು. ಕೇಳು. ಮರವು ಹಸಿಯಾದುದು. ಅದನ್ನು ಕಡಿದ ಮೇಲೆ ಒಣಗಿದ ಕಟ್ಟಿಗೆ

ವೃಕ್ಷಾರೂಢೋ ಮಹಾರಾಜೋ ನಾಯಂ ವದತಿ ತೇ ಜನಃ ।
ನ ಚ ದಾರುಣಿ ಸರ್ವಸ್ತ್ವಾಂ ಬ್ರವೀತಿ ಶಿಬಿಕಾಗತಂ ॥ ೯೪ ॥

ಶಿಬಿಕಾ ದಾರುಸಂಘಾತೋ ರಚನಾಸ್ಥಿತಿಸಂಸ್ಥಿತಃ ।
ಅನ್ವಿಷ್ಯತಾಂ ನೃಪಶ್ರೇಷ್ಠ ತದ್ಭೇದೇ ಶಿಬಿಕಾ ತ್ವಯಾ ॥ ೯೫ ॥

ಏವಂ ಛತ್ರಶಲಾಕಾನಾಂ ಪೃಥಗ್ಭಾವೋ ವಿಮೃಶ್ಯತಾಂ ।
ಕ್ವ ಯಾತಂ ಛತ್ರಮಿತ್ಯೇಷ ನ್ಯಾಯಸ್ತ್ವಯಿ ತಥಾ ಮಯಿ ॥ ೯೬ ॥

ಪುಮಾನ್ ಸ್ತ್ರೀ ಗೌರಜೋ ವಾಜೀ ಕುಂಜರೋ ವಿಹಗಸ್ತರುಃ ।
ದೇಹೇಷು ಲೋಕ ಸಂಜ್ಞೇಯಂ ವಿಜ್ಞೇಯಾಕರ್ಮಹೇತುಷು ॥ ೯೭ ॥

ಯಾಯಿತು. ಅವನ್ನು ಚಚ್ಚೌಕವಾಗಿ ಕೊಯ್ದು ಈ ಪಲ್ಲಕ್ಕಿಯಾಗಿರುವುದು, ಅದರಲ್ಲಿ ನೀನು ಕುಳಿತಿರುವೆ. ಈಗ ಅದಕ್ಕೆ ಗಿಡವೆಂಬ ಹೆಸರಾಗಲಿ, ಒಣಗಿದ ಮರವೆಂಬ ಹೆಸರಾಗಲಿ, ಇರುವುದೇ? ನಿನ್ನ ಜನರು ಮಹಾರಾಜನು ಗಿಡದ ಮೇಲಿರುವನು, ಒಣಗಿದ ಮರದ ಮೇಲಿರುವನು ಎಂದು ಹೇಳುವುದಿಲ್ಲ. ಪಲ್ಲಕ್ಕಿಯಲ್ಲಿ ಕುಳಿತಿರುವನು ಎಂದು ಹೇಳುವರು. ಪಲ್ಲಕ್ಕಿಯು ಒಣಮರವನ್ನು ಕೊಯ್ದು ಅದರ ತುಂಡುಗಳಿಂದ ಮಾಡಿರುವುದು. ಆ ಪಲ್ಲಕ್ಕಿಯನ್ನು ಒಡೆದು ಆಮೇಲೆ ನಿನ್ನ ಪಲ್ಲಕ್ಕಿಯು ಎಲ್ಲಿರುವದೆಂಬುದನ್ನು ವಿಚಾರಮಾಡಿ ಹುಡುಕಿನೋಡು.

೯೬-೯೮. ಹೀಗೆಯೇ ಛತ್ರಿಯಾಗಿರುವ ಕಬ್ಬಿಣದ ಕಡ್ಡಿಗಳನ್ನು ಬೇರೆಮಾಡಿ ಛತ್ರಿಯು ಎಲ್ಲಿ ಹೋಯಿತೆಂದು ವಿಚಾರಮಾಡು ಈ ನ್ಯಾಯವೇ ಶರೀರ ರೂಪವಾದ ನಿನ್ನಲ್ಲಿಯೂ ನನ್ನಲ್ಲಿಯೂ ಇರುವುದು. (ಅಂದರೆ ನಾನೂ ಇಲ್ಲ ನೀನೂ ಇಲ್ಲವೆಂಬ ಅಭಿಪ್ರಾಯವು) ಹಾಗಾದರೆ ನಾನು ನೀನೆಂಬ ವ್ಯವಹಾರವು ಹೇಗೆ ಬಂದಿತೆಂದರೆ:— ಪುರುಷ, ಸ್ತ್ರೀ, ಗೋವು, ಆಡು, ಕುದುರೆ, ಆನೆ, ಹಕ್ಕಿ, ಮರ, ಎಂಬ ಹೆಸರುಗಳು "ವಾಚಾರಂಭಣಂ ವಿಕಾರೋನಾಮಧೇಯಂ" ಎಂಬ ವೇದವಚನದಂತೆ ಕರ್ಮಕಾರಣವಾದ ಶರೀರಗಳಿಗೆ ಬಂದಿರುವುವು. ರಾಜನೇ, ಪುರುಷನು (ಸಾಕ್ಷೀ ಚೇತನನು)

ಪುಮಾನ್ನ ದೇವೋ ನ ನರೋ ನ ಪಶುರ್ನ ಚ ಪಾದಪಃ ।
ಶರೀರಾಕೃತಿಭೇದಾಸ್ತು ಭೂಪತೇ ಕರ್ಮಯೋನಯಃ ॥ ೯೮ ॥

ವಸ್ತು ರಾಜೇತಿ ಯಲ್ಲೋಕೇ ಯಚ್ಚ ರಾಜಭಟಾದಿಕಂ ।
ತಥಾನ್ಯಚ್ಚ ನೃಪೇತ್ಥಂತ ನ್ನ ಸತ್ಸಂಕಲ್ಪನಾಮಯಂ ॥ ೯೯ ॥

ಯತ್ತು ಕಾಲಾಂತರೇಣಾಪಿ ನಾನ್ಯಸಂಜ್ಞಾಮುಪೈತಿ ವೈ ।
ಪರಿಣಾಮಾದಿಸಂಭೂತಾಂ ತದ್ವಸ್ತು ನೃಪ ತಚ್ಚ ಕಿಂ ॥ ೧೦೦ ॥

ತ್ವಂ ರಾಜಾ ಸರ್ವಲೋಕಸ್ಯ ಪಿತುಃ ಪುತ್ರೋ ರಿಪೋರಿಪುಃ ।
ಪತ್ನ್ಯಾಃ ಪತಿಃ ಪಿತಾ ಸೂನೋಃ ಕಂ ತ್ವಾಂ ಭೂಪ ವದಾಮ್ಯಹಂ ॥೧೦೧॥

ತ್ವಂ ಕಿಮೇತಚ್ಛಿರಃ ಕಿಂ ನುಗ್ರೀವಾತವ ತಥೋದರಂ ।
ಕಿಮುಪಾದಾದಿಕಂ ತ್ವಂ ವೈ ತವೈತತ್ಕಿಂ ಮಹೀಪತೇ ॥ ೧೦೨ ॥

ದೇವನೂ ಅಲ್ಲ ಮನುಷ್ಯನೂ ಅಲ್ಲ. ಪಶುವೂ ಅಲ್ಲ. ಮರವೂ ಅಲ್ಲ. ಶರೀರ ಮತ್ತು ಆಕಾರ ಭೇದಗಳು ಜೀವರ ಕರ್ಮಗಳಿಂದುಂಟಾದುವು.

೯೯. ರಾಜಶ್ರೇಷ್ಠನೇ! ರಾಜನೆಂದೂ ರಾಜಭಟರೆಂದೂ ಹೇಳುವ ಇತರ ಸಮಸ್ತ ಲೋಕ ವ್ಯವಹಾರದ ವಸ್ತುಗಳೆಲ್ಲವೂ ಸತ್ಯವಾದುವುಗಳಲ್ಲ. ಕಲ್ಪಿತವಾದುವುಗಳು.

೧೦೦. ಯಾವ ವಸ್ತುವು ಎಷ್ಟುಕಾಲವಾದರೂ ಪರಿಣಾಮಾದಿಗಳಿಂದುಂಟಾವ ಬೇರೆ ಹೆಸರನ್ನು ಪಡೆಯುವುದಿಲ್ಲವೋ ಅದೇ ಪರಮಾರ್ಥವಾದ ವಸ್ತುವು. ಅದು ಇಲ್ಲಿ ಯಾವುದು? (ರಾಜನಾದ ನಿನಗೂ ಬಾಲ್ಯ ಯೌವನಾದಿ ಪರಿಣಾಮಗಳಿರುವುದರಿಂದ ನೀನೂ ಪರಮಾರ್ಥ ವಸ್ತುವಲ್ಲವೆಂದು ಭಾವವು)

೧೦೧-೧೦೨. ನೀನು ಈ ಸಮಸ್ತ ಪ್ರಜೆಗಳಿಗೂ ರಾಜನು. ನಿನ್ನ ತಂದೆಗೆ ಮಗನು. ಶತ್ರುವಿಗೆ ಶತ್ರುವು. ಹೆಂಡತಿಗೆ ಪತಿಯು. ಮಗನಿಗೆ ತಂದೆಯು ಹೀಗಿರುವಲ್ಲಿ ನಿನ್ನನ್ನು ಯಾರೆಂದು ಹೇಳೋಣ. ನೀನು ಈ ತಲೆಯೋ ಕುತ್ತಿಗೆಯೋ

ಸಮಸ್ತಾವಯವೇಭ್ಯಸ್ತ್ವಂ ಪೃಥಗ್ಭೂಪ ವ್ಯವಸ್ಥಿತಃ ।
ಕೋಽಹಮಿತ್ಯತ್ರ ನಿಪುಣೋ ಭೂತ್ವಾ ಚಿಂತಯ ಪಾರ್ಥಿವ ॥ ೧೦೩ ॥

ಏವಂ ವ್ಯವಸ್ಥಿತೇ ತತ್ತ್ವೇಮ ಯಾಹಮಿತಿ ಭಾಷಿತುಂ ।
ಪೃಥಕ್ಕರಣ ನಿಷ್ಪಾದ್ಯಂ ಶಕ್ಯತೇ ನೃಪ ತೇ ಕಥಂ ॥ ೧೦೪ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ತ್ರಯೋದಶೋಽಧ್ಯಾಯಃ

ಹೊಟ್ಟೆಯೇ ಕಾಲುಗಳೇ ಅಥವಾ ಈ ಅಂಗಗಳು ನಿನ್ನವೇ ಈ ಎಲ್ಲಾ ಅವಯವ ಗಳಿಗಿಂತ ನೀನು ಬೇರೆಯಾಗಿರುವೆ. ಎಲೈ ರಾಜನೇ, ಬುದ್ಧಿವಂತನಾಗಿ ಈ ವಿಷಯದಲ್ಲಿ ವಿಚಾರಮಾಡಿ " ನಾನು ಯಾರು " ಎಂದು ಯೋಚಿಸು.

೧೦೪. ರಾಜನೇ! ಪರಮಾರ್ಥ ತತ್ತ್ವವು ಭೇದವಿಲ್ಲದೆ ಇರುತ್ತಿರಲಾಗಿ ಅದನ್ನು ಬೇರೆ ಮಾಡಿ ನಾನು ಇಂಥವನೆಂದು ನಿನಗೆ ಉತ್ತರವನ್ನು ಹೇಳುವುದು ಹೇಗೆ ಸಾಧ್ಯ ವಾಗುವುದು ?

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಹದಿಮೂರನೆಯ ಅಧ್ಯಾಯವು ಮುಗಿದುದು

ಶ್ರೀಃ

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ಚತುರ್ದಶೋಽಧ್ಯಾಯಃ

॥ ಪರಾಶರ ಉವಾಚ ॥

ನಿಶಮ್ಯ ತಸ್ಯೇತಿ ವಚಃ ಪರಮಾರ್ಥಸಮನ್ವಿತಂ ।
ಪ್ರಶ್ರಯಾವನತೋ ಭೂತ್ವಾ ತಮಾಹ ನೃಪತಿರ್ದ್ವಿಜಂ ॥ ೧ ॥

॥ ರಾಜೋವಾಚ ॥

ಭಗವನ್ ಯತ್ತ್ವಯಾ ಪ್ರೋಕ್ತಂ ಪರಮಾರ್ಥಮಿದಂ ವಚಃ ।
ಶ್ರುತೇ ತಸ್ಮಿನ್ ಭ್ರಮಂತೀವ ಮನಸೋ ಮಮ ವೃತ್ತಯಃ ॥ ೨ ॥

ಏತದ್ವಿವೇಕ ವಿಜ್ಞಾನಂ ಯದಶೇಷೇಷು ಜಂತುಷು ।
ಭವತಾ ದರ್ಶಿತಂ ವಿಪ್ರ ತತ್ಪರಂ ಪ್ರಕೃತೇರ್ಮಹತ್ ॥ ೩ ॥

ಹದಿನಾಲ್ಕನೆಯ ಅಧ್ಯಾಯವು.

೧. ಆ ಬ್ರಾಹ್ಮಣನ ಪರಮಾರ್ಥತತ್ತ್ವ ವಿವರಣರೂಪವಾದ ಈ ಮಾತ್ರಗಳನ್ನು ಕೇಳಿ ರಾಜನು ವಿನಯದಿಂದ ನಮಸ್ಕರಿಸಿ ಆ ಬ್ರಾಹ್ಮಣನನ್ನು ಕುರಿತು ಮಾತನಾಡಿದನು.

೨-೩. "ಮಹಾಮಹಿಮರೇ! ನೀವು ಹೇಳಿದ ಪರಮಾರ್ಥತತ್ತ್ವಬೋಧಕವಾದ ವಾಕ್ಯಗಳನ್ನು ಕೇಳಿದರೂ ಅವುಗಳ ವಿಷಯದಲ್ಲಿ ನನ್ನ ಮನೋವೃತ್ತಿಗಳು ಭ್ರಾಂತಿ ಹೊಂದಿದಂತಿವೆ. ಸಮಸ್ತ ಪ್ರಾಣಿಗಳ ವಿಷಯದಲ್ಲಿಯೂ ನೀವು ತೋರಿಸಿದ ವಿವೇಕಪೂರ್ವಕವಾದ ಜ್ಞಾನವು ಪ್ರಕೃತಿಗಿಂತ ಶ್ರೇಷ್ಠವಾದ ದೊಡ್ಡದಾದ ಆತ್ಮಜ್ಞಾನವಾಗಿರುವುದು.

ನಾಹಂ ವಹಾಮಿ ಶಿಬಿಕಾಂ ಶಿಬಿಕಾ ನ ಮಯಿ ಸ್ಥಿತಾ ।
ಶರೀರಮನ್ಯದಸ್ಮತ್ತೋ ಯೇನೇಯಂ ಶಿಬಿಕಾ ಧೃತಾ ॥ ೪ ॥

ಗುಣಪ್ರವೃತ್ತ್ಯಾ ಭೂತಾನಾಂ ಪ್ರವೃತ್ತಿಃ ಕರ್ಮಚೋದಿತಾ ।
ಪ್ರವರ್ತಂತೇ ಗುಣಾಶ್ಚೈತೇ ಕಿಂ ಮಮೇತಿ ತ್ವಯೋದಿತಂ ॥ ೫ ॥

ಏತಸ್ಮಿನ್ ಪರಮಾರ್ಥಜ್ಞ ಮಮ ಶ್ರೋತ್ರಪಥಂ ಗತೇ ।
ಮನೋ ವಿಹ್ವಲತಾಮೇತಿ ಪರಮಾರ್ಥಾರ್ಥತಾಂ ಗತಂ ॥ ೬ ॥

ಪೂರ್ವಮೇವ ಮಹಾಭಾಗಂ ಕಪಿಲರ್ಷಿಮಹಂ ದ್ವಿಜ ।
ಪ್ರಷ್ಟುಮಭ್ಯುದ್ಯತೋ ಗತ್ವಾ ಶ್ರೇಯಃ ಕಿನ್ವತ್ರ ಸಂಶ್ರವಃ ॥ ೭ ॥

ತದಂತರೇ ಚ ಭವತಾ ಯದಿದಂ ವಾಕ್ಯಮೀರಿತಂ ।
ತೇನೈವ ಪರಮಾರ್ಥಾರ್ಥೀ ತ್ವಯಿ ಚೇತಃ ಪ್ರಧಾವತಿ ॥ ೮ ॥

೪-೬. ನಾನು ಪಲ್ಲಕ್ಕಿಯನ್ನು ಹೊತ್ತಿಲ್ಲ. ಪಲ್ಲಕ್ಕಿಯು ನನ್ನಲ್ಲಿಲ್ಲ. ನನಗಿಂತ ಶರೀರವು ಬೇರೆಯಾದುದು. ಅದೇ ಪಲ್ಲಕ್ಕಿಯನ್ನು ಹೊತ್ತಿರುವುದು. ಪ್ರಾಣಿಗಳು ಸತ್ವಾದಿಗುಣಗಳ ಚಲನೆಯಿಂದ ಕರ್ಮಗಳನ್ನು ಮಾಡುವರು. ಈ ಗುಣಗಳು ಕೆಲಸ ಮಾಡಿದರೆ ನನಗೇನು ಪ್ರಯೋಜನ ಎಂದು ನೀವು ಹೇಳಿದಿರಿ, ಈ ಮಾತನ್ನು ನಾನು ಕೇಳಿದಮೇಲೆ ನನ್ನ ಮನಸ್ಸು ಪರಮಾರ್ಥತತ್ವವನ್ನು ತಿಳಿಯಬೇಕೆಂದು ಕಾತುರವಾಗಿರುವುದು.

೭-೧೧. ಬ್ರಹ್ಮಜ್ಞನೇ! ಇದಕ್ಕೆ ಮುಂಚಿತವಾಗಿಯೇ ನಾನು ಮಹಾಮಹಿಮನಾದ ಕಪಿಲಮಹರ್ಷಿಯ ಸಮೀಪಕ್ಕೆ ಹೋಗಿ ಈ ಸಂಸಾರದಲ್ಲಿ ಶ್ರೇಯಸ್ಸಿಗೆ ಸಾಧನವಾದುದಾವುದೆಂದು ಪ್ರಶ್ನೆಮಾಡಲು ಪ್ರಯತ್ನಪಟ್ಟಿರುವೆನು. ಅಷ್ಟರಲ್ಲಿಯೇ ತಾವು ಈ ಮಾತುಗಳನ್ನು ಹೇಳಿದಿರಿ, ಆದರಿಂದಲೇ ನನ್ನ ಮನಸ್ಸು ನಿಮ್ಮಲ್ಲಿಯೇ ಪರಮಾರ್ಥತತ್ವವನ್ನು ತಿಳಿಯಬೇಕೆಂದು ಆಸಕ್ತವಾಗಿರುವುದು. ಸರ್ವಭೂತಸ್ವರೂಪನಾದ ಮಹಾವಿಷ್ಣುವೇ ಜಗತ್ತಿನ ಅಜ್ಞಾನವನ್ನು ನಾಶಮಾಡಬೇಕೆಂದು ಕಪಿಲಋಷಿಯಾಗಿ

ಕಪಿಲರ್ಷಿರ್ಭಗವತಃ ಸರ್ವಭೂತಸ್ಯ ವೈ ಕಿಲ ।
ವಿಷ್ಣೋರಂಶೋ ಜಗನ್ಮೋಹನಾಶಾಯೋರ್ವೀಮುಪಾಗತಃ ॥ ೯ ॥

ಸ ಏವ ಭಗವಾನ್ನೂನಮಸ್ಮಾಕಂ ಹಿತಕಾಮ್ಯಯಾ ।
ಪ್ರತ್ಯಕ್ಷತಾಮತ್ರ ಗತೋ ಯಥೈತದ್ಭವತೋಚ್ಯತೇ ॥ ೧೦ ॥

ತನ್ಮಹ್ಯಂ ಪ್ರಣತಾಯ ತ್ವಂ ಯಚ್ಛ್ರೇಯಃ ಪರಮಂ ದ್ವಿಜ ।
ತದ್ವದಾಖಿಲವಿಜ್ಞಾನ ಜಲವೀಚ್ಯುದಧಿರ್ಭವಾನ್ ॥ ೧೧ ॥

॥ ಬ್ರಾಹ್ಮಣ ಉವಾಚ ॥

ಭೂಪ ಪೃಚ್ಛಸಿ ಕಿಂ ಶ್ರೇಯಃ ಪರಮಾರ್ಥಂ ನು ಪೃಚ್ಛಸಿ ।
ಶ್ರೇಯಾಂಸ್ಯಪರಮಾರ್ಥಾನಿ ಯಶಾನ್ಯಶೇಷಾಣಿ ಭೂಪತೇ ॥ ೧೨ ॥

ದೇವತಾರಾಧನಂ ಕೃತ್ವಾ ಧನಸಂಪದಮಿಚ್ಛತಿ ।
ಪುತ್ರಾನಿಚ್ಛತಿ ರಾಜ್ಯಂ ಚ ಶ್ರೇಯಸ್ತತ್ಪ್ರಾಪ್ತಿಲಕ್ಷಣಂ ॥ ೧೩ ॥

ಕರ್ಮಯಜ್ಞಾತ್ಮಕಂ ಶ್ರೇಯಃ ಸ್ವರ್ಲೋಕಫಲದಾಯಿ ಯತ್ ।
ಶ್ರೇಯಃ ಪ್ರಧಾನಂ ಚ ಫಲೇ ತದೇವಾನಭಿಸಂಹಿತೇ ॥ ೧೪ ॥

ಭೂಮಿಯಲ್ಲಿ ಅವತಾರ ಮಾಡಿರುವನಂತೆ. ತಾವು ಹೀಗೆ ಹೇಳುವುದನ್ನು ನೋಡಿದರೆ ಆ ಮಹಾಮಹಿಮನಾದ ಕಪಿಲಮುನಿಯೇ ನಮ್ಮ ಹಿತಕ್ಕಾಗಿ ಈ ರೂಪದಿಂದ ಬಂದಿರಬಹುದೆಂದು ತಿಳಿಯುವೆನು. ಆದುದರಿಂದ ಸಮಸ್ತ ವಿಜ್ಞಾನವೆಂಬ ಅಲೆಗಳಿಂದ ಕೂಡಿದ ಪರಮಾರ್ಥ ಜ್ಞಾನವೆಂಬ ಸಮುದ್ರಸ್ವರೂಪರಾದ ತಾವು ನಮಸ್ಕಾರ ಮಾಡಿದ ನನಗೆ ಪರಮ ಶ್ರೇಯಸ್ಸು ಯಾವುದೆಂಬುದನ್ನು ಹೇಳಬೇಕು" ಎಂದನು

೧೨-೧೬. ಬ್ರಾಹ್ಮಣನು ಹೇಳುವನು:— ರಾಜನೇ ಶ್ರೇಯಸ್ಸು ಯಾವುದೆಂದು ಕೇಳುವೆಯಾ ಅಥವಾ ಪರಮಾರ್ಥವು ಯಾವುದೆಂದು ಕೇಳುವೆಯಾ? ಸಮಸ್ತ ಶ್ರೇಯಸ್ಸುಗಳೂ ಪರಮಾರ್ಥವಾಗುವುದಿಲ್ಲ. ದೇವತಾರಾಧನೆಯನ್ನು ಮಾಡಿ ಧನವನ್ನೂ, ಸಂಪತ್ತನ್ನೂ ಅಪೇಕ್ಷಿಸುವರು ಪುತ್ರರು ರಾಜ್ಯ ಇವುಗಳನ್ನು

ಆತ್ಮಾಧ್ಯೇಯಃ ಸದಾ ಭೂಪ ಯೋಗಯುಕ್ತೈಸ್ತಥಾ ಪರಂ ।
ಶ್ರೇಯಸ್ತಸ್ಯೈವ ಸಂಯೋಗಃ ಶ್ರೇಯೋಯತ್ ಪರಮಾತ್ಮನಃ ॥ ೧೫ ॥

ಶ್ರೇಯಾಂಸ್ಯೇವ ಮನೇಕಾನಿ ಶತಶೋಽಥ ಸಹಸ್ರಶಃ ।
ಸಂತ್ಯತ್ರ ಪರಮಾರ್ಥಸ್ತು ನ ತ್ವೇತೇ ಶ್ರೂಯತಾಂ ಚ ಮೇ ॥ ೧೬ ॥

ಧರ್ಮಾಯ ತ್ಯಜತೇ ಕಿಂ ನು ಪರಮಾರ್ಥೋ ಧನಂ ಯದಿ ।
ವ್ಯಯಶ್ಚ ಕ್ರಿಯತೇ ಯಸ್ಮಾತ್ಕಾಮಪ್ರಾಪ್ತ್ಯುಪಲಕ್ಷಣಃ ॥ ೧೭ ॥

ಪುತ್ರಶ್ಚೇತ್ಪರಮಾರ್ಥಸ್ಸ್ಯಾತ್ ಸೋಽಪ್ಯನ್ಯಸ್ಯ ನರೇಶ್ವರ ।
ಪರಮಾರ್ಥಭೂತಃ ಸೋಽನ್ಯಸ್ಯ ಪರಮಾರ್ಥೋ ಹಿ ತತ್ಪಿತಾ ॥ ೧೮ ॥

ಏವಂ ನ ಪರಮಾರ್ಥೋಽಸ್ತಿ ಜಗತ್ಯತ್ರ ನರಾಧಿಪ ।
ಪರಮಾರ್ಥೋ ಹಿ ಕಾರ್ಯಾಣಿ ಕಾರಣಾನಾಮಶೇಷತಃ ॥ ೧೯ ॥

ಅಪೇಕ್ಷಿಸುವರು. ಇವುಗಳ ಪ್ರಾಪ್ತಿಯೇ ಶ್ರೇಯಸ್ಸೆನಿಸುವುದು. ಸ್ವರ್ಗಸುಖವನ್ನುಂಟು ಮಾಡುವ ಯಜ್ಞರೂಪವಾದ ಕರ್ಮವೂ, ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಗಳೂ ಯೋಗಿಗಳಾಗಿ ಆತ್ಮಧ್ಯಾನಾಸಕ್ತರಾಗಿರುವುದೂ, ಆ ಪರಮಾತ್ಮನಲ್ಲಿಯೇ ಐಕ್ಯವಾಗುವುದೂ ಶ್ರೇಯಸ್ಸೆನಿಸುವುವು. ಹೀಗೆ ಶ್ರೇಯಸ್ಸುಗಳು ಸಾವಿರಾರು ಇರುವುವು. ಇವುಗಳೆಲ್ಲ ಪರಮಾರ್ಥ ತತ್ತ್ವಗಳಲ್ಲವೆಂದು ನನ್ನ ಅಭಿಪ್ರಾಯವು.

೧೭–೨೦. ಧನವನ್ನು ಧರ್ಮಾರ್ಥವಾಗಿ ದಾನಮಾಡಿದರೂ ಅದೂ ಕಾಮಾರ್ಥವಾದುದಾಗಿಯೂ ಇರುವುದು. ಆದುದರಿಂದ ಅದು ಪರಮ ಪುರುಷಾರ್ಥವಾದುದಲ್ಲ. ತಂದೆಗೆ ಮಗನು ಪರಮಾರ್ಥವೆಂದರೆ ಆ ತಂದೆಯು ಮತ್ತೊಬ್ಬನ ಮಗನಾದುದರಿಂದ ಅವನೂ, ಅವನ ತಂದೆಯು ಮತ್ತೊಬ್ಬನಿಗೂ ಹೀಗೆಯೇ ಪರಂಪರೆಯಾಗಿ ಅತಿ ಪ್ರಸಂಗದಿಂದ ಯಾರೂ ಪರಮಾರ್ಥವಾಗುವುದಿಲ್ಲ. ಎಲ್ಲ ಕಾರ್ಯಗಳೂ ಕಾರಣಗಳಿಗೆ ಪರಮಾರ್ಥವಾದುವುಗಳು. ರಾಜ್ಯಾದಿ ಪ್ರಾಪ್ತಿಗಳು ಪರಮಾರ್ಥ

ರಾಜ್ಯಾದಿಪ್ರಾಪ್ತಿರತ್ರೋಕ್ತಾ ಪರಮಾರ್ಥತಯಾ ಯದಿ ।
ಪರಮಾರ್ಥಾ ಭವಂತ್ಯತ್ರ ನ ಭವಂತಿ ಚ ವೈ ತತಃ　　॥ ೨೦ ॥

ಋಗ್ಯಜುಃ ಸಾಮನಿಷ್ಪಾದ್ಯಂ ಯಜ್ಞಕರ್ಮಮತಂ ತವ ।
ಪರಮಾರ್ಥಭೂತಂ ತತ್ರಾಪಿ ಶ್ರೂಯತಾಂ ಗದತೋ ಮಮ　　॥ ೨೧ ॥

ಯತ್ತು ನಿಷ್ಪಾದ್ಯತೇ ಕಾರ್ಯಂ ಮೃದಾ ಕಾರಣಭೂತಯಾ ।
ತತ್ಕಾರಣಾನುಗಮನಾತ್ ಜಾಯತೇ ನೃಪ ಮೃಣ್ಮಯಂ　　॥ ೨೨ ॥

ಏವಂ ವಿನಾಶಿಭಿರ್ದ್ರವ್ಯೈಃ ಸಮಿದಾಜ್ಯಕುಶಾದಿಭಿಃ ।
ನಿಷ್ಪಾದ್ಯತೇ ಕ್ರಿಯಾ ಯಾ ತು ಸಾ ಭವಿತ್ರೀ ವಿನಾಶಿನೀ　　॥ ೨೩ ॥

ಅನಾಶೀ ಪರಮಾರ್ಥಶ್ಚ ಪ್ರಾಜ್ಞೈರಭ್ಯುಪಗಮ್ಯತೇ ।
ತತ್ತು ನಾಶಿ ನ ಸಂದೇಹೋ ನಾಶಿದ್ರವ್ಯೋಪಪಾದಿತಂ　　॥ ೨೪ ॥

ವೆಂದರೆ ಅವೂ ಬರುವುದು, ಹೋಗುವುದು ಇವುಗಳಿಂದ ಸ್ಥಿರವಾದುವಲ್ಲವೆಂದು ತಿಳಿಯಬೇಕು.

೨೧-೨೩. ಋಗ್ವೇದ, ಯಜುರ್ವೇದ, ಸಾಮವೇದಗಳಿಂದ ಮಾಡಿದ ಯಜ್ಞಕರ್ಮಗಳಿಗೆ ಫಲವಾದ ಸ್ವರ್ಗಾದಿಗಳು ಪರಮಾರ್ಥವೆಂದರೆ, ಕಾರಣವಾದ ಮಣ್ಣಿನಿಂದ ಉತ್ಪತ್ತಿಯಾದ ಘಟವು ನಾಶವಾಗಿ ಪುನಃ ಮಣ್ಣಿನ ರೂಪವೇ ಆಗುವುದು. ಹಾಗೆಯೇ ನಾಶವಾಗುವ ಪದಾರ್ಥಗಳಾದ ಸಮಿತ್ತು, ತುಪ್ಪ, ದರ್ಭೆ ಮೊದಲಾದ ದ್ರವ್ಯಗಳಿಂದ ಮಾಡಿದ ಕೆಲಸದ ಫಲವು ನಾಶವಾಗತಕ್ಕುದಾಗಿರುವುದು.

೨೪-೨೬. ಪರಮಾರ್ಥವೆಂಬುದು ನಾಶರಹಿತವಾದುದೆಂದು ಜ್ಞಾನಿಗಳು ಒಪ್ಪಿರುವರು. ನಾಶವಾಗತಕ್ಕ ದ್ರವ್ಯಗಳಿಂದ ಹುಟ್ಟಿದುದು ನಾಶವಾಗುವುದರಲ್ಲಿ ಸಂದೇಹವಿಲ್ಲ. ಫಲಾಪೇಕ್ಷೆಯಿಲ್ಲದ ಕರ್ಮವು ಮೋಕ್ಷಕ್ಕೆ ಸಾಧನವಾದುದರಿಂದ ಅದೂ ಒಂದು ಫಲರೂಪವೇ ಆಗಿ ಪರಮಾರ್ಥವಾಗಲಾರದು. ಧ್ಯಾನವು ಮನಸ್ಸನ್ನು

ತದೇವಾಫಲದಂ ಕರ್ಮ ಪರಮಾರ್ಥೋ ಯತೋ ಮತಃ ।
ಮುಕ್ತಿಸಾಧನಭೂತತ್ವಾತ್ ಪರಮಾರ್ಥೋ ನ ಸಾಧನಂ ॥ ೨೫ ॥

ಧ್ಯಾನಂ ಚೈವಾತ್ಮನೋ ಭೂಪ ಪರಮಾರ್ಥಾರ್ಥಶಬ್ದಿತಂ ।
ಭೇದಕಾರಿ ಪರೇಭ್ಯಸ್ತತ್ಪರಮಾರ್ಥೋ ನ ಭೇದವಾನ್ ॥ ೨೬ ॥

ಪರಮಾತ್ಮಾತ್ಮನೋರ್ಯೋಗಃ ಪರಮಾರ್ಥ ಇತೀಷ್ಯತೇ ।
ಮಿಥ್ಯೈತದನ್ಯದ್ದ್ರವ್ಯಂ ಹಿ ನೈತಿ ತದ್ದ್ರವ್ಯತಾಂ ಯತಃ ॥ ೨೭ ॥

ತಸ್ಮಾಚ್ಛ್ರೇಯಾಂಸ್ಯಶೇಷಾಣಿ ನೃಪೈತಾನಿ ನ ಸಂಶಯಃ ।
ಪರಮಾರ್ಥಸ್ತು ಭೂಪಾಲ ಸಂಕ್ಷೇಪಾಚ್ಛ್ರೂಯತಾಂ ಮಮ ॥ ೨೮ ॥

ಏಕೋ ವ್ಯಾಪೀ ಸಮಃ ಶುದ್ಧೋ ನಿರ್ಗುಣಃ ಪ್ರಕೃತೇಃ ಪರಃ ।
ಜನ್ಮವೃದ್ಧ್ಯಾದಿರಹಿತ ಆತ್ಮಾ ಸರ್ವಗತೋಽವ್ಯಯಃ ॥ ೨೯ ॥

ಇಂದ್ರಿಯಾದಿಗಳಿಂದ ಬಿಡಿಸಿ ಬೇರೊಂದು ವಸ್ತುವಿನ ವಿಷಯದಲ್ಲಿ ನಿಲ್ಲಿಸುವ ಕೆಲಸವಾಗಿ ಭೇದಕಾರಿಯಾದುದರಿಂದ ಅದೂ ಪರಮಾರ್ಥವಲ್ಲ. ಪರಮಾರ್ಥವೆಂಬುದು ಭಿನ್ನವಾದುದಲ್ಲ. "ಏಕಮೇವಾದ್ವಿತೀಯಂ ಬ್ರಹ್ಮ" ಎಂಬ ಶ್ರುತಿಯೇ ಇದಕ್ಕೆ ಪ್ರಮಾಣವು.

೨೭-೨೮. ಜೀವಾತ್ಮ ಪರಮಾತ್ಮರಿಗೆ ಐಕ್ಯೋಪಾಸನೆಯಿಂದುಂಟಾದ ತಾದಾತ್ಮ್ಯಭಾವವು ಪರಮಾರ್ಥವಾಗಲಾರದು. ಒಂದು ವಸ್ತುವು ಭೇದರೂಪದಿಂದಲಾಗಲಿ, ಅಭೇದರೂಪದಿಂದಾಗಲಿ ಮತ್ತೊಂದು ವಸ್ತುವಾಗಲಾರದುದರಿಂದ ಇದು ಸತ್ಯವಾದುದಲ್ಲ. ರಾಜನೇ ಹೀಗೆ ಶ್ರೇಯಸ್ಸು ಅನೇಕ ಬಗೆಯಾಗಿರುವುವು. ಪರಮಾರ್ಥ ಸ್ವರೂಪವನ್ನು ಸಂಗ್ರಹವಾಗಿ ಹೇಳುವೆನು. ಕೇಳು.

೨೯. ಆತ್ಮನು ಪ್ರತಿದೇಹಗತನಾಗಿ ಭಿನ್ನನಾಗಿ ಕಂಡರೂ ಒಬ್ಬನೇ ಆಗಿ ಸಾಕ್ಷಿರೂಪದಿಂದ ಸರ್ವವ್ಯಾಪಕನಾಗಿರುವನು. ಒಂದೇ ರೂಪದಿಂದ ಸರ್ವತ್ರ ಸಮಾನನಾಗಿರುವನು. ಕರ್ತೃತ್ವಾದಿ ದೋಷಗಳಿಲ್ಲದುದರಿಂದ ಶುದ್ಧನಾಗಿರುವನು. ಬುದ್ಧಿಯೇ ಮುಂತಾದ ಗುಣಗಳಿಲ್ಲದವನು ಪ್ರಕೃತಿಸಂಬಂಧವಾದ ಉಪಾಧಿಗಳಿಲ್ಲದವನು ಹುಟ್ಟು ಅಭಿವೃದ್ಧಿ ಮುಂತಾದ ದೇಹವಿಕಾರವಿಲ್ಲದವನು ಸಮಸ್ತ ವಸ್ತುಗತನಾಗಿರುವನು ಆದುದರಿಂದ ನಾಶರಹಿತನಾಗಿರುವನು.

ಪರಜ್ಞಾನಮಯೋ ಸದ್ಭಿರ್ನಾಮಜಾತ್ಯಾದಿಭಿರ್ವಿಭುಃ ।
ನ ಯೋಗವಾನ್ನ ಯುಕ್ತೋಽಭೂನ್ನೈವ ಪಾರ್ಥಿವ ಯೋಕ್ಷ್ಯತಿ ॥ ೩೦ ॥

ತಸ್ಮಾತ್ಪರದೇಹೇಷು ಸತೋಽಪ್ಯೇಕಮಯಂ ಹಿ ತತ್ ।
ವಿಜ್ಞಾನಂ ಪರಮಾರ್ಥೋಽಸೌ ದ್ವೈತಿನೋಽತಥ್ಯದರ್ಶಿನಃ ॥ ೩೧ ॥

ವೇಣುರಂಧ್ರವಿಭೇದೇನ ಭೇದಃ ಷಡ್ಜಾದಿ ಸಂಜ್ಞಿತಃ ।
ಅಭೇದವ್ಯಾಪಿನೋ ವಾಯೋಸ್ತಥಾ ತಸ್ಯ ಮಹಾತ್ಮನಃ ॥ ೩೨ ॥

ಏಕತ್ವಂ ರೂಪಭೇದಸ್ತು ಬಾಹ್ಯಕರ್ಮಪ್ರವೃತ್ತಿಜಃ ।
ದೇವಾದಿಭೇದೇಽಪಧ್ವಸ್ತೇ ನಾಸ್ತ್ಯೇವಾವರಣೇ ಹಿ ಸಃ ॥ ೩೩ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಚತುರ್ದಶೋಽಧ್ಯಾಯಃ

---

೩೦. ಅವನು ನಿತ್ಯಜ್ಞಾನಸ್ವರೂಪನು. ಅವಿದ್ಯಾಸ್ವರೂಪವಾದ ನಾಮ, ಜಾತಿ, ಕಾಲ ಮುಂತಾದುವುಗಳ ಸಂಬಂಧವಿಲ್ಲದವನು. ಸ್ವತಂತ್ರನು.

೩೧. ಆತ್ಮನು ನಮ್ಮ ಮತ್ತು ಇತರರ ಶರೀರದಲ್ಲಿ ಅಹಂಕಾರ ರೂಪವಾದ ಅಭಿಮಾನದಿಂದ ಇದ್ದರೂ ಸ್ವಪ್ರಕಾಶವಾದ ಜ್ಞಾನಸ್ವರೂಪನಾಗಿ ಏಕಾಕಾರವಾಗಿರುವನು. ಇದೇ ಪರಮಾರ್ಥಸ್ವರೂಪವು. ಭೇದವು ಉಪಾಧಿಸಂಬಂಧವಾದುದರಿಂದ ದ್ವೈತವಾದಮಾಡುವವರು ಪರಮಾರ್ಥಜ್ಞಾನವುಳ್ಳವರಲ್ಲ.

೩೨–೩೩. ದೃಷ್ಟಾಂತವೇನೆಂದರೆ, ಸರ್ವವ್ಯಾಪಿಯಾಗಿ ಭೇದವಿಲ್ಲದ ಗಾಳಿಯು ಉಪಾಧಿಯಾದ ಕೊಳಲಿನ ರಂಧ್ರಗಳ ಭೇದದಿಂದ ಷಡ್ಜ, ಮಧ್ಯಮ, ಗಾಂಧಾರ ಮುಂತಾದ ಸ್ವರಗಳನ್ನು ವ್ಯಕ್ತಪಡಿಸುವಂತೆ ಜ್ಞಾನಸ್ವರೂಪನಾದ ಪರಮಾತ್ಮನೊಬ್ಬನೇ ಬಾಹ್ಯವಾದ ದೇಹೇಂದ್ರಿಯಾದಿಗಳ ರೂಪವಾದ ಉಪಾಧಿಭೇದದಿಂದ ದೇವಾದಿ ಶರೀರಗಳನ್ನು ವ್ಯಕ್ತಪಡಿಸುವನು. ದೇಹಾದಿ ಭೇದಗಳು ನಾಶವಾದರೆ ಅಜ್ಞಾನಾವರಣವೂ ನಾಶವಾಗುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತೀಯಾಂಶದಲ್ಲಿ

ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀ

ಶ್ರೀವಿಷ್ಣುಪುರಾಣೇ ದ್ವಿತೀಯಾಂಶೇ

ಪಂಚದಶೋಽಧ್ಯಾಯಃ

॥ ಪರಾಶರ ಉವಾಚ ॥

ಇತ್ಯುಕ್ತೇ ಮೌನಿನಂ ಭೂಯಶ್ಚಿಂತಯಾನಂ ಮಹೀಪತಿಂ ।
ಪ್ರತ್ಯುವಾಚಾಥ ವಿಪ್ರೋಽಸೌ ಅದ್ವೈತಾಂತರ್ಗತಾಂ ಕಥಂ ॥ ೧ ॥

॥ ಬ್ರಾಹ್ಮಣ ಉವಾಚ ॥

ಶ್ರೂಯತಾಂ ನೃಪಶಾರ್ದೂಲ ಯದ್ಗೀತಮೃಭುಣಾ ಪುರಾ ।
ಅವಬೋಧಂ ಜನಯತಾ ನಿದಾಘಸ್ಯ ಮಹಾತ್ಮನಃ ॥ ೨ ॥

ಋಭುರ್ನಾಮಾಭವತ್ಪುತ್ರೋ ಬ್ರಹ್ಮಣಃ ಪರಮೇಷ್ಠಿನಃ ।
ವಿಜ್ಞಾನತತ್ತ್ವಸದ್ಭಾವೋ ನಿಸರ್ಗಾದೇವ ಭೂಪತೇ ॥ ೩ ॥

ಹದಿನೈದನೆಯ ಅಧ್ಯಾಯವು.

೧. ಹೀಗೆ ಹೇಳಿದಮೇಲೆ ಮಾತನಾಡದೆ ಸುಮ್ಮನೆ ಯೋಚಿಸುತ್ತಿರುವ ರಾಜನನ್ನು ನೋಡಿ ಆ ಬಾಹ್ಮಣನು ಅದ್ವೈತ ತತ್ತ್ವವನ್ನುಳ್ಳ ಕಥೆಯನ್ನು ಹೇಳಲು ಪ್ರಾರಂಭಿಸಿದನು.

೨–೪. ರಾಜಶ್ರೇಷ್ಠನೆ! ಹಿಂದೆ ಋಭುವೆಂಬ ಋಷಿಯು ನಿದಾಘನೆಂಬ ಮಹಾತ್ಮನಿಗೆ ಜ್ಞಾನವನ್ನುಂಟುಮಾಡುವುದಕ್ಕಾಗಿ ಹೇಳಿದ ಮಾತುಗಳನ್ನು ಹೇಳುವೆನು ಕೇಳು. ಸೃಷ್ಟಿಕರ್ತನಾದ ಬ್ರಹ್ಮನಿಗೆ ಸ್ವಾಭಾವಿಕವಾಗಿ ತತ್ತ್ವಜ್ಞಾನಿಯಾದ ಋಭುವೆಂಬ ಮಗನಿದ್ದನು. ಅವನಿಗೆ ಪುಲಸ್ತ್ಯನ ಮಗನಾದ ನಿದಾಘನೆಂಬ ಶಿಷ್ಯ

ತಸ್ಯ ಶಿಷ್ಯೋ ನಿದಾಘೋಽಭೂತ್ಪುಲಸ್ತ್ಯತನಯಃ ಪುರಾ ।
ಪ್ರಾದಾದಶೇಷವಿಜ್ಞಾನಂ ಸ ತಸ್ಮೈ ಪರಯಾ ಮುದಾ ॥ ೪ ॥

ಅವಾಪ್ತಜ್ಞಾನತತ್ತ್ವಸ್ಯ ನ ತಸ್ಯಾದ್ವೈತವಾಸನಾಂ ।
ಸ ಋಭುಸ್ತರ್ಕಯಾಮಾಸ ನಿದಾಘಸ್ಯ ನರೇಶ್ವರ ॥ ೫ ॥

ದೇವಿಕಾಯಾಸ್ತಟೇ ವೀರನಗರಂ ನಾಮ ವೈ ಪುರಂ ।
ಸಮೃದ್ಧಮತಿರಮ್ಯಂ ಚ ಪುಲಸ್ತ್ಯೇನ ನಿವೇಶಿತಂ ॥ ೬ ॥

ರಮ್ಯೋಪವನಪರ್ಯಂತೇ ಸ ತಸ್ಮಿನ್ ಪಾರ್ಥಿವೋತ್ತಮ ।
ನಿದಾಘೋನಾಮ ಯೋಗಜ್ಞಃ ಋಭುಶಿಷ್ಯೋ ವಸತ್ಪುರಾ ॥ ೭ ॥

ದಿವ್ಯ ವರ್ಷಸಹಸ್ರೇ ತು ಸಮತೀತೇಽಸ್ಯ ತತ್ಪುರಂ ।
ಜಗಾಮ ಸ ಋಭುಃ ಶಿಷ್ಯಂ ನಿದಾಘಮವಲೋಕಕಃ ॥ ೮ ॥

ನಿದ್ದನು. ಅವನು ಶಿಷ್ಯನಿಗೆ ಅತ್ಯಂತ ಪ್ರೀತಿಯಿಂದ ಪರಮಾರ್ಥ ತತ್ವಜ್ಞಾನವನ್ನುಂಟು ಮಾಡಿದನು.

೫-೮. ಋಭುವು ಕರ್ಮಮಾರ್ಗಾಸಕ್ತನಾದ ಶಿಷ್ಯನಾದ ನಿದಾಘನಿಗೆ ಅದ್ವೈತ ತತ್ವಜ್ಞಾನದ ವಾಸನೆಯು ಇಲ್ಲವೆಂದೂಹಿಸಿದನು. ನದಿಯ ದಡದಲ್ಲಿ ವೀರನಗರವೆಂಬ ಪಟ್ಟಣವನ್ನು ಸಕಲ ವಸ್ತುಸಮೃದ್ಧಿಯಿಂದ ಮನೋಹರವಾಗಿರುವಂತೆ ಪುಲಸ್ತ್ಯನು ನಿರ್ಮಿಸಿದ್ದನು ಮನೋಹರವಾದ ಉಪವನದ ಸಮೀಪದಲ್ಲಿದ್ದ ಆ ಪಟ್ಟಣದಲ್ಲಿ ಕರ್ಮಯೋಗವನ್ನು ಚೆನ್ನಾಗಿ ತಿಳಿದು ಋಭು ಶಿಷ್ಯನಾದ ನಿದಾಘನು ವಾಸವಾಗಿದ್ದನು. ದೇವಮಾನದ ಸಾವಿರ ವರ್ಷಗಳು ಕಳೆದಮೇಲೆ ಋಭುವು ಶಿಷ್ಯನಾದ ನಿದಾಘನನ್ನು ನೋಡುವುದಕ್ಕಾಗಿ ಆ ಪಟ್ಟಣಕ್ಕೆ ಹೋದನು.

ಸ ತಸ್ಯ ವೈಶ್ವದೇವಾಂತೇ ದ್ವಾರಾಲೋಕನಗೋಚರೇ ।
ಸ್ಥಿತಸ್ತೇನ ಗೃಹೀತಾರ್ಘ್ಯೋ ನಿಜವೇಶ್ಮಪ್ರವೇಶಿತಃ ॥ ೯ ॥

ಪ್ರಕ್ಷಾಳಿತಾಂಘ್ರಿಪಾಣಿಂ ತು ಕೃತಾಸನಪರಿಗ್ರಹಂ ।
ಉವಾಚ ಸ ದ್ವಿಜಶ್ರೇಷ್ಠೋ ಭುಜ್ಯತಾಮಿತಿ ಸಾದರಂ ॥ ೧೦ ॥

॥ ಋಭುರುವಾಚ ॥

ಭೋ ವಿಪ್ರವರ್ಯ ಭೋಕ್ತವ್ಯಂ ಯದನ್ನಂ ಭವತೋ ಗೃಹೇ ।
ತತ್ಕಥ್ಯತಾಂ ಕದನ್ನೇಷು ನ ಪ್ರೀತಿಃ ಸತತಂ ಮಮ ॥ ೧೧ ॥

॥ ನಿದಾಘ ಉವಾಚ ॥

ಸಕ್ತುಯಾವಕವಾಟ್ಯಾನಾಮಪೂಪಾನಾಂ ಚ ಮೇ ಗೃಹೇ ।
ಯದ್ರೋಚತೇ ದ್ವಿಜಶ್ರೇಷ್ಠ ತತ್ತದ್ಭುಂಕ್ಷ್ವ ಯಥೇಚ್ಛಯಾ ॥ ೧೨ ॥

೯–೧೦. ನಿದಾಘನು ವೈಶ್ವದೇವ ಕರ್ಮವನ್ನು ಮಾಡಿದಮೇಲೆ ಅತಿಥಿಗಳನ್ನು ನಿರೀಕ್ಷಿಸುತ್ತ ಬಾಗಿಲಿನಲ್ಲಿ ನಿಂತಾಗ ಋಭುವು ಬರುತ್ತಿರಲು ಅವನಿಗೆ ಅರ್ಘ್ಯವನ್ನು ಕೊಟ್ಟು ಮನೆಯೊಳಕ್ಕೆ ಕರೆದುಕೊಂಡುಹೋದನು. ಅವನು ಕೈಕಾಲುಗಳನ್ನು ತೊಳೆದುಕೊಂಡು ಪೀಠದಮೇಲೆ ಕುಳಿತಮೇಲೆ ಬ್ರಾಹ್ಮಣ ಶ್ರೇಷ್ಠನಾದ ನಿದಾಘನು ಪ್ರೀತಿಯಿಂದ ಭೋಜನ ಮಾಡಬೇಕೆಂದು ಹೇಳಿದನು.

೧೧. ಋಬುವು "ಬ್ರಾಹ್ಮಣಶ್ರೇಷ್ಠನೇ, ನಿನ್ನ ಮನೆಯಲ್ಲಿ ನಾನು ಏನನ್ನು ಭೋಜನ ಮಾಡಬೇಕೆಂಬುದನ್ನು ಹೇಳು. ಕುತ್ಸಿತವಾದ ಅನ್ನದಲ್ಲಿ ನನಗೆ ಯಾವಾಗಲೂ ಪ್ರೀತಿಯಿರುವುದಿಲ್ಲ" ಎಂದನು.

೧೨. ನಿದಾಘನು "ಬ್ರಾಹ್ಮಣ ಶ್ರೇಷ್ಠನೆ, ನನ್ನ ಮನೆಯಲ್ಲಿ ಹಿಟ್ಟು, ಅನ್ನ, ತೋಟದಲ್ಲಿ ಬೆಳೆದ ಗೆಡ್ಡೆ, ಗೆಣಸು, ಹಣ್ಣುಗಳು, ಭಕ್ಷ್ಯಗಳು ಎಲ್ಲವೂ ಇರುವುವು. ಅವುಗಳಲ್ಲಿ ನಿನಗೆ ಇಷ್ಟವಾದುದನ್ನು ಭೋಜನ ಮಾಡಬಹುದು" ಎಂದನು.

॥ ಋಭುರುವಾಚ ॥

ಕದನ್ನಾನಿ ದ್ವಿಜೈತಾನಿ ಮೃಷ್ಟಮನ್ನಂ ಪ್ರಯಚ್ಛ ಮೇ ।
ಸಂಯಾವಪಾಯಸಾದೀನಿ ದ್ರಪ್ಸಫಾಣಿತವಂತಿ ಚ ॥ ೧೩ ॥

॥ ನಿದಾಘ ಉವಾಚ ॥

ಹೇ ಹೇ ಶಾಲಿನಿ ಮದ್ಗೇಹೇ ಯತ್ಕಿಂಚಿದತಿಶೋಭನಂ ।
ಭಕ್ಷ್ಯೋಪಸಾಧನಂ ಮೃಷ್ಟಂ ತೇನಾಸ್ಯಾನ್ನಂ ಪ್ರಸಾಧಯ ॥ ೧೪ ॥

ಇತ್ಯುಕ್ತಾ ತೇನ ಸಾ ಪತ್ನೀ ಮೃಷ್ಟಮನ್ನಂ ದ್ವಿಜಸ್ಯ ಯತ್ ।
ಪ್ರಸಾಧಿತವತೀ ತದ್ವೈ ಭರ್ತುರ್ವಚನಗೌರವಾತ್ ॥ ೧೫ ॥

ತಂ ಭುಕ್ತವಂತಮಿಚ್ಛಾತೋ ಮೃಷ್ಟಮನ್ನಂ ಮಹಾಮುನಿಂ ।
ನಿದಾಘಃ ಪ್ರಾಹ ಭೂಪಾಲ ಪ್ರಶ್ರಯಾವನತಃ ಸ್ಥಿತಃ ॥ ೧೬ ॥

---

೧೩. ಋಭುವು, "ಎಲೈ ಬ್ರಾಹ್ಮಣನೇ! ನೀನು ಹೇಳಿದುದೆಲ್ಲ ಕುತ್ಸಿತವಾದ ಆಹಾರಗಳು. ಶಾವಿಗೆ ಪಾಯಸ, ಕೆನೆಮೊಸರು, ಪೇಣಿ ಮುಂತಾದ ಮೃಷ್ಟಾನ್ನಗಳು ನನಗೆ ಬೇಕು" ಎಂದನು.

೧೪. ನಿದಾಘನು ಪತ್ನಿಯನ್ನು ಕುರಿತು, "ಎಲೈ ಶ್ಲಾಘ್ಯಳಾದ ಪ್ರಿಯೆಯೇ! ನಮ್ಮ ಮನೆಯಲ್ಲಿರುವ ಅತ್ಯಂತ ಶ್ರೇಷ್ಠವಾದ ಭಕ್ಷ್ಯಭೋಜ್ಯಗಳಿಂದ ಕೂಡಿದ ಮೃಷ್ಟಾನ್ನವನ್ನು ಇವರಿಗೆ ಬಡಿಸು" ಎಂದನು.

೧೫-೧೬. ನಿದಾಘನು ಹೇಳಿದ ಮಾತನ್ನು ಕೇಳಿ ಅವನ ಪತ್ನಿಯು ಗಂಡನ ಮಾತಿಗೆ ಗೌರವವನ್ನು ಕೊಟ್ಟು ಆ ಬ್ರಾಹ್ಮಣನಿಗೆ ಮೃಷ್ಟಾನ್ನವನ್ನು ಬಡಿಸಿದಳು. ಆ ಮೃಷ್ಟಾನ್ನವನ್ನು ತನ್ನ ಇಚ್ಛೆಗನುಸಾರವಾಗಿ ಊಟಮಾಡಿದ ಆ ಮಹಾಮುನಿಯನ್ನು ಕುರಿತು ನಿದಾಘನು ವಿನಯದಿಂದ ನಮಸ್ಕರಿಸಿ ಮಾತನಾಡಿದನು.

॥ ನಿದಾಘ ಉವಾಚ ॥

ಅಪಿ ತೇ ಪರಮಾ ತೃಪ್ತಿಃ ಉತ್ಪನ್ನಾ ತುಷ್ಟಿರೇವ ಚ ।
ಅಪಿ ತೇ ಮಾನಸಂ ಸುಸ್ಥಮಾಹಾರೇಣ ಕೃತಂ ದ್ವಿಜ ॥ ೧೭ ॥

ಕ್ವ ನಿವಾಸೀ ಭವಾನ್ವಿಪ್ರ ಕ್ವ ವಾ ಗಂತುಂ ಸಮುದ್ಯತಃ ।
ಆಗಮ್ಯತೇ ಚ ಭವತಾ ಯತಸ್ತಚ್ಚ ದ್ವಿಜೋಚ್ಯತಾಂ ॥ ೧೮ ॥

॥ ಋಭುರುವಾಚ ॥

ಕ್ಷುದ್ಯಸ್ಯ ತಸ್ಯ ಭುಕ್ತೇನ್ನೇ ತೃಪ್ತಿರ್ಬ್ರಾಹ್ಮಣ ಜಾಯತೇ ।
ನ ಮೇ ಕ್ಷುದಭವತ್ತೃಪ್ತಿಂ ಕಸ್ಮಾನ್ಮಾಂ ಪರಿಪೃಚ್ಛಸಿ ॥ ೧೯ ॥

ವಹ್ನಿನಾ ಪಾರ್ಥಿವೇ ಧಾತೌ ಕ್ಷಪಿತೇ ಕ್ಷುತ್ಸಮುದ್ಭವಃ ।
ಭವತ್ಯಂಭಸಿ ಚ ಕ್ಷೀಣೇ ನೃಣಾಂ ತೃಡಪಿ ಜಾಯತೆ ॥ ೨೦ ॥

೧೭-೧೮. ನಿದಾಘನು, "ಎಲೈ ಮುನಿಯೇ! ನಿನ್ನ ಹಸಿವು ಬಾಯಾರಿಕೆಗಳು ಶಾಂತವಾಗಿ ಸಂತೋಷವುಂಟಾಯಿತೇ? ಆಹಾರದಿಂದ ನಿನ್ನ ಮನಸ್ಸು ಸ್ವಾಭಾವಿಕವಾದ ಸ್ಥಿತಿಗೆ ಬಂದಿತೇ? ನಿಮ್ಮ ವಾಸಸ್ಥಾನವಾವುದು? ಎಲ್ಲಿಗೆ ಹೊರಟಿರುವಿರಿ? ಈಗ ಎಲ್ಲಿಂದ ಬಂದಿರಿ? ಇವುಗಳಿಗೆ ಉತ್ತರವನ್ನು ಹೇಳಬೇಕು" ಎಂದನು.

೧೯-೨೦. ಋಭುವು ಹೇಳಿದನು. "ಎಲೈ ಬ್ರಾಹ್ಮಣನೇ ಹಸಿವು ಯಾರಿಗೋ ಅವನಿಗೆ ಊಟಮಾಡಿದರೆ ತೃಪ್ತಿಯಾಗುವುದು. ನನಗೆ ಹಸಿವು ಇರಲಿಲ್ಲ. ತೃಪ್ತಿಯಾಯಿತೇ ಎಂದು ಏಕೆ ನನ್ನನ್ನು ಕೇಳುವೆ? ಅಗ್ನಿಯಿಂದ ಪೃಥಿವೀ ಸಂಬಂಧವಾದ ಧಾತು ಕ್ಷಯವಾದರೆ ಹಸಿವು ಉಂಟಾಗುವುದು. ಮನುಷ್ಯರ ಶರೀರದಲ್ಲಿ ನೀರೂ ಕಡಿಮೆಯಾದರೆ ಬಾಯಾರಿಕೆಯೂ ಉಂಟಾಗುವುದು.

ಕ್ಷುತ್ತೃಷ್ಣೇ ದೇಹಧರ್ಮಾಖ್ಯೇ ನ ಮಮೈತೇ ಯತೋ ದ್ವಿಜ ।
ತತಃ ಕ್ಷುತ್ಸಂಭವಾತ್ತೃಪ್ತಿ ರಪಿ ನಾಸ್ತ್ಯೇವ ಮೇ ಸದಾ ॥
(ಕ್ಷುತ್ತೃಟ್ಸಮುದ್ಭವಾಭಾವಾತ್ ತೃಪ್ತಿರಸ್ತ್ಯೇವ ಮೇ ಸದಾ) ॥ ೨೦ ॥

(ಪಾಠಾಂತರ)

ಮನಸಃ ಸ್ವಸ್ಥತಾ ತುಷ್ಟಿಃ ಚಿತ್ತಧರ್ಮಾವಿಮೌ ದ್ವಿಜ ।
ಚೇತಸೋ ಯಸ್ಯ ತತ್ಪೃಚ್ಛ ಪುಮಾನೇಭಿರ್ನ ಯುಜ್ಯತೇ ॥ ೨೨ ॥

ಕ್ವ ನಿವಾಸಸ್ತವೇತ್ಯುಕ್ತಂ ಕ್ವ ಗಂತಾಸಿ ಚ ಯತ್ತ್ವಯಾ ।
ಕುತಶ್ಚಾಗಮ್ಯತೇ ತತ್ರ ತ್ರಿತಯೇಽಪಿ ನಿಬೋಧ ಮೇ ॥ ೨೩ ॥

ಪುಮಾನ್ಸರ್ವಗತೋ ವ್ಯಾಪೀ ಆಕಾಶವದಯಂ ಯತಃ ।
ಕುತಃ ಕುತ್ರ ಕ್ವ ಗಂತಾಸೀತ್ಯೇತದ ಪ್ಯರ್ಥವತ್ಕಥಂ ॥ ೨೪ ॥

೨೦-೨೨ ಎಲೈ ಬ್ರಾಹ್ಮಣನೇ! ಹಸಿವು ಬಾಯಾರಿಕೆಗಳೆರಡೂ ಶರೀರಧರ್ಮಗಳು. ನನಗೆ ಇವೆರಡೂ ಇಲ್ಲ. ಆದುದರಿಂದ ಹಸಿವಿನಿಂದುಂಟಾದ ತೃಪ್ತಿಯೂ ನನಗೆ ಯಾವಾಗಲೂ ಇಲ್ಲ. ಮನಸ್ಸಿನ ಸ್ವಾಭಾವಿಕ ಸ್ಥಿತಿ ಸಂತೋಷಗಳು ಚಿತ್ತಧರ್ಮಗಳು ಈ ವಿಚಾರದಲ್ಲಿ ನೀನು ಚಿತ್ತವನ್ನೇ ಕೇಳಬೇಕು. ಪುರುಷನಾದ ನನ್ನನ್ನು ನೀನ ಈ ಪ್ರಶ್ನೆಗಳನ್ನು ಕೇಳಲಾಗದು. ಪುರುಷನಿಗೂ ಪ್ರಾಣ, ಚಿತ್ತ ಧರ್ಮಗಳಾದ ತೃಪ್ತಿ, ತುಷ್ಟಿ, ಸ್ವಾಸ್ಥ್ಯಗಳಿಗೂ ಸಂಬಂಧವಿಲ್ಲ.

೨೩-೨೪. ನಿನ್ನ ವಾಸಸ್ಥಾನವಾವುದು? ಎಲ್ಲಿಗೆ ಹೋಗುವೆ? ಎಲ್ಲಿಂದ ಬಂದೆ? ಎಂದು ಪ್ರಶ್ನೆ ಮಾಡಿದೆಯಷ್ಟೆ? ಈ ಮೂರು ಪ್ರಶ್ನೆಗೂ ಉತ್ತರವನ್ನು ಹೇಳುವೆನು ಕೇಳು: ಪುರುಷನು ಆಕಾಶದಂತೆ ಸರ್ವವ್ಯಾಪಿಯು, ಎಲ್ಲೆಡೆಯಲ್ಲಿಯೂ ಇರುವನು. ಇಂಥವನನ್ನು ಎಲ್ಲಿದ್ದಿ? ಎಲ್ಲಿಂದ ಬಂದೆ? ಎಲ್ಲಿಗೆ ಹೋಗುವೆ? ಎಂದು ಪ್ರಶ್ನೆ ಮಾಡುವುದೇ ಅಸಂಗತವು.

ಸೋಽಪಂ ಗಂತಾ ನ ನಾಗಂತಾ ನೈಕದೇಶನಿಕೇತನಃ ।
ತ್ವಂ ಚಾನ್ಯೇ ಚ ನ ಚ ತ್ವಂ ಚ ತ್ವಂ ನಾನ್ಯೇ ನಾಹಮಪ್ಯಹಂ ॥ ೨೫ ॥

ಮೃಷ್ಟಂ ನ ಮೃಷ್ಟಮಿತ್ಯೇಷಾ ಜಿಜ್ಞಾಸಾಮೇಕೃತಾ ತವ ।
ಕಿಂ ವಕ್ಷ್ಯಸೀತಿ ತತ್ರಾಪಿ ಶ್ರೂಯತಾಂ ದ್ವಿಜಸತ್ತಮ ॥ ೨೬ ॥

ಕಿಮಸ್ವಾದ್ವಥವಾ ಮೃಷ್ಟಂ ಭುಂಜತೋಽಸ್ತಿ ದ್ವಿಜೋತ್ತಮ ।
ಮೃಷ್ಟಮೇವ ಯಥಾಮೃಷ್ಟಂ ತದೇವೋದ್ವೇಗಕಾರಕಂ ॥ ೨೭ ॥

---

೨೫. ಪುರುಷನಾದ ನಾನು ಹೋಗುವವನೂ ಅಲ್ಲ, ಗೊತ್ತಾದ ಒಂದೆಡೆಯಲ್ಲಿ ನೆಲಸಿರತಕ್ಕವನೂ ಅಲ್ಲ. ನಾನು ಮಾತ್ರವಲ್ಲ, ನೀನೂ ಇತರರೂ ನನ್ನಂತೆಯೇ ಇರತಕ್ಕವರು. ಲೌಕಿಕವೂ ಪರಿಚ್ಛಿನ್ನವೂ ಆದ ಈ ಶರೀರವು ನೀನಲ್ಲ. ಈ ಸಮೀಪದಲ್ಲಿರುವ ಜನರೂ ಈ ರೀತಿಯಲ್ಲಿರತಕ್ಕವರಲ್ಲ. ನಿನಗೆ ಕಾಣುವ ನಾನು ನಾನಲ್ಲ. ಅಹಂ ಎಂದರೆ ನಾನು, ಎಂಬ ವ್ಯವಹಾರಕ್ಕೆ ಪರಮಾತ್ಮನೇ ಅರ್ಥವು. (ವೇದದಲ್ಲಿ "ಆತ್ಮೈವೇದಗ್ಂ ಸರ್ವ" ಎಂದು ಹೇಳಿರುವುದರಿಂದ ನಾನು ಹೇಳಿದ ಮಾತಿನಲ್ಲಿ ಪ್ರತ್ಯಕ್ಷ ವಿರೋಧವಿಲ್ಲವೆಂದು ಅಭಿಪ್ರಾಯವು)

೨೬. ಬ್ರಾಹ್ಮಣೋತ್ತಮನೇ ! ಕುತ್ಸಿತವಾದ ಅನ್ನವು ನನಗೆ ಬೇಡ, ಮೃಷ್ಟಾನ್ನವು ಬೇಕು, ಎಂದು ನಿನ್ನನ್ನು ಕೇಳಿದುದಕ್ಕೆ ಕಾರಣವೇನೆಂದರೆ:—ನಾನು ಹೀಗೆ ಕೇಳಿದುದಕ್ಕೆ ನೀನು ಆತ್ಮತತ್ವವನ್ನನುಸರಿಸಿದ ಉತ್ತರವನ್ನು ಹೇಳುತ್ತೀಯೋ ಇಲ್ಲವೋ ಎಂದು ಪರೀಕ್ಷಾರ್ಥವಾಗಿ ಕೇಳಿದೆನು. ಮೃಷ್ಟಾನ್ನವೇ ಬೇಕೆಂದು ಅಲ್ಲ. ಮೃಷ್ಟಾಸ್ವಾದಿಗಳ ಭೇದವು ಸತ್ಯವಾದುದಲ್ಲ. ಈ ವಿಷಯದಲ್ಲಿ ನಾನು ಹೇಳುವುದನ್ನು ಕೇಳು.

೨೭-೨೮. ಊಟಮಾಡುವ ಮನುಷ್ಯನಿಗೆ ಇದು ರುಚಿಯಾದುದು. ಇದು ರುಚಿಯಿಲ್ಲದುದು ಎಂಬ ಭೇದವು ನಿಯಮಿತವಾದುದಲ್ಲ. ಹೊಟ್ಟೆ ತುಂಬಿದ ಮನುಷ್ಯನಿಗೆ ಮೃಷ್ಟಾನ್ನವೂ ರುಚಿಯಿಲ್ಲದೆ ಹೋಗುವುದು, ಹಸಿದವನಿಗೆ ರುಚಿ

ಅಮೃಷ್ಟಂ ಜಾಯತೇ ಮೃಷ್ಟಂ ಮೃಷ್ಟಾದುದ್ವಿಜತೇ ಜನಃ ।
ಆದಿಮಧ್ಯಾವಸಾನೇಷು ಕಿಮನ್ನಂ ರುಚಿಕಾರಕಂ ॥ ೨೮ ॥

ಮೃಣ್ಮಯಂ ಹಿ ಗೃಹಂ ಯದ್ವನ್ಮೃದಾಲಿಪ್ತಂ ಸ್ಥಿರೀಭವೇತ್ ।
ಪಾರ್ಥಿವೋಽಯಂ ತಥಾ ದೇಹಃ ಪಾರ್ಥಿವೈಃ ಪರಮಾಣುಭಿಃ ॥ ೨೯ ॥

ಯವಗೋಧೂಮಮುದ್ಗಾದಿ ಘೃತಂತೈಲಂಪಯೋ ದಧಿ ।
ಗುಡಃ ಫಲಾದೀನಿ ತಥಾ ಪಾರ್ಥಿವಾಃ ಪರಮಾಣವಃ ॥ ೩೦ ॥

ತದೇ ತದ್ಭವತಾ ಜ್ಞಾತ್ವಾ ಮೃಷ್ಟಾಮೃಷ್ಟವಿಚಾರಿ ಯತ್ ।
ತನ್ಮನಃ ಸಮತಾಲಂಬಿ ಕಾರ್ಯಂ ಸಾಮ್ಯಂ ಹಿ ಮುಕ್ತಯೇ ॥ ೩೧ ॥

ಯಿಲ್ಲದ ಗಂಜಿಯೇ ಮೃಷ್ಟಾನ್ನವಾಗುವುದು. ಕೆಲವು ಕಾಲದಲ್ಲಿ ಜನರು ಮೃಷ್ಟಾನ್ನವನ್ನು ಊಟಮಾಡುವುದಕ್ಕೂ ಅಸಹ್ಯಪಡುವರು. ಊಟದ ಆದಿ ಮಧ್ಯಾಂತಗಳಲ್ಲಿ ರುಚಿಯನ್ನುಂಟುಮಾಡುವ ಮೃಷ್ಟಾನ್ನವಿರುವುದೇ ಎಂದು ವಿಚಾರಮಾಡಿದರೆ ಇಲ್ಲವೆಂದು ತಿಳುವಳಿಕೆ ಬರುವುದು.

೨೯. ಹಾಗಾದರೆ ಮೃಷ್ಟಾನ್ನವನ್ನೇ ಏಕೆ ಭೋಜನ ಮಾಡಿದೆ ಎಂದರೆ ಮಣ್ಣಿನಿಂದ ಕಟ್ಟಿದ ಮನೆಗೆ ಆಗಾಗ್ಗೆ ಮಣ್ಣನ್ನು ಮೆತ್ತುತ್ತಿದ್ದರೆ ಸ್ಥಿರವಾಗಿರುವಂತೆ ಪೃಥಿವೀತತ್ವದಿಂದುಂಟಾಗಿರುವ ಈ ದೇಹಕ್ಕೆ ಪೃಥಿವೀತತ್ವದ ಪರಮಾಣುಗಳನ್ನು ಕೂಡಿಸುತ್ತಿದ್ದರೆ ಸ್ಥಿರವಾಗಿರುತ್ತದೆ. (ಪ್ರಾರಬ್ಧಕರ್ಮವನ್ನನುಸರಿಸಿ ಕಾಲಕ್ಕೆ ಪ್ರಾಪ್ತವಾದ ಆಹಾರವನ್ನು ದೇಹಧಾರಣಾರ್ಥವಾಗಿ ರುಚಿಕರವಾಗಿರುವಂತೆ ನಾನು ಭೋಜನ ಮಾಡಿದೆನು ಮೃಷ್ಟಾನ್ನವೆಂಬ ಬುದ್ಧಿಯಿಂದ ಅಲ್ಲವೆಂದು ಭಾವವು.)

೩೦. ಅಕ್ಕಿ, ಗೋಧಿ, ಹೆಸರು, ತುಪ್ಪ, ಎಣ್ಣೆ, ಹಾಲು, ಮೊಸರು, ಬೆಲ್ಲ, ಹಣ್ಣುಗಳು ಇವುಗಳೆಲ್ಲವೂ ಪೃಥಿವೀತತ್ವದ ಪರಮಾಣುಗಳಾಗಿರುವುವು. ಇವು ಶರೀರಸ್ಥಿತಿಗೆ ಬೇಕಾದುವುಗಳು.

೩೧. ನೀನು ಈ ವಿಚಾರವನ್ನು ತಿಳಿದು ಮನಸ್ಸನ್ನು ಸಮಾನ ಸ್ಥಿತಿಯಲ್ಲಿರುವಂತೆ ಮಾಡಬೇಕು. ರುಚಿಯಿಲ್ಲದ ಆಹಾರವನ್ನು ಭೋಜನ ಮಾಡುತ್ತಿದ್ದರೂ ಮನಸ್ಸಿನ ಸಾಮ್ಯಾವಸ್ಥೆಯು ಮುಕ್ತಿಗೆ ಕಾರಣವಾಗುವುದು ' ಎಂದು ಹೇಳಿದನು.

॥ ಬ್ರಾಹ್ಮಣ ಉವಾಚ ॥

ಇತ್ಯಾಕರ್ಣ್ಯ ವಚಸ್ತಸ್ಯ ಪರಮಾರ್ಥಾಶ್ರಿತಂ ನೃಪ ।
ಪ್ರಣಿಪತ್ಯ ಮಹಾಭಾಗೋ ನಿದಾಘೋ ವಾಕ್ಯಮಬ್ರವೀತ್ ॥ ೩೨ ॥

ಪ್ರಸೀದ ಮದ್ಧಿತಾರ್ಥಾಯ ಕಥ್ಯತಾಂ ಯಸ್ತ್ವಮಾಗತಃ ।
ನಷ್ಟೋ ಮೋಹಸ್ತವಾಕರ್ಣ್ಯ ವಚಾಂಸ್ಯೇತಾನಿ ಮೇ ದ್ವಿಜ ॥ ೩೩ ॥

॥ ಋಭುರುವಾಚ ॥

ಋಭುರಸ್ಮಿ ತವಾಚಾರ್ಯಃ ಪ್ರಜ್ಞಾದಾನಾಯ ತೇ ದ್ವಿಜ ।
ಇಹಾಗತೋಽಹಂ ಯಾಸ್ಯಾಮಿ ಪರಮಾರ್ಥಸ್ತವೋದಿತಃ ॥ ೩೪ ॥

ಏಕಮೇವ ಮಿದಂ ವಿದ್ಧಿನ ಭೇದಿಸಂಕಲಂ ಜಗತ್ ॥ ೩೫ ॥
ವಾಸುದೇವಾಭಿಧೇಯಸ್ಯ ಸ್ವರೂಪಂ ಪರಮಾತ್ಮನಃ ।

೩೨-೩೩. ಬ್ರಾಹ್ಮಣನು ಹೇಳುವನು. ರಾಜನೇ ! ಪರಮಾರ್ಥತತ್ತ್ವವನ್ನಾಶ್ರಯಿಸಿದ ಈ ಮಾತನ್ನು ಕೇಳಿ, ಮಹಾ ಪುಣ್ಯವಂತನಾದ ನಿದಾಘನು ನಮಸ್ಕಾರ ಮಾಡಿ ಮಾತನಾಡಿದನು. ' ನನ್ನ ಹಿತಾರ್ಥವಾಗಿ ಬಂದ ತಾವು ಯಾರೆಂಬುದನ್ನು ನನ್ನಲ್ಲಿ ಅನುಗ್ರಹವಿಟ್ಟು ಹೇಳಬೇಕು. ತಮ್ಮ ಮಾತನ್ನು ಕೇಳಿ ನನ್ನ ಅಜ್ಞಾನವು ನಾಶವಾಯಿತು " ಎಂದನು

೩೪-೩೫. ಋಭುವು, " ಎಲೈ ಬ್ರಾಹ್ಮಣನೇ! ನಾನು ನಿನ್ನ ಗುರುವಾದ ಋಭುವು ನಿನಗೆ ಜ್ಞಾನವನ್ನುಪದೇಶಮಾಡುವುದಕ್ಕಾಗಿ ಇಲ್ಲಿಗೆ ಬಂದೆನು. ಸಮಸ್ತವೂ ವಾಸುದೇವಸ್ವರೂಪವಾದುದೆಂಬ ಪರಮಾರ್ಥ ತತ್ತ್ವವನ್ನು ನಿನಗೆ ಹೇಳಿದೆನು. ಇನ್ನು ನಾನು ಹೊರಡುವೆನು. ಈ ಸಮಸ್ತ ಜಗತ್ತೂ ವಾಸುದೇವನೆಂಬ ಹೆಸರುಳ್ಳ ಪರಮಾತ್ಮನಿಗಿಂತ ಬೇರೆಯಾದುದಲ್ಲ. ಇವೆಲ್ಲವೂ ' ಏಕಮೇವಾದ್ವಿತೀಯಂ ಬ್ರಹ್ಮ ' ಎಂಬ ಶ್ರುತಿಯಲ್ಲಿ ಹೇಳಿದಂತೆ ಪರಬ್ರಹ್ಮಸ್ವರೂಪವಾದುದೆಂದು ತಿಳಿ" ಎಂದು ಹೇಳಿದನು.

ತಥೇತ್ಯುಕ್ತ್ವಾ ನಿದಾಘೇನ ಪ್ರಣಿಪಾತಪುರಸ್ಸರಂ ।
ಪೂಜಿತಃ ಪರಯಾ ಭಕ್ತ್ಯಾ ಇಚ್ಛಾತಃ ಪ್ರಯಯಾವೃಭುಃ ॥ ೩೬ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಪಂಚದಶೋಽಧ್ಯಾಯಃ

---

೩೬. ನಿದಾಘನು ನಮಸ್ಕಾರ ಮಾಡುತ್ತಾ ಹಾಗೆಯೇ ಆಗಲೆಂದು ಹೇಳಿ ಭಕ್ತಿಯಿಂದ ಗುರುವನ್ನು ಪೂಜಿಸಿದನು. ಋಭುವು ತನ್ನ ಇಷ್ಟದಂತೆ ಪ್ರಯಾಣ ಮಾಡಿದನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ದ್ವಿತೀಯಾಂಶದಲ್ಲಿ
ಹದಿನೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ

ಷೋಡಶೋಽಧ್ಯಾಯಃ

॥ ಬ್ರಾಹ್ಮಣ ಉವಾಚ ॥

ಋಭುರ್ವರ್ಷಸಹಸ್ರೇ ತು ಸಮತೀತೇ ನರೇಶ್ವರ ।
ನಿದಾಘಜ್ಞಾನದಾನಾಯ ತದೇವ ನಗರಂ ಯಯೌ ॥ ೧ ॥

ನಗರಸ್ಯ ಬಹಿಃ ಸೋಽಥ ನಿದಾಘಂ ದದೃಶೇ ಮುನಿಃ ।
ಮಹಾಜನಪರೀವಾರೇ ಪುರಂ ವಿಶತಿ ಪಾರ್ಥಿವೇ ॥ ೨ ॥

ದೂರೇಸ್ಥಿತಂ ಮಹಾಭಾಗಂ ಜನಸಮ್ಮರ್ದವರ್ಜಕಂ ।
ಕ್ಷುತ್‌ಕ್ಷಾಮಕಂಠಮಾಯಾಂತಮರಣ್ಯಾತ್ಸ ಸಮಿತ್ಕುಶಂ ॥ ೩ ॥

ಹದಿನಾರನೆಯ ಅಧ್ಯಾಯವು.

೧-೩. ಬ್ರಾಹಣನು ಹೇಳುವನು:— ಎಲೈ ರಾಜನೇ ! ಒಂದು ಸಾವಿರ ವರ್ಷವಾದಮೇಲೆ ಋಭುವು ನಿದಾಘನಿಗೆ ಜ್ಞಾನವನ್ನುಂಟುಮಾಡುವುದಕ್ಕಾಗಿ ಅದೇ ಪಟ್ಟಣಕ್ಕೆ ಹೋದನು. ಆ ಋಭುಮುನಿಯು ಆ ನಗರದ ಹೊರಗಡೆಯೇ ನಿದಾಘನನ್ನು ನೋಡಿದನು. ಆಗ ಆ ನಗರದ ರಾಜನು ಪರಿವಾರದ ಜನರೊಡನೆ ಪಟ್ಟಣವನ್ನು ಪ್ರವೇಶಿಸುತ್ತಿದ್ದನು. ನಿದಾಘನು ಅರಣ್ಯದಿಂದ ಸಮಿತ್ತು ದರ್ಭೆಗಳನ್ನು ತರುತ್ತ ಹಸಿವಿನಿಂದ ಕೃಶನಾಗಿ ಅಸ್ಪೃಶ್ಯರನ್ನು ಸ್ಪರ್ಶಮಾಡುತ್ತೇನೆಯೇ ಎಂಬ ಸಂದೇಹ ದಿಂದ ಜನರ ಗುಂಪನ್ನು ಬಿಟ್ಟು ದೂರದಲ್ಲಿ ನಿಂತಿದ್ದನು.

ದೃಷ್ಟ್ವಾ ನಿದಾಘಂ ಸ ಋಭುರುಪಗಮ್ಯಾಭಿವಾದ್ಯ ಚ ।
ಉವಾಚ ಕಸ್ಮಾದೇಕಾಂತೇ ಸ್ಥೀಯತೇ ಭವತಾ ದ್ವಿಜ ॥ ೪ ॥

ನಿದಾಘ ಉವಾಚ

ಭೋ ವಿಪ್ರ ಜನಸಂಮರ್ದೋ ಮಹಾನೇಷ ನರೇಶ್ವರಃ ।
ಪ್ರವಿವಿಕ್ಷುಃ ಪುರಂ ರಮ್ಯಂ ತೇನಾತ್ರ ಸ್ಥೀಯತೇ ಮಯಾ ॥ ೫ ॥

॥ ಋಭುರುವಾಚ ॥

ನರಾಧಿಪೋಽತ್ರ ಕತಮಃ ಕತಮಶ್ಚೇತರೋ ಜನಃ ।
ಕಥ್ಯತಾಂ ಮೇ ದ್ವಿಜಶ್ರೇಷ್ಠ ತ್ವಮಭಿಜ್ಞೋ ಮತೋ ಮಮ ॥ ೬ ॥

॥ ನಿದಾಘ ಉವಾಚ ॥

ಯೋಽಯಂ ಗಜೇಂದ್ರಮುನ್ಮತ್ತಮದ್ರಿಶೃಂಗಸಮುಚ್ಛ್ರಿತಂ ।
ಅಧಿರೂಢೋ ನರೇಂದ್ರೋಽಯಂ ಪರಿಲೋಕಸ್ತಥೇತರಃ ॥ ೭ ॥

---

೪. ಋಭುವು ನಿದಾಘನನ್ನು ನೋಡಿ ಅವನ ಸಮೀಪಕ್ಕೆ ಹೋಗಿ ತಾನು ಗುರುವೆಂಬುದನ್ನು ಮುಚ್ಚುವುದಕ್ಕಾಗಿ ಅವನಿಗೆ ನಮಸ್ಕಾರಮಾಡಿ ಎಲೈ ಬ್ರಾಹ್ಮಣನೇ ನೀನೊಬ್ಬನೇ ದೂರದಲ್ಲೇಕೆ ನಿಂತಿರುವೆ ಎಂದು ಪ್ರಶ್ನೆ ಮಾಡಿದನು.

೫. ನಿದಾಘನು " ಎಲೈ ಬ್ರಾಹ್ಮಣನೇ ! ಜನರ ಗದ್ದಲವು ಹೆಚ್ಚಾಗಿದೆ. ಮಹಾರಾಜನು ಮನೋಹರವಾದ ಪಟ್ಟಣವನ್ನು ಪ್ರವೇಶಿಸುತ್ತಿರುವನು. ಆದುದರಿಂದ ನಾನು ಇಲ್ಲಿಯೇ ನಿಂತೆನು " ಎಂದನು.

೬. ಋಭುವು " ಮಹಾಮಹಿಮನೇ ನೀನು ಜ್ಞಾನಿಯಾಗಿರುವೆಯೆಂದು ನನ್ನ ಅಭಿಪ್ರಾಯವಿದೆ. ಇಲ್ಲಿ ರಾಜನು ಎಷ್ಟು ಶ್ರೇಷ್ಠನು, ಇತರ ಜನರು ಎಷ್ಟು ಶ್ರೇಷ್ಠರು ಎಂಬುದನ್ನು ನನಗೆ ಹೇಳು " ಎಂದನು.

೭. ನಿದಾಘನು ಪರ್ವತಶಿಖರದಂತೆ ಎತ್ತರವಾದ ಮದ್ದಾನೆಯ ಮೇಲೆ ಕುಳಿತಿರುವನೇ ರಾಜನು. ಮಿಕ್ಕ ಜನರೆಲ್ಲ ಅವನ ಪರಿವಾರದವರು ಎಂದನು.

ಋಭುರುವಾಚ

ಏತೌ ಹಿ ಗಜರಾಜಾನೌ ಯುಗಪದ್ದರ್ಶಿತೌ ಮಮ ।
ಭವತಾ ನ ವಿಶೇಷೇಣ ಪೃಥಕ್ ಭಿನ್ನೋಪಲಕ್ಷಿತೇ ॥ ೮ ॥

ತತ್ಕಥ್ಯತಾಂ ಮಹಾಭಾಗ ವಿಶೇಷೋ ಭವತಾನಯೋಃ ।
ಜ್ಞಾತುಮಿಚ್ಛಾಮ್ಯಹಂ ಕೋಽತ್ರ ಗಜಃ ಕೋ ವಾ ನರಾಧಿಪಃ ॥ ೯ ॥

॥ ನಿದಾಘ ಉವಾಚ ॥

ಗಜೋ ಯೋಽಯಮಧೋ ಬ್ರಹ್ಮನ್ ಉಪರ್ಯಸ್ಯೈಷ ಭೂಪತಿಃ ।
ವಾಹ್ಯವಾಹಕಸಂಬಂಧಂ ಕೋ ನ ಜಾನಾತಿ ವೈ ದ್ವಿಜ ॥ ೧೦ ॥

॥ ಋಭುರುವಾಚ ॥

ಜಾನಾಮ್ಯಹಂ ಯಥಾ ಬ್ರಹ್ಮನ್ ತಥಾ ಮಾಮೇವ ಬೋಧಯ ।
ಅಧಶ್ಶಬ್ದ ನಿಗದ್ಯಂ ಕಿಂ ಕಿಂ ಚೋರ್ಧ್ವಮಭಿಧೀಯತೇ ॥ ೧೧ ॥

೮–೯. ಋಭುವು ಆನೆ ರಾಜರಿಬ್ಬರನ್ನೂ ಒಟ್ಟಿಗೆ ನನಗೆ ತೋರಿಸಿದೆ, ವಿಶೇಷ ರೂಪದಿಂದ ಬೇರೆ ಬೇರೆಯಾಗಿ ನನಗೆ ಹೇಳಲಿಲ್ಲ. ಈ ಎರಡು ಪ್ರಾಣಿಗಳಲ್ಲಿ ಆನೆ ಯಾವುದು ? ರಾಜನಾರು ? ಎಂಬುದನ್ನು ನಾನು ತಿಳಿಯಬೇಕು. ಎರಡು ಪ್ರಾಣಿಗಳಿಗೂ ಇರುವ ವಿಶೇಷ ಲಕ್ಷಣವನ್ನು ಹೇಳು, ಎಂದನು.

೧೦. ನಿದಾಘನು " ಬ್ರಾಹ್ಮಣನೇ ! ಕೆಳಗಿರುವುದೇ ಆನೆ. ಅದರ ಮೇಲೆ ಕುಳಿತಿರುವವನೇ ರಾಜನು. ಆನೆ ವಾಹನ, ರಾಜ ವಾಹಕ ಈ ಸಂಬಂಧವು ಯಾರಿಗೆ ತಿಳಿಯುವುದಿಲ್ಲ " ಎಂದನು.

೧೧. ಋಭುವು " ಎಲೈ ಬ್ರಾಹ್ಮಣನೇ ನನಗೆ ತಿಳಿಯುವಂತೆ ಹೇಳು. ಕೆಳಗೆ ಎಂಬುದು ಯಾವುದು ? ಮೇಲೆ ಎಂಬುದಾವುದು ? " ಎಂದನು.

॥ ಬ್ರಾಹ್ಮಣ ಉವಾಚ ॥

ಇತ್ಯುಕ್ತಸ್ಸಹಸಾರುಹ್ಯ ನಿದಾಘಃ ಪ್ರಾಹ ತಂ ಋಭುಂ ।
ಶ್ರೂಯತಾಂ ಕಥಯಾಮ್ಯೇಷ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೧೨ ॥

ಉಪರ್ಯಹಂ ಯಥಾ ರಾಜಾ ತ್ವಮಧಃ ಕುಂಜರೋ ಯಥಾ ।
ಅವಬೋಧಾಯ ತೇ ಬ್ರಹ್ಮನ್ ದೃಷ್ಟಾಂತೋ ದರ್ಶಿತೋ ಮಯಾ ॥೧೩॥

॥ ಋಭುರುವಾಚ ॥

ತ್ವಂ ರಾಜವತ್ ದ್ವಿಜಶ್ರೇಷ್ಠ ಸ್ಥಿತೋಽಹಂ ಗಜವದ್ಯದಿ ।
ತದೇವ ತ್ವಂ ಸಮಾಚಕ್ಷ್ವ ಕತಮಸ್ತ್ವಮಹಂ ತಥಾ ॥ ೧೪ ॥

ಇತ್ಯುಕ್ತಃ ಸತ್ವರಸ್ತಸ್ಯ ಪ್ರಗೃಹ್ಯ ಚರಣಾವುಭೌ ।
ನಿದಾಘಃ ಪ್ರಾಹ ಭಗವಾನಾಚಾರ್ಯಸ್ತ್ವಮೃಭುರ್ಧ್ರುವಂ ॥ ೧೫ ॥

೧೨-೧೩. ಋಭುವು ಹೀಗೆ ಹೇಳುತ್ತಲೂ ನಿದಾಘನು ಆ ಕ್ಷಣವೇ ಅವನ ಮೇಲಕ್ಕೆ ಹತ್ತಿ ಋಭುವನ್ನು ಕುರಿತು ನೀನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವೆನು. ಕೇಳು. ರಾಜನಂತೆ ನಾನು ಮೇಲಿರುವೆನು. ಆನೆಯಂತೆ ನೀನು ಕೆಳಗಿರುವವನು. ಎಲೈ ಬ್ರಾಹ್ಮಣನೇ ! ನಿನ್ನ ತಿಳುವಳಿಕೆಗಾಗಿ ನಾನು ಈ ದೃಷ್ಟಾಂತವನ್ನು ತೋರಿಸಿದೆನು, ಎಂದನು.

೧೪. ಋಭುವು, "ಬ್ರಾಹ್ಮಣಶ್ರೇಷ್ಠನೇ ನೀನು ರಾಜನಂತಿರುವೆ. ನಾನು ಆನೆಯಂತಿರುವೆನು. ಹಾಗಾದರೆ ನಾನು ಯಾರು ? ನೀನು ಯಾರು ? ಎಂಬುದನ್ನು ಹೇಳು" ಎಂದನು.

೧೫-೧೬. ಈ ಮಾತನ್ನು ಕೇಳುತ್ತಲು ನಿದಾಘನು ಬೇಗನೆ ಅವನ ಎರಡು ಪಾದಗಳನ್ನೂ ಹಿಡಿದುಕೊಂಡು ಮಹಾಮಹಿಮನೆ ನೀನು ನನ್ನ ಗುರುವಾದ ಋಭುಮುನಿಯೆಂಬುದು ನಿಶ್ಚಯವಾದುದು. ಗುರುವಾದ ನಿನಗೆ ಇರುವಂತೆ ಅದ್ವೈತ

ನಾನ್ಯಸ್ಯಾದ್ವೈತಸಂಸ್ಕಾರ ಸಂಸ್ಕೃತಂ ಮಾನಸಂ ತಥಾ ।
ಯಥಾ ಚಾರ್ಯಸ್ಯ ತೇನ ತ್ವಾಂ ಮನ್ಯೇ ಪ್ರಾಪ್ತಮಹಂ ಗುರುಂ ॥ ೧೬ ॥

॥ ಋಭುರುವಾಚ ॥

ತವೋಪದೇಶದಾನಾಯ ಪೂರ್ವಶುಶ್ರೂಷಣಾದೃತಃ ।
ಗುರುಸ್ನೇಹಾದೃಭುರ್ನಾಮ ನಿದಾಘ ಸಮುಪಾಗತಃ ॥ ೧೭ ॥

ತದೇತದುಪದಿಷ್ಟಂತೇ ಸಂಕ್ಷೇಪೇಣ ಮಹಾಮತೇ ।
ಪರಮಾರ್ಥಸಾರಭೂತಂ ಯ ತ್ತದದ್ವೈತಮಶೇಷತಃ ॥ ೧೮ ॥

ಏವಮುಕ್ತ್ವಾ ಯಯೌ ವಿದ್ವಾನ್ ನಿದಾಘಂ ಸ ಋಭುರ್ಗುರುಃ ।
ನಿದಾಘೋಽಪ್ಯುಪದೇಶೇನ ತೇನಾದ್ವೈತಪರೋಽಭವತ್ ॥ ೧೯ ॥

ಸರ್ವಭೂತಾನ್ಯಭೇದೇನ ದದೃಶೇ ಸ ತದಾತ್ಮನಃ ।
ತಥಾ ಬ್ರಹ್ಮ ಪರೋ ಮುಕ್ತಿಮವಾಪ ಪರಮಾಂ ದ್ವಿಜಃ ॥ ೨೦ ॥

ಸಂಸ್ಕಾರದಿಂದ ಶುದ್ಧವಾದ ಮನಸ್ಸು ಇತರರಿಗೆ ಇಲ್ಲ. ಗುರುವೇ ಬಂದನೆಂದು ನಾನು ತಿಳಿದೆನು ಎಂದನು.

೧೭-೧೯. ಋಭುವು, "ಎಲೈ ನಿದಾಘನೇ ! ಹಿಂದೆ ನೀನು ಮಾಡಿದ ಸೇವೆಗೆ ಸಂತುಷ್ಟನಾಗಿ ನಿನ್ನಲ್ಲಿ ವಿಶೇಷವಾದ ಪ್ರೀತಿಯಿಂದ ಋಭುವಾದ ನಾನು ನಿನಗೆ ಉಪದೇಶಮಾಡುವುದಕ್ಕಾಗಿ ಬಂದಿರುವೆನ." ಪರಮಾರ್ಥವೂ ಸಾರಭೂತವೂ ಆದ ಅದ್ವೈತ ತತ್ತ್ವವನ್ನು ಬುದ್ಧಿಶಾಲಿಯಾದ ನಿನಗೆ ಸಂಕ್ಷೇಪವಾಗಿ ಸಂಪೂರ್ಣವಾಗಿ ಉಪದೇಶಿಸಿದೆನು. ಹೀಗೆಂದು ಹೇಳಿ ಜ್ಞಾನಿಯಾದ ಋಭುವು ಹೋರಟುಹೋದನು. ನಿದಾಘನು ಆ ಉಪದೇಶದಿಂದ ಅದ್ವೈತತತ್ತ್ವದಲ್ಲಾಸಕ್ತನಾದನು.

೨೦-೨೨. ಆಗ ನಿದಾಘನು ತನಗೂ ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪದಿಂದ ಭೇದವಿಲ್ಲವೆಂದು ತಿಳಿದುಕೊಂಡನು. ಹಾಗೆಯೇ ಬ್ರಹ್ಮಜ್ಞಾನದಿಂದ ಶ್ರೇಷ್ಠವಾದ ಮುಕ್ತಿಯನ್ನು ಪಡೆದನು. ಎಲೈ ಧರ್ಮಜ್ಞನಾದ ರಾಜನೇ ಹಾಗೆಯೇ

ತಥಾತ್ವಮಪಿ ಧರ್ಮಜ್ಞ ತುಲ್ಯಾತ್ಮರಿಪುಬಾಂಧವಃ ।
ಭವ ಸರ್ವಗತಂ ಜಾನನ್ನಾತ್ಮಾನಮವನೀಪತೇ ॥ ೨೦ ॥

ಸಿತನೀಲಾದಿಭೇದೇನ ಯಥೈಕಂ ದೃಶ್ಯತೇ ನಭಃ ।
ಭ್ರಾಂತಿದೃಷ್ಟಿಭಿರಾತ್ಮಾಪಿ ತಥೈಕಃ ಸನ್ ಪೃಥಕ್ಕೃತಃ ॥ ೨೨ ॥

ಏಕಃ ಸಮಸ್ತಂ ಯದಿಹಾಸ್ತಿ ಕಿಂಚಿತ್
ತದಚ್ಯುತೋ ನಾಸ್ತಿ ಪರಂ ತತೋಽನ್ಯತ್ ।
ಸೋಽಹಂ ಸ ಚ ತ್ವಂ ಸ ಇದ ಸರ್ವಮೇತತ್
ಆತ್ಮಸ್ವರೂಪಂ ತ್ಯಜ ಭೇದಮೋಹಂ ॥ ೨೩ ॥

ಇತೀರಿತಸ್ತೇನ ಸ ರಾಜವರ್ಯಃ
ತತ್ಯಾಜ ಭೇದಂ ಪರಮಾರ್ಥದೃಷ್ಟಿಃ ।
ಸ ಚಾಪಿ ಜಾತಿಸ್ಮರಣಾಪ್ತ ಬೋಧಃ
ತತ್ರೈವ ಜನ್ಮನ್ಯಪವರ್ಗಮಾಪ ॥ ೨೪ ॥

ನೀನೂ ಆತ್ಮನು ಸರ್ವಗತನೆಂದು ತಿಳಿದು ಶತ್ರುಗಳಲ್ಲಿಯೂ ಮಿತ್ರರಲ್ಲಿಯೂ ಬಂಧುಗಳಲ್ಲಿಯೂ ಸಮಾನಭಾವದಿಂದಿರು. ಒಂದೇ ಆದ ಆಕಾಶವು ಬಿಳುಪು, ನೀಲಿ ಮುಂತಾದ ಬಣ್ಣಗಳಿಂದ ಬೇರೆಬೇರೆಯಾಗಿ ಕಾಣುವಂತೆ ಒಬ್ಬನೇ ಆದ ಆತ್ಮನು ಭ್ರಾಂತಿದೃಷ್ಟಿಯಿಂದ ಬೇರೆಬೇರೆಯಾಗಿ ಕಾಣುವನು.

೨೩. ಜಗತ್ತಿನಲ್ಲಿರುವ ಸಮಸ್ತವೂ ಆತ್ಮಸ್ವರೂಪವಾದುದು. ಅದು ನಾಶರಹಿತವಾದುದು. ಆತ್ಮಸ್ವರೂಪಕ್ಕಿಂತ ಬೇರೆಯಾದುದು ಯಾವುದೂ ಇಲ್ಲ. ನಾನೂ ನೀನೂ ಈ ಸಮಸ್ತರೂ ಆತ್ಮಸ್ವರೂಪರು. ಭೇದರೂಪವಾದ ಅಜ್ಞಾನವನ್ನು ಬಿಡು

೨೪. ಆ ಜಡನಾದ ಬ್ರಾಹ್ಮಣನು ಹೇಳಿದ ಮಾತನ್ನು ಕೇಳಿ ರಾಜಶ್ರೇಷ್ಠನು ಪರಮಾರ್ಥ ದೃಷ್ಟಿಯುಳ್ಳವನಾಗಿ ಭೇದಭಾವವನ್ನು ಬಿಟ್ಟುಬಿಟ್ಟನು. ಆ ಬ್ರಾಹ್ಮಣನೂ ಪೂರ್ವಜನ್ಮ ಸ್ಮರಣೆಯಿಂದ ಆತ್ಮಜ್ಞಾನವುಳ್ಳವನಾಗಿ ಅದೇ ಜನ್ಮದಲ್ಲಿಯೇ ಮೋಕ್ಷವನ್ನು ಹೊಂದಿದನು.

ಇತಿ ಭರತನರೇಂದ್ರ ಸಾರವೃತ್ತಂ
ಕಥಯತಿ ಯಶ್ಚ ಶೃಣೋತಿ ಭಕ್ತಿಯುಕ್ತಃ ।
ಸ ವಿಮಲಮತಿರೇತಿ ನಾತ್ಮಮೋಹಂ
ಭವತಿ ಚ ಸಂಸರಣೇಷು ಮುಕ್ತಿಯೋಗ್ಯಃ ॥ ೨೫ ॥

ಇತಿ ಶ್ರೀ ವಿಷ್ಣುಪುರಾಣೇ ದ್ವಿತೀಯಾಂಶೇ ಷೋಡಶೋಽಧ್ಯಾಯಃ

ದ್ವಿತೀಯಾಂಶಃ ಸಮಾಪ್ತಃ

---

೨೫. ಈ ಭರತರಾಜನ ಸಾರವಾದ ಚರಿತ್ರೆಯನ್ನು ಭಕ್ತಿಯಿಂದ ಯಾರು ಹೇಳುವರೋ ಕೇಳುವರೋ ಅವರು ಶುದ್ಧವಾದ ಭಕ್ತಿಯುಳ್ಳವರಾಗಿ ಆತ್ಮನ ವಿಷಯ ದಲ್ಲಿ ಅಜ್ಞಾನವನ್ನು ಹೊಂದುವುದಿಲ್ಲ. ಈ ಸಂಸಾರದಲ್ಲಿ ಮುಕ್ತಿಗೆ ಯೋಗ್ಯರಾಗುವರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ದ್ವಿತಿಯಾಂಶದಲ್ಲಿ
ಹದಿನಾರನೆಯ ಅಧ್ಯಾಯವು ಮುಗಿದುದು.

ಎರಡನೆಯ ಅಂಶವು ಮುಗಿದುದು.